


ಹಳೆ ಬಾಳ್‌ನ ಹರ್ದ ಹಾಳೆಗ

(ಉಡುಪಿ ತುಳು ಕೂಟನ ಪಣೆಯಾಡಿ ಮತ್ತೆ ಕರ್ನಾಟಕ ತುಳು ಅಕಾಡೆಮಿನ ಪುಸ್ತಕ ಪ್ರಶಸ್ತಿ ಪಡ್ದ "ಪರಬಾಳ್‌ತ ಪರಿಪಾಳೆಳ್" ತುಳು ಕಾದಂಬರಿನ ಅರೆಬಾಸೆ ಅನುವಾದ}

ಮೂಲ ಕೃತಿಕಾರರು ಮತ್ತು ಅನುವಾದಕರು :

▪ ಜಯಮ್ಮ ಚೆಟ್ಟಿಮಾಡ

ಸಂಜೀವಿನಿ ಪ್ರಕಾಶನ
ಮೊಗರ್ಪಣೆ ಸುಳ್ಯ, ದಕ್ಷಿಣ ಕನ್ನಡ ಜಿಲ್ಲೆ

ಪಳೆ ಬಾಳ್‌ನ
ಪರ್ದ ಪಾಳೆಗ

{ಉಡುಪಿ ತುಳು ಕೂಟನ ಪಣಿಯಾಡಿ ಮತ್ತೆ ಕರ್ನಾಟಕ ತುಳು ಅಕಾಡೆಮಿನ ಪುಸ್ತಕ ಪ್ರಶಸ್ತಿ ಪಡ್ದ "ಪರಬಾಳ್‌ತ ಪರಿಪಾಳೆಳ್" ತುಳು ಕಾದಂಬರಿನ ಅರೆಬಾಷೆ ಅನುವಾದ}

ಮೂಲ ಕೃತಿಕಾರರು ಮತ್ತು ಅನುವಾದಕರು :
❑ ಜಯಮ್ಮ ಚೆಟ್ಟಿಮಾಡ

ಸಂಜೀವಿನಿ ಪ್ರಕಾಶನ
ಮೊಗರ್ಪಣೆ, ಸುಳ್ಯ – ದಕ್ಷಿಣ ಕನ್ನಡ ಜಿಲ್ಲೆ, 574239

ಹಳೆ ಬಾಳ್‌ನ ಹರ್ದ ಹಾಳೆಗ
(ಅರೆ ಬಾಸೆನ ಭಾಷಾಂತರ ಕಾದಂಬರಿ)

Hale Balna Harda Haalega
A novel translated from Tulu to Arebhashe by **Jayamma Chettimada**
"Kavya Kaveri" Mogarpane House, Sullia. D.K. Karnataka.
Cell : 9902269844, Phone: 08257- 230601.
Email: jayammachettimada@gmail.com

Published By	:	Sanjeevini Prakashana, Mogarpane Sullia. D.K. - 574239 Karnataka, Phone : 08257- 230601
ಮೊದಲ ಮುದ್ರಣ	:	2016 (ಕರ್ನಾಟಕ ರಾಜ್ಯೋತ್ಸವ ಸಂಚಿಕೆ)
ಪ್ರತಿಗಳು	:	1,000
ಪುಟಗಳು	:	x + 156
ಹಕ್ಕು	:	ಜಯಮ್ಮ ಚೆಟ್ಟಿಮಾಡ
ಪ್ರಕಾಶಕರು	:	ಸಂಜೀವಿನಿ ಪ್ರಕಾಶನ, ಮೊಗರ್ಪಣೆ, ಸುಳ್ಯ. ದ.ಕ. ದೂರವಾಣಿ : 08257 - 230601
ಡಿ.ಟಿ.ಪಿ ಮತ್ತು ಮುದ್ರಣ	:	ಶ್ರೀ ಗಣೇಶ ಪ್ರಿಂಟರ್ಸ್ ನಾವೂರು ರಸ್ತೆ, ಗಾಂಧಿನಗರ, ಸುಳ್ಯ ದ. ಕ. - 574239 ದೂರವಾಣಿ : 08257 - 230238
ಹೊದಿಕೆ ಹಾಳೆನ ಕಲಾಕಾರ	:	ಮೋಹನಚಂದ್ರ, ಕನಕಮಜಲು.
ಬೆಲೆ	:	ರೂ.150/ ಮಾತ್ರ (ರೂ.ಒಂದುನೂರ ಐವತ್ತು ಮಾತ್ರ)

“ಹಳೆ ಬಾಳ್‌ನ ಹರ್ದ ಹಾಳೆಗ”ಳ ಸೇರ್ಸಿಕೆ ಮುಂದೆ..............

ಭಾಷಾ ಶಾಸ್ತ್ರ ಹಾಂಗೆ ಪಳಮೆ ವಿಚಾರಗಳಲಿ ಹಂಞ ಉಮೇದ್ ಇರ್ವ ನಾ, ಹಳಬರ ಜೋಳಿಗೆಂತ ಹೇಳ್ವ ಹೆಸರ್ಲಿ ಹಳೆಸಂಗತಿಗಳಿಗೆ ಸಮ್ಮಂದ ಇರ್ವ ಪುಸ್ತಕಗಳ ಕೋಪೆನ ತರ್ತಾ ಒಳೆ. ಅಂತದರ ಒಟ್ಟು ಮಾಡ್‌ವ ಸಮಿಯಲಿ ಕಲ್ಪನಾಂಶ ಸೇರ್ಸಿಕಂಡ್ ಒಂದ್ ಕಾದಂಬರಿನೇ ಬರಿಯಕ್ಕ್‌ಂತ ಹೇಳ್ವ ವಿಷಯ ಸಿಕ್ಕಿದ್ ಒಂದ್ ಆಕಸ್ಮಿಕ. ನಿಜ ಹೇಳೋಕು ಅಂದರೆ ನಾ ತುಳುಲಾಗಲೀ, ಅರೆ ಬಾಸೆಲಾಗಲೀ ಕಾದಂಬರಿ ಬರೆವೆಂತ ಮಿಸ್ಮೆತಿ ಏನಲ್ಲ. ಆದರೆ ಬಾಸೆನ ಮೇಲಿನ ಸೆಳ್ತ ನಂದ ಕಾದಂಬರಿ ಬರ್ಸಿತ್. ಹಾಂಗೆ ನಾ ಬರ್ದ ಸುರುನ ಕಾದಂಬರಿ “ಪರ ಬಾಳ್‌ತ ಪರಿಪಾಳೆಳ್”ಂತೇಳ್ವಂತದ್ ತುಳು ಬಾಸೆದ್ದ್. ಆ ಕಾದಂಬರಿಲಿ ನಾ ಬಳಸಿದ ಬಾಸೆ ಈಗ ಅಳಿತಾ ಉಟ್ಟು, ಅಂತ ಒಂದ್ ಬಾಸೆ ಇತ್ತ್‌ಂತ ಹೇಳುದರ ದಾಖಲಿಸೋಕುಂತ ಹೇಳ್ವ ಒತ್ತಾಸೆಲಿ ಬಾರಿ ಕಷ್ಟ ಪಟ್ಟ್ ಬರ್ದೆ. ಕಾರಣ ನಾ ಆ ತುಳುನ ಸಣ್ಣದಿರಿಕನ ಕೇಳ್ತಾ ಇದ್ದೆ. ಮಾತಾಡಿ ಅಭ್ಯಾಸ ಇಲ್ಲೆ. ಆದರೂ ಅದ್ ಉಡುಪಿ ತುಳು ಕೂಟದೊವ್ ನಡ್ಸಿದ ಕಾದಂಬರಿ ಪಂತಲಿ ಪಣಿಯಾಡಿ ಪ್ರಶಸ್ತಿ ಪಡ್ತ್. ಆ ಮೇಲೆ ಅದಿಕೆ ಕರ್ನಾಟಕ ತುಳು ಅಕಾಡೆಮಿನ ಪುಸ್ತಕ ಪ್ರಶಸ್ತಿನೂ ಬಾತ್.

ಇದೇ ಹೊತ್ತ್‌ಲಿ ಅರೆಬಾಸೆ ಸಂಸ್ಕೃತಿ, ಸಾಹಿತ್ಯದ ಅಕಾಡೆಮಿನೂ ಆತ್. ಅರೆ ಬಾಸೆನೂ ನಂಗೆ ತುಳು ಬಾಸೆನ ಹಾಂಗೆನೇ. ಈ ಬಾಸೆಲೂ ಒಂದ್ ಕಾದಂಬರಿನ ಬರಿಯೊಮಂತ ಆತ್. ಆಗ, ನನ್ನ ತುಳು ಕಾದಂಬರಿನ ಅರೆಬಾಸೆಗೆ ಭಾಷಾಂತರ ಮಾಡ್ರೆ ಹೇಂಗೇಂತ, ಅದರ್ನೇ “ಹಳೆ ಬಾಳ್‌ನ ಹರ್ದ ಹಾಳೆಗ” ಹೆಸರ್ಲಿ ಬರಿಯಕೆ ಹೊರ್ಟೆ. ಇದ್ ನಂಗೆ, ತುಳುಗಿಂತಲೂ ಕಷ್ಟ ಆತ್. ಇಂದ್ ಅರೆಬಾಸೆ ಮಾತಾಡ್‌ವೊವು ಕನ್ನಡದ ನೆರ್‌ಳ್‌ಲೇ ಅದರ ಮಾತಾಡ್ತಾ ಒಳೊ. ಹಾಂಗಾರೆ ಅರೆ ಬಾಸೆದ್ದೇ ವಿಶೇಷಗಳ ಬುಟ್ಟ್ ಬುಡ್ಲೋ? ಇದ್ ನನ್ನೆದ್ರ್ ಬಂದ ಸವಾಲ್ ಇದರ ನಾ, ಹಿರಿಯರಾದ ಪ್ರೊಫೆಸರ್ ಕುಶಾಲಪ್ಪ ಗೌಡ್ರಲ್ಲಿ ಕೇಳಿಕನ ಅವು “ಅರೆ ಬಾಸೆಲಿ ಕನ್ನಡಲಿ ಇಲ್ಲದ ನಾಲ್ಕ್ ಉಚ್ಚಾರಗ ಒಳೊ”ಂತ ಹೇಳ್ದೊ. ಅವು ಯಾವ್ಯಾವುಂತ ನಂಗೆ ಗೊತ್ತಾತ್ಲೆ. ಕಡೆಗೆ ನಾ “ಅ” ಮತ್ತೆ “ಒ” ನೊಡುಲಿ ಬಾವ ಒಂದ್ ಉಚ್ಚಾರಕ್ಕೆ “ಒ”ಂತ ಬರ್ದ್ ಅರ್ಧಾಕ್ಷರ “ ೆ” ನ ಸೇರ್ಸಿದೆ. ಉದಾ; “ನೋಡ್”. ನಾನ್ ಮಾಡ್ದ್ ಸರಿಂತ ಕಂಡಿತ ನಂಗಿಲ್ಲೆ. ಮುಂದೆ, ತಿಳ್ದೊವು ಎಲ್ಲಾ ಸೇರಿಕಂಡ್ ಆ ನಾಲ್ಕ್ ಉಚ್ಚಾರಗ ಯಾವ್ಯಾವ್ದ್? ಅದರ “ಇದ್ ಹೀಂಗೆ”ಂತ ಉಚ್ಚಾರಕ್ಕೆ ಹೊಂದುವ ಹಾಂಗೆ, ಅರೆ ಬಾಸೆಲಿ ಬರೆಯೊದು ಹೇಂಗೆಂತ ಹೇಳ್ವ ಬಗ್ಗೆ ತಿಳಿವಳ್ಕೆ ನೀಡುದು ಒಳ್ಳೆದ್‌ಂತ ವಿನಯಂದ ನಾ ಅರೆಬಾಸೆ ಮಾತಾಡ್ವವರ ಕೇಳಿಕೊಂಬೊದು.

ತುಳು ಬಾಸೆನ ನನ್ನ ಕಾದಂಬರಿಲಿ ೧೧೪ ಪುಟಗ ಒಳೊ. ಆಗ ನಂಗಿದ್ದ ಸಮಿಯದ ಮಿತಿಲಿ ಇನ್ನ್ ಹೆಚ್ಚ್ ಬರೆಯಕೆ ಹೊತ್ತ್ ಇಲ್ಲಾಗಿತ್ತ್. ಹಾಂಗೆ ನಾ ಅಂಬೆರ್ಪುಲಿ! ಆದ್ದರ ಹಾಂಗೆ ಕಳ್ಸಿದ್ದೆ. ಆಗ ಬುಟ್ಟ್ ಹೋದದರ ಈಗ ಸೇರ್ಸಿಕಂಡ್ ಸುಮಾರ್ ೪೦-೪೫ ಪುಟದಷ್ಟ್ ಬರ್‍ದೊಳೆ. ಮೂಲ ಮತ್ತೆ ಅನುವಾದ ನಂದೇ ಆದ್ದರಿಂದ ಹೆಚ್ಚಿಗೆ ಸೇರ್ಸಿದ್ದ್ ತೊಪ್ಪಾಕಿಲ್ಲೆಂತ ನಾ ತಿಳ್ಕಣೆ.

ನಾ ಆಗಳೇ ಹೇಳ್ದ ಹಾಂಗೆ ಅರೆಬಾಸೆಲಿ ನಾ ಬರ್‍ದದರ್ಲಿ ತೊಪ್ಪುಗ ಇರ್‍ದಂತ, ಬರ್‍ದ ತೊಪ್ಪುಗಳ ತಿದ್ದಿ ಕೊಡಿಕೆ ಪೂಜ್ಯ ಪ್ರೊ ಕೋಡಿ ಕುಶಾಲಪ್ಪ ಗೌಡರಲ್ಲಿ, ಮತ್ತೆ ಅಕ್ಕನ ಹಾಂಗಿನ ಶ್ರೀಮತಿ ಎಮ್. ಜಿ. ಕಾವೇರಮ್ಮನವರಲ್ಲಿ ಕೊಟ್ಟಿದ್ದೆ. ಆನಾರೋಗ್ಯದ ತೊಂದರೆಗ ಇದ್ದರೂ ನನ್ನ ಮತ್ತೆ ಬಾಸೆ ಮೇಲ್‌ನ ಪ್ರೀತಿಂದ ತಿದ್ದಿ ಕೊಟ್ಟೊಳೊ. {ಪುಸ್ತಕಲಿ ಏನಾರ್ ತೊಪ್ಪುಗ ಒಳ್ಕೊಂಡಿದ್ದರೆ ಅದ್ ನಂದೇ ತೊಪ್ಪಲ್ಲದೆ ಅವರ್‍ದಲ್ಲ} ಅದಲ್ಲದೆ, ಪೂಜ್ಯ ಕೋಡಿಯವು ಮುನ್ನುಡಿ ಬರ್‍ದ್ ಕೊಟ್ಟ್ ನನ್ನ ಬೆನ್ನ್ ತಟ್ಟಿ ಹರಸ್ಯೊಳೊ. ನಾ ಅವಿಬ್ಬರಿಗೂ ಎಷ್ಟ್ ಕೃತಜ್ಞತೆ ಸಲ್ಲಿಸಿರೂ ಅದ್ ಕಡ್ಮೆನೇ. ಅವರ ಉಪಕಾರನ ನೆನ್ಸಿಕಂಡ್, ಅವ್ಕೆ ಇಬ್ಬರಿಗೂ ನಾ ಗೌರವಂದ ತಲೆ ಬಾಗಿ, ಕೈ ಮುಗ್ದನೆ. ಹಾಂಗೆ ನನ್ನ ಸೊಸೆ ಸೌ। ಉಷಾ ತೇಜಸ್ವಿ ಚೆಟ್ಟಿಮಾಡ ಬಿ.ಇ., ಗಣಕ ಯಂತ್ರದ ಕೆಲ್ಸಲಿ ಸಹಕರ್ಸಿಟು. ಅದರ ಸಾ ನಾ ನೆಂಪುಮಾಡಿಕಣೆ.

ಕಾದಂಬರಿನ ತಿರ್‍ಳ್ ಮತ್ತೆ ಪೊರ್ಲ್ ನೆಗ್ದ್ ಕಾಂಬ ಹಾಂಗೆ ಎದ್ರ್ ಹಾಳೆನ ಮಾಡಿಕೊಟ್ಟ ನನ್ನ ತಮ್ಮನ ಹಾಂಗಿರ್‍ವ ಮೋಹನ ಚಂದ್ರ, ಕನಕ ಮಜಲ್-ಇವರ,

ಮತ್ತೆ, ನಾ ಬರ್‍ದದರ, ಪೊರ್ಲ್‌ಲಿ ಪ್ರೀತಿಂದ ಪುಸ್ತಕ ಮಾಡಿ ಕೊಡ್ವ ಸುಳ್ಯದ ಶ್ರೀ ಗಣೇಶ ಪ್ರಿಂಟರ್ಸ್‌ನ ಯೆಜಮಾಂಡ್ರ್ ಶ್ರೀ ಪಿ.ಕೆ. ಉಮೇಶರ್ ಮತ್ತೆ ಅವರ ಸಹಾಯಕರ ನಾ ಗೌರವಂದ ನೆಂಪು ಮಾಡಿಕಣೆ.

ಅರೆಬಾಸೆಲಿ ಬರ್‍ದ ಈ ಕಾದಂಬರಿನ ಓದುಗರ ಕೈಗೆ ಇಸಿಕೆ ಕುಸಿ ಪಟ್ಟನೆ. ನಿಮ್ಮ ಅನಿಸಿಕೆಗಳ ಹೇಳ್ರೆ ಸಂತೋಸ.

ಕಾರ್ತಿಕ ಪಾಡ್ಯ,
೩೧-೧೦-೨೦೧೬
"ಕಾವ್ಯ ಕಾವೇರಿ"
ಸುಳ್ಯ. ದ.ಕ

ನಿಮ್ಮ
ಜಯಮ್ಮ ಚೆಟ್ಟಿಮಾಡ.

ನುಡಿ ತೋರಣ

ಶ್ರೀಮತಿ ಜಯಮ್ಮ ಚೆಟ್ಟಿಮಾಡ ಕಲ್ಲ ಪ್ರೆಸ್ 'ಬಿರ ಬಾಕ್ಯರ ವಲಿವಾಳ್ಳ್‌ಲ್' ಒಂದು ತುಳು ಕಾದಂಬರಿ ಪ್ರಕಟಿಸಿದೊ. ತುಳುವರಲ್ಲದವ್ರು ಬರ್ದ ಕಾದಂಬರಿಲಿ ಇತೇಲ ಅದಿಕ್ಕ ತುಳು ಎಕಾಡೆಮಿ ಪ್ರಶಸ್ತಿ ಕೊಟ್ಟ್ ಗೌರವಿಸಿದೊ. ಇಷ್ಟ್ರಲ್ಲಿ ಅರೆ ಬಾಸೆ ಎಕಾಡೆಮಿ ...'ಒಂದು ಆಗುಟು. ಸದ್ದ್ ಮಾಡಿ ಕೆಲ್ಸ ಉಟ್ಟು. ಹಾಂಗೆ ಜಯಮ್ಮ ಸಾಧನೆ ಮಾಡಿ ಇವರ ಅರೆಬಾಸೆಲಿ ಭಾಷಾಂತರ ಮಾಡಿಯೊಳ್ಗೊ. ಅಲ್ಲೊಂದರ್ಲೂ ಪ್ರಶಸ್ತಿ ಬಾಚಿಕಂಬೊದು ಅವರ ಗುರಿ.

ಒಂದು ಹರಿಜನ ಕುಟುಂಬ (ಅಂದರೆ ಮೇರರ್‌ಂತೇಳುವ ಪಂಗಡ) ಸ್ವಾತಂತ್ರ್ಯ ಪೂರ್ವಕಾಲ, ಆ ಜನಗಳ ದಾರುಣ ಜೀವನ, ಅವರ ಜೀವನ ಶ್ರದ್ಧೆ, ಎಣೆಯಿಲ್ಲದ ದುಡಿಮೆ, ನಿಷ್ಠನಾದ ಯಜಮಾನ್ರಗ, ಕೆಲ್ಸದವರ ಮೇಲೆ ಪ್ರೀತಿ, ವಿಶ್ವಾಸ, ಮೀನ್ ಬೇಟೆ, ಜೇನ್ ತೆಗೆಯು, ಅಕ್ಕುಂಬು ಕುದುರುದು, ಮೈ ನೆರೆಯುವ ಆಚರಣೆ, ಮದುವೆ, ಆಚರಣೆ, ಕೊಡಗಗೆ ಕುಸರೆ ಹೋಪ್ದು, ಬಸ್ ತಪ್ಪಿ ಹೋಗಿ 14 ಮೈಲಿನಷ್ಟ್ ನಡ್ದದ್ದು, ಆ ಕಷ್ಟ, ಕೆಲವು ಹೆಣ್ಣ್‌ಗಳ ಸಮಸ್ಯೆ, ಹೀಂಗೆ ಎಲ್ಲದನೂ ಲೇಖಕಿ ತುಂಬ ಸ್ವಾರಸ್ಯವಾಗಿ ಬರ್ದೊಳ್ಗ. ಓದೊವ್ರ ಮೆಚ್ಚುದರಲ್ಲಿ ಸಂಶಯ ಇಲ್ಲೆ. ಅವ್ಕೆ ಅಭಿನಂದನೆ.

Kushalappagowda
20.10.16

ಪ್ರೊ. ಕೆ. ಕುಶಾಲಪ್ಪ ಗೌಡ ಎಂ.ಎ., ಎಂ.ಲಿಟ್., ಪಿಎಚ್.ಡಿ.
(ನಿವೃತ್ತ ಕನ್ನಡ ಪ್ರೊಫೆಸರ್, ಮದ್ರಾಸ್ ವಿಶ್ವವಿದ್ಯಾನಿಲಯ)
'ಮಾನಸ', ಜಟ್ಟಿಪಳ್ಳ, ಸುಳ್ಯ ದ.ಕ. – 574239

೬೦೧೬ನೇ
ರಾಜ್ಯೋತ್ಸವ
ಸಂಚಿಕೆ

ಹಾಳೆ 1
ತಡ್ಪೆನ ಒಟ್ಟೆ ಮುಚ್ಚಿತ್

ಮಾಚು ದಟಿಗೆ ಎದ್ರ್‌ನ ಚಿಂಟೆಲಿ ಕುದ್ದ್‌ದ್ ಚಾಳೆನ ಮಡಲ್‌ಂದ ಚೀಂಕ್ರ್‌ನ ತೆಗ್ದ್, ಬೇಕಾದ ಉದ್ದ ಅಗಲಕ್ಕೆ ತುಂಡ್ ಮಾಡಿಕಂಡ್, ಎಲ್ಲಿಂದಲೋ ಬೇಡಿ ತಂದ ಹಳೆ ತಡ್ಪೆನ ಒಟ್ಟೆಗಳಿಗೆ ಹುಕ್ಕ್‌ಸಿ, ಅವ್ಗಳ ಮುಚ್ಚಿಕಂಡಿತ್ತ್. ಅದರ ಗಂಡ, ಸುಮಾರ್ ಎಂಬತ್ತ್ ಎಂಬತ್ತೈದ್ ವೊರ್ಸದ ಎಲುಂಬ, ಮದ್ಯನದ ಊಟನ ಹಿಂಬೊತು ನಾಲ್ಕ್ ಗಂಟೆಗೆ ಮಾಡಿ, ಕೈ ತೊಳೆಯಕೆ ಬಟ್ಲ್ ಹಿಡ್ಕಂಡೇ ಜಾಲಿಗೆ ಬಾತ್. ಬಟ್ಲ್‌ಲಿದ್ದ ತೆಳಿಗಂಜಿನ ನಿತ್ತ್‌ಕಂಡೇ ನಾಂಯೆನ ಬಟ್ಲ್‌ಗೆ ಸುರ್ತ್. ಬಟ್ಲ್‌ಗೆ ಅಂಟಿಕಂಡಿದ್ದ ಹುಗ್ಗೆನ ಅಗ್‌ಳ್ನ ನಾಂಯೆನ ಬಟ್ಲ್‌ಗೆ ಕುಟ್ಟಿಕಂಡ್ "ದುವ್ವೋ, ದುವ್ವೋ" ಎಂದು ಬೊಗ್ಗ ನಾಂಯೆನ ಕರ್ತ್. ನಾಂಯಿ ಬಾತ್ಲೆ. "ಹಾಳ್ ನಾಂಯಿ ಎಲ್ಲಿ ಸತ್ತ್‌ಟೋ ಏನೋ"ಂತ ಬಾರದ ನಾಂಯೆಗೆ ಬೊಯ್ತ್.

ನಾಂಯಿ ಬಟ್ಲ್‌ನ ಸದ್ದ್ ಕೇಳಿ, ಅದಿಕೆ ತಿಂಬಕೆ ಹಾಕಿದೊಂತ ಗೊತ್ತಾಗಿ, ಮೇಯಕೆ ಹೋದ ಕೋಳಿಗಳ ಸಂತಾನ, ಪಿಳ್ಳೆಗಳಿಂದ ಹಿಡ್ದ್ ಹೇಂಟೆ, ಹುಂಜಗಳ ಮುಟ್ಟ ಎಲ್ಲೊವೂ "ಕೆಕ್ ಕೊಕ್"ಂದ್ ಬೇರೆ ಬೇರೆ ಸೊರ ತೆಕ್ಕಂಡ್ ಓಡಿ ಬಂದೊ. ಕೋಳಿ ಪಡೆ ಬಂದದರ ನೋಡಿ, ಚೀಂಕ್ರ್ ಸೆಕ್ಕಿಸಿಕೊಂಡಿದ್ದ ಮಾಚು, ಕೋಳಿ ನಾಯಿಗಳ ಓಡ್ಸಿಕ್ಕೆಂತಳೇ ಇಸಿಕಂಡ ಉದ್ದೊದ ಗಳೆನ ಕೋಳಿಗಳ ಕಡೆಗೆ ಬೀಸಿಕಂಡ್ ಬಾಯಿಲಿ "ಶುವೇ..ಶುವೇ.."ಂತ ಹೇಳ್ತ್. ದೋಂಟಿನ ನೋಡ್ದ ಕೋಳಿಗ, ಒಮ್ಮೆ ಅತ್ತಿತ್ತ ಓಡ್ದಂಗೆ ಮಾಡಿ, ಮತ್ತೆ "ಕೆಕೆಕೊಕ್ ಕೆಕೊಕ್" ಎಂದು ರೆಕ್ಕೆ ಬುಡ್ಸಿಕಂಡ್ ಓಡಿ ಬಂದೊ. ಕೆಲ್ಸ ಮಾಡಿಕಂಡಿದ್ದ ಮಾಚು ಬಾಯಿಲೇ "ಶುವೇ.. ಶುವೇ.."ಂತ ಹೇಳ್ತಾ ಇದ್ದದ್ದ್, ಲೆಕ್ಕನೇ ಇಲ್ಲದ ಹಾಂಗೆ, ಬಟ್ಲ್‌ಲಿದ್ದ ಹುಗ್ಗೆನ ಅಗ್ಳ್‌ಗಳ ಕೊಡ್ಪಿಕಂಡ್ ಕಟಕಟ ಸದ್ದ್ ಮಾಡಿಕಂಡ್ ತೀಂತಿದ್ದೊ. ಅಸ್ಪೊತ್ತಿಗೆ, ತನ್ನ ಸಾಂಕಂವ ಕರ್ದ ಸೊರ ಕೇಳಿ, ಎಲ್ಲೋ ದೂರಲಿದ್ದ ನಾಂಯಿ ಓಡಿ ಬಾತ್. ಬೊಗ್ಗ ಓಡಿ ಬಂದ ರವಸ್ಕೆ ಕೋಳಿಗ ಪೂರಾ ಚೆಲ್ಲಾ ಪಿಲ್ಲಿ! ಹುಂಜಗ, ಹೇಂಟೆಗ, ಪಿಳ್ಳೆಗ ಎಲ್ಲೊವು ಅವ್ಕವ್ಕೆ ಆದಷ್ಟು ಗಟ್ಟಿ ಸೊರಲಿ ಕ್ಕೆ ಕ್ಕೆ ಕ್ಕೇಂತ ಆಪತ್ತ್‌ನ ಸೂಚನೆ ಕೊಡ್ವಂಗೆ, ಕೊಕ್ ಕೊಕ್ ಕ್ಕೊ ಕ್ಕೊ ಕೋಂತ ಊರಿಗಿಡೀ ಕೇಳ್ವಂಗೆ ಸದ್ದ್ ಮಾಡಿಕಂಡ್ ಹಾರಿಕಂಡ್, ಓಡಿಕಂಡ್ ಹೋದೊ. ಆ ಸದ್ದ್ ನಿಲ್ಲಿಕೆನೇ ಅರ್ದ ಗಂಟೆ ಬೇಕಾತ್.

ನಾಂಯೆನ ಬಟ್ಲಿಗೆ ಕೊಡ್ಪಿ ಕೊಡ್ಪಿ ಎಲುಂಬನ ಆ ತೆಳು ತಗ್‌ಡ್‌ನ ಸ್ಟೀಲ್ ಬಟ್ಲ್‌ನ ಕರೆ ಪೂರಾ ನಜ್ಜ್ ಗುಜ್ಜಾಗಿತ್ತು. ಗಂಜಿ ಬೆಂದದ್ದ್ ಹೆಚ್ಚೋ, ಕಡಮೆನೋ ಆದರೆ, ಲಾಯ್ಕದ ಗೈಪು ಅಲ್ಲರೆ ಪಲ್ಯ ಇಲ್ಲೆ ಅಂದರೆ, ಹಾಂಗೆ ಗೈಪುಗೆ ಉಪ್ಪು, ಮೆಣ್ಸ್, ಹುಳಿ ಹದಕ್ಕೆ ಸೇರಿತ್ಲೆ ಅಂದರೆ, ಅಂವ ಅವ್ನ ಸಿಟ್ಟ್‌ನ ತೋರ್ಸಿಕೊಂಬೊದು ಹೀಂಗೆ. ಮಕ್ಕ ದೊಡ್ಡೊವಾಗಿ ಕೈಯಲ್ಲಿ ನಾಲ್ಕ್ ಕಾಸು ಆಕನ ಅವ್ಕವ್ಕೆಂತ ಒಂದೊಂದು ಸ್ಟೀಲ್ ಬಟ್ಲ್ ತೆಕಂಬಕನ, ದೊಡ್ಡ ಮಂಜ ಅಪ್ಪಂಗೂ ಒಂದು ಸ್ಟೀಲ್‌ನ ಬಟ್ಲ್ ಇರಲಿಂತ ತೆಳು ತಗ್ಡ್‌ನ ಒಂದು ಬಟ್ಲ್ ತೆಕಂಡ್, ತಂದ್ ಕೊಟ್ಟಿತ್ತ್. ಅದೇ ಬಟ್ಲ್- ನಾಂಯೆನ ಬಟ್ಲಿಗೆ ಕೊಡ್ಪಿ ಕೊಡ್ಪಿ ಅದರ ಸುರ್ಪನೇ ಹಾಳಾಗಿ ಹೋಗಿತ್ತ್.

ಎಲುಂಬಬ್ದ್ ಇಂತ ಬಾಸೆನೇ ಇಲ್ಲದ ಕೆಲ್ಸಗಳ ನೋಡಿಕನ ಮಾಚುಗೆ ಸಿಟ್ಟ್ ನೆತ್ತಿಗೇರಿತ್ತ್. ಅಷ್ಟೇ ಆದರೆ ಸಾಯಲಿ; ಈ ಎಂಬತ್ತರ ತೊಂಡ, ರಾತ್ರಿ ಶರಾಬು ದೊಂಡೆಗೆ ಹೊಯ್ಕಂಡ್, ಪಿಳ್ಳಿಗಳ ಹಕ್ಕಲೆ ಮಲ್ಕಂಡ ಹೆಣ್ಣ್‌ನ ಒಟ್ಟಿಗೆ ಮಲ್ಗಿಕೆ ಬಾದರ ನೆನ್ಸಿಕಂಡರೇ ಮಾಚುಗೆ ಅವ್ನ ಮೋರೆಗೆ ಉಗ್ಯೊಕೂಂತ ಹೇಳುವಷ್ಟ್ ಹೇಸಿಗೆ ಆದೆ. ಅದಿಕ್ಕೇ, ಅದ್ ಮಲ್ಗಿಕಾಕನ ತಲೆ ಅಡಿಲಿ ಒಂದು ಕಡ್ಪತ್ತಿ ಇಸಿಕಂಡದರ ತೋರ್ಸಿ, ಅವಂಗೆ "ನೀ ಏನಾರ್ ನನ್ನ ಹಕ್ಕಲೆ ಬಂದರೆ ಉಟ್ಟಲೇ, ನಿನ್ನ ಕಡ್ದ್ ಹಾಕಿಕುಟ್ಟು, ಆ ಮೇಲೆ ಬಂದದ್ದರ ನಾ ನೋಡಿಕೊಂಬೆ"ಎಂದು ಹೆದ್ರ್‌ಸಿ ಇಸಿತ್ತ್. ಹೌದು, ಕೋಪದ ಭರಲಿ ಅದ್ ಹಾಂಗೆ ಮಾಡ್ರೂ ಮಾಡುದೇ. ಅಂತ ಜೆನನೇ ಅದ್ !

ಮನ್ಸ್‌ಲೇ "ಮನೆನ ಯೆಜಮಾನಾಗಿ ಎಷ್ಟ್ ಪೊರ್ಲುಲಿ ಇರಕ್ಕ್ ಇವಂಗೆ. ಮಕ್ಕ ಎಲ್ಲಾ ದೊಡ್ಡವಾಗಿ ದುಡ್ದವೆ. ಅವ್ರವರ ಮಟ್ಟಿಗೆ ಎಲ್ಲೋವೂ ಲಾಯ್ಕಲಿ ಒಳೊ. ಹಿಂದೆ ಇದ್ದ ಕಷ್ಟಗ ಈಗ ಇಲ್ಲೆ. ಮಕ್ಕ ಕೊಟ್ಟದರ ಉಂಡ್‌ಕಂಡ್, ಅಂವನ ಪಾಡಿಗೆ ಅಂವ ಮೊರ್ಯಾದೆಲಿ ಇರೂದು ಬುಟ್ಟು, ಬೇಡಾದ, ಹಲ್ಕಟ್ ಕೆಲ್ಸ ಮಾಡಿಕಂಡ್, ಬೊಯ್ಗಳು ಕೇಳಿಕಂಡ್ ಹೀಂಗೆ ಇರೋಕಾ? ಮಕ್ಕ, ಪಿಳ್ಳಿಗ, ಸೊಸೆಕ್ಕ– ಯಾರಿಗೂ ಅವನ ಕಂಡರೇ ಆದ್ಲ್ಲೆ. ಆದಾದರ್ ಹೇಂಗೆ? ಮನೆಗಾಗಲೀ, ಮನೆಯವ್‌ಕ್ಕಾಗಲೀ ಏನಾರ್ ಒಳ್ಳೇದ್ ಮಾಡ್ರೆ ಅಲ್ಲಾ? ಇಂವನ ಬೇಡಾದ ಕೆಲಸಗಳ ನೋಡಿ ಒಬ್ಬೊಬ್ಬ ಒಂದೊಂದ್ ಹೇಳಿಕಾತ್. ಎಲ್ಲೊವು ಸೇರಿ ಅಂವನ ಒಂದ್ ಕಸಕ್ಕೆ ಸಮ ಮಾಡ್ಯೊಳೊ. ಹೀಂಗೆಲ್ಲಾ ನೆನ್ಸಿಕಂಡ್, ಅಂವನ ಒಮ್ಮೆ ನೋಡ್ತ್. ಅಂವ ಕೈ ಸಾ ತೊಳಿಯದೆ, ಓಡಿ ಬಂದ ನಾಂಯೆನ, ಮತ್ತೆ ಹಾರಿ ಓಡುವ ಕೋಳಿಗಳ ನೋಡುದರ್ಲೇ ಬಾಕಿ! ಅಂವ ಹಾಂಗೆ ನಿಂತದ್ದರ ನೋಡಿ ಮಾಚು ಬಾಯಿ ಬೊಡ್ಕಂಡತ್. "ಕೈ ಮತ್ತೆ ಬಟ್ಲ್ ಸಾ ತೊಳಿಯದೆ ನೀ ಎಂತ ಪೆಕ್ರನ ಹಾಂಗೆ ನಿತ್ತ್ ನೋಡುದು? ಅಲ್ಲಾ, ಯಾರಾದರ್ ಅವರ ಊಟದ ಬಟ್ಲ್‌ನ ನಾಂಯಿ ಬಟ್ಲಿಗೆ ತಾಂಗಿಸ್ವೆನಾ? ಸತ್ತರೂ ನಿಂಗೆ ಬುದ್ಧಿ ಬಾದ್‌ಲೆ ಬುಡು. ನಾಂಯಿ ಬಟ್ಲಿಗೆ ಕೊಡ್ಪಿ ಕೊಡ್ಪಿ ಅದರ ಕರೆ ಪೂರಾ ನೆಗ್ಗಿ ಹೋಗುಟು. ನಿನ್ನಂತವಂಗೆ ಸ್ಟೀಲ್ ಬಟ್ಲಲ್ಲ; ನಾಂಯೆನ ಬಟ್ಲೇ ಸರಿ. ಈ ಜನ್ಮಲಿ ನಿಂಗೆ ಬುದ್ಧಿ ಬಾದ್‌ಲೆ. ದೇವ್ರೇ, ನಿನ್ನಂತವ್ನೊಟ್ಟಿಗೆ ನಾ ಇಷ್ಟ್ ಕಾಲ ಕಳ್ದೆ ಅಲ್ಲಾ? ನಂಗಂತೂ ಸಾಕಾಗಿ ಹೋತ್. ಒಮ್ಮೆ ಸತ್ತರೆ ಸಾಕೂಂತ ಆಗುಟು"ಂತ ಹೇಳಿಕಂಡ್ ಇರಿಕನ, ಅತ್ತೆ ಯಾರಿಗೆ ಪಿರಿ ಪಿರಿ ಮಾಡೂದುಂತ ಸೊಸೆ ಬಾಗ್‌ಲ್‌ಂದ ಮೆಲ್ಲ ಒಮ್ಮೆ ಇಣ್ಕಿ ನೋಡ್ತ್. ಸೊಸೆ ಇಣ್ಕಿ ನೋಡ್‌ದರ ನೋಡ್ದ ಮಾಚು ಸುಮ್ಮನಾತ್. ಮತ್ತೆ ಎಲುಂಬಂಗೆ ಮೆಲ್ಲಂಗೆ "ಹೋಗ್, ಕೈತೊಳ್ಕಂಡ್ ಒಳಗೆ ಹೋಗ್"ಂತ ಹೇಳಿ ಬಾಯಿ ಮುಚ್ಚಿಕಂಡತ್.

ಯಾರೂ ಇಲ್ಲದಿರ್ಕನ ಗಂಡಂಗೆ ಮಾಚು ಹೀಂಗೆ ಹೀನಾಮಾನ ಬೊಯ್ದದೆ ಅಲ್ಲದೆ, ಬೇರೆವು ಎಲ್ಲ ಇರಿಕಾಕನ ಅದ್ ಕಣ್ಣ್ ಬುಟ್ಟ್ ಅಂವನ ನೋಡ್ರೆ ಸಾಕ್, ಅಂವ ಅಲ್ಲಿಂದ ಜಾಗೆ ಕಾಲಿ ಮಾಡ್ತಿತ್ತ್. ಈಗ ಮಾಚು ಹೇಳಿದ್ದು ನಂಗೆ ಅಲ್ಲ ಏನೋಂತ ಹೇಳ್ವಂಗೆ, ಬೇಕೋ ಬೇಡನೋಂತ ಎಂದು ಮೆಲ್ಲಂಗೆ ಇಜ್ಜೆಲ್ನ ಪುಡೆಲಿದ್ದ ನೀರ್‌ನ ಮಡಿಕೆ ಹಕ್ಕಲೆ ಹೋಗಿ, ಅದರ್ಲಿದ್ದ ಚೆಪ್ಪಿಂದ ನೀರ್ ತೆಗ್ದ್ ಕೈ ಬಾಯ್ ತೊಳ್ದ್, ಬಟ್ಲಿಗೆ ಒಂದಿಷ್ಟ್ ನೀರ್ ಹಾಕಿ, ಅಲ್ಲೇ ಇಸಿತ್. ಆ ಮೇಲೆ ಬೊಗ್ಗಿ, ಉಟ್ಟ, ಹರ್ದ್ ಹೋದ ಮಾಸಿದ ತೋರ್ತುಲೇ ಕೈಬಾಯಿ ಒರ್ಸಿಕಂಡತ್.

ಮಾಚು ಮನ್ಸ್‌ಲೇ "ಈ ತಡ್ಪೆದ್ದ್ ತೂತು ಮುಚ್ಚುವ್ಹಾಂಗೆ, ಈ ನನ್ನ ಸಂಸಾರದ ತೂತುನ ಮುಚ್ಚುದೇ ನನ್ನ ಹಣೆಲಿ ಬರ್ದ್ ಇರೋಕು"ಂತ ಹೇಳಿಕಂಡತ್.

ಗಂಡನ ಮೋರ್ಲ್ ಬುದ್ಧಿಗೆ ಅವಂಗೆ ಬೋಯ್ಯುತ್ತಿತ್ತಲ್ಲದೆ, ಒಂದು ಒಳ್ಳೆ ಹೆಣ್ಣಿಗೆ ಇರೊಕಾದ ನಿಕರನೂ ಅಂವನ ಮೇಲೆ ಅದಿಕೆ ಇತ್ತ್. ನೆರೆಕರೆಲಿ ಏನಾರ್ ಗಮ್ಮತ್ತಿನ ಊಟ ಮನಿ ಇದ್ದರೆ, ಮುಡೆ ಮಡ್ಕೆಗಳ ತೊಳಿಯಕೆ ಅದರ ಕರಿಯತಿದ್ದೊ. ಎಲ್ಲೊವು ಉಂಡ್ ಹೋದ ಮೇಲೆ ಕೋಳಿದ್ದೋ, ಮೀನ್‌ದ್ದೋ, ಹಂದಿದ್ದೋ ಗೈಪ್ ಏನಾರ್ ಒಳ್ದದರ "ನನ್ನ ಗಂಡಂಗೂ ಹಂಞ ಕೊಡಿ"ಂತ ಕೇಳ್ತಿತ್ತ್. ಮಾಚು ಅಲ್ಲದೆ, ಅವಂಗೆ ಹೀಂಗೆ ಕಟ್ಟಿಕಂಡು ಹೋಗಿ ಕೊಡೊವು ಬೇರೆ ಯಾರ್ ಒಳೊ? ಅಂವನ ಎಲ್ಲೊವು ಮೂಲೆಗೆ ನೂಂಕಿರೆ ಅಂವ ಯಾರ ಹಕ್ಕಲೆ ಹೇಳ್ದು? ಅಂವ ಎಲ್ಲಿಗೆ ಹೋಕು? ಇಂಥ ಲಾಯ್ಕ್ ಗೈಪು, ಪಾಯ್ಸ, ತಿಂಡಿಗಳ ಯಾರ್ ತೆಕ್ಕಂಡ್ ಹೋಗಿ ಕೊಟ್ಟವೆ? ಎಂತ ಸುಡುಗಾಡ್‌ಂವ್ನೇ ಆಗಲಿ, ಅಂವ ನನ್ನ ಕೈ ಹಿಡ್ದುಟಲ್ಲಾ? ಹೆಂಗೋ ಅವನ ಒಟ್ಟಿಗೆ ಐವತ್ತು ವೊರ್ಸ ಕಳ್ತ್. ಇನ್ನೆಷ್ಟು ಕಾಲ ನಾ ಬೋದ್ಕಿಕುಟ್ಟು? ಹೇಂಗೋ ಸುದಾರ್ಸ್ಕಿಕೊಂಬೊದುಂತ ಹೇಳಿ, ಅಂವಂಗೆಂತನೇ ಕಟ್ಟಿಕಂಡ್ ಬಂದದರ ಅಂವಂಗೆ ಕೊಟ್ಟು "ನಾ ಅಲ್ಲಿ ತಿಂದೆ ಅಲ್ಲಾ? ಇಂದ, ನಿಂಗೆ ಸಾ ತಂದೊಳೆ"ಂತ ಹೇಳಿ, ತಂದದರ ಅಂವನ ಕೈಗೆ ಕೊಟ್ಟರೆ, ಅಂವ ಅವಳ ಒಮ್ಮೆ ಕುಸಿಲಿ ನೋಡಿ "ನಂಗೂ ತಂದೊಳನಾ? ಅಂತ ಆಗಳೇ ಬಿಚ್ಚಿ ತೀಂತಿತ್ತ್. ತಿಂದ್‌ಕಂಡೇ "ಹಂದಿ ಗೈಪು ಎಸ್ಟ್ ಲಾಯ್ಕ್ ಉಟ್ಟಲ್ಲಾ?"ಂತ ಆಮ್ರ ನೆಕ್ಕಿ, ಸಳ್ಳಿನ ಚಪ್ಪಿ, ಕಟ್ಟಿ ತಂದ ಎಲೆನ ಮತ್ತೆ ಬೆರ್ಳ್ನ ಚೀಂಪಿಕಂಡ್ "ಕುಡಿಯಕೆ ಸಾ ಏನಾದರ್ ಇದ್ದಿದ್ದರೆ ಎಸ್ಟ್ ಲಾಯ್ಕ್ ಇತ್ತ್"ಂತ ಶರಾಬುನ ನೆಂಪು ಮಾಡ್ಕಣ್ತಿತ್ತ್. ಅಂವ ಇಂತ ಅಪ್ರೂಪದ ಊಟ ಮಾಡಿ ಹೊಟ್ಟೆ ತುಂಬಿ ತೇಗಿರೆ, ಮಾಚುಗೂ ಒಂದ್ ಸಮದಾನ- ನಾ ಉಂಡ ಗಮ್ಮತ್ ಊಟನ ಅಂವ ಸಾ ಉಂಡತಲೇ ಅಂತ. ಆದರೂ ಅವಂಗೆ ಹಂಗಿಸಿ, ಕೆಣ್ಕಿ "ನೀ ಸುಮ್ಮನೆ ಕುದ್ದ್‌ಕಂಡ್ ದಿನ ತೆಗೆವ ಬದಲ್ ಏನಾರ್ ನಿನ್ನಂದಾವ ಹಗ್‌ರದ ಕೆಲಸ ಮಾಡಿದ್ದರೆ ನಿಂಗೆ ಕುಡಿಯಕ್ಕಾರ್ ದುಡ್ಡು ಸಿಕ್ತಿತ್ತ್. ಮೊನ್ನೆ ನಾ ಕೆಲ್ಸಕ್ಕೆ ಹೋಗಿದ್ದೆ ಅಲ್ಲಾ? ಅಲ್ಲಿ ನಿನ್ನ "ಅಡಿಕೆ ಚೊಲ್ಲಿಕೆ ಕಳ್ಸ"ಂತ ಹೇಳಿದ್ದೊ. ನೀ ಹೋಕಲೇ? ಮತ್ತೆ ಕುಡಿಯಕೆ, ತಿಂಬಕೆಂತ ನಿಂಗೆ ಯಾರ್ ತಂದ್ ಕೊಟ್ಟವೆ? ಕೆಲ್ಸ ಮಾಡ್ರೆ ನಿಂಗೆ ಬೇಕಾದ್ದರ ನೀನೇ ತೆಕಣಕಾಗಿತ್ತ್. ಬೇಕಾದ್ದಕ್ಕೆ ಅವರಿವರ ಹಕ್ಕಲೆ ಕೈಯೊಡ್ಡ್‌ಕುಂತ ಇಲ್ಲಾಗಿತ್ತ್"ಂತ ಹೇಳ್ತ್. ತಿಂಬೊದರ್ಲೇ ಮುಳ್ಗಿದ್ದ ಅಂವಂಗೆ ಹೆಣ್ಣ್ ಹೇಳ್ದ್ ಒಂದೂ ಕೆಬಿಗೇ ಬೀತ್ತೆ. ತಂದ ಊಟನ ಹೊಟ್ಟೆ ತುಂಬ ಉಂಡ್‌ದ್, ಥರ್ರಂತ ತೇಗಿ, ಬಾಳೆಲೆ ಇಡಿಕೆ ಹೋತ್-ಹೆಣ್ಣ್ ಹೇಳ್ದ್- ಅದು ಯಾರಿಗೋ ಏನೋಂತ ಹೇಳ್ವ ಹಾಂಗೆ!

ತಡ್ಪೆನ ಎಲ್ಲಾ ಒಟ್ಟೆಗಳಿಗೆ ಪಾಂದೊಳ್ ಸೆಕ್ಕಿಸಿ ಮುಚ್ಚಿದ್ದಾತ್. ಆ ಮೇಲೆ ಮರಗಟ್ಟಿದ ಹಾಂಗಾಗಿದ್ದ ಕಾಲ್‌ನ ಊರಿ, ಒಂದ್ ಕೈನ ಸೊಂಟಕ್ಕೆ ಇಸಿ, ಹಂಞ ಹೊತ್ತ್ ಹಾಂಗೆ ನಿತ್ತ್, ಆ ಮೇಲೆ ಮೆಲ್ಲಾನೆ ತಡ್ಪೆ ಹಿಡ್ಕಂಡೇ ನಡ್ಕಂಡ್ ಹೋಗಿ, ಅದರ ನೀರ್‌ನ ಕುಜಿಲಿಗೆ ಒರ್ಗಿಸಿ ಇಸಿತ್. ಅಲ್ಲೇ ಒಸ್ಯ ದೂರಲಿ ಇದ್ದ ಇಟ್ಟೊಪ್ಪು ದ್ಯೆಯಿಂದ ಎರ್ಡ್ ಸೊಪ್ಪು ತೆಕಂಡ್, ನಾಕ್ ಹೆಜ್ಜೆ ದೂರಲಿ ಇದ್ದ ಹುತ್ತಂದ ಒಂದೊಸಿ ಮೋಣ್ಣ್‌ನ ಸಾ ತೆಕ್ಕೊಂಡ್, ಇಟ್ಟೊಪ್ಪು ಸೊಪ್ಪುಲಿ ಹಾಕಿ, ಆ ಮೇಲೆ ಮೋಣ್ಣ್‌ನ ಕೈಲಿ ಹೊಡಿ ಮಾಡಿಕಂಡ್ ನೀರ್ ಕುಜಿಲಿ ಹಕ್ಕಲೆ ಬಾತ್. ಹಿಂದಣ ದಿನನೇ ತಂದಿಸಿದ ಸೆಗ್ಣಿಗೆ, ಈ ಮೋಣ್ಣ್‌ನ ಸೇರ್ಸಿ ನೀರ್ ಹಾಕಿ ಕಲ್ಸಿತ್. ಮತ್ತೆ ಕೈ ತೊಳ್‌ಕಂಡ್, ಇಜ್ಜೆಲ್‌ಲಿ ಬಿದ್ದ ಚೇಂಕ್ರ್ ಮತ್ತೆ ಬೇರೆ ಕಸನೆಲ್ಲಾ ಒಟ್ಟಿಗೆ ಗುಡ್ಸಿ ಇಟ್ಟತ್. ಅಲ್ಲಿಂದ ಕಲ್‌ಸಿ ಇಸಿದ ಸೆಗ್ಣಿ ಮೋಣ್ಣ್‌ನ ಹಕ್ಕಲೆ

ಬಂದ್, ಅಲ್ಲೇ, ಸೊಂಟಂದಳೇ ಬೊಗ್ಗಿ ನಿತ್ತ್, ಅದರ ಪೊರ್ಲು ಪುಜ್ಕಿ ಅಂಟ್ ಮಾಡಿ, ಒರ್‌ಗಿಸಿ ಇಸಿದ ತಡ್ಪೆನ ತೆಕಂಡ್, ಅದಿಕೆ ಸೆಗ್ಣಿಮೊರ್ಣ್ಣ್ ಮೆತ್ತಿಕೆ ಸುರು ಮಾಡ್ತ್. ತಡ್ಪೆನ ಅಡಿ ಪುಡೆ, ಹಿಂದೆ ಮುಂದೆಂತ ಇಡೀ ತಡ್ಪೆಗೆ ಕಲ್ಸಿದ ಮೊರ್ಣ್ಣ್‌ನ ಪೊರ್ಲು ಪೂಜಿ, ಅಲ್ಲಲ್ಲಿ ದಪ್ಪ ದಪ್ಪ ಮೆತ್ತಿದರ ಬೆರ್ಲಿಂದ ಒತ್ತಿ ಚೀಂಟಿ ತೆಗ್ದ್, ಹಿಂದೆ ಮುಂದೆ, ಅಡಿ ಪುಡೆ ತಿರ್ಗಿಸಿ ಸರಿಯಾಗುಟಾಂತ ನೋಡಿ, ಸರಿಯಾಗುಟುಂತ ಆದ ಮೇಲೆ, ತಡ್ಪೆನ ಎದ್ರ್‌ಪುಡೆಗೆ ಕೊಡಿಂದ ಕೊಡಿಗೆ ನೊಡುನ ಮೂರ್ ಬೆರ್ಳಿಂದ ತಪ್ಪು ಗುರ್ತ್ ಎಳ್ದ್, ಒಳ್ಳ ಬಿಸ್ಲ್ ಬೀಳ್ವಲ್ಲಿ ಒಂದ್ ದೈಗೆ ಒರ್‌ಗಿಸಿ ಇಸಿ "ಇನ್ನ್ ಎರ್ಡ್ ವೊರ್ಸಕ್ಕೆ ತೊಂದರೆ ಇಲ್ಲೆ"ಂತ ಮನ್ಸ್‌ಲೆ ಹೇಳಿಕೊಂಬಕನ, ಹೆಜ್ಜೆ ಸದ್ದ್ ಕೇಳಿದ್ವಾಂಗೆ ಆಗಿ ತಿರ್ಗಿ ನೋಡ್ತ್. ಪೇಂಟ್, ಹೇಟ್, ಬೂಟ್ಸ್, ಬಣ್ಣದ ಬನಿಯನ್ ತರದ ಅಂಗಿ ಹಾಕ್ಕಂಡ್ ಬಂದಂವ ಯಾರ್‌ಂತ ಗೊತ್ತಾಗದೆ, ಹಾಂಗೆ ಅವನ ಮಿಕಿಮಿಕಿಂತ ನೋಡಿಕಂಡ್ ನಿತ್ತತ್.

ಅಂವ, ಹುಗ್ಗವ್ವಂಗಾದ ಚೋದ್ಯನ ನೋಡಿ ಮೂವತ್ತೆರ್ಡ್ ಹಲ್ಲ್ ಬುಟ್ಟ್ ನೆಗಾಡಿಕಂಡ್, ಅಂವ ಮನೆಬಾಸೆಲಿ ಮಾತಾಡದೆ, ಬೆಂಗ್ಳೂರು ಕನ್ನಡಲಿ ಮಾತಾಡ್‌ಕನ, ಓ.., ಇಂವ ಬೆಂಗ್ಳೂರಲಿ ಇರ್ವ ನನ್ನ ಪಿಳ್ಳೆಂತ ಗೊತ್ತಾಗಿ "ನೀ ಹೀಂಗೆ ಕೋಲ ಕಟ್ಟಿಕಂಡ್ ಬಂದರೆ ನಂಗೆ ಹೇಂಗೆ ಗೊತ್ತಾದುಯಾ?"ಂತ ಹೇಳಿ ನೆಗಾಡ್ತ್. ಅಂವ ಜಾಲ್ ದಾಟಿಕನ ಉಸ್ರು ಕಟ್ಟಿಸ್ವ ಹಾಂಗೆ "ಘಂ"ಂತ ಘಾಟ್ ವಾಸನೆ ಬಾತ್. ಅದ್ರೊಟ್ಟಿಗೆ ಪೊರಿಮಳ ಬೀಡದ ನಾತ! ಮಾಚುಗೆ ಆ ಎರ್ಡ್ ನಾತಕ್ಕೆ ವಾಂಕ್ರಿಕೆ ಬಂದ ಹಾಂಗೆ ಆತ್. ಏನೋ ಒಂದ್ ಲಾಟ್‌ಪೋಟ್ ಚಾಕ್ರಿ ಬೆಂಗ್ಳೂರ್ಲಿ ಸಿಕ್ಕಿತ್‌ಂತ ಇಂವ ಬೊಮ್ಮಣ ತೋರ್‌ಸ್ತಾ ಉಟ್ಟಲೇ? ಇವ್ನ ಒಟ್ಟಿಗಿದ್ದ ಮೇಲ್ಜಾತಿಯ ಹೈದಂಗ ಎಲ್ಲಾ ದೊಡ್ಡ ದೊಡ್ಡ ಚಾಕಿರಿಲಿದ್ದರೂ ಗತ್ತ್ ಘೌಲ್ ಇಲ್ಲದೆ ಎಸ್ಟ್ ನಯ ನಾಜೂಕಿಲಿ ಒಳೊಂತ ಮನ್ಸ್‌ಲೇ ಹೇಳಿಕಂಡತ್. ನಾವು ಅಂತವ್ರ ಮನೆಲೇ ದುಡ್ದ್ ಬೊದ್ಕಿದವು. ಏನೊ ಬೆಂಗ್ಳೂರ್ಲಿ ಕೆಲ್ಸ ಸಿಕ್ಕಿ ಕೈಯಲ್ಲಿ ನಾಕ್ ಕಾಸ್ ಆತ್‌ಂತ ಹಿಂದೆದರೆಲ್ಲಾ ಮರ್ತ್, ಅವರ ಎದ್ರ್ ಹೀಂಗೆ ದೊಡ್ಡಸ್ತಿಕೆ ತೋರ್ಸುದು ಅದಿಕೆ ಸರಿಕಂಡತ್ಲೆ. ಅದರಸ್ಟಕ್ಕೆ ಇದೆಲ್ಲ ಏಸ್ ದಿನದ್ದ್‌ಂತ ನೆನ್ಸಿ "ಹೂಂ"ಂತ ಉಸ್ರೆಳ್ದ್‌ಕಂಡ್ ಒಳಗೆ ಹೋತ್.

ಒಂದಿನ, ದೊಡ್ಡೊವು ಸಣ್ಣವು ಎಲ್ಲಾ ಇರಿಕನ ಮಾಚು ಹೇಳ್ತ್ "ಮಕ್ಕಳೇ, ಇಂದ್ ಸರ್ಕಾರ ನಾವುಗೆ ಬೇಕಾದ ಸೌಕರ್ಯ ಮಾಡಿ ಕೊಟ್ಟದ್ದ್ ಹೌದು. ಹಾಂಗೆಂತ ನಾವು ನಮ್ಮ ಹಳೆ ಕ್ರಮಗಳ ಪೂರಾ ಬುಟ್ಟ್‌ಬುಡಿಕಾಗದ್. ನೆರೆಕರೆ ಬೆಳ್ಜಾತಿಯವರ ನೊಡುಲಿ ನಾವು ಅವ್ಕಿಂತ ಮೇಲ್‌ಂತ ತೋರ್ಸಿಕೊಂಬಕಾಗದ್. ಅವರ ಎದ್ರ್ ತಗ್ಗಿ ಬೊಗ್ಗಿ ನಡ್ಯೊಕಲ್ಲದೆ, ಠೇಂಕಾರಂದ ನಡ್ಯೊದ್‌ಂತೇಳ್ರೆ– ಐಸಿರಿ ಬಾಕನ ನಡಿರ್ಲ್‌ಲಿ ಕೊಡೆ ಹಿಡ್ದೊಂತ ಹೇಳ್ವ ಗಾದೆ ಹಾಂಗೆ...."

ಅದರ ಮಾತ್ ಇನ್ನೂ ಮುಗ್ತ್‌ಲೆ. ಅಷ್ಟೊತ್ತಿಗೆ ಆ ಬೆಂಗಳೂರ್ಲಿ ಇರ್ವ ಪಿಳ್ಳಿ ಇದ್ ನಂಗೇ ಹೇಳ್ದ್‌ಂತ ತಿಳ್ಕಂಡ್ ಸಿಡ್ಕಿಂದ "ಅದೆಲ್ಲಾ ನಿನ್ನ ಕಾಲಲಿ ಆತ್. ಅವು ಹೇಳ್ದ ಬಿಟ್ಟಿ ಚಾಕ್ರಿ ಮಾಡಿಕಂಡ್, ಅವು ಕೊಟ್ಟ ಎಂಜಲ್ ತಿಂದ್‌ಕಂಡ್, ಹಸ್ದ ಹೊಟ್ಟೆಲಿ ಅವ್ರ ಇಜ್ಜೆಲ್ ಕೊಡಿಲಿ ಅಸ್ಟ್ ದೂರ ನಿತ್ತ್ ಕಂಡ್, "ಸಾಮೀ, ಒಡೆಯಾ, ದೇವ್ರೇ"ಂತ ಅಡ್ಡ ಬಿದ್ದ್‌ಕಂಡ್, ಆಗಷ್ಟೇ ನಡಿಯಕೆ ಕಲ್ತ ಕೂಸುನ ಸಾ "ಅವು, ನೀವು"ಂತ ಹೇಳಿಕಂಡ್, ಅಂತ ಮಕ್ಕಳ ಬಾಯಿಂದ "ಹೋಗು, ಬಾ"ಂತ ಹೇಳ್ಸಿಕಂಡ್ ಬೊದ್ಕಿಕೆ ನಾವುಗೆ ಬೊತ್ತ್. ನೀ ಬೇಕಾರೆ ನಾಯೆಂದ ಕಡೆ ಆಕೊಂಡ್ ಅಲ್ಲಿರ್. ನಿಂಗೆ ನಾವೇನೂ ಹೇಳೂದ್ಲೆ. ಇಂದ್ ನಾವ್ ದುಡ್ಡವೆ. ಬೇಕಾದ ಹಾಂಗೆ

ಬೊ್ದ್ಕವೆ. ಅದ್ ನಮ್ಮ ಕುಸಿ. ಅದಿಕೆ ನೀ ನಾವುಗೆ ಬುದ್ಧಿ ಹೇಳ್ವ ಅಗತ್ಯ ಇಲ್ಲೆ"ಂತ ಎದ್ದ್ ಹೋತ್. ಅವನ ಹಿಂದೆಂದ ಒಳ್ದವು ಒಬ್ಬೊಬ್ಬನೇ ಹೋದೊ.

ಅದ್ ಮಾತಾಡ್ತ್‌ಲೆ. ಇಂದ್ ಯಾರ್‌ಸಾ ಬುದ್ಧಿ ಕೇಳ್ವ ಸ್ತಿತಿಲಿ ಇಲ್ಲೆ. ಅವವು ಹೇಳ್ದ್, ಅವವ್ ಮಾಡ್ದೇ ಸರಿ. ಇಂತವ್ಕೆ ಎಂತ ಹೇಳುದು? ಮುಂದೆ ಅವ್ಕೇ ಗೊತ್ತಾದೆ– ಶೇಂಕಾರಂದ, ಹಂಕಾರಂದ ಬೊ್ದ್ಕಿಕೆ ಸಾದ್ಯ ಇಲ್ಲೆಂತ. ಹಾಂಗೆಂತ ಅಂವ ಹೇಳ್ದೇನೂ ಸುಳ್ಳಲ್ಲ. ಆದ್ರೆ ಯಾವ ಕಾಲಕ್ಕೂ ಜಾತಿನ ಬುಟ್ಟು ಬೊ್ದ್ಕಿಕೆ ನಾವುಗೆ ಆಕಿಲ್ಲೆ. ಜಾತಿಂತ ಹೇಳ್ವಂಥದ್ದ್ ಇಲ್ಲಿ ಯಾಗೋಳು ಇರ್ವಂಥದ್ದೆ. ನಾವು ಎಸ್ಟೇ ಹಣ ಸಂಪಾದನೆ ಮಾಡ್ರೂ, ಎಸ್ಟೇ ಒಳ್ಳ ಕೆಲ್ಸಲಿ ಇದ್ದರೂ್ ಹಿಂದಂದಾದರೂ ನಮ್ಮ ಜಾತಿನ ಹೇಳದೆ ಬುಡುದಿಲ್ಲೆ. ಈ ದೇಸಲಿ ಪೂಜೆ ಮಾಡಂವ ಒಬ್ಬ ಯಾಗಾರ್ ತೋಟಿ ಕೆಲ್ಸ ಮಾಡಿಕೆ ಉಟ್ಟಾ? ತೋಟಿ ಕೆಲ್ಸ ಮಾಡಂವ ಪೂಜೆ ಮಾಡಿಕೆ ಇರುದಾ?. ಅಂದರೂ ನಮ್ಮ ಕಾಲಕ್ಕಿಂತ ಹಂಞ್ಞ ಏನೋ ಬದ್ಲಾವಣೆ ಆಗುಟು. ಆದರೆ ಈ ದೇಸಲಿ ಜಾತಿನೇ ಇಲ್ಲಾಂತ ಮಾತ್ರ ಆಕೇ ಇಲ್ಲೆ. ಹಾಂಗೇನಾರ್ ಆಕು ಅಂದರೆ ಇಡೀ ಬೂಮಿನೇ ಇಲ್ಲಾಂತ ಆಗಿ, ಹೊಸತಾಗಿ ಮನುಷ್ಯರ್‌ಂತ ಏನಾರ್ ಆದರೆ ಆಗ ಜಾತಿ ಹೋದೋ ಏನೋ. ಹೀಂಗೆಲ್ಲಾ ಯೋಚನೆ ಮಾಡಿಕಂಡ್ "ಅಬ್ಬಬ್ಬಾ"ಂತ ನರ್ಕಿಕಂಡ್ ಮೆಲ್ಲಾನೆದ್ದು ಅದರ ಕೋಣೆಗೆ ಹೋತ್.

ಅದ್ ಮಾಚು ಮಲ್ಗುವ ಕೋಣೆ. ದಟಿಗೆನ ಹೊರ ಬದಿನ ಗೋಡೆಗ ಮೊ್ಣ್ಣದ್. ಒಳೆಗೆನ ಕೋಣೆಗಳ ಗೋಡೆಗ ಮೊ್ಣ್ಣ ಮೆತ್ತಿದ ಬೆದ್ರೆನ ನೆರಿಕೆದ್ದ್. ಮಾಚು ಮಲ್ಗುವ ಕೋಣೆನ ಮಾಡ್‌ನ ಅಡಿಲಿ, ಉದ್ದೊಕೆ ಒಂದು ನೇಕೆ. ಬಟ್ಟೆ ಬರೆ ಎಲ್ಲ ಅದರ್ಲಿ ನೇತಾಡಿಕಂಡಿದ್ದೊ. ನೆಲಲಿ ಸುಂದಿ ಇಸಿದ ಎರ್ಡ್ ಹರ್ಕಲ್ ಮೊ್ಂದ್ರಿಗ. ಒಂದು ಮೊ್ಂದ್ರಿನ ಬುಡ್ಸಿ ಮಾಚು ಗೋಡೆಗೊರಗ್ಗಿ, ಕಾಲ್ ನೀಂಡಿ ಕುದ್ದತ್. ಕಾಲಡಿನ ಒಂದರಮೇಲೊಂದಿಸಿದ್ದ್ ಕಣ್ಣ್ ಮುಚ್ಚಿಕಂಡತ್. ಕಣ್ಣ್ ಮುಚ್ಚಿ ಹೀಂಗೆ ಕುದ್ರುದು ಅಂದರೆ ಅದಿಕ್ಕೆ ಏನೋ ಕುಸಿ. ಒಮ್ಮೊಮ್ಮೆ ಯೇನಾರ್ ಗೇನ ಮಾಡಿಕಂಡ್ ಮೈ ತೂಂಗಿಕಂಡ್, ಒಮ್ಮೊಮ್ಮೆ ಅಡಿಗಾಲ್‌ನ ಆಡ್ಸಿಕಂಡ್ ಅದರ್ದೇ ಲೋಕಲಿ ಇದ್ದ್ ಬುಟ್ಟದೆ. ಮಕ್ಕಳ ಹಕ್ಕಲೆ ಮಾತಾಡಿಕನ ಸಾ ಕಣ್ಣ್ ಮುಚ್ಚಿಕಂಡೇ ಮಾತಾಡುದೂ ಉಟ್ಟು. ಅದ್ ಕಣ್ಣ್ ಮುಚ್ಚಿಕಂಡ್ ಲೋಕದ ಗೇನ ಇಲ್ಲದ ಹಾಂಗೆ ಕುದ್ದಿದ್ದರೆ, ಮಕ್ಕ "ಹುಗ್ಗವ್ವ ತಪಸ್ ಮಾಡಿಕಂಡ್ ಉಟ್ಟು"ಂತ ಕುಸಾಲ್ ಮಾಡ್ತಿದ್ದೊ. ಇಂದ್ ಸಾ ಹಾಂಗೇ ಕುದ್ದಿತ್ತು– ಪಿಳ್ಳಿ ಹೇಳಿದರ ಅರ್‌ಗಿಸಿಕಂಡ್. ಮೈಕೈ ಬೇನೆನೊಟ್ಟಿಗೆ ಪುಳ್ಳಿನ ಮಾತ್ ಮುಳ್ಳು ಕಂತಿದ ಹಾಂಗೆ ಅದಿಕ್ಕೆ ಬೇನೆ ಮಾಡಿತ್ತ್. ಈಗನ ಮಕ್ಕಳಿಗೆ ಹಂಕಾರ ಅಲ್ಲದೆ ತಿಳಿವಳಿಕೆ ಏನೂ ಇಲ್ಲೆ. ಅನುಬವ ಬಾಕನ ಬೊ್ದ್ಕ್ ಎಸ್ಟ್ ಕಸ್ಟ ಉಟ್ಟುಂತ ಗೊತ್ತಾದೆ. ಬೇಕಾದಲ್ಲಿ ತೊ್ಗ್ಗಿ ಬೊ್ಗ್ಗಿ ನಡ್ಯೊಕು ಅಂತ ಇವ್ಕೆ ಇನ್ನೂ ಗೊತ್ತಾತ್ಲೆ. ಇವರ ಹಂಕಾರ ಎಲ್ಲಾ ಏಸ್ ದಿನದ್ದ್? ಎಲ್ಲ ಗೊತ್ತಾದೆ. ಕಾಲ ಎಲ್ಲ ಕಲ್ಸಿದೆ. ಸುಮ್ಮನೆ ನಾ ಯಾಕೆ ತಲೆ ಬಿಸಿ ಮಾಡಿಕೊ್ಂಬದ್‌ಂತ ನಿಟ್ಟಿಸ್ರು ಬುಟ್ಟತ್.

ಈಗೀಗ ಮಾಚುಗೆ ಏನೂ ಬೊತ್ತು. ಎಂತ ಕೆಲ್ಸ ಮಾಡಿಕೆ ಸಾ ಆಗ್ತಿತಿಲ್ಲೆ. ಬಾರಿ ಸಿತ್ರಾಣ. ಎದೆ ಬೇನೆ, ಕಫ, ಬಲ ಕೈಯೊಂದು ನೇಚಿಕೆನೇ ಆದ್‌ಲೆ. ಮೊ್ದ್ದ್ ಮಾತ್ರೆ ತೆಕೊ್ಂಡ್ ತೆಕೊ್ಂಡ್ ಅದಕ್ಕೆ ಸಾಕಾಗಿ ಹೋಗಿತ್ತ್. ಪಾಪ! ಮೊ್ದ್ದ್ ಮಾತ್ರೆಗೆಂತ ದುಡ್ಡು ಕೊಡೊವು ಯಾರಾರ್ ಒಳನಾ? ಅದೇ ಎಲ್ಲಾರ್ ಹೋಗಿ, ಯಾರ ಮನೇಲಾರ್ ಮುಸ್ರೆ ತೊಳ್‌ಯೊದೋ,

ಇಜ್ಜೆಲ್ ಗುಡ್ಸುದೋ, ದೈಗಳಿಗೆ ನೀರ್ ಹೊಯ್ಯೊದೋ ಮಾಡಿ ಚಿಲ್ರೆ ದುಡ್ಡು ಸಂಪಾದ್ಸಿಕಂಡ ಡಾಕ್ಟ್ರಿಗೆ ಕೊಡ್ತಿತ್ತು. ಅವುಕೆ ಹಿಂದೆಂದಳೇ ಅದ್ರ ಪರಿಚಯ. ಹಾಂಗಾಗಿ "ನನ್ನ ಹಕ್ಕಲೆ ಇಷ್ಟೇ ಇರ ಸಾಮಿ"ಂತ ಇದ್ದದರ ಕೊಟ್ಟರೆ, ಮಾತಾಡದೆ ಕೊಟ್ಟದರ ತೆಕೊಣ್ತಿದ್ದೊ ಎಷ್ಟೋ ಸಲ ಸಾಲ ಮೊದ್ದ್ ತಾತಿತ್ತು. ಪಾಪದವ್ರ ಬಗ್ಗೆ ರಿಯಾಯ್ತಿ ಮಾಡ್ವ ಒಳ್ಳೇ ಮನ್ಸ ಆ ಡಾಕ್ಟ್ರ. ಏಸ್‌ಂತ ಅ ರಿಯಾಯ್ತಿ ಹಂಗಿಗೆ ಬೀಳುದು? ಹಾಂಗಾಗಿ ಈ ತರ ಅರೆ ಜೂವಲಿ ಬೊದ್ಕುದಕ್ಕಿಂತ ಒವೆ ಸತ್ತರೆ ಸಾಕ್‌ಂತ ದೇವ್ರಲ್ಲಿ "ನನ್ನ ಕರ್ಕ"ಂತ ಕೇಳಿಕಣ್ತಿತ್. ಕಾಯ್ಲೆ ಜೋರಾಕನ "ನಾ ಮಾಡ್ದ ಪಾ ಮುಗ್ತಿಲ್ಲೆಂತ ಕಂಡದೆ. ಅದಕ್ಕೆ ದೇವ್ರು ನನ್ನ ತೆಕಂಡ್ ಹೋದ್‌ಲೆ"ಂತ ಹೇಳಿಕಣ್ತಿತ್.

ಅದಕ್ಕೆ ಈಗ ಎಪ್ಪತ್ತೈದು ಎಂಬತ್ತು ವೊರ್ಸ ಪ್ರಾಯ ಆಗಿರುದು. ಲೆಕ್ಕ ಇಸಿದವ ಯಾರ್? ಸಾಯಕನ ಮುಟ್ಟ ದುಡಿಯೋಕು. ನನ್ನಂದ ಯಾರಿಗೂ ತೊಂದರೆ ಆಕೆ ಬೊತ್ತು ಹಾಂಗೆ ಸತ್ತರೆ ಸಾಕ್‌ಂತ ಆಗಾಗ ಹೇಳ್ತಿತ್. ಈಗ ಎರ್ಡ್ ಮೂರ್ ತಿಂಗಂದ ಅದ್ರ ಕಾಯ್ಲೆ ಇನ್ನೂ ಜೋರಾಗುಟು. ಎದೆಬೇನೆ, ಕಫ. ನಿತ್ರಾಣ ಅಂದರೇ ನಿತ್ರಾಣ. ಉಪಾಯಿಲ್ಲದೆ ಕೆಲ್ಸಕ್ಕೆ ಹೋತಿತ್ತು ಮೊದ್ದ್, ಸ್ಕೆನಿಂಗ್ ಎಲ್ಲಾ ಆತ್. ಕಾಯ್ಲೆ ಏನ್‌ಂತ ಡಾಕ್ಟ್ರಿಗೆ ಗೊತ್ತಾಗುಟೋ ಇಲ್ಲೆನೋ ಎಂತಂತ ಹೇಳುದಿಲ್ಲೆ. ಅಲ್ಲಾ, ಗುಣ ಆಗದ ಕಾಯ್ಲೆ ಮನಿ ಆಗಿದ್ದರೆ ಎಂತಾರ್ ತೆಕಂಡ ಸಾಯಕಾಗಿತ್. ಮಲ್ಗಿದಲ್ಲೇ ಆದರೆ ಏನು ಗೆತಿಂತ ಹೆದ್ರಿಕೆ! ಸೇವೆ ಮಾಡಿಕೆ ಯಾರ್ ಒಳೊ ದಟಿಗೆಲಿ ಒಬ್ಬೊಬ್ಬಂಗೂ ಸಣ್ಣದೋ ದೊಡ್ಡದೋ-ಎಲ್ಲೊವುಕು ಕಾಯ್ಲೆನೇ. ಎಲ್ಲೊವು ಕೆಲ್ಸ ಹೋವೆ. ಹೀಂಗೆಲ್ಲ ಯೋಚನೆ ಮಾಡ್ತಾ ಮಾಡ್ತಾ ನಾ ಇನ್ನೂ ಏನೇನ್ ಅನ್ಬವ್ಸಿಕೆ ಉಟ್ಟೋಂತ ಒಂದು ನಿಟ್ಸುಸ್ರು ಎಳ್ಕಂಡತ್.

ನೀರ್ಮಲೆ ಕಾಡ್‌ನ ಬುಡಲೇ, ಪಯಸ್ವಿನಿ ಹಳ್ಳನ ಆಚೆ ಕರೆ, ಒಂದ್ ಆಸ್ ದೂರಲಿ ಹತ್ತ್ ಹದ್‌ನೈದ್ ದಟಿಗೆಗ ಒಳೊ. ಅದರ್ಲಿ ಒಂದ್ ಮಾಚುನ ಕುಟುಂಬದ್ದ್. ಅಲ್ಲಿಗೆ ವೀಳ್ಯಡ್ಕಂತ ಹೆಸ್ರ್, ಅದೀಗ ಈಳ್ಯಡ್ಕ ಆಗುಟು. ಈಳ್ಯಡ್ಕಂದ ಸುಳ್ಯದ ದೊಡ್ಡ ಮಾರ್ಗಕ್ಕೆ ನಡ್ಕೊಂಡ್ ಹೋದರೆ ಎರ್ಡ್ ಮೈಲ್. ಹಳ್ಳ ದಾಟಿ ಹೋದರೆ ಎರ್ಡ್ ಫರ್ಲಾಂಗ್. ಓರೆಲಿ ಹಳ್ಳ ದಾಟಿರೆ ಕೈ ಕೊಟ್ಟ ಹಾಂಗೆ ಹಳೆಗೇಟಿಗೆ ತಲ್ಪಿದೆ. ಅರ್ಗಾಲಲಿ ಹಳ್ಳ ದಾಟಿಕೆ ಬಂಜ ಇಲ್ಲೆ. ಮಳ್ಗಾಲಲಿ ಮಾತ್ರ ದೋಣಿ ಅಲ್ಲರೆ ಪಿಂಡಿ ಬೇಕ್. ಒಂದು ಕಾಲಲಿ ಅದ್ ದೋಣಿ ಕಡವು ಆಗಿತ್. ಅಲ್ಲಿಗೆ ಓಡಬಾಯಿಂತ ಹೆಸ್ರ್, ಓಡ ಅಂದರೆ ದೋಣಿ. ದೋಣಿಲಿ ದಾಟುವ ಜಾಗೆ ಓಡಬಾಯಿ. ಇಂದ್ ದೋಣಿ (ಓಡ) ಇಲ್ಲೆ. ಆದರೆ ಆ ಹೆಸ್ರ್ ಮಾತ್ರ ಹಾಂಗೇ ಉಟ್ಟು. ಅಲ್ಲೀಗ ಇಡ್ಯಡ್ಕದ ಗಿರೀಶ ಭಾರದ್ವಾಜರ್ ಕಟ್ಟಿದ ದೊಡ್ಡ ಒಂದು ತೂಗು ಸೇತುವೆ ಆಗುಟು. ಆ ತೂಗು ಸೇತುವೆಲಿ ನಡ್ಕಂಡ್ ಹೋದರೆ ಬಾನ್‌ಲಿ ಮೋಡದ ಮೇಲೆ ತೇಲಿಕಂಡ್ ಹೋದ ಹಾಂಗೆ ಆದೆ. ಆದರೆ ಮಾಚುಗೆ ಮಾತ್ರ ಅಂದ್ ಸಣ್ಣದರ್ಲಿ, ಪಿಂಡಿಲಿ ನೀರ ಮೇಲೆ ತೇಲಿಕಂಡ್ ಹೋದದ್ದರ ನೆನ್ಸಿರೆ ಅದೊಂದು ದೇವಲೋಕದ ಪೊರ್ಲ್‌ನ ಕನ್ಸ್‌ಂತ ಆದೆ.

ಮಾಚುನ ಅಪ್ಪ ಕಳಲ ಆ ಕಾಲಲಿ ಒಂದ್ ಪಿಂಡಿ ಕಟ್ಟಿಕೊಣ್ಡಿತ್. ಹಳ್ಳದ ಕರೆಲೇ ಬೆಳ್ದಿದ್ದ ಬೆದ್ರ್ ಹಿಂಡ್ಲಿಂದ ಬೇಕಾದಷ್ಟು ಬೆದ್ರ್ ಕಡ್ದ್, ಒಂದೇ ಉದ್ದದ ಅಳತೆಲಿ ಬೆದ್ರ್‌ಗಳ ಸಾಲ್‌ಲಿ ಇಸಿ, ಗಟ್ಟಿ ಜಾತಿ ಕಾಡ್ ಬೊಳ್ಳಿಯೊಟ್ಟಿಗೆ ಬಾಮಿ ಬೊಳ್ಳಿ ಸಾ ಸೇರ್ಸಿ, ಒಂದಕ್ಕೊಂದು ಕಟ್ಟಿ ಮಾಡ್ದ ಪಿಂಡಿ ಅದ್. ಒಳ್ಳೆ ದಿನ ನೋಡಿ ನೀರ್‌ಗೆ ಬುಡುವಂದು ನೀರ, ಕಾಡ, ಕುಟುಂಬದ

ನೆವ್ವ ದೇವುಗಳ ಕೇಳಿಕಂಡ್, ಪಿಂಡಿಲಿ ಹೋಗಿ ಬಾವವ್ಕೆ, ಪಿಂಡಿನ ನಡ್ಡುವವ್ಕೆ ಯಾವೊಂದು ತೊಂದರೆಗ ಬಾರದ ಹಾಂಗೆ ಕಾಪಾಡೊಕುಂತ "ಬಿಂದು" ಕೊಡಿಕೆ ಇತ್ತ್. ಬಿಂದು ಕೊಡುದೆಂದರೆ ಹಳ್ಳದ ದಡಲಿ ಮೂಡ ಪೋಡ್ವ ನಿತ್ತ್, ಒಂದು ಬೆಳಿ ಬಣ್ಣದ (ಶಾಸ್ತ್ರ) ಹುಂಜನ, ಕಟ್ಟಿ ಇಸಿದ ಪಿಂಡಿಗೆ ಮೂರು ಸುತ್ತು ತಂದ್, ತಲೆಕ್ಯೊದ್ ಅದರ ನೆತ್ತರ್‌ನ ಪಿಂಡಿಗೆ ಮುಟ್ಟಿಸಿ, ಹಳ್ಳಕ್ಕೆ ಬೆನ್ನು ಹಾಕಿ ನಿತ್ತ್, ಆ ಹುಂಜನ ನೀರಿಗೆ ಇಡುದು. ನೀರ್‌ಗೆ ಬಿದ್ದಲ್ಲಿ ಜುವ್ವ ಸಂಕಟಕ್ಕೆ ಚಡಪಡ್ಸಿಕಾಕನ ಅಸ್ಪಗಲ, ಹಂಙ ಹೊತ್ತ್ ನೀರ್ ಕೆಂಪಾಗಿ ಹರ್ದ್ ಹೋದೆ. ಒಟ್ಟಿಗೆ ಹುಂಜ ಸಾ. ಈಜಿಕೆ ಬಾಂವ ಒಬ್ಬ ಹಳ್ಳಲಿ ಹೋವ ಹುಂಜನ ಹಿಡ್ದ್ ತಂದದೆ. ಅಂದ್‌ನ ಊಟಕ್ಕೆ ಆ ಕೋಳಿ ಸಾರ್‌ನ ಮರ್‌ಸಾದ!

ಪಿಂಡಿ ನೀರ್‌ಗೆ ಬುಟ್ಟನೋ ಮಕ್ಕ ಅದರ್ಲೇ! ಹಗ್ಲ್ ಇರ್ಲ್‌ಂತ ಇಲ್ಲೆ. ಹಳ್ಳ ದಾಟುವವೊರೊಟ್ಟಿಗೆ ಇವು ಸಾ! ಆ ಗಮ್ಮತ್ ಹೇಳಿ ಮುಗಿಯದ್ದ್! ಆ ದಿನಗಳ ನೆನ್ಸಿರೆ ಮಾಚುನ ಮೈಲಿ ಈಗಳೂ ಅಕ್ಕಿ ಹೊಡ್ಡದೆ. ದೇವ್ರೇ ! ಅದ್ ಏಸ್ ಪೊರ್ಲುನ ದಿನಗ! ನನ್ನ ಬೋದ್ಕ್‌ಲಿ ಹೊಟ್ಟೆಗೆ ಇಲ್ಲದ ದಿನಗ ಏಸೋ ಇರ್ದು. ಆದರೆ ಇಂತ ಸುಕದ ದಿನಗ ಬೇರೆ ಯಾರಿಗೂ ಸಿಕ್ಕದ್ದ್ ನನ್ನ ಬೋದ್ಕ್‌ಲಿ ಇತ್ತಲ್ಲಾಂತ, ಅದರ ನೆಂಪುಲಿ ಅದ್ರ ಕಣ್ಣ್‌ಲಿ ನೀರ್ ಬಾದೂ ಇತ್ತ್. ಂತ ಕುಸಿ ಕೊಟ್ಟದ್ದಕ್ಕೆ ಮತ್ತೆ ಮತ್ತೆ ದೇವರ ನೆಂಪು ಮಾಡಿಕಂಡತ್. ಇಂತ ಪೊರ್ಲುನ ಬಾಲ್ಯ ಕೆಲವೇ ಪುಣ್ಯ ಮಾಡ್ದವ್ಕೆ ಮಾತ್ರ ಸಿಕ್ಕುದುಂತ ಅದ್ರ ತಿಳಿವಳಿಕೆ!.

ಅಂದ್ ಪಾಪದವ್ಕೆ ಇದ್ದದ್ದ್ ಒಂದೆರ್ಡ್ ಕೋಂಬ್ರೆನ ಹುಲ್ಲು ಅಲ್ಲರೆ ಸೋಗೆ ಹೋಸಿದ ಜೋಂಪಡಿಗ. ಕೆಲೊವಕ್ಕೆ ಮೋಣ್ಣ್‌ನ ಗೋಡೆ ಸಾ ಇಲ್ಲೆ. ಅದಿಕೆ ಬೆದ್ರ್‌ನ ಜಜ್ಜಿ ಬುಡ್ಸಿ, ಒಂದಕ್ಕೊಂದು ಸೇರ್ಸಿ ಮಾಡ್ದ ನೆರಿಕೆಗ. ನೆರ್ಕೆದ್ದೇ ಬಾಗ್‌ಲ್. ಕೆಲೊವರ ಜೋಂಪಡಿಗೆ ಅದ್ ಸಾ ಇಲ್ಲೆ. ಚಾಳೆದ್ದ್ ಒಲಿನ ಹೆಣ್ದ್ ಮಾಡ್ದ ತಟ್ಟಿನೇ ಗೋಡೆ. ಅದರ್ದೇ ಬಾಗ್‌ಲ್. ಕೆಲೊವು, ಅಡಿಕೆ ಹಾಳೆನ ಒಂದಕ್ಕೊಂದ್ ಪೋರ್ಲ್‌ಜ ಸೇರ್ಸಿ, ಅದರ ಆಪುಡೆ ಈಪುಡೆಗೆ ಗಟ್ಟಿ ದಬ್ಬೆ ಕಟ್ಟಿ ಬಾಗ್‌ಲ್ ಮಾಡಿಕೋಂಬೋದೂ ಇತ್ತ್. ಆದರೆ ಇಂದ್ ಈಳ್ಯಡ್ಕಲಿ ಅಂತ ಜೋಪಡಿಗ ಹೋಗಿ ಮೂರ್‍ನಾಲ್ಕು ಕೋಂಬ್ರೆನ ಹಂಚಿನ ಮನೆಗ ಆಗೊಳೊ. ಕೆಲೊವರ ಮನೆಯೆದ್ರ್ ಸಣ್ಣ ವಾಹನಗ ನಿಂತವೆ. ಒಂದು ಕಾಲಲಿ ಇಂತ ವಾಹನಗ ಅಂದರೆ ಈಳ್ಯಡ್ಕದ ಮಕ್ಕಳಿಗೆ ಜಗತ್ತಿನ ಏನೋ ಅದ್ಭುತ ಅಂತ ಆಗಿ ಅದರ ಓಡ್ಸಿಕಾಕನ ಕಣ್ಣ್ ಬಾಯಿ ಬುಟ್ಟ್ ನೋಡ್ತಿದ್ದೊ. ಸಣ್ಣ ಮಕ್ಕಳಿಗೆ ಅದರ ಮುಟ್ಟಿಕೆ ಆಸೆ. ಹಾಂಗೇನಾರ್ ಮುಟ್ಟಿ ಬುಟ್ಟರೆ ಒಳ್ದ ಮಕ್ಕಳ ಹಕ್ಕಲೆ "ನಾನದರ ಮುಟ್ಟಿದೆ"ಂತ ಕೊಚ್ಚಿಕಣ್ತಿದ್ದೊ!

ಕಾಲ ಬದ್ಲಾಗುಟು. ಅಂದ್ ಬೆಳ್ಜಾತಿ ಜೆನಗಳ ಮನೆನ ಇಜ್ಜೆಲ್ನ ಕೊಡಿಲಿ ಮನೆ ಯೆಜಮಾರ್ರ್ ಹೊರಗೆ ಬಾದರ ಇವು ಕಾದ್‌ಕಂಡ್ ನಿಲ್ಲಕಾಗಿತ್ತ್. ಇಂದ್ ಕೆಲ್ಸಕ್ಕೆ ಕರಿಯಕೆ ಅವೇ ಇವರ ದಟಿಗೆಗಳ ಇಜ್ಜೆಲ್‌ಲಿ ಬಂದ್ ನಿತ್ತವೆ. ಅಂದ್ ಬೊಳ್ಪು ಹರ್ಯಕಾದರೆ ಅವರ ಮನೆಗೆ ಹೋಗಿ ಇರ್ಲ್ ಮುಟ್ಟ ಕೆಲ್ಸ ಮಾಡ್ರೂ ಕೂಲಿ ಅಂದರೆ ಅವು ಕೊಟ್ಟ ಅಕ್ಕಿ ಬತ್ತ, ತೆಳಿಗಂಜಿ. ದಟಿಗೆಗೆ ಹೋಕನ ಆ ದಿನದ ಕರ್ಚಿಗೆ ಲೆಕ್ಕ ಮಾಡಿ ಕೊಟ್ಟ ಹಾಂಗೆ ಕೊಡ್ವ ಉಪ್ಪು ಮೆಣ್ಸ್. ಇಂದ್, ಇವು ಮಾಡ್ದ ಕೆಲ್ಸ, ಹೇಳ್ದ ಸಂಬಳ! ಹಿಂದೆ ಆ ಮೇಲ್ಜಾತಿಯವ್ರ ಕರೆವ ಗೌರವದ ಹೆಸ್ರ್‌ಗೆಲ್ಲ ಹೋಗಿ, ಅವರ ಹೆಸ್ರಿಗೆ ಅಮ್ಮ, ಅಣ್ಣ, ಅಕ್ಕಂತ ಸೇರ್ಸಿ ಕರ್ದವೆ. ಕಲ್ತವರ ಮೇಡಂ, ಮಿಸ್ಸ್, ಸರ್ ಅಂತ. ದಟಿಗೆ ಹೋಗಿ ಬಿಡಾರ, ಮನೆ ಆಗುಟು. ಅವರವ್ರ ಮನೆಲೂ ಅವರ ಬಾಸೆಲಿ ಬೇಕಾದವರ

ಕರೆವ ಸಬ್ದಗೆಲ್ಲ ಹೋಗಿ ಆಂಟಿ, ಅಂಕಲ್, ಮಮ್ಮಿ, ಡ್ಯಾಡಿ ಶಬ್ದಗ ಸೇರಿಕೊ್ಂಡೊಳಿ ನೆರೆಕರೆನ ಬಾಯಮ್ಮನೂ, ಬ್ಯಾರ್ತಿಯೂ, ಇವರ ಅವ್ವ ಅಪ್ಪನ ಅಕ್ಕ ತಂಗೆಕ್ಕಳೂ ಎಲ್ಲೋ ಆಂಟಿಗಳೇ. ಒಟ್ಟಾರೆ ಬಾಸೆ, ಸಮ್ಮಂದ ಪೂರಾ ಹಾಳಾಗಿ ಹೋತ್.

ಕೂಲಿ ಕೆಲ್ಸಕ್ಕೆ ಹೋಕನ ಸಾ ಆಪೀಸಿಗೆ ಹೋಗುವ್ಹಾಂಗೆ, ಮೊದ್ವೆಗೆ ಹೊರಟೊಳೊನೋ ಹೇಳ್ವ ಹಾಂಗೆ ಬೊಳ್ಳಿಗೆ ಒಂಬತ್ತು ಒಂಬತ್ವರೆ ಗಂಟೆ ನಂತರನೇ ಹೊರ್ಟ್, ಸಾಲೆ ಬುಡಿಕಾಕ ಅಂದರೆ ಐದ್ ಗಂಟೆಗೆ ಕೆಲ್ಸ ಬುಟ್ಟು, ಕೈಕಾಲ್ ತೊಳ್ದ್, ಲಾಯ್ಕದ ಬಟ್ಟೆ ಹಾಕಿ ಹೊರ್ಟ್ ನಿಂತವ ಹೆಳ್ಮಕ್ಕ ನೈಲಾನ್ ಸೀರೆ ಸುತ್ತಿಕಂಡರೆ, ಗೂಡೆಗ ಚೂಡಿದಾರ ಹಾಕ್ಕಂಡ್, ಮೋರೆಗೆ ಎಂತೆಂತದೋ ಸ್ನೋ ಪೌಡರ್ದ್ ಸಾರಣೆಮಾಡಿ, ಕಣ್ಣಿಗೆ ಕಣ್ಣ್ ಕಪ್ಪ್ ಹಚ್ಚಿ, ಹುಬ್ಬುನ ಕಾಮನ ಬಿಲ್ಲಿನ ಹಾಂ ತಿದ್ದಿ, ತುಟಿಗೆ ಬಣ್ಣ ಹಾಕಿ ಸೌಂದರ್ಯ ಸ್ಪರ್ಧೆಗೋ, ಸಿನೆಮಾಕ್ಕೆ ಸೇರಿಕೋ ಹೊರ್ಟಂಗೆ ಹೊರ್ಡುವ ನೋಡಿ ಹೈದಂಗ ಬುಡಿ, ಮೋರೆಲಿ ನೆರಿಗೆ ಬಿದ್ದ ಅಜ್ಜಂದ್ರೂ ಅವರ ಪೋರ್ಲಿಗೆ ಮೆರ್ರ್ಳಾಗಿ ನಾಲ್ಕ್ ಮಾತ್ ಮಾತಾಡದೆ ಇರಿಕಿಲ್ಲೆ.

ಹಿಂದೆಲ್ಲ ಮೇಲ್ಜಾತಿ ಜೆನಗ ಅವರ ಮನೆನ ಹೊರಗೆನ ಕೆಲ್ಸಕ್ಕೆ ಮಾತ್ರ ಇವರ ಕರ್ಯತಿದ್ದವು ಇಂದ್ ಇವರ ಮನೆಯ ಮೊದ್ವೆ ಮುಂಜಿಗೂ ಕರ್ದವೆ. ಮಡೆ ಮಡ್ಕೆ ತೊಳ್ಯಕೋ ಜಾಲ್ಗ ಸೆಗಣಿ ಸಾರ್ಸಿಕೋ ಕರಿಯತಿದ್ದವರ, ಈಗೀಗ ಕೆಲೊ್ವು ಮನೆಲಿ ಒಳಗೆನ ಕೆಲ್ಸಕ್ಕೂ ಸೇರ್ಸಿಕಂಡವೆ ಅವೂ ಸಾ ಇವರ ಮನೆ ಕಾರ್ಯಕ್ರಮಕ್ಕೆ ಬಾವಷ್ಟರ ಮಟ್ಟಿಗೆ ಸಮಾಜ ಬದಲಾಗುಟು. ಇನ್ ಇಪ್ಪತ್ತ್ ಮೂವತ್ತ್ ವೊರ್ಸಲಿ ನಮ್ಮಲ್ಲಿಗೆ ಮೇಲ್ಜಾತಿಯೊ್ವು ಕೆಲ್ಸ ಕೇಳಿಕಂಡ್ ಬಾವ ದಿನ ಬಂದರೂ ಬಾದು. ಸಣ್ಣದರ್ಲಿ ನಮ್ಮವು ಹೀಂಗೆಲ್ಲಾ ಆಕೆ ಇರ್ದುಂತ ಮಾಚು ಕನ್ಸ್‌ಲಿ ಸಾ ನೆನ್ದವಳಲ್ಲ. ಹಾಂಗಾಗಿ ಮುಂದೆ ಮೇಲ್ ಕೀಳ್ಂತ ಇರ್ವಂತದ್ದ್ ಕಡ್ಮೆ ಆಕೆ ಇರ್ದು. ಹಾಂಗ ಆಗಲಿಂತ ನೆನ್ಸಿಕಂಡೇ ಅದರ ಹುಗ್ಗವ್ವನ ನೆಂಪು ಮಾಡಿಕೊ್ಂಡತ್.

ಹಿಂದೆ ಅವರ ಜಾತಿಯೊ್ವು ಮಾತಾಡಿಕಂಡಿದ್ದ ಹಳೆ ತುಳು ಬಾಸೆ ಈಗ ಹಳಬರಲ್ಲಿ ಮಾತ್ರ ಒಳ್ದುಟು. ಅವರ ಜಾತಿಯ ಹಿರಿಯೊ್ವು ಆ ಬಾಸೆಲಿ ಮಾತಾಡ್ರೆ ಅದರ ಕೇಳಿ "ಇದೆಂತ ಗಲೀಜ್ ಬಾಸೆ"ಂತ ಹೈದಂಗ ಹೇಸಿಗೆ ಪಟ್ಟ್‌ಕೊ್ಂಡವೆ. ಅವ್ಕೆ ಅವು ಮಾತಾಡ್ವ ಇಂಗ್ಲಿಷ್ ಬೆರ್ಸಿದ ತುಳುನೇ ಬಾರಿ ಒಳ್ಳ ಬಾಸೆಂತಾಗುಟು. ಇಂಗ್ಲಿಸ್ ಬಾಸೆ ಬೆರ್ಸಿ ಮಾತಾಡ್ವೊ್ವು ಮಾತ್ರ ಯೋಗ್ಯರ್, ಬಾಕಿಯೊ್ವು ಅಯೋಗ್ಯರ್ಂತ ಆಗುಟು. ಬಾಸೆಲಿ, ಏಸಲಿ, ತಲೆ ಕೂದೊಲ್‌ಲಿ ಸಿನೆಮಾದವರ ಹಾಂಗೆ ಮಾಡ್ರೇ ಅವ್ಕೆ ಮರ್ಯಾದೆಂತ ಹೇಳ್ವ ಕತೆ ಈಗಿನವರ್ದ್. ಬೆಂಗ್ಳೂರ್ ಪಿಳ್ಳೆನ ಮಾತ್‌ಲಿದ್ದದ್ ಅದೇ ದೊಡ್ಡಸ್ತಿಕೆ. ಬದ್ಲಾವಣೆನ ಬೀಸಿಗೆ ಇನ್ನ್ ಏನೇನ್ ಆಕೆ ಹೋಕೆ ಉಟ್ಟೋಂತ ಮಾಚು ಅದರಷ್ಟಕ್ಕೇ ಯೋಚನೆ ಮಾಡ್ತಿತ್ತ್.

ಅದ್ರಷ್ಟಕ್ಕೇ ಹೀಂಗೆ ಕುದ್ದ್‌ಕಂಡ್, ಅದರ ಹಳೆ ದಿನಗಳ ನೆಂಪು ಮಾಡಿಕಂಡ್, ಆ ನೆಂಪುಲೇ ಮೊರ್ದ್ದು, ನೆಗಾಡೂದು ಅದಕ್ಕೊಂದು ಗೀಳೇ ಆಗಿ ಬುಟ್ಟಿತ್ತ್. ಅದರ್ಲೆ ಅದ್ ಹೇಳಿಕಾಗದ ಒಂದು ಸುಕನ ಅನುಬವ್ಸಿತಿತ್ತ್. ಅದ್ ಗಂಟೆಗಟ್ಲೆ ಹೀಂಗೆ ಕುದ್ದ್‌ಕಂಡಿದ್ದರೆ ಮಕ್ಕ ಏನಾರ್ ಹೇಳಿ ಮಕ್ಕಾರ್ ಮಾಡುದೂ ಇತ್ತ್. ಮಕ್ಕ ಹೇಳ್ವ ಅಂತಾ ಮಾತ್‌ಗಳ ಅದ್ ಕೆಬಿಗೇ ಹಾಕಣ್ತಿತ್ಲೆ. ಹೀಂಗೆ ಅದ್ರಷ್ಟಕ್ಕೇ ನೆಂಪುನ ಮೆಲ್ಕ್ ಹಾಕುದ್ರಿಂದ ಬೇರೆಯವ್ಕೆ ಏನೂ ತೊಂದರೆ ಇಲ್ಲೆಲೇ. ಯಾರೋ ಏನೋ ಹೇಳ್ವಂತ ನನ್ನ ಸುಕನ ನಾ ಅದ್ಯಾಕೆ ಬುಡೊಕು? ಅದೇ ಒಮ್ಮೊಮ್ಮೆ

ಳೆದರ ನೆಂಪು ಮಾಡಿಕಂಬ ಮೊರ್ಲ್ ನಂಗ್ಯಾಕೆ ಬಾತ್‌ಂತ ಅದ್ರಷ್ವಕ್ಕೆ ಹೇಳಿಕಂಡರೂ್, ಆ ಯೋಚನೆಗ ಬೇಡ ಬೇಡಂತ ಹೇಳ್ರೂ, ಅವು ಅವಾಗಿಯೇ ಸಾಲ್ ಸಾಲಾಗಿ ಸಿನೆಮಾದ ಚಿತ್ರಗಳ್ಹಂಗೆ ಮನ್ಸಿನ ಕಣ್ಣೆದ್ರ್ ಬಾಕನ, ಅದ್ ಲೋಕನೇ ಮೊರ್ತು ಬಿಡ್ತಿದ್ದದ್ ಸುಳ್ಳೇನ್ ಅಲ್ಲ.

ಅದಕ್ಕೆ ಸುಮಾರ್ ಹತ್ತು ವರ್ಷ ಆಕನ ಮುಟ್ಟ ಅದ್ರ ಅಜ್ಜ ಅಂದರೆ– ಅಪ್ಪನ ಅಪ್ಪ ಕಿನ್ನ ಇತ್ತ್. ಅವನ ನೆಂಪಾದರೆ ಈಗಳೂ ಅದರ ಮೈ ಜುಂ ಅಂತ ರೋಮ ನೆಟ್ಟಂಗೆ ಆದೆ! ಅಂವ ನುಡ್ಸ್‌ತಿದ್ದ ದುಡಿದ್ ಸದ್ದ್ ಈಗಳೂ ಅದರ ಕೆಬಿಲಿ ಕೇಳ್ದೆ. ದುಡಿ ನುಡ್ಸುವ ಅವನ ಬಿರ್ಸಾತಿಕೆನ ಆ ಕಾಲಲಿ ಮೀರ್‍ರ್ಸುವು ಬೇರೆ ಯಾರೂ ಇಲ್ಲಾಗಿತ್ತ್. ಊರ್ಲಾಗಲೀ, ನೆರೆಕರೆ ಊರ್‌ಲಾಗಲೀ ಒಳ್ಳದಕ್ಕೆ ಕೆಟ್ಟದಕ್ಕೆ ಅವನ ದುಡಿ ಇಲ್ಲದೆ ನಡಿಯೊದೇ ಇಲ್ಲೆಂತ ಹೇಳ್‌ವಷ್ಟ್ ಅಂವ ಹೆಸ್ರ್ ಪಡ್ದಿತ್ತ್. ಅದಕ್ಕೆ ಅಂವನ "ದುಡಿ ಕಿನ್ನ"ಂತನೇ ಕರಿಯತಿದ್ದೊ.

ಜಾತಿಯವರ ಮೊರ್ದ್ವೆಗೆ ಮನಿ ಹೋತಂದ್ರೆ ಕಡಿಮೆ ಅಂದರೆ ಮೂರ್ದಿನ ಆದರೂ್ ಅಂವ ಅಲ್ಲೇ ಇರೋಕು. ಹೆಚ್ಚ್ ದಿನ ಇದ್ದಷ್ಟ್ ಆ ದಟಿಗೆಯೊವ್ಕೆ ಕುಸಿನೇ ಹೊರ್ತ್ ಬೇಜಾರ್ ಇಲ್ಲೆ. ಬೈನೆ ಅಲ್ಲರೆ ತಾಳೆ ಮರದ ಕಳ್ಳ್ ಕುಡ್ದ್ ಅಂವ ದುಡಿ ನುಡ್ಸಿಕೆ ಸುರುಮಾಡ್ತ್ ಅಂದರೆ ಅವಂಗಾಗಲೀ, ಕೊಣಿವೊವ್ಕಾಗಲೀ ಈ ಲೋಕದ್ದ್ ಗೋಚರನೇ ಇರ್ತ್ತೆ. ಅಂವನೂ ಹಾಂಗೇ, ತರಾವರಿಲಿ ಕೊಣ್ಕಂಡ್ ನಮುನಮೂನೆ ತಾಳಲಿ, ಮೆಲ್ಲ, ನಿಧಾನ, ಜೋರ್‌ಂತ ಹೀಂಗೆ ಬೇರೆ ಬೇರೆ ರೀತಿಲಿ ಪೆಟ್ಟು ಹಾಕಂಡ್, ದುಡಿ ಬೊಟ್ಟಿಕೊಂಡಿದ್ದರೆ, ಅಲ್ಲೊಂದು ಬೇರೆನೇ ಲೋಕ ಹುಟ್ಟಿಕಣ್ತಿತ್ತ್. ಕೃಷ್ಣ ದೇವರ ಕೊಳಲ್ನ ಹಾಡ್‌ಗೆ ಮೊರ್ಲ್ ಕಟ್ಟ್‌ವ ಹೆಳ್ಮಕ್ಕಳ ಹಾಂಗೆ, ಆಗಷ್ಟೇ ನಡಿಯಕೆ ಕಲ್ತ ಸಣ್ಣ ಹಾಲ್ ಕುಡ್ಯವ ಮಕ್ಕಳಿಂದ ಹಿಡ್ದ್, ಎರ್ಡ್ ಮೂರ್ ಹೆತ್ತ ಹೆಳ್ಮಕ್ಕಳೂ, ಎರ್ಡ್ ಕೋಂಕ್‌ದ್ ಮೊಟ್ಟಾಳೆ ಇಸಿಕಂಡ್ ಕೊಣಿವ ಪೊರ್ಲು ನೋಡೊಕು! ನೋಡ್ತಾ ಇದ್ದ ಹಾಂಗೆ ಅಲ್ಲಿ ಇಲ್ಲಿ ಇದ್ದ ಹೆಳ್ಮಕ್ಕ, ಅಜ್ಜಂದ್ರ್, ಅಜ್ಜಿಕ ಎಲ್ಲಾ ಮೂಲೆ ಮೂಲೆಂದ ಬಂದ್ ಸೇರಿಕೊಣ್ತಿದ್ದೊ. ಕಿನ್ನನ ದುಡಿ ಪೆಟ್ಟ್‌ಗೆ ಇನ್ನ್ ಸಾ ಹುರ್ಪು! ಕೊಣಿವವರ ಕಾಲ್ ನೆಲಲಿ ನಿಲ್ತ್ತೆ! ವ್ಹಾ! ಜಂಬರದ ಪೂರಾ ಗಮ್ಮತ್ತ್ ಇರುದೇ ಇಂತ ಕೊಣ್ತದ ಗಮ್ಮತ್ಲಿಂತ ಹೇಳ್ವ ಹಾಂಗೆ ಎಲ್ಲೊವ್ವೂ ಕೊಣ್ತದ್ದೇ ಕೊಣ್ತದ್ದ್!

ಬೇರೆವರ ದುಡಿ ಬೊಟ್ಟಾಟಲಿ ಬರಿ ಡಮ್ಮ ಡಕ್ಕ, ಡಕ್ಕ ಡಮ್ಮ ಎಂದು ಕೇಳ್ರೆ, ಕಿನ್ನನ ದುಡಿಲಿ ಕಿನ್ನರ ಲೋಕದ ಹಾಡ್‌ಗಳ, ರಾಗಗಳ ಎಳ್ತ ಇತ್ತ್;, ಸರ್ಪನ ಸಾ ತಲೆದೂಂಗಿಸ್ವಂತ ಮೋಡಿಯಿತ್ತ್. ಕೊಣ್ತ ಗೊತ್ತಿಲ್ದವ್‌ಕೂ ಕೊಣ್ತಕ್ಕೆ ಹೆಜ್ಜೆ ಹಾಕಿಸ್ವಂತ ಮಾಯಗ ಇತ್ತ್. ಇವಂಗೆ ದುಡಿ ಬೊಟ್ಟೆ ಬೊಚ್ಚಿಕನ ಕೊಣಿವೊವ್ಕೂ ಬೊಚ್ಚೇಲ್. ಬೊಚ್ಚಿಕಾಕನ ಅಂವ ದುಡಿ ಬೊಳ್ಳಿನ ಕುತ್ತಗೆಂದ ತೆಗ್ದ್ ದುಡಿನ ಕರೆಗಿಸಿ, ಮೂಲೆಲಿಸಿದ ಕುಜಿಲಿ(ಮಡಕೆ)ಂದ ಕಳ್ಳ್‌ನ ಚಿಪ್ಪಿ ಸೆಡೆಲಿ, ತಲೆ ಮೇಲಿಂದ ತೆಗ್ದ್ ಎರ್ಡ್ ಕೊಂಕಿನ ಮುಟ್ಟಾಳೆಗೆ ಹೊಯ್ಕಂಡ್ ಕುಡಿಯಕನ, ಕೊಣ್ತದ ಹೆಳ್ಮಕ್ಕ, ಕಿನ್ನಣ್ಣ ಅಂತನೋ, ಮಾಮ ಅಂತನೋ, ಅಜ್ಜಂತನೋ ಕರ್ದ್, ಇನ್ನ್ ಹಂಞ ಕುಡಿಯೆನಿ"ಂತ ಅವೇ ಹೊಯ್ದ್ ಒತ್ತಾಯ ಮಾಡಿ ಕುಡ್ಸ್‌ತಿದ್ದೊ. ಬೇಡ ಬೇಡಾಂತ ಹೇಳ್ರೂ, ಅಂವನೂ, ಅವೂ ತಲೆಗೆ ಏರುವಷ್ಟು ಕುಡ್ದ ಮೇಲೆ ಮತ್ತೆ ಡಮ್ಮಡಕ್ಕ ಡಕ್ಕಡಮ್ಮ !

ಆ ಕಾಲಲಿ ಕೆಳ ಜಾತಿ ಗಣ್ಮಕ್ಕಳಿಗಾಗಲೀ ಹೆಳ್ಮಕ್ಕಳಿಗಾಗಲೀ ಮೈ ತುಂಬ ಬಟ್ಟೆಯಿಲ್ಲೆ. ಮಾನ ಮುಚ್ಚುವಷ್ಟು ಬಟ್ಟೆ ಇದ್ದರೆ ಅದೇ ಹೆಚ್ಚ್! ಇಡೀ ಬೊರ್ಸ್‌ಕ್ಕಲಿ ಹೊಸ ಬಟ್ಟೆ ತೆಗಿಯೊದೆಂದರೆ

ಅವರ ಮೊಸ್ವೆಗೆ ಮಾತ್ರ ! ಬಾಕಿ ಸಮಿಯಲಿ ಕೆಲ್ಸಕ್ಕೆ ಹೋವ ಮೇಲ್ಜಾತಿ ಮನೆವು ಬಿಸಾ
ನೂರೆಂಟ್ ಒಟ್ಟೆಗ ಇದ್ದ ಹರ್ದ ಬಟ್ಟೆಗ! ಅಷ್ಟಾರ್ ಸಿಕ್ಕಿರೆ ಸಿಕ್ಕಿದವರ್ದ್ ನಸೀಬು! ಎಷ್ಟೋ ಪಾಪದೋ
ಆ ಭಾಗ್ಯನೂ ಇರ್ತಿತ್ಲೆ. ಕಂಜೂಸ್‌ಗಾದ ಮೇಲ್ಜಾತಿಯೊವು ಅವರ್ದ್ ಹರ್ದ ಬಟ್ಟೆಗ ಇದ್ದರೆ, ಮೀ
ಮೇಲೆ ಮೈ ಒರ್ಸಿಕೆಂತ, ಮಲ್ಗಿಕೆ ಮುಂದೆ ಕಾಲ್ ಒರ್ಸಿಕೆಂತ ಇಸಿಕೊಣ್ತಿದ್ದೊ. ಅದಕ್ಕೂ ಪ್ರೆಯಜ
ಇಲ್ಲಂದರೆ, ಹೆಳ್ಮಕ್ಕ ಉಂಬೊಳಗೆಲಿ ಒಲೆಂದ ಮಡಿಕೆನ ಇಳ್ಸಿಕೆ ಮೊಸಿಬಟ್ಟೆ ಆಗಿ ಅಲ್ಲರೆ ನೆ
ಒರ್ಸಿಕೆ ಉಪಯೋಗ್ಸಕಲೆಂತ ಬುದ್ದಿ ಕರ್ಚ್ ಮಾಡುವೊವು ಏನೂ ಕಡಿಮೆ ಇತ್ಲ್ಲೆ. ಅವ
ಮೂರ್ಕಾಸಿನ ಬುದ್ದಿ ಹೇಂಗಿತ್ತಂದರೆ ದೊಡ್ಡ ಕುಟುಂಬಲಿ, ನೆಟ್ಟಿಕಾಯ್‌ನ ಬೇಕ್‌ಂತಲೇ ಗಿಡ
ಹೆಚ್ಚ್ ದಿನ ಬುಟ್ಟು, ಒಳ್ಳೆ ಬೆಳ್ದ ಮೇಲೆ ತಂದ್ ಸಾರೋ ಗೈಪೋ ಮಾಡ್ತಿದ್ದೊ. ಬೆಂ
ಹೀರೆಕ್ಯಾಂತ ತರ್ಕಾರಿಗ ಬೆಳ್ದರೆ ನಾರಾಗಿ ತಿಂಬಕಾದ್ಲೆಲ್ಲಾ? ತರ್ಕಾರಿ ಹೆಚ್ಚ್ ಮುಗಿಯಕಾಗದ್‌ಂ
ಈ ಉಪಾಯ. ಹಾಂಗೇನಾರ್ ಗೈಪೋ, ಸಾರೋ ಒಳ್ದರೆ ತಿಂಬಕೆ ಕೆಲ್ಸದೊವು ಒಳೊ ಅಲ್ಲಾ
ಕೆಲಸದೊವ್ಕೆ ಆ ಪಿಟ್ಟಾಸಿಗ ನಿನ್ನೆ ಮೊನ್ನೆದ್ ತಂಗ್ಳ್, ಬುರು ಬುರು ನೊರೆ ಬಾವ ಹಳ್ಸೇ
ಸಾರ್, ಮಿಜಿಮಿಜಿಂತ ಹುಳಾದ ಉಪ್ಪಿನ ಕಾಯಿ ಕೊಡ್ತಿದ್ದೊ. ಗೆತಿಗೆಟ್ಟ ಇಂಥ ಪಾಪದವ
ಮನ್ಸರೇ ಅಲ್ಲಂತ ಅವರ ಲೆಕ್ಕ! ಅವರ ಮನೆ ನಾಯಿಗಳಿಗಾದರೂ ಇವ್ಕೆ ಕೊಡ್ಡಕ್ಕಿಂತ ಲಾಯ್ಕದ
ಕೊಡ್ತಿದ್ದೊ. ಅಂಥ ಕಾಲ ಅದ್! ಕೆಳ ಜಾತಿಯೊವು ಮೇಲ್ಜಾತಿಯವರ್ಥಂಗೆ ಮೈ ಮುಚ್ಚುವ್ಹಂ
ಬಟ್ಟೆ ಹಾಕೂದೂ ತೊಪ್ಪೇ. ಪ್ರಾಯ ಬಂದಗೂಡೆಗ ನಾಚಿಕೆಂದ ಎದೆ ಕಾಂಬಕಾಗದ್‌ಂ
ಎಲ್ಲೋ ಯಾರೋ ಬಿಸಾಕಿದ್ದ ಹರ್ಕ್ಲ್ ರೌಕೆನ ಹಾಕಿಕಂಡರೆ "ನೀ ಏನ್ ನಮ್ಮವರ್ಥಂಗೆ ರವ
ಹಾಕಿದ್ದ್? ಅಷ್ಟ್ ದೊಡ್ಡಸ್ತಿಕೆ ಬಾತ ನಿಂಗೆ?"ಂತ ಕೇಳುವೊವೂ ಇದ್ದೊ. ನಮ್ಮ ಎಂಜಲ್ ತಿಂ
ಬೊದ್ಯ್ಕವ ಈ ದರಿದ್ರಗ ನಮ್ಮ ಹಾಂಗೆ ಬಟ್ಟೆ ಹಾಕಿಕಾಗದ್‌ಂತ ಹೇಳ್ವ ಸಣ್ಣ ಬುದ್ದಿ ಅವರ
ಇವರ್ಲಿ ಒಂದೆರ್ಡ್ ವರ್ಷ ಮುಟ್ಟ ಮಕ್ಕ ಉರ್ಬುಳಿನೇ. ಎರ್ಡ್ ವೊರ್ಸಕ್ಕಿಂತ ದೊಡ್ಡ ಮಕ್ಕಳಿ
ಕೋಮಣ, ಗೂಡೆಗಳಿಗೆ ಐದ್ ವೊರ್ಸದ ಮೇಲೆ ಸೊಂಟಕ್ಕೊಂದು ತುಂಡು ಬಟ್ಟೆ, ಅದ್ಕಿಂ
ದೊಡ್ಡೊವ್ಕೆ ಕಿರ್ಗೆ. (ಸಣ್ಣ ಲಂಗ) ಹತ್ತು ಹನ್ನೆರ್ಡ್ ವೊರ್ಸ ನಂತರದ ಗೂಡೆಗಳಿಗೆ ಕಿರ್ಗೆಯ
ಮೇಲೊಂದು ಗೇಂಟಿ. ಅಷ್ಟ್ ಸಾ ಬಟ್ಟೆ ಇಲ್ಲಂದರೆ ಕಾಳಿದಾಸ ಕವಿಯ ಸಕುಂತಳೆನ ಹಾಂ
ತುಂಡು ಬಟ್ಟೆಂದ ಎದೆ ಮುಚ್ಚಿ ಹಿಂದೆ ಕಟ್ಟುದು. ಪಾಪ ! ಈ ತುಂಡು ಬಟ್ಟೆಲಿ ಅವರ ಮಾ
ಮುಚ್ಚಿದೆನೊ ಇಲ್ಲೆನೋ, ಬೇರೆ ಬಟ್ಟೆ ಹೇಳ್ವಂತದ್ದ್ ಇಲ್ಲದ ಗೆತಿಗೆಟ್ಟ ಸ್ತಿತಿಲಿ, ಬಟ್ಟೆಂತ ಹೇಳ್ವಂತದ
ಒಂದ್ ಉಟ್ಟುಂತ ಅಷ್ಟೇ! ಪ್ರಾಯ ಬಂದ ಗೂಡೆಗಳಿಗೆ ಆವ ನಾಚಿಕೆ ಹೇಳ್ವಂತದ್ದೇ ಅ
ಜಾತಿದ್ದ್ ಕ್ರಮನೇ ಹೀಂಗೆಂತ ಆದ ಮೇಲೆ ನಾವು ಬೇರೇನು ಮಾಡಿಕೆ ಆದೆಂತ ಬೇರೆ ಉಪಾ
ಇಲ್ಲದೆ, ನಾಕ್ ಜನ ಸೇರ್ದಲ್ಲಿ ಮೈ ಒಂದಿಸಿಕಂಡ್ ದಿನ ತೆಗಿಯತಿದ್ದೊ. ದಿನ ಹೋದ ಹಾಂ
ಅದೇ ಅಬ್ಬೇಸ ಆಗಿ ಹೋದೆ, ಅಷ್ಟೆ. ಒಂದೇ ಬಟ್ಟೆ ಇದ್ದವು ಕತ್ತಲೆ ಮಲ್ಗಿಕೆ ಮುಂದೆ. ಮೈ
ಗೋಣಿ ಸುತ್ತಿಕಂಡ್ ಬಟ್ಟೆ ತೊಳ್ದ್ ಹಾಕಿ, ಬೊಳ್ಪುಗೆ ಒಣ್‌ಗಿದ ಮೇಲೆ ಒಗ್ದ್ ಹಾಕಿದ ಬಟ್ಟೆ

ಸುತ್ತಿಕಣ್ತಿದ್ದೊ. ಹೆಣ್ಮಕ್ಕ ಚೋಡಿಗೋ, ಹಳ್ಳಕ್ಕೋ ಬಟ್ಟೆ ತೊಳ್ಯಕೆ ಹೋದರೆ ಸುರುಗೆ ಅರ್ದ ಸೀರೆ ಉಟ್ಟ್‌ಕಂಡ್, ಒಳ್ದ ಅರ್ದನ ತೊಳ್ದ್, ಒಣ್‌ಂಗಿಸಿ, ಅದ್ ಒಣ್‌ಂಗಿದ ಮೇಲೆ ಆ ಕೊಡಿನ ಉಟ್ಟ್, ಉಟ್ಟ ಕೊಡಿನ ತೊಳ್ದ್ ಅದ್ ಒಣ್‌ಂಗಿದ ಮೇಲೆ ಇಡೀ ಸೀರೆ ಉಡ್ತಿದ್ದೊ. ಹೆಳ್ಮಕ್ಕ ಅರೆಮೈ ಬರಿ ಮೈಲಿ ಇದ್ದರೂ, ಅದೇ ಕಾರ್ಣಂದ ಅತ್ಯಾಚಾರ ನಡ್ದದ್ದ್ ಅಪ್ರೂಪನೇ.

ಮೊದ್ವೆ ಮುಗ್ದ್ ಗಂಡ್‌ನ ಕಡೆವು ಮೊದ್‌ದೊಳಿಗೆನ ಕರ್ಕಂಡ್ ಹೋದರೂ್ ಸಾ ಕೋಣಿವ ಗೂಡೆಗ ಕಿನ್ನನ ದುಡಿ ಬೊಟ್ಟುದರ ನಿಲ್ಸಿಕೆ ಬುಡುದ್ಲೆ. ಉಪಯ ಇಲ್ಲದೆ ಅಂವ ದುಡಿ ಬೊಟ್ಟ್‌ತಿತ್ತ್. ಕಡೆಗೆ ದುಡಿ ಬೊಟ್ಟಿಕಂಡೇ ಅಂವ ದಟಿಗೆ ಕಡೆಗೆ ಹೊರ್ಡ್‌ತಿತ್ತ್. ಕಿಂದರ ಜೋಗಿನ ಕತೆಲಿ ಜೋಗಿನ ಹಿಂದೆ ಹೋವ ಎಲಿಗಳ್ಹಂಗೆ ಈ ಗೂಡೆಗ ಕಿನ್ನನ ಹಿಂದೆನೆ ಹೊರ್ಡ್‌ತಿದ್ದೊ. ಮೊದ್ವೆ ಮನೆಲಿ ಇದ್ದೊವು ಅವನ ಹಕ್ಕಲೆ "ಎಂಥ ಮಾರಾಯ? ನೀ ಈ ಗೂಡೆಗಳಿಗೆ ಮೊಂತ್ರಿಸಿಯೊಳನಾ ಹೇಂಗೆ? ನಿನ್ನ ಹಿಂದೆನೇ ಹೋಗ್ತಾ ಒಳಲೇ?"ಂತ ಹೇಳ್ರೆ ಕಿನ್ನ ಎಲಡಿಕೆ ತಿಂದ್ ಕೆಂಪಾದ ಹಲ್ಲ್ ಬುಟ್ಟ್ "ಹೂಂ, ನನ್ನ ದುಡಿಂತೇಳ್ರೆ ಒಂದ್ ಮೊಂತ್ರನೇ"ಂತ ನೆಗಾಡ್ತಿತ್ತ್. ಹಾಂಗೆಂತ ಅವನ ಒಟ್ಟಿಗೆ ಗೂಡೆಗ ಹೋದೊಂತ ಅವರ ಮನೆವಾಗಲೀ, ಬೇರೆವಾಗಲೀ ತೊಪ್ಪು ತಿಳ್ಕೊಂಬೊವು ಯಾರೂ ಇತ್ತ್‌ಲೆ. ಕಿನ್ನ ಅಂದ್ರೆ ಬಾರಿ ನಿಯತ್ತಿನವಂತ ಎಲ್ಲೊವ್ಕೂ ಗೊತ್ತಿತ್ತ್. ಅಂವನ ಹೆಣ್ಣಾದರೂ್ ಅಷ್ಟೇ. ಅದಿಕೆ ಗಂಡಂದ್ರೆ ಅಷ್ಟ್ ನಂಬಿಕೆ. ಅವನ ದುಡಿ ಬೊಟ್ಟಾಟದ ಹುಸಾರ್‌ತನ ಹಾಂಗೆ ಚಾಲಾಕಿಗೆ ಬಾರಿ ಹೆಮ್ಮೆ ಅದಿಕೆ! ಹೀಂಗೆ ಮೊದ್ವೆಗೆ ಬಂದ ಗೂಡೆಗ ದಟಿಗೆಗೆ ಬಂದರೆ ಅವ್ರ ಕೋಣಿವಷ್ಟು ಹೊತ್ತು ಕೋಣ್ಯಕೆ ಬುಟ್ಟ್, ಇರ್ಲ್ ದಟಿಗೆಲೇ ಒಳ್ಸಿಕಂಡ್ ಗಂಜಿಗೆ ಪೊಜ್ಜಿ ಮಾಡಿ ಉಂಬಕೆ ಕೊಟ್ಟು, ಮೊರ್ದಿನ ಬೊಳ್ಪುಗೆ ಸಾ ಗಂಜಿ ಕೊಟ್ಟ್ ಪ್ರೀತಿಂದಳೇ ಅವರ ಕಳ್ಸಿ ಕೊಡ್ತಿತ್ತ್.

ಅಂತ ಕಿನ್ನ ಸಾಯಕನ ಅಂವನ ಮೇಲೆ ಪ್ರೀತಿ ಇದ್ದವು ತಂದ ಕಳ್ಳ್, ಒಂದ್ ಅಂಡೆ ಆಗಿತ್ತ್‌ಗಡ. ಅದರ ಏನ್ ಮಾಡುದುಂತ ಗೊತ್ತಾಗದೆ, ಕಡೆಗೆ ಅದರ್ಲೇ ಅಂವನ ಹೆಣನ ಮೀಸಿದೊಗಡ! ಅವನ ದಿಕ್ಕಾಳ್ತಿ ಚನಿಯಾರು ಅದ್ ಸಾಯಕನ ಮುಟ್ಟ, ಬಂದವ್ರೊಟ್ಟಿಗೆ ಹೋದವ್ರೊಟ್ಟಿಗೆ ಪೂರ ಈ ಸಂಗತಿನ ನಾಕ್ ನಾಕ್ ಸರ್ತಿ ಹೇಳಿಕೋಣ್ತಿತ್ತ್. ಸಾಯಕನ ಮುಟ್ಟ ಅದಕ್ಕೆ ಗೇನ ಇದ್ದದ್ದ್‌ಂತೇಳ್ರೆ ಇದೊಂದೇ ಕತೆ!

ಅಂತ ಕಿನ್ನನ ಮಂಜ –ಮಾಚುನ ಅಪ್ಪ–ಕಳಲ. ಅಂವ ಏನ್ ಸಾದಾರ್ಣದ ಅಸಾಮಿ ಅಲ್ಲ. ದುಡಿ ಬೊಟ್ಟುದರ ಒಂದು ಬುಟ್ಟರೆ, ಬಾಕಿ ಎಲ್ಲದರ್ಲಿ ಅಂವ ಅಪ್ಪಂದಲೂ ಮಿಸ್ಕ! ಮೀನ್ ಹಿಡಿಯೊದು ಅಂದರೆ ಅವಂಗೆ ತತ್ತಲಾಗ! ಪಯಸ್ವಿನಿ ಹಳ್ಳದ ಉದ್ದೋಕೆ, ಅರಂತೋಡಿಂದ ಹಿಡ್ದ್ ಪಂಜಿಕಲ್ಲ್ ಮುಟ್ಟ, ಪಯಸ್ವಿನಿ ಹಳ್ಳದ ಹಾಂಗೆ ಮೀನ್‌ಗಳ ಪೂರಾ ಮಾಹಿತಿ ಅಂವನ ಹಕ್ಕಲೆ ಇತ್ತ್! ಎಲ್ಲೆಲ್ಲಿ ಎಂಥ ಸುಳಿ, ಎಲ್ಲಿ ಎಂಥ ಗುಂಡಿ, ಎಲ್ಲಿ ಅಪಾಯ, ಯಾವ ಗುಂಡಿಲಿ ಎಂಥ ಮೀನ್, ಯಾವ ಕಾಲಲಿ ಎಂಥ ಮೀನ್ ಎಲ್ಲಿ ಇದ್ದವೆ, ಯಾವ ಮೀನ್ ರುಚಿ, ಯಾವ

ಮೀನ್‌ಲಿ ಮುಳ್ಳು ಹೆಚ್ಚಿ, ಯಾವ ಮೀನ್ ತಿಂದರೆ ಕಾರಿಕೆ ಬಂದದೆ, ಯಾದರ ಹೇಂಗೆ ಹಿಡಿಯೊಕು, ಗಾಳ, ಬಲೆ, ತೋಟೆ ಹೇಂಗೆ, ಎಲ್ಲಿ ಹಾಕೊಕು- ಈ ಎಲ್ಲ ಮಾಹಿತಿ ಅವಂಗೆ ಗೊತ್ತಿದ್ದಷ್ಟ್ ಸುಳ್ಯದ ಆಸುಪಾಸ್‌ಲಿ ಬೇರೆ ಯಾರಿಗೂ ಸಾ ಗೊತ್ತಿತ್‌ಲೆ. ಮೀಸುದರ್‌ಲ್ಲಿ, ನೀರ್‌ಲ್ಲಿ ಮುಳ್ಗಿ ಏನಾರ್ ಹುಡ್ಕಿ ತೆಗಿಯೋದರ್ಲಿ ಅಂವ ಬಾರೀ ಉಸಾರ್. ಕೋರಿಂಜೆ, ಗಾಳ, ಬಲೆ- ಇಂತವೆಲ್ಲ ಅವನ ಆಸ್ತಿ. ಒಮ್ಮೊಮ್ಮೆ ಅಂವ ಕುದ್ದ್‌ಕಂಡ್ ಮಕ್ಕಳಿಗೆ ಸಣ್ಣದರ್ಲಿ ಅಂವ ಮೀನ್ ಹಿಡಿಯೊತಿದ್ದದರ, ಅದಿಕೆ ಸಮ್ಮಂದ ಪಟ್ಟ ಹಾಂಗೆ ನಡ್ದ ಕೆಲೊವು ಸಂಗತಿಗಳ ಕತೆಯಾಗಿ ಹೇಳ್ತಾ ಇತ್. ಬಟ್ಟೆ ತೊಳಿಯಕೆ ಹೋದಲ್ಲಿ ಎಂತದೋ ಕಾಯಿ ಗುದ್ದಿ ಹಾಕಿರೆ, ಆ ದಿನದ ಗೈಪುಗೆ ಬೇಕಾದಷ್ಟು ಮೀನ್ ಸಿಕ್ಕ್‌ತಿತ್ತ್‌ಗಡ. ಬೇಸೆಗೆ ಕಾಲಲಿ ಚೋಡಿಲಿ, ಹಳ್ಳಲಿ, ನೀರ್ ಆರಿಕನ ಗುಂಡಿ ಗುಂಡಿಲಿ ಇದ್ದ ನೀರಿಗೆ ಬೇಪಾರು ಕಾಯಿ ಹಾಕಿರೆ ಅದರ ಖಾರಕ್ಕೆ ಮೀನ್ ಸಾಯೊತಿದ್ದೊ. ಆಗ ಎರ್ಡ್‌ಮೂರ್ ದಿನ ಮೀನ್‌ದ್ದೇ ಗೈಪು. ಮತ್ತೆ ಸಾ ಹೆಚ್ಚಿ ಸಿಕ್ಕಿತ್ ಅಂದರೆ ಒಣ್‌ಗಿಸಿ ಇಸಿಕೊಂಬೊ. ಪಾಲೆಪ್ಪು ಏನಾರೂ ಸಿಕ್ಕಿತಾ? ಜೋಬುನೂ ಝುಣ ಝುಣ!

ಕಾಡ್‌ದ್ದ್ ಸಂಣ ಸಂಣ ಪ್ರಾಣಿಗಳ, ಹಕ್ಕಿಗಳ- ಉರ್ಳು, ಅಡ್ಜಿಲ್ ಹಾಕಿ ಅಂವ ಸಾಯಕನ ಮುಟ್ಟನೂ ಹಿಡ್ಯತಿತ್. ಸಿಡಿ, ಮಳೆಕೋಲ್ ಇಸುದು ನನ್ನ ಹಿರ್ಯರ್ ನಂಗೆ ಕಲ್ಸಿದ ಇದ್ಯೆಂತ ಮಕ್ಕಳ ಹಕ್ಕಲೆ ಹೇಳ್ತಿತ್. ಇದರೆಲ್ಲ ಮಕ್ಕಳಿಗೆ ಸಾನ್ ಹೇಳಿಕೊಟ್ಟಿತ್ತ್. ಇದರೆಲ್ಲ ಮಕ್ಕ ಕಲ್ತರೂ ಅಂವ ಹೇಳಿ ಕೊಟ್ಟ ಕವ್ಣೆ ಬಿಲ್ಲ್, ಪಗ್ರಿ ಬಿಲ್ಲ್‌ಲಿ ಪ್ರಾಣಿ ಪಕ್ಷಿಗಳ ಕೊಲ್ಲುದರ ಮಾತ್ರ ಮಕ್ಕ ಕಲ್ತತೇ ಇಲ್ಲೆ. ಮಕ್ಕ ದೊಡ್ಡಿತಾಕನ ಕುಮೆರಿ ಬೆಳೆ ಮಾಡುದರ ಬುಟ್ಟದ್ದ್ ಅದಕ್ಕೆ ಕಾರಣ ಆಗಿದ್ದಿರ್ದು.

ನೆರೆಕರೆಯವ್ರೊಟ್ಟಿಗೆ ಸೇರಿ ಕಳಲ ಕಲ್ತ ಇನ್ನೊಂದು ವಿದ್ಯೆ ಜೇನ್ ಒಕ್ಲ್ ಹುಡ್ಕಿ, ಹಿಡ್ದ್ ಪೆಟಗೆಗೆ ತುಂಬುಸುದು ಮತ್ತೆ ಜೇನ್ ತೆಗ್ದ್ ಮಾರುದು. ಕಾಡ್‌ಲಿ ಜೇನ್ ಒಕ್ಲ್ ಕಂಡ್ ಹಿಡ್ಯಿದು ಹೇಂಗೆ? ಪೆಟಗೆಲಿ, ಮಡ್ಕೆಲಿ ಅದರ ತುಂಬುಸುದು ಹೇಂಗೆ? ಯಾವ್ಯಾವ ಹೂನ ಜೇನ್‌ದ್ದ್ ರುಚಿ ಹೇಂಗೆ? ಯಾವ್ದು ಮೊದ್ದ್? ಇಂತದರ ವಿವರ ಎಲ್ಲ ಅಂವನ ನಾಲಿಗೆ ಕೊಡಿಲಿ! ಪೆರಿಯ, ತೊಡುವೆ, ಕೊಲ್ಜೇನು, ಮುಜೆಂಟಿ ಯಾದರ ಬೇಕಾರೆ ಕೇಳಿ, ಅದರ ಪೂರಾ ಮಾಹಿತಿ ಅಂವನ ಹಕ್ಕಲೆ ಇತ್. ಜೇನ್ ಕುರ್ಬರಿಗಾದರೂ ಇಷ್ಟ್ ಗೊತ್ತುಟ್ಟೋ ಇಲ್ಲೆನೋ!

ಸುಳ್ಯಲಿ ಯಾರಿಗಾರ್ ಜೇನ್ ಒಕ್ಲ್, ಅಲ್ಲರೆ ಜೇನ್ ಬೇಕೂಂತಾದರೆ ಕಳಲನ ಬುಟ್ಟು ಬೇರೆ ಯಾರ್ ಹೇಳೋವು ಇತ್ಲೆ. ದನಿ ಮನೆಲಿ ಕೆಲ್ಸ ಇಲ್ಲದಿರಿಕನ ಅವಂಗೆ ಮೀನ್, ಜೇನ್‌ದ್ದೇ ಹವ್ಯಾಸ. ಜೇನ್ ಒಕ್ಲ್ ಹುಡ್ಕುದು, ಜೇನು ತೆಗ್ಯೇದು, ಮೀನ್ ಹಿಡ್ಯಿದು, ಅಳುಂಬು ಹುಡ್ಕುದು, ಕಣಿಲೆ, ವಾಟೆ ಕಣಿಲೆ ತಾದು- ಇದೇ ಕೆಲ್ಸ. ಇಂತ ಕೆಲ್ಸಕ್ಕೆಲ್ಲಾ ಅವಂಗೆ ಸಾಯ ಮಾಡಿಕಂಡ್ ಅವನ ಮಕ್ಕ- ಹೆಣ್ಣ್ ಗಂಡ್‌ಂತ ಭೇದ ಇಲ್ಲಾದೆ, ಈ ಎಲ್ಲ ವಿದ್ಯೆಗಳಲಿ ಪಳ್ಗಿ, ಮುಂದೆನ ಬೊದ್ಕಿಗೆ ತೆಯಾರ್ ಆಗ್ತಿದ್ದೊ.

ಚೆನ್ನದಂತ ಆ ದಿನಗಳ ನೆನ್ದ್ ಮಾಚು ಗೋಡೆಗೆ ಒರಗಿ ದೊಡ್ಡಕೆ ಒಂದ್ ಉಸ್ರ್ ಎಳ್‌ಕಣ್ತ್. ಮತ್ತೆ ಯೋಚನೆಗೆ ತಾಳ ಹಾಕುವ ಹಾಂಗೆ ಕಾಲಡಿನ ಆಡ್ಸಿಕಂಡ್ ನೆಂಪಿನ ಆಳಲಿ ಹೂತ್ ಹೋತ್. ❐

ಹಾಳೆ 2
ಕಳಲನ ಸಂಸಾರ

ಕಳಲನ ಸಂಸಾರಲಿ ಇದ್ದೊವು ಏಳ್ ಜನ. ಅಜ್ಜಿಯಾದ ಅವನ ಅವ್ವ, ನಾಲ್ಕ್ ಮಕ್ಕ, ಕಳಲ ಮತ್ತೆ ಅವನ ಹೆಣ್ಣ್ ಮ್ಯಾಲು. ಹೀಂಗೆ ಏಳ್ ಜನ. ಮೀನ್, ಜೇನ್ ತುಪ್ಪ, ಅಳುಂಬ್, ಕಣಲೆ ಇದರ್ಲಿ ಸಿಕ್ಕವ ದುಡ್ಡು ಹುಳಿ ಮೆಣ್ಸಿಗೇ ಸರಿ. ಹೊಟ್ಟೆಗೆ ಏನಾರ್ ಆಕೋಲೇ? ಹಾಂಗಾಗಿ ಕಳಲ ಸೂರಪ್ಪ ಗೌಡ್ರ ಬೇಸಾಯದ ಕೆಲ್ಸ ಒಪ್ಪಿಕೊಂಡಿತ್ತ್. ಅಂವ ಮತ್ತೆ ಅಂವನ ಹೆಣ್ಣ್ ಅವರ ಖಾಯಂ ಕೆಲ್ಸದವುಂತ ಲೆಕ್ಕ.

ಸೂರಪ್ಪ ಗೌಡ್ರಿಗೆ ಎರಡು ಮುಡಿ ಏಣೇಲು ಗದ್ದೆ ಮತ್ತೆ ಹಂಞ್ಞ ತೋಟ. ಗದ್ದೆನ ಕಟ್ಟಪುಣೆಲಿ ಹತ್ತ್ ಹದಿನೈದ್, ಹಾಂಗೇ ತೋಟದ ಕರೆಲಿ ಹತ್ತ್ ಹನ್ನೆರ್ಡ್ ಚಾಳೆಗ. ಒಳ್ಳ ಕಾಯಿ ಹಿಡಿವ ಮರಗ. ಉಂಬಕೆ, ಎಣ್ಣೆಗೆಂತ ಆಗಿ ಸಾ ಒಂದು ಐನೂರ್, ಸಾವ್ರ ಕಾಯಿ ಮಾರ್‍ತಿದ್ದೊ. ಮನೆ ಅಗತ್ಯಕ್ಕೆ ಬೇಕಾದಷ್ಟು ಅಕ್ಕಿ ಬತ್ತ, ಮೂರ್ ನಾಲ್ಕ್ ಖಂಡಿ ಅಡಿಕೆ. ಕಮ್ಮುನ ತೋಟ ತುಂಬ ಬಾಳೆ, ಮನೆನ ಹಿತ್ಲ್‌ಲಿ ಬೆಳವ ನೆಟ್ಟಿಕಾಯಿ, ಎರ್ಡ್ ಮೂರ್ ಹಲ್ಸಿನ ಮರ, ಕಾನ ಬಾಣೆಲಿ ಹಟ್ಟಿಗೆ ಬೇಕಾದ ಸೊಪ್ಪು, ಅಡಿಗೆಗೆ ಬೇಕಾದ ಸೊಯ್ದೆ ಸಿಕ್ತಿತ್ತ್. ಬಿಸ್ರಡಿಗೆ ಚಾಳೆದ್ದ್ ಮಡ್‌ಲ್, ಕೊತ್ಲಿಂಗೆ, ಚೆಪ್ಪು, ಕಮ್ಮುದು ಒಣ್‌ಗಿಸಿದ ಹಾಳೆ, ಅಡಿಕೆ ಚೋಪ್ಪು ಸಾಕಾಗ್ತಿತ್ತ್. ಹಾಂಗೆ ಬೇಕಾರೆ ಕಳಲನ ಹಕ್ಕಲೆ ಹೇಳ್ರೆ, ಕಾಡ್‌ಂದ ಅಂವನೂ, ಅಂವನ ಹೆಣ್ಣೂ ಸೊಯ್ದೆ ತಂದ್ ಹಾಕಿ, ಮೋಚ್ಟ್‌ಲಿ ಒಡ್ಡ್, ಅಡಿ ಮಾಡಿ ಕೊಡ್ತಿದ್ದೊ. ಅಲ್ಲೇ ಒಂದ್ ಹತ್ತ್ ಬೀಜದ ಮರಗ. ಹಣ್ಣ್‌ನ ಕಾಲಲಿ ಕಳಲನೇ ಸರಾಯಿ ಕಾಯ್ಸಿ ದನಿಗೆ ಮೊದ್ದಿಗೆಂತ ಐದಾರ್ ಕುಪ್ಪಿ ಕೊಟ್ಟು ಒಳ್ದದರ ತಾನ್ ಇಸಿಕೊಂಬತಿತ್ತ್. ಗೌಡ್ರು ಕುಡಿವ ಅಬ್ಬೇಸದವೇನಲ್ಲ. ಮಲೇರಿಯಾದಂತಹ ಜೊರಕ್ಕೆ, ಪೆದ್ದೋಳ್ತಿ ಮೊದ್ದಿಗೆ, ಅಪ್ರೂಪಕ್ಕೆ ಬಾವ ಕುಡಿವ ಅಬ್ಬೇಸದ ನೆಂಟ್ರ್‌ಗಳಿಗೆಂತ ಅದರ ಮಡ್ಗಿಕೊಂಬೊತಿದ್ದೊ. ಅದ್ ಎರಡು ರೀತಿಲಿ. ಕೆಲೊವುದರ ಗುಂಡಿ ತೆಗ್ದ್ ಮಣ್ಣಡಿಲಿಸಿರೆ, ಬಾಕಿದರ ಗೊನೆ ಕಡ್ದ ಬಾಳೆನ ಬುಡದ ದಿಂಡೊಳಗೆ! ಗೌಡ್ರಿಗೆ ಕೊಟ್ಟ್ ಒಳ್ದದರ ಕಳಲ, ಅವನ ಹೆಣ್ಣ್ ಮಾಯ್ಲುನ ಹಕ್ಕಲೆ ಕೊಟ್ಟರೆ, ಅದ್ ಸಣ್ಣ ಬಾಯಿನ ಕುಜಿಲಿಗೆ ಹೊಯ್ದ್, ಗಾಳಿ ಆಡದಂಗೆ ಅದರ ಬಾಯೆನ ಎಂತಲಾರ್ ಮುಚ್ಚಿ, ಕಾಯ್ಪು ಕಟ್ಟಿ ಇಸಿರೆ, ಅದರ ಬಾಯಿ ಬಿಚ್ಚುದು ಮಳ್ಗಾಲಲಿ– ಬೇಸಾಯದ ಸಮಿಯಲಿ. ಪುಣಿ ಕಡ್ದ್, ಗದ್ದೆ ಹೂಡಿ, ಗದ್ದೆಗೆ ಗೊಬ್ಬರ ಹಾಕಿ, ಗೌಡ್ರ ಮನೆ ಬಿಟ್ಟಿ ಕೆಲ್ಸ ಮುಗ್ಸಿ, ಮಳೆಗೆ ಗಡಗಡಾಂತ ನೋಡ್ಗಿಕಂಡ್ ಬಾವ ಕಳಲ, ಅವ್ವ ಕಾಸಿಟ್ಟ ಬಿಸಿ ನೀರ್ಲಿ ಮೀದ್, ಹುಳಿಮೆಣ್ಸ್‌ಲಿ ಮಾಡ್ದ ಗೈಪ್‌ನ ಹೋಳೊಟ್ಟಿಗೆ ನಾಕ್ ಬೆರ್‌ಳಷ್ಟು ಶರಾಬ್ ಕುಡ್ದ್, ಮೈ ಬಿಸಿ ಆದ ಮೇಲೆನೇ ಅಂವ ಮಕ್ಕಳ ಒಟ್ಟಿಗೆ ಮಾತಾಡ್ದು. ಮತ್ತೆ ಏಳ್ ಗಂಟೆಗೆ ಅಂದರೆ ಪಳ್ಳಿದ್ ಬಾಂಗ್ ಕೇಳಿ, ಆ ಮೇಲೆ ಊಟ. ಅವ್ವ ಮತ್ತೆ ಮ್ಯಾಲು ಮಲ್ಗಿಕೆ ಮುಂದೆ ಒಂದೊಂದ್ ಗುಟುಕು ಕುಡಿಯಕ್ಕುಟ್ಟು, ಅದ್ ಸಾ ಯಾರಿಗೂ ಗೊತ್ತಾಗದ್ದಂಗೆ, ಗುಟ್ಟುಲಿ!

ಕುಡ್ದ್ ಮೈ ಬಿಸಿ ಆಕನ ಕಳಲಂಗೆ ಮೀನ್ ಹಿಡಿಯಕೆ ಹಳ್ಳಕ್ಕೆ ಹೋದರೆ ಆದೋಂತ ಮನ್ಸ್ ಆದೂ ಉಟ್ಟು, ಹಾಂಗೆ ಏನಾರ್ ಮನ್ಸಾದರೆ, ಮಕ್ಕ ಯಾರಾರ್ ಬಂದವೆಂತ ಹೇಳ್ರೆ, ಮೀನ್ ಹಿಡಿವ ಹತ್ಯಾರ್‌ಗಳ ಹಿಡ್ಕಂಡ್ ಹಳ್ಳದ ಕರೆಗೆ ಹೋದರೂ ಹೋತ್. ಇಂಥ ಮಳೆ

ಬಾಕನನೇ ಮೀನ್ ಸಿಕ್ಕುದುಂತ ಹೇಳಿ ಅಂವನ ಅನ್ಬವ. ಹಂಙಾ ಮೀನ್ ಹೆಚ್ಚ್ ಸಿಕ್ಕಿತ್ ಅಂದ
ದನಿಗಳ ಮನೆಗೆ ಕೊಟ್ಟ್ ಬಂದದೆ. ಇಲ್ಲಂದರೆ, ಮಕ್ಕಳ ಹಕ್ಕಲೆ ಕೊಟ್ಟು ಕಳ್ಸಿರೂ್ ಆತ್.

ಸೂರಪ್ಪ ಗೌಡ್ರಿಗೆ ಕಳಲನ ಹಕ್ಕಲೆ ಭಾರಿ ನಂಬಿಕೆ. ಕಾಲ ಕಾಲಕ್ಕೆ ಆಕಾದ ಕೆಲ್ಸಗಳ ಅ
ಅವನ ಹಕ್ಕಲೆ ಹೇಳೊಕು. ಇಲ್ಲೇ, ಅವನೇ ಅವರ ಹಕ್ಕಲೆ ಕೇಳೊಕು. ಒಮ್ಮೊಮ್ಮೆ ಗೌಡ
ಕಳಲನ ಹಕ್ಕಲೆನೇ ಕೇಳುದು ಸಾ ಉಟ್ಟು, "ಹೌದ್ಯಾ ಕಳಲ, ಈ ಕೆಲ್ಸ ಹೇಂಗೆ, ಯಾಗ ಮಾಡ್ಳ
ಇದರ ಹೀಂಗೆ ಮಾಡ್ರೆ ಹೇಂಗೆ?"ಂತ. ಅವಂಗೆ ಸರಿಂತ ಆದರೆ "ಆದು, ಒಡೆಯ
ಹಾಂಗಾರೆ ನಾ ಕೆಲ್ಸ ಸುರು ಮಾಡೋಕಾ?"ಂತನೋ ಸಮದಾನ ಇಲ್ಲಂದರೆ "ಹಾಂಗೆ ಮಾ
ಮತ್ತೆ ಹೀಂಗಾದರೆ"ಂತ ಹೇಳಿ, "ಎಂತಕ್ಕೂ ಎರ್ಡ್ ದಿನ ನೋಡೊಮೊನ್ನೋ"ಂತ ಹೇಳ್ತಿತ್
ಕೆಲೊವು ಸಲ ಅಂವ, ಅವನ ಆಲಚನೆ ಹೇಳಿ "ಹೀಂಗೆ ಮಾಡ್ರೆ ಹೇಂಗೆ?"ಂತ ಹೇಳಿ ಧನಿನ
ಯೋಚಿಸ್ವಂಗೆ ಮಾಡ್ತಿತ್ತ್. ಗೌಡ್ರು ಯೋಚನೆ ಮಾಡಿ "ಹೌದ್‌ಯಾ, ನೀ ಹೇಳ್ದೇ ಸರಿಂ
ಕಂಡದೆ. ಹಾಂಗೇ ಮಾಡೊಮೊ"ಂತ ಒಪ್ಪಿಕಣ್ತಿದ್ದೊ. ಆಗೆಲ್ಲ ಕಳಲಂಗೆ ಕುಸಿ, ಧನಿ ನಾ ಹೇಳಿದ್ದ
ಒಪ್ಪಿಕಂಡೊ ಅಂತ. ಅದರ ಅಂವ ದಟಿಗೆಲಿ ಸಾ ಹೇಳ್ತಿತ್ತ್. ಅದಿಕ್ಕೆ ಅವನ ಅವ್ವ "ಅದೇ ಮತ್
ಸರಿಯಾದದರ ಹೇಳ್ರೆ ಯಾರೇ ಆದರ್ ಒಪ್ಪೋಕು. ಅದ್ ಅವರ ದೊಡ್ಡ ಮನ್ಸನ ತೋರ್ಸಿದೆ"ಂ
ಹೇಳ್ತಿತ್ತ್.

ಕಳಲನ ದಟಿಗೆಂದ ಸೂರಪ್ಪ ಗೌಡ್ರ ಮನೆಗೆ ಎರ್ಡ್ ಫರ್ಲಾಂಗ್ ದೂರ ಇರ್‍ದು. ಗೌ
ಗದ್ದೆ, ತೋಟ ಎಲ್ಲಾ ಅವರ ಮನೆಂದ ದೂರನೇ. ಆದರೆ ಅದ್ ಕಳಲನ ದಟಿಗೆಂದ ಕಣ್ಣ
ಕಾಂಬಷ್ಟ್ ಹಕ್ಕಲೆ. ಹಾಂಗೆಂತ ನಡ್ಕಂಡ್ ಹೋದರೆ ಅರ್ಧ ಮೈಲ್ ಆದೋ ಏನೋ. ತೋಟ
ಒಂದ್ ಕೊಟೆಗೆ. ಅದ್, ಗದ್ದೆ ಹೂಡ್‌ವ ಹತ್ಯಾರ್‌ಗ, ಹಾಂಗೆ ತೋಟದ ಕೆಲ್ಸದ ಹಾರೆ, ಗುದ್ದಲಿ
ಪಿಕ್ಕಾಸ್, ಕತ್ತಿ, ಬಟ್ಟಿ- ಇಂಥ ಸಾಮಾನ್‌ಂದ ತುಂಬಿತ್ತ್. ಕಳಲ ಕಾಡ್‌ಂದ ನಾಲ್ಕು ಕಂ
ತಂದ್, ಆ ಕೊಟೆಗೆನ ಒಳಗೆ ಒಂದ್ ಕರೆಲಿ ಊರಿ, ಅದರ ಮೇಲೆ ಕಮ್ಮಿನ ಸಲಾಕೆ ಕಟ್ಟಿ
ಮಾದೆರಿ ಬೊಳ್ಳಿನಂತ ಕಾಡ್ ಬೊಳ್ಳಿಗಳ ಹೆಣ್ಡ್, ಮಂಚದ ಹಾಂಗೆ ಮಾಡಿಕಂಡಿತ್ತ್. ಹೆಚ್ಚಾ
ಅಂವ ಇರ್ಲ್ ಮಲ್ಗುದು ಸಾ ಅಲ್ಲೇ. ಅಂಥ ನಂಟ್ ಆ ಕೊಟೆಗೆಲಿ ಅವಂಗೆ. ಆ ಕೊಟೆಗೆನ
ಹೊರಗೆ ಅರ್ಧ ಎಕ್ರೆ ಜಾಗೆಲಿ ಕಾಡ್ ಬಲ್ಲೆ ಕೂಡಿತ್ತ್. ಅದ್ ಗೌಡ್ರ ಕಾನ ಬಾಣೆಗೆ ಸೇರ್‍ದೋ
ಏನೋ. ಕಡಂಗ ಮಾಡಿದ್ದೊ. ಅದರ ದಾಟಿ ಒಸಿ ದೂರ ಹೋದರೆ ಪಯಸ್ವಿನಿ ಹಳ್ಳ . ಹ
ದಾಟಿದಂಗೆ ಮಾರ್ಗನೇ. ಗೌಡ್ರ ಮನೆಂದ ಪೇಟೆಗೆ ದಾರಿಯಿದ್ದರ್ ಸಾ ಕಳಲನ ಸವಾರಿ ವೀಳ್ಯಡ್ಕದ
ಈ ದಾರಿಲೇ. ಅಂವನ ಯಾಪಾರ ವೈವಾಟ್‌ಗಳಿಗೆ ಈ ದಾರಿ ಹೆಚ್ಚ್ ಅನ್ಕೂಲ ಆಗಿತ್ತು. ಅರ್ಗಾಲ
ಹಳ್ಳದ ನೀರ್ ಆರಿಕನ ಮುಟ್ಟ, ಹೇಂಗೂ ಪಿಂಡಿಲಿ ದಾಟೋವು ಇದ್ದೇ ಇರ್ತಿದ್ದೊ. ಪಿಂಡಿ
ಕಳಲಂದಾದರೂ ದಾಟುವ ಅಂಬೆರ್ಪು ಇದ್ದೊವು. ಅಂವ ಇಲ್ಲರೂ ಪಿಂಡಿದ್ ಜಳ್ಳ ಒಚ್ಚಿಕಂಡ್
ಹೋಗ್ತಿದ್ದೊ. ಅಲ್ಲಂದರೆ ಜಳ್ಳ ಒಚ್ಚಿಕೆ ಸೆರಿಯದವು ಎರಡ್ ಸಲ "ಕೂ" ಹಾಕಿರೆ ಕಳಲನೂ
"ಕೂ"ಂತ ಉತ್ತರ ಕೊಟ್ಟ್ ಹಂಙ್ಹಾ ಹೊತ್ತ್‌ಲೇ ಪ್ರತ್ಯಕ್ಷ ಆಗ್ತಿತ್ತ್. ಪಿಂಡಿ ದಾಟುವೊವು ತಿಂಗಳಿಗೊಮ್
ಕಳಲಂಗೆ ದುಡ್ಡಾದರೆ ದುಡ್ಡು, ಇಲ್ಲಂದರೆ ಅಕ್ಕಿನೋ ಬತ್ತನೋ ಕೊಡ್ತಿದ್ದೊ. ಅದರ ಅಂವ
ಅಲ್ಲರೆ ಮಾಯ್ಲು ಅವರ ಮನೆಗೆ ಹೋಗಿ ತೆಕ್ಕಂಡ್ ಬಾಕಾಗಿತ್ತ್. ಹಾಂಗೆ ಹೋದರೆ ನೆಟ್ಟಿಕಾಯಿ
ತೆಂಗ್ನಕಾಯಿ, ಹಳೆ ಬಟ್ಟೆ ಎಲ್ಲಾ ಬೇಡಿ ತರ್ತಿದ್ದೊ. ಅವಾಗಿಯೇ ಕೇಳದಿದ್ದರೂ, "ಎರ್ಡ್ ಕಾಯಿ

ನಾಕ್ ಸೋಂತೆ, ತೋಟಲಿ ಒಂದು ಬಾಳೆಗೊನೆ ಉಟ್ಟು, ತೆಕಾ. ಮಕ್ಕ ತಿನ್ನಲಿ"ಂತ ಹೇಳ್ವ ದೊಡ್ಡ ಮನ್ಸಿನ ಕೆಲ್ಲೊವು ಮನೆವು ಹೇಳ್ತಿದ್ದೊ. ಉಂಬಕೆ ಇಲ್ಲದಂದ್, ಕೈಕಟ್ಟಿ ಹೋಕನ ವಂಚನೆ ಇಲ್ಲದೆ ಕೊಟ್ಟ ಅಂಥ ಮನೆವರ ಅಂವ ದೇವ್ರೂಂತನೇ ತಿಳ್ಕಂಡಿತ್ತ್. ಕೊಟ್ಟವ್ಕೂ ಗೊತ್ತು- ಇಂವ ಕುಡ್ದು, ಇಸ್ಪೇಟ್ ಆಡಿ ಹಾಳ್ ಮಾಡಂವ ಅಲ್ಲಾಂತ.

ಮಳ್ಗಾಲಲಿ ನೆರೆ ಬಾಕನ ನೀರ್‌ಲಿ ಬಾವ ಮರಗಳ ಇಂವ ಉರ್‍ಲ್ ಹಾಕಿ ಎಳ್ಕಂಡ್ ಬಂದ್ ಹಳ್ಳದ ಕರೆಲಿ ಹಾಕ್ತಿತ್ತ್. ಜಾತಿ ಮರಗ ಆದರೆ ಮಾರ್‍ತಿತ್ತ್. ಸೆರಿ ಹಿಡ್ದರೆ ಮಳ್ಗಾಲಲಿ ಅವಂಗೆ ಸುಮಾರ್ ಮುನ್ನೂರ್ ನಾನ್ನೂರ್ ಕಾಯಿ ಸಿಕ್ತಿತ್ತ್. ಹುಳಿ ಮೆಣ್ಸ್‌ನ ಬಾಯಿಸಡಗರಕ್ಕೆ ಒಗ್ಗಿದ ನಾಲಿಗೆಗೆ, ಕಾಯಿ ಹಾಕಿಯೇ ಅಡಿಗೆ ಮಾಡೋಕೂಂತ ಏನೂ ಇತ್ತ್‌ಲ್ಲೆ. ಹಾಂಗಾಗಿ ಒಂದ್ ಐವತ್ತೋ ನೂರೋ ಕಾಯಿ ಇಸಿಕಂಡ್ ಬಾಕಿದರ ಮಾರ್‍ತಿತ್ತ್. ಹಾಂಗೇನಾರ್ ಅಡಿಗೆಗೆ ಕಾಯಿ ಬೇಕಂದರೆ ದನಿ ಮನೆ ಉಟ್ಟಲೇ?. ನಾಕ್ ಕಾಯಿ ಬೇಕ್‌ಂತೇಳ್ರೆ, ರಾಸಿಂದ ನಾಕ್ ತೆಕಾಂತ ಹೇಳ್ವೊ ಅಲ್ಲದೆ, ಅವೇ ಬಂದ್ ಕೊಡಿಕಿಲ್ಲೆ. ಅಸ್ಟ್ ನಂಬಿಕೆ.

ಮಳ್ಗಾಲಲಿ ಮೀನ್ ಉಬಾರ್ ಹತ್ತುವ ಸಮಿಯಲಿ ಒಡತಿ ನೆಂಪು ಮಾಡಿಕೆ ಉಟ್ಟು- "ಕಳಲಾ, ಉಬಾರ್ ಮೀನ್ ಸಿಕ್ಕಿರೆ ನಾವ್ಗೂ ಸಾ ತಂಬ. ಆತಾ?"ಂತ. ಆಗ ಕಳಲ" ಅದ್ ನೀವು ಹೇಳೋಕಾ?"ಂತ ಕೇಳಿಕೆ ಉಟ್ಟು, ಹಾಂಗೆ ಮೀನ್ ಸಿಕ್ಕಿ, ಅದರ ಸಜ್ಜ್ ಮಾಡಿಕೊಟ್ಟರೆ, ಅವು ಮೂವತ್ತೆರ್‍ಡ್ ಹಲ್ಲ್ ತೋರ್‍ಸಿ "ಸಜ್ಜ್ ಮಾಡಿ ತಂದೊಳನಾ? ಬಾರೀ ಉಪಕಾರ ಆತ್ ಆತಾ"ಂತ ಮೀನ್ ಸಜ್ಜ್ ಮಾಡ್ವ ತನ್ನ ಕೆಲ್ಸ ಒಳ್ದ ಕುಸಿಲಿ ಒಂದ್ ಸೇರ್ ಅಕ್ಕಿ ಕೊಡ್ವಲ್ಲಿ, ಎರ್‍ಡ್ ಪಾವು ಸೇರ್‍ಸಿ ತಂದ್ "ಇಂದಾ"ಂತ ಹೇಳಿ, ಅಂವ ತಲೆಂದ ಬಿಚ್ಚಿ ಚಿಂಟೆಲಿ ಬುಡ್ಸಿ ಹಾಕಿದ ಅಂವನ ತೋರ್‍ತ್‌ಗೆ ಸುರಿಯೊತಿದ್ದೊ.

ಬಾಕಿ ದಿನ ಬೇಗ ಎದ್ರುವ ಹರ್ಕತ್ ಇಲ್ಲದ ಕಳಲ, ಬೇಸಾಯ ಸಮಿಯಲಿ ಮಾತ್ರ ಬೆಳ್ಳಿ ಮೂಡಿಕೆ ಮುಂದೆ, ಕೋಳಿನ ಸುರುನ ಕೂಂಗಿಗೆ ಎದ್ದ್ ಬುಡ್ತಿತ್ತ್. ಬೆಳ್ಗರಿಗೆ ಎದ್ದ್, ಕೈ ಬಾಯಿ ತೊಳ್ದ್, ತಣ್ಣನ ಇದ್ದರೆ ಅದ್, ಇಲ್ಲಂದರೆ ಬೇಸಿಸಿದ ಗೆಣ್ಸೋ, ನರೆನೋ, ಬೊಳ್ಗಂಡೆನೋ ಇದ್ದದರ ಏಳು ಸಮ ಪಾಲು ಮಾಡಿ, ಅವನ ಪಾಲ್ ತಿಂದ್, ಕೊದೆವ ನೀರಿಗೆ ಒಂಚೂರು ಕರಿಬೆಲ್ಲ ಹಾಕಿ, ಚಾ ಹೊಡಿ ತೋರ್‍ಸಿದ್ಹಾಂಗೆ ಮಾಡಿ, "ಚಾ"ಂತೇಳ್ವ ಬಿಸ್ನೀರ್ ಕುಡ್ದ ಮೇಲೆ, ಮೊರ್‍ಡ್ಡಿಕೊಟ್ಟ್ ಎತ್ತ್‌ಗಳ ಬಿಚ್ಚಿಕೆ ದನಿನ ಹಟ್ಟಿ ಹಕ್ಕಲೆ ಹೋತಿತ್ತ್. ಮೊಣ್‌ಕಾಲ್ ಮುಟ್ಟಕೆ ಇದ್ದ ತೋರ್‍ತು, ತಲೆಗೊಂದ್ ಬೈರಾಸ್, ಹರ್‍ಕಟೆ ಅಂಗಿ, ಹೆಗಲ ಮೇಲೆ ಒಂದ್ ಬೈರಾಸ್-ಇದ್ ಗದ್ದೆ ಹೂಡಿಕೆ ಹೋಕನ ಹಾಕ್‌ವ ಅವನ ಬಟ್ಟೆಗ. ಗೌಡ್ರ ಹಟ್ಟಿಗೆ ಹೋಗಿ, ಅಲ್ಲಿ ಎತ್ತ್‌ಗಳಿಗೆ ಮೊರ್‍ಡ್ಡಿ ತಿನ್ಸಿ, ನೀರ್ ಕುಡ್ಸಿ, ಹೂಡಿಕೆ ಹೊಡ್ಕಂಡ್ ಹೋತಿತ್ತ್. ಬೊಳ್ಪು ಆಕೆ ಇನ್ನ್ ಸಾ ಹೊತ್ತ್ ಇದ್ದರೆ, ಅವುಗಳ "ಹನಿ ಮೇಯ"ಕೆ ಬುಟ್ಟ್, ಮತ್ತೆ ಹೂಡಿಕೆ ಕಟ್ಟ್‌ತಿತ್ತ್. ಗದ್ದೆ, ದನಿ ಮನೆಗಿಂತ ಇವನ ದಟಿಗೆಗೇ ಹಕ್ಕಲೆ. ಹಾಂಗಾಗಿ ಕೊಟೆಗೆಲೇ ನೊಂಜ, ನೇಗ್‌ಲ್ ಹೀಂಗೆ ಬೇಸಾಯದ ಸಾಮಾನ್‌ಗಳ ಎಲ್ಲಾ ಅಲ್ಲೇ ಇಸ್ತಿದ್ದೊ. ಹೂಡಿಕೆ ಮುಂದೆ ಎತ್ತ್‌ಗಳಿಗೆ ನೊಂಜ ನೇಗ್‌ಲ್ ಕಟ್ಟಿ, ಅಂವನೂ ಹೆಗಲ ಮೇಲಿನ ಬೈರಾಸ್‌ನ ಹೊಟ್ಟೆಗೆ ಬಿಗ್ದ್ ಕಟ್ಟಿ, ಎತ್ತ್‌ಗಳ ಗದ್ದೆಗೆ ಇಳ್ಸಿ, ಹೂಡಿಕೆ ಸುರು ಮಾಡ್ದೆ. ಹೂಡಿಕನ ಅಂವ ತೆಗೆವ ದನಿ, ನಿದ್ರೆನ ಮಂಪರ್‍ಲಿ ಇದ್ದೊವ್ಕೆ, ದೇವಲೋಕದ ಸಂಗೀತದ ಹಾಂಗೆ ಕೇಳಿ, ಇದ್ದಲ್ಲೇ ಸುರ್‍ಪಿ ಮಲ್‌ಗ್ವೊ ಇನ್ನ್ ಸಾ ಎಚ್ಚರಾಗದ ಈ ಲೋಕ, ಹಾಲ್ ಕುಡಿವ

ಸಣ್ಣ ಮುದ್ದ್ ಕೂಸಿನ್ನಂಗೆ, ಮುದ್ದು ನಿದ್ರೆಲಿ ಮುಳ್ಗಿದ್ದದೆ. ಸದ್ದ್ ಗದ್ದಲ ಇಲ್ಲದೆ, ಮಲ್ಗಿದ ಕೂಸ
ಎಲ್ಲಿ ಎಚ್ಚರ ಆದೆನೋಂತ ಮೌನಲಿ, ಕಣ್ಣನ್ನೆಲೇ ಗಾಳಿ, ಬೊಳ್ಪಿಗೆ ಸೂಚನೆ ಕೊಡ್ವ ಹಾಂಗ
ನೆಲದವ್ವ ಹಸ್ರ್ ಹೊದ್ದ್ ಕುದ್ದಿದ್ದದೆ. ಅಂಥ ಗಂಭೀರ ಶಾಂತಿಲಿ ಕಳಲಂದ್‌ದನಿ ಓಂಕಾರ ಆಗಿ
ಸೃಷ್ಟಿನ ಸಂತೋಷ ಮತ್ತೆ ತೃಪ್ತಿನ ಬಾನ್ ಮುಟ್ಟ ಹರ್ದಿದೆನ್ೋಂತ ಹೇಳ್ವ ಹಾಂಗೆ ಕೇಳ್ತಿತ್
ಎಡೆಯೆಡೆಲಿ ಎತ್ತುಗಳ ತಿರ್‌ಗಿಸಿಕಾಕನ "ಹೂಂ...ಪಡ, ಪಡ"ಂತ ಹೇಳ್ವ ಸೊರ್‌ರ ದೊಂಡೊಳಗಿಂದ
ಬಂದ್, ಸಂಗೀತಕ್ಕೆ ಒಂದ್ ತರದ ತಾಳನೋಂತ ಹೇಳ್ವ ಹಾಂಗೆ ಕೇಳ್ತಿತ್.

ಒಳ್ಳ ಬೊಳ್ಪಾಕನ ಅವಂಗೆ ಎರ್ಡ್ ಸಾಲ್ ಗದ್ದೆ ಹೂಡಿ ಆಗ್ತಿತ್. ಸುರುಗೆ ಹೂಡುದು
ಅಗಾಡಿ ಗದ್ದೆನ. ಅಗಾಡಿ ಗದ್ದೆ ಅಂದರೆ ಅಗೆ ಮಾಡ್ವ ಗದ್ದೆ. ನಾಟಿಗೆ ಬೇಕಾದ ಬತ್ತನ ಇಲ್ಲಿ ಬಿತ್ತ
ನೇಜಿ ಮಾಡ್ವೆ, ಅದಕ್ಕೆ ಸುರುಗೆ ಇದರ ಹೂಡುದು. ಹಾಂಗೆ ಹೂಡಿ ಕಳಲ ಎತ್ತ್‌ಗಳ ಬಿಚ್ಚಿ ಅಲ್ಲೆ
ನೀರ್ ಇದ್ದ ಒಂದ್ ಗುಂಡಿಲಿ ಎತ್ತ್‌ಗಳ ಮೈನ ಕಾಯಿ ಚೆಪ್ಪುಲಿ ಲಾಯ್ಕ್ ತಿಕ್ಕಿದೆ. ಹಾಂಗ
ತಿಕ್ಕಿಕಾಕನ ಅವುಗಳೊಟ್ಟಿಗೆ ಮಾತಾಡಿಕೆ ಉಟ್ಟು, ಆ ಬಾಯಿ ಬಾರದ ಪ್ರಾಣಿಗಳೊಟ್ಟಿಗೆ ಅವಂಗ
ಅಷ್ಟು ಪ್ರೀತಿ! ಅವು ಸಾ ತಲೆ ಆಡ್ಸಿ, ನೆಕ್ಕಿ, ಅವನ ಪ್ರೀತಿನ ತೆರ್ಕ್‌ತ್ತಿದ್ದೊ.

ಎತ್ತ್‌ಗಳ ತೊಳ್ದ್, ಮತ್ತೆ ಅಲ್ಲೇ ಇದ್ದ ಒಂದ್ ಮರದ ಬೇರಿಗೆ ಅವ್‌ಗಳ ಕಟ್ಟಿ
ಬಿಚ್ಚಿಟ್ಟ ನೊಂಜ ನೇಗ್‌ಲ್‌ಗಳ ಪೊರ್ಲುರ್ ತೊಳ್ದ್ ಕೊಟೆಗೆನ ಒಳಗೆ ಇಸಿ ಬಾಗ್‌ಲ್ ಹಾಕಿದೆ. ಆ
ಮೇಲೆ, ಹಂಞ ಅತ್ತ ಇದ್ದ ನೀರ್‌ನ ಗುಂಡಿ ಹಕ್ಕಲೆ ಹೋಗಿ, ಚೋಳ್ ಮೆತ್ತಿದ ಮೈಕೈನ ತಿ
ತೊಳ್ದ್, ಚೊಂಬುಲಿ ಸಮಾಕ್ಕೆ ನೀರ್ ಹೊಯ್ಕಂಡದೆ. ಆ ಮೇಲೆ ಮುಂಡಾಸ್ ಬಿಚ್ಚಿ ನೀರ್‌ಲಿ
ಅದರ ಪೊರ್ಲುರ್ ತೊಳ್ದ್, ನೀರ್ ಹೋಗ್‌ವ ಹಾಂಗೆ ಗಟ್ಟಿ ಹಿಂಡಿ, ಚಂಡಿ ಮೈನ ಅದರ್ಲಿ ತಿಕ್ಕಿ
ತಿಕ್ಕಿ ಒರ್ಸಿದೆ. ಆ ಬಿಸಿಗೆ ಅವಂಗೆ ಹಂಞ ಚಳಿ ಬುಟ್ಟ ಹಾಂಗೆ ಆದೆ. ಇನ್ನೊಮ್ಮೆ ಅದೇ ಅರ್ವೆ
ನೀರಿಗೆ ಹಾಕಿ, ತೊಳ್ದ್, ಹಿಂಡಿ ಅಂವ ಉಟ್ಟ ಅರ್ವೆನ ಬಿಚ್ಚಿಕೆ ಮುಂದೆ ಹೊಟ್ಟೆಗೆ ಕಟ್ಟಿದ ಅರ್ವೆ ಬಿಚ್ಚಿ
ಹೆಗ್ಲ್ ಮೇಲೆ ಹಾಕ್ಕಂಡ್, ಹಿಂಡಿದ ಬಟ್ಟೆನ ಉಟ್ಟ್‌ಕಂಡ್, ಬಿಚ್ಚಿದ ಬಟ್ಟೆನ ತೊಳ್ದ್ ಕೊಟೆಗೆನ
ಮಾಡ್ ಅಡಿಲಿ ಕಟ್ಟಿದ ಬೊಳ್ಳಿಲಿ ಒಣ್‌ಗಿಕೆ ಹಾಕಿದೆ. ಇಷ್ಟ್ ಆದ ಮೇಲೆ ಎತ್ತ್‌ಗಳ ಬಿಚ್ಚಿ
ಅವ್ಗಳೊಟ್ಟಿಗೆ ಮಾತಾಡಿಕಂಡ್, ಹೊಡ್ಕಂಡ್ ಹೋಗಿ ಹಟ್ಟಿಲಿ ಕಟ್ಟಿ, ಹಟ್ಟಿ ಅಟ್ಟಂದ ನಾಲ್
ನಾಲ್ಕ್ ಸೂಡಿ ಬಿಳ್ಗ್‌ಲ್ ಎಳ್ದ್ ಅವ್ಕೆ ತಿಂಬಕೆ ಹಾಕಿದೆ. ಅಲ್ಲೇ ಮೂಲೆಲಿ ಹಸಿ ಹುಲ್ಲ್‌ದ್ ರಾಶಿ
ಇದ್ದರೆ, ಅದರ ಮತ್ತೆ ಮನೆವೇ ಹಾಕಲಿಂತ ಮನ್ಸ್‌ಲಿ ಹೇಳಿಕಂಡ್ ಹೊರಗೆ ಬಾಕನ, ಮಾಯ್ಲು
ಎಲಡಿಕೆ ತಿಂಬಕೆ, ಎಲೆಗೆ ಸುಣ್ಣ ಹಚ್ಚಿಕಂಡ್ ಮೆಲ್ಲಾನೆ ಬಾವ ಹೊತ್ತಾದೆ.

ನಾಟಿ ಹಾಂಗೆ ಕೊಯ್ಲು ಕೆಲ್ಸಗಳ ನೆರೆಕರೆವೊಟ್ಟಿಗೆ ಒಬ್ಬಂಗೊಬ್ಬ ಸೇರಿಕಂಡ್, ಪಗರ
ಪದ್ಧತಿಲಿ ಬೇಸಾಯ ಮಾಡ್ವ ಕ್ರಮ ಹಿಂದಿಂದಲೇ ಬಂದದ್. ಯಾರ ಮನೆಲಿ ನಾಟಿ ನೇಜಿ ಕೆಲ್ಸ
ಉಟ್ಟೋ, ಆ ಮನೆಲೇ ಅಂದ್‌ನ ಬೊಳ್ಪ್‌ನ ತಿಂಡಿ, ಮದ್ಯನದ ಊಟ. ಸೂರಪ್ಪ ಗೌಡ್ರಲ್ಲಿ ಮಾಡ್ವ
ಮಾಮೂಲು ಕೆಲ್ಸಕ್ಕೆ, ಕಳಲನವ್ಕೆ ಮದ್ಯಾಂದ ಊಟ ಸೂರಪ್ಪ ಗೌಡ್ರ ಮನೆಲಿ ಇಲ್ಲೆ. ಮದ್ಯಾಂದ
ಗಂಜಿನ, ಮಕ್ಕ ಅವರ ಮನೆಗೆ ಬಂದ್ ತೆಕ್ಕಂಡ್ ಹೋಕು. ಆ ಕೆಲ್ಸನ ಮಾಚುಗೆ ವಹಿಸಿದ್ದೊ
ಅದ್ ಮನೆಲಿ ಇಲ್ಲೆ ಅಂದರೆ ಮಾತ್ರ ಬೇರೆವು ಗಂಜಿ ತೆಕಂಡ್ ಬಾಕೆ ಹೋಗ್ತಿದ್ದೊ. ಹಾಂಗಾಗಿ
ಅದ್ ಮಾಚುನ ಖಾಯಾಂ ಕೆಲ್ಸಂತ ಆಗಿತ್. ಊಟ ತಾವ ಹೊತ್ತಂದರೆ ಹಗ್ಲ್ ದೇವು ನಡು
ನೆತ್ತಿಗೆ ಬಾವ ಹೊತ್ತು. ಆ ಹೊತ್ತ್ ನೋಡಿ ಅದ್ ಹೊರ್ಡಿಕೆ ತೆಯಾರ್ ಆಗ್ತಿತ್. ಎಣ್ಣೆ ಇಲ್ಲದೆ

ಬರಿಗಟ್ಟಿ, ಬೆನ್ನ್ ಉದ್ದಕೆ ಹರ್ದಿ ನಿಂತ ಕೂದೋಲ್ ಬಾಚಿ ಅಲ್ಲಿಗೆ ಸುತ್ತಿ, ಅದ್ ಬಿಚ್ಚದ ಹಾಂಗೆ ನಾಲೆನಾರ್‌ಲಿ ಕಟ್ಟಿ, ಉಟ್ಟ ಕಿರ್ಗೆನ ಬಿಚ್ಚಿ ಬುಡ್ಸಿ, ಮತ್ತೆ ಬಿಗ್ದ್ ಕಟ್ಟಿ, ಯಾರೋ ಬಿಸಾಕಿದ್ದ, ಎಲ್ಲೋ ಪೆರ್ಕಿಕೆ ಸಿಕ್ಕಿದ, ಒಂದೂ ಗುಬ್ಬಿ ಇಲ್ಲದ ಹರ್ಕ್ಲ್ ದೊಗಳೆ ರೌಕೆನ ಹಾಕಿ, ಬಾಯಿ ಬುಟ್ಟ ಹಾಂಗಿದ್ದ ಅದರ ಕೆಳಗಿನ ಎರ್ಡ್ ಕೊಡಿನ ಗಂಟ್ ಹಾಕಿ ಕಟ್ಟಿತ್ ಅಂದರೆ ಅದ್ರ ಸಿಂಗಾರ ಮುಗ್ತ್‌ಂತ ಲೆಕ್ಕ. ಆ ಮೇಲೆ ಅತ್ತ ಬಾರಿ ದೊಡ್ಡಿತ್ ಅಲ್ಲ, ಬಾರಿ ಸಣ್ಣದೂ ಅಲ್ಲಂತ ಹೇಳ್ವ ಎರ್ಡ್ ಅಳಗೆ ಹಾಂಗಿನ ಮಣ್ಣ್‌ನ ಮಡ್ಕೆಗಳ ತಲೆ ಮೇಲ್‌ನ ಸುಂಪೆ ಮೇಲೆ ಇಸಿ, ಅದಕ್ಕೊಂದ್ ಕೀಜ್‌ದ್ದ್ ತಟ್ಟೆ ಮುಚ್ಚಿ ಹೊರ್ಪತ್ ಅಂದರೆ ಅದ್ ದನಿಗಳ ಮನೆಂದ ಗಂಜಿ ತಾಕೆಂತನೇ ಎಲ್ಲೋವ್ಕೆ ಗೊತ್ತು. ದಾರಿಲಿ ಸಿಕ್ಕಿದೋವು ಹಂಞ ಕುಸಾಲಿನವಾದರೆ ಅದರ ಸಮಯ ಪ್ರಜ್ಞೆನ ಹೊಗ್‌ಳುವ ಹಾಂಗೆ "ಹೊತ್ತ್ ಅಂದರೆ ಹೊತ್ತ್. ಸರೀ ಹನ್ನೆರ್ಡ್ ಗಂಟೆಗೆ ಹೊರ್ಪ್ಟ ಬುಟ್ಟಯಲೇ, ಗಂಜಿ ತಾಕೆ?"ಂತ ಹೇಳುದೂ ಇತ್ತ್. ಅವರ ಮಾತಿಗೊಮ್ಮೆ ಹಲ್ಲ್ ತೋರ್ಸಿ ದನಿ ಮನೆ ಕಡೆ ಹೋತಿತ್ತ್. ಮನೆಂದ ಹೊರ್ಡಿಕನನೇ ಸಣ್ಣವು "ಬೇಗ ಗಂಜಿ ತಾ"ಂತ ಹೇಳಿಕೆ ಉಟ್ಟು. ಮಾಮೂಲಿನ ಆ ಮಾತಿಗೆ "ಆತ್, ಅವು ಗಂಜಿ ಕೊಟ್ಟ ಕೂಡಲೇ ಬನ್ನೆ"ಂತ ಹೇಳ್ತಿತ್ತ್. ಅದಿಕೆ ಗೊತ್ತಿತ್ತ್ ಪಾಪ ಮಕ್ಕಳಿಗೆ ಹಸಿವು ತಡ್ಕಂಬಕೆ ಆದ್ಲೆಂತ. ಇದ್ ಹೊರ್ಪ ಹಾಗೇ, ಆ ಸಣ್ಣವು ಮೆಟ್ಲ್ ಹಕ್ಕಲೆ, ಅಲ್ಲರೆ ಎದ್ರ್ ಚೆಂಟೆಲಿ ಕುದ್ದ್, ಇದ್ ಬಾದರ ಕಾದ್‌ಕೊಂಡ್ ಇದ್ದವೆ. ಬೊಳ್ಪುಗೆ ಅರೆ ಹೊಟ್ಟೆ ತಿಂದದ್ದ್ ರಾವಣನ ಹೊಟ್ಟೆಗೆ ಅರೆ ಕಾಸಿನ ಮೊಜ್ಜಿಗೆ ಹಾಂಗೆ ಯಾಗ ಅರ್ಗಿ ಹೋಗುಟೋ ಏನೋ?

ಅಕ್ಕನ ಕಾದ್ ಕುದ್ದ ಮಕ್ಕಳಿಗೆ ಅದ್ ಬಾಕನ ಹಂಞ ಹೊತ್ತಾದರೂ "ಎಷ್ಟ್ ಹೊತ್ತಾತ್ ಅಕ್ಕ ಹೋಗಿ. ಎಂತಮಾಡ್ದೆ?"ಂತ ಪರ್‌ಚಿಕೆ ಸುರು ಮಾಡ್ತಿದ್ದೊ. ಆಗ ಹುಗ್ಗವ್ವ "ನಿಮ್ಮದ್ ಒಳ್ಳೆ ಕತೆ ಆತಲೇ. ಅಕ್ಕ ಅಲ್ಲಿ ಹೋಗಿ ಅಡಿಗೆ ಮಾಡಿ ತಾದಾ?. ಬಾಂಗ್ ಆದ ಕೂಡಲೇ ಗಂಜಿ ಕೊಟ್ಟವೆ. ಹಂಞ ತಡೆಯೆನಿ, ಈಗ ಬಂದದೆ"ಂತ ಹೇಳ್ತಿತ್ತ್.

ಗೌಡ್ರ ಮನೆಗೆ ಸುಮಾರ್ ಎರ್ಡ್ ಫರ್ಲಾಂಗ್ ದೂರ. ಅದ್ರ ಹೊಟ್ಟೆನ ಚುರು ಚುರುನೇ ಅದರ ಬೇಗ ಬೇಗ ನಡ್ಸ್‌ತಿತ್ತ್.

ಎಷ್ಟ್ ಬೇಗ ಹೋದರೂ, ಗಂಜಿ ಸಿಕ್ಕುದು ಹನ್ನೆರ್ಡ್‌ವರೆ ಹನ್ನೆರ್ಡ್ ಮುಕ್ಕಾಲಕ್ಕೆ- ಪಳ್ಳಿದ್ದ್ ಬಾಂಗ್ ಆದ ಮೇಲೆನೇ. ಇದ್ ಬೇಗ ಹೋಗಿ ಗೌಡ್ರ ಮನೆ ಹಕ್ಕಲೆ ಇದ್ದದರ ಗೌಡ್ತಿ ಏನಾರ್ ಕಂಡನೋ, ಬೊಯ್‌ಕಂಡ್ "ನೀ ಯಾಕೆ ಇಷ್ಟ್ ಬೇಗ ಬಂದದ್ದ್. ನೀ ಬಂದಂತ ಗಂಜಿ ಬೇಗ ಬೆಂದದೆನಾ"ಂತ ಓಡ್ಸಿಕಂಡ್ ಬಂದ್ ಪಡಿಂದ ಹೊರಗೆ ಓಡ್ಸಿ ನಾಯಿನ ಛೂ ಛೂಂತ ಹೇಳ್ತಿದ್ದೊ. ಇವು ನಾಯಿನ ಛೂ ಛೂಂತ ಹೇಳ್ರೊ ನಾಯಿ ಮಲ್ಗಿದಲ್ಲಿಂದಳೇ ಒಮ್ಮೆ ಕಣ್ಣೆತ್ತಿ ನೋಡಿ "ಗುರ್ರ್"ಂತ ಹೇಳಿ, ಇದ್ ಯಾಗೋಳು ಬರ್ವ ಜೆನಂತ ಗೊತ್ತಾದ ಮೇಲೆ ಮತ್ತೆ ಹೊಟ್ಟೆ ಮೇಲೆ ಮುಸ್‌ಂಡ್ ಇಸಿ ಮಲ್ಗಿ ಬುಡ್ತಿತ್ತ್. ಗೌಡ್ತಿ ಅದಕ್ಕೂ "ಪ್ರೆಯಜನ ಇಲ್ಲದ ನಾಯಿಗ. ತಿಂಬಕೆ ಮಾತ್ರ"ಂತ ಬೊಯ್ಕಂಡ್ ಹೋಗ್ತಿದ್ದೊ. ಇದ್ದೋವ್ಕೆ ಇಲ್ಲದವರ ಹಸ್ದ ಹೊಟ್ಟೆನ ಕಿಚ್ಚ್ ಎಂತಂತ ಅರ್ಥ ಆಕೊಲೇ? ಅವು ಪಡಿಂದ ಹೊರಗೆ ಓಡ್ಸಿದ ಮೇಲೆ ಮಾಚು ಅವು ಕರಿಯದೆ ಒಳಗೆ ಹೋಗ್ತಿಲ್ಲೆ. ಪಡಿಂದ ಹೊರಗೇ ಇದ್ದ್‌ಕಂಡ್ ಏನಾರ್ ಮಾಡಿಕಂಡ್ ಇದ್ದ್ ಬುಡ್ತಿತ್ತ್. ಒಮ್ಮೊಮ್ಮೆ ಕೊಕ್ಕಪ ಕುದ್ದ್‌ಕಂಡ್ ಕಲ್ಲ್‌ಲಿ ಆಟ ಆಡ್ತಿತ್ತ್, ಒಮ್ಮೊಮ್ಮೆ ತಲೆಲಿದ್ದ ಹೇನ್‌ನ ಅಂದಾಜ್ ಮಾಡಿ ಹೆರ್ಕಿ ತೆಗ್ದ್ ಒರ್‌ತಿತ್ತ್. ಮಳ್ಗಾಲಲಿ ಮಳೆ ಬರುವ ಹಾಂಗಿದ್ದರೆ, ಹುಗ್ಗವ್ವ ಅದಿಕ್ಕೆಂತಲೇ ಮೆಡ್ಡ ಕಿಡಂಜೋಲುನ ತಲೆ

ಮೇಲೆ ಇಸಿಕಂಡ್ ಮುದ್ದೆ ಆಗಿ ಕುದ್ರ್‌ತಿತ್. ಅಲ್ಲಿಗೆ ಬಂದ್ ಅರ್ದ ಮುಕ್ಕಾಲ್ ಗಂಟೆ ಆಕ
ಪಳ್ಳಿನ ಬಾಂಗ್ ಕೇಳ್ದೆ. ಗಡಿಯಾರ ಇಲ್ಲದ ಕಾಲಲಿ ಪಾಪದೊವ್ಕೆ, ಪಾಪದೊನ್‌ವ್ಕೆಂತೇನ್
ಹೆಚ್ಚಿನೊನ್‌ವ್ಕೆ ಹೊತ್ತ್‌ನ ತಿಳಿವಳ್ಕೆ ಮಾಡ್ತಿದ್ದದ್ ಅದೇ ಬಾಂಗ್‌ನ ದೊನ್‌ನಿ. ಬಾಂಗ್‌ನ ಸೊ
ಕೇಳ್ದೇ ತಡ ಮಾಚುನ ಕಾಲ್‌ಗ ಪಡಿ ಹಕ್ಕಲೆ ಹೋದವೆ. ಪಡಿನ ಸೆರೆಂದಳೇ ಇಣ್ಕಿ ನೋಡ್
ಬಾಗ್‌ಲ್ ತೆಗ್ದ್ ಯೆಜಮಾಂತಿ, ಗಂಜಿ ಇರ್‍ವ ಎರ್ಡ್ ಮರದ ಮರ್‍ಗಿಲ್‌ಗಳ ಹಿಡ್ಕಂಡ್ ಮೆ
ಇಳ್ಕಂಡ್ ಬಂದವೆ. ಕಡೇ ಮೆಟ್ಲ್ ಇಳ್ದ್ ಇಜ್ಜೆಲಿಗೆ ಕಾಲಿಸಿ "ಮಾಚೂ... ಏ ಮಾಚು"ಂತ ಕರ್ದ
ಮಾಚುನ ಬೇಕಾದ ಆ ಕರೆ ಕೇಳುದೇ ತಡ, ಮಾಚು ಗಂಜಿ ತೆಕ್ಕಂಡ್ ಹೋವ ಮಡ್ಕೆಗ
ಹಿಡ್ಕಂಡ್, ದಡದಡಾಂತ ಓಡಿ ಇಜ್ಜೆಲ್ ಕೊಡಿಲಿ ಮಡ್ಕೆಗಳ ಇಸಿ, ಎರ್ಡ್ ಹೆಜ್ಜೆ ಹಿಂದೆ ನಿತ್ತ
ಒಂದ್ವೇಳೆ ಅವು ಕರಿಯಕನ ಇದ್ ಅಲ್ಲಿಗೆ ಎತ್ತಿತಿಲ್ಲೆಂತಾದರೆ ಅದಿಕ್ಕೂ "ಎಲ್ಲಿ ಸತ್ತಿದ್ದ? ಎ
ಹೊತ್ತು? ಕರ್ದ ಕೂಡಲೇ ಬಾಕೆ ಆದ್ಲೆನಾ?"ಂತಳೂ ಬೊನ್‌ಯ್ಯೊತಿದ್ದೊ. ಅಂಥ ಬೊನ್‌ಯ್ಗಳ
ಇವ್ಕೆ ಲೆಕ್ಕನೇ ಇಲ್ಲೆ ಬುಡಿ. ನಮ್ಮಂಥವು ಬೊನ್‌ಯ್ಗಳ ಕೇಳಿಕೇ ಇದ್ದೊದ್‌ವುಂತ ಈ ಪ್ರಾಯಲ
ಅದಿಕೆ ಅರ್ಥ ಆಗಿತ್.

ಒಮ್ಮೆ, ಅವು ಗಂಜಿ ಇಕ್ಕಿಕಂಡ್ ಇದ್ದೊ. ಅಷ್ಟೊತ್ತಿಗೆ ಅವರ್‍ದೊಂದ್ ಪರಂಗಿ ಹಿ
ನಾಂಯಿ ಬಾಲ ಆಡ್ಸಿಕಂಡ್ ಅಲ್ಲಿಗೆ ಬಾತ್. ನಾಂಯಿ ಹಕ್ಕಲೆ ಬಾಕನ, ಇಕ್ಕಿದ ಗಂಜಿಗೆ ಅದ
ಬಾಯ್ಹಾಕಿ ಬುಟ್ಟರೆಂತ ಇದ್, "ಛೂ...ಛೂ.."ಂತ ಹೇಳ್ತ್. ಯೆಜಮಾಂತಿ ಮರ್‍ಗಿಲ್‌ಗಳ ಅಲ್
ಇಸಿ, ಓಡಿಕೆ ಅಂದಾಜ್ ಮಾಡಿಕಂಡಿದ್ದ ನಾಂಯಿಗೆ, "ಕುರ್ತೇಲ್ ನಾಂಯಿ, ಹೋದಿಯ
ಇಲ್ಲೆನಾ?"ಂತ ಹೇಳಿ, ಅಲ್ಲೇ ಬಿದ್ದ್‌ಕಂಡಿದ್ದ ಕೋಲ್‌ನ ತೆಗ್ದ್ ಬಿಸಾಡ್ದೊ. ಅದ್ ಅದರ ಕಾಲಿ
ತಾಂಗಿತ್. ಅದ್ "ಕುರ್‍ಯೋಂ, ಮುರ್‍ಯೋಂ"ಂತ ಒಂದೇ ಓಟ. ಮಾಚುಗೆ ನೆಗೆ ಬಾತ್. ಬಂ
ನೆಗೆನ ಬಾಯಿಗೆ ಕೈಮುಚ್ಚಿ ತಡ್ಕಂತ್. ಎಷ್ಟಾರ್ ಅವರ ನಾಂಯಿ. ನಾ ನೆಗಾಡ್ದೆಂತ ಅವ್ಕೆ ಸಿ
ಬಂದರೆಂತ. ಅವು ದೊಡ್ಡ ಮರ್‍ಗಿಲ್‌ಲಿ ಕುತ್ತ ಹಾಕಿ ತಂದ ಗಂಜಿನ, ಮಾಚು ತಂದ ಕಳಲ
ಹಂಞ ದೊಡ್ಡದಿದ್ದ ಮಡ್ಕೆಗೆ ಹಾಕಿದೊ. ಗೀಸಿ ತಂದ ಮರ್‍ಗಿಲ್ ಗಂಜಿನ ಮಾಯ್ಲುನ ಸ
ಮಡ್ಕೆಗೆ ಹಾಕಿ "ಗೈಪು ಇಲ್ಲೆ. ಎರ್ಡ್ ಹೋಳು ಉಪ್ಪನಕಾಯಿ ಹಾಕೊಳೆ"ಂತ ಹೇಳಿ ಹೋದ
ಇವ್ಕೆ ಉಂಬಕೆ ಸಾರ್, ಸಾಂಬಾರ್, ಪಲ್ಯ, ಮೊನ್‌ಜ್ಜಿಗೆ ಬೇಕ್‌ಂತಳೇ ಏನೂ ಇಲ್ಲೆ. ಇದ್ದ
ಇತ್, ಇಲ್ಲಂದರೆ ಬೇಡ. ಇಲ್ಲಲೇಂತ ಬೇಜರ್ ಏನ್ ಇಲ್ಲೆ. ಅಂತ ಬಾಯ್ರೊಗಸ್‌ಲಿ ಉಂ
ದೊಡ್ಡೊದ್‌ವು ಇವಲ್ಲ. ಇವ್ಕೆ ದಟಿಗೆ ಬದಿಲೇ ಜೀರಿಗೆ ಮೆಣ್ಸ್ ಮತ್ತೆ ಸಣ್ಣ ಮೆಣ್ಸ್‌ನ ದೈಗ ಒಳ
ಹಕ್ಕಿ ಪಕ್ಕಿ ತಿಂದ್ ಹೋದರುನೂ ಇವರ ಕರ್ಚಿಗೆ ಏನ್ ಬರ ಇಲ್ಲೆ! ಅದರ್‌ಂದ ಬೇಕಾದ
ಮೆಣ್ಸ್ ತಂದ್ ಉಪ್ಪು ಹುಳಿ ಸೇರ್‍ಸಿ, ಗಂಜಿ ತೆಳಿನ ಸಾ ಬೊನ್‌ಗ್ಗಿಸಿ ಲಾಯ್ಕ ಪುಜ್ಕಿ, ಹಿಂಟ
ಬಿಸಾಡಿ, ಒಳ್ದ ರಸನ ನೆಂಪು ಮಾಡಿಕಂಡರೆ ಬಾಯಿಲಿ ನೀರ್ ಬಾದು. ಅಷ್ಟ್ ಹುಳ್ಳಂಗೆ, ಅದರ್
ಒಂದ್ ಸೇರಕ್ಕಿದ್ ಗಂಜಿ ಉಣಕ್. ಜೀರಿಗೆ ಅಲ್ಲರೆ ಸಣ್ಣ ಮೆಣ್ಸ್ ಇಲ್ಲೆಂತೇಳ್ರೆ ಕೆಂಪು ಊ
ಮೆಣ್ಸ್‌ನ ಗೆಂಡಕ್ಕೆ ಹಾಕಿ ಸುಟ್ಟು ಉಪ್ಪು ಮೆಣ್ಸ್ ಮಾಡ್ರೆ ಉಟ್ಟಲ್ಲಾ, ಅದರ ಮೊನ್‌ರ್ಮಳಲೇ ಉಣಕ
ಮಾಯ್ನ ಹಣ್ಣ್‌ನ ಕಾಲಲಿ ಅದರ್‍ದೇ ಉಪ್ಪು ಮೆಣ್ಸ್. ಅದ್ ಅವ್ಕೆ ಮೃಷ್ಟಾನ್ನ. ಉಂಡ್‌ದ್
ತೊಳೆಯಕಾಕನನೇ ಉಂಡ್‌ದೆಲ್ಲಾ ಅರ್‍ಗಿದ್ದಂಗೆ ಆತಿತ್. ಒಳ್ದ ಕಾಲಲಿ ಬ್ಯಾರಿ ಅಂಗ್ಡಿಂದ ತಂ
ಒಣ್ಗೇಲ್ ಮೀನ್‌ಗ– ಹಾಳೆಮೀನ್, ಚರಂಡಿ, ಬಂಗುಡೆ, ಕುರ್ಚಿ ಇಂಥದರ ಮೊನ್‌ರ್ಲ್ ತೊಳ್

ಣ್‌ಂಗಿಸಿ ಬೆಸೆಗೆಲಿ ಕಟ್ಟಿ ಇಸಿಕಂಡರೆ, ಬೇಕಾಕನ ಬೇಕಾದಷ್ಟ್ ತೆಕ್ಕಂಡ್, ಅದರ ಗೆಂಡಲಿ ಬಟ್ಟ್, ಉಂಬಕನ ಎಡಕೈಲಿ ಅದರ ಹಿಡ್ಕಂಡ್, ಹಂಞ ಹಂಞನೇ ಕಚ್ಚಿಕಂಡ್ ಉಂಡರೆ, ಪಾಪದೊರ್‌ವ್ಕೆ ಅದೊಂದ್ ಗಮ್ಮತ್‌ನ ಊಟನೇ. ಎಣ್ಣೆ ಇದ್ದರೆ ನೀರುಳ್ಳಿ ಹಸಿಮೆಣ್ಸ್‌ನೊಟ್ಟಿಗೆ ಎಣ್ಗೇಲ್ ಮೀನ್ ಹೊರ್‌ದ್ದರೆ ನೆಂಟ್ರ್‌ಗಳಿಗೆ ಸಾ ಸಮ್ಮಾನ ಆದೆ. ಈ ತರದ ಮೀನ್ ಪಾಕಗಳ ಎದ್ರ್, ಗೌಡ್ರ ಮನೆ ಗೈಪ್ ಯಾವ ಲೆಕ್ಕ?

ಮಾಚು ಗಂಜಿ ತೆಕ್ಕಂಡ್ ಬಾಕನ ಮಕ್ಕ ದಟಿಗೆನ ಬಾಗ್‌ಲ್ ಹಕ್ಕಲೆನೇ ಕುದ್ದೊರ್‌ವು ಅದರ ನೋಡಿ "ಅಕ್ಕ ಬಾತ್, ಅಕ್ಕ ಬಾತ್"ಂತ ಹೇಳಿಕೆ ಸುರು ಮಾಡ್ದೊ. ಇಜ್ಜೆಲ್ಗೆ ಬಾಕನ ಅದ್ ಮಕ್ಕಳ ಗೌಜಿ ನೋಡಿ, "ನಾ ಬರದೇ ಗಂಜಿ ಹಿಡ್ಕಂಡ್ ಓಡಿ ಹೋನೆಂತ ತಿಳ್ಕಂಡರಿಯಾ ಹೇಂಗೆ?"ಂತ ಕೇಳ್ತ್. ಬಾಗ್ಲ್‌ಲೇ ನಿತ್ತಿದ್ದ ಹುಗ್ಗವ್ವ ಗಂಜಿ ತಂದ ಪಿಳ್ಳೆನ ನೋಡಿ, ಮೆಟ್ಲ್ ಇಳ್ದ್, ಅದರ ತಲೆಂದ ಮಡ್ಕೆಗಳ ತೆಕಂಡ್ ಒಳಗೆ ಹೋತ್. ಊಟ ಮಾಡ್ವಲ್ಲಿ ಮುಂದೆನೇ ಇಸಿದ ಮೊರ್‌ಣ್ಣ್‌ನ ದೊಡ್ಡ ಮಡ್ಕೆಗೆ ಈ ಎರ್ಡ್ ಮಡ್ಕೆಲಿದ್ದ ಗಂಜಿನ ಸುರ್ತ್. ಆ ಮೇಲೆ ಆ ಮಡ್ಕೆನ ಸುತ್ತ ಇಸಿದ್ದ ಏಳ್ ಚಟ್ಟಿಗಳಿಗೆ ಚಿಪ್ಪಿ ಸೆಡೆಲಿ ಇಕ್ಕಿತ್. ಕಳಲಂಗೆ ಮೂರ್ ಸೆಡೆ, ಮಾಯ್ಲುಗೆ ಎರ್ಡ್ ಸೆಡೆ, ಒಳ್ದವ್ಕೆ ಒಂದೊಂದ್ ಸೆಡೆ. ಇಕ್ಕಿ ಆದ ಮೇಲೆ, ಮಡ್ಕೆ ಅಡಿಲಿ ಇರ್ವ ಅಗ್ಳ್ ಮತ್ತೆ ತೆಳಿಗೆ, ಮತ್ತೆ ಹಂಞ ನೀರ್ ಹೊಯ್ದ್, ಎಲ್ಲರ ಚಟ್ಟಿಗೆ ಹಂಞ ಹಂಞ ಹಾಕಿತ್. ಒಂದೊಂದ್ ಸೆಡೆ ಬಳ್ಸಿದರ್ಲಿ ಹಂಞ ಹೆಚ್ಚ್ ಇದ್ದದ್ ಆ ಸಂಸಾರದ ಒಬ್ಬನೇ ಗಂಡ್ ಕೂಸು ನಾರುಗೆ, ಕಮ್ಮಿ ಇದ್ದದ್ದ್ ಹುಗ್ಗವ್ವಂಗೆ.

ಕಳಲ, ಅಂವ ಉಂಬಕೆ ಮುಂದೆ ಒಂದ್ ಮುದ್ದೆ ಹುಗ್ಗೆನ ತೆಗ್ದ್ ಪುಂಡಿಕಟ್ಟಿ ದಾಸು ನಾಂಯಿಗೆಂತ ಚಟ್ಟೆನ ಹಕ್ಕಲೆ, ನೆಲಲಿ ಇಸುವ ಕ್ರಮ. ನಾಂಯಿಗೆ ಮನೆ ಲೆಕ್ಕಲಿ ತಿಂಬಕೆ ಕೊಡುದುಂತೇಳ್ರೆ ದಿನಕ್ಕೆ ಎರ್ಡ್ ಹೊತ್ತು ಹೀಂಗೆ ಕಳಲ ತೆಗ್ದ್ ಇಸ್‌ವ ಆ ಎರ್ಡ್ ಪುಂಡಿ ಹುಗ್ಗೆ ಮಾತ್ರ. ಅದ್ ಬುಟ್ಟರೆ ಮೀನ್‌ನ ತಲೆ, ಗೆಣ್ಸ್ ಬೇಯ್ಸಿರೆ ಅದರ ಚೂಲಿ-ಇಂತದ್ದ್ ಮನೆವು ತಿನ್ನದ್ದ್. ಆದರೆ ದನಿ ಮನೆಗೆ ಹೋದರೆ ಒಕ್ಕಲವ್ನ ಮನೆ ನಾಯಿಂತ ಹೇಳ್ವ ಹಕ್ಕ್‌ಲಿ ಮನೆವು ಉಂಡ್ ಒಳ್ದದರ ಅದಿಕೆ ಹಾಕೂದೂ ಇತ್ತ್.

ಊಟ ಮಾಡಿಕನನೇ ಅಪ್ಪ ಮಕ್ಕಳ ಪಂಚಾತಿಕೆ.

ಮಾಚು ಅಪ್ಪನ ನೋಡಿ ಹೇಳ್ತ್ "ಅಪ್ಪ, ಪುರ್ಬುಗಳ ಮನೆ ಹಿಂದೆ ಒಂದು ದೊಡ್ಡ ಹಲ್ಸಿನ ಮರ ಉಟ್ಟಲ್ಲಾ? ಅದರ್ಲಿ ಒಂದ್ ಮುಜೆಂಟಿ ಜೇನ್‌ನ ಒಕ್ಕಲ್ ಉಟ್ಟು, ಅದರ ತೆಗ್ಯಮೊನಾ?"

ಕಳಲ ಕೇಳ್ತ್ "ಅದರ್ಲಿ ಎಷ್ಟ್ ಜೇನಿರ್ದು?" "ಎಷ್ಟಾದರ್ ಆಗಲಿ, ಜೇನ್ ತೆಗ್ಯೊಮೊ."

ನೋಡುಲಿ ನಾರು ಬಾಯಿ ಹಾಕಿತ್ "ನಾವುಗೆ ಇಲ್ಲದಿದ್ದರು ತೊಂದರೆ ಇಲ್ಲೆ, ಅದ್ ಒಂದಾದರ್ ಜೇನ್ ತಿನಲಿ."

ಮಾಚು ಕೋಪಲಿ ಅಂವನ ನೋಡಿ "ನಿನ್ನ ಯಾರ್ ಕೇಳ್ತ್ಲೆ. ನೀ ಎಡೆಲಿ ಬಾಯ್ಹಾಕ್ಬೇಡ. ಬಾಯ್ಮುಚ್ಚಿ ಕುದ್ರ್ ಅಲ್ಲಿ"ಂತ ಹೇಳಿ, ಅಪ್ಪನ ನೋಡಿ "ಮುಜೆಂಟಿ ಜೇನ್ ಮದ್ದ್ ಅಲ್ಲನಾ? ಅದಿಕೆ ನಾ ಹೇಳ್ದ್"ಂತ ಹೇಳ್ತ್. ಕಳಲ ಸಮದಾನಲೇ ಹೇಳ್ತ್ "ಆತ್ ತೆಗ್ಯೊಮೊ. ಅದಿಕೆ ಏನಾಕು?" ಮಾಚು ನಾರುನ ನೋಡಿ ಗೆದ್ದ ರೀತಿಲಿ ನೆಗಾಡ್ತ್.

ಹಂಞ ಹೊತ್ತಿಗೆ ನಾರು ಏನೋ ನೆಂಪಾದವನ್ಹಂಗೆ "ಅಪ್ಪಾ, ಬಟ್ರ ಗುಡ್ಡೆನ ಹಲ್ಸಿನ ಹಣ್ಣ್ ಉಟ್ಟಲ್ಲಾ? ಅದ್ ಹಣ್ಣ್ ಆಗಿರೋಕು. ಅಬ್ಬ! ಗುಡ್ಡೆ ಪೂರ ಅದೇ ಪೊರ್‌ಮ್ಮಳ!"ಂತ ಹೇಳಿ ಅದರ

ರುಚಿ ನೆಂಪಾಗಿ ಅಂವನ ಬಾಯಿಂದ ನೀರ್ ಸಾ ಸುರ್‌ತ್. ಅಂವನ ಬಾಯಿಂದ ನೀ
ಸುರ್ದದ್ ಏನ್ ಚೋದ್ಯ ಅಲ್ಲ. ಹಲ್ಸಿನ ಹಣ್ಣ್ ಬುಡ್ಸಿಕೆಂತ ಕೊಯ್ಯಕನನೇ ಜೇನಿನ್ನಂಗೆ ಅ
ನೀರ್ ಅರ್ಯಕೆ ಉಟ್ಟು. ಅದ್ರ ತೋಳೆನೂ ಹಾಂಗೆ. ದಪ್ಪ. ಮಾಚುನ ಬಾಯಿಲಿ ಸಾ ನೀರ್ ಬಾ
ಅದರ ನುಂಗಿಕಂಡ್, ತಮ್ಮನ ಬಾಯಿಂದ ನೀರ್ ಅರ್ದದ್ದಕ್ಕೆ ನೆಗಾಡ್ತ್. ಆಗ ಅಂವ ಅದ
ತಮಾಷೆ ಮಾಡಿತ್ತಲ್ಲಾ- ಅದರ ಸೇಡ್ ತೀರ್ಸಿಕಂಬ ಹಾಂಗೆ. ಅಂವ ಅದಿಕ್ಕೆ ಒರ್‌ಂಗಿಸಿ ಚಾಳ್ಸಿ
ಕಳಲ ಹೇಳ್ತ್ "ನಾಳೆ ಸನ್ಯರ ಅಲ್ಲಾ? ಬಟ್ರ ಮನೆಗೆ ಹೋಗಿ ಕೇಳಿ, ಎರ್ಡ್ ಹಲ್ಸಿನ ಹ
ತಾಮೊ"ಂತ. ಮಕ್ಕಳಿಗೆ ಕುಸಿಯೋ ಕುಸಿ!

ಮಂಜ, ಸೊಸೆ, ಸೊಸೆ ಪಿಳ್ಳಿಕ್ಕ ಎಲ್ಲ ಸುತ್ತ ಕುದ್ದ್‌ಕಂಡ್, ಸೇರಿಕಂಡ್ ಮಾತಾಡುದ
ನೋಡುದು, ಕೇಳುದುಂತೇಳ್ರೆ ಹುಗ್ಗವ್ವಂಗೆ ಸೊರ್ಗ ಸುಕ. ಎಡೆಎಡೆಲಿ ಅದ್ ಸಾ ಒಂದೊಂ
ಮಾತ್ ಸೇರ್ಸಿಕಂಡ್ ಉಣದೇ ಕುದ್ದ್‌ಕಂಡ್ ನೋಡುದರ ನೋಡಿ, ಮಾಚು ಕುಸಾಲು ಮಾತಾಡಿಕ್ಕು
"ನಿಂಗೆ ನಮ್ಮ ಮಾತ್ ಕೇಳಿನೇ ಹೊಟ್ಟೆ ತುಂಬಿದೆನಾಂತ. ನಿನ್ನ ಚಟ್ಟೆಲಿ ಗಂಜಿ ಹಾಂಗೆ ಉಟ್ಟು"ಂ
ಆಗ ಹುಗ್ಗವ್ವ "ಹೂಂ, ಹೌದು"ಂತ ಬೊಚ್ಚು ಬಾಯಿ ಬುಟ್ಟು ಮತ್ತೆ ನೆಗಾಡಿಕುಟ್ಟು. ಹುಗ್ಗವ್ವ ಗಂ
ಇಕ್ಕಿಕಂಡರೂ ಉಂಬೊದು ಮಾತ್ರ ಎಲ್ಲೋವ್ವಕ್ಕೆ ಉಂಡು ಆದ ಮೇಲೆನೇ. ಅದ್ ಬೊಳ್ಳಿ
ಎಲ್ಲಾರ್ ಕೆಲ್ಸದ ಮನೆಗೆ ಹೋದಲ್ಲಿ ಏನಾರ್ ಹೊಟ್ಟೆಗೆ ಹಾಕಿಕಂಡ್ ಬಂದದೆ. ಹಾಂಗಾಗಿ ಅದಿ
ಹಸಿವು ಇರ್ತಿಲ್ಲೆ. ಗಂಜಿ ಇದ್ದರೆ ಗಂಜಿ, ಇಲ್ಲರೆ ತೆಳಿ ಕುಡ್ದ್ ಮಲ್ಗ್‌ತಿತ್.

ಇವೆಲ್ಲ ಉಂಬಕನ ದಾಸು ನಾಂಯಿ, ಕಳಲ ಅದಿಕ್ಕೆಂತ ಇಸಿದ ಹುಗ್ಗೆನ ನೋಡಿಕಂಡ
ಒಮ್ಮೊಮ್ಮೆ ಬಾಲ ಆಡ್ಸಿಕಂಡ್ ಇರ್ತಿತ್.

ಅಂದ್ ಮಾಯ್ಲು ಯಾರೋ ಕೊಟ್ಟ ಒಂದ್ ಗಡಿ ಹಲ್ಸಿನ ಹಣ್ಣ್ ತಂದಿತ್. ಒಳ
ಇಸಿಕನ "ಈಗ ಉಂಡ್ ಆತಲೇ. ಹಿಂಬೊತಿಗೆ ತಿಂಬಕೆ ಆತ್"ಂತ ಹೇಳ್ತ್ ಮಾಚುನ ನೋ
ಎಲ್ಲಾರ್ ತಿಂದರೆ ಮಾಚುನೇಂತ.

ಮಾಚುದು ಒಸಿ ದೊಡ್ಡ ಹೊಟ್ಟೆನೇ. ಬೊಳ್ಪಿಗೆ ಏನಾರ್ ಹಿಟ್ಟ್ ಮಾಡ್ದ್ ಒಳ್ದರೆ, ಹಿಂಬೊತ್
ಇರಲಿ ಎಂದ್ ತೆಗ್ದ್ ಇಸಿರೆ, ಅದ್ ಹಿಂಬೊತಿಗಾಕನ ಮಾಚುನ ಹೊಟ್ಟೆಲೇ. ಹಿಂದೆಂದ ಮಾತಾಡಿಕ
ಮಾಯ್ಲು, ಮಾಚುನ "ತಿನ್ಪಾಂಡಿ"ಂತನೇ ಹೇಳ್ತಿತ್. ಮಾಚು ಉಂಬೊಳಗೆ ಏನಾರ್ ಹೋದ
ಮಾಯ್ಲು ಸಾ ಒಟ್ಟಿಗೆನೇ ಹೋತಿತ್, ಬೇರೆ ಏನ್ ಇಲ್ಲರೂ ಬೆಲ್ಲ, ಕಾಯಿ ಇಂತದ್ದೇ ಏನಾ
ತಿಂದ್ ಬುಡುದೂಂತ. ಮಾಯ್ಲುಗೆ ಮಾಚು ಅಂದರೆ ಅಷ್ಟಕ್ಕಷ್ಟೇ. ಅದರ ಗೊಗ್ಗರೆ ಹಲ್ಲ್‌ಂದಾ
ನೋಡಿಕೆ ಅಷ್ಟ್ ಪೊರ್ಲು ಕಾಂಬತಿಲ್ಲೆ ಅದ್. ಅದಿಕ್ಕೋ ಏನೋ. ಅಪ್ಪ ಅವ್ವಂಗೆ ಸಾ ಸಣ್ಣದ
ಪೊರ್ಲು ಇರ್ವ ಮಕ್ಕಳ ಮೇಲೆನೇ ಹಂಞ ಪ್ರೀತಿ ಹೆಚ್ಚ್‌ಂತ ಕಂಡದೆ. ಅತ್ತಿತ್ತ ಹೋಕನ ಮ
ಪೊರ್ಲ್ ಇರ್ವ ಮಕ್ಕಳನೇ ತೋರ್ಸಿಕೆ ಇಷ್ಟ ಪಟ್ಟವೆ ಅಲ್ಲದೆ ಪೊರ್ಲು ಇಲ್ಲದವರ ಅಲ್ಲ. ಮಾಯ್ಲು
ಹೇಂಗೇ ಇದ್ದರೂ ಅಪ್ಪ ಕಳಲಂಗೆ ಮಾತ್ರ ಮಾಚು ಕೊಂಡಾಟದ ಮಗ.

ಹಿಂಬೊತ್ ಹಲ್ಸಿನ ಹಣ್ಣ್ ತಿಂದ್‌ದ್ದಾತ್. ಅವ್ವ, ಮಗಳ ಬತ್ತ ಮಿದ್ಯಕೆ ಕರ್ತ್. ಮಾ
ಮುಂದೆನೇ ಲೆಕ್ಕ ಹಾಕಿತ್. ಅವ್ವ ಬತ್ತ ಮಿದ್ಯಕೆ ಕರ್ದರೆ ನಾಳೆ ನೀರ್ ದೋಸೆ ಮಾಡುದಾದ
ಮಾತ್ರ ಒಪ್ಪೋಕುಂತ. ಹಾಂಗೆ ಹೇಳ್ತ್. ಮಾಯ್ಲು ಹೇಳ್ತ್ "ಯಾರಾರ್ ನೆಂಟ್ರ್ ಬಾಕನ ಮಾಡೊವೆ
ಮಗಾ"ಂತ. ಆಗ ಮಾಚು "ನೆಂಟ್ರ್ ಬಾಕನ ಮಾಡ್ರೆ ನಾವುಗೆ ಪಾಲ್ ಕಮ್ಮಿ ಆದೆ. ಅದಿಕ್ಕೇ ನಾ

ಮೋಸೆ ಮಾಡೊಮೊಂತ ಹೇಳ್ದು. ಮತ್ತೆ ನಾವುಗೆಂತ ಮಾಡ್ರೂ ನಂಗೆ ನಾಕ್ ದೋಸೆ ಕೊಟ್ಟೇ ಕೊಡೋಕು"ಂತ ಹೇಳ್ತ್. ಆಗ ಹುಗ್ಗವ್ವ ಹೇಳ್ತ್ "ಮಾಡ್ದ ದೋಸೆನ ಮಾರಿಕೆ ತೆಕಂಡ್ ಹೋದ್‌ಲ್ಲೆ. ನಾವೇ ಅಲ್ಲನ ತಿಂಬೋದು."

ಮಾಚು ಹೇಳ್ತ್ "ನಂಗೆ ನಾಕ್ ದೋಸೆ ಕೊಟ್ಟ್, ಒಳ್ದದರ ನೀ ತೆಕಂಡ್ ಹೋಗಿ ಮಾರ್ ಬೇಕಾರೆ. ನಂಗೇನೂ ಇಲ್ಲೆ"ಂತ.

ಅದರ ಮಾತ್ ಕೇಳಿ ಹುಗ್ಗವ್ವ ಪಕಪಕಾಂತ ನೆಗಾಡ್ತ್.

ಅಂತೂ ಅದರ ಹಠಕ್ಕೆ ಉಪಾಯಿಲ್ಲದೆ ಮೊರ್ದಿನ ನೀರ್ ದೋಸೆ ಮಾಡುದುಂತ ಒಪ್ಪಿಕಂಡ ಮೇಲೆ ಮಾಚು ಬತ್ತ ಮಿದ್ಯಕೆ ಒಣಿಕೆ ಹಿಡ್ತ್. ಅವ್ವ ಮಗ ಇಬ್ಬರು ಸೇರಿಕಂಡ್ ಬತ್ತ ಮಿದ್ದ್ ಅಕ್ಕಿ ಮಾಡ್ದೊ. ಬತ್ತ ಮಿದ್ಯಕೆ ಮುಡಿಗಟ್ಟೆ, ಕಳಸೆಗಟ್ಟೆ ಏನ್ ಇಲ್ಲೆ! ಬರೀ ನಾಕೈದ್ ಸೇರ್ ಮಾತ್ರ, ಒಂದ್ ಗಂಟೆಲೇ ಬತ್ತ, ಅಕ್ಕಿ ಆದೆ. ಮಿದ್ದ ಅಕ್ಕಿಂದ ಮಾಯ್ಲು ಹತ್ತ್ ಪುಂಡಿ ಅಕ್ಕಿನ ಅಂದ್‌ನ ಅಡ್ಡೆಗೆಂತೇಳಿ ಬೇರೆ ತೆಗ್ದ್ ಇಸಿ, ಒಳ್ದದರ ಮೊರ್ಣ್ಣನ ಸಣ್ಣ ಬಾಯೆನ ಮಡಕೆಲಿ ತುಂಬ್ಸಿ, ಅದರ ಬಾಯೆನ ಚೆಪ್ಪಿಲಿ ಮುಚ್ಚಿ ಇಸಿತ್.

ಸೂರಪ್ಪ ಗೌಡ್ರ ಮನೆಲಿ ಕೂಲಿ ಲೆಕ್ಕಲಿ ಕಳಲಂಗೆ ಮೂರ್, ಮಾಯ್ಲುಗೆ ಎರ್ಡ್ ಸೇರ್ ಬತ್ತ ಸಿಕ್ತಿತ್ತ್. ಅದರ ಅಂದಂದಿಗೆ ಅಕ್ಕಿ ಮಾಡದಿದ್ದರೆ ಹೊಟ್ಟೆಗೆ ಚಂಡಿ ಬಟ್ಟೆ ಕಟ್ಟಿ ಮಲ್ಗೊಕ್ಕಷ್ಟೇ. ಒಣ್‌ಂಗಿದ ಬತ್ತ ಮಿದ್ದ್ ಆದ ಕೂಡಲೆ ಮಾಯ್ಲು,

ಹಿಂದೆನ ದಿನದ ಕೂಲಿ ಬತ್ತ ಇದ್ದರೆ ಅದರ ಕಪ್ಪಾರಿಗೆ ಹಾಕಿ ಬೇಸಿದೆ. ಹಾಂಗೆ ಇಂದ್ ಸಾ ಅದಕೆ ಬೇಕಾದಷ್ಟ್ ನೀರ್‌ನ ಹೊಯ್ತ್. ಮೊರ್ದಿನ ಬೊಳ್ಪಿಗೆ ಕಪ್ಪಾರ್‌ಂದ ಬತ್ತ ತೆಗ್ದ್, ಕಿಚ್ಚ್ ಮಾಡಿ, ನೀರೆಡಿಲಿ ನೀರ್ ಹೊಯ್ದ್ ಇಸಿದ್ದ ಮಡ್ಕೆಗೆ ಈ ಬತ್ತನ ಹಾಕಿತ್. ಆ ಬತ್ತನ ಬೇಸಿಕೆ ಹಾಕಿಕನ ನರೆ, ಈಯರ್, ಬೊಳ್ಗಂಡೆ, ಅಲ್ಲರೆ ಗೆಣ್ಸ್‌ನ ಗೆಂಡೆ ಇದ್ದರೆ ಅದರ ಸಾ ಒಟ್ಟಿಗೆ ಬೆಯ್ಯಕೆ ಹಾಕ್ತಿತ್ತ್. ಬತ್ತಂದ ಹೊಗೆ ಎದ್ರಿಕನ ಗೆಡ್ಡೆ ಗೆಣ್ಸ್ ತೆಗ್ದ್ ಬತ್ತನ ಕಣ್ಣ್ ಕುಕ್ಕೆಗೆ ಹಾಕಿ, ನೀರ್ ಇಳ್ದ ಮೇಲೆ ಬೆಸೆಗೆ ಮೇಲೆ ಹಾಕಿ ಕೆಲ್ಸಕ್ಕೆ ಹೋತಿತ್ತ್. ಜಾಲ್‌ಲೇ ಒಣ್‌ಂಗಿಕೆ ಹಾಕಕಾಗಿತ್. ಹಾಳ್ ಕೋಳಿಗ ಬುಡಕೊಲೇ.

ಒಮ್ಮೊಮ್ಮೆ ಬೊಳ್ಪಿನ ಗಂಜಿಗೆ, ಮಿದ್ದ ಅಕ್ಕಿ ಇರದ ದಿನಗ ಇರ್‌ತಿದ್ದೊ. ಬೊಳ್ಪಿಗೆ ಏಳ್ ಗಂಟೆಗೆ ಕೆಲ್ಸಕ್ಕೆ ಹೋಕನ ಗಂಜಿ ಆಕು. ಆಗ ಮಾಯ್ಲು ಮಾಚುನ ಹಕ್ಕಲೆ ಕೋಳಿ ಕೂಂಗಿಕನ ಎದ್ರ್‌ಸಿ "ನೀ ಬತ್ತನ ಒರ್‌ಬೆಲ್ ಮಾಡಿಕೊಡು. ಮತ್ತೆ ಗುಳಿಲಿ ನಾನೇ ಮಿದ್ಯವೆ"ಂತ ಹೇಳ್ತಿತ್ತ್. ಮಾಚು "ತಿಂಬಕೆ ಕೊಡಿಕನ ಹಂಞ ಹೆಚ್ಚ್ ಕೊಡಿಕೆ ನಿಂಗೆ ಮನ್ಸ್ ಬಾದ್‌ಲ್ಲೆ. ಕೆಲ್ಸಕ್ಕಾಕನ ಮಾತ್ರ ಹಗ್ಲ್ ಇರ್ಲ್‌ಂತ ಇಲ್ಲೆ, ನಾನೇ ಬೇಕ್"ಂತ ಚುಚ್ಚಿ, ಎದ್ದ್ ಮೋರೆಗೆ ನೀರ್ ಹಾಕ್ಕಂಡ್, ಬತ್ತ ಮಿದ್ಯಕೆ ಹೊರ್ಡ್ತಿತ್ತ್.

ಮಾಚು ಹೇಳ್ದೇನ್ ಸುಳ್ಳಲ್ಲ. ಅದ್ ನಿಜಕ್ಕೆ ಸಾ ಒಳ್ಳೆ ಕೆಲಸಗಾರ್ತಿ. ಒಳಗೆ ಹೊರಗೆ ಯಾವ ಕೆಲ್ಸನೇ ಆಗಲೀ ಅದ್ ಮಾಡಿಕೆ ಹಿಂದೆ ಮುಂದೆ ನೋಡುವಂಥ ಜನನೇ ಅಲ್ಲ. ಅಪ್ಪ ಕಳಲಂಗಂತೂ ಅದ್ ಬಲಗೈ. ಅವ್ವ ಅದರ ಮೂಲೆಗೆ ಒಂದಿಸಿ ಇಸ್ಯುಟುಂತಳೋ ಏನೋ, ಅಪ್ಪ ಅದರ ಬಾಳ ಕೊಂಡಾಟಂದ ನೋಡ್ಕಣ್ತಿತ್ತ್. ಕೆಲೊವು ಕೆಲ್ಸಲಿ ಅದರ ಸಲಹೆಗಳ ಅಂವ ತೆಕಣ್ತಿತ್ತ್.

ಅವ್ವ ಅಪ್ಪ ಕೆಲ್ಸಕ್ಕೆ ಹೋದ ಮೇಲೆ ದಟಿಗೆಲಿ ಇದರ್ದೇ ಕಾರ್ಬಾರ್. ಬೊಳ್ಪುಗೆ ಅವ್ವಂ ಸಾಯ ಮಾಡ್ದೆ. ಅವ್ವ ಅಪ್ಪ ಕೆಲ್ಸಕ್ಕೆ ಹೋದ ಮೇಲೆ ತಂಗೆಕ್ಕಳ, ತಮ್ಮನ ಎದ್ರ್‌ಸಿ, ಮೋರೆ ತೊ ಮೇಲೆ ಇದ್ದದರ ತಿಂಬಕೆ ಕೊಟ್ಟು, ತಾನ್ ಗುಡ್ಸುವ ತೊಳೆವ ಕೆಲ್ಸ ಮಾಡಿ, ಬಿಸ್ಲ್ ಏರಿಕಂಡ ಬಾಕನ "ಇಂದ್ ನಾವು ಯಾವ ಗುಡ್ಡೆಗೆ ಹೋದು?"ಂತ ತಂಗೆ ತಮ್ಮಂದ್ರ ಕೇಳಿಕೆ ಉಟ್ಟು ಯಾವ ಗುಡ್ಡೆಲಿ ಯಾವ ಹಣ್ಣ್, ಯಾವ ಕಾಯಿ ಉಟ್ಟು, ಎಲ್ಲಿ ಹೋದರೆ ನರೆ, ಈಯರ ಬೊಳ್ಗಂಡೆ ಸಿಕ್ಕುದು? ಎಲ್ಲಿ ಜೇನ್ ಒಕ್ಕಲ್ ಉಟ್ಟು? ಎಲ್ಲಿ ಅಡಿಗೆಗೆ ಸೌಯ್ದೆ ಸಿಕ್ಕುದು ? ಇದರ ಲೆಕ್ಕ ಹಾಕಿ ಅಂದ್‌ಗೆ ಏನ್ ಬೇಕೋ, ಅದೆಲ್ಲಿ ಸಿಕ್ಕುದೋಂತ ಆ ಗುಡ್ಡೆ ಈ ಗುಡ್ಡೆಂತ ಅಲಚ ಮಾಡಿ, ಆ ಕಾಡ್, ಆ ಗುಡ್ಡೆಗೆ ಈ ಪಟ್ಟಾಂದ್ ಸವಾರಿ! ಇನ್ನ್ ಮಳ್ಗಾಲ್ದ ದಿನಗ ಆದರ ಅಳುಂಬ್ ಎಲ್ಲಿ ಇರ್ದುಂತ ಸಾ ಅದರ ತಲೆಲಿ ಇರ್ದು.

ಗ್ಯಾರ್ದ ಹಣ್ಣ್ ಕಾಲಲಿ ಅದರ ಬೀಜ, ಜಾಯಿಕಾಯಿ, ಸೀಗೆ ಕಾಯಿ, ಸೀಯೆಲೆ ಹೂ ಕಾಡ್ ಒಳ್ಳೆ ಮೆಣ್ಸ್ –ಇಂತ ದುಡ್ಡುನ ಮೂಲಗಳ ಅವು ಮರಿಯಕೇ ಇಲ್ಲೆ.

ಕಾಡಿಗೆ ಹೋಕನ ಯಾರ್‍ಯಾರ್ ಏನೇನ್ ಹಿಡ್ಕಂಡ್ ಹೋಕೂಂತ ಹೇಳ್ವ ಪಾಟ ಅ ಮುಂದೆನೇ ಆಗಿದ್ದದೆ. ಹಾಂಗೆ ಅವ್ಕವ್ಕೆ ಬೇಕಾದ್ದರ ಅವವು ಹಿಡ್ಕಂಡ್ ಹೊರ್ಪವೆ. ಮೊಟ್ಟಾ ಕುಂಞಿ ಕತ್ತಿ, ಕಡ್ಪತ್ತಿ, ಸಣ್ಣ ಚೀಲ, ಮೊಡ್ಚೀಲ ಮತ್ತೆ ಒಂದ್ ದೊಣ್ಣೆ. ಮಳ್ಗಾಲ ಆದ ಕಿಡಂಜೋಲು–ಇಷ್ಟ್, ಯಾವ್ದ್ ಯಾರ್ಗೆಂತ ಹೇಳೋಕುಂತ ಇಲ್ಲೆ. ಉಂಬಕೆ, ಕಿಚ್ಚ್ ಮಾಡಿ ಮತ್ತೆ ಸಂದರ್ಭ ಬಂದರೆ ಹಾಂವುನಂತ ಕಚ್ಚುವ ಪ್ರಾಣಿಗಳ ಕೊಲ್ಲಿಕೆ ಈ ಹತ್ಯಾರ್‌ಗ. ಒಮ್ಮೊ ಉಡ, ಹೊಳಿಂಕೆ, ಮೊಲದಂತ ತಿಂಬ ಪ್ರಾಣಿಗಳ ಬೇಟೆನ ಸಾ ಮಾಡ್ವೆ ಹಾಂಗೇನಾರ್ ಸಿಕ್ಕಿ ಅಂದರೆ ಎಲ್ಲೊಲ್ವ್ಕ ಕುಸಿನೇ– ಎರ್ಡ್ ದಿನ ಲಾಯ್ಕಲಿ ಉಂಬಕಲೆಂತ. ಕಾಡ್‌ಂದ ಬಾಕನ ಸೌ ಹೊರೆ ಮಾಚುಗೆ. ಬೇರೆ ಚಿಲ್ಲರೆ ಪಲ್ಲರೆ ಸಾಮನ್‌ಗ ಸಣ್ಣವ್ಕೆ. ಕಾಡ್‌ಲಿ ಜೇನೊಕ್ಕಲ್ ಹುಡ್ಕುದ ಅವರ್ದ್ ದೊಡ್ಡ ಕೆಲ್ಸನೇ. ಮಾಚುನೇ ಏನಾರ್ ಜೇನೊಕ್ಕಲ್ ಹುಡ್ಕಿತ್‌ಂತೇಳ್ರೆ, ಅದ್ ಯಾರಿಗ ಸಾ ಹೇಳಿಕಿಲ್ಲೆ. ಅಪ್ಪನ ಕೆಬಿಲಿ ಹಾಕಿ "ಶಾಬ್ಬಾಸ್" ಪಡ್ಯೋಕಲ್ಲಾ? ಯಾರಿಗಾರ್ ಪೆಟಗೆಗೆ ಜೇನೊಕ್ಕಲ ತುಂಬ್ಸಿ ಕೊಡೋಕುಂತೇಳ್ರೆ ಬೊಳ್ಪುಗೆ ಬೇಗ ಎದ್ದ್ ಅಪ್ಪನೊಟ್ಟಿಗೆ ಹೋದು ಅದೇ.

ಮಾಡಿಗೆ ಮುಳಿ ಹಾಕ್ವ ಕಾಲಲಿ, ಬೆದ್ರ್, ಉದ್ದುದ್ದದ ಮರದ ಕಣೆ, ಮನೆ ಕಟ್ಟ ಬೊಳ್ಳಿ {ಇಲ್ಲ್ ಬಳ್ಳ್} ಇದರೆಲ್ಲ ಅಪ್ಪನೊಟ್ಟಿಗೆ ಸೇರಿ ಕಾಡ್‌ಂದ ತರ್ತಿದ್ದೊ. ಮುಳಿಹುಲ್ಲ್‌ನ ಯಾರ್ದಾರ್ ಅಡ್ಕಲಿ ಬೆಳ್ದದರ ಕೇಳಿ ತರ್ತಿದ್ದೊ. ದಟಿಗೆ ಮತ್ತೆ ನೀರೆಡಿ ಕೊಟೆಗೆ ಸರಿಮಾಡಿ ದನಿಗಳ ತೋಟಂದ ಬಿದ್ದ ಕಮ್ಮುಂದ ಸಲಾಕೆ ಹಾಂಗೆ ಸೋಗೆನ ಅಲ್ಲರೆ ಚಾಳೆನ ಮಡಲ ತಂದ್, ಮಾಡ್, ಸಂಪಟ ಮಾಡ್ತಿದ್ದೊ.

ಈ ಮಕ್ಕ ಕಾಡಿಗೆ ಹೋಕನ ಸಾಲೆಗೆ ಹೋವ ಕೆಲೊವ್ವು ಗೂಡೆಗ, ಹೈದಂಗ ಇವ ಕಾಂಬಕೆ ಸಿಕ್ತಿದ್ದೊ. ಅವು ಇವ್ಕೆ ಎದ್ರ್‌ಲಿ ಅಲ್ಲರೆ ಒಟ್ಟೊಟ್ಟಿಗೆ ಸಿಕ್ಕಿರೆ, ಇವು ತಲೆ ಬೊಗ್ಗಿಸಿಕಂಡ ದೂರಂದ ಹೋಗ್ತಿದ್ದೊ. ಅವು, ಇವರ ದಾಟಿ ಮುಂದೆ ಹೋದ ಮೇಲೆ, ಇವು ತಿರ್ಗಿ ನಿತ ಅವರ ಬಟ್ಟೆಬರೆ, ಅವರ ಪುಸ್ತಕದ ಚೀಲ, ಅವರ ಕೈಲಿದ್ದ ಬುತ್ತಿ, ಅವು ತಲೆ ಬಾಚಿದ ರೀತಿ ಜೆಡೆ ಮಾಡಿದ ಕ್ರಮ, ಮುಡ್ದ ಹೂ– ಇದರೆಲ್ಲ ನೋಡಿ, ಆ ಮೇಲೆ ಮಾಚು "ಇವು ಹಿಂದ ಜಲ್ಮಲಿ ಬಾರಿ ಪುಣ್ಯ ಮಾಡಿರೋಕು. ಹಾಂಗಾಗಿ ಅವು ಪುಣ್ಯವಂತರ ಮಕ್ಕ ಆಗಿ ಹುಟ್ಟ್ಯೊ ನಮ್ಮ ಹಣೆಲಿ ದೇವ್ರು ಇದರೆಲ್ಲ ಬರ್ತಿಲ್ಲೆ"ಂತ ಹೇಳ್ತಿತ್ತ್. ಆ ಮೇಲೆ ಮಾಚುನೇ ಕೇಳ್ತಿತ್ತ್. "ಅಲ್ಲಾ ಈ ಸಾಲೆ ಸಾಲೆಂತ ಹೇಳ್ವೆ ಅಲ್ಲಾ? ಸಾಲೆ ಅಂದರೆ ಎಂತ? ಅಲ್ಲಿ ಅವ್ಕೆ ಎಂತ ಕಲ್ಸ್‌ವೆ? ಕಲ್ತ

ಎಂತ ಆದೆ?"ಂತ ತಮ್ಮ ತಂಗೆಕ್ಕಳ ಹಕ್ಕಲೆ ಕೇಳ್ರೆ ಅವು ನೆಗಾಡಿ, "ಅಲ್ಲಯಾ, ನೀನೇ ನಾವುಗಿಂತ ದೊಡ್ಡವ್ನು. ನಿಂಗೆ ಗೊತ್ತಿಲ್ಲದ್ದ್ ನಾವುಗೆ ಎಂತ ಗೊತ್ತಾದೆ?"ಂತ ಹೇಳ್ತಿದ್ದೊ. ಆಗ ಅದ್ ಸಾ ನೆಗಾಡ್ತಿತ್ತ್.

ಕಾಡ್‌ನ ದಾರಿಲಿ ಅವು ಆಟ ಆಡ್ತಿದ್ದೊ. ಹೆಣ್ಣ್ ಗಂಡ್ ಭೇದ ಇಲ್ಲದೆ ಅವು ಓಡುವ, ಒಡಿವ, ಹಾರುವ, ಅಡ್‌ಂಗುವ, ಮರ ಹತ್ತುವ, ಮರದ ಬೀಳ್‌ಲಿ ನೇಲುವ-ಇಂತದೆಲ್ಲ ಆಟ ಆಡ್ತಿದ್ದೊ. ಒಮ್ಮೆ ನಾರು ಅಡಿಲಿ ದೊಡ್ಡ ಗುಂಡಿ ಇರ್‍ವ ಮರಕ್ಕೆ ಹತ್ತಿ ನೇಲ್ತಿತ್ತ್. ಮಾಚುಗೇ ಅಂವ ಬಿದ್ದರೆಂತ ಜುವ್ವ ಹೋದಂಗೆ ಆತ್. ಅದ್ ಕೊಂಡಾಟಲಿ, ಬೊಯ್ದ್- ಹೇಂಗೆ ಹೇಳ್ರೂ ಅಂವ ಇಳಿವ ಅಂದಾಜೇ ಇಲ್ಲೆ. ಮಾಚುಗೆ ಹೆದ್ರಿಕೆ ಆಗಿ ಬೊಳ್ತ್. ಅದ್ ಗುಂಡಿನ ಹಕ್ಕಲೆ ಬಂದ್ ನಿತ್ತ್ ಹೇಳ್ತ್ "ನೀ ಇಳ್ಯದಿದ್ದರೆ ನಾ ಗುಂಡಿಗೆ ಹಾರ್‍ನೆ. ಆಗ ನಿನ್ನ ಕುಸಾಲ್ ಎಲ್ಲ ನೆಟ್ಟಂಗೆ ಆದೆ"ಂತ. ನಾರುಗೆ ನಿಜ್ವಾ ಹೆದ್ರಿಕೆ ಆತ್. "ನೀ ಎಲ್ಲಾರ್ ಹಾರ್‍ಬೇಡ ಮಾರಾಯ್ತಿ. ನಾ ಕೆಳಗೆ ಬಂದೆ"ಂತ ಅಂವ ಗೆಲ್ಲ್‌ನ ಬುಡಕ್ಕೆ ಬಂದ್ ಮರಂದ ಇಳ್ತ್. ಇಳ್ದವನ ಹಕ್ಕಲೆ ಮಾಚು ಹೇಳ್ತ್ "ಅಲ್ಲಯಾ, ನಿಂಗೆ ಏನಾರ್ ಹೆಚ್ಚ್ ಕಮ್ಮಿ ಆದರೆ ನನ್ನ ಅಲ್ಲನಾ ಕೇಳುದು. ನೀ ಎಂಥ ಮಾಡಿಕಂಡ್ ಇದ್ದ?ಂತ. ಹೀಂಗೆಲ್ಲ ಮಾಡುದಾದರೆ ನೀ ನನ್ನ ಒಟ್ಟಿಗೆ ಬಾದೇ ಬೇಡ. ನೀ ಒಬ್ಬನೇ ಎಲ್ಲಿಗೆ ಬೇಕಾರ್ ಹೋಗು, ನಂಗೇನ್ ಇಲ್ಲೆ"ಂತ ಹೇಳ್ತ್.

ಅಂವ ಸೊಲ್ಪ ಪೋಕ್ರನೇ. ಒಬ್ಬನೇ ಮಂಜಂತ ಅಂವ ಎಂಥ ಮಾಡ್ರೂ ಯಾರ್ ಸಾ ಏನ್ ಹೇಳ್ತ್‌ತಿತ್ಲೆ. ಆ ಕೊಂಡಾಟಂದಾಗಿ ಇಂತ ಬಂಡಾಟ ಆಗ್ತಿತ್ತ್. ಹಣ್ಣ್‌ನ ಕಾಲಲಿ ಕಲ್ಲ್ ಹೊಡ್ದ್ ಹಣ್ಣ್ ಉದುರ್‍ಸುದುಂತೇಳ್ರೆ ಅವಂಗೆ ಬಾರಿ ಕುಸಿ. ಹೀಂಗೆ ಕಲ್ಲ್ ಹೊಡ್ಯಕನ ಒಮ್ಮೆ ಸಣ್ಣ ತಂಗೆ ಮಿಣ್ಕಿನ ತಲೆಗೆ ಕಲ್ಲ್ ಬಿದ್ದಿತ್ತ್. ಪುಣ್ಯಕ್ಕೆ ದೊಡ್ಡ ಗಾಯ ಆಗಿತ್ಲೆ. ಮಾಚು, ಇದರ ದಟಿಗೆಲಿ ಯಾರ್ ಸಾ ಹೇಳಿಕಾಗದ್‌ಂತ ಹೇಳಿ, ಗಾಯಕ್ಕೆ ಬೇಲಿ ಹರ್‍ಬೆದ್ ರಸ ಹಾಕಿತ್ತ್.

ನಾರು ಉರ್ಲ್ ಅಲ್ಲರೆ ಅಡ್‌ಚಿಲ್ ಹಾಕಿ ಕೇಂಕಾಣ್, ತೆಕ್ಕಟೆ ಹಿಡ್ದ್ ತಂದ್ ಹುಗ್ಗವ್ವಂಗೆ ತೋರ್‍ಸ್ತಿತ್ತ್. ಆಗೆಲ್ಲ ಹುಗ್ಗವ್ವಂಗೆ ಪಿಳ್ಳಿನ ಮೇಲೆ ಕೊಂಡಾಟ ಆಗಿ "ಹೌದ ಮಂಜ, ನೀನೇ ಹಿಡ್ದನಾ"ಂತ ಗಾಳಿ ಹಾಕಿಕೆ ಇತ್ತ್. ಅಷ್ಟ್ ಹೇಳ್ರೆ ಸಾಕ್, ಇಂವ ದೊಡ್ಡ ಯುದ್ದಲಿ ಗೆದ್ದ ಬಂದವನ್ಹಂಗೆ ಬಿಸ್ರಾತಿಕೆ ತೋರ್‍ಸ್ತಿತ್ತ್.

ಹಳೆ ದಿನಗಳ ನೆಂಪುಲಿ ಮಾಚುನ ಕಣ್ಣ್ ನೀರ್‍ತುಂಬಿ ಮಂಜ್ ಮಂಜಾತ್. ಅವಳ ಮುದ್ದ್ ತಮ್ಮ ತೀರಿ ಹೋಗಿ ಎಷ್ಟೋ ಕಾಲ ಆಗುಟು. ಅಂವನ ನೆಂಪಾಕನ ಅಂವ ತಂದ್ ಕೊಟ್ಟಿದ್ದ ಆ ಪೊರ್ಲುನ ಸೀರೆನ ಪೆಟಗೆಂದ ತೆಗ್ದ್ ಅಪ್ಪಿಕಂಡ್ , ಅಂವನನೇ ಅಪ್ಪಿಕಂಡ ಹಾಂಗೆ ನೆನ್ಸ್ದ್ ನೆನ್ಸ್ದ್ ಬಿಕ್ಕ್‌ತಿತ್ತ್. ಆ ದಿನಗಳ ನೆಂಪು ಮಾಡಿಕನ ಕಾಲ ನನ್ನ ಕೈಂದ ಚೆನ್ನದ ಗಂಟ್‌ನ ಎಳ್ಕಂಡ್
ನನ್ನ ಬಿಕಾರಿ ಮಾಡಿ ಬುಟ್ಟತ್‌ಂತ ಅದಿಕೆ ಆತಿತ್ತ್. "ನಿನ್ನ ಇಸಿಕಂಬಕೆ ನಾವೂ ಪಡ್ದ್ ಬರಕಲೆ"ಂತ ಮನ್ಸ್‌ಲೇ ಹೇಳಿಕಂಡ್ ಆ ಸೀರೆಲೇ ಕಣ್ಣ್ ಒರ್‍ಸಿಕೊಳ್‌ಂಬತಿತ್ತ್. ಅದರಷ್ಟಕ್ಕೇ ಹೀಂಗೆ ನರ್‍ಕಿಕಂಡ್, ಮೊರ್‍ಟ್ಕಂಡ್ ಇರ್‍ವ ಅತ್ತೆನ ನೋಡಿ ಯಾಕೆ ಏನ್‌ಂತ ಗೊತ್ತಿಲ್ಲದ ಸೊಸೆ "ಬೊಚ್ಚಿರೆ ಅಲ್ಲೇ ಮನ್ನಣಿ ಅತ್ತೆ, ಸುಮ್ಮನೆ ದೂಂಗಿಕಂಡ್ ಕುದ್ರುದು ಯಾಕೆ?"ಂತ ಹೇಳ್ತ್. ಆ ಸೊರ ಕೇಳಿ ಯಾವ್ದೋ ಲೋಕಂದ ಕೆಳಗೆ ಬಿದ್ದವಳ ಹಾಂಗೆ "ಹಾಂ ಹೂಂ"ಂತ ಹೇಳಿ, ಮತ್ತೆ ನೆಂಪುನ ಬೇರೆ ಲೋಕಕ್ಕೆ ಜಾಲ್ತಿತ್ತ್. ❐

ಹಾಳೆ 3.
ಸಾಲೆಗೆ ಹೋದ್ ಯಾರ್?

ಸೂರಪ್ಪ ಗೌಡ್ರಲ್ಲಿ ಕೆಲ್ಸ ಇಲ್ಲದ ದಿನ ಕಳಲ ಬೇರೆ ಮನೆಗಳಿಗೆ ಕೆಲ್ಸಕೆ ಹೋತಿತ್
ಹಾಂಗೆ ಒಮ್ಮೆ ಚಿನ್ನಪ್ಪ ಮಾಸ್ಟ್ರ ಮನೆಗೆ ಹೋಗಿತ್ತ್. ಅವು ಅವನ ಹಕ್ಕಲೆ "ಅಲ್ಲಯಾ ಕಳಲ, ನಿ
ನಿನ್ನ ಆ ನಾಕ್ ಮಕ್ಕಳ ಕಾಡ್‌ಲಿ ತಿರ್ಗಿಕೆ ಕಳ್ಸಿಯಲೇ. ಒಬ್ಬನ ಆದರೂ ಶಾಲೆಗೆ ಕಳ್ಸಕಾಗಿತ್ತಲೇ"ಂ
ಹೇಳ್ದೊ. ಅದಕ್ಕೆ ಅಂವ ಕೇಳ್ತ್ "ನಾವು ಕೆಳಜಾತಿಯವು. ನಮ್ಮ ಮಕ್ಕ ಸಾಲೆಗೆ ಹೋದರೆ ಸಾಲೆ
ಮೈಲಿಗೆ ಆದ್ಲೆನಾ?" ಚಿನ್ನಪ್ಪ ಮಾಸ್ಟ್ರ ಗಟ್ಟಿ ನೆಗಾಡ್ದೊ. "ಇಂದ ಕಳಲ, ಶಾಲೆಂತ ಹೇಳ್ರೆ ಒಂದ
ಕಲ್ಲ್ ಮೊಣ್ಣ್‌ಲಿ ಮಾಡ್ದ ಕಟ್ಟಡ. ಅದ್ ಸರಕಾರದ್ದ್. ಸರಕಾರ ಎಲ್ಲೊಲ್ವೆಂತ ಕಟ್ಟಿಸಿದ್ದ್. ಅದಿ
ಮೈಲಿಗೆ ಇಲ್ಲೆ. ಆದರೆ ಅಲ್ಲಿಗೆ ಮೇಲ್ಜಾತಿ ಮಕ್ಕ ಸಾ ಬಂದವೆ. ಅವ್ಕೆ ಒಂದ್ ನಮೂನೆ ಆದ
ಅದಿಕ್ಕೆ ಅವರ್‌ಂದ ದೂರ ಕುದ್ದರೆ ಆತಲೆ. ಹಾಂಗೆ ನಾವು ಮಾಸ್ಟ್ರಗ ಸಾ ಒಳೊಲೇ. ಅಂತದ
ಎಲ್ಲಾ ನಾವು ನೋಡಿಕಂಡವೆ."ಂತ ಹೇಳ್ದೊ. ಅವು ಹಾಂಗೆ ಹೇಳಿರೂ ಸಾ ಅವಂಗೆ ಮಕ್ಕ
ಶಾಲೆಗೆ ಕಳ್ಸುವಸ್ಟ್ ಎದೆ ಗಟ್ಟಿ ಇತ್ತ್‌ಲೆ. ಇವೇನೋ ಸಾಲೆಗೆ ಕಳ್ಸ್‌ಂತ ಹೇಳ್ವೆ, ಸಾಲೆಗೆ ಕಳ್ಸಿ
ಮೇಲೆ ಒಂದಕ್ಕೊಂದ್ ಆದರೆ ನಾವುಗೆ ಯಾರ್ ಒಳೊ?. ನಮ್ಮಂತವ್ಕೆ ಅದೊಂದ್ ಕೈ
ಎಟಕದ ಕನಸ್‌ಂತ ಸುಮ್ಮನಿತ್ತ್.

ಒಂದ್ ದಿನ ಅಂವ ಪೇಟೆಗೆ ಹೋಕನ ದಾರಿಲಿ ಕೊಂಕಣಿ ಮಾಸ್ಟ್ರ ಸಿಕ್ಕಿದೊ. ಅವ
ಹಂಙ್ಞಾ ಜೋರ್‌ಲೇ ಹೇಳ್ದೊ. "ಹೌದ ಕಳಲ, ನಿಂಗೆ ಸುಮಾರ್ ಸರ್ತಿ ಹೇಳ್ದೆ. ನಿನ್ನ ಮಕ್ಕಳ
ಒಬ್ಬನ ಆದರೂ ಶಾಲೆಗೆ ಕಳ್ಸ್‌ಂತ. ಈಗ ನಿಂಗೆ ವಿದ್ಯೆನ ಬೆಲೆ ಗೊತ್ತಿಲ್ಲೆ. ಮುಂದೆ ಗೊತ್ತಾ
ಉಟ್ಟು– ನಾವುಗೆ ವಿದ್ಯೆ ಎಷ್ಟ್ ಅಗತ್ಯಂತ. ಕಾರ್ತಿಂಗ ಹಿಡಿಯಕನ ಮನೆಗೊಮ್ಮೆ ಬಾ. ಮಕ್ಕ
ಹಳೆ ಪುಸ್ತಕಗ ಇದ್ದರೆ ತೆಗ್ದ್ ಇಸಿನೆ"ಂತ ಹೇಳ್ದ್ ಅವಂಗೆ ಚುಚ್ಚು ಮದ್ದಿನ ಹಾಂಗೆ ಸೆರಿ ನಾಟಿತ್
" ಆತ್ ಒಡೆಯಾ, ಒಬ್ಬನಾರ್ ಈ ಕಾಲ ನಾ ಸಾಲೆಗೆ ಕಳ್ಸಿನೆ"ಂತ ಹೇಳ್ತ್.

ಆ ದಿನ ಕತ್ತಲೆ ಉಂಬಕನ, ಇಬ್ಬರ್ ಮಾಸ್ಟ್ರಗ ಹೇಳ್‌ದರ ಹೇಳ್ತ್. ಕಾಡಿಗೆ ಹೋಕನ
ಸಾಲೆಗೆ ಹೋವ ಮಕ್ಕಳ ನೋಡಿ ಮಾಚುನ ಮನ್ಸ್‌ಲಿ "ನಾವೂ ಶಾಲೆಗೆ ಹೋವ ಹಾಂಗಿದ್ದರೆ"ಂತ
ಹೇಳ್ವಂತದ್ದ್ ಎಷ್ಟ್ ಸರ್ತಿ ಮನ್ಸ್‌ಲಿ ಬಂದ್‌ಟೋ ಏನೋ? ಅವಳ ಪಾಲಿಗೆ "ಸಾಲೆಂತೇ
ಅದೊಂದ್ ದೇವ ಲೋಕ. ಪುಣ್ಯ ಮಾಡ್ದವು ಮಾತ್ರ ಅಲ್ಲಿಗೆ ಹೋದು"ಂತ ಆಗಿತ್ತ್. ಅಲ್ಲ
ಅವರ ಜಾತಿ, ಕಷ್ಟ, ಬಡತನ ಎಲ್ಲ ಗೊತ್ತಿದ್ದರಿಂದ ಸಾಲೆಂತ ಹೇಳ್ವ ಆಲಚನೆನ ಅದ್ ಮನ್ಸ್‌ಂ
ಹೊಡ್ದ್ ಓಡ್ಸಿ ಬುಟ್ಟಿತ್ತ್. ಇಂದ್ ಅಪ್ಪನ ಮಾತ್‌ಲಿ ನಾವ್ ಸಾನ್ ಸಾಲೆಗೆ ಹೋಕ್‌ಂ
ಹೇಳುದರ ಕೇಳಿ ಅದರ ಮೈ ಅಕ್ಕಿ ಹೊಡ್ತ್. ಸಾಲೆಂತ ಹೇಳ್ವ ಕನ್ಸ್ ನಾವುಗೂ ಎಟ್ಕವಂತದ್ದೆಂ
ಕುಸಿ ಆತ್. ಆ ಕುಸಿಲೇ "ಹಾಂಗಾರೆ ನಾನ್ ಸಾಲೆಗೆ ಹೋಕಾ?"ಂತ ಕೇಳ್ತ್.

ಮಾಚುನ ಹುಗ್ಗವ್ವ, ಹತ್ತ್ ಮನೆಗೆ ಕೆಲ್ಸಕ್ಕೆ ಹೋಗಿ ಗೊತ್ತಿದ್ದದ್. ಇವರ ಮಾತ್‌ಗ
ಕೇಳಿಕಂಡ್, ಎಲಡಿಕೆ ಗುದ್ದ್‌ತಿದ್ದದ್ ಗುದ್ದುದರ ನಿಲ್ಸಿ, ಹೇಳ್ತ್ "ನೀವೆಲ್ಲಾ ಸಾಲೆಗೆ ಹೋದು

ಒಳ್ಳದೇ. ಆದರೆ ಇಲ್ಲಿ ಮುಟ್ಟ ಈ ಊರ್‍ಲಿ ನಮ್ಮವು ಯಾರೂ ಸಾಲೆ ಮೆಟ್ಲ್ ಸಾನ್ ಹತ್ತಿತಿಲ್ಲೆ. ಸಾಲೆಗೆ ಹೋದರೆ ಮೇಲ್ಜಾತಿಯೊ್‌ವು ಯಾರೂ ನಿಮ್ಮ ಮುಟ್ಟುದ್ಲೆ. ನೀವು ಸಾಲೆ ಹೊರಗೇ ಕುದ್ರೊಕಾದ್. ಮತ್ತೆ ಸಾಲೆಗೆ ಹೋದಂದರೆ ಹೀಂಗೆ ತುಂಡು ಬಟ್ಟೆ, ಕೋಮಣಲಿ ಹೋದಲ್ಲ. ಹೈದಂಗ ಅಂಗಿ ಚಡ್ಡಿ, ಗೂಡೆಗ ಲಂಗ ರೌಕೆ ಹಾಕೋಕು. ಅಷ್ಟೇ ಅಲ್ಲ, ಚೀಲ, ಪುಸ್ತಕ, ಸಿಲೇಟ್, ಕಡ್ಡಿ ಎಲ್ಲಾ ಬೇಕು. ನೀವು ನಾಕ್ ಜೆನಕ್ಕೆ ಇಷ್ಟೆಲ್ಲ ಮಾಡಿಕೆ ನಮ್ಮಂತವ್ಕೆ ಅದ್, ಆವ ಹೋವ ಪಂಚಾತಿಕೆನಾ? ಸಾಲೆಗೆ ಎಲ್ಲೊ್‌ವು ಹೋಕೆ ಸುರು ಮಾಡ್ರೆ, ಬೇರೆ ಕೆಲ್ಸಗಳ ಇಲ್ಲಿ ಯಾರ್ ಮಾಡುದು?"ಂತ ಹೇಳಿ ಮತ್ತೆ ಎಲಡಿಕೆ ಗುದ್ದಿಕೆ ಸುರು ಮಾಡ್ತ್.

ಹುಗ್ಗವ್ವ ಲಂಗ ರೌಕೆಂತ ಹೇಳಿಕನ ಮಾಚು ಅದ್ ಹಾಕಿಕಂಡ ಅರ್ವೆನ ಒಮ್ಮೆ ನೋಡಿಕಂಡತ್. ಹರ್ದ, ಮಾಸಿದ ಕಿರ್‍ಗೆಗೆ, ಹರ್ದಲ್ಲಿ ಗಂಟ್ ಹಾಕಿಕಂಡಿತ್ತ್. ಯಾರೋ ಬಿಸಾಕಿದ್ದ ದೊಗಳೆ, ಒಂದೂ ಗುಬ್ಬಿ ಇಲ್ಲದ ರೌಕೆಗೆ ಎದ್ರ್ ಒಂದ್ ಗಂಟ್ ಹಾಕಿ, ಹಾಕಿಕಂಡಿತ್ತ್. ಯಾರೋ ಬಿಸಾಕಿದ್ದ ಆ ರೌಕೆ ಮಣ್ಣ್‌ಲಿ ಮುದ್ದೆ ಆಗಿ ಬಿದ್ದಿತ್ತ್. ಅದ್ ಸಿಕ್ಕಿಕನ ಮಾಚು ದೇವ್ರ ದಯೆಯಿಂದಳೇ ನಂಗೆ ಇದ್ ಸಿಕ್ತ್‌ಂತ ಕುಸಿ ಪಟ್ಟಿತ್ತ್.
ಆ ಮೇಲೆ ಹಳ್ಳಕ್ಕೆ ಹೋಗಿ ಲಾಯ್ಕ ನರ್‌ವೋಳು ಕಾಯಿ ಗುದ್ದಿ ಹಾಕಿ ಅದರ ನೊರೆಲಿ ಆ ಮಣ್ಣ್ ರೌಕೆನ, ಕಲ್ಲ್‌ಲಿ ತಿಕ್ಕಿ, ತೊಳ್ದೂ ತೊಳ್ದೂ ಪೊರ್ಲ್ ಆದಮೇಲೆ ಒಣ್‌ಂಗಿಸಿ ಹಳ್ಳಂದ ಬಾಕನನೇ ಅದರ ಹಾಕ್ಕಂಡ್ ಬಂದ್, ಹುಗ್ಗವ್ವಂಗೆ ತೋರ್ಸಿತ್. ಅದಕ್ಕೆ ಇದ್ದದ್ದ್ ಒಂದೇ ಕಿರ್‍ಗೆ ಮತ್ತೆ ಅದೇ ಒಂದ್ ರೌಕೆ. ಪಗರ್‍ಸಿಕೆ ಬೇರೆ ಬಟ್ಟೆ ಇಲ್ಲದ್ದಕ್ಕೆ, ಇರ್‍ಳ್ ಮೀಯಕನ ಅದರ ತೊಳ್‌ದ್ ಒಣ್‌ಂಗಿಕೆ ಹಾಕಿ, ಅವ್ವಂದ್ ಚೆಲ್ಲ್ ತುಂಡು ಅರ್ವೆನ ಉಟ್ಟ್‌ಕಂಡ್ ಮಲ್ಗಿ, ಬೊಳ್ಪಿಗೆ ಒಣ್‌ಂಗಿರೂ ಒಣ್‌ಂಗದಿದ್ದರೂ ಅದರ್ನೇ ಹಾಕ್‌ಕಣ್‌ತಿತ್ತ್. ಎಷ್ಟೋ ಸರ್ತಿ ಅದ್, ನಾ ನನ್ನ ಬೊ್‌ದ್ಕ್‌ಲಿ ಹೊಸತ್, ಪೊರ್ಲ್‌ದ್ ಲಂಗ ರೌಕೆ ಹಾಕಿಕೆ ಉಟ್ಟಾಂತ ಗೇನ ಮಾಡ್ದ್ ಸಾನ್ ಇತ್ತ್.

ಹುಗ್ಗವ್ವ ಮಾತಾಡಿಕನ ಮೇಲ್ಜಾತಿಯೊ್‌ವುಂತ ಹೇಳ್ದರ ಕೇಳಿ ಮಾಚು ಕೇಳ್ತ್ "ಮೇಲ್ಜಾತಿಯೊ್‌ವು ಅಂದರೆ ಯಾರ್? ಅವು ಮೇಲ್ಜಾತಿ ಆದದ್ದ್ ಹೇಂಗೆ?".

ಗುದ್ದಿದ ಎಲೆಡಿಕೆನ ಐದೂ ಬೆರ್ಳ್‌ನ ಕೊಡಿ ಸೇರ್ಸಿ, ಅಲ್ಲೇ ಮುದ್ದೆ ಮಾಡಿ ಬಾಯಿಗೆ ಹಾಕ್ಕಂಡ್, ಹುಗ್ಗವ್ವ ದೊಡ್ಡಕೊಂದ್ ಉಸ್ರ್ ಎಳ್ಕಂಡ್ ಹೇಳ್ತ್ "ಅದ್ ನಾವ್ಯಾರೂ ಮಾಡ್ದಲ್ಲ. ಬಾರಿ ಹಿಂದನ ಬುದ್ದಿವಂತರೋ, ಬುದ್ದಿ ಇಲ್ಲದೊ್‌ವೋ, ಇಂತಿಂತ ಜೆನಗ ಇಂತಿಂತ ಕೆಲ್ಸ ಮಾಡೋಕುಂತ ನಿಗದಿ ಮಾಡ್ದೊಗಡ. ಒಳ್ಳ ಒಳ್ಳ ಕೆಲ್ಸಗಳ ಅವು ಇಸಿಕಂಡ್ ನಾವುಗೆ ಬೇಡಾದ ಕೆಲ್ಸ ಹಂಚಿದೊಗಡ. ಮೇಲ್ಜಾತಿಯವ್ರ ಬಿಟ್ಟ ಚಾಕಿರಿ ಮಾಡೂದು ನಾವುಗೆ ಆತ್ ಗಡ. ಅಂದ್‌ಂದ ಇಲ್ಲಿ ಮುಟ್ಟ ನಮ್ಮ ಹಣೆಬರಲಿ ಇದೇ ಆತ್. ನಾವ್‌ಗೆ ಮನೆ ಇಲ್ಲೆ, ಹಾಕಿಕೆ ಅರ್ವೆ ಇಲ್ಲೆ, ಉಂಬಕೆ ಇಲ್ಲೆ, ಆಸ್ತಿ ಇಲ್ಲೆ–ಏನೂ ಇಲ್ಲೆ. ಆ ಮೇಲ್ಜಾತಿಯವ್ರಂದ ಉಗ್ಸಿಕಂಡ್, ಅವು ಕಾಲ್‌ಲಿ ತೋರ್ಸಿದರ ತಲೆ ಮೇಲೆ ಹೊತ್ತ್‌ಕಂಡ್, ಮೂಂಗ್‌ಗೆ ಕವ್ವೆ ಕಟ್ಟಿಕಂಡ್ ದುಡಿಯೊದೇ ಆತ್. ಊರ್‌ಂದ ಹೊರಗೆ ಇದ್ದ್‌ಕಂಡ್ ಅವರ ಕಣ್ಣ್‌ಂದ ದೂರಾಗಿ, ಮುಟ್ಟಿಕಾಗದೊ್‌ವುಂತ ಹೇಳ್ಸಿಕಂಡ್ ಬೊ್‌ದ್ಕುದಾತ್." ಹೀಂಗೆ ಹೇಳಿಕಂಡ್ ಇದ್ದ ಹಾಂಗೆ ಹುಗ್ಗವ್ವನ ಸೊರ ಗರಗರ ಆತ್. ಅದ್ ಪಾಪ, ಏನೇನ್ ಅನ್ಬವಿಸಿತ್ತೋ ಏನೋ? ಮತ್ತೆ

ಹೇಳ್ತ್ "ಬಲಿಂತ ಹೇಳ್ವ ರಾಜನ ಪಾತಾಳಕ್ಕೆ ನೂಕಿದೊಗಡ. ನಮ್ಮ ಸಾ ಹಾಂಗೆ ತಗ್ಗ್‌ಸಿ ಬೊಗ್ಗ್‌ಸಿ ಪಾತಾಳಕ್ಕೆ ನೂಕಿದೊ, ಆ ಮೇಲ್ಜಾತಿಯೊವು. ಇಲ್ಲಿ ಮುಟ್ಟ ನಮ್ಮ ಮೇಲೆ ಅವ್ಕೆ ದಯೆ ಮಾಯೆಂತ ಏನೂ ಇಲ್ಲೆ. ನಮ್ಮ ಎಷ್ಟ್ ಹಿಂಡಿಕೆ ಆದೋ, ಅಷ್ಟ್ ಹಿಂಡ್‌ವೆ. ಅವರ ತಲೆಲಿ ಅವು ದುಡ್ಸಿಕೆ, ನಾವು ದುಡಿಯಕೆ ಇದ್ದೊ್‌ವುಂತ ಆಗುಟು. ಅದಾದರೆ ಸಾಯಲಿ, ನಮ್ಮ, ಅವು ಸಾಂಕುವ ನಾಯಿಂದ ಸಾ ಕಡೆ ಆಗಿ ನೋಡ್ತೆ ಅಲ್ಲಾ? ಬುದ್ಧಿವಂತಿಕೆ ಇದ್ದೊ್‌ವ್ಕೆ ಮನ್ಸೊತ್ವ ಹೋದೆಂತ ಕಂಡದೆ. ಈಗ ಯಾರೋ ಗಾಂದಿಂತ ಒಬ್ಬ ಒಳೊಗಡ. ಅವು "ನಮ್ಮ ಉದ್ದಾರ ಆಗದೆ ದೇಸ ಉದ್ದಾರ ಆದ್ಲೆಂತ ಹೇಳ್ವೆಗಡ. ಜಾತಿಂತ ಹೇಳ್ವಂತದ್ ಹೋಕು. ನಮ್ಮ ಹಿಂದನೊ್‌ವು ಜಾತಿ ಹೆಸರ್‌ಲಿ ಕೆಲೊ್‌ವರ ಕೆಳಗೆ ನೂಕಿದೊ. ಇನ್ನಾರ್ ನಾವು ಅವರ ಎಲ್ಲಾದರ್ಲೂ ನಮ್ಮೊಟ್ಟಿಗೆ ಸೇರ್ಸಿಕಂಡ್, ಮೇಲೆ ಬರ್ವ ಹಾಂಗೆ ಮಾಡೋಕುಂತ ಹೇಳ್ವೆಗಡ, ಅವೇ, ನಮ್ಮ ಜಾತಿನ ಒಂದ್ ಗೂಡೆನ ಸಾಂಕ್ವೆಗಡ"ಂತ ಹೇಳಿಕನ ಇವ್ಕೆಲ್ಲಾ ಚೋದ್ಯ, ಹುಗ್ಗವ್ವ ಇಷ್ಟೆಲ್ಲಾ ತಿಳ್ಕಂಡದ್ದ್ ಎಲ್ಲಿ? ಹೇಂಗೆಂತ?. ಇಷ್ಟ್ ಹೇಳಿ ಅದೇ ಮಾಡಿಕಂಡ ಚೆಪ್ಪಿನ ಮಡೆಗುತ್ತಿಗೆ{ಪದ್ಯಕೆ} ಎಲಡಿಕೆನ ಮಡೆ ಉಗ್ದ್, ಹಿಂಟೆನ ಉಂಡೆ ಮಾಡಿ ಕೆಪ್ಪಟೆ ಒಳಗೆ ಇಸಿಕಂಡತ್. ಮತ್ತೆ ನೀಂಡಿದ್ದ ಕಾಲ್‌ಗಳ ಎರ್ಡ್ ಕೈಯಿಂದ ಒತ್ತಿಕಂಡ್ "ನಾ ನಾಲ್ಕೈದ್ ವರ್ಸೊದ ಹಿಂದೆ, ಒಂದ್ ಐಯ್ಯನವ್ರ ಮನೆಗೆ ಕೆಲ್ಸಕ್ಕೆ ಹೋಕಂಡ್ ಇದ್ದೆಲೇ. ಆ ಮನೆ ಹೈದ ಒಬ್ಬ ಸಾಲೆಗೆ ಹೋತಿತ್ತ್. ಅಂವ ಸಾಲೆಂದ ಬಂದ ಹಾಂಗೆ, ಮನೆ ಹುಕ್ಕಿಕೆ ಮುಂದೆ, ಮೆಟ್ಟ್ ಕಲ್ಲ್‌ಲಿ ನಿತ್ತ್, ಅವನ ಅವ್ವ "ಹೋಗ್, ಹೋಗ್, ಎಂತವರೆಲ್ಲ ಮುಟ್ಯೊ್‌ಳನಾ ಏನೊ? ಮಡಿ ಬಟ್ಟೆ ಇಸ್ಯೊಳೆ, ನೀರೆಡಿಗೆ ಹೋಗಿ ಮೀದ್ ಬಾ"ಂತ ಹೇಳ್ತಿದ್ದೊ. ನನ್ನೆದ್ರೆ ಹೇಳಿಕನ ನಂಗೆ ಅರ್ತ ಆತಿತ್ತ್. ಎಂತೆಂತವರ ಅಂದರೆ ನಮ್ಮಂತವರಂತ. ಅಂವ ಮೀದ ಮೇಲೆ ಅವನ ಅರ್ವೆಗಳ ಮಾತರ ನಾನೇ ತೊಳ್ದ್ ಹಾಕಕಾಗಿತ್ತ್. ಮೈಲಿಗೆ ಹೊತ್ತ ನನ್ನಂತವು ಅರ್ವೆ ತೊಳ್ದರೆ ಅರ್ವೆಗೆ ಮೈಲಿಗೆ ಆದ್‌ಲ್ಲೆ"ಂತ ಮತ್ತೊಮ್ಮೆ ನೆಗಾಡ್ತ್. "ಕಾಗಡೆ ದಟಿಗೆನ ಲಕ್ಷ್ಮಿನ ಕೂಸು ನೋಡಿ, ಅದ್ ಯಾರ ಹಾಂಗೆ ಉಟ್ಟು?" ಹುಗ್ಗವ್ವನ ನೆಗೆ ನಿಲ್ಲೂದೆ ಇಲ್ಲೆ. ಹೋ. ಯಾಗೋಳು ಅದರಷ್ಟಕ್ಕೆ ಇರ್ವ ಹುಗ್ಗವ್ವನ ಮನ್ಸ್ ಒಳಗೆ ಎಂತೆಲ್ಲ ಉಟ್ಟುಂತ ಮಾಚುಗೆ ಚೋದ್ಯ. ಮಡಿ ಮಡಿಂತ ಹೇಳ್ವವರ ಮೈಲಿಗೆನ ಅದ್ ಇಷ್ಟ್ ಹೇಳೋಕು ಅಂದರೆ ಅವರ ಮನ್ಸಿಗೆ ಎಷ್ಟ್ ಬೇನೆಶ ಆಗಿರ್ದೊ ಏನೋ? ಅಲ್ಲ, ಮಡಿವಂತರ ಮೋಸದ ಬಲೆಲಿ ಅದೇ ಬಿದ್ದಿತ್ತೋ, ಯಾರಿಗೆ ಗೊತ್ತು?ಂತ ಅಲ್ಲಿದ್ದ ಎಲ್ಲೊ್‌ವು ಒಂದೊಂದು ರೀತಿಲಿ ಯೋಚನೆ ಮಾಡಿಕೆ ಸುರು ಮಾಡ್ದೊ.

ಅಂದ್‌ನ ಮಾತ್‌ಕತೆ ಮಿಣ್ಕಿನ ಒಬ್ಬಳ ಸಾಲೆಗೆ ಕಳ್ಸುದುಂತ ಹೇಳ್ವ ನಿಶ್ಚಯಲಿ ಮುಗ್ತ್. ಕಳಲ ಮನ್ಸ್‌ಲೇ ಮಿಣ್ಕಿ ಸಾಲೆಗೆ ಹೋದರೆ ಏನೂ ತೊಂದರೆ ಅಕಿಲ್ಲೆಲೇಂತ ಹೆದ್ರಿತ್, ಹಾಂಗೇ ಹಂಞ ಕರ್ಚು ಸಾನ್ ಉಟ್ಟುಂತ ಹೇಳಿಕಂಡ್. ನೆಲಲಿ ನಾಯಿಗೆಂತ ಇಸಿದ್ದ ಮಂಡಿ ಹುಗ್ಗೆನ ಕೈಲಿ ಹಿಡ್ಕಂಡ್ ಕೈ ತೊಳ್ಯಕೆ ಹೋತ್. ಮಾಚುನ ಕಣ್ಣ್‌ಗೆ ಯಾಗೋಳು ನೋಡ್ತಿದ್ದ ಸಾಲೆ ಮಕ್ಕಳ ಒಟ್ಟಿಗೆ ಮಿಣ್ಕಿ ಹೋವ ಚಿತ್ರದ ಗುಂಗ್ ಅಂಟಿಕಂಡ್ ಬುಟ್ಟಿತ್. ಒಂದ್ ವೇಳೆ ಅದೇ ಸಾಲೆಗೆ ಹೋಕೂಂತ ಆಗಿದ್ದರೆ, ಅದ್ ಸಾಲೆಗೆ ಹೋದು. ಅದಕ್ಕೆ ಹಾಕಿಕೆ ಸಿಕ್ಕ್‌ವ ಹೊಸ ಲಂಗ ರೌಕೆದ್ದ್ ಆಸೆಗೆ ಮಾತ್ರ! ❑

ಹಾಳೆ 4.

ಕುಮೆರಿ ಮಾಡ್ದೊ

ಕಳಲ ಮತ್ತೆ ಮಾಯ್ಲು ಎಷ್ಟ್ ದುಡ್ದರೂ ಮೂರ್ ಹೊತ್ತ್ ಮನೆವರ ಹೊಟ್ಟೆ ತುಂಬಿಸಿಕೆ ಕಷ್ಟ ಆತಿತ್ತ್. ಆ ಕಾಲಲಿ ಇದ್ದವ್ಕೂ ಕಷ್ಟದ ಬೊಡ್ಕೇ. ಅಂತದರ್ಲಿ ದುಡ್ದ್ ಬೊದ್ಕ್‌ವವರ ಕತೆ ಹೇಳಿ ಸುಕ ಇಲ್ಲೆ. ಆಗನ ಕಾಲಲಿ ತುಂಬ ಕಾಡ್ ಇತ್ತ್. ಕಾಡ್‌ಲಿ ಸಿಕ್ಕ್‌ವ ಗೆಡ್ಡೆ, ಗೆಣ್ಸ್, ಹಣ್ಣ್ ಕಾಯಿಗ–ಇಂತದ್ರಿಂದಳೇ ಹೊಟ್ಟೆ ತುಂಬುಸಿಕೊಣ್ತಿದ್ದೊ. ಹಾಂಗಾಗಿ ಗಂಜಿದ್ದ್ ದೊಡ್ಡ ಹಂಗ್ ಇತ್ತ್‌ಲ್ಲೆ.

ಹುಗ್ಗವ್ವ ಅಜ್ಜಿ ಆಗಿತ್ತ್. ಆದರೆ ಅದರ್ದ್, ಕಣೆ ಕಣೆ ಆದ ಗಟ್ಟಿ ಜುವ್ವ, ಕೈಕಾಲ್ ಗಟ್ಟಿ ಇರಿಕನ ಮಕ್ಕಳಿಗೆ ಹೊರೆ ಆಗಿ, ಅವರ ಹಂಗ್‌ಲಿ ಇರಿಕಾಗದ್‌ಂತ ಅಲ್ಲಿಗೆ ಇಲ್ಲಿಗೆ ಕೆಲ್ಸಕ್ಕೆ ಹೋತಿತ್ತ್. ದೊಡ್ಡ ಮಕ್ಕ ಕಾಡಿಗೆ ಹೋಕನ ಇದ್ ಮನೆಲಿದ್ದ ಸಣ್ಣ ಮಕ್ಕಳ ಕರ್ಕಂಡ್ ಊರ್‌ಲಿ ಇರ್ವ ಇದ್ದವರ ಮನೆಗೆ ಹೋತಿತ್ತ್. ಆ ಕಾಲಲಿ, ಅವರ ಜಾತಿಯ ಅಜ್ಜಿಕ್ಕಳ ಅರ್ವ್ವರೆಂತೇಳ್ರೆ ಸೊಂಟಕ್ಕೊಂದು ಮೊಣ್ಕಾಲಂದಾಜಿಗೆ ಬಾವ ತುಂಡು ಅರ್ವೆ, ಮೇಲೆ ಎದೆಗೆ ತುಂಡು ಅರ್ವೆದೊಂದ್ ಗೇಂಟಿ, ಗಂಡ ಇದ್ದೊವ್ ಆದರೆ ಮೂರೋ ಐದೋ ಪಿರಿದ್ದ್ ಕುತ್ತಿಗೆಗೆ ಕಾಯ್ಪು ಆಗಿರುವ್ವಂಗೆ ಕರಿಮಣಿ ಸರ,(ಗಂಡ ಇಲ್ಲದೊವ್ವಾದರೆ ಬೇರೆ ಬಣ್ಣದ ಮಣಿ ಸರ), ಕೈಲಿ ಮಾಸಿದ ಬಣ್ಣದ ಬಳೆಗ, ತಲೆ ಮೇಲೆ ಮೊಟ್ಟಾಳೆ– ಇಷ್ಟ್. ಮಾಚುನ ಹುಗ್ಗವ್ವ ಹೊರಗೆ ಹೋಕನ ಒಂದ್ ದೊಣ್ಣೆನ ಹಿಡ್ಕಣ್ತಿತ್ತ್. ಅದರ ಹಿಂದೆ ಒಂದೋ ಎರಡೋ ಪಿಳ್ಳಿಕ್ಕ– ಅದರ ಬಾಲದ್ವಾಂಗೆ. ಕಂತ್ರಿ ನಾಯಿಗ, ಹಸ್ ಹೋರಿಗಳಿಂದ ಪಿಳ್ಳಿಕ್ಕಳ ಮತ್ತೆ ತನ್ನ ಕಾಪಾಡಿಕೊಂಬಕೆ ಆ ದೊಣ್ಣೆ.

ಅದ್ ದಾರಿಲಿ ಹೋಕನ ಯಾರಾರ್ "ದೂರ ಹೊರ್ಟ?"ಂತ ಕೇಳ್ರೆ, "ಅವರಲ್ಲಿಗೆ ಇವರಲ್ಲಿಗೆಂತ ಏನೂ್ ಇಲ್ಲೆ. ಯಾರ್ ಒಂದೀಸ್ ಗಂಜಿ ತೆಳಿನ ಮೊಟ್ಟಾಳೆಗೆ ಹೊಯ್ದುವೆನೋ ಅಲ್ಲಿಗೆ. ನಾವುಗೆ ಎಲ್ಲಾದರ್ ಏನ್ ಹೇಳಿ? ಊರ್‌ನ ಎಲ್ಲಾ ದೊಡ್ಡೊವು ನಾವುಗೆ ಬೇಕಾದವೆ"ಂತ ಹೇಳ್ತ್ರೊ, ಎಲ್ಲಿ ಹೋದರೆ ನಾಕ್ ಒಳ್ಳ ಮಾತಾಡ್ವೆ, ಅಂತ ಮನೆಗೆ ಅದ್ ಹೋದು ಹೆಚ್ಚಿ. ಹೋವ ಮನೆಗಳ ಪಡಿ ಹಕ್ಕಲೆ, ಅಲ್ಲರೆ ಮನೆನ ಹಿಂದೆ ಇಜ್ಜಲ್ ಕೊಡಿಲಿ ನಿಂತ್‌ದ್, ತಾನ್ ಬಂದದರ ತಿಳ್ಸ್‌ವ ಹಾಂಗೆ ಗಟ್ಟಿ ಸೊರಲಿ ರಾಗ ಎಳ್ದ್ "ಏನ್ ಮಾಡ್ರೆ ...?"ಂತ ಕೇಳಿಕೆ ಉಟ್ಟು. ಕೆಲೊವು ಹೆಳ್ಮಕ್ಕ ಪ್ರೀತಿಂದಳೇ "ಬಂದನಾ? ಒಳ್ಳದಾತ್. ಬತ್ತ ಒಣ್‌ಂಗಿಸಿಕೆ ಇತ್ತ್, ನೀ ಬಂದರೆ ಒಳ್ಳದಿತ್ತ್"ಂತ ನೆನ್ಸಿಕಂಡಿದ್ದೆಂತ ಹೇಳ್ರೆ ಇದರ ಮನ್ಸ್‌ಗೆ ಒಂದ್ ಸಮದಾನ. ಕೆಲೊವು ಮನೆಲಿ ಇದರ ನೋಡಿ "ನೀ ಯಾಕೆ ಬಂದ? ಏನ್ ಕೆಲ್ಸ ಇಲ್ಲೆ ಇಂದ್. ಹೋಗ್"ಂತ ದರ್ಪಲಿ ಮಾತಾಡ್ದೊವ್ವೂ ಇದ್ದೊ. ಹಾಂಗೆ ಹೇಳಿರೂ ಆದು, "ನಡಿ ಇಲ್ಲಿಂದ, ಇನ್ನ್ ಮುಂದೆ ನೀ ಇಲ್ಲಿ ಬಾಕೆ ಬೊತ್ತ್, ಗೊತ್ತಾತಾ?"ಂತ ಹಂಕಾರಂದ ಮಾತಾಡ್‌ವೊವ್ವೂ ಇದ್ದೊ. ಇನ್ನ್ ಕೆಲೊವ್ ಕಡೆ "ಬಾ, ನಿನ್ನೆದ್ ಅನ್ನ ಒಳ್ದಿತ್ತ್. ನೀ ಬಂದರೆ ನಿಂಗೆ ಕೊಡೊಮೊಂತ ಇಸಿದ್ದೆ. ನೀ ಬಾವ ಹೊತ್ತು ಮುಟ್ಟ ಕಾದ್ ನೋಡಿ, ಬಾರದಿದ್ದರೆ ಹಸ್‌ಗಳಿಗೆ ಕೊಡ್ತಿದ್ದೆ. ಅನ್ನ ಇಲ್ಲದೊವ್ವು ಎಷ್ಟೋ ಜನ ಒಳೊಂತ ನೆಂಪಾಕನ ಹಾಳ್ ಮಾಡಿಕೆ ಮನ್ಸ್ ಬಾದ್‌ಲ್ಲೆ"ಂತ

ಹೇಳ್ವ ಒಳ್ಳಮನ್ಸರೂ ಇದ್ದೊ. ಹಾಂಗಲ್ಲದೆ ಕೆಲವರ ಮನೆಲಿ ಏನಾರ್ ಕಾರ್ಯಕ್ರಮ ಇದ್ದರೆ ಮುಂದೆನೇ ಹೇಳ್ತಿದ್ದೊ. "ಇಂತ ದಿನ, ಅಲ್ಲರೆ ಇಷ್ಟ್ ದಿನ ನೀ ಬೇರೆಲ್ಲೂ ಹೋಕೆ ಬೊತ್ತ್, ನಮ್ಮಲ್ಲೇ ಕೆಲ್ಸ ಉಟ್ಟು"ಂತ. ಅಂತ ಹಿತವಂತರ ಮನೆಲಿ ಅವು ಹೇಳ್ದ ಕೆಲ್ಸ ಮಾಡಿ ಹೊರ್ಡಿಕಾಕನ "ಹಳೆ ಸೀರೆ ಗೀರೆ ಏನಾರ್ ಇಲ್ಲೆನಾ? ಉಡಿಕೆ, ಹೊದ್ಯಕೆ ಅರ್ವೆ ಇಲ್ಲೆ"ಂತ ಕೇಳಿ, ಕೊಟ್ಟದರ ತೆಕಂಬತಿತ್ತ್. ದೊಡ್ಡ ಮನ್ಸನೊವು ನಾಕಾಣೆ ಎಂಟಾಣೆ ದುಡ್ಡೂ ಕೊಡ್ತಿದ್ದೊ–"ಂದಾ, ಎಂತಾಕಾರ್ ನಿಂಗೆ ಇರಲಿ"ಂತ ಹೇಳಿ. ಹಾಂಗೆ ದುಡ್ಡು ಕೊಟ್ಟವರ, ಅದರ ನೆರೆಕರೆವರ ಹಕ್ಕಲೆ, ಅಲ್ಲರೆ ಬೇರೆ ಮನೆಗೆ ಕೆಲ್ಸಕ್ಕೆ ಹೋದಲ್ಲಿ "ನನ್ನ ಕಷ್ಟ ನೋಡಿ ಎಂಟಾಣೆ ದುಡ್ಡು ಕೊಟ್ಟೊ. ದೇವ್ರು ಅವ್ಕೆ ಒಳ್ಳದ್ ಮಾಡಲಿ"ಂತ ಅವರ ಗುಣ ಗಾನ ಮಾಡ್ತಿತ್ತ್.

ದೊಡ್ಡ ಮನೆಗಳಲಿ ಇಲ್ಲಾದ ಕೆಲ್ಸ ಯಾದು? ಇಜ್ಜೆಲ್ ಗುಡ್ಸೂದ್, ಹಟ್ಟಿಗೆ ಸೊಪ್ಪು, ಎತ್ತ್, ಹಸ್, ಎಮ್ಮೆ ಕೋಣಗಳಿಗೆ ಹುಲ್ಲು, ಸೊಪ್ಪು ಹಾಕದ ಹಟ್ಟಿಲಿ ಸೆಗ್ಣಿ ಬಾಚೂದು, ಗುಡ್ಡೆಂದ ಮೊಡ್ಡಿ ಸೊಪ್ಪು ಉರ್ಂಬಿ ತಾದು, ಬೇಸಿದ ಬತ್ತನ ಹರ್ಗ್ದು, ಅದಿಕೆ ಕೈ ಹಾಕುದು– ಹೀಂಗೆ ಇಪ್ಪತ್ತೆಂಟ್ ಕೆಲ್ಸಲಿ ನೆಲಕ್ಕೆ ಕುಂಡೆ ಊರಿಕೆನೇ ಪುರ್ಸೊತ್ ಇರಿಕಿಲ್ಲೆ. ಕೂಡು ಕುಟುಂಬಲಾದರೆ ಮೂರ್ನಾಲ್ಕ್ ಹೆಳ್ಮಕ್ಕ ಇದ್ದಲ್ಲಿ ಒಬ್ಬೊಬ್ಬ ಒಂದೊಂದುಂತ ಕೆಲ್ಸ ಹಂಚಿಕಂಡ್ ಮಾಡಿಕನ ಹೇಂಗೋ ಸುದಾರ್ಣೆ ಆದೆ. ಆದರೆ ಒಬ್ಬೊಬ್ಬನೇ ಇದ್ದಲ್ಲಿ ಮಾತ್ರ ಮೂಂಗ್‌ಗೆ ಕವ್ಡೆ ಕಟ್ಟಿಕಂಡ್ ಮಾಡ್ರೂ ಕೆಲ್ಸ ಮುಗ್ಯಕಿಲ್ಲೆ. ಕತ್ತಾಲೆ ಆಕನ ಅವ್ಕೆ ಬಿಡ್ದ್ ಹೋದೆ.

ಹುಗ್ಗವ್ವನ ಒಟ್ಟಿಗೆ ಹೋದ ಮಕ್ಕ ಸಾನ್ ಅವುಕೆ ತೀರ್ದ ಸಣ್ಣ ಸಣ್ಣ ಕೆಲ್ಸಗಳ ಮಾಡ್ತಿದ್ದೊ. ಅವ್ಕೆ, ಹೆಳ್ಮಕ ನಿನ್ನೆದ್, ಅಲ್ಲರೆ ಬೊಳ್ಪುದ್ ಒಳ್ದದ್ ಏನಾರ್ ಇದ್ದರೆ ತಿಂಬಕೆ ಕೊಡ್ತಿದ್ದೊ. ಆಗನ ಕಾಲಲಿ ಹಾಲ್ ಮಾರ್ವ ಪಂಚಾತಿಕೆ ಇತ್ತ್‌ಲ್ಲೆ. ಹಾಂಗಾಗಿ ತುಂಬ ಹಸ್‌ಗ, ಎಮ್ಮೆಗ ಇದ್ದಲ್ಲಿ ಮೊಜ್ಜಿಗೆ ಬೇಕಾದಷ್ಟ್ ಒಳ್ಯತಿತ್ತ್. ಅದರ ಈ ಮಕ್ಕಳಿಗೆ ಕೊಡ್ತಿದ್ದೊ. ಅಂದ್ ಮಾಚುನ ಜಾತಿಲಿ ಹಿರ್ಯರ್ ಮೊಜ್ಜಿಗೆ ಕುಡಿಯತಿತ್ಲೆ. ಹಾಂಗಾಗಿ ಅದಿಕೆ ಎರ್ಡ್ ಕಲ್ಲ್ ಉಪ್ಪು ಹಾಕಿ ಕೊಟ್ಟರೆ ಮಕ್ಕ ಹೊಟ್ಟೆ ತುಂಬ ಕುಡಿಯೊತಿದ್ದೊ. ಹಸ್ಕಂಡ್ ಬಂದ ಅವರ ಹೊಟ್ಟೆ ತಣ್ಣಂಗೆ ಆತಿತ್ತ್. ಒಮ್ಮೆನ ಕೆಲ್ಸ ಮುಗ್ಸಿ ಮದ್ಯಾನ ಮೊಟ್ಟಾಳೆ ಹಿಡ್ದರೆ, ಅದರ ತುಂಬ ತೆಳಿ ಗಂಜಿ ಹೊಯ್ಯೊತಿದ್ದೊ. ಹುಗ್ಗವ್ವ ಪಿಳ್ಳೆಗಳಿಗೆ ಬೇಕಾದಷ್ಟ್ ಕೊಟ್ಟ್, ಒಳ್ದದರ ಅದ್ ಕುಡ್ದ್ ಹೊಟ್ಟೆ ಗಟ್ಟಿ ಮಾಡಿಕಂಡ್ ದಟಿಗೆಗೆ ಬಂದರೆ, ಮಾಚು ಗಂಜಿ ತಾಕನ ಅದ್ ದಟಿಗೆಲಿ ಇದ್ದರೆ. ಎಲ್ಲೊವ್ಕೆ ಇಕ್ಕಿ, ಒಳ್ದ ತೆಳಿ ಗಂಜಿನ ಅದ್ ಉಂಡ್, ಮಲ್ಗಿರೆ ಮತ್ತೆ ಎದ್ರುದು ನಾಕ್ ಗಂಟೆನ ಬಾಂಗ್ ಆಕನನೇ.

ಅಂದ್‌ನ ಕೆಲ್ಸದೊವು ಬೊಳ್ಪುಗೆ ಏಳ್ ಗಂಟೆಂದ ಹಿಂಬೊತ್ತ್ ಏಳ್ ಗಂಟೆ ಮುಟ್ಟ ದುಡಿಯೊಕು. ಅಷ್ಟ್ ದುಡ್ದರೂ ಅವ್ಕೆ ಮಾಡ್ದ ಕೆಲ್ಸಕ್ಕೆ ಸರ್ಯಾದ ಕೂಲಿ ಸಿಕ್ತಿತ್ಲೆ. ಹಾಂಗೆಂತ ಹೆಚ್ಚಿ ಕೂಲಿ ಕೇಳ್ವ ಗಡ್ಸ್ ಅವ್ರಲ್ಲಿ ಇತ್ಲೆ. ದನಿಗ ಹೇಳ್ದ ಹಾಂಗೆ ಕೇಳಿಕಂಡ್ ಇದ್ದರೆ ಇರಕ್ಕ್. ದನಿಗಳ್ದೇ ತೊಪ್ಪು ಇದ್ದ್, ಅನ್ಯಾಯ ಸಹ್ಸಿಕಾಗದೆ, ಎದುರುತ್ತರ ಕೊಟ್ಟನೋ, ಆಗಳೇ–"ಕೈಲಿದ್ದ ಸಾಮಾನ್ ಅಲ್ಲೇ ಇಸ್, ಈಗಳೇ ನಡಿ"ಂತ ತಾಕೀತ್ ಮಾಡ್ತಿದ್ದೊ, ಮೊರ್ದಿನನೇ ಒಕ್ಕಲ್ ಎದ್ರ್ಸಿ ಬುಡ್ತಿದ್ದೊ. ಅದರ್ಲಿ ದಯೆ ದಾಕ್ಷಿಣ್ಯಂತ ಹೇಳ್ವಂಥದ್ದ್ ಇಲ್ಲೇ ಇಲ್ಲೆ. ಹಾಂಗೆಂತ ಬೇರೆ ಕಡೆ ಹೋದರೂ, ಅವು ಇವರ ಅಪ್ಪನಂತವೇ. ಕೆಲೊವು ಮನೆಲಿ ಯೆಜಮಾಂತಿಗ ಪ್ರಾಯದೊವು ಇದ್ದರೆ ಆಗ ಈ ಒಕ್ಕಲಿನವು ಬಚಾವ್ ಆಗ್ತಿದ್ದೊ. ಇನ್ನ್ ಕೆಲೊವು ಮನೆಲಿ

ಗಣ್ಮಕ್ಕಳಿಗಿಂತ ಹೆಳ್ಮಕ್ಕಳ್ದೇ ಕಾರ್ಬಾರ್. ಅಂಥ ಹೆಳ್ಮಕ್ಕ ಒಕ್ಕಲ್‌ನವರ, ತೋರ್ ಬೆರ್ಳಿನ ಕೊಡಿಲೇ ಎದ್ದ್‌ರ್ ಕುದ್ರುಂತ ಮಾಡ್ಸ್‌ತಿದ್ದೊ. ಅಂಥ ಹಳ್ಮಕ್ಕ ಒಕ್ಕಲ್ನವುಂತೇನ್? ಅವರ ಬಾಯಿಂದ ಊರ್‌ನೇ ನೊ್‌ಡ್ಗಿಸಿ ಬುಡ್ತಿದ್ದೊ. ಹಾಂಗಾಗಿ ಒಕ್ಕಲ್‌ನೊ್‌ವು ದನಿಗ ಎಷ್ಟ್ ದುಡ್ಸಿರೂ, ನಾವು ಹುಟ್ಟಿದ್ದೇ ದುಡಿಯಕೆಂತೇಳಿ ಸಮದಾನ ತೆಕಂಡ್ ಬೇರೆಕಡೆ ಹೋವ ಮನ್ಸ್ ಮಾಡದೇ ಇದ್ದಲ್ಲೇ ಇರ್ತಿದ್ದೊ. ಹಾಂಗೆಂತ ನೂರಕ್ಕೆ ಒಬ್ಬಿಬ್ಬ ಒಳ್ಳ ದನಿಗ ಸಾ ಇದ್ದೊ. ಅಂತವು ಸಿಕ್ಕಿರೆ ಅದ್ ಆ ಒಕ್ಕಲ್‌ನವರ ಭಾಗ್ಯಂತ ಹೇಳೊಕು ಅಷ್ಟೇ.

ವಿದ್ಯೆ ಬುದ್ಧಿ ಇಲ್ಲದವ್ರ ಆಗಂತೇನ್? ಈಗಳೂ ಬೊ್‌ಗ್ಗಿಸ್ವವೇ. ದುಡ್ಡದ್ದ್ ದುಡ್ಡ ಹಾಂಗೇ. ಹೊಟ್ಟೆ ತುಂಬ ಹಿಟ್ಟ್ ಇಲ್ಲೆ, ಮೈ ತುಂಬ ಬಟ್ಟೆ ಇಲ್ಲೆ. ಹಾಂಗಾಗಿ ಬೊ್‌ದ್ಕಿಕೆ ಬೇರೆ ಬೇರೆ ದಾರಿ ಕಂಡ್‌ಕೊ್‌ಂಬ ಅಗತ್ಯ ಅವ್ಕೆ ಇತ್ತ್. ಹೇಂಗಾರ್ ಬೊ್‌ದ್ಕೊಕುಂತ ಹೇಳ್ವ ಹಠನೂ ಇತ್ತ್. ಅದಿಕ್ಕೆ ಕಾಡ್‌ಲಿ ಸಿಕ್ವ ಜಾಯಿಕಾಯಿ, ಗ್ಯಾರ್ದ್ ಬೀಜ, ಒಳ್ಳೆ ಮೆಣ್ಸ್, ರಾಂ ಪತ್ರೆ, ಸೀಯೆಲೆ ಕೆತ್ತೆ, ಅದರ ಮೊಗ್ಗೆ, ಮೊ್‌ದ್ದ್‌ಗಳ ನಾರ್ ಬೇರ್, ಜೇನ್, ಹಳ್ಳದ ಮೀನ್– ಇಂಥದರ ಎಲ್ಲ ತಂದ್ ಕರ್ಚಿಗೆ ಇಸಿಕಂಡ್, ಒಳ್ದದರ ಮಾರ್ತಿದ್ದೊ. ಇದಲ್ಲಾದೆ ಕುಮೆರಿ ಬೆಳೆ ಬೆಳಿಯತಿದ್ದೊ.

ಸುಳ್ಯದ ಹಾಂಗಿನ ಮಲೆನಾಡ್ ಊರ್‌ಲಿ, ಊರ್‌ಗೆ ತಾಂಗಿಕಂಡೇ ಕೆಲೊ್‌ವೊ ಮಲೆಗ ಒಳೊ. ಪೂಮಲೆ, ಬಂಟಮಲೆ, ಕೀಲಾರ್ ಮಲೆ, ನಿಡ್ಯ ಮಲೆ, ನೀರ್ಮಲೆ ಹೀಂಗೆ. ಹೆಸರೇ ಇಲ್ಲದ ಮಲೆಗ ಇನ್ನೆಷ್ಟೋ. ಇಂತ ಮಲೆಗಳ ನೊ್‌ಡು ನೊ್‌ಡುಲಿ ಕೆಲೊ್‌ವು ಕಡೆ ಹೆಚ್ಚ್ ಮರಗ ಇಲ್ಲದೆ ಕುರ್ಚಲ್ ಕಾಡ್ ಇದ್ದದೆ. ಅಂಥ ಜಾಗೆನ ಹುಡ್ಕಿ, ಅಡಿಕಾಡ್ ಕಡ್ದ್, ಅದ್ ಒಣ್‌ಂಗಿದ ಮೇಲೆ ಕಿಚ್ಚ್ ಕೊಟ್ಟ್, ಸುಡುಮಣ್ಣ್ ತರ ಮಾಡಿ ಮತ್ತೆ ತಟ್ಟ್ ಮಾಡಿ ಬೆಳೆ ಬೆಳ್ಸ್‌ತಿದ್ದೊ.

ನೆರೆಕರೆವೆಲ್ಲಾ ಒಟ್ಟಿಗೆ ಸೇರ್ಕಂಡ್, ಅಂಥ ಜಾಗೆಗಳ ಹುಡ್ಕಿ, ಅವರವರ ಜನ ಬಲಕ್ಕೆ ಅಲ್ಲರೆ ತಾಕತ್ತಿಗೆ ಸೆರ್ರ್ಯಾಗಿ, ಅರ್ಧ ಮುಡಿ, ಒಂದ್ ಮುಡಿ, ಎರ್ಡ್ ಮುಡಿ ಹೀಂಗೆ ಜಾಗೆ ಹಂಚಿಕಂಡ್ ಬೆಳೆ ಬೆಳ್ಸ್‌ತಿದ್ದೊ. ಕಾಡ್ ಕಡ್ದ್, ಸಣ್ಣ ಸಣ್ಣ ಮರಗ ಇದ್ದಲ್ಲಿ, ಅದ್ರ ಬುಡಕ್ಕೆ ಒಂದಷ್ಟ್ ಜಾಸ್ತಿಕಾಡ್ ಕಸ, ದರ್ಗ್ ಎಲ್ಲಾ ಹಾಕಿ ಸುಡ್ತಿದ್ದೊ. ಯಾಕೆಂತೇಳ್ರೆ ಮತ್ತೆ ಆ ಮರಗಳ ಬುಡಲಿ ಬೇರೆ ಬೇರೆ ತರದ, ಬೊ್‌ಳ್ಳಿಲಿ ಆವಂತ ನೆಟ್ಟಿಕಾಯಿ ಬಿತ್ತ್ ಬಿತ್ತಿಕೆ ಉಟ್ಟು. ಬೊ್‌ಳ್ಳಿ ಬೆಳ್ದ ಹಾಂಗೆ ಅದ್ ಆ ಮರಕ್ಕೆ ಹತ್ತಿಕಣ್ತಿತ್ತ್.

ಕುಮೆರಿ ಮಾಡ್ವಾದರೆ ಬೇಸ ತಿಂಗ ಹತ್ತರ ಒಳಗೆ ಜಾಗೆ ನೋಡಿ, ಹದಮಾಡಿ ಇಸೊಕು. ಅಷ್ಟೊತ್ತಿಗೆ ಕನ್ನಡ ಜಿಲ್ಲೆಲಿ ಒಂದೆರ್ಡ್ ಮಳೆ ಬಂದದೆಂತೇಳ್ವಂತದ್ದ್ ಹಿಂದಂದಳೇ ಬಂದ ನಂಬಿಕೆ. ಹಳಬರ ಆ ಲೆಕ್ಕ ಅನ್ಬವದ್ದ್. ಆ ಲೆಕ್ಕಾಚಾರದ ಒಟ್ಟಿಗೆ ಗಾಳಿ, ಬಿಸ್ಲ್, ಮೋಡ ಇದರೆಲ್ಲಾ ಬೇಸಾಯಗಾರರ್ ನೋಡಿಕಂಡವೆ. ಅಂತೂ ನಾಕ್ದಿನ ಹೆಚ್ಚ್ ಕಡಮೆ ಆದರೂ ಅವ್ಕೆ ಮಂಡೆ ಬೆಚ್ಚ ಏನ್ ಇಲ್ಲೆ. ಮಳೆ ಬಂದ್ ನೆಲ ನೆನ್ದ್, ಮೊ್‌ಣ್ಣ್‌ನ ಕೆದ್ಕಿಕಾನ ಬೀಜ ಬಿತ್ತಿರೆ ಮೊಳ್ಕೆ ಬಾದುಂತೇಳ್ವಷ್ಟ್ ಪಸೆ ಇದ್ದರೆ ಸಾಕ್, ಬೀಜ ಬಿತ್ತ್‌ವೆ. ಬೀಜ ಬಿತ್ತೊಕು ಹೌದ್, ಬೀಜ ಯಾರಲ್ಲುಟ್ಟು?

ಇವರ ಕೆಲ್ಸಗಳ ನೋಡಿಕಂಡ್ ಇದ್ದ, ಇವ್ಕೆ ಸಂತೆ ಸಾಮಾನ್ ಕೊಡ್ವ ಸಾವ್ಕಾರ "ಕುಮೆರಿ ಬೆಳೆ ಮಾಡ್ರೆನಾ? ಪೂಮಲೆ ಕಡೆ ಹೋದು ಬಾದು ನೋಡ್ತಾ ಒಳೆ. ಬಿತ್ತಿಕೆ ಬತ್ತ ಬೇಕಾರೆ ಕೇರಳಂದ ತರ್ಸಿ ಕೊಟ್ಟನೆ"ಂತ ಹೇಳ್ದೆ. ಅಲ್ಲರೆ ಅದ್ಕಿಂತ ಮುಂದೆನೇ "ಕುಮೆರಿ ಮೆನಿ ಮಾಡಿಕೆ ಉಟ್ಟಾ? ಹೇಳ್ರೆ ಕೇರಳಂದ ಬಿತ್ತ್ ತರ್ಸಿ ಕೊಟ್ಟನೆ"ಂತ ಬಾರಿ ದೊಡ್ಡ ಉಪಕಾರ ಮಾಡಂವನ ಹಾಂಗೆ ಹೇಳ್ದೆ. ಪ್ರತಿ ವರ್ಷ ಕಾಯಾಮಾಗಿ ಬಿತ್ತ್ ತಾಂವ ಅಂವನೇ. ಬಿತ್ತ್ ತಂದ್ ಕೊಟ್ಟರೆ ಬೆಳೆ ಬೆಳ್ಸಿದ ಇವ್ಕಿಂತ, ಅದರ ಹತ್ತ್ ಪಾಲ್ ಲಾಭ ಮಾಡಂವನೂ ಅಂವನೇ.

ಕುಮೆರಿ ಮಾಡ್ವ ಅಂದಾಜ್ ಉಟ್ಟುಂತ ಆಕನನೇ ಅಂವ ಬಿತ್ತ್ ತರ್ಸಿ ಇಸಿಕಂಡದೆ. ಮತ್ತೆ ಅವರ ಸಮಯಕ್ಕಾಕನ "ಈಗ ಕುಮೆರಿ ಬೀಜದ ಬತ್ತ ಮುಂದೆನ್ವಾಂಗೆ ಸಿಕ್ಕುದಿಲ್ಲೆ. ಸಿಕ್ವಲ್ಲಿಗೆ ಹುಡ್ಕಿಕಂಡ್ ಹೋಕಾದೆ. ಅಲ್ಲಿ ಸಿಕ್ಕಿರೆ ಸಿಕ್ಕಿತ್. ಇಲ್ಲಂದರೆ ಬೇರೆ ದಿಕ್ಕಿಗೆ ಹೋಕು, ನಂಗೂ ಬಸ್‌ಲಿ ಹೋದು ಬಾದುಂತ ಕರ್ಚಿ ಉಟ್ಟು"ಂತ ಲಂಡ್ ಲಸ್ಕಂತ ಕತೆ ಕಟ್ಟಿ ಹೇಳ್ತಿತ್ತ್. ಮುಂದೆನೇ ಅಂವ ಬೀಜದ ಬತ್ತ ತಂದ್ ಇಸಿಕೊಣ್‌ಬೊದೂ ಇತ್ತ್. ಬೆಳೆ ಬಂದ ಮೇಲೆ ಬತ್ತ ಪೂರಾ ಅವಂಗೆ ಕೊಡೊಕುಂತ ಹೇಳ್ವ ಒಪ್ಪಾಚಾರದ ಮೇಲೆ ಅಂವ ಬಿತ್ತ್‌ನ ಬೀಜ ಕೊಡ್ತಿತ್ತ್. ವೆವಹಾರದ ತಿಳಿವಳ್ಕೆ ಇಲ್ಲದ ಇವು ಅದಿಕೆ ಒಪ್ಪಿಕೊಣ್ತಿದ್ದೊ. "ಆದರೆ ನಮ್ಮ ದೆವ್ವ ದೇವ್ರುಗಳಿಗೆಂತ ಐದ್ಯೆದ್ ಮುಡಿ ಬತ್ತ ನಾವುಗೆ ಬುಡೋಕು"ಂತ ಹೇಳ್ದರ ಅಂವ ಒಪ್ಪಿಕೊಣ್ತಿತ್ತ್. ಇವರ ದೇವ್ರ ಹೆದ್ರಿಕೆ ಇಲ್ಲರೂ ದೆವ್ವಗಳ ಹೆದ್ರಿಕೆ ಅವಂಗಿತ್ತ್. ಬೇಸಾಯದ ಸಮಿಯಲಿ ಇವ್ಕೆ ಅಂವ ಬೇಕಾದ ಸಾಮಾನ್‌ಗಳ "ಅದ್ ಬೇಕಾ, ಇದ್ ಬೇಕಾ"ಂತ ಕೇಳಿ ಕೇಳಿ ಕೊಡ್ತಿತ್ತ್. ಗ್ಯಾರ್ದ್ ಬೀಜದ ಕಾಲಲಿ ಸಾ ಅವಂಗೆ ಇಂಥ ದೊಡ್ಡ ಮನ್ಸ್ ಬಾತಿತ್ತ್. ಬೇರೆ ಸಮಿಯಲಿ ಸಾಮಾನ್ ತೆಕಂಬಕೆ ಹೋದರೆ "ದುಡ್ಡು ಉಟ್ಟಾ"ಂತ ಕೇಳಿ, ಹಣ ತೋರ್ಸಿದ ಮೇಲೆ ಅಂವ ಸಾಮಾನ್ ಕೊಡ್ವ ಅಸಾಮಿ. ಒಳ್ಳೆ ಸಾಮಾನ್‌ನ ಹಣ ತೆಕಂಡ್, ಅಂವ ಕೊಡ್ತಿದ್ದದ್ ಹಾಳ್ ಸಾಮಾನ್. ಹಾಂಗೆಂತ ಬೇರೆ ವಿದ್ಯೆ ಕಲ್ತವು ಬಂದರೆ ನ್ಯಾಯ ಪ್ರಕಾರಲೇ ಸಾಮಾನ್ ಕೊಡ್ತಿತ್ತ್.

ಕುಮೆರಿ ಮಾಡ್ವೊವ್ಕೆ ಸಾವ್ಕಾರ ಬಿತ್ತ್‌ದ್ ಬತ್ತ ತಂದ್ ಕೊಡುದು ಬಾರಿ ದೊಡ್ಡ ಉಪಕಾರಂತ ಆಗಿತ್ತ್. ಊರುಲಿ ಬೇರೆ ಯಾರ್ ಸಾ ಅವ್ಕೆ ಉಪಕಾರ ಮಾಡ್ತಿತ್ತೆ. ಹಾಂಗಾಗಿ ಅಂವ ಬತ್ತ ತೆಕಂಡ್ ಹೋದರೆ ಹೋಗಲಿ. ಒಳ್ದ ರಾಗಿ, ಜೋಳ, ಸಾಮೆ, ತರ್ಕಾರಿ ಎಲ್ಲಾ ಉಟ್ಟಲ್ಲಾಂತ ಸಮದಾನ ತೆಕಣ್ತಿದ್ದೊ. ದೇವ್ರ ದಯೆಂದ ಅವು ನೆನ್ಸಿದಂಗೆ ಬೇರೆ ಬೆಳೆಗ ಬಂದರೆ ಮತ್ತೆನ ಮೂರ್ನಾಕ್ ತಿಂಗ ಹೊಟ್ಟೆನ ಚಿಂತೆ ಅವ್ಕೆ ಇಲ್ಲೆ.

ಬತ್ತ ಬುಟ್ಟು ಬೇರೆದೆಲ್ಲಾ ಬಿತ್ತ್‌ಗ ಇವರ ಹಕ್ಕಲೆನೇ ಇದ್ದದೆ. ತಲೆ ತಲಾಂತರಂದ ಅವು ಬೀಜಗಳ ವೊರ್ಸಂದ ವೊರ್ಸಕ್ಕೆ ಕಾಪಾಡಿಕಂಡ್ ಬರ್ತಿದ್ದೊ. ಬೀಜಗಳ ಕಾಪಾಡಿಕಂಡ್ ಬಾವ ಅವರ ತಿಳಿವಳ್ಕೆನ ಮೆಚ್ಚೋಕೇ!

. ಮೂಡು ದಿಕ್ಕ್‌ಲಿ ಬುಟ್ಟ, ಬೆಳ್ದ್ ಒಣ್‌ಂಗಿದ ಕಾಯಿನ ತಂದ್, ಅದರ ನೀರಿಗೆ ಹಾಕಿ, ಗಟ್ಟಿ ಕಾಳ್‌ನ ತೆಗ್ದ್ ಪೊರ್ಲ್ ಒಣ್‌ಂಗಿಸಿ, ಬೆದ್ರ ಗುತ್ತಿ, ಸೋರೆ ಬುರ್ಡೆ, ಅಡ್ಕೆ ಹಾಳೆ, ಮೊಣ್ಣ್‌ನ ಮಡ್ಕೆ ಇಂಥದರ್ಲಿ ತುಂಬುಸಿ ಗಾಳಿ ಆಡದ್ಹಂಗೆ ಬಂದ್ ಮಾಡಿ, ಬಿಸಿ ಇರ್ವಲ್ಲಿ ಅಂದರೆ

ಹೆಚ್ಚಾಗಿ ಬೆಸೆಗೆ ಅಲ್ಲರೆ ಬೆಸೆಗೆಗೆ ಕಟ್ಟಿದ ಅಡ್ಡಲಿ ಕಟ್ಟಿ ಇಸುವೆ. ಕೆಲವು ಬೀಜಗಳ ಮಣ್ಣ್ ಸೆಗ್ಣಿ ಬೆರ್ಸಿ ಗಟ್ಟಿ ಕಟ್ಟಿ ಇಸುವೆ. ಹೀಂಗೆ ಯಾವುದೇ ಬೀಜಗಳ ಬಾರಿ ಎಚ್ಚರಲಿ, ಅದರ ಬುಡ ಅಳ್ದ್ ಹೋಗದ್ಹಂಗೆ ಕಾಪಾಡ್ತಿದ್ದೊ. ಅಂಥ ಬೀಜಗಳ ಕೇಳಿದ ನೆರೆಕರೆಯವ್ಕೆ, ನೆಂಟ್ರ್‌ಗಳಿಗೆ ಕೊಡ್ತಿದ್ದೊ. ಹಾಂಗೆ ಕೊಡಿಕನ ಒಂದು ಮಾತ್ ಹೇಳ್ತಿದ್ದೊ. "ನಿಮ್ಮಲ್ಲಿ ಬೇರೆ ನಮೂನೆ ಬೀಜಗ ಇದ್ದರೆ ನಾವುಗೆ ಕೊಡೊಕು; ಮತ್ತೆ ಈಗ ನಾವು ಕೊಟ್ಟ ಬೀಜ ನಮ್ಮಲ್ಲಿ ಅಳ್ದ್ ಹೋದರೆ, ಯಾವ ಕಾಲಕ್ಕೇ ಆಗಲಿ ನೀವು ಅದರ ಬೀಜ ನಾವುಗೆ ಕೊಡೊಕು"ಂತ. ಕೊಟ್ಟ ಗೂಡೆಗ ಗಂಡನ ಮನೆಗೆ ಹೋಕನ ಗಂಡನ ಮನೆಲಿ ಇಲ್ಲದರ, ಅವರ ಸೆರಂಗ್‌ಲಿ ಕಟ್ಟಿ ಕೊಡ್ತಿದ್ದೊ. ಬೀಜಗಳ ಬೆಳ್ಸಿ ಉಳ್ಸಿಕೊಂಬ ಬಗ್ಗೆ ಅಂದಿನವು ತೆಕಂಬತಿದ್ದ ಕಾಳಜಿ ಎಲ್ಲಾ ಕಾಲದ ಕೃಷಿಕ ಜೆನಗಳಿಗೆ ಒಂದ್ ಒಳ್ಳ ಮಾದರಿ!

ಕುಮೆರಿ ಬೀಜ ಬಿತ್ತಿಕೆ ಮುಂದೆ, ಬತ್ತದ ಒಟ್ಟಿಗೆ ಬಿತ್ತ್‌ವ ಬೇರೆ ಧಾನ್ಯಗಳ ಬೀಜನ ಸಾ ಮುಂದೆನೇ ಬೆರಕೆ ಮಾಡಿ ಇಸಿ ಕಂಡವೆ. ರಾಗಿ, ಜೋಳ, ಸಾಮೆ ಈ ಮೂರು ಒಟ್ಟಾಗಿ ಒಂದು ಪಾಲಾದರೆ, ಬತ್ತ ಎರ್ಡ್ ಪಾಲ್. ಎಲ್ಲದರ ಒಟ್ಟಿಗೆ ಸೇರ್ಸಿ ಮೊಟ್ಟೆಲಿ ಕಟ್ಟಿಕಂಡವೆ. ಬೀಜ ಬಿತ್ತ್‌ವೊ್ವು ತೋರ್ತ್‌ನಂತ ಒಂದ್ ಬಟ್ಟೆನ ಅರ್ದಕ್ಕೆ ಮೊಡ್ಚಿ ಹೊಟ್ಟೆಗೆ ಕಟ್ಟಿಕಂಡವೆ. ಅದ್ ಎದ್ರ್‌ಕಡೆಲಿ ಹಂಞ ಸಡಿಲ ಆಗಿದ್ದ್, ಅದ್ರೊಳಗೆ ಸಲೀಸಾಗಿ ಕೈ ಹಾಕಿ ತೆಗಿಯಕೆ ಆದೆ. {ಕೆಲ್ಸಕ್ಕೆ ಹೋವ ಹೆಣ್ಮಕ್ಕ ಸಾ ಅಂದ್ ಸೀರೆ ಉಡಿಕನ ಎಲೆಡಿಕೆನೋ, ಸಣ್ಣ ಸಾಮಾನ್‌ಗಳ ಇಸಿಕೊ್ಂಬಕೆ ಒಂದ್ ಸಣ್ಣ ಮೊಟ್ಟೆ ತರ ಮಾಡಿಕೊಂಬೊ್ತಿದ್ದೊ. ಅದ್ಕಿಂತ ಒಸಿ ಮೇಲಿನವು ಸೀರೆ ನೆರಿಗೆ ಸೆಕ್ಕಿಸ್ವಲ್ಲಿ ಬಾಳೆಕಾಯಿಂತ ಮಾಡಿಕೊ್ಂಡ್ ಅದರ್ಲಿ ಚೌಕಲಿ ಕಟ್ಟಿಕಂಡ ದುಡ್ಡು ಮನಿ ಇಸಿಕೊ್ಂಬತಿದ್ದೊ. ಅದಕ್ಕಿಂತ ದೊಡ್ಡ ಸಾಮಾನ್ ಅಲ್ಲಿ ಹಿಡಿಯಕ್ಕಿಲ್ಲೆ.}

ಬೀಜದ ಬಿತ್ತ್ ಬಿತ್ತ್‌ವೊ್ವು ಮೊಟ್ಟೆಲಿ ತುಂಬ್ಸಿದ ಎಲ್ಲಾ ಬಿತ್ತ್‌ಗಳ ಹಿಡಿಹಿಡಿಯಾಗಿ ತೆಗ್ದ್, ಕೈ ಬೀಸಿ ಹದ ಮಾಡ್ದ ಜಾಗೆಲಿ ಬಿತ್ತ್‌ತಿದ್ದೊ. ಎಲ್ಲ ಕಡೆ ಒಂದೇ ಹದಲಿ ಬೀಳ್ವ ಹಾಂಗೆ ಬಿತ್ತಿಕೆ ಕೈ ಚಳಕ ಬೇಕ್. ಹಾಂಗೇನಾರ್ ಒಂದೊಂದ್ ಕಡೆ ಮಂದ ಆಗಿ, ಇನ್ನೊಂದ್ ಕಡೆ ತೆಳು ಆಗಿ ಅಗೆ ಬಂದರೆ ಮತ್ತೆ ಅದರ ಬೇಕಾದ ಹಾಂಗೆ ನೆಟ್ಟ್‌ಕಂಡವೆ. ಕುಮೆರಿ ಬೆಳೆಲಿ ನೇಜಿ ಮಾಡ್ದು, ನಾಟಿ ಮಾಡ್ದುಂತ ಹೇಳ್ವ ಕ್ರಮಗ ಇಲ್ಲೆ. ಇಲ್ಲಿ ಬೀಜ ಬಿತ್ತಿಕಂಡ್ ಹೋದ ಹಾಂಗೆ, ಅವನ ಹಿಂದೆಂದ ಮೂರ್ನಾಲ್ಕ್ ಜೆನಗ ಪರ್ಪಾಯಿ ಕತ್ತಿಲಿ, ಅಲ್ಲಿದೇ ಮೊ್ಣ್ಣ್ ತೆಗ್ದ್ ಬೀಜದ ಮೇಲೆ ಹರ್‌ಂಡಿಕಂಡ್ ಹೋದವೆ. {ಪರ್ಪಾಯಿ ಕತ್ತಿ ಅಂದರೆ ಕೇಬಲ್ ಕಣಿ ಮಾಡ್ವ ಗುದ್ದಲಿನ ಹಾಂಗೆ ಇದ್ದದೆ. ಆದರೆ ಅದ್ ಕೇಬಲ್ ಗುದ್ದಲಿನಷ್ಟ್ ಅಗಲ ಇಲ್ಲೆ.} ಇಲ್ಲಿಗೆ ಒಂದ್ ಮಟ್ಟಿನ ಕೆಲ್ಸ ಆತ್.

ಮಳ್ಗಾಲದ ನೊ್ಡುಲಿ, ಅವು ಅಡಿಕಾಡ್ ಕಡ್ದಿದ್ದೊ ಅಲ್ಲಾ? ಆ ದೈಗ ಈಗ ಚಿಗ್ರ್‌ವೆ. ನಾಚಿಕೆ ಮುಳ್ಳಂತೂ ನಾಚಿಕೆ ಇಲ್ಲದೆ ಕಾಡೆಲ್ಲ ಬೆಳ್ದ್ ಕಾಲ್ ಇಸಿದಲ್ಲಿ ಕುತ್ತ್‌ವೆ. ಚಿಗ್ರಿದ ದೈಗಳ ಮತ್ತೆ ನಾಚಿಕೆ ಮುಳ್ಳ್‌ನ ಸಪ್ಪ್ಯಾ ಮಾಡೋಕಾದೆ. ನಾಚಿಕೆ ಮುಳ್ಳ್‌ನ ಬೇರ್ ಸಮೇತ ಕಿತ್ತ್ ಬಿಸಾಕೊಕು. ಇಲ್ಲ ಅಂದರೆ ಕೊಯ್ಲಿಗೆ ಬಂಜ. ಅದಿಕೆ ಕೈಗೆ ಬಟ್ಟೆ ಕಟ್ಟಿಕಂಡ್ ಕಿತ್ತ್ ದೂರ ಇಟ್ಟವೆ.

ಬೀಜ ಮೊಳ್ಕೆ ಬಾದೇ ತಡ, ಅಲ್ಲಿಗೆ ದಾಳಿ ಮಾಡಿಕೆ ಎಲ್ಲಾ ಮುರ್ಗಗ ತಯಾರಾದವೆ. ನಮ್ಮ ಜಾಗೆಗೆ ಬಂದ್, ಆಕ್ರಮಣ ಮಾಡಿಕಂಡ ಮೊಯಿಂಸ ಮುರ್ಗಗಳ ಬೆಳೆ ಹಾಳ್

ಮಾಡಿಕೆ ಚದ್ರಂಗ ಬಲ ಅಲ್ಲ; ಹತ್ತ್ ಬಲಂದ ಕುಮೆರಿನ ಸುತ್ತು, ಮುತ್ತಿಗೆ ಹಾಕಿ ಬಾಕೆ ಸುರು ಮಾಡ್ವೆ. ಈ ಬಲದ ಸೇನಾಪತಿ ಕಾಡ್ ಹಂದಿಗ, ಅವ್ನಗಳೊಟ್ಟಿಗೆ ಮಂಗಗ, ಕಾಡಿಲಿ, ಕಾಡ್ ಹೆಗ್ಗಣಗ, ಆನೆಗ ಬಂದರೆ ಬೆಳೆನೇ ಇಲ್ಲೆ. ಅದ್ರೊಟ್ಟಿಗೆ ಎಂತೆಂತದೋ ಕಾಡ್ ಕ್ರಿಮಿ ಕೀಟೆಗ ಹುಳಗ! ಮೊಯಿಂಸರ ಬೆಳೆನ ಎಷ್ಟ್ ಹಾಳ್ ಮಾಡಿಕೆ ಆದೋ, ಎಷ್ಟ್ ಕಾಟ ಕೊಡಿಕೆ ಸಾಧ್ಯ ಉಟ್ಟೋ ಅಷ್ಟ್ ಹಾಳ್ ಮಾಡಿಕೆ, ಕಾಟ ಕೊಡಿಕೆ ಹೊರ್ಪವೆ! ಇವೇನೂ ಸುಮ್ಮನೆ ಕೈ ಕಟ್ಟಿಕಂಡ್ ಕುದ್ರುದಿಲ್ಲೆ. ಅವುಕೆ ಇದೆಲ್ಲ ಗೊತ್ತಿದ್ದದ್ದೇ. ಈ ಮುರ್ಗಗಳಿಂದ ಬೆಳೆನ ಕಾಪಾಡಿಕಂಡ್, ಇವ್ಕೆ ಸರ್‍ಯಾದ ಬುದ್ಧಿ ಕಲ್ಸೋಕುಂತ, ಇವು ಅಲ್ಲೇ ಮಾಡಂಗೋಲು ಮಾಡಿಕೊಂಡವೆ. ಎಷ್ಟ್ ಪಾಲಿನವು ಅಲ್ಲಿ ಬೆಳೆ ಮಾಡ್ಯೊಳೊ್ನೋ ಅಷ್ಟ್ ಮಾಡಂಗೋಲುಗ ಮೇಲೆದ್ದವೆ. ಮಾಡಂಗೋಲು ಅಂದರೆ ಒಂದ್ ಕೋಣೆನ ಸಣ್ಣ ಗುಡ್ಸಲ್. ಅದಕ್ಕೆ ಕಮ್ಮು, ಚಾಳೆನ ಸೋಗೆ ಅಲ್ಲರೆ ಹುಲ್ಲುದು ಮಾಡ್. ನಾಲ್ಕೈದ್ ಕೋಲು ಉದ್ದ, ಮೂರ್ ನಾಲ್ಕ್ ಕೋಲ್ ಅಗಲದ ಮೊ್ಣ್ಣ್ ನೆಲದ ಕೋಣೆ. ಅದರ್ಲಿ ಯಾವ ಐಸಿರಿನೂ ಇಲ್ಲೆ. ಹೆಚ್ಚಾಗಿ ಅಲ್ಲಿ ಇರಂವ ಒಬ್ಬನೇ. ಅಲ್ಲಿ ಅವಂಗೆ ಮಲ್ಗಿಕೆ ಕಾಡ್ ಬೊಳ್ಳಿಲಿ ಹೆಣ್ದ್ ಮಾಡ್ದ ಮಂಚ, ಅಲ್ಲೇ ಒಂದ್ ಅಗುಡೆ.(ಅಗ್ಗಿಷ್ಟಿಕೆ). ಅಗತ್ಯಕ್ಕೆ ಬೇಕಾದ ಮಡಿಕೆ ಕುಡಿಕೆಗ, ಒಂದ್ ಮೊ್ಡ್ಚೀಲಲಿ ಅಕ್ಕಿ, ಬೆಲ್ಲ, ಚಾ ಹುಡಿ, ಒಂದೆರ್ಡ್ ಕತ್ತಿಗ. ಬೇಕಾದಾಗ ಹೊತ್ತಿಸಿಕೆಂತ ಸೂಡಿಕಟ್ಟಿ ಇಸಿದ ಮಡಲ್ದ್ ಸೂಟೆಗ. ಇಷ್ಟ್ ಮಾಡಂಗೋಲುಂತ ಹೇಳ್ವ ಅರಮನೆನ ಸಂಪತ್ತ್. ಅಗುಡೆಂದಾಗಿ ಮಾಡಂಗೋಲು ಮಳ್ಗಾಲ ಪೂರ ಬೆಚ್ಚಂಗೆನೇ. ಕಾಡ್‌ಲಿ ಸಿಕ್ವ ನರೆ, ಈಯರ್ ಇಂತದರ ಅದರ್ಲಿ ಬೇಸಿಕೆ ಸಾ ಆದೆ. ಕಿಚ್ಚ್ ಇದ್ದಲ್ಲಿಗೆ ಸಾದಾರ್ಣಕ್ಕೆ ಯಾದೇ ಮುರ್ಗಗ ಆಗಲಿ, ಮಳ್ಗಾಲಲಿ ಹುಟ್ಟಿಕೊ್ಂಬ ಹುಳು ಹುಪ್ಪಡಿಗ, ಗೊಣ್ಣೆ ಹುಳು, ಉಂಬುಳು ಅಲ್ಲರೆ ಉಚ್ಚಿಗ ಬಾದ್ ಕಡ್ಮೆ.. ಅದ್ ಇವ್ಕೆ ಒಂದ್ ಧೈರ್ಯ. ನಾಂಯೆಗಳಿಗೆ ಅಗುಡೆ ಹಕ್ಕಲೆ ಒಂದ್ ಚೆಲ್ಲ್ ಗೋಣಿ ಹಾಕಿರೆ ಅವ್ಕೆ ಅದೊಂದ್ ಸೊರ್ಗನೇ. ಏನಾರ್ ಸದ್ದಾದರೆ ಸಾಕ್, ಕೆಬಿ ನಿಮಿರ್ಸಿ ಎದ್ದ್ ಬೊ್ಗ್ಗುವೆ. ಯೆಜಮಾನ "ಛೂ ....ಛೂ..."ಂತ ಹೇಳ್ರೆ ಹೊರಗೆ ಓಡಿ, ಬಂದ ಪ್ರಾಣಿಗಳ ಓಡ್ಸುವೆ. ಒಂದ್ ನಾಂಯೆ ಬೊಗ್ಗಿಕೆ ಸುರು ಮಾಡ್ರೆ ಸಾಕ್, ಕುಮೆರಿಲಿದ್ದ ನಾಂಯೆಗ ಪೂರ ಬೊ್ಗ್ಗಿಕೆ ಸುರು ಮಾಡ್ವೆ. ಆ ಸೊರಗಳ ಆರ್ಭಟಕ್ಕೆ ಹುಲಿ ಬಂದರೂ ಓಡುದು. ಹೀಂಗೆ ಅಗುಡೆ ಮತ್ತೆ ನಾಯಿಗ ಮಾಡಂಗೋಲ್‌ಲಿ ಇದ್ದೊ್ದ್ವ್ಕೆ ಆಪತ್ತಿನ ಬಂಧುಗ.

ಹೊತ್ತ್ ಕಂತಿಕಂಡ್ ಬಂದ್ವಾಂಗೆ ಕಾಡ್‌ಲಿ ಇರಿಂಟಿ ಮಾತ್ರ ಅಲ್ಲ; ಬೇರೆ ಬೇರೆ ಕ್ರಿಮಿ ಕೀಟೆಗಳ ಸೊರ ಗಟ್ಟಿಯಾಗ್ತಾ ಹೋದೆ. ಎಂತೆಂತದೋ ಸರಬರ ಶಬ್ದಗ. ಮಾಡಂಗೋಲ್‌ಲಿ ಇದ್ದೊ್ದ್ವು ಅಗುಡೆಗೆ ದೊಡ್ಡ ದೊಡ್ಡ ಕೊಳ್ಳಿಗಳ ಹಾಕಿ, ಬೇಗ ಬೇಗ ಉಂಡ್, ಏನೆಲ್ಲ ಸದ್ದ್ ಮಾಡಿಕೆ ಸಾಧ್ಯ ಉಟ್ಟೊ ಅದರೆಲ್ಲಾ ಮಾಡಿಕೆ ಸುರು ಮಾಡ್ವೆ. ದುಡಿ ಬೊಟ್ಟುದು. ಡಬ್ಬಿ ಬಡಿಯೊದು, ಕೊಳಲು ಉರ್ಗುದು, ಪಾಡ್ದನ ಹಾಡೂದು, ಬೆದ್ರಂದ ಮಾಡ್ದ, ಕೆಬಿ ಹೊಟ್ಟಿ ಹೋವಂತ ಸದ್ದ್ ಮಾಡ್ವ ಸಾಧನಗಳ ತಿರ್ಗಿಸೂದು, ಹಕ್ಕಲೆನ ಮಾಡಂಗೋಲ್‌ಲಿ ಇದ್ದಂವನ ಕರ್ದ್ ಗಟ್ಟಿ ಸೊರಲಿ ಮಾತಾಡುದು– ಹೀಂಗೆ ಅಲ್ಲೊಂದು ಶಬ್ದ ಲೋಕ ಹುಟ್ಟಿಕಂದೆ. ಈ ಎಲ್ಲ ಸದ್ದಿಗೆ ಜುವ್ವ ಇದ್ದ ಯಾವ ಪ್ರಾಣಿಗ ಆಗಲಿ, ಬೊ್ದ್ಕಿ ಒಳ್ದರೆ ಏನಾರ್ ತಿಂಬೊ್ಂತ ಓಡಿ ಹೋವೊ. ಹೆಚ್ಚ್ ಕಡ್ಮೆ ನಡಿರ್ಲ್ ಮುಟ್ಟ ಇದ್ ನಡ್ದದೆ. ಮತ್ತೆ ನಿದ್ಗಿದ ಮೇಲೆ ಏನಾರ್ ಸದ್ದ್ ಆದರೆ ನಾಂಯೆಗ ಒಳೊ್ಲೇ?

ನೀರ್ಮಲೆನ ಎಲ್ಲರ ಮನೆಲೂ ಕವ್ಣೆ ಬಿಲ್ಲ್ ಇತ್ತ್. ಕಾಡ್‌ನ ಸಮ್ಮಂದ ಇಸಿಕಂಡ್ ಬೊದ್ಕ್‌ವೊವ್ಕೆ ಸುಲ್ಬದ ಬೇಟೆ ಸಾಧನಗ ಬೇಕೇ ಬೇಕಾದೆ. ಸಾದಾರ್ಣದ ಕಾಡಿನ ಪ್ರಾಣಿ ಪಕ್ಷಿಗಳ ಬೇಟೆ ಆಡಿಕೆ ಕವ್ಣೆ ಬಿಲ್ಲೇ ಸಾಕ್. ಬೇಸೆಗೆಲಿ ಇದರ ತೆಯಾರ್ ಮಾಡಿಕಂಡವೆ. ಕಾಡ್‌ಲಿ ಅನಾನಸ್ ಹಾಂಗೆ ಉದ್ದ ಎಲೆದ್ದ್ ಜೊಂಕುಂತೇಳ್ವ ಒಂದ್ ಜಾತಿ ದೈ ಇದ್ದದೆ. ಇದರ- ಬೇರೆಯವರ್ಡ್ ದನ ಕರ್‌ಗ ಒಡ್ಜಿಲೊಳಗೆ ನುಗ್ಗದ ಹಾಂಗೆ ಬೇಲಿಲಿ ಉದ್ದಕ್ಕೆ ನೆಟ್ಟವೆ. ಅದ್ ಅಲ್ಲರೆ ಗಡಿ ಹಾಳೆಂತ ಒಂದ್ ಬೊಳ್ಳಿ ಕಾಡ್‌ಲಿ ಇದ್ದದೆ. ಜೊಂಕುನ ಎಲೆನ ಅಲ್ಲರೆ ಗಡಿಹಾಳೆ ಬೊಳ್ಳಿನ ನೀರ್ಲಿ ನೆನ್ಯಕೆ ಹಾಕ್ವೆ, ನಾಲ್ಕೈದ್ ದಿನಲಿ ಅದ್ ಪದೆನಿ, ಅದರ ತೊಪ್ಪೆ ತೊಳ್ದರೆ ಜಾರಿ ಹೋದೆ. ಒಳ್ದ ನಾರ್‌ನ ಪೊರ್ಲ್ ಪುಜ್ಕಿ, ನೀರ್ಲಿ ತೊಳ್ದ್ ಬಿಸ್ಲ್‌ಲಿ ಒಣ್‌ಂಗಿಸ್ವೆ ಅದ್ ಇಂದ್‌ನ ನಮ್ಮ ತಂಗೀಸ್ ತರ ತೆಳ್ಳಂಗೆ ಬೆಳ್ಳಂಗೆ ಆಗಿ ಗಟ್ಟಿ ಇದ್ದದೆ. ಅಂದ್ ಗಾಳದ ಬೊಳ್ಳಿಗೆ ಸಾ ಇದರ ಉಪ್ಯೋಗಿಸ್ತಿದ್ದೊ. ಈ ನಾರ್‌ನ ಪೊರ್ಲ್ ತಿರ್‌ಂಟಿ ಹುರಿಮಾಡಿ ಸುಮಾರ್ ಒಂದ್ ಮೊಳದಷ್ಟ್ ಉದ್ದ ಮಾಡ್ವೆ. ಒಂದ್ ಕೊಡಿನ ಐದ್ ಸೀಳ್ ಮಾಡಿ, ಹೆಡೆ ಬಿಚ್ಚಿದ ಸರ್ಪ ಹಾವ್‌ನ ತಲೆ ಹಾಂಗೆ ಅಗಲ್ಸಿ ನೇದವೆ. ಅಲ್ಲಿ ನೇಯಕನ ಬೊಳ್ಳಿನ ಬೊಗ್ಗಿಸಿ ಒಂದ್ ನಿಂಬೆ ಹಣ್ಣ್ ಇಸ್ವಷ್ಟು ಗುಂಡಿ ಬರ್ವ ತರ ನೇದವೆ. ಇನ್ನೊಂದ್ ಕೊಡಿಲಿ ಸಣ್ಣ ಉರ್ಳ್ ಇದ್ದದೆ. ಇಷ್ಟ್ ಮಾಡ್ರೆ ಕವ್ಣೆ ಬಿಲ್ಲ್ ಆತ್. ಅವ್ಕೆ ಹಗ್ಲ್ ಇರ್ಳ್‌ಂತ ಇಲ್ಲದೆ ಪ್ರಾಣಿಗಳ ಹೆದ್ರಿಸಿಕೆ, ಕೊಲ್ಲಿಕೆ ಇರ್ವ ಸಾಧನ ಇದ್. ಒಳ್ಳ ಗುರಿ ಇದ್ದೊವ್ವು ಹಾರುವ ಹಕ್ಕಿನ ಸಾ ಈ ಕವ್ಣೆ ಬಿಲ್ಲ್‌ಗೆ ಕಲ್ಲ್ ಇಸಿ ಹೊಡ್ದ್ ಬೀಳ್ಸುವೆ ಅಂದರೆ ಪ್ರಾಣಿಗಳ ಕತೆ ಎಂತದ್?

ಕವ್ಣೆ ಬಿಲ್ಲ್‌ಲಿ ಹೊಡಿಯೊದ್ ಅಂದರೆ, ಸುರೂಗೆ ಸಣ್ಣ ಉರ್ಳುನ ಕಿರು ಬೆರ್ಳಿಗೆ ಸಿಕ್ಕಿಸಿಕೊಂಬದ್. ಹಾವುನ ಹೆಡೆ ಹಾಂಗಿನ ಭಾಗಲಿ ಒಂದ್ ಗುಂಡಿ ಉಟ್ಟಲ್ಲಾ? ಅಲ್ಲಿ ಲಿಂಬೆ ಹಣ್ಣ್‌ನಷ್ಟ್ ದೊಡ್ಡ ಕಲ್ಲ್ ಇಸುದು. ಆ ಮೇಲೆ ಕಲ್ಲ್ ಬೀಳದ ಹಾಂಗೆ ಆ ಬೊಳ್ಳಿನ ತಿರ್ಗ್‌ಸುದು. ಎಷ್ಟ್ ಜೋರ್ ತಿರ್ಗ್‌ಸ್ವೆ ಅಂದರೆ ಅದರ ಸದ್ದ್ "ರೊಂಯೋಂ ರೊಂಯೋಂ"ಂತ ಒಂದ್ ಮೈಲ್ ದೂರಕ್ಕೆ ಕೇಳುದು. ಹಕ್ಕಲೆ ಇದ್ದವರ್ಡ್ ಕೆಬಿ ಹೊಟ್ಟಿ ಹೋದ್ದಂಗೆ ಆದೆ. ಅದರ ತಿರ್ಗುವ ರವುಸ ಕಡಮೆ ಆಕೆ ಮುಂದೆ ಕಲ್ಲ್‌ನ ಗುರಿಗೆ ಹೊಡ್ಯೊಕು. ಆ ರವ್ಸ್‌ಲಿ ಹೊಡ್ದ ಕಲ್ಲ್ ಯಾದಾರ್ ಪ್ರಾಣಿಗೋ, ಹಕ್ಕಿಗೋ ತಾಂಗಿತ್‌ತೇಳ್ರೆ ಅದ್ ಅಲ್ಲೇ ಪಡ್ಚ!

ಇದಲ್ಲದೆ ಅವು ಪ್ರಾಣಿಗಳಿಗೆ ಉರ್ಲ್ ಇಸ್‌ತಿದ್ದೊ. ಬೇರೆ ಪ್ರಾಣಿಂತ ಹೇಳ್ವ ಬದಲ್ ಹಂದಿಗೇಂತ ಹೇಳ್ರೇ ಸರಿ! ಬೆಳೆ ಹಾಳ್ ಮಾಡುದರ್ಲಿ ಆನೆ ಬುಟ್ಟರೆ ಮತ್ತೆ ಹಂದಿನೇ ಮುಂದೆ. ಕೋರೆ ಬಂದ ದಡ್ಡ ಆಗಲೀ, ಕೂಡು ಕುಟುಂಬದ ತುಂಬು ಸಂಸಾರದೊಟ್ಟಿಗೆ ಬಾವ ದಡ್ಡೆಗ ಆಗಲಿ, ಅವು ಕುಮೆರಿಗೆ ನುಗ್ಗಿದೊಂತೇಳ್ರೆ, ಬೆಳೆ ಎಲ್ಲ ಹೊಡಿಹೊಡಿ. ಕುಮೆರಿಯ ಮಾಡ್ದ ಎಲ್ಲೊವ್ವು ಉರ್ಲ್ ಇಸುದರ್ಲಿ ಮಿಸ್ಮರೇ. ಹಾಂಗಾಗಿ ಕಮ್ಮಿ ಅಂದರೆ ಬೆಳೆ ಸಮಿಯಲಿ, ನಾಲ್ಕೈದ್ ಹಂದಿಗ ಆದರೂ ಸಿಕ್ಯೇ ಸಿಕ್ವೆ. ಹಂದಿ ಸಿಕ್ಕಿತೋ ಅವ್ಕೆ ಕುಸಿಯೋ ಕುಸಿ! ಬೆಳೆ ಒಳ್ತು, ಹಂದಿ ಸಿಕ್ಕತ್‌ಂತ ಹೇಳ್ವ ಕುಸಿ ಅಲ್ಲ, ನಾಕ್ ದಿನ ಪೊರ್ಲುಲಿ ಹಂದಿ ಗೈಪುಲಿ ಹುಳ್ಳಂಗೆ ಉಣಕಲ್ಲ ಅದಿಕ್ಕೆ! ಹಂದಿಗ ಆಗಲಿ ಬೇರೆ ತಿಂಬಂತ ಪ್ರಾಣಿಗ ಆಗಲಿ ಎಲ್ಲ ಮಾಡಂಗೋಲ್‌ನವು ಒಟ್ಟು ಸೇರಿ ಹಜಿರ್ ಮಾಡಿ, ಪಾಲ್ ಮಾಡಿಕಂಡವೆ. ಯಾರ ಉರ್ಳ್‌ಗೆ ಬಿದ್ದುಟೋ ಅವಂಗೆ ದೊಡ್ಡ ಪಾಲ್!

ನೀವು ನಂಬಿರೆನಾ? ಬುಟ್ಟರೆನಾ? ಅಂದ್ ಅವು ಕಾಡ್ ಪ್ರಾಣಿಗಳ ಕಾಟಂದ ಬುಡ್ಸಿಕೊಂಬಕೆ ಪ್ರಾಣಿಗಳಿಗೆ "ಮಾಟ" ಮಾಡ್ತಿದ್ದೊ. ಆ ಮಾಟದ ಸಂಗತಿ ಅಂದ್‌ನ ಅಜ್ಜಂದರಿಗೆ ಮಾತ್ರ ಗೊತ್ತಿತ್ತ್. ಅವು ತೋಪ್ಪಿ ಸಾ ಬೇರೆವ್ಕೆ ಹೇಳ್ತಿತ್ಲೆ. ಹಾಂಗಾಗಿ ಅವು ಸಾಯಕನ ಅವರ ಒಟ್ಟಿಗೇ ಆ ಮರ್ದ್ದ್‌ನ ಗುಟ್ಟು ಸತ್ತು ಹೋತ್. ಅದಕ್ಕೆ ಅವು "ಬೆಂಬು ಕಟ್ಟುದು"ಂತ ಹೇಳ್ತಿದ್ದೊ. ಅದಕ್ಕೆ ಬೇಕಾದ ಹಸ್ರ ಮದ್ದ್‌ನ ಗುಟ್ಟುಲಿ ತೆಯಾರ್ ಮಾಡ್ತಿದ್ದೊ. ಬೇಕಾದ ಸಾಮಾನ್‌ಗಳ ಹಗ್ಲೇ ಜೋಡ್ಸಿ ಇಸಿಕಂಡ್, ಎಲ್ಲೊವು ಮಲ್ಗಿದ ಮೇಲೆ ಪಾಕ ಮಾಡಿ, ಬೆಳ್ಜರಿಗೆ ಮುಂದೆ, ಕುಮೆರಿ ಗದ್ದೆಲಿ ಅಲ್ಲಿ ಇಲ್ಲಿಂತ ಸುಮಾರ್ ಕಡೆ ಇಸಿ ಮೊಣ್ಣ್ ಮುಚ್ಚುತಿದ್ದೊ. ಆ ಮೇಲೆ ಎಲಿ ಹೆಗ್ಗಣದಂತ ಸಣ್ಣ ಪ್ರಾಣಿಗ ಬಂದರೆ ಮತ್ತೆ ಕೇಳಿ!

ಬೇಸಾಯ ಕೆಲ್ಸ ಮುಗ್ದ ಮೇಲೆ ಬೆಂಬು ಇಸಿದರ ತೆಗ್ಯಕೆ ಉಟ್ಟು, ಅದ್ ಹಾಂಗೆ ತೆಗ್ಯೋದಲ್ಲ. ಎಲ್ಲರ ಎಲ್ಲಾ ಕೊಯ್ಲು ಮುಗ್ದ ಮೇಲೆ, ಅವೇ ಮಾತಾಡಿಕಂಡ್ ಒಂದ್ ದಿನ ಕುಮೆರಿ ಮಾಡ್ದ ಮನೆಯ ಗಣ್ಮಕ್ಕ ಎಲ್ಲಾ ಒಟ್ಟು ಸೇರಿ, ಮೂಡುಪಡ್ವಾಗಿ ನಿತ್ತ್, ಇವು ನಿತ್ತ ಕಡೆಗೆ ಕೊಡಿ ಇರ್ವ ಹಾಂಗೆ ಬಾಳೆಲೆಲಿ ಬಳ್ಸಿಕೆ ಉಟ್ಟು. ಬೆಂಬು ಇಸಿದಂವ ಕುಮೆರಿ ಬೆಳೆನ್ ಕಾಪಾಡ್ದ ಊರು, ಮನೆ ದೆವ್ವಗಳ, ದೇವ್ರುಗಳ ನೆನ್ದ್, ಕಾಡ ದೆವ್ವ ದೇವ್ರುಗಳಿಗೆ ಹೊದ್ಲ್ ಮತ್ತೆ ಮೀನ್ ಗೈಪು ಇಕ್ಕಿ, ಆ ಮೇಲೆ ಎಲ್ಲೊವು ಕೈ ಮುಗ್ದ್ "ನಿಮ್ಮ ನಂಬಿ ನಾವು ಕುಮರಿ ಬೆಳೆ ಮಾಡ್ದೊ. ನೀವು, ನಮ್ಮ ಮತ್ತೆ ನಮ್ಮ ಬೆಳೆನ್ ಕಾಪಾಡಿಕಂಡ್ ಬಂದೊಳ್ರಿ, ಇಂದ್‌ಗೆ ನಮ್ಮ ಕೊಯ್ಲು ಎಲ್ಲ ಮುಗ್ತ್. ಹಾಂಗೆ ನಮ್ಮ ಬಕ್ತಿಲಿ ನಾವು ನೀವುಗೆ ಬಳ್ಸಿಯೊಳೊ. ತಂದ ಸಾಮಾನ್‌ಲಾಗಲಿ, ಮಾಡ್ದ ಅಡಿಗೆಲಾಗಲಿ ಏನಾರ್ ಹೆಚ್ಚ್ ಕಮ್ಮಿ ಆಗಿರ್‍ದು. ನಮ್ಮ ಎಲ್ಲಾ ತೋಪ್ಪುಗಳ ಹೊಟ್ಟೆಲಿ ಹಾಕ್ಕಂಡ್, ನಾವು ಬಕ್ತಿಲಿ ಬಳ್ಸಿದರ ತೆಕ್ಕಂಡ್, ಇಲ್ಲಿ ಮುಟ್ಟ ನಮ್ಮ ಕಾಪಾಡಿಕಂಡ್ ಬಂದ ಹಾಂಗೆ ಇನ್ನ್ ಮುಂದೆನೂ ನಿಮ್ಮ ಮಕ್ಕಳ ಕಾಪಾಡ್ವ ಪುಣ್ಯ ಕೀರ್ತಿ ನಿಮ್ಮದ್"ಂತ ಹೇಳಿಕನ, ಅವನ ಮಾತೊಟ್ಟಿಗೆ ಒಳ್ದವೂ ಎರ್ಡ್ ಒಳ್ಳೆ ಮಾತ್ ಸೇರ್ಸಿ ಹೇಳಿ, ಅಡ್ಡಬಿದ್ದ್, ದೆವ್ವ ದೇವ್ರುಗ ಸ್ವೀಕಾರ ಮಾಡಲಿಂತ ಒಂದಷ್ಟ್ ದೂರ ಹೋಗಿ ತಿರ್‍ಗಿ ನಿಂತವೆ. ಒಸ್ಯ ಹೊತ್ತ್ ತಡ್ದ್ ಹಿಂದಕೆ ಬಂದ್, ಬೆಂಬ್ ಇಸಿದಂವ ಬೆಂಬು ತೆಗ್ದದೆ. ಅತ್ತ ಹೊದ್ಲೊಟ್ಟಿಗೆ ಉಂಬಕೆ ಬೇರೆ ಗಂಜಿನೋ ಹುಗ್ಗೆನೋ ಮಾಡಿದ್ದವೆ. ಆ ಮೇಲೆ ಬಳ್ಸಿದರ ಎಲ್ಲೊವು ಹಂಚಿಕಂಡ್, ಒಣಂಗೇಲ್‌ಮೀನ್ ಗೈಪುಲಿ, ಮಾಡ್ದ ಗಂಜಿನ ಸಾ ಉಂಡ್ ಹೋದವೆ.

ಬತ್ತದ ದೈ ಕದ್ರ ಬುಟ್ಟ್, ತೆನೆ ತೂಂಗಿ ಬಾಗಿ, ಕೊಯ್ಲಿಗೆ ಹದ ಆತ್. ಸಾಜ ಕೃಷಿಲಿ ಎದೆ ಮಟ್ಟಕೆ ಪುಷ್ಟಿಲಿ ಬೆಳ್ದ ಆ ದೈಗಳಲಿ ಮೊಣಕ್ಕೆ ಉದ್ದದ ತೆನೆ! ತೆನೆ ತುಂಬ ಬಂಗಾರ ಬಣ್ಣದ ಉದ್ದುದ್ದ ಕಾಳ್! ವ್ಹಾ! ನೋಡ್‌ವೊವ್ಕೆ ಕಣ್ಣ್‌ಗೆ ಹಬ್ಬ! ಬೆಳ್ದವ್ಕೆ ಅದ್ ಸೊರ್ಗ. ನೋಡಿ ನೋಡಿ ಎದೆ ತುಂಬ್ಸುಕಣ್ತಿದ್ದೊ. ಎಷ್ಟ್ ನೋಡ್ರೂ ಸಾಕಾಗದ್! ಆ ಬತ್ತದ ದೈಗಳೊಟ್ಟಿಗೆ ಪಂಥ ಮಾಡ್ವ ಹಾಂಗೆ ರಾಗಿ, ಜೋಳ, ಸಾಮೆಗಳದ್ದ್ ಪೊರ್ಲ್! ಬೇರೆ ಬೇರೆ ಬಣ್ಣ ಹಾಕಿ ಮಾಡ್ದ ಒಂದ್ ದೊಡ್ಡ ಚಿತ್ರದ ಹಾಂಗೆ ಆ ಇಡಿ ಕುಮೆರಿ ಗದ್ದೆ ಕಾಂಬೊತಿತ್ತ್! ಬೆಳೆಗಾರರ್ ನಾವು ಕಷ್ಟ ಪಟ್ಟದ್ದ್ ಸಾರ್ಥಕ ಆತ್‌ಂತ ಕುಸಿ ಪಡ್ತಿದ್ದೊ.

ಎಲ್ಲಾ ಧಾನ್ಯಗ ಕೊಯ್ಲಿಗೆ ಬಂದಿದ್ದರೂ ಸುರುನ ಕೊಯ್ಲ್ ಬತ್ತದ್ದೇ. ಅದ್ ಅಡ್ಡ ಬೀಳುದ್ ಬೇಗ. ಹಾಂಗೇನಾರ್ ನೆಲಕ್ಕೆ ಬಿದ್ದರೆ ಬತ್ತ, ಆ ಕಾಡ್‌ನ ಮೊಣ್ಣ್‌ಲಿ ಸೇರಿ ಅದ್ ಹಾಳಾತ್‌ಂತನೇ ಲೆಕ್ಕ. ಹಾಂಗಾಗಿ ಅವು ಅಲ್ಲೇ ಒಂದ್ ಸಣ್ಣ ಕಳ ಮಾಡಿಕೊಂಡವೆ.

ಕಾಡ್‌ಂದ ಮಾದೆರಿ ಬೋಳ್ಳಿ ತಂದ್ ಬತ್ತದ ಪೊಡಿ ಮಾಡಿ, ನಾಕ್ ಗೂಂಟದ ಮೇಲೆ ಅದರ ಇಸಿ, ಕೊಯ್ದು ತಂದ ಬತ್ತದ ತೆನೆನ ಅದಕೆ ಬೋಡ್ದವೆ. ಇವು ಯಾಗ ಒಕ್ಕಲ್ ಮಾಡ್ವೆಂತ ತಿಳ್ಕಂಡ ಸಾವ್ಕಾರ ಕಾಳ್ ರಾಸಿ ಬೀಳಿಕೆ ಮುಂದೆನೇ ಹಾಜಿರ್! ಗೋಣಿ ಚೀಲ, ಮಡ್ಚೀಲ, ಬತ್ತ ಅಳ್ಯಕೆ ಕಳಸೆ ಹಿಡ್ಕಂಡ್ ಗಂಡಾಳ್‌ಗಳ, ಬತ್ತ ಹೊಡ್ಕಿಕೆ ಹೆಣ್ಣಾಳ್‌ಗಳ ಸಾ ಕರ್ಕಂಡ್ ಬಂದದೆ. ಹೆಣ್ಣಾಳ್‌ಗ ಬತ್ತ ಹೊಡ್ಕಿಕೆ ಸುರು ಮಾಡ್ದೊ. ಕುಮೆರಿ ಮಾಡ್ದವು ಸುರುಗೆ ಅವರ ಮನೆ ದೈವ, ದೇವ್ರಿಗೆ ಹಾಂಗೆ ಕುಮೆರಿನ ಕಾಪಾಡ್ದ ಕಾಡ್‌ನ ಮಲೆ ದೈವ ದೇವ್ರಿಗೆಂತ ಐದೈದ್ ಮುಡಿ ಬತ್ತ ತೆಗ್ದ್ ಕಟ್ಟಿ ಇಸಿಕಂಡೊ. ಕುಮೆರಿ ಬೆಳೆಲಿ ಅವರ ಪಾಲ್‌ನ ಬತ್ತ ಅಂದರೆ ಇಷ್ಟೇ. ಅದರ್ಲಿ ಕಳ್ಳ್ ಕೊಟ್ಟವಂಗೆ, ಕೈ ಸಾಲ ಕೊಟ್ಟವ್ಕೆ ಕೊಟ್ಟ್ ಒಳ್ದದ್ದ್, ಆ ಮೇಲೆ ಅವರ ದಟಿಗೆಲಿ ನಡೆವ ಹೊಸ್ತೂಟ, ಮತ್ತೆ ದೀಪಾವಳಿ ಹಬ್ಬದ ವಿಶೇಷ ಅಡಿಗೆಗೆ! .

ಬತ್ತ ಹೊಡ್ಕುವವ್ಕೆ ಕುಮೆರಿ ಮಾಡ್ದವರ ಚೋಪಾರ್ತನ ಗೊತ್ತಿದ್ದದ್ದೇ. ಇವುನೂ ಆ ಸಾವ್ಕಾರಂದ ಮೋಸ ಹೋದವೇ. ಅದಕ್ಕೆ ಸೇಡ್ ತೀರ್ಸಿಕೊಲ್ಂಬಕೆ ಅವ್ಕೆ ಇದ್ ಒಂದ್ ಒಳ್ಳೆ ಸಮಿಯ. ಹಾಂಗಾಗಿ ಬತ್ತ ಹೊಡ್ಕಿಕಾಕನ ಬೇಕಂತಳೇ ದಡ್ಡ್ ಬತ್ತದೊಟ್ಟಿಗೆ ಕಾಳ್‌ನ ಸಾ ಹಾರ್ಸ್ತಿದ್ದೊ. ಒಂದ್ ಒಂದೂವರೆ ಮುಡಿ ಬತ್ತ ದಡ್ಡ್ ಬತ್ತದೊಟ್ಟಿಗೆ ಸೇರಿಕಣ್ತಿತ್ತ್. ಹೀಂಗೆ ಬತ್ತ ಹೊಡ್ಕಿಕಾಕನ ಕಾಳ್ ಹಾರ್ಸಿ ಉಪಕಾರ ಮಾಡಿದೊವ್ಕೆ, ಇವು ಮತ್ತೆ ನಟ್ಟಿಕಾಯಿಲಿ ಒಂದ್ ದೊಡ್ಡ ಪಾಲ್ ಕೊಡ್ತಿದ್ದೊ. ಮುಕ್ಕಾಲ್‌ಪಾಲ್‌ಗಿಂತ ಬತ್ತ ಹೆಚ್ಚ್ ಸಿಕ್ಕಿರೂ ಸಾವ್ಕಾರ ಮೋರೆ ಗಂಟ್ ಹಾಕ್ಕಂಡೇ "ಏನೋ, ಅಲ್ಲಿಂದ ಅಲ್ಲಿಗಾತ್ ಅಷ್ಟೇ"ಂತ ಗೊಣಗಿಕಂಡೇ ಹೋತಿತ್ತ್.

ಕುಮೆರಿ ಮಾಡಂವ ಬೆರೀ ಪಾಪದಂವ! ವಿದ್ಯೆ ಇಲ್ಲೆ, ಬುದ್ದಿ ಇಲ್ಲೆ, ತಿಳಿವಳಿಕೆ ಇಲ್ಲೆ, ವ್ಯವಾರ ಗೊತ್ತಿಲ್ಲೆ! ಅಂಥಾ ಪೆಂಗ! ಇಂಥವರ ಹೊಂಡಕೆ ಬೀಳ್ಸಿಕೆ ಸಾವ್ಕಾರನೇ ಆಕೂಂತೇನು ಇಲ್ಲೆ. ಹಣ, ಅಧಿಕಾರ, ಜಾತಿಬಲ ಇದ್ದವು, ಎಲ್ಲೊವು ಅಂತವರ ಹೊಂಡಕೆ ನೂಕುವೊವೇ, ಮೂರ್ನಾಮ ಹಾಕ್ವವೇ! ನಿಜ್ವಾಗಿ ಸಾವ್ಕಾರನ ಕೈಯಿಂದ ತೆಕಂಡ ಬತ್ತದ ಸಾಲ ಎಸ್ಟ್? ಆ ಲೆಕ್ಕಲಿ ನಾವು ಕೊಡೊಕಾದ ಬತ್ತ ಎಸ್ಟ್? ಈ ಯಾವ ಲೆಕ್ಕಾಚಾರನೂ ಇಲ್ಲದೆ ಅವ್ನೊಟ್ಟಿಗೆ ಅಂವ ಹೇಳ್ದಕ್ಕೆ ಒಪ್ಪಚಾರ ಮಾಡಿಕೊಂಡವೆ. ಅಂಗಡಿ ಸಾಮಾನ್‌ಲೂ ಅಂವ ಲಾಭ ಹೊಡ್ಕಂಡರೂ, ಸಾವ್ಕಾರ ಅಲ್ಲರೆ ಈ ಊರ್ಲಿ ನಾವುಗೆ ಬೇರೆ ಯಾರ್ ಸಾಯ ಮಾಡ್ವೆಂತ, ಸಾಹುಕಾರನ ಉಪಕಾರನೇ ದೊಡ್ಡದ್ ಮಾಡ್ವ ಪೆಂಗಗ! ನಾವೇ ಹೋಗಿ ಕೇರಳಂದ ಬೀಜದ ಬತ್ತ ತರಕ್ಕ್‌ಂತ ಹೇಳ್ವ ಸಣ್ಣ ಯೋಚನೆನೂ ಅವ್ಕೆ ಬಾದ್‌ಲೆ. ಅಂತ ಮರೆಮೋಸ ಗೊತ್ತಿಲ್ಲದ ಮೊದ್ದ್‌ಗ! ಹಾಂಗಾಗಿ ಸಾವ್ಕಾರ ಬುಟ್ಟದ್ದ್ ನಾವ್ಗೆ ಸಾಕೂಂತ ಅದರ್ಲೇ ಕುಸಿಪಟ್ಟವೇನೇ ಸಿವಾಯ್, ಸಾವ್ಕಾರನ ಎದ್ರ್ ಹಾಕಂಬ ಗಡ್ಸ್ ಅವ್ಕಿಲ್ಲಾಗಿತ್ತ್. ಸಾವ್ಕಾರ ಬೇಕಾದಷ್ಟ್ ಹೊಡ್ಕಂಡತ್ ಅಂತ ಗೊತ್ತಿದ್ದರೂ ಬಾಯಿ ಬುಡುದ್ಲೆ. ಯಾಕೆಂತೇಳ್ರೆ ಬರ್ವ ವೊರ್ಸಕ್ಕೆ ಸಾ ಅಂವನೇ ಬತ್ತ ತಂದ್ ಕೊಡೋಕಲ್ಲಾ?

ಸಾವ್ಕಾರ ಬತ್ತ ತೆಕಂಡ್ ಹೋದದರ ನೋಡಿಕಂಡಿದ್ದ್, ಅಂವ ದಾಟಿದ ಮೇಲೆ, ಇವು ಕುಮೆರಿ ಗದ್ದೆನ ನೋಡ್ವೆ, ಅಲ್ಲಿ ರಾಗಿ, ಜೋಳ, ಸಾಮೆ ಎದೆ ನೆಟ್ಟಂಗೆ ಮಾಡಿ ನಿತ್ತ್ "ನಾವ್ ನಿನ್ನ ಸೋಲಿಕೆ ಬುಡಿಕಿಲ್ಲೆ"ಂತ ಸಮದಾನ ಮಾಡ್ವ ಹಾಂಗೆ ಕಂಡತ್. ಅಷ್ಟರ್ಲೇ ಅವ್ಕೆ ನೆಮ್ಮದಿ. ಮರಗಳ ಗುತ್ತಿ ಕಡೆ ಕಣ್ಣ್ ಹಾಕಿರೆ, ಅಡಿಂದ ಕೊಡಿ ವರೆಗೆ ಹಬ್ಬಿದ ಬೇರೆ ಬೇರೆ

ಬೊಳ್ಳಿಗಳಲಿ ಕುಂಬಳ, ಕೆಂಬುಡೆ, ಸೋರೆ, ಗರ್ಬೀಜ, ಸೋಂತೆ, ಹಾಗಲ, ಓರೆ ಎಲ್ಲಾ ಆ ಎತ್ತರಲಿ ನೇಲಿಕಂಡ್ ಅವ್ಕೆ ಧೈರ್ಯ ಕೊಡ್ತಿದ್ದೊ. ಅಲ್ಲೇ ಒಂದ್ ಪಡೆಲಿ ರಾಸಿ ಜಿದ್ದ ಬಿಳ್ಗಿಲ್. ಗಿರಾಕಿಗ ಸಿಕ್ಕಿರೆ ಇದರ್ಲೂ ನಾಕ್ ಕಾಸ್ ಸಿಕ್ಕುದೂಂತ ಹೇಳಿಕಂಡೊ ಮನ್ಸ್‌ಲೇ. ಹಾಂಗೆ ದುಡ್ಡು ಸಿಕ್ಕಿರೆ ದಟಿಗೆನ ಎಲ್ಲೋವ್ಕು ಹೊಸ ಅರ್ವೆ ತೆಗ್ಯೋಕುಂತ ಸಾ ಯೋಚನೆ ಮಾಡ್ತ್ ಕಳಲ. ಪಾಪದವರ ಆಸೆನೂ ಅಷ್ಟ್ ದೊಡ್ಡದಾಗಿ ಇರುದಿಲ್ಲೆ ಅಲ್ಲಾ? ಅಷ್ಟಕ್ಕೂ ಅವು ಹಾಕಿದ ಬಂಡ್ವಾಳ ಎಷ್ಟ್? ರಟ್ಟೆ ಬಲ, ಹಠದ ಬಲ–ಅಷ್ಟೇ. ಹಾಂಗಾಗಿ ನಷ್ಟ ಆದರೂ ಅದಿಕೆ ಅವು ಸಂಕಟ ಪಡವೊವ್ ಅಲ್ಲ. ಅದಕ್ಕಿಂತ ಎಷ್ಟ್ ಪಾಲ್ ಹೆಚ್ಚಿ ಕಷ್ಟ ಪಟ್ಟೊವೊನೋ ಏನೋ, ಅವರ ಬೊಡ್ಕಲಿ.

ಕಳಲನ ಬಿಳ್ಗಿಲ್‌ಗೆ ಗಿರಾಕಿ ಆತ್. ಅವ್ವಂಗೆ, ಮಾಯ್ಲುಗೆ, ಮಕ್ಕಳಿಗೆ ಎಲ್ಲಾ ಹೊಸ ಅರ್ವೆ ತೆಗ್ತ್. ಅವಂಗೆಂತ ಒಂದ್ ಮೊಂಡ್ರಿ ತೆಕಂಡತ್.

ಇನ್ನ್ ನಾಲ್ಕೈದ್ ತಿಂಗ ಹಸಿವುಂತೇಳ್ವ ದೆವ್ವದ ಕಾಟ ಇಲ್ಲದೆ ದಿನ ಕಳಿಯಕ್‌ಂತ ನೆಮ್ಮದಿಲಿ ನೀರ್ಮಲೆನ ಎಲ್ಲಾ ದಟಿಗೆಯೊವು ಮದ್ವೆ, ನೇಮ, ಜಾತ್ರೆ, ಕೋಳಿಕಟ್ಟ ಇದಕ್ಕೆಲ್ಲ ಪುರ್ಸೊತು ಮಾಡಿಕಂಡ್ ಅವ್ಕವ್ಕೆ ಬೇಕಾದ್ದಕ್ಕೆ ಹೋಗಿ ಕುಸಿ ಪಟ್ಟೊ. ❑

ಹಾಳೆ– 5
ಕಳಲನ ಕೈ ಹೋತ್

ಕಳಲಂಗೆ ಮೀನ್ ಹಿಡಿಯೊದ್ ಅಂದರೆ ಸಣ್ಣದರಿಂದಳೇ ಒಂದ್ ಮೋರ್ಲ್. ಅವಂಗಾದರೂ ಸರಿ, ಬೇರವ್ಕಾದರೂ ಸರಿ, ಅದಿಕ್ಕೆ ಆ ಕಾಲ ಈ ಕಾಲಂತ ಯೆತ್ಯಾಸ ಏನ್ ಇಲ್ಲೆ. ಹಳ್ಳಲಿ ಇರ್ವ ಮೀನ್‌ಗಳಿಗೆ ಸಾ ಕಾಲದ ಹಂಗಿಲ್ಲಲೇ?

ಕಳಲ ಕೆಲ್ಸ ಬುಟ್ಟು ಬಾಕನನೇ ಕತ್ತಲಾದೆ. ಬಂದ್ ಚಾಂತ ಹೇಳ್ವ ನೀರ್ ಕುಡ್ದ್, ಏನಾರ್ ಇದ್ದರೆ ತಿಂದ್, ಮೀದ್, "ನಾ ಹಳ್ಳದ ಹಕ್ಕಲೆ ಹೋನೆ, ಯಾರಾದರ್ ಬಾದಾದರೆ ಬನ್ನಿ"ಂತ ಹೇಳಿ ಸೀದ ಹೊರ್ಟ್ ಬುಡ್ತಿತ್ತ್. ಇದರ ಕೇಳಿ ಯಾರಾರ್ ಹೊರಟ್ರೆ ಹೊರ್ಟೊ. ಇಲ್ಲೆಂತೇಳ್ರೆ ಯಾರ ವತ್ತಾಯ ಮಾಡುವ ಕ್ರಮ ಅವನ ಹಕ್ಕಲೆ ಇಲ್ಲೆ. ಯಾರ್ ಇಲ್ಲೆಂತೇಳ್ರೆ ಒಬ್ಬನೇ ಹೋದೆ. ಮಾಚು ಮನೆಲಿ ಇದ್ದರೆ, ಬೇರೆ ಎಂಥ ಘನಂದಾರಿ ಕೆಲ್ಸ ಇದ್ದರೂ ಒಸಿ ತಡ್ದ್ ಆದರೂ, ಅಪ್ಪನ ಹಿಂದಂದ ಹೋವವ್ವೆ. ಮಳ್ಗಾಲಲಿ ನೀರ್ ಹೆಚ್ಚ್ ಇರಿಕನ ಹಳ್ಳಕ್ಕೆ ಹೊರ್ಟರೆ ಮಾಯ್ಲು ಪರ್‌ಂಚ್‌ತಿತ್ತ್. "ಹೋದ ಕಾಲ ಓಡಬಾಯಿಲಿ ಮೀನ್ ಹಿಡ್ಯಕೆ ಹೋದ ರಾಮಣ್ಣ ನಾಯ್ಕರ್ ಬೊಳ್ಳಲಿ ಹೋದ್ದ್ ನೆಂಪು ಇಲ್ಲೆನಾ"ಂತ ಕೇಳ್ತಿತ್ತ್. ಮಾಯ್ಲು ಹೇಳ್ದ್ ಕೆಬಿಗೆ ಬೀತೇ ಇಲ್ಲೆಂತ ಹೇಳ್ವ ಹಾಂಗೆ ಕಳಲ ಮೀನ್ ಹಿಡ್ಯಕೆ ಬೇಕಾದ್ದರ ಹಿಡ್ಕಂಡ್ ಹೋತಿತ್ತ್. ಯಾರೂ ಬರದಿದ್ದರೂ ಮಾಚು ಬಂದೇ ಬಂದದೆಂತ ಅವಂಗೆ ಗೊತ್ತಿತ್ತ್. ಗಾಳ ಹಾಕುದಾರೆ ಮಾಚು ಯಾಗೋಳು ಚಿಪ್ಪಿಲಿ ಒಂದಷ್ಟ್ ನಕ್ಕುಳು ಹಿಡ್ದ್ ಮೋಣ್ಣನೊಟ್ಟಿಗೆ ಹಾಕಿ ಇಸ್‌ತಿತ್ತ್. ಅದಲ್ಲರೆ, ಬಲೆಗಾದರೆ ಕುಂಡ ಪಿಜಿನ್ದ್ ಪಟ್ಟ್ ಎಲ್ಲಿ ಉಟ್ಟುಂತ ನೋಡಿ

ಹುಡ್ಕಿ ಇಸಿಕೊಂಬತಿತ್ತ್. ಹುಣ್ಣಿಮೆ ದಿನ ಆದರೆ ಮೀನ್ ಕಡ್ದ್ ತಾದೂ ಇತ್ತ್. ಅಪ್ಪನೊಟ್ಟಿಗೆ ಮೀನ್ ಬೇಟೆಗೆ ಹೋಕನ ಯೇನ್ ಬೇಕೋ ಅದರೆಲ್ಲ ವ್ಯವಸ್ತೆ ಮಾಡಿ, ಹಿಡ್ಕಂಡ್ ಹೋತಿತ್ತ್. ಅದಕ್ಕೆ ಮಾಯ್ಲು "ಅಪ್ಪಂಗೆ ಸರ್‍ಯಾದ ಮಗ"ಂತ ಹೇಳ್ತಿತ್ತ್. ಇದ್ "ಹೌದೀಗ, ನಾ ಅಪ್ಪನ ಮಗನೇ. ಅದರ್ಲೇನಾತ್"ಂತ ಹೇಳಿಕಂಡ್ ಓಡ್ತಿತ್ತ್.

ಮಾಚುನ ಕಣ್ಣೆದ್ರ್ ಅಂದ್‌ನ ಆ ಚಿತ್ರಗ ಮತ್ತೆ ಮತ್ತೆ ಬರ್‍ತಿದ್ದೊ. ಕಳಲನ ಮೀನ್ ಬೇಟೆನ ಸಂಗತಿ ಹೇಳಿಕೆ ಹೋದರೆ ತುಂಬ ಇರ್‍ದು. ಈಗ ಅದಕ್ಕೆ ನೆಂಪು ಇರುದು ಕೆಲೊವ್ವೊ ಮಾತ್ರ!

ಹೆಳ್ಮಕಳ ಮನ್ಸ್, ಮೀನ್‌ದ್ದ್ ದಾರಿ ಯಾರೂ ಕಂಡವು ಇಲ್ಲಂತ ಗಾದೆ. ಆದರೆ ಕಳಲ ಮೀನ್‌ನ ದಾರಿ ಕಂಡ್ ಹಿಡ್ದಿತ್ತ್. ಅದ್ ಅವನ ಅನ್ಬವ, ಅಂದಾಜ್ ಬಲಂದ. ಅಂವ ನೆಲಲಿ ಇದ್ದರೂ ಅವನ ಮನ್ಸ್ ಇದ್ದದ್ದ್ ನೀರ್‌ಲಿ; ನೀರ್ಲಿ ಇರ್‍ವ ಮೀನ್‌ಗಳಲಿ! ಅವನ ಮನ್ಸೊಳಗೆ ಹೀಂಗೊಂದ್ ಆಲಚನೆ ಇದ್ದಿರೋಕು. ಮೀನ್‌ನ ದಾರಿ ಕಂಡ್ ಹುಡ್ಕಿ, ಅದಕ್ಕೆ ಉರ್‍ಲ್ ಇಸೊಕುಂತ. ಅಂವ ಇದರ ಕಂಡ್‌ಕೊಂಬಕೆ ಬಾರಿ ಪ್ರೇತ್ನ ಮಾಡಿತ್ತ್. ಮೀನ್ ಸಿಕ್ಕದೇ ಹೋದರೂ ಅಂವ ಪೇತ್ನ ಬುಟ್ಟತ್ಲೆ. ಎರಡ್ಮೂರ್ ಮೊಳದುದ್ದದ ಕಬರ್ ಕೋಲ್, ಕವ್ಣೆ ಬಿಲ್ಲಿಗೆ ಮಾಡ್ವ ಬೊಳ್ಳಿದ್ ಹುರಿ ಬೊಳ್ಳಿ, ಮತ್ತೆ ಇನ್ನೇನೋ ಚೀಲಲಿ ಹಾಕಿ ಹಿಡ್ಕಂಡ್ ಹೋಗಿ ಹಳ್ಳಲಿ ದೊಡ್ಡ್ ಮೀನ್‌ಗ ಇರ್‍ವಂತ ಗುಂಡಿಲಿ ಅಂವ ಏನೋ ಮಾಡ್ತಿದ್ದದರ ನೋಡಿ ಮಾಚು, "ಅಪ್ಪ, ಆ ಗುಂಡಿ ಒಳೆಗೆ ನೀ ಎಂತ ಮಾಡುದು?"ಂತ ಕೇಳಿದ್ದಕ್ಕೆ, "ಏನೋ ಒಂದ್ ಮಾಡ್ತಾ ಒಳೆ, ಆದ್ರೆ ಅದ್ ಸರಿ ಆತಾ ಇಲ್ಲೆ. ಸುಮಾರ್ ಸಮಯಂದ ಹೀಂಗೆ ಮೀನ್ ಹಿಡಿಯಕೆ ನೋಡ್ತಾ ಒಳೆ"ಂತ ಹೇಳಿತ್ತ್. ಆ ಮೇಲೆ ಒಟ್ಟೊಟ್ಟಿಗೆ ಕಲ್ಲ್ ಇದ್ದಲ್ಲಿ, ಆ ಕಲ್ಲ್‌ನ ಸೆರೆಲಿ ನಿಂತ ಹಾಂಗಿನ ನೀರ್‌ಲಿ, ಕಬರ್ ಕೋಲ್ ಸಾಯಂದ ಉರ್‍ಲ್ ಇಸಿ ಒಮ್ಮೆ ಒಂದ್ ಚಾ ಮೀನ್ ಹಿಡ್ದಿತ್ತ್. ಅಂದ್ ಅವಂಗಾದ ಕುಸಿನ ಹೇಳ್‌ವ್ಹಾಂಗೆ ಇಲ್ಲೆ. ದೊಡ್ಡ ಮೀನ್‌ಗ ಕಲ್ಲ್ ಸೆರೆಲಿ ಮಾತ್ರ ಒಂದ್ ದಾರಿ ಮಾಡಿಕಂಡವೆಂತ{ಹರಿವ ನೀರ್‌ಲಿ ಅಲ್ಲ} ಅಂವ ಹೇಳ್ತಿತ್ತ್. ಆ ದಾರಿ ಗುರ್ತ್ ಅವ್ಕೇ ಮಾತ್ರ ಗೊತ್ತಾದು. ಹಕ್ಕಿಗ ಎಸ್ಟ್ ದೂರ ಹಾರಿರೂ ದಾರಿ ತಪ್ಪದೇ ಅವರ ಗೂಡ್ ಕಂಡ್‌ಕೊಂಡವೆ ಅಲ್ಲಾ ಹಾಂಗೆ. ಕಳಲನೂ ಇಲ್ಲೇ ಮೀನ್‌ಗಳದ್ ದಾರಿ ಇರೋಕುಂತ ಅಂದಾಜ್ ಮಾಡಿಕಂಡ್ ಉರ್‍ಲ್ ಇಸ್‌ತಿತ್ತ್. ಅವನ ಕಾಲಲಿ ಮೂರ್‍ನಾಲ್ಕ್ ಮೀನ್ ಹೀಂಗೆ ಹಿಡ್ದಿತ್ತ್. ಇಲ್ಲಿ ಮುಟ್ಟ ಆ ತರಲಿ ಮೀನ್ ಹಿಡ್ದವು ಬೇರೆ ಯಾರೂ ಇರಿಕಿಲ್ಲಂತ ಮಾಚುನ ಅಂದಾಜ್.

ಮಾಚುಗೆ ಸುಮಾರ್ ಹನ್ನೆರ್ಡ್ ವರ್ಷ ಆಗಿರ್‍ದು. ನಾರು ಅದಿಕ್ಕಂತ ಮೂರು ವರ್ಷಕ್ಕೆ ಸಣ್ಣಂವ. ಒಂದ್ ಕಾರ್ತಿಂಗ. ಮುಂದೆನ ದಿನನೇ ಕತ್ತಲೆಗೆ ನಾರು ಹೇಳಿತ್ತ್ "ನಾಳೆ ಬೊಳ್ಪುಗೆ ಬಲೆಗೆ ಹೋದರೆ ಆದೋ ಏನೋ"ಂತ. ಮಾಚುಗೆ ಅಂತದರ್ಲೆಲ್ಲ ಬಾರಿ ಉಮೇದ್. "ಹೌದೌದ್, ನಾನ್ ಸಾ ಬಲೆಗೆ ಹೋದರೆ ಆದ್‌ಂತ ನೆಂಪು ಮಾಡಿಕಂಡ್ ಇದ್ದ್"ಂತ ಹೇಳಿ, ಅಲ್ಲೇ ಕುದ್ದಿದ್ದ ಅಪ್ಪನ ನೋಡಿ, "ಅಪ್ಪ, ನಾಳೆ ಬಲೆಗೆ ಪೋಯಲ್ಲಾ?"ಂತ ಕೇಳ್ತ್. ಅಂವ ಅದರ್‌ನೇ ಕಾದ್‌ಕಂಡ್ ಇದ್ದ ಹಾಂಗೆ ನೆಗಾಡಿ "ಈ ಸಮಿಯಲಿ ಬಲೆಗೆ ಹೋಗದ್ದರೆ ಮತ್ತೆ ಯಾಗ ಹೋದು"ಂತ ಮಕ್ಕಳ ಮಾತಿಗೆ ಗಾಳಿ ಹಾಕಿತ್. ಮಾಚು ನಾರುಗೆ ಹೇಳ್ತ್ "ನಾಳೆ ನಾ

ಕರಿಯಕನ ಎದ್ದೆಯಲ್ಲಾ?"
ಇದ್ರ ಕಾರ್ಬಾರ ಕೇಳಿ "ನಿನ್ನನೇ ನಾ ಕರಿಯಕೋ ಏನೋ, ಕಾರ್ಬಾರ ಮಾಡ್ಬೇಡ"ಂತ ಹೇಳಿ, ಅಂವ ಗುಡಿ ಹೊದ್ದ್ ಮಲ್ಗಿತ್.

ಮೊರ್‌ದ್ದಿನ ಬೊಳ್ಪುಗೆ ಕಳಲನೇ ಮಕ್ಕಳಿಬ್ಬರ ಕರ್ದ್ ಎದ್ದ್‌ರ್ಲಿಸ್. ಇಬ್ಬರೂ ಹಿಂದೆನ ದಿನ ಮಾತಾಡ್ದ್ ನೆಂಪಾಗಿ ಮೋರೆ ಮೋರೆ ನೋಡಿಕಂಡೊ. ಮತ್ತೆ ಉಸ್ರು ಬುಡದೇ ಬೇಗ ಬೇಗ ಮೋರೆ ತೊಳ್ದ್ ಬಲೆ, ಚೀಲ, ಕುಂಞಿ ಕತ್ತಿ ಹಿಡ್ಕಂಡ್ ಹೊರ್ಟ್ರೊ, ಹಳ್ಳದ ಹಕ್ಕಲೆ ಬಾಕನ ಬಾಂಗ್ ಆದದ್ದ್ ಕೇಳ್ತ್. ಮಸ್ಕ್ ಮಸ್ಕ್ ಬೊಳ್ಪು. ಅಲ್ಲೇ, ಒಂದು ಚೋಡಿ ಹಳ್ಳದ ಕಡೆಗೆ ಹರ್ದದೆ. ಅದಿಕೆ ಇಳ್ದ್ರೊ. ಮೊಣ ಕಾಲಿಂದ ಮೇಲೆಗೆ ನೀರ್ ಬಾತಿತ್ತ್. ಹಂಞ ಕಳಂಕೇ. ಅಪ್ಪ ಮಂಜ ಬಲೆ ಹಿಡ್ಯಕೆ, ಮಾಚು ಚೀಲ ಹಿಡ್ಕಂಬಕೆ. ಸುರು ಸುರು ಗೋಂಚಿದರ್ಲಿ ನಾಲ್ಕ್ ಚೆರ್ಗ್ ಮೀನ್ ಸಿಕ್ಕಿದೊ. ನಾರುಗೆ ಏನೂ ಸಮದಾನ ಆತ್‌ಲ್ಲೆ. ಅವನಂತ ಬಿರ್ಸ ನಾಕ್ ಚೆರ್ಗ್ ಮೀನ್ ಹಿಡ್ಕಂಡ್ ಹೋದರೆ ಅದಕ್ಕೆ ಏನ್ ಬೆಲೆ? ದೊಡ್ಡ ಮೀನ್‌ಗ ಪೂರ ಎಲ್ಲಿ ಹೋಗೊಳೊಂತ ಹೇಳ್ಕಂಡ್ ಇರಿಕನ, ಗೇಣುದ್ದದ ಒಂದ್ ಮೀನ್ ಕಂಡತ್. ಅವನೇ ಅಪ್ಪಂಗೆ "ಅದನಿ, ಅಲ್ಲೊಂದ್ ದೊಡ್ಡ ಮೀನ್, ಅತ್ತ ಪೋಯಿ"ಂತ ಅಲ್ಲೇ ಬಲೆ ಹಿಡ್ದ್ರೊ. ಮೀನ್ ಸಿಕ್ಕಿದ ಕುಸಿಲಿ ಅಂವ ಮೀನನ ಗಟ್ಟಿ ಹಿಡ್ತ್. ಅದ್ ಪಚಕ್ಕಂತ ಆತ್. ಅಂವ ಕೋಪಂದ "ಚೋಡಿಲಿ ಹೇಲ್ವವರ ಕುಂಡೆಗೆ ಹಾವು ಕಚ್ಚಲಿ"ಂತ ಸಾಪನೂ ಕೊಟ್ಟ್, ನೀರ್ಲಿ ಪೊಲ್ರ್ ಕೈ ತೊಳ್ತ್. ಮಾಚುಗೋ ತಡೆಕೆ ಆಗದಷ್ಟ್ ನೆಗೆ ಬಾತ್. ನೆಗಾಡ್ರೆ ಅವಂಗೆ ಕೋಪ ಬಾದು ಮತ್ತೆ ಅವನ ಮರ್ಯಾದೆ ಹೋದ ಹಾಂಗೆ ಆದೂಂತ ಕಷ್ಟಲಿ ಬಾಯಿ ಮುಚ್ಚಿಕೊಂಡತ್. ಅಲ್ಲಿಗೆ, ಅಂದ್‌ನ ಬಲೆ ಹಿಡಿಯೊದರ ನಿಲ್ಸಿ, ದಟಿಗೆಗೆ ಬಂದೊ. ನಾರು ನೀರೆಡಿಗೆ ಹಕ್ಕಲೆ ಹೋಗಿ ಸೀಗೆ, ನೊರೆಕಾಯಿ, ಬಟ್ಟೆ ಸಾಬೂನು ಹೀಂಗೆ ತೊಳೆವ ಸಾಮಾನ್‌ಗ ಏನೇನ್ ಒಳೊ ಅದರ ಎಲ್ಲಾ ಕೈಗೆ ಹಾಕಿ ತೊಳ್ದದ್ದೇ ತೊಳ್ದದ್! ಹುಗ್ಗವ್ವ ಕೇಳ್ತ್ "ಬಲೆಗೆ ಹೋದವು ಇಸ್ಟ್ ಬೇಗ ಏನ್ ಬಂದದ್ದ್"ಂತ. ಮಾಚುಗೆ ನೆಗೆ ಬಂದದೆ. ನೆಗೆ ತಡ್ಕಂಡ್ ಅದ್ ಹೇಳ್ತ್ "ಅಲ್ಲಿ ಬೇರೆವೂ ಮೀನ್ ಹಿಡ್ಯಕೆ ಬಂದಿದ್ದೊ"ಂತ. ಮತ್ತೆ ಹಗಲ್ ನಾರು ಎತ್ತಲೋ ಹೊರಗೆ ಹೋಗಿರ್ಕನ ಮನೆಲಿದ್ದವರ ಹಕ್ಕಲೆ ಬಲೆದ್ದ್ ಕತೆ ಹೇಳಿ, ಬಿದ್ದ್ ಬಿದ್ದ್ ನೆಗಾಡ್ತ್. ಅಲ್ಲಿಂದ ಮೇಲೆ ಬಲೆಗೆ ಹೋದರೆ ನಾರು ಚೀಲ ಹಿಡ್ಕಂಬತಿತ್ತ್.

ಮಕ್ಕ ಹಂಞ ದೊಡ್ಡದಾದ ಮೇಲೆ ಅವು ಬಲೆ ಮೀನ್ ಬೇಕಂದರೆ ಕತ್ತಲೆ ಬಿದ್ದ ಮೇಲೆ ಬಲೆ ಕಟ್ಟಿ, ಬೊಳ್ಪು ಆಕೆ ಮುಂದೆ ಬಲೆ ಬಿಚ್ಚಿಕಂಡ್ ಬರ್ತಿದ್ದೊ. ಅದರ್ಲಿ ತುಂಬ ಮೀನ್ ಮನಿ ಸಿಕ್ಕಿರೆ ದನಿ ಮನೆಗೂ ಒಂದ್ ಪಾಲ್ ಹೋತಿತ್ತ್. ಎಷ್ಟೋ ವೊರ್ಸ ಕಳ್ದ ಮೇಲೂ ಮಾಚು- ನಾರು ಮೀನ್ ಹಿಡ್ದ ಕತೆನ ಹೇಳಿ ನೆಗಾಡ್ರೆ, ನಾರು "ಸಾಕ್ ನಿನ್ನ ಅದಿಕ ಪರ್‌ಸಂಗ"ಂತ ಬೊ್ಯ್ಯತಿತ್ತ್.

ಮಾಚುನವರ ದಟಿಗೆ ಅಟ್ಟಲಿ ಒಂದ್ರಾಸಿ ಬಾಣಲೆ ಹಾಂಗಿದ್ದ ಓಡುಗ ಇದ್ದೊ. ಅದ್ ಎಂತಂತ ಒಮ್ಮೆ ಅಪ್ಪನ ಹಕ್ಕಲೆ ಕೇಳ್ತ್. ಆಗ ಅಪ್ಪ "ಅದ್ ಪಾಲೆಪ್ಪುದು ಓಡ್. ಪಾಲೆಪ್ಪು ಅಂದರೆ ಆಮೆ ಜಾತಿದ್ ನೀರ್‌ಲಿ ಇರ್ವ ಒಂದ್ ಜೀವಿ. ಆಮೆಗೆ ಬೆನ್ನ್ ಇಡೀಕ್ಕ ಓಡು ಇದ್ದರೆ ಪಾಲೆಪ್ಪುಗೆ ನೊಡ್‌ಡು ಬೆನ್ನ್‌ಲಿ ಟೊಪ್ಪಿ ಇಸಿದ್ದಂಗೆ ಓಡು. ಆಮೆಗೆ ಮತ್ತೆ ಪಾಲೆಪ್ಪುಗೆ ಇಷ್ಟೇ

ಯೆತ್ತಾಸ"ಂತ ಹೇಳ್ತ್. "ನಮ್ಮ ಅಟ್ಟಲಿ ಸುಮಾರ್ ಓಡು ಉಟ್ಟು, ಅಷ್ಟ್ ಪಾಲೆಪ್ಪು ನೀ ಹಿಡ್ದೊಳನಾ?"ಂತ ಕೇಳ್ದಕ್ಕೆ,
"ಅದ್ ಪೂರಾ ನಾ ಹಿಡ್ದದಲ್ಲ, ನಮ್ಮ ಅಪ್ಪನ ಕಾಲದ್ದ್ ಸಾ ಉಟ್ಟು"ಂತ ಹೇಳ್ತ್.

ಪಾಲೆಪ್ಪುನ ಸಂಗತಿನ ಮಾಚು ಇಂದೇ ಸುರು ಕೇಳ್ದ್. ಅದಕ್ಕೆ ಜೂವದ ಪಾಲೆಪ್ಪು ಹೇಂಗೆ ಉಟ್ಟೊಂತ ನೋಡಿಕೆ ಆಸೆ ಆತ್. ಅದ್ ಅಪ್ಪನ ಹಕ್ಕಲೆ "ನಮ್ಮ ದೊಡ್ಡ ಹಳ್ಳಲಿ ಅದ್ ಉಟ್ಟಾ?"ಂತ ಕೇಳ್ದಕ್ಕೆ ಕಳಲ "ಇಲ್ಲದೆ ಏನ್? ಬೇಕಾದಷ್ಟ್ ಉಟ್ಟು"
ಮಾಚು ಕಣ್ಣ್ ಅಗಲ್ಸಿ "ಹೌದಾ? ಹಂಗಾರೆ ನಂಗೆ ಒಮ್ಮೆ ಅದರ ತೋರ್ಸೋಕು. ಆತಾ ಅಪ್ಪಾ?"ಂತ ಕೇಳಿಕಂಡತ್.

ಅದರ ಮಂಜಣೆ ಮಾತ್ ಕೇಳಿ ಕೊಂಡಾಟಂದ ಅದರ ತಲೆ ಪೂಜಿ, ಸಣ್ಣಕ್ಕೆ ನೆಗಾಡಿ,"ಆತ್‌ಯಾ, ಕಂಡಿತ ತೋರ್ಸಿನೆ, ಆದಷ್ಟ್ ಬೇಗ"ಂತ ಹೇಳಿಕನ "ಮರ್ತ್ ಮನಿ ಬುಡ್ಬೇಡಾ"ಂತ ಹೇಳ್ದಕ್ಕೆ, ಕಳಲ "ನಿನ್ನ ಬುಟ್ಟು ನಾ ಅದಕ್ಕೆಲ್ಲಾ ಹೋಗೊಳೆನಾ, ಹೇಳ್?"ಂತ ಹೇಳಿದರ ಕೇಳಿ ಅಪ್ಪಂಗೆ ನನ್ನಲ್ಲಿ ಎಷ್ಟ್ ನಂಬಿಕೆಂತ ಕುಸಿ ಆತ್ ಮಾಚುಗೆ.

ಅವಿಬ್ಬರ್ ಹೀಂಗೆ ಮಾತಾಡಿ ಒಂದೆರ್ಡ್ ತಿಂಗ ಆಗಿರ್ದು ಅಷ್ಟೇ. ಒಂದ್ ದಿನ ಮಾಚುನ ಬಾಬು ಮಾಮ ಅವರ ದಟಿಗೆಗೆ ಬಾತ್. ಅದ್ ಇದ್‌ಂತ ಮಾತಾಡಿ "ಹಂಞ ಅತ್ತ ಪೋಯಿ"ಂತ ಕಳಲನ ಕರ್ಕಂಡ್ ಇಜ್ಜೆಲ್ ಕೊಡಿಗೆ ಹೋತ್. ಅಲ್ಲೇ ಅವು ಗುಸು ಗುಸು ಪಿಸ ಪಿಸಂತ ಮಾತಾಡ್ದೊ. ಕಡೆಗೆ ಕಳಲ ದಟಿಗೆ ಕಡೆ ಬಾಕನ ಮಾಮೂಲು ಗಟ್ಟಿ ಸೊರಲಿ "ನೀ ಒಂದ್ ಒಳ್ಳ ಕತ್ತಿ, ಒಂದ್ ದೊಡ್ಡ ಹೆಡೆಗೆ ತೆಕಾ. ನಾ ಕತ್ತಿ ಮತ್ತೆ ಮಾಸ ಬೇಕಾದವ್ಕೆ ಕಟ್ಟಿ ಕೊಡಿಕೆ ಹಾಳೆ ತೆಕಣೆ. ಮಾಚು ಸಾ ನಂಗೆ ಪಾಲೆಪ್ಪು ತೋರ್ಸೊಕುಂತ ಹೇಳ್ತಾ ಇತ್ತ್. ಅದರ ಸಾನ್ ಕರ್ಕಣೆ"ಂತ ಹೇಳ್ತ್.

ಮಾಚು ಬಾಗಿಲ ಹಕ್ಕಲೆ ನಿತ್ತ್‌ದ್, ಅವು ಮಾತಾಡುದ್ರ ಗುಟ್ಟುಲಿ ಕೇಳ್ತಾ ಇತ್ತ್. ಅಪ್ಪ ಬಾಕನ ಎದ್ರ್ ನಿತ್ತತ್. ಹೇಂಗಿದ್ದರೂ ಅಪ್ಪ ಪಾಲೆಪ್ಪು ತೋರ್ಸಿಕೆ ನನ್ನ ಕರ್ಕಂಡ್ ಹೋನೆಂತ ಹೇಳ್ಯುಟಲ್ಲಾಂತೇಳ್ವ ದೈರ್ಯಲಿ. ಕಳಲ ಅವಳ ನೋಡಿ "ಪಾಲೆಪ್ಪು ತೋರ್ಸೊಕುಂತ ಹೇಳ್ತಾ ಇದ್ದ ಅಲ್ಲಾ? ನಮ್ಮ ಹಳ್ಳಲಿ ಒಂದ್ ದೊಡ್ಡ ಪಾಲೆಪ್ಪು ಉಟ್ಟುಗಡ. ಪೋಯಿ"ಂತ ಹೇಳ್ತ್. "ಬನ್ನೆ, ಬನ್ನೆ"ಂತ ಹೇಳಿ, ಕೆದರ್ದ ಕೂದೊಲ್‌ನ, ಕಪ್ಪ್ ಹಿಡ್ದ್ ಹಲ್ಲ್ ಹೋಗಿದ್ದ ಬಾಚಣಿಲಿ ಬಾಚಿ, ಸೂಡಿ ಸುಂದಿ, ಆ ದೊಡ್ಡ ಸೂಡಿ ಬಿಚ್ಚಿ ಹೋಗದ ಹಾಂಗೆ ಅದರ ಬುಡನ ಬಾಳೆನಾರ್‌ಲಿ ಕಟ್ಟಿ, ಕಿರ್ಗ್ಗನ ಗಟ್ಟಿ ಕಟ್ಟಿ, ಅದೇ ಗುಬ್ಬಿ ಇಲ್ಲದ, ಹಾಕ್ಕಂಡಿದ್ದ ರೌಕೆನ, ಎದ್‌ರ್ಲಿ ಕೆಳಗೆ ಒಂದ್ ಗಂಟ್ ಹಾಕಿ ದೊಗಳೆನ ಕಮ್ಮಿ ಮಾಡಿಕಂಡತ್. ಅಷ್ಟ್ ಹೊತ್ತ್‌ಲಿ ಕಳಲ ಕಡ್ಪತ್ತಿನ ಬಾಯಿ ಮುಟ್ಟಿ ಹರಿತ ಸಾಲದ್‌ಂತ ಮನ್ಸ್‌ಲೇ ಹೇಳಿಕಂಡ್, ಸಾಣೆ ಮರದ ತುಂಡಿಗೆ ಹಂಞ ಬೆಣ್ಚ್ ಕಲ್ಲ್‌ನ ಹೊಡಿ ಹಾಕಿ, ಕತ್ತಿನ ಅತ್ತ ಇತ್ತಂತ ತಿರ್ಗಿಸಿ ಹಣ್ಸಿ, ಕತ್ತಿ ಬಾಯಿನ ಕೈಯಿಂದ ಸವರಿ, ಸರಿ ಆತ್‌ಂತ ಆದ ಮೇಲೆ ಎದ್ದ್, ಬೆಸೆಗೆನ ಹಕ್ಕಲೆ ಕಟ್ಟಿ ಇಸಿದ್ದ ಹಾಳೆ ಕಟ್ಟ್‌ನ ಬಿಚ್ಚಿ ಎಷ್ಟಿರ್ದುಂತ ಅಂದಾಜ್ ಮಾಡಿ, "ಸಾಕಾದು ಕಂಡದೆ"ಂತ ಅವನಷ್ಟಕ್ಕೆ ಹೇಳಿಕಂಡ್, ಮಾಚುನ ಕರ್ದ್ ಹಿಡ್ಕಂಬಕೆ ಕೊಟ್ಟತ್. ಮತ್ತೆ ಅವ್ವನ ಕರ್ದ್ "ಹಳ್ಳಲಿ ಒಂದ್ ಪಾಲೆಪ್ಪು ಉಟ್ಟುಗಡ, ಬಾಬು ಬಂದ್ ಹೇಳ್ತ್, ಮಾಚುನ ಸಾ ಕರ್ಕಂಡ್ ಹೋನೆ"ಂತ ಹೊರ್ಟತ್.

ನೂರ್ ಮಾರ್ ದೂರಲಿ ಬಾಬು ಸೇರಿಕಂಡತ್. ಕಳಲ ಮಾಚುಗೆ "ಪಾಲೆಪ್ಪು ಉಟ್ಟಲ್ಲಾ? ಅದರ ಓಡ್ ತೆಗ್ದರೆ ಬರೆ ಮಾಸನೇ. ಜುವ್ವಲಿ ದೊಡ್ಡದಾದರೂ ಅದ್ ಬೆರೀ ಪಾಪದ ಪ್ರಾಣಿ. ಅಂತ ಪಾಪದ ಪ್ರಾಣಿನ ಕೊಲ್ಲೋಕಲ್ಲಾಂತ ಬೇಜಾರನೂ ಆದೆ"ಂತ ಹೇಳಿಕಂಡತ್. ಮಾಚು ನೋಡದಿದ್ದರೂ ಅಪ್ಪ ಹೇಳಿದರ ಕೇಳಿ ಅದಕ್ಕೆ ಸಾ ಆ ಪ್ರಾಣಿನ ನೆನ್ಸ್ದ್ ಕನಿಕರ ಆತ್. ಹಂಞ ಮುಂದೆ ಹೋಕನ ಹಳ್ಳ ಬಾತ್.

ಪಾಲೆಪ್ಪು ಹಳ್ಳ ಅಲ್ಲರೆ ಕೆರೆ ಬದಿಲಿ ಇದ್ದದೆ. ಹೀಂಗೆ ನೋಡ್ರೆ ಕಾಂಬೊಡ್ಲೆ. ಸೂಕ್ಷ್ಮತೆಂದ ನೋಡ್ರೆ ಮಾತ್ರ ಕಾಂಬೊದು. ಅದ್ ಮುಳ್ಗಿಕಂಡ್ ಇರ್ವಲ್ಲಿ ಉಸ್ರಾಟಂದ ಹೊರಗೆ ಬಂದ ಗಾಳಿಂದಾಗಿ, ನೀರ್‌ನ ಮೇಲೆ ಗುಳ್ಳೆ ಗುಳ್ಳೆ ಆಗಿ ಗುಳು ಗುಳುಂತ ಮುಗುಳಿ ಬಾದರ ಕಂಡರೆ ಅಲ್ಲಿ ಪಾಲೆಪ್ಪು ಉಟ್ಟುಂತ ತಿಳ್ಕಂಡವೆ.

ಪಾಲೆಪ್ಪುನ ಹಿಡ್ಯಕೆ ಒಂದ್ ಕ್ರಮ ಉಟ್ಟು, ಅದ್ ಇರ್ವಲ್ಲಿ ಅದಿಕೆ ಗೊತ್ತಾಗದ ಹಾಂಗೆ ಹೋಗಿ ಬಾಣಲೆಂದ ಕಲ್ತಪ್ಪನ ಮೊಗ್ಚಿ ಹಾಕಿದ್ಹಾಂಗೆ, ಅದರ ಅಡಿಂದ ಕೈ ತೆಕ್ಕಂಡ್ ಹೋಗಿ ಒಮ್ಮೆಗೆ ಮೊಗ್ಚಿ ಮೊಯ್ಯೆ ಮೇಲೆ ಹಾಕೋಕು. ಹಾಂಗೆ ಅಡಿ ಮೇಲಾಗಿ ಬಿದ್ದ ಪಾಲೆಪ್ಪುನ ಕುತ್ತಿಗೆನ ಒಳ್ಳೆ ಬಲ ಇದ್ದವು ಮೆಟ್ಟಿ ಉಸ್ರು ಕಟ್ಟಿಸೋಕು. ನಂತರ ಅದರ ಕೈ ಕಾಲ್ ಕಡ್ದ್ ತೆಗ್ದರೆ ಒಳಿಯೊದು ಬೆರೀ ಮಾಸನೇ. ಆ ಮಾಸಕ್ಕೆ ಬಾರಿ ಕಾಯ್ಸ್!

ಕಳಲ ಮಾಚುನ ಪಾಲೆಪ್ಪು ಹಕ್ಕಲೆ ಕರ್‍ಕೊಂಡ್ ಹೋಗಿ ತೋರ್ಸಿತ್. ಅದ್ ಬಾರಿ ದೊಡ್ಡ ಪಾಲೆಪ್ಪು. ನೀರ್ ಒಳಗೆ ಒಂದ್ ದೊಡ್ಡ ಬಂಡೆಕಲ್ಲಿನ ಹಾಂಗೆ ಕಾಂಬತಿತ್ತ್. ಅದರ ಮೇಲಿನ ಓಡು ಕೌಚಿ ಹಾಕಿದ ಒಂದ್ ದೊಡ್ಡ ತಟ್ಟೆನ ಹಾಂಗೆ ಕಾಂಬತಿತ್ತ್.

ಬಾಬು ಮತ್ತೆ ಕಳಲ ಅದರ ಹಕ್ಕಲೆ ನಿತ್ತ್, ಅದರ ಹೇಂಗೆ ಮೊಗ್ಚಕ್‌ಂತ ಅಂದಾಜ್ ಮಾಡ್ದೊ.

ಬಾಬುಗೆ, ನಾವ್ ಇಬ್ಬರೇ ಇಷ್ಟ್ ದೊಡ್ಡ ಪಾಲೆಪ್ಪುನ ಮೊಗ್ಚಿಕೆ ಆದೆನೋಂತ ಸಂಸಯ ಆತ್. ಕಳಲನ ಹಕ್ಕಲೆ ಕೇಳ್ತ್ "ಅಲ್ಲ ಬಾವ, ನಾವ್ಗೆ ಇಬ್ಬರಿಗೆ ಇದರ ಮೊಗ್ಚಿಕೆ ತೀರುದಾ? ಅಲ್ಲಾ, ಯಾರನಾರ್ ಕರ್‍ಕಂಡ್ ಬರೋಕಾ"ಂತ.

"ಬೇಡ ಬೇಡ, ನಾವೇ ಮೊಗ್ಚಕ್ಕ್. ಹಂಞ ಬಂಜ ಆದು ಅಷ್ಟೇ"ಂತ ಹೇಳ್ತ್ ಕಳಲ.

"ಸರಿ, ಹಂಗಾರೆ ಪೋಯಿ"ಂತೇಳಿ ಹೊರ್‍ಟೊ.

ನಿಜ ಹೇಳೋಕಂದರೆ ಅದ್ ಅವರ ತಾಕತ್ತಿಗೆ ಹಂಞ ಹೆಚ್ಚಿ ಇತ್ತ್. ಕಳಲನ ಯೋಚನೆ ಅಂದರೆ ಜೆನ ಹೆಚ್ಚಾದಷ್ಟ್ ದುಡ್ಡು ಹಂಚಿ ಹೋದೆ. ಅದ್ ಅಲ್ಲದೆ ಕೆಲೊವು ಜೆನಗ ಸಣ್ಣ ಸಣ್ಣ ಸಂಗತಿಗಳಿಗೆ ಕಚ್ಚಾಟ ಸುರು ಮಾಡ್ವೆ

ಆ ಮೇಲೆ "ಮೊಗ್ಚೊಮೊನಾ"ಂತ ಹೇಳ್ತ್. ಇಬ್ಬರೂ ಮೆಲ್ಲಂಗೆ ನೀರಿಗೆ ಇಳ್ದೊ. "ಹುಂ"ತೇಳಿ ಇಬ್ಬರೂ ಇದ್ದ ಶಕ್ತಿನ ಪೂರ ಹಾಕಿ "ಲಾಬೇಸ್"ಂತ ಎತ್ತಿದೊ. ಅಬ್ಬ! ಪಾಲೆಪ್ಪು ಮೊಗ್ಚಿ ಬೀತ್. ಕಾಲ್ ಮೇಲೆ ಆಗಿ ಬೀಳಿಕೆ ಪುರ್ಸೊತ್ ಇಲ್ಲೆ, ಕಳಲ ಬಾಬುಗೆ ಅದರ ಕುತ್ತಿಗೆನ ಮೆಟ್ಟಿ, ಒತ್ತಿ ನಿಲ್ಲಿಕೆ ಹೇಳ್ತ್. ಕಳಲಂಗೆ ಅದರ ಕೊಲ್ಲುವ ಪಾಪ ಬೇಡಾಗಿತ್ತ್. ಅಂತೂ ಐದ್ ನಿಮ್‌ಸ ಹೊಣ್ಕಿ ಹೊಣ್ಕಿ, ಸಾವ ಸಂಕಟಕ್ಕೆ ವಿಕಾರ ಸೊರ ತೆಕ್ಕಂಡ್ ಅದ್ ಸತ್ತತ್. ಆ ಮೇಲೆ ಬೊಚ್ಚೇಲ್ ಹೋಕೆಂತ, ಇಬ್ಬರೂ ಅದರ ನೋಡಿಕಂಡ್ ಅಲ್ಲೇ ಹಂಞ ಹೊತ್ತು ನಿತ್ತೊ. ಆಗ ಮಾಸದ ಅಂದಾಜ್ ಮಾಡಿ ಬಾಬು ಹೇಳ್ತ್ "ಅಂದಾಜ್ ನೂರ್

ನೂರೈವತ್ತ್ ಸೇರ್ ಮಾಸ ಇರುದಲ್ಲಾ?"
"ಅದ್ಕಿಂತ ಹೆಚ್ಚ ಅಲ್ಲದೆ ಕಮ್ಮಿ ಇಲ್ಲೆ. ಇನ್ನ್ ಸಜ್ಜ್ ಮಾಡೊಮನಾ?"
"ಮಾಡೊಮೊ"

ಸುರೂಗೆ ಕಳಲ ಅದರ ಕೈಕಾಲ್ ಕಡ್ದ್ ತೆಗ್ತ್. ಆ ಮೇಲೆ ಇಬ್ಬರೂ ಮಾಸ ಕುಯ್ಯಕೆ ಸುರು ಮಾಡ್ದೊ. ಕಳಲ ಎಂಟ್ಪತ್ತ್ ಸೇರ್ ಮಾಸನ ಕಟ್ಟಿ ಬೇರೆ ಇಸಿತ್. ಅದ್ ಅವಂಗೆ ಕಷ್ಟಕಾಲಲಿ ಉಪಕಾರ ಮಾಡ್ವ ಅವನ ಇಸ್ವಾಸದ ಗಿರಾಕಿಗಳಿಗೆ. ಕೊಡದಿದ್ದರೆ ಎಲ್ಲಾರ್ ಸಿಕ್ಕಿಕನ "ಅಲ್ಲಯಾ, ನೀ ಅಂದ್ ಪಾಲೆಪ್ಪುದು ಮಾಸ ಕೊಟ್ಟತೇ ಇಲ್ಲಲೇ"ಂತ ಹೇಳ್ವವ್ಕೆ! ತೆಕಂಡ್ ಹೋಗಿ ಕೊಟ್ಟರೆ "ನೆಂಪಿಟ್ಟ್‌ಕಂಡ್ ತಂದ್ ಕೊಟ್ಟಲೇ"ಂತ ಮೆಚ್ಚಿಗೆನ ಮಾತ್‌ನೊಟ್ಟಿಗೆ ಇನಾಮುಂತ ಹಣ ಅಲ್ಲದೆ ಹಳೆ ಅಂಗಿ ಅಲ್ಲರೆ ಮಾಯ್ಲುಗೆ ಹಳೆ ಸೀರೆ ರೌಕೆನ ಕೊಡ್ವೊ! ಅಂಥವರ ಇಸ್ವಾಸನ ಕಳ್‌ಕೋ‌ಂಬಕೆ ಬೊ಼ತ್ತ್‌ಂತ ಅವನ ಮನ್ಸ್ ಹೇಳ್ತಿತ್ತ್.

ಕಳಲ ಪಾಲೆಪ್ಪ ಹಿಡ್ದುಟುಂತ ಗೊತ್ತಾಕೆ ಪುರ್ಸೊತ್ ಇಲ್ಲೆ– ಅದರ ತಿಂಬವು ಸಾಲ್‌ಕಟ್ಟಿಕಂಡ್ ಬಂದೊ! ಅದ್ ಅಪ್ರೂಪದ ಒಳ್ಳ ರುಚಿನ, ಹಾಂಗೆ ಮೂಳೆ ಇಲ್ಲದ ಮಾಸ. ಹೇಳಿದ ಕ್ರಯಕ್ಕೆ ತೆಕಂಡೊ.

ಹಿಂಬೊ಼ತಾಕನ ಬಾಬು ಮತ್ತೆ ಕಳಲಂಗೆ ಐವತ್ತವತ್ತ್ ರುಪಾಯಿಗಿಂತ ಹೆಚ್ಚೇ ಹಣ ಸಿಕ್ಕಿತ್. ಅಂದ್ ಸೇರ್ ಅಕ್ಕಿಗೆ ಒಂದ್ರುಪಾಯಿ ! ಅಂಥ ಕಾಲ!

ಒಂದ್ ಮಳ್ಗಾಲ ಮೊರಂಟೆ ಹಿಡ್ದದರ ಮಾಚು ಮರಿಯಕೇ ಇಲ್ಲೆ. ಕಾರ್ತಿಂಗ ಆಕೇರಿ. ಮಳೆ ಅಂದರೆ ಬಾನ್ ತೂತಾದ್ಹಂಗೆ ಸುರ್ಯವ ಬಾರೀ ಮಳೆ. ಇಂಥ ಮಳೆಗೇ ಮೀನ್ ಹತ್ತುದುಂತ ಹುಗ್ಗವ್ವ ಹೇಳ್ತ್. ಮಾಚು ಅಪ್ಪನ ನೋಡ್ತ್. ಅಂವ ಪೋಯಿಂತ ಹೇಳ್ವ ಹಾಂಗೆ ತಲೆ ಆಡ್ಸಿತ್. ಹುಗ್ಗವ್ವ ಹೇಳ್ತ್ "ಹಳ್ಳಕೆ ಮನಿ ಹೋಗ್ಬೇಡಿ ಮಕ್ಕಳೇ, ಚೋಡಿಗೇ ಹೋಗಿ. ಚೋಡಿಗೆ ಸಾ ಇಳ್ಯಬೇಡಿ. ಕಾಲ್ ಜಾರ್ದು. ಜಾಗ್ರತೆ"ಂತ ಹೇಳ್ತ್. ಮೂರ್ ಮಕ್ಕ, ಮತ್ತೆ ಅಪ್ಪಂತ ನಾಕ್ ಜನ ಕತ್ತಿ, ಚೀಲ ಹಿಡ್ಕಂಡ್, ಅವರವರ ಕಿಡಂಜೋಲು ಹಾಕ್ಕಂಡ್ ಹೊರ್‍ಟೊ, ಇಂಥ ಸಂದರ್ಬಲಿ ಕಳಲ ಬಾರಿ ಸೂಕ್ಷ್ಮ. ಚೋಡಿ ಕರೆಲೇ ಹೋಗ್ತಿದ್ದೊ. ಸುಮಾರ್ ದೂರಲಿ ಹಾಂವ್‌ನ ಹಾಂಗೆ ಉದ್ದೋಕೆ ಎಂತದೋ ಹರ್ಕಂಡ್ ಹೋದರ ನೋಡಿ ಕಳಲ ಅಲ್ಲೇ ನಿತ್ತ್ ನೋಡ್ತ್. ಮಕ್ಕ ಅವರ ಪಾಡಿಗೆ ನಡ್ಕಂಡ್ ಹೋತಿದ್ದೊ. ಅವಂಗೆ ಅವನ ಅಪ್ಪ ಕಿನ್ನ ಹೇಳ್ದ್ ನೆಂಪಾತ್. ಮೊರಂಟೆ ಮೀನ್‌ಗ ಉಬರ್ ಹತ್ತಿಕನ ಒಂದರ ಬಾಲ ಒಂದ್ ಕಚ್ಚಿಕೊಂಡ್ ಹೋದವೆಂತ. ಅದೇ ಇರೋಕುಂತ ನೆನ್ದ್, ನೋಡಿ ಬನ್ನೆಂತ ಮಕ್ಕಳ ಅಲ್ಲೇ ನಿಲ್ಲಿಕೆ ಹೇಳಿ, ಆ ಸಾಲ್ ಕಾಂಬಲ್ಲಿಗೆ ಅಂವ ಹೋತ್. ಹಕ್ಕಲೆ ಹೋಗಿ ನೋಡ್ದೆ– ಅದ್ ಮೊರಂಟೆ ಸಾಲೇ! ಮಕ್ಕಳ ಕರ್ತ್. "ಹಿಡ್ಯನಿ"ಂತ ಹೇಳಿ ಮತ್ತೆ ಅದರ ಜಾರಾಟ ನೆಂಪಾಗಿ "ಕಡ್ಯನಿ"ಂತ ಹೇಳ್ತ್. ಮೊರಂಟೆ ಮೀನ್ ಬೇರೆ ಮೀನ್‌ಗಳ ಹಾಂಗಲ್ಲ ಅದರ ಮೈ ಬಾರಿ ನೋಳಿ. ಹಿಡ್ದರೆ ಜಾರುದೇ. ಅದಕ್ಕೆ ಹಿಡ್ಯಕೆ ಹೋಗದೆ ಕತ್ತಿಲಿ ಕಡ್ದ್ ಕಡ್ದ್ ಚೀಲಕೆ ತುಂಬ್ಸುಕಂಡೊ. ಆ ಮೀನ್‌ನ ಸಜ್ಜ್ ಮಾಡುದೂ ಕಸ್ಟನೇ. ಪೊಯ್ಯೆ ಹಾಕಿ ತಿಕ್ಕಿ ಅದರ ನೋಳಿ ಹೋದ ಮೇಲೆ ಸಜ್ಜ್ ಮಾಡೋಕು. ಅಂತ್ ಆದಷ್ಟ್ ಮೀನ್ ಹಿಡ್ಕಂಡ್ ದಟಿಗೆಗೆ ಹೋಗಿ, ಅದ್ ಸಾಲ್ ಕಟ್ಟಿ ಹೋವ ಪೊರ್ಲುನ, ಮಕ್ಕ– ಹುಗ್ಗವ್ವಂಗೆ ಬಣ್ಣ ಹಚ್ಚಿ ಹೇಳ್ದೊ. ಹುಗ್ಗವ್ವ ಹೇಳ್ತ್ "ನಿಮ್ಮ ಅಜ್ಜ ಎರ್ಡ್ ಸರ್ತಿ ಇಂಥ ಮೀನ್ ತಂದಿತ್ತ್. ಆ ನೆಂಪುಲೇ ನಾ ನಿಮ್ಮ ಕಳ್ಸಿದ್"ಂತ.

ಮೀನ್ ಸಜ್ಜ್ ಮಾಡಿಕನ ಸುತ್ತ ಕುದ್ದ ಮಕ್ಕಳಿಗೆ ಹುಗ್ಗವ್ವ ಅದರ ಕಾಲದ ಉಬರ್ ಮೀನ್ ಕತೆಗಳ ಹೇಳ್ತ್. ಮೊರಂಟೆ, ಜಾತಿ ಮೀನ್ ಮತ್ತೆ ಮೊದ್ದ್ ಮೀನ್, ತಿಂಬಕೂ ರುಚಿಂತ ಹೇಳ್ತ್. ಮಕ್ಕಳಿಗೆ ಆಗಳೇ ಬಾಯಿಲಿ ನೀರ್ ಬಾತ್. ತಂದ ಮೀನ್‌ನ ಯಾರಿಗೆ ಸಾ ಕೊಡ್ದು ಬೇಡ. ನಾವೇ ತಿಂಬಮೊಂತ ಮಕ್ಕ ಹೇಳ್ದೊ. ಹುಗ್ಗವ್ವ ದೊಡ್ಡ ಅಳಗೆಲಿ ಹುಳಿ ಮೆಣ್ಸ್ ಹಾಕಿ ಬೇಸಿಕೆ ಇಸಿತ್. ಅರ್ದ ಅಳಗೆ ಇದ್ದ ಮಾಸ ಬೆಂದಾಕನ ಅಳಗೆಂದ ಹೊರಗೆ ಬರುವಷ್ಟ್ ಅರ್ಳಿತ್ತ್. ಜಡಿ ಮಳೆಯ ನಾಲ್ಕೈದ್ ದಿನಕ್ಕೆ ಈ ಮೀನ್ ಗೈಪು ಅಷ್ಕೆ ಬಾರಿ ಲಾಯ್ಕಾತ್. ಆ ಗೈಪುದ್ ನೆಂಪಾದರೆ ಮಾಚುಗೆ ಈಗ ಸಾ ಬಾಯಿಲಿ ನೀರ್ ಸುರ್‍ದದೆ. ಅಸ್ಟ್ ರುಚಿ ಆಗಿತ್ತ್ ಗೈಪು!

ಮೀನ್‌ಂದಾಗಿ ಕಳಲನ ಎಡದ ಮೊಣಕೈ ತುಂಡಾದದ್ದ್ ಮಾಚುನ ತುಳ್ಳೇಲ್ನ ನಂತರದ ಕತೆ. ಹಳ್ಳದ ಮೀನ್‌ನ ಆಸೆಯವು ಅವಂಗೆ ತೋಟೆ ತೆಗ್ಸಿಕೊಟ್ಟು, ಸಿಕ್ಕಿರೆ ಮೀನ್ ತಂಬಂತ ಹೇಳ್ತಿದ್ದೊ. ನಸೀಬ್ ಇದ್ದವ್ಕೆ ಒಂದೆರಡ್ ಹೆಡೆಗೆ ಮೀನ್ ಸಿಕ್ಕಿರೆ, ನಸೀಬ್ ಖೋತಾ ಆದವ್ಕೆ ನಾಲ್ಕ್ ಚೆರ್ಗ್ ಮೀನ್ ಸಾನ್ ಸಿಕ್ಕದಿರುದು ಉಟ್ಟು, ಅದಕ್ಕೆ ತೋಟೆ ಕೊಡಿಕನ "ಸಿಕ್ಕಿರೆ"ಂತ ಹೇಳುದು. ಹಾಂಗೆಂತ ಕಳಲ ಮೋಸ ಮಾಡಂವ ಅಲ್ಲಂತ ಎಲ್ಲೊರ್ವ್ಕೂ ಗೊತ್ತಿದ್ದದೇ, ಅಂಥ ನಂಬಿಕೆನ ಅಂವ ಒಳ್ಸಿಕಂಡಿತ್ತ್. ಹಾಂಗೆ ಒಂದ್ ದಿನ ಹಳೆ ಗುರ್ತದ ಒಬ್ಬ ದನಿನ ಮಂಜ, ದೂರದ ಊರ್‌ಲಿ ದೊಡ್ಡ ಕೆಲ್ಸಲಿ ಇರಾಂವ, ಸುಮಾರ್ ವೊರ್ಸದ ಮೇಲೆ ಸುಳ್ಯ ಪೇಟೆಲಿ ಕಾಂಬಕೆ ಸಿಕ್ಕಿದಂವ, ಇವನ ನೋಡಿ "ನೀ ಕಳಲ ಅಲ್ಲನಾ? ಹೇಂಗೊಳ? ಈಗಳೂ ಮೀನ್ ಹಿಡಿಯೊದು, ತೋಟೆ ಹಾಕುದು ಎಲ್ಲಾ ಉಟ್ಟಾ? ಅಲ್ಲಾ ಬುಟ್ಟೊಳನಾ?"ಂತ ಕೇಳ್ತ್. ಕಳಲ ನೆಗಾಡಿಕಂಡ್ "ಅದ್ ಒಮ್ಮೆ ಬುಡ್ದು"ಂತ ಹೇಳ್ತ್. "ಹಾಂಗಾ"ಂತ ಅವಂಗೆ ಇನಾಮುಂತ ಹಣ ಕೊಡಿಕೆ ಕಿಸೆಗೆ ಕೈ ಹಾಕಿಕನ ಐವತ್ತ್ ರುಪಾಯಿನ ನೋಟು ಸಿಕ್ಕಿತ್. ದನಿ ಮಂಜ "ನಿನ್ನ ನಸೀಬ್‌ಯಾ! ಚಿಲ್ಲರೆ ಕೊಟ್ಟನೆಂತ ನೆನ್ಸಿರೆ ಐವತ್ತ್ ರುಪಾಯೇ ಬರೋಕಾ? ತೆಕಾ. ದೇವ್ರು ನಂಗೇನೂ ಕಮ್ಮಿ ಮಾಡ್ತ್‌ಲೆ"ಂತ ಹೇಳಿ ಕುಸಿಲೆ ಕೊಟ್ಟ್ "ಂದಾ, ನಿಂಗೆ ಪುಸೊರ್ತ್ ಇದ್ದರೆ ಯಾಗಾರ್ ತೋಟೆ ಹಾಕ್, ಈಗ ತೋಟೆ ತೆಗ್ಸಿ ಕೊಟ್ಟನೆ"ಂತ ಹೇಳಿ, ಅಲ್ಲೇ ಹಕ್ಕಲಿದ್ದ ಲಿಂಗಪ್ಪಣ್ಣನ ಅಂಗಡಿಗೆ ಹೋತ್. ಅಲ್ಲಿ ಬೇರೆ ಯಾರೋ ಯಾಪಾರಕ್ಕೆಂತ ಬಂದೊವು ಇದ್ದೊ. ಅವು ಹೋದ ಮೇಲೆ ದನಿ ಮಂಜ ತೋಟೆ ತೆಕಂಡ್ ಹೊರಗೆ ಬಾಕನ, ಒಬ್ಬ ಪೋಲೀಸ್ ಅಂಗಡಿ ಬಾಗ್‌ಲ್‌ಲಿ ನಿತ್ತ್‌ಕಂಡ್ ಏನೋ ಗುಮಾನಿ, ಇದ್ದ ಹಾಂಗೆ ನೋಡ್ತಿತ್ತ್. ಇವಂಗೆ ಒಂಥರಾ ಆತ್. ಅಂಗ್ಡಿ ಎದ್ರ್ ಇದ್ದ ಕಣಿಗೆ ಆ ಕಟ್ಟ್‌ನ ಹಾಕಿ, ಕಣ್ಸನ್ನೆಲಿ ಕಳಲಂಗೆ ಅದರ "ತೆಕ"ಂತ ಹೇಳಿ ಅಂವ ಹೋತ್. ಕಳಲ ಅಲ್ಲೇ ಅತ್ತ ಇತ್ತ ಹೋಗಿ ಪೋಲೀಸ್ ದಾಟಿದ ಮೇಲೆ ಆ ಕಟ್ಟ್‌ನ ತೆಗಂಡತ್. ಮಳ್ಗಾಲ ಸುರು ಆಗಿತ್ತ್. ಅಂದ್ ಮಳೆ ಇಲ್ಲರೂ, ಆ ಕಣಿಲಿ ಹಂಞ ನೀರ್ ಹರ್‍ಕಂಡ್ ಹೋತಿತ್ತ್. ಕಟ್ಟ್ ಹಂಞ ಚಂಡಿ ಆಗಿತ್ತ್. "ಛೇ"ಂತ ಹೇಳಿ, ಅದರ ಬೇರೆ ಸಾಮಾನಿದ್ದ ಚೀಲಲಿ ಹಾಕ್ಕಂಡತ್. ಹಳ್ಳಕ್ಕೆ ತೋಟೆ ಹಾಕಿ ಮೀನ್ ಕೊಲ್ಲುದು ಸರಕಾರದ ಕಾನೂನ್‌ಲಿ ತೊಪ್ಪುಂತ ಅವಂಗೆ ಗೊತ್ತಿತ್ತ್. ಒಂದೆರ್‍ಡ್ ಸಲ ಅಂವ ತೋಟೆ ಹಾಕಿ ಸಿಕ್ಕಿ ಹಾಕಿಕಂಡಂವ ಹೇಂಗೋ ತೊಪ್ಪಿಸಿಕಂಡಿತ್ತ್.

ದಟಿಗೆಗೆ ಹೋಗಿ ಕಟ್ಟ್ ಬಿಚ್ಚಿ ನೋಡ್ತ್. ಹೊರಗೆದ್ದ್ ಕಾಗದ ಚಂಡಿ ಆಗಿತ್ತ್. ಅದರ ಒಲೆಗೆ ಹಾಕಿ "ಮಣ್ಯಕ್ಕೆ ಒಳಗೆ ಅಷ್ಟೇನ್ ಚಂಡಿ ಆತ್‌ಲ್ಲೆ. ಒಂದೆರ್‍ಡ್ ದಿನ ಒಲೆ ಚಿಂಟೆಲಿ ಇಸಿರೆ

ಸೆರಿ ಆದೆ"ಂತ ಒಲೆ ಚಿಂಟೆಲಿ ಇಸಿದರ ಹೆಣ್ಣ್‌ಗೆ ಮತ್ತೆ ಮಕ್ಕಳಿಗೆ ಹೇಳಿ "ಒಲೆಂದ ದೂರನೇ ಇರಲಿ, ಯಾರಾದರ್ ಒಲೆಗೆ ಹಾಕಿಬುಡ್ಬೇಡಿ"ಂತ ಎಚ್ಚರ ಹೇಳ್ತ್.

ಆ ಮೇಲೆ ದಟಿಗೆಲಿ ಇರಿಕನ ನೆಂಪು ಆದಾಗೆಲ್ಲಾ, ಒಲೆ ಹಕ್ಕಲೆ ಹೋಗಿ, ಅದರ ಮುಟ್ಟಿ ಅತ್ತ ಇತ್ತ ತಿರ್ಗಿಸಿ ಬಾತಿತ್ತ್. ಎರ್ಡ್ ದಿನ ಕಳ್ತ್. ಮೊರ್ದಿನ ಐತಾರ. ಬೊಳ್ಪು ಒಂದ್ ಹೊತ್ತು ಮಾತ್ರ ಕೆಲ್ಸ. ಅದರ ನೋಡಿಕನ ಅವಂಗೆ ಅದ್ "ನನ್ನನ್ ಯಾಗ ನೀ ಹಳ್ಳಕೆ ಹಾಕಿಯಾ?"ಂತ ಕೇಳ್ದಂಗೆ ಆತಿತ್ತ್. ಅಂವ ಮನ್ಸ್‌ಲೇ "ನಿಲ್ಲ್, ಇಂದ್ ಒಂದೇ ದಿನ. ನಾಳೆ ನಿಂಗೆ ಗತಿ ತೋರ್ಸಿನೆ"ಂತ ಹೇಳ್ತ್.
ಮೊರ್ದಿನ ಬೊಳ್ಪುಗೆ ಅದರ ಮುಟ್ಟಿ "ಇಂದ್ ಹಾಕುದೇ"ಂತ ಅಲ್ಲೇ ಇಸಿತ್.

ಬೊಳ್ಪುನ ಒಂದ್ ಹೊತ್ತ್ ಕೆಲ್ಸ ಮುಗ್ಸಿ, ಊಟಕ್ಕೆ ಬಂದಂವ, ಊಟ ಆದ ಮೇಲೆ ಹಙ್ಞ ಹೊತ್ತ್ ಮಲ್ಗಿದ್ಹಾಂಗೆ ಮಾಡಿ, ಮಲ್ಗಿಕೆ ಮನ್ಸ್ ಬಾರದೆ ಎದ್ದ್, ಹೆಗ್ಲ್ ಮೇಲೆ ಬೈರಾಸ್ ಹಾಕಿ, ನಾರು ಹಕ್ಕಲೆ
"ನಾ ತೋಟೆ ಹಾಕಿಕೆ ಹೋನೆ, ಬಂದಿಯನಾ?"ಂತ ಕೇಳ್ದಕ್ಕೆ
" ಆ ಒಲೆ ಚಿಂಟೆಲಿ ಇದ್ದ ತೋಟೆನಾ? ಅದ್ ಒಣ್‌ಂಗಿರ್ದುಲ್ಲಾ"ಂತ ಕೇಳ್ತ್.
ಹಾಂಗೆ ಅಂವ ಕೇಳ್ದೇ ಅಪಶಕುನ ಅಂತ ಕಳಲಂಗಾತ್.
ಮಂಜನ ಮಾತ್‌ನ ಬೂಸು ಮಾಡ್ವ ಹಾಂಗೆ ಹಙ್ಞ ಗಟ್ಟಿ ಸೊರಲಿ "ಒಣ್‌ಂಗ್‌ದೆ ಏನ್? ಅದರ ಸುತ್ತಿದ ಕಾಗದ ಮಾತ್ರ ಚಂಡಿ ಆದ್. ಆದರೂ ಬೆಚ್ಚ ಇರಲಿಂತ ನಾ ಒಲೆ ಚಿಂಟೆಲಿ ಇಸಿದ್ದ್"ಂತ ಹೇಳ್ತ್.

ನಾರುಗೆ ನನ್ನ ಮಾತಿಂದ ಅಪ್ಪಂಗೆ ಬೇಜಾರ್ ಆತ್‌ಂತ ಆತ್. ಅಂವ ಸಣ್ಣ ಸೊರಲಿ "ಹಾಂಗಲ್ಲ, ಹೊಡ್ಯದೇ ಹೋದರೆ, ಅಲ್ಲರೆ ಹೆಚ್ಚ್ ಕಡ್ಮೆ ಆಗಿ ಕೈಲೇ ಹೊಡ್ದರೆಂತ ಎಚ್ಚರಕ್ಕೆ ಕೇಳ್ದೆ ಅಷ್ಟೇ"ಂತ ಹೇಳ್ತ್. ಕಳಲ ಮಾತಾಡ್ತ್‌ಲೆ. ಅವಂಗೆ ಮಗಳ ನೆಂಪಾತ್. ಯಾವ್ದೇ ಕೆಲ್ಸ ಆಗಲಿ ಅದ್ ಬೇಕಾ ಬೇಡಂತ ಕಡ್ಡಿ ಮುರ್ದ ಹಾಂಗೆ ಹೇಳ್ತಿತ್ತ್. ಇಂವ ಒಬ್ಬ ಗೋಡೆ ಮೇಲೆ ದೀಪ ಇಸಿದ ಹಾಂಗೆ ಮಾತಾಡ್ದೆ. ಎಂಥ ಮಾಡುದು? ಹೋದಾ ಬೇಡನಾ? ಇಂದ್ ಹೋಗದಿದ್ದರೆ ಮತ್ತೆ ಬರ್ವ ವಾರ ಮುಟ್ಟ ಕಾಯೋಕು. ಹೇಂಗಾರ್ ಹೊರ್ಪ್ ಆತಲೆ. ಪೋಯಿಂತ ಗಟ್ಟಿ ಮನ್ಸ್ ಮಾಡ್ತ್. ಒಲೆ ಚಿಂಟೆಂದ ತೋಟೆನ ತೆಗ್ದ್ ಹಾಂಗೆ ಒಂದ್ ಗಳಿಗೆ ಯೋಚನೆ ಮಾಡಿಕಂಡೇ ನಿತ್ತ್‌ದ್ "ನಂಗೆ ಎಂಥ ಆಗುಟು? ನಾ ಎಷ್ಟ್ ತೋಟೆ ಹಾಕಿಯೊಳೆನೊ ಏನೋ. ಲೆಕ್ಕ ಇಸಿದ್ದರೆ ಒಂದ್ ಸಾವ್ರ ಮೆನಿ ಆಗಿರ್ದು"ಂತ ಧೈರ್ಯಲಿ ಮಂಜನ ಹಕ್ಕಲೆ "ಹಾಂಗಾರೆ ಪೋಯೊ್‌ೇ?"ಂತ ಕೇಳ್ತ್.
"ಪೋಯಿ, ಬಂದೆ"ಂತ ಹಳೆ ಅಂಗಿನ ಕೋಸಿಕಂಡ್ ಮಂಜ ಸಾ ಹೊರ್ಟತ್.
ಕಳಲ ಇಲ್ಲಿ ಮುಟ್ಟ ಬೇರೆವರ್ ಕೊಟ್ಟ ಹಣಲಿ ತೋಟೆ ಹಾಕಿತ್ತ್ ಅಲ್ಲಾದೆ ಅವನ ಹಣಲಿ ಒಮ್ಮೆನೂ ಹಾಕಿತ್ಲಾಗಿತ್ತ್.

ಹಳ್ಳದ ಹಕ್ಕಲೆ ಬಂದ್ ಕರೆಲೇ ಅತ್ತಂದಿತ್ತ ಇತ್ತಂದತ್ತಂತ ಸುಮಾರ್ ರೋಂದ್ ಹಾಕಿದೊ. ಅಲ್ಲಾದೋ ಇಲ್ಲಾದೋಂತ ಒಂದ್ ಗಂಟೆ ಕಾಲ ಕಳ್ತ್. ಮೀನ್‌ಗ ಎಲ್ಲಿ ಇರ್ವೊಂತನೇ ಅಂದಾಜಾದ್ಲೆ. ಇನ್ನ್ ಅಂದರೆ ತೋಟೆ ಹಾಕುದೇ ಬೇಡನಾ ಹೆಂಗೆ?ಂತ ಮಂಜನ ಕೇಳ್ತ್.

ಹೊಳೆಲಿ ಒಂದ್ ಗುಂಡಿನೇ ನೋಡಿಕಂಡ್ ಇದ್ದ ನಾರು ಅಪ್ಪಂಗೆ ಕೈ ತೋರ್ಸಿತ್. ಅಲ್ಲಿ ಗುಳು ಗುಳುಂತ ಮುಗುಳಿ ಎದ್ರ್‌ತಿತ್ತ್. "ಸಿಕ್ಕರೆ ಸಿಕ್ಕಿದೆ, ಇಲ್ಲರೆ ಸಾಯಲಿ"ಂತ ಹೇಳಿ ಅಲ್ಲೇ ತೋಟೆ ಹಾಕಿಕೆ ಕಳಲ ತೆಯಾರ್ ಆತ್.

ಎಡ ಕೈಯಲ್ಲಿ ತೋಟೆನ, ಹಾಂಗೆ ಕಿಚ್ಚಿನ ಪೆಟ್ಟಿಗೆನ ಹಿಡ್ಕಂಡ್, ಅದರಂದ ಒಂದ್ ಕಡ್ಡಿ ತೆಗ್ದ್ ಗೀರಿತ್. ತೋಟೆ ಚಂಡಿ ಇರಿಕಿಲ್ಲಲೇಂತ ನೆನ್ಸಿ ಮತ್ತೆ ಮೆಲ್ಲ ತೋಟೆ ನಾಲಗೆಗೆ ಕಿಚ್ಚ್ ಹಿಡ್ತ್. ಚಂಡಿ ಇದ್ದರೆ ತೋಟೆ ಹಾಳಾದೆಲ್ಲಾಂತ ಯೋಚನೆಲಿ ಯಾಗೋಳು ತೋಟೆ ಎಸೆವ ಹೊತ್ತಿಗಿಂತ, ಒಮ್ಮೆ ಕಣ್ಣ್ ಮುಚ್ಚಿ ತೆಗ್ಯವಷ್ಟ್ ಹೊತ್ತ್ ತಡ್ತ್. ಅವನ ಯೋಚನೆ ತಲೆಗೆ ಎತ್ತಿರಿಕಿಲ್ಲೆ, ಅಷ್ಟ್ ಹೊತ್ತಿಗೆ ಕೆಬಿ ಹೊಟ್ಟುವ ಹಾಂಗೆ "ಡಮಾರ್"ಂತ ಸದ್ದ್! ಅದರ ಒಟ್ಟಿಗೆ ಕಳಲನ "ಅಯ್ಯೋ, ನನ್ನ ಕೈ ಹೋತ್"ಂತ ಆರ್ಭಟೆ! ನಾರು ಶಬ್ದ ಕೇಳಿ ಹಾಂಗೆ ಅಪ್ಪನ ಕೈ ನೋಡಿ ತರತರ ನೊಡ್ಗಿಬುಟ್ಟತ್. ಕಳಲನ ಎಡದ ಮೊಣಕೈಯಿಂದ ಎದ್ರ್ ತುಂಡಾಗಿ, ಹೊಡಿಹೊಡಿಯಾಗಿ ಎಲ್ಲೋ ಬಿದ್ದ್ ಹೋಗಿತ್ತ್. ಪುಣ್ಯಕ್ಕೆ ಹೊಳೆಲಿ ಬಟ್ಟೆ ತೊಳ್ಯಕೆ, ಮೀಯಕೆಂತ ಬಂದ ಜೆನಗ ಸುಮಾರ್ ಇದ್ದೊ. ಮತ್ತೆ ಕಳಲನ ಗೊತ್ತಿಲ್ಲದವು ಯಾರೂ ಇಲ್ಲೆಲೇ? ಎಲ್ಲೊವು ಓಡಿ ಬಂದೊ. ಕಳಲನ ಉಟ್ಟ ಬಟ್ಟೆನ ಹರ್ದ್, ಕೈ ತುಂಡಾದಲ್ಲಿಂದ ಮೇಲೆ ನೆತ್ತರ್ ಕಟ್ಟಿಕೆಂತ ಗಟ್ಟಿ ಕಟ್ಟಿದೊ. ಆದರೂ ನೆತ್ತರ್ ಜಿರಿಜಿರಿಂತ ಅರ್ಯತಿತ್ತ್. ಪರ್ಚಯದೊವು ಅವನ ಸುಳ್ಯದ ಧರ್ಮಾಸ್ಪತ್ರೆಗೆ ಕರ್ಕೊಂಡ್ ಹೋದೊ. ಡಾಕ್ಟ್ರ ಅಂದ್‌ನ ಮಟ್ಟಿಗೆ ಮಾಡೋಕಾದರ ಮಾಡಿ, "ಈಗ ಕತ್ತಲಾತಲೇ, ನಾಳೆ ಮಂಗ್ಳೂರಿಗೆ ಕರ್ಕಂಡ್ ಹೋಗಿ"ಂತ ಹೇಳ್ದೊ.

ಕಳಲನ ಗೆತಿ ನೋಡಿ ಮಾಯ್ಲು ಕಂಗಾಲ್. ಒಂದ್ ಕಡೆ ಕಳಲನ, ಮತ್ತೊಂದ್ ಕಡೆಂದ ದುಡ್ಡುದ್ ಚಿಂತೆ. ಆ ಕಾಲಲಿ ಪಾಪದವ್ಕೆ ಮಂಗ್ಳೂರ್ ಅಂದರೆ ಇಂದಿನವ್ಕೆ ಅಮೆರಿಕಾ ಇದ್ದ ಹಾಂಗೆ. ಹೇಂಗೆ ಹೋದು? ಯಾರ್ ನಿಲ್ಲೊವು?ಂತ ಮಂಡೆ ಬೆಚ್ಚ ಆತ್. ದುಡ್ಡಿಗೆ ಎಂತ ಮಾಡುದುಂತ ಯೋಚನೆ ಮಾಡಿ ಅತ್ತೆ ಮತ್ತೆ ಮಾಚು ಹೇಳ್ದಂಗೆ ಎಲ್ಲರ ಮನೆಗೆ ಹೋಗಿ ಹಣ ಕೇಳಿಕಂಡ್ ಬಾದುಂತ ಮನೆಮನೆಗೆ ಬೇಡಿಕೆ ಹೋತ್. ಕಳಲನ ಕೈ ಹೋದ ಸುದ್ದಿ ಇಷ್ಟ್ ಹೊತ್ತಿಗೆ ಎಲ್ಲೊವ್ಕೆ ಗೊತ್ತಾಗಿತ್ತ್. ಮೊರ್ಕಂಡ್ ಹೋದ ಮಾಯ್ಲುಗೆ ಸಮದಾನ ಹೇಳಿ ಊರವು ಅವರವರ ಅನ್ಕೂಲಕ್ಕೆ ಸರ್ಯಾಗಿ ಪಾಪದೊವು ಎಂಟಾಣೆ ಒಂದ್ರುಪಾಯಿ ಕೊಟ್ಟರೆ, ದೊಡ್ಡೊವು ಎರಡ್ ಮೂರ್ ರುಪಾಯಿ ಕೊಟ್ಟೊ. ಅಂತೂ ಒಮ್ಮೆನ ಸುದರ್ಣೆಗೆ ಹಣ ಆತ್.

ಅವರ ನೆರೆಕರೆಲಿ ಇದ್ದ ಒಬ್ಬ ಹೈದ ಮಂಗ್ಳೂರ್ಲಿ ಏನೋ ಕೆಲ್ಸ ಮಾಡಿಕಂಡ್ ಇತ್ತ್. ಅಂವ ಐತಾರದ ರಜೆಲಿ ಮನೆಗೆ ಬಂದಿತ್ತ್. ಅವನ ಮಾತಾಡ್ಸಿ, ಕಳಲನೊಟ್ಟಿಗೆ ಮಂಗ್ಳೂರ್ಗೆ ಮಾಯ್ಲುನ ಕರ್ಕಂಡ್ ಹೋವ ಹೊಣೆನ ಅವಂಗೆ ಒಪ್ಪಿಸಿದೊ. ಕಳಲ ಹಂಞ ಉಸಾರ್ ಆಕೆ ಮುಟ್ಟ ಅವನ ನೋಡಿಕೊಂಬ ಉಪಕಾರನ ಸಾ ಅವನೇ ಮಾಡೋಕುಂತ ಕೇಳಿಕಂಡೊ. ಅಂವ ಒಪ್ಪಿತ್. ಹಾಂಗೆ ಮೊರ್ದಿನ ಡಾಕ್ಟ್ರ ಕೊಟ್ಟ ಚೀಟಿ ಹಿಡ್ಕಂಡ್ ಕಳಲನ ಮಂಗ್ಳೂರ್ನ ವೆನ್‌ಲಾಕ್ ಆಸ್ಪತ್ರೆಗೆ ಸೇರ್ಸಿದೊ. ಮಾಯ್ಲು ಹಿಂಬೊತ್ ವಾಪಾಸ್ ಬಾತ್. ಹೈದ, ಕಳಲ ಅವನೇ ಓಡಾಡಿಕೆ ಸುರು ಮಾಡ್ದ ಮೇಲೆ ಹೈದ ಆಸ್ಪತ್ರೆ ಬುಟ್ಟತ್..

ಸುಮಾರ್ ಒಂದೂವರೆ ತಿಂಗ ಕಳ್ದ ಮೇಲೆ ಕಳಲ ಸುಳ್ಯಕೆ ಬಾತ್. ಎಡಕೈನ ಒಂದ್ ಬೈರಾಸ್ಲಿ ಮುಚ್ಚಿಕಂಡ್ ಅವಂಗಾಗುವ ಕೆಲ್ಸಗಳ ಮಾಡ್ತಿತ್ತ್. ಹಾಂಗೆಂತ ಮೀನ್ ಹಿಡಿಯೊದರ,

ತೋಟೆ ಹಾಕುದರ ಬುಟ್ಟತ್‌ಂತ ನೆನ್ಸಬೇಡಿ. ಯಾರಾರ್ ಕೇಳ್ರೆ ನೆಗಾಡಿಕಂಡ್ " ನಾ ಜುವ್ವ ಬುಡಿಕನ ಅದರ ಬುಡುದು"ಂತ ಹೇಳ್ತಿತ್ತ್.

ಸುಮಾರ್ ಹೊತ್ತಾದರೂ ಹೆಣ್ಣ್‌ನ ಕಾಣದಕ್ಕೆ "ಇದೆಲ್ಲಿ ಹೋತ್"ಂತ ಎಲುಂಬ ಅದರ ಕೋಣೆ ಕಡೆ ಬಾತ್. ಕೋಣೆ ಬಾಗ್‌ಲ್‌ಲಿ ನಿತ್ತ್ ನೋಡಿ, ಸದ್ದ್ ಆಗದ ಹಾಂಗೆ ವಾಪಾಸಾತ್. ಮಾಚು ಕಣ್ಣ್ ಮುಚ್ಚಿಕಂಡ್ ಇದ್ದರೂ ಹೆಜ್ಜೆನ ಸದ್ದ್ ಕೇಳಿ ಯಾರ್ ಬಂದದ್ದ್‌ಂತ ಗೊತ್ತಾತ್. ಈ ಪ್ರಾಯಲೂ ಎಲ್ಲಾರ್ ಕೆಲ್ಸಕ್ಕೆ ಹೋದಲ್ಲಿಂದ ಬಾಕನ ತಡ ಆದರೆ "ಯಾವ ಗಂಡಸ್ ಒಟ್ಟಿಗೆ ಇದ್ದ"ಂತ ಕೇಳ್ವ ನಾಲಾಯಕ್ ಗಂಡನ ನೆನ್ದ್ "ಸಾಯಲಿ ಅಂವ"ಂತ ಮತ್ತೆ ಹಳೆ ನೆಂಪಿಗೆ ನೇತಾಡಿಕಂಡತ್.

ಕಳಲನ ಹಕ್ಕಲೆ ತರಾವರಿ ಬಲೆಗ ಇದ್ದೊಂತ ಹೇಳಿದ್ದೆ ಅಲ್ಲಾ? ಮಕ್ಕ ದೊಡ್ಡದಾದ ಮೇಲೆ- ಆ ಬಲೆಗ ಒಳ್ಳೆ ಉಪ್ಯೋಗಕ್ಕೆ ಬಂದೊ. ಹಳ್ಳಲಿ ದೊಡ್ಡ ಬಲೆನ ಮೀನ್ ಹೆಚ್ಚ ಇರ್ವ ಜಾಗ ನೋಡಿ, ಕತ್ತಲೆ ಬಿದ್ದ ಮೇಲೆ ಅಡ್ಡಕ್ಕೆ ಕಟ್ಟಿ ಬರ್ತಿದ್ದೊ. ಬೊಳ್ಪಿಗೆ ಬಾಂಗ್ ಆಕೆ ಮುಂದೆ ಬಲೆ ಬಿಚ್ಚುತಿದ್ದೊ. ದೊಡ್ಡ ಮೀನ್‌ಗ ಹೆಚ್ಚ ಸಿಕ್ಕದ್ದರೂ ಸಣ್ಣ ಮೀನ್‌ಗ ಎರ್ಡ್ ಮೂರ್ ಸೇರ್‌ಗೆ ಕಡ್ಮೆ ಇಲ್ಲೆ. ಚೆರ್ಗ್, ಕೀಜಾಣ್, ಮುಳ್ಳ, ಪೊಯ್ಯೆ ಮೊರಂಟೆ, ನೊಳು, ಪೆರ್ವೋಲು ಹೀಂಗೆ. ದೊಡ್ಡ ಮೀನ್‌ಗ ಮಡೆಂಜಿ, ಮುಗುಡು, ಚಾ ಮೀನ್ ಸಿಕ್ಕಿದ್ದ್ ಕಮ್ಮಿ. ಒಮ್ಮೊಮ್ಮೆ ಹಾವ್ ಮೀನ್ ಸಿಕ್ತಿದ್ದೊ. ಒಮ್ಮೆ ಹಾವ್ ಮೀನ್‌ಂತ ತೆಗ್ಯಕೆ ನೋಡ್ರೆ ಅದ್ ನಿಜಾದ ಹಾವೇ ಆಗಿತ್ತ್. ಅದರ ನೋಡಿ ಮಾಚು ಮತ್ತೆ ನಾರು ಹೆದ್ರಿ ಕಿರ್ಚಿಕಂಡ್ ಬಲೆ ಹೋದರೆ ಹೋಗಲಿಂತ ಬುಟ್ಟುದು ಓಡಿದ್ದೇ. ಅದರ್ಲಿ ಸಿಕ್ಕಿ ಬಿದ್ದ ಹಾವಿಗೆ ಒಮ್ಮೆ ಬಲೆಂದ ಬುಡುಗಡೆ ಆದರೆ ಸಾಕ್‌ಂತ ಆಗಿತ್ತ್. ಬಲೆ ಬುಟ್ಟದ್ದೇ ತಡ ಸೊಂಯ್ ಸೊಂಯ್‌ಂತ ನೀರ್ಲಿ ಮೀಂದ್‌ಕಂಡ್ ಹೋತ್. ಆ ಮೇಲೆ ನೀರ್‌ಲಿ ನಿದಾನಕ್ಕೆ ಅತ್ತ ಮುಳ್ಗದೆ, ಇತ್ತ ತೇಲದೆ ಮೆಲ್ಲಾನೆ ಹೋಕ್ಕಂಡ್ ಇದ್ದ ಬಲೆನ ಎಳ್ದ್ ತಂದೊ. ಬಲೆಲಿ ಇದ್ದ ಮೀನ್‌ಗ ಸತ್ತದ್ದ್ ಬೊದ್ಕಿದ್ದ್ ಪೂರ ಹೋಗಿದ್ದೊ. "ಹಾವ್‌ನ ಬಾಯಿಗೆ ಮೊಣ್ಣ್ ಹಾಕಿಕೆ"ಂತ ಸಾಪ ಕೊಟ್ಟ್‌ಕಂಡ್, "ಯಾವ್ದೋ ವಿಷದ ಹಾವ್ ಮೆನಿ ಆಗಿದ್ದ್ ನಮ್ಮ ಕಚ್ಚಿದ್ದರೆ ಎಂತ ಕತೆ ಆಗ್ತಿತ್ತ್"ಂತ ಹೇಳಿಕಂಡ್ ದಟಿಗೆಗೆ ಬಂದ್ ಹೇಳಿಕನ ಹುಗ್ಗವ್ವ "ನಂಗೆ ನೀವು ಬಲೆ ಕಟ್ಟಿಕೆ ಕತ್ತಲೆಗೆ ಹೋದು, ಬೊಳ್ಪಾಕೆ ಮುಂದೆ ಬಲೆ ತಾಕೆ ಹೋದು ಏನೂ ಸಮದಾನ ಇಲ್ಲಾಗಿತ್ತ್. ಮತ್ತೆ ಏನಾರ್ ಹೇಳ್ರೆ ಅಪಸಕ್ನ ಆದೆಂತ ಬಾಯಿ ಮುಚ್ಚಿಕಂಡ್ ಇದ್ದೆ. ಇನ್ನ್ ಮುಂದೆ ಮಾತ್ರ, ಇರ್ಲ್ ಬಲೆ ಕಟ್ಟಿಕೆ ಹೋದೇ ಬೇಡ"ಂತ ಖಡಾ ಖಂಡಿತ ಆಗಿ ಹೇಳ್ತ್. ಮಕ್ಕ ಮೌನಲಿ ಒಪ್ಪಿಕಂಡೊ. ಒಂದ್ವೇಳೆ ಹಾವ್ ಬಲೆಗೆ ಬೀಳದಿದ್ದರೆ ಹುಗ್ಗವ್ವನ ಮಾತ್ ಕೇಳ್ತಿತ್ತೆನೋ ಏನೋ?

ಅವರ ನೆರೆಕರೆಲಿ ಏನೋ ಒಂದ್ ಕಾಯ್ಲೆ ಇದ್ದ ಪ್ರಾಯದವು ಒಬ್ಬ, ಹಾವ್ ಮೀನ್ ಸಿಕ್ಕಿರೆ ನಂಗೆ ತಂದ್ ಕೊಡೊಕುಂತ ಕಳಲನ ಹಕ್ಕಲೆ ಹೇಳಿದ್ದೊ. ಬಾಲಲಿ ಮಾತ್ರ ಮೀನ್‌ನ್ಹಂಗೆ ಇರ್ವ ಆ ಮೀನಂದರೆ ಮಾಚುಗೆ ಹೇಸಿಗೆ. ನಾರುನೇ ಅದರ ಬಲೆಂದ ಬುಡ್ಸಿ, ಅದರೊಟ್ಟಿಗೆ ಬೇರೆ ಒಂದೆರ್ಡ್ ಮೀನ್‌ಗಳ ಕೋಪೆಗೆ ಸೆಕ್ಕಿಸಿ ಹೇಳಿದವ್ಕೆ ತೆಕಂಡ್ ಹೋಗಿ ಕೊಡ್ತಿತ್ತ್. ಅವು ಅಕ್ಕಿನೋ, ಕಾಯೆನೋ ಕೊಡ್ತಿದ್ದೊ. ಇಂವ ದುಡ್ಡೇ ಬೇಕಂದರೆ ದುಡ್ಡೇ ಕೊಡ್ತಿದ್ದೊ. ಬಲೆಲಿ ಸಿಕ್ಕಿಕಂಡ ಹಾವ್‌ನ ಕತೆಂದಾಗಿ ಪಾಪ! ಅವ್ಕೆ ಹಾವ್ ಮೀನ್ ತೊಪ್ಪಿ, ಇವಂಗೆ ದುಡ್ಡು ಸಿಕ್ಕುದು ಸಾ ಸಿಕ್ಕದ ಹಾಂಗೆ ಆತ್. ❒

ಹಾಳೆ–6
ಪೆರಿಯದ ಜೇನ್

ಕಳಲನ ದಟಿಗೆನ ಹಿಂದೆ ಗೋಡೆಗೆ ತಾಂಗಿಕಂಡ್ ಒಂದ್ ಕೋಳಿನ ಗೂಡು ಇತ್ತ್. ಹೇಂಟೆಗ, ಹೂಂಜಗ, ಲಾಕಿಗ ಮತ್ತೆ ಪಿಳ್ಳೆಗಂತ ಸುಮಾರ್ ಇಪ್ಪತ್ತೈದ್ ಮೂವತ್ತಕ್ಕಿಂತ ಹೆಚ್ಚ್ ಕೋಳಿಗ ಇದ್ದೊ. ಹಬ್ಬ, ನೆಂಟ್ರ ಸಮ್ಮಾನಕ್ಕೆ, ಕಾರ್ತಿಂಗ, ಆಟಿಲಿ ಗುಳಿಗ ಕಲ್ಲುರ್ಟಿ ಹರಕೆಗೆ, ತಳದ, ಮನೆನ ಬೂತಗಳಿಗೆ, ನೇಮಕ್ಕೆಂತ ವೊರ್ಸಕ್ಕೆ ಒಂದ್ ಹತ್ತ್ ಹದ್ನೈದ್ ಕೋಳಿಗಾದರ್ ಬೇಕೇ ಬೇಕು. ಹುಗ್ಗವ್ವ ಹೇಂಟೆಗ ಮೊ್ರಿ ಮಾಡ್ಸಿಕಾಕನ ನಾಲ್ಕ್ ಪಿಳ್ಳೆಗಳಿಗೆ ಎರ್ಡೆರ್ಡೋ ಮೂರ್‌ಮೂರೋ ಮೊ್ರಿಗಳ ಸಾಂಕಿಕೆಂತ ಹಂಚಿ ಕೊಡ್ತಿತ್ತ್. ಅದರೊಟ್ಟಿಗೆ ಗೂಡುನ ಬಾಗ್ಲ್ ಮುಚ್ಚುದು, ಅಂದಂದೇ ಅದಿಕೆ ಬೂದಿ ಹಾಕುದು, ದನಿ ಮನೆಂದ ದಡ್ಡ್ ಬತ್ತ ತಾದು, ಅವ್ಕೆ ತಿಂಬಕೆ ಕೊಡಿ ಅಕ್ಕಿ ಹಾಕುದು– ಇಂಥ ಕೆಲ್ಸಗಳನ ಸಾ ಪಿಳ್ಳೆಗಳಿಗೆ ಹಂಚಿ ಕೊಟ್ಟಿತ್ತ್. ಕೋಳಿಗ ದೊಡ್ಡದಾಗಿ ಮಾರಿಕಾಕನ ಅದರ ದುಡ್ಡು ಸಾಂಕಿದವ್ಕೇ. ಮಕ್ಕಳ ಚಿಲ್ಲರೆ ಕರ್ಚಿಗೆ ಈ ಹಣನ ಉಪ್ಯೋಗಿಸ್ತಿದ್ದೊ. ಒಳ್ಳೆ ಹುಂಜಗ ಇದ್ದರೆ ಕೋಳಿ ಕಟ್ಟುವವು ಮನೆಗೇ ಬಂದ್, ಹೇಳಿದ ಕ್ರಯಕ್ಕೆ ತೆಕಂಡ್ ಹೋತಿದ್ದೊ. ಕೋಳಿ ತಿಂಬವು ಅವರ ಮನೆಲಿ ಏನಾರ್ ಜಂಬರ ಇದ್ದರೆ ತೆಗ್ಯೆ ತೆಕಂಡ್ ಹೋದೂ ಇತ್ತ್. ಪುಳ್ಳೆಗ ದೊಡ್ಡಿತಾಕಂಡ್ ಬಾಕನ ಹುಗ್ಗವ್ವ ಕೋಳಿ ಸಾಂಕಾಟ ಅಲ್ಲಾದೆ, ದುಡ್ಡು ಮಾಡ್‌ವ ಬೇರೆ ಬೇರೆ ಇದ್ಯೆಗಳ ಒಂದೊಂದಾಗಿ ಹೇಳಿಕೊಡ್ತಿತ್ತ್.

ಪಿಳ್ಳೆಗಳ ಒಟ್ಟಿಗೆ ಕರ್ಕಂಡ್ ಹೋಗಿ ಮುಂಡೋವು ಒಲಿ ತಾದ್, ಹಾಂಗೆ ಅದರ ಮುಳ್ಳು ಕಂತದ್ಹಂಗೆ ಕಡ್ಯೊದರ, ಹಿಡ್ಕಂಡ್ ಬಾದರ ಹೇಳಿಕೊಟ್ಟತ್. ಮೊ್ರ್ದಿನ ಹಗ್ಲ್ ಬಿಸ್ಲ್‌ಗೆ ಒಣ್‌ಗಿಕೆ ಹಾಕಿಸ್ತಿತ್ತ್. ಕತ್ತಲೆಗೆ ಅದರ ಮೊ್ಗ್ಚಿ ಹಾಕುದರ ಮಾಡಿ ತೋರ್ಸಿ, ಹಾಂಗೆ ಮೊ್ಗ್ಚಿ ಹಾಕಿಕೆ ಹೇಳ್ತಿತ್ತ್. ಹೀಂಗೆ ಎರ್ಡ್ ದಿನ ಮಾಡಿ ಮೂರ್ನೇ ದಿನ ಪೊಲ್ರ್ಟು ಮೊ್ಡ್ಚಿ, ಚೆಂಡ್ ಕಟ್ಟುದು ಹೇಂಗೆಂತ ತೋರ್ಸಿ ಕೊಡ್ತಿತ್ತ್. ಅದರ ನಾಕ್ನೇ ದಿನ ಬೊಳ್ಪುಗೆ ಚಾಪೆ ಮೆಡಿಯೋದು ಹೇಂಗೆಂತ ಒಲಿ ಇಸಿದ್, ಸುರು ಮಾಡ್ದು ಹೇಂಗೆಂತ ತೋರ್ಸಿ ಕೊಡ್ತಿತ್ತ್. ಮೂರ್ ಚೆಂಡಿಗೆ ಒಂದ್ ದೊಡ್ಡ ಮೊ್ಂದ್ರಿ ಆದೆಂತ ಹೇಳಿಕಂಡ್ ಮೆಡ್ದ್ ತೋರ್ಸಿತ್. ಚಾಪೆ ಮೆಡ್ಯೋದು ಅವ್ಕೆ ಹಣ ಮಾಡ್ವ ಸಣ್ಣ ಮಟ್ಟಿನ ಒಂದ್ ಕೆಲ್ಸನೇ. ಎಷ್ಟೆಂದರೆ ಅವರಲ್ಲಿ ಹೆಣ್ಣ್ ನೋಡಿಕೆ ಬಾಕನ ಗೂಡೆನ ಹಕ್ಕಲೆ ಸೊಪ್ಪು ಸೊಯ್ದೆ, ನೇಜಿ ಕೊಯ್ಲು ಗೊತ್ತುಟ್ಟಾಂತ ಕೇಳುದ್ರೊಟ್ಟಿಗೆ ಮೊಂದ್ರಿ ಮೆಡ್ಯಕೆ ಗೊತ್ತುಟ್ಟಾಂತ ಸಾ ಕೇಳ್ವೆ. ಏನ್ ಇಲ್ಲ ಅಂದರೆ ಮೊ್ಂದ್ರಿ ಮೆಡ್ದ್ ಆದರೂ, ಅದರ ಹೊಟ್ಟೆ ತುಂಬಿಸ್ವಂತ ತಾಕತ್ತ್ ಅದಿಕೆ ಇರೋಕು. ಹಾಂಗಾಗಿ ಹುಗ್ಗವ್ವ ಗಂಡ್ ಮಕ್ಕಳಿಗೆ ಮತ್ತೆ ಹೆಣ್ಣ್ ಮಕ್ಕಳಿಗೆ ಎಲ್ಲಾ ಕೆಲ್ಸಗಳ ಕಲ್ಸಿ ಕೊಡ್ತಿತ್ತ್. ಅದಿಕ್ಕೆ ಏನೆಲ್ಲ ಕೆಲ್ಸಗಳ ಕಲ್ಸಿಕೆ, ಹೇಳಿಕೊಡಿಕೆ ಸಾಧ್ಯ ಉಟ್ಟೋ ಅದರೆಲ್ಲ ಹೇಳಿ ಕೊಟ್ಟಿತ್ತ್. "ನಮ್ಮಂಥ ಪಾಪದೊ್ವು ಎಷ್ಟ್ ಕೆಲ್ಸ ಕಲ್ತ್‌ಕೊಂಡವೆನಾ ಅಷ್ಟ್ ನಾವುಗೆ ಲಾಬ"ಂತ ಆಗಾಗ ಹೇಳ್ತಿತ್ತ್.

ಮಕ್ಕ ದುಡ್ಯಕೆ ಕಲ್ತೊ. ಸಂಪಾದನೆ ಮಾಡಿಕೆ ಕಲ್ತೊ. ನಾರು ಕಳಲನೊಟ್ಟಿಗೆ, ಮಾಚು ಹುಗ್ಗವ್ವ ಅಲ್ಲರೆ ಮಾಯ್ಲು ಒಟ್ಟಿಗೆ ಕೆಲ್ಸಕ್ಕೆ ಹೋತಿದ್ದೊ. ಜಾತ್ರೆಗೆ, ಬೂತದ ನೇಮಕ್ಕೆ, ಮೊದ್ಲ್‌ಗೆ ಹೋಕೆ ಅವ್ರಿವ್ರ ಹಕ್ಕಲೆ ಹಣ ಕೇಳುದು ಬುಟ್ಟೊ. ಕೈಲಿ ಗೇದ್ ಸಿಕ್ಕಿದ ಕಾಸ್ ಇದ್ದರೆ ಹಿಂಬೊತ್ ಬಾಕನ ಉಪ್ಪು, ಮೆಣ್ಸ್, ಬೆಲ್ಲ– ಇಂತ ಸಂತೆ ಸಾಮಾನ್‌ಗಳ ಮನೆಗೆ ತಾತಿದ್ದೊ.

ಒಂದ್ ಮದ್ಯನ ಉಂಬಕನ ಕಳಲ ದೊಡ್ಡ ಮಕ್ಕಳ ಹಕ್ಕಲೆ "ಇಂದ್ ಕತ್ತಲೆಗೆ ನಾವು ಜೇನ್ ತೆಗಿಯಕೆ ಪೋಯಿ"ಂತ ಹೇಳ್ತ್. ಮಕ್ಕ ಇಲ್ಲಿ ಮುಟ್ಟ ಮರಂದ ಜೇನ್ ತೆಗಿಯೊದರ ನೋಡಿತ್ಲೆ. ಅಪ್ಪ, ಅಣ್ಣ ಅಕ್ಕನವರ ಕರ್ಕಂಡ್ ಜೇನ್ ತೆಗಿಯಕೆ ಹೋದವೆಂತ ಕೇಳಿ ಮಿಣ್ಕಿ, ಮೋನಿನವು "ನಾವು ಸಾ ಬಂದವೆ"ಂತ ಮೊರ್ಡಿಕೆ ಸುರು ಮಾಡ್ದೊ.

ಕಳಲ ಹೇಳ್ತ್ "ನಾವು ಪೇಟೆಗಲ್ಲ; ಕಾಡಿಗೆ ಹೋದು"

"ನಾವೂ ಕಾಡಿಗೆ ಬಂದವೆ"

"ಅಲ್ಲಿ ಹುಲಿ, ಕರ್ಡಿ, ಆನೆಗ ಎಲ್ಲಾ ಒಳೊ. ಸಣ್ಣ ಮಕ್ಕಳ ಓಡ್ಸಿಕಂಡ್ ಬಂದವೆ. ನೀವು ಅಕ್ಕ ಅಣ್ಣನಷ್ಟ್ ದೊಡ್ಡದಾದ ಮೇಲೆ ನಾನೇ ನಿಮ್ಮ ಕರ್ಕಂಡ್ ಹೋನೆ"ಂತ ಹೇಳ್ತ್.

ಅಬ ಹೇಳ್ತ್ "ನಾವು ಕಾಡಿಗೆ ಬೇಡ, ಪೇಟೆಗೆ ಪೋಯಿ"ಂತ.

ಮೋನಿ "ಪೇಟೆಗೆ ಹೋದಾದರೆ ನಂಗೆ ಡಾಮರ್ ಮಿಠಾಯಿ ತೆಗ್ಸಿ ಕೊಡೊಕು"ಂತ ಹೇಳ್ತ್. ಹುಗ್ಗವ್ವ ನೆಗಾಡಿಕಂಡ್ "ಡಾಮರ್ ಮಿಠಾಯಿ ಅಲ್ಲರೆ ಸೀಮೆಂಟ್ ಮಿಠಾಯಿ ಸಾ ತೆಗ್ಸಿ ಕೊಡೊಮೊ"ಂತ ಹೇಳಿಕನ ದೊಡ್ಡೋವು ನೆಗಾಡ್ದೊ.

ಕತ್ತಲೆ ಬಿದ್ದ ಮೇಲೆ ಕಳಲ, ಮಾಚು ಮತ್ತೆ ನಾರು ಆರ್ ಗಂಟೆನ ಬಾಂಗ್ ಆಕನನೇ ಉಂಡ್, ಹೊರ್ಡಿಕೆ ಸುರು ಮಾಡ್ದೊ. ಕಳಲ ಹುಗ್ಗವ್ವನ ಹಕ್ಕಲೆ "ಂದ, ಅವ್ವ, ಈ ಮಕ್ಕಳ ಪೋಲ್ರ್ಯ ಬಟ್ಟೆಲಿ ಸುಂದಿ ಕಟ್ಟ್"ಂತ ಹೇಳ್ತ್. ಹುಗ್ಗವ್ವ ದೂರಕೆ ಕಳ್ಸಿಕೆ ಇರ್ವ ಕಟ್ಟ್‌ನ ಕಟ್ಟಿದಂಗೆ ಗಟ್ಟಿಲಿ ಬಟ್ಟೆ ಸುಂದಿ, ತಲೆಗೆ ಮುಟ್ಟಾಳೆ ಇಸಿತ್.

ಹಾಂಗೆ ಬಟ್ಟೆ ಸುಂದಿಕನ ಮಾಚು "ನಾವು ಇಷ್ಟೆಲ್ಲಾ ಬಟ್ಟೆ ಸುಂದಿಕಂಡ್ ಹೋಕಾ?"ಂತ ಕೇಳ್ತ್.

"ನೀ ಹೋಗ್, ಬಟ್ಟೆ ಸುಂದಿದ್ ಯಾಕೆಂತ ನಿಂಗೆ ಗೊತ್ತಾದೆ"ಂತ ಹೇಳ್ತ್ ಹುಗ್ಗವ್ವ.

ನಾರು ಈ ಹೊಸ ಏಸ ಹಾಕಿದ ಕುಸಿಲಿ, ನಾಟಕಲಿ ರಾಜನ ಏಸ ಹಾಕಿದವನ ಹಾಂಗೆ, ರಾಜನ ಗತ್ತ್‌ಲಿ ಸೊಂಟಕ್ಕೆ ಕೈ ಇಸಿಕಂಡ್ ಅತ್ತ ಇತ್ತ ಹೋತ್. ಕಳಲ ಚಂದ್ರ ಲೋಕಕ್ಕೆ ಹೋಗಂವನ ಹಾಂಗೆ ಕಣ್ಣ್, ಮೂಕ್ ಬುಟ್ಟ್ ಪೂರ ಮೈನ ಬಟ್ಟೆಲಿ, ಗೋಣಿಲಿ ಸುತ್ತಿಕಂಡತ್.

ಹೊರ್ಡಿಕಾಕನ ಒಂದ್ ಕಿಚ್ಚ್‌ನ ಪಟಗೆ, ಒಂದ್ ಮಡಲ್‌ನ ಕಟ್ಟ್‌ನ ಮಾಚುನ ಹಕ್ಕಲೆ ಕೊಟ್ಟತ್. ಒಂದ್ ಸುಂದಿದ ಸಪ್ರದ ಬಾಮಿ ಹಗ್ಗನ ನಾರು ಹಕ್ಕಲೆ ಕೊಟ್ಟ್‌ದ್, ಅಂವ ಒಂದ್ ಕೀಜ್‌ದ್ ಮಂಡೆ ತೆಕಂಡ್, ಅದ್ರೊಳಗೆ ಒಂದ್ ಕತ್ತಿ ಮತ್ತೆ ಚೂರಿ ಹಾಕ್ಕಂಡ್ ಹೆಗ್ಲ್ ಮೇಲೆ ಇಸಿ ಕಂಡತ್. ಬಲ ಕೈಲಿ ಒಂದ್ ಒಳ್ಳೆ ಬೆಳ್ಕ್ ಇರ್ವ ಟಾರ್ಚ್‌ನ ಹಿಡ್ಕಂಡತ್.

"ಅವ್ವ, ಬಂದವೆ"ಂತ ಹೇಳಿ ಟಾರ್ಚ್‌ನ ಹೊತ್ತಿಸಿಕಂಡ್ ಕಳಲ ಸುರುಗೆ ಹೊರ್ಟತ್. ಅವನ ಹಿಂದಂದ ಇವಿಬ್ಬರ್. ಅವ್ ಹೊರ್ಟದ್ದ್ ಅದೇ ಕುಮೆರಿ ಬೆಳೆ ಮಾಡಿದ್ದ ನೀರ್ಮಲೆ

ಕಾಡಿಗೆ. ಸುರು ಸುರು ಅಷ್ಟೊಂದ್ ಕಾಡ್ ಇಲ್ಲಾಗಿತ್ತ್. ಒಳಿಗೊಳೆಗೆ ಹೋದ ಹಾಂಗೆ ದೊಡ್ಡ ದೊಡ್ಡ ಮರಗ, ಹಾವ್ ಹರ್ದ ಹಾಂಗೆ ಸಪ್ಪದ ಓರೆಕೋರೆ, ಏರಿ ಇಳಿವ ಚರ್ಲ್‌ಕಲ್ಲ್‌ನ ದಾರಿ, ಕರ್ಗುಡಿ ಕತ್ತಲೆ! ಕತ್ತಲೆ ಗೂಡುಲಿ ಕಾಲಡಿಗೆ ಮಾತ್ರ   ಹಿಂದೆ ಮುಂದೆ ಹೋವ ಟಾರ್ಚ್‌ನ ಬೊಳ್ಪು!. ಬರಬರಾಂತ ಆವ ದರ್‌ಗ್ ಸದ್ದ್, ಕಿರ್ರೀಂತ ಕೆಬಿನೊಳಗೆ ಹುಕ್ಕುವ ಇರಿಂಟೆಗಳ ಮೊರ್ಡೆಲ್, ಅಷ್ಟಲ್ಲದೆ ಹಕ್ಕಲೆಂದ, ದೂರಂದ ಕೇಳ್ವ ಗೂಗೆನ ಗುಂಕುರು, ಹಾಳಕ್ಕಿನ ಹೆದ್ರಿಸುವ ಅಪಸ್ವರ– ಈ ಎಲ್ಲ ಸದ್ದ್‌ಗ ಒಟ್ಟು ಕಲ್ಸಿದ ಹಾಂಗಾಗಿ, ಒಂದ್ ಇಚಿತ್ರ ಸದ್ದ್ ಕೇಳಿ, ಕುಸಿಲಿ ಹೊರ್ಪ ಮಕ್ಕ ಹೆದ್ರಿ ಹೋದೊ. .

ನಾರು ಎಡದ ಹೆಗ್ಲ್ ಮೇಲಿದ್ದ ಬೊಳ್ಳಿನ ಬಲದ ಹೆಗ್ಲಿಗೆ ಹಾಕಿತ್. ಮಾಚು ಬಲದ ಕೈಲಿದ್ದ ಸಾಮಾನ್‌ಗಳ ಎಡದಕೈಲಿ ಹಿಡ್ಕಂಡತ್. ಇಬ್ಬರೂ ಸೊಂಟ ಸೊಂಟ ಹಿಡ್ಕಂಡೊ. ಹೆದ್ರಿಕೆಂದ ಅಂಟಿಕಂಡ್ ಹೋದ್ದಂಗೆ ಹೋದೊ. ಹಾಂಗೆ ಹಿಡ್ಕಂಡ್‌ದ್ರಿಂದ ಹಂಞ ದೈರ್ಯ ಆದರೂ, ಕಾಲಡಿಲಿ ಹಾವು ಗೀವು ಮನಿ ಇದ್ದರೆಂತ ಎದೆಲಿ ಪುಕುಪುಕು ಆತಿತ್ತ್. ಆ ಹೆದ್ರಿಕೆಲೇ ಅಪ್ಪನ ಮಾಚು ಕೇಳ್ತ್ "ಅಪ್ಪ, ಇನ್ನೆಷ್ಟ್ ದೂರ ಉಟ್ಟು?"

"ಆತ್ ಇಲ್ಲೇ, ಇನ್ನ್ ರಾಸಿ ದೂರ ಇಲ್ಲೆ"

ಆದರೂ ಹೊಂಡ ಗುಂಡಿನ ದಾರಿ ಮುಗ್ಯವ ಅಂದಾಜೇ ಕಾಂಬೊದ್ಲೆ. ನಡ್ದ್ ನಡ್ದ್ ಮಕ್ಕಳಿಗೆ ಬೊಚ್ಚಿ ಹೋತ್. ಉಸ್ರ್ ಮೇಲೆ ಬಂದ್ದಂಗಾಗಿ ಮೆಲ್ಲೆ ಮೆಲ್ಲೆ ಸೇಂಕಿಕೆ ಸುರು ಮಾಡ್ಡೊ. ಬೊಚ್ಚೇಲ್‌ಂತ ಆ ಕಾಡ್‌ಲಿ ಕುದ್ರುವ ಹಾಂಗೆ ಉಟ್ಟಾ? ಹಾಂಗಾಗಿ ಮೆಲ್ಲೆ ನಡ್ಕಂಡ್ ಹೋದೊ.

ಅಷ್ಟರ್ಲಿ ಕಳಲ ಒಂದ್ ಮರದಡಿಲಿ ನಿತ್ತತ್. ಮಕ್ಕ ಬಾವ ದಾರಿಗೆ ಬೊಳ್ಪು ಬುಟ್ಟ್‌ಕಂಡ್ "ಬೊಚ್ಚಿತಾ ಹೇಂಗೆ?"ಂತ ಕೇಳ್ತ್.

ಅದಿಕೆ ಮೊಗ್ಗಿ ಮಾತಾಡದೆ ನಾರು ಕೇಳ್ತ್ "ಹಾಂಗಾರೆ ಇದೇ ಮರಲಿ ಜೇನ್ ಇರುದಾ?

"ಹೌದು, ಇದೇ ಮರ"ಂತ ಅಂವ ಸಾ ಉಸ್ರು ಎಳ್ಕಂಡತ್. ಮಕ್ಕ ಅವನ ಹಕ್ಕಲೆ ಬಂದ ಮೇಲೆ ಜೇನ್ ಒಕ್ಕಲಿಗೆ ಬೊಳ್ಪು ಬುಟ್ಟ್ ತೋರ್ಸಿತ್. ಅದ್ ಒಂದ್ ಕಪ್ಪ್ ತಡ್ಪೆನ್ಸಂಗೆ ಕಂಡತ್. ಮಕ್ಕ ಇಬ್ಬರೂ ಒಟ್ಟಿಗೆ "ಅಬ್ಬಾ, ಎಷ್ಟ್ ದೊಡ್ಡಿತಲ್ಲಾ!"ಂತ ಬಾಯ್ಬುಟ್ಟೊ ಬೆರ್ಗ್‌ಲಿ.

ಮಾಚು ಕೇಳ್ತ್ "ಅಪ್ಪಾ, ನೀ ಈ ಮರ ಹತ್ತಿ ಒಕ್ಕಲ್ ಹಿಡಿಯೊದಾ?"

"ಇಲ್ಲೆ, ನಾ ಮರ ಹತ್ತುದು ಒಕ್ಕಲ್ ಹಿಡಿಯಕಲ್ಲ, ಜೇನ್ ತೆಗಿಯಕೆ"

"ಅದ್ ಅಷ್ಟ್ ಎತ್ತರಲಿ ಉಟ್ಟು, ನಿಂಗೆ ಹೆದ್ರಿಕೆ ಆದ್ಲೆನಾ?"

ಅಂವ ಸಣ್ಣಕ್ಕೆ ನೆಗಾಡಿ ಹೇಳ್ತ್ "ನಂಗೆ ಹೆದ್ರಿಕೆ ಆಗದ್ದಂಗೆ ನೀವಿಬ್ಬರ್ ಒಳರಲೇ. ಅದಕ್ಕೆ ನಿಮ್ಮಿಬ್ಬರ ಕರ್ಕಂಡ್ ಬಂದದ್ದ್."

ಮಾಚು ಕೊಂಡಾಟಂದ ಅಪ್ಪನ ಮೆಲ್ಲ ಜಿಗ್‌ಂಟಿ "ನೀ ಒಬ್ಬ"ಂತ ಹೇಳಿ ನೆಗಾಡ್ತ್. ಮನ್ಸ್‌ಲಿ "ಪಾಪ ಅಪ್ಪ ಹೇಂಗೆ ಜೇನ್ ತೆಗ್ದದೆನೋ ಏನೋ"ಂತ ಹೇಳಿಕಂಡತ್.

ಅಷ್ಟ್ ಹೊತ್ತಿಗೆ ದೂರಂದ ಎಂತದೋ ಪಟಪಟಂತ ಸದ್ದ್ ಕೇಳ್ತ್. ಅವ್ಕೆ ಹೆದ್ರಿಕೆ ಆದರೂ ಅಪ್ಪ ಹಕ್ಕಲೆ ಇತ್ತಲೇ. ಅಪ್ಪನ ಮೈಗೆ ತಾಂಗಿ ನಿಂತೊ. ಅಂವ ಮಕ್ಕಳ ತಲೆ ಪೂಜಿ "ಹೆದ್ರ್‌ಬೇಡಿ. ನಾ ಈಗ ಕಿಚ್ಚ್ ಹೊತ್ತಿಸಿನೆ"ಂತ ಹೇಳ್ತ್.

ಅಂವ ಹಗ್ಲೇ ಬಂದ್ ದರ್ಗ್, ಅಡರ್, ಒಣ್‌ಂಗೇಲ್ ಕುಂಟೆ-ಎಲ್ಲಾ ರಾಸಿ ಮಾಡಿ ಹೋಗಿತ್ತ್. ಕಿಚ್ಚ್‌ನ ಪೆಟಗೆ ತೆಕಂಡ್ ಕಡ್ಡಿ ಗೀರಿ ತೆಂಗಿನ ಮಡಲಿಗೆ ಕಿಚ್ಚ್ ಹಿಡ್ಸಿ ಮತ್ತೆ ಅಂವ ಕೂಡ್ಸಿ ಇಸಿದ ಆ ರಾಸಿಗೆ ಒಂದ್ ಕರೆಂದ ಕಿಚ್ಚ್ ಹಿಡ್ಸಿತ್. ಅತ್ತ ಕಿಚ್ಚ್ ಹಿಡ್ಯಕನ ಇತ್ತ ಕೀಜ್‌ದ್ದ್ ಮಂಡೆಗೆ ಉರ್ಲ್ ಹಾಕಿ ಕಟ್ಟಿತ್. ಕಿಚ್ಚ್ ಹಿಡ್ಕಂಡ್ ಹೋದ ಹಾಂಗೆ ಹೊಗೆ ಹೊರ್ಟತ್. ಹೊಗೆಗೋ ಒಂದ್ ಕಮ್ಮ್ ವಾಸನೆ! ಕಿಚ್ಚ್‌ನ ಬೊಳ್ಪು ಕತ್ತಲೆನ ದೂರ ಮಾಡ್ತ್. ಹೊಗೆ ಮೇಲೆ ಎತ್ತುದೇ ತಡ ಒಮ್ಮೆಗೆ "ಗೊಯೋಂ"ಂತ ವಿಮಾನ ಹಾರಿಕಂಡ್ ಹೋದ್ಹಂಗೆ ಸದ್ದ್!

ಮಾಚುಗೆ ಸಣ್ಣಂದರ್ಲಿ ಅದ್ ಕೋಲ್ಜೇನ್ ತೆಗಿಯಕೆ ಹೋದ ನೆಂಪಾತ್. ಅವರ ದಟಿಗೆ ಹಕ್ಕಲೆನೇ ಒಂದ್ ಚಕ್ಕೆ ಗಿಡಲಿ ಕೋಲ್ಜೇನ್ ಇತ್ತ್. ಅದರ ಜೇನ್ ತೆಗ್ದ್ ಅಪ್ಪಂದ ಶಬಾಸ್ ಪಡ್ಯೊಕುಂತ, ಇದ್ ನೆಳಗ ಇದ್ದ ಹಾಂಗೆ, ಕೈಲಿ ಹಿಡಿವಷ್ಟಿದ್ದ ಅದರ ಎರಿಗೆ ಕೈ ಹಾಕಿ ಎಳ್ತ್. ನೆಳಗ ಸುಮ್ಮನೆ ಇದ್ದವನಾ? ಸಮಕ್ಕೆ ಕಚ್ಚಿದೊ. ಬೇನೆಗೆ ಮೊರ್ರ್ಟಕಂಡ್ ಬಾತ್. ಹುಗ್ಗವ್ವ ನೋಡಿ "ಅಯ್ಯೋ ಮಗಾ, ಜೆನ್ನೆಳಗಳ ಕಿಚ್ಚ್ ಹಿಡ್ದ್ ಓಡ್ಸಿ, ಮತ್ತೆ ಎರಿ ತೆಗ್ಯೊಕು"ಂತ ಹೇಳಿ, ಕಂತಿದ ಮುಳ್ಳ್ ತೆಗ್ದ್ ಮೊದ್ದ್ ಮುಟ್ಟಿಸಿದ್ದ್ ನೆಂಪಾತ್.

ಕಳಲ ಹೇಳ್ತ್ "ಅದ್ ಜೇನ್ನೆಳದ್ದ್ ಸದ್ದ್. ಹೊಗೆ ತಡಿಯಕಾಗದೆ ಅವು ಹಾರ್ರೊ. ಅವು ತಿರ್ಗಿ ಬಂದ್ ಕುದ್ರಿಕೆ ಮುಂದೆ ನಂಗೆ ಜೇನ್ ಎರಿ ಕುಯ್ದ್ ಆಕು. ಮಾಚು, ಈ ಹಂಡೆನ ನಾ ಮರಕ್ಕೆ ಹತ್ತಿ, ಮ್ಯಾಲೆ ಎಳ್ಕಂಡನೆ. ಜೇನ್ ಎರಿ ಕುಯ್ದ್ ಇದರ್ಲಿ ತುಂಬುಸಿ, ಕೆಳಗೆ ಬುಟ್ಟನೆ. ಕೆಳಗೆ ಬಾಕನ ನೀ ಮಂಡೆನ ಜಾಗರ್ತೆಲಿ ಹಿಡ್ದ್ ನೆಲಲಿ ಇಸ್. ಈಗ ನಾ ಮರಕ್ಕೆ ಹತ್ತಿಕನ ಬೊಳ್ಪು ಬುಡು, ಆತಾ"ಂತ ಹೇಳಿ, ಮರಕ್ಕೆ ಮೂರ್ ಸುತ್ತು ಬಂದ್, ಏನೋ ಹೇಳಿಕಂಡ್ ಅಡ್ಡಬಿದ್ದ್ ಮರಕ್ಕೆ ಸರಸರಂತ ಹತ್ತಿಕೆ ಸುರು ಮಾಡ್ತ್. ಮಾಚು ಬೊಳ್ಪು ಬುಟ್ಟ್‌ಕಂಡ್ ಅಪ್ಪನ ನೋಡಿಕಂಡಿತ್ತ್. ನಾರುಗೆ ಒಂದ್ ಕಡೆಂದ ಹೆದ್ರಿಕೆ. ಇನ್ನೊಂದು ಕಡೆಂದ ಅಪ್ಪ ಜೇನ್ ತೆಗ್ಯೊದು ಹೇಂಗೆಂತ ನೋಡೊಕುಂತ ಕುತೂಹಲ. ಅಂವ ಕಣ್ಣ್ ಬಾಯಿ ಎರ್ಡೂ ಬುಟ್ಟ್‌ಕಂಡ್ ನೋಡ್ತಿತ್ತ್.

ಕಳಲ ಮೈ ಕಾಣದ ಹಾಂಗೆ ಬಟ್ಟೆಂದ ಪೂರ ಮುಚ್ಚಿಕಂಡಿತ್ತ್. ಕಣ್ಣ್ ಬಾಯಿ ಮಾತ್ರ ಬುಟ್ಟ್‌ದ್ ಮೋರೆನ ಮುಚ್ಚಿಕಂಡಿತ್ತ್. ಸೊಂಟಲೊಂದು ನೇಲುವ ಬೊಳ್ಳಿ. ಆ ಕತ್ತಲೆಲಿ ಅಂವ ಒಂದ್ ಮಂಗನ ಹಾಂಗೆ ಕಾಂಬೊ‌ತಿತ್ತ್. ಮರ ಹತ್ತುದರ್ಲಿ ಸಾ ಅಂವ ಮಂಗನೇ. ಮರಕ್ಕೆ ಕತ್ತಿನ ಕೊಡ್ಪಿಕಂಡ್, ಮರದ ಚೆಕ್ಕೆ ರಟ್ಟ್‌ಸಿ, ಅದರ್ಲೇ ಹೆಜ್ಜೆ ಇಸಿಕಂಡ್, ಕೊಡ್ಪಿದ ಕತ್ತಿನ ಹಿಡ್ಕಂಡ್, ಜೇನ್‌ನ ಎರಿ ಇದ್ದಲ್ಲಿಗೆ ಎತ್ತಿತ್.

ಅವನ ಹಕ್ಕಲೆ ಸೊಂಟಲಿ ಸೆಕ್ಕಿಸಿಕಂಡ್, ಮಡಲ್ನ ಎರ್ಡ್ ಗರಿ, ಒಂದ್ ಕಿಚ್ಚ್‌ನ ಪೆಟಗೆ ಇತ್ತ್. ಅವಂಗೆ ಸಾ ಹೊಗೆಗೆ ಉಸ್ರು ಕಟ್ಟಿದ ಹಾಂಗೆ ಆಗಿರ್ದು. ಜೇನೆರಿಯ ಅಡಿಂದ ಕಿಚ್ಚ್ ಹಿಡ್ತ್.

ಆದರೆ ಅದ್ ಹೊಗೆಗೆ ಅಲ್ಲೇ ಕೆಟ್ಟ್ ಹೋತ್. ಮತ್ತೆ ಅಂವ ಅತ್ತ ಇತ್ತ ನೋಡ್ತ್‌ಲ್ಲೆ. ಬೇಗ ಬೇಗ ಮಂಡೆನ ಎಳ್ಕಂಡ್, ಒಂದ್ ಗೆಲ್ಲಿಗೆ ಅದರ ಕಟ್ಟಿ, ಚಕಚಕಂತ ಎರಿಗಳ ಕೊಯ್ದು ಮಂಡೆಗೆ ತುಂಬುಸಿ "ಹಾಂ, ಇಳ್ಸಿನೆ ಹಿಡ್ಕ"ಂತ ಹೇಳ್ತ್. ಮಾಚು ಟಾರ್ಚ್‌ನ ತಮ್ಮನ ಕೈಗೆ

ಕೊಟ್ಟ್, ಮಂಡೆ ಹಿಡ್ಕಂಬಕೆ ಕೈ ಒಡ್ಡಿ ನಿತ್ತತ್. ಮಂಡೆ ಕೆಳಗೆ ಬಾಕನ ಹಿಡ್ದ್ ನೆಲಲಿ ಇಸಿತ್. ಅದರ ಬೊ಼್ಳಿ ಬಿಚ್ಚೊಕಾದರೆ ಅಂಬೆರ್ಪು ಅಂಬೆರ್ಪುಲಿ ಕಳಲ ಇಳ್ದ್ ಬುಟ್ಟಿತೇ. ಅವನ ಸೊಂಟದ ಬೊ಼್ಳಿನ ಮಾಚುನ ಹಕ್ಕಲೆ ಕೊಟ್ಟ್, ಕತ್ತಿನ ಮಂಡೆ ಒಳಗೆ ಹಾಕಿ "ಎಂತ ಬಾಕಿ ಆತ್ಲಲೇ"ಂತ ಹೇಳಿ, "ಪೋಯಿ, ಪೋಯಿ"ಂತ ಅಂಬೆರ್ಪು ಮಾಡಿಕಂಡ್, ಮಂಡೆನ ತಲೆ ಮೇಲೆ ಇಸಿಕಂಡ್, ಹೊರ್ಟೇ ಬುಟ್ಟತ್. ಬಾಕನ ಹಿಡ್ಕಂಡದರ ಇವು ಹಿಡ್ಕಂಡೊ. ಅಂವ ಬೇಗ ಬೇಗ ಹೆಜ್ಜೆ ಇಸಿಕಂಡ್ ಹೋದರ ನೋಡಿ ಮಕ್ಕ ಕಕ್ಕಾಬಿಕ್ಕಿ ಆಕ್ಕಂಡ್, ಅವನ ಹಿಂದೆಂದಳೇ ಆದಷ್ಟ್ ಜೋರ್ಲಿ ಹೆಜ್ಜೆ ಹಾಕಿದೊ!

ಮಕ್ಕಳಿಗೆ ಅವನ ಹಕ್ಕಲೆ ಏನೆಲ್ಲ ಕೇಳೋಕುಂತ ಇತ್ತ್! ಅವನ ಅಮಸರ ನೋಡಿ ಇವು ಚುಪ್! ಸುಮಾರ್ ಒಂದ್ ಮೈಲಷ್ಟ್ ಹೋದ ಮೇಲೆ ಅಂವ ಒಂದ್ ತಟ್ಟ್ ಜಾಗೆಲಿ ಇವರ ಕಾದ್ ನಿತ್ತತ್. ಮಕ್ಕ ಹಕ್ಕಲೆ ಬಂದ ಮೇಲೆ "ಈ ದೊಡ್ಡ ಜೇನ್ನೆಳ ನಾಲ್ಕ್ ಕಚ್ಚಿರೂ ಸಾಕ್, ಮೊಯಿಂಸ ಸತ್ತೇ ಹೋದೆ"ಂತ ಹೇಳ್ತ್. ಬೊ಼ಚ್ಚೇಲ್‌ಲಿ ಇವರ ಉಮೇದ್ ಸತ್ತ್ ಹೋಗಿತ್ತ್. ಅಪ್ಪನ ಮಾತಿಗೆ ಮಾಚು "ಹೌದಾ"ಂತ ಹೇಳ್ತ್. ನಾರು ಮಾತಾಡ್ತ್‌ಲೆ. ಆ ಮೇಲೆ ಸದ್ದು ಸುದ್ದಿ ಇಲ್ಲದೆ ದಟಿಗೆಗೆ ಬಂದೊ. ದಟಿಗೆಗೆ ಎತ್ತಿಕನ ಹೊತ್ತ್ ನಡಿರ್ಲ್! ಮಕ್ಕಳಿಗೆ ಒಮ್ಮೆ ಮಲ್ಗಿರೆ ಸಾಕ್‌ಂತ ಆಗಿತ್ತ್. ಮಕ್ಕ ಕೈ ಕಾಲ್ ತೊಳ್ಕಂಡ್ ಬಾಕನ ಕಳಲ ಎರಿಂದ ಅರ್ದ ಜೇನ್‌ನ, ಎರ್ಡ್ ಮಿಳ್ಳಿಗೆ ಹಾಕಿ ಮಕ್ಕಳಿಗೆ ತಿಂಬಕೆ ಕೊಟ್ಟತ್. ಅದರ ಅವು ತಿಂದನೋ ಬುಟ್ಟೊನೋ, ಬುಡ್ಸಿ ಇಸಿದ್ದ ಮೊ಼ಂದ್ರಿ ಮುಟ್ಟುದೇ ತಡ, ನಿದ್ದೆ ಅಂಟಿಕೊ಼ಂಡತ್. ಕನ್ಸ್‌ಲಿ ಸಾನ್ ಆ ಕತ್ತಲೆ, ಆ ಕಾಡ್, ಆ ಕಿಚ್ಚಿ, ಆ ಜೇನ್ನೆಳಗ ಹಾರುದು-ಕಣ್ಣೆದ್ರ್ ಕಾಂಬೊ಼ತಿತ್ತ್, ಅದರ್ನೇ ಕನವರ್ಸಿಕಂಡಿದ್ದೊ.

ದನಿನ ಹಕ್ಕಲೆ ಹಿಂದನ ದಿನನೇ, ಮೊ಼ರ್ದಿನ ಬಾಕನ ಹೊತ್ತಾದುಂತ ಕಳಲ ಹೇಳಿತ್ತ್. ಮೊ಼ರ್ದಿನ ಬೆಳ್ಜರ್ ಬೆಳ್ಜರ್ ಆಕನನೇ ಎದ್ದ್, ಜೇನ್ನೆರಿನ ಚೂರಿಲಿ ತುಂಡು ಮಾಡಿ, ಬೇರೊಂದು ಪಾತ್ರೆಗೆ ಬಾಳೆಲೆ ಹಾಕಿ ಅದರ ಮೇಲೆ ಎರಿಗಳ ಇಸಿದ್, ಮಾರಿಕೆ ತೆಕಂಡ್ ಹೋತ್. ಇಂತ ಎರಿ ಜೇನಿಗೆ ಗಿರಾಕಿ ಹೆಚ್ಚ. ಅಯ್ಯನವು ಸಾ ಹಿಂದೆ ಮುಂದೆ ನೋಡದೆ ತೆಕಂಡವೆ, ಎರಿ ಜೇನಾದರೆ ಇನ್ನೂ ಬೇಕೂಂತ ಹೇಳೋವೇ. ಅಂವನ ಜೋಬು ಝುಣಝುಣ ಆತ್. ದನಿಗಳ ಮನೆಗೆ ಎರಿ ಜೇನೇ ಕೊಟ್ಟತ್. ಅವರ ಮಗ "ನೀ ಜೇನ್ ಹೇಂಗೆ ತೆಗ್ದ? ನಿನ್ನೊಟ್ಟಿಗೆ ಯಾರೆಲ್ಲ ಬಂದಿದ್ದೊ?"ಂತ ಎಲ್ಲ ಕೇಳಿ, ಕಡೆಗೆ "ಇನ್ನೊಮ್ಮೆ ಜೇನ್ ತೆಗಿಯಕೆ ಹೋಕನ ನಾನೂ ಬನ್ನೆ, ನನ್ನ ಸಾ ಕರ್ಕೊಂಡ್ ಹೋಕು ಆತಾ"ಂತ ಹೇಳ್ತ್. ಅಂವ ಸಣ್ಣದಾಗಿ ನೆಗಾಡ್ತ್. ಮತ್ತೆ "ಆತ್"ಂತ ಹೇಳ್ತ್.

ಗೌಡ್ತಿ ಜೇನ್ನೆರಿ ನೋಡಿ ಕುಸಿಲಿ "ಇದ್ದರೆ ಇನ್ನ್ ಒಸಿ ತಂಬ, ದುಡ್ಡೊ, ಅಕ್ಕಿನೋ, ಕಾಯೋ, ಎಂತ ಬೇಕೋ ಅದರ ಕೊಟ್ಟನೆ"ಂತ ಹೇಳ್ದೊ. ಅಂದ್‌ನ ಕೆಲ್ಸ ಮುಗ್ಸಿ ಪೇಟೆಗೆ ಹೋದಂವ ಮನೆವ್ಕೆ ಎಲ್ಲವ್ಕೂ ಬಟ್ಟೆ ತೆಕಂಡತ್. ಅದ್ರೊಟ್ಟಿಗೆ ಮಕ್ಕಳಿಗೆ ತಿಂಡಿ, ಬಾಳೆಮಕ್ಕಿ ಗದ್ದೆ ಹಕ್ಕಲೆ ಮಾರಿಕಂಡಿದ್ದ ಬಂಗುಡೆ ಮೀನ್ ತೆಕ್ಕಂಡ್ ದಟಿಗೆಗೆ ಬಾತ್. ❐

ಹಾಳೆ 7
ಮಿಣ್ಕೆ ಸಾಲೆಗೆ ಹೋಗಲಿ.

ಬೇಸ ತಿಂಗಳ್ಲಿ, ಇಡ್ಡೆ ಮಾಸ್ಟ್ರ ಕಳಲನ ಮನೆಗೆ ಬಾಕೆ ಹೇಳಿದ್ದೊ- ಮಳ್ಗಾಲಕ್ಕೆ ಬೇಕಾದ ಸೊಯ್ಪೆ, ಕೊತ್ತಳಿಕೆ, ತೆಂಗಿನ ಮಡಲ್ ಇಂತದರ ಒತ್ತರ ಮಾಡಿ ಇಸಿಕೆ ಬರೋಕುಂತ. "ಆದು"ಂತ ಒಪ್ಪಿಕಂಡ್, ಹಾಂಗೆ ಪುರ್ಸೊತ್ ಆದ ದಿನ ಅಲ್ಲಿಗೆ ಕೆಲ್ಸಕ್ಕೆ ಹೋಗಿತ್ತ್. ಹಿಂಬೊತ್ ಕೆಲ್ಸದ ಕೂಲಿ ಹಣ ಕೊಡಿಕಾಕನ ಅವನ ಮೆತ್ತಗೆ ಮಾತ್ಲೇ ಬೊಯ್ದ್ "ಅಲ್ಲಯಾ ಕಳಲ, ನಿಂಗೆ ಎಷ್ಟ್ ಸಲ ಹೇಳ್ದೆ, ಮಕ್ಕಳ ಶಾಲೆಗೆ ಕಳ್ಸ್‌ಂತ. ಏನ್, ಅವರ ಶಾಲೆಗೆ ಕಳ್ಸುವ ಅಂದಾಜ್ ಉಟ್ಟಾ ಅಲ್ಲಾ ಕಾಡ್‌ಲಿ ತಿರ್ಗಿಕೆ ಬುಟ್ಯನಾ?".

ಕಳಲ ತಗ್ಗಿದ ಸೊರಲಿ "ಯಾರ್ ನಾ ಹೋನೆಂತ ಹೊರ್ಟವೆ ಅವರ ಕಳ್ಸಿನೆ"ಂತ ಹೇಳ್ತ್.

ಮಾಸ್ಟ್ರ ಹೇಳ್ದೊ "ಹಾಂಗೆ ಹೇಳ್ರೆ ಯಾರೂ ಹೊರ್ಡಿಕಿಲ್ಲೆ. ನೀ "ಇಷ್ಟರ ವರೆಗೆ ನಾವ್ಯಾರ್ ವಿದ್ಯೆ ಕಲ್ತತ್ಲೆ. ನಮ್ಮನ್ನ್ ಯಾರ್ ಸಾ ವಿದ್ಯೆ ಕಲ್ಯೆನಿಂತ ಹೇಳ್‌ತ್ಲೆ. ನಾವು ವಿದ್ಯೆ ಕಲ್ಯಕಾಗದ್‌ಂತನೇ ಎಲ್ಲೊವ್ಕೆ ಇತ್ತ್. ಈಗ ಮಾಸ್ಟ್ರಗ "ಬನ್ನಿ, ನಿಮ್ಮ ಮಕ್ಕಳ ಶಾಲೆಗೆ ಕಳ್ಸಿ"ಂತ ಹೇಳ್ವೆ ಅವು ನಮ್ಮ ಒಳ್ಳದಕ್ಕೆ ಹೇಳ್ದು. ಹಾಂಗಾಗಿ ನಿಮ್ಮಲ್ಲಿ ಒಬ್ಬಾದರ್ ಶಾಲೆಗೆ ಹೋಗಿ"ಂತ ಹೇಳೋಕು. ಅದ್ ಬುಟ್ಟ್ "ಹೋದರೆ ಹೋಗಿ"ಂತ ಹೇಳ್ರೆ ಯಾರ್ ಸಾ ಹೊರ್ಡಿಕಿಲ್ಲೆ. ಗೊತ್ತಾತಾ?"ಂತ ಹೇಳಿ ಕೊಟ್ಟೊ.

"ಆದು, ಇಡ್ಡೆ, ನಾ ಹೀಂಗೆ ಹೇಳಿ ಒಬ್ಬನಾದರೂ ಸಾಲೆಗೆ ಕಳ್ಸಿನೆ"ಂತ ಒಪ್ಪಿಕಂಡತ್.

"ಕಾರ್ತಿಂಗ ಹಿಡ್ಯಕೆ ಮುಂದೆನೇ ಬರೋಕು. ಬರಿಯಕೆ ಸ್ಲೇಟ್ ಕಡ್ಡಿ ಎಲ್ಲಾ ನಾನೇ ಕೊಟ್ಟನೆ. ಮತ್ತೆ ಶಾಲೆಗೆ ಬಾಕನ ಹರ್ದ ಬಟ್ಟೆನೇ ಆದರೂ ಪೊರ್ಲ್ ಒಗ್ದ್ ಮನಾರ ಮಾಡಿಕಂಡ್, ಹಾಕಿಕಂಡ್ ಬರೋಕು. ದಿನಾ ಹಲ್ಲುಜ್ಜಿ, ಮೀದ್ ಬರೋಕು. ಒಟ್ಟುಲಿ ಮೈ, ಬಟ್ಟೆ ಎಲ್ಲ ಮನಾರ ಇರೋಕು"ಂತ ಎಚ್ಚರ ಹೇಳ್ದೊ.

"ಆತ್ ಇಡ್ಡೆ. ಹಾಂಗೆ ಕಳ್ಸಿನೆ"ಂತ ಹೇಳಿ ಕೂಲಿ ತೆಕಂಡ್ ಹೊರ್ಟತ್.

ಕತ್ತಲೆ ಉಂಬಕನ ಇದರ ಹೇಳ್ತ್. ಅಂದೊಮ್ಮೆ ಮಾತಾಡ್ದ ಹಾಂಗೆ ಮಿಣ್ಕಿನ ಸಾಲೆಗೆ ಕಳ್ಸುದುಂತ ಆತ್. ಮಾಚು, ನಾರು ಈಗ ಸಾ ನಾವು ಹೋದ್ಲೆಂತನೇ ಹೇಳ್ದೊ. ಅಕೇರಿದ್ದ್ ಮೋನಿ. ಅದಕ್ಕೆ ಈಗ ನಾಲ್ಕ್ ವೊರ್ಸ ನಡೀತಾ ಉಟ್ಟಷ್ಟೆ.

ಕಳಲನ ನಾಕ್ ಮಕ್ಕಳಲ್ಲಿ ಮಿಣ್ಕೆನೇ ಹೆಚ್ಚ್ ಚುರ್ಕದ್ದ್. ನೋಡಿಕೆ ಸಾ ಲಕ್ಷಣದ ಗೂಡೆ. ಅದಿಕೆ ಅಂದಾಜ್ ಏಳೆಂಟ್ ವೊರ್ಸ ಪ್ರಾಯ ಆಗಿರ್ದು. ಮಿಣ್ಕೆ ಸಾಲೆಗೆ ಹೋದೂಂತ ಖಂಡಿತ ಆದದರ ಕೇಳಿ ಹುಗ್ಗವ್ವ ಹೇಳ್ತ್ "ಸಾಲೆಗೆ ಹೋದಾದರೆ ಮಿಣ್ಕೆಗೊಂದು ಹೊಸ ಲಂಗ ತರೋಕು"ಂತ.

"ಹೌದ್, ತನ್ನೆ"

ಅಮಾಸೆ ಕಳ್ದ್ ಶಾಲೆಗೆ ಹೋದೂಂತ ಆತ್. ಕಳಲ ಹೇಳ್ತ್ "ಒಳ್ಳೆ ಸೋಕುಲೆ ಹೋಕು." ಆಗ ಮಾಚು "ಅದೇ ಮತ್ತೆ. ಬೆಳ್ಜಾತಿ ಮಕ್ಕಳ ನೊಡುಲಿ ನಾವೂ ಅವರ ಹಾಂಗೆ ಇರೋಕು.

ಸಾಬೂನು ತಾ. ಹಳ್ಳಕ್ಕೆ ಹೋಗಿ ಸಾಬೂನು ಹಾಕಿ ಮೀದದರ್ಲಿ ಮಿಣ್ಕಿ ಲಕಲಕ ಕಾಣೋಕು"ಂತ ಹೇಳಿ ಬಾಯಿಗೆ ಕೈ ಅಡ್ಡ ಹಿಡ್ದ್ ನೆಗಾಡ್ತ್.

ಅಂದ್ ಹಳ್ಳಕ್ಕೆ ಹೋಕನ ಮಾಚು ಸೀಗೆ ಹೊಡಿ ತೆಕಂಡ್ ಹೋತ್. ಮಿಣ್ಕಿನ ತಲೆ ಮೈ ಎಲ್ಲ ಪೊರ್ಲು ತಿಕ್ಕಿ ಮೀಸಿತ್. ಮನೆಗೆ ಬಂದೊ. ಮಿಣ್ಕಿನ ಕೂದೊಲ್ ಒಣ್‌ಂಗಿದ ಮೇಲೆ, ಅದರ ತಲೆನ ಮಾಚು ತನ್ನ ತೊಡೆ ಮೇಲೆ ಇಸಿಕಂಡ್ ಹೇನ್ ತೆಗ್ತ್, ಈಂಚಣಿಗೆಲಿ ಬಾಚಿ ಚೇರ್ ತೆಗ್ತ್. ಆ ಮೇಲೆ ಚಿಕ್ಕ್‌ಗಟ್ಟಿದ ಕೂದಲ್‌ನ ಬುಡ್ಸಿ, ಬುಡ್ಸಿ, ಮಿಣ್ಕಿನ ತಲೆಗೆ ಹಾಕಿಕೆಂತ ತಂದ ಕಾಯೆಣ್ಣೆನ ಪೊರ್ಲು ಕೂದೊಲಿಗೆ ಹಾಕಿ ಜೆಡೆ ಕಟ್ಟಿತ್. ಮಲ್ಗಿರೆ ನೆಲ ಮುಟ್ಟಿದೆ, ಕುದ್ದರೆ ಬೆನ್ನ್ ಮುಟ್ಟಿದೆಂತ ಹೇಳ್ವ ಗಾದೆನ ಹಾಂಗೆ ಇದ್ದ ಕೂದೊಲ್ ಅದರ್ದ್. ಮಿಣ್ಕಿದ್ದ್ ಗುಂಗುರು ಕೂದೊಲ್. ಜೆಡೆನೂ, ಮುಂದಲೆ ಕೂದಲುನೂ ಚಿರಿಂಟಿ ನಿಂತೊ. ಅದರ ಉರುಂಟು ಮೋರೆಗೆ ಅದ್ ಪೊರ್ಲು ಕಾಂಬತಿತ್ತ್.

ಮಿಣ್ಕಿ ಸಾಲೆಗೆ ಹೋದೆಂತ ಮಾಚು ಅದರ ಹಳೆ ಅಂಗಿ ಬಟ್ಟೆಗಳ ಹುಡ್ಕಿ ಹಳ್ಳಕ್ಕೆ ತೆಕೊಂಡ್ಹೋಗಿ ನರ್ರೋಳ್‌ಲಿ ಪೊರ್ಲು ತೊಳ್ದ್, ಒಗ್ದ್ ಒಣ್‌ಂಗಿಸಿ ತಾತ್. ಮನೆಗೆ ತಂದ್ ಸೂಜಿ ನೂಲು ತೆಕ್ಕಂಡ್ ಹರ್ದದರ ಹೊಲ್ತ್. ಯಾರೋ ಕೊಟ್ಟ ಅಂಗಿಗಳ ಮಿಣ್ಕಿನ ಅಳತೆಗೆ ಸೆರ್ರ್ಯಾಗಿ ಸಣ್ಣ ಹೊಲಿಗೆ ಹಾಕಿ ಹೊಲ್ತ್. ಇವರ ಇಂಥ ಬಟ್ಟೆಗಳ ಮುಟ್ಟುದು ಬುಡಿ, ಕಣ್ಣ್‌ಂದ ನೋಡ್ರೂ ಮೈಲಿಗೆಂತ ಅಂದ್‌ನ ದರ್ಜಿಗ ತಿಳ್ಕಂಡಿದ್ದ. ಹೊಸ ಬಟ್ಟೆಗೆ ಮೈಲಿಗೆ ಇಲ್ಲಂತ ಅದರ ಮಾತ್ರ ಹೊಲ್ದ್ ಕೊಡ್ತಿದ್ದೊ. ಅದೂ ಅಳತೆ ತೆಕಂಬ ಕ್ರಮ ಇಲ್ಲೆ. ಅಂದಾಜ್ ಅಳತೆಲಿ ಹೊಲ್ಯೊತಿದ್ದೊ. ಅಂತೂ ಮಾಚು ಹೊಲ್ದ ಲಂಗ, ಗೌನ್‌ಗಳ ಪೊರ್ಲು ಮೊಡ್ಚಿ ಮಲ್ಗಿಕನ ಬೇರೆ ಬಟ್ಟೆಲಿ ಸುಂದಿ ತಲೆ ಅಡಿಲಿ ಇಸಿ, ನೆರಿಗೆ ಹೋಗುವ ಹಾಂಗೆ ಮಾಡ್ತ್. ಅಂಗಿ ಬಟ್ಟೆ ತಯಾರಿ ಆದ ಮೇಲೆ, ಸಾಲೆಗೆ ಹೋವ ಮಕ್ಕಳ ಮನೆ ಹಕ್ಕಲೆ ಮಕ್ಕ ಬಿಸಾಡ್ದ ಸ್ಲೇಟ್ ಚೂರು, ಕಡ್ಡಿ ತುಂಡುಗಳ ಜಮಾಯ್ಸಿ ತಂದಿಸಿತ್. ಆಗಾಗ ತಂಗೆನ ಹಕ್ಕಲೆ

"ಂದ ಮಿಣ್ಕಿ, ಇಲ್ಲಿ ಮುಟ್ಟ ನಮ್ಮ ಕೂಟದೊ್‌ವು, ಈ ಊರುಲಿ ಯಾರ್ ಸಾ ಸಾಲೆಗೆ ಹೋತ್ಲೆ. ನೀ ಸಾಲೆಲೆ ಒಳ್ಳ ಕಲ್ಯೊಕು ಆತಾ? ನೀ ಸಾಲೆಗೆ ಹೋದ ಮೇಲೆ ಮನೆ ಕೆಲ್ಸ ಒಂದೂ ಮಾಡ್ಬೇಡ. ನಿನ್ನ ಪಾಲ್‌ನ ಕೆಲ್ಸ ನಾನೇ ಮಾಡ್ನೆ. ಆದರೆ ನೀ ಲಾಯ್ಕ್ ಕಲ್ಯೊಕು. ಕಳಲನ ಮಗ ಬಾರಿ ಉಸಾರ್‌ಂತ ಎಲ್ಲೊ್‌ವು ಹೇಳೋಕು."ಂತ ಕೊಂಡಾಟ ಮಾಡಿಕಂಡ್ ಹೇಳ್ತಿತ್ತ್.

ಮಿಣ್ಕಿ "ನಂಗೆ ಬೇರೆಂತ ಹೆದ್ರಿಕೆ ಇಲ್ಲೆ, ಬೆಳ್ಜಾತಿಯವ್ರ ಮಕ್ಕ ಸಾಲೆಗೆ ಬಂದೆವಲ್ಲಾ? ಅವು ಏನಾರ್ ತೊಂದರೆ ಕೊಟ್ಟರೆಂತ" ಹೇಳ್ತ್.

"ಹಾಂಗೆ ಏನಾರ್ ಆದರೆ, ಇಡ್ಡೆ ಮಾಸ್ಟ್ರ, ಚಿನ್ನಪ್ಪ ಮಾಸ್ಟ್ರ ಒಳೊ್ ಅಲ್ಲಾ? ಅವರಲ್ಲಿ ಹೇಳಕ್ಕ್"ಂತ ಸಲಹೆ ಕೊಟ್ಟತ್.

ಸಾಲೆಗೆ ಹೋಕೆ ಎರ್ಡ್ ದಿನ ಇರಿಕನ ಕಳಲ ದನಿ ಹಕ್ಕಲೆ ಹೇಳ್ತ್ "ಮಾಸ್ಟ್ರ ದನಿಗ ಮಕ್ಕಳ ಸಾಲೆಗೆ ಕಳ್ಸ್‌ಂತ ಎರ್ಡ್ ವೊ್‌ರ್ಸಂದ ಹೇಳ್ತಾ ಒಳೊ್. ಮೊನ್ನೆ ಸಿಕ್ಕಿದೊ್‌ವು ಸಾ ಯಾರಾರ್ ಒಬ್ಬನಾರ್ ಸಾಲೆಗೆ ಕಳ್ಸ್"ಂತ ಹೇಳ್ಡೊ. ಹಾಂಗೆ ಮಿಣ್ಕಿನ ಒಂದರಾರ್ ಕಳ್ಸೊಮೊಂತ. ಅದಕ್ಕೆ ಬಟ್ಟೆ, ಚೀಲಂತ ಒಸ್ಯ ಕರ್ಚಿ ಉಟ್ಟು, ಹಂಞ ಸಾಲ ಬೇಕಿತ್ತ್"ಂತ ಪೀಟಿಕೆ ಹೊಡ್ತ್.

ಸೂರಪ್ಪ ಗೌಡ್ರ ಮುಂದಲೆಲಿ ನೆರಿಗೆ ಬೀತ್. ಮನ್ಸೊಳಗೆ "ಇಂವ ನಾಲ್ಕ್ ಮನೆಗೆ ಹೋಗಿ ಕೆಲ್ಸ ಮಾಡಿ ಹೊಟ್ಟೆ ತುಂಬಿಸಂವ- ಮಗಳ ಸಾಲೆಗೆ ಕಳ್ಸುದಾ? ಕಾಲ ಎಲ್ಲಿಗೆ ಎತ್ತಿತ್‌ಂತ" ಹೇಳಿಕಂಡೊ. ಬಾಯಿಲಿ "ನೀವುಗೆ ದುಡ್ಡ್ ಬೊದ್ಕ್‌ವೊವ್ಕೆ- ಅದರ್ಲೂ ನಿಮ್ಮ ಹೆಳ್ಮಕ್ಕಳಿಗೆ ಓದು ಬರಹ ಎಂತಕೆಯಾ? ಈಗ ನನ್ನ ಹಕ್ಕಲೆ ದುಡ್ಡು ಇಲ್ಲೆ. ಮತ್ತೆ ನೋಡೊಮೊ"ಂತ ಹೇಳಿ ಒಳಗೆ ಹೋದೊ. ಹೊರಗೆ ಬಾಕನ ಅವನ ಮೂರು, ಮಾಯ್ಲುದ್ ಎರ್ಡ್ - ಒಟ್ಟು ಐದ್ ಸೇರ್ ಬತ್ತ ತಂದ್, ಚಿಂಟೆಲಿ ಅಂವ ಬುಡ್ಸಿ ಹಾಕಿದ ತೋರ್ತ್‌ಗೆ ಸುರ್ದೊ. ಮದ್ಯಕೆ ಸುರ್ದ ಬತ್ತನ ತೋರ್ತ್‌ನ ಒಂದ್ ಮೂಲೆಗೆ ಒಂದಿಸಿ ಕಟ್ಟಿ, ಹೆಗ್ಲ್ ಮೇಲೆ ಹಾಕ್ಕಂಡತ್ ಕಳಲ. ಹೊರ್ಡಿಕೆ ಬೆನ್ನ್ ತಿರ್‍ಗಿಸಿಕನ ಗೌಡ್ತಿ ಅವಂಗೆ ಕೇಳೋ ಹಾಂಗೆ "ಇವ್ಕೆ ಅದೊಂದ್ ಬಾಕಿ. ಅದರ ಓದ್ಸಿ ಅಮಲ್ದಾರ್ ಮಾಡಿಕೆ ಉಟ್ಟೊ ಏನೋ?"ಂತ ಚುಚ್ಚಿದೊ. ಅವು ಹಾಂಗೆ ಹೇಳ್ದ್ ಅವನ ಮನ್ಸಿಗೆ ಮುಳ್ಳ್‌ಲಿ ಚುಚ್ಚಿದ್ದಂಗೆ ಆತ್. ಯಾಗೊಳು "ಬನ್ನೆ"ಂತ ಹೇಳಿ ಹೊರ್ಡಂವ ಇಂದ್ ಏನ್ ಸಾ ಹೇಳದೆ ಹೊರ್‍ಟತ್.

ಅವಂಗೆ ಅವರ ದುಡ್ಡು ಇಲ್ಲರೂ ಕೂಸುನ ಸಾಲೆಗೆ ಕಳ್ಸಕ್. ಅಷ್ಟ್ ದುಡ್ಡು ಅವನ ಹಕ್ಕಲೆ ಇತ್ತ್. ಆದರೂ ದನಿಗೆ ಹೇಳದೆ ಸಾಲೆಗೆ ಕಳ್ಸಿರೆ ನಾಳೆ ಅದೊಂದ್ ದೊಡ್ಡ ತೊಪ್ಪು ಆಕೆ ಇರ್‍ದು. ದನಿಂತ ಇರಿಕನ ಹೇಳಕಲೇ. ಅಷ್ಟಕ್ಕೆ ಅಂವ ಸಾಲದ ನೆವನಲಿ ಹೇಳ್ದ್ ಅಷ್ಟೇ. ಆದರೆ ಅವ್ರ ಮನ್ಸ್ ಎಂತದ್ದ್‌ಂತ ಇಂದ್ ಅವಂಗೆ ಗೊತ್ತಾತ್. {ಮಿಣ್ಕಿನ ಅಮಲ್ದಾರ್ ಮಾಡ್ಸ್‌ವೇನೋಂತ ಚುಚ್ಚಿ ಮಾತಾಡ್ದ ಅವರ ಮಗ ಒಂದೊಂದ್ ತರ್‍ಗತಿಲಿ ಎರ್ಡೆರ್ಡ್ ವೊರ್ಸ ಕಂಜಿ ಹಾಕಿ, ಐದ್ನೇಲಿ ಸಾಲೆನೇ ಬುಟ್ಟತ್. ಮಿಣ್ಕಿ ಕಲ್ತ್‌ಕಂಡ್ ಹೋಗಿ ನರ್ಸ್ ಆತ್}

ಮೊರ್ದಿನ ಪೇಟೆಗೆ ಹೋದ ಕಳಲ, ದರ್ಜಿ ಹಕ್ಕಲೆ ಮಿಣ್ಕಿಗೆ ಒಂದ್ ಗಟ್ಟಿ ಬಟ್ಟೆದ್ದ್ ಇಡಿಲಂಗ ಮತ್ತೆ ಒಂದ್ ಚೀಲನ ಹೊಲ್ಸಿಕೆ ಕೊಟ್ಟತ್. ಎರ್ಡ್ ದಿನಲಿ ದರ್ಜಿ ಅದರ ಹೊಲ್ದ್ ಕೊಟ್ಟತ್. ಆ ಲಂಗ ಮತ್ತೆ ಚೀಲಲಿ ಇದ್ದ ಗಂಜಿ ಹೋಗಲಿಂತ ಮಾಚು ಅದರ ನೀರ್‌ಲಿ ಮುಳ್ಗಿಸಿ ಇಸಿತ್. ಹಞ್ಞ ಹೊತ್ತ್ ಬುಟ್ಟ್ ನೋಡ್ದೆ, ಅದರ ಬಣ್ಣ ಪೂರ ಬುಟ್ಟುಟ್! ಬಣ್ಣ ಪೂರ ಹೋತಲೆ ಅಂತ ಮಾಚು ಬೇಜಾರ ಮಾಡಿಕನ ಮಿಣ್ಕಿ ಹೇಳ್ತ್ "ಬಣ್ಣ ಹೋದರೆ ಏನಾತ್? ಹೊಸ ಲಂಗ ಹೊಸ ಲಂಗನೇ ಅಲ್ಲನಾ?"ಅಂತ. ಲಂಗ ಒಣ್‌ಂಗಿದ ಮೇಲೆ ಮಿಣ್ಕಿ ಅದರ ಹಾಕ್ಕಂಡ್ ನೆರೆಕರೆ ಮಕ್ಕಳಿಗೆ ತೋರ್ಸಿಕಂಡ್ "ಅಪ್ಪ ನಂಗೆ ಸಾಲೆಗೆ ಹಾಕಿಕೆಂತ ತಂದ ಹೊಸ ಲಂಗ"ಂತ ಹೇಳ್ತ್. ಸಣ್ಣ ಮಕ್ಕ ಅದರ ಮುಟ್ಟಿ ಮುಟ್ಟಿ "ಹೊಚ ಲಂಗ, ಹೊಚ ಲಂಗ"ಂತ ಕುಸಿ ಪಟ್ಟೊ, ಪಾಪ! ಅವ್ಕೆ ಸಾ ಹೊಸ ಅರ್ವೆದ್ ಆಸೆ! ಆದರೆ ಆ ಮಕ್ಕಳ ತಲೆಲಿ ಹೊಸ ಅರ್ವೆ ಹಾಕ್ವ ಬಾಗ್ಯನ ಆ ದೇವ್ರು ಬರ್ದಿರಕಲೆ! ಮಿಣ್ಕಿ ಸಾಲೆಗೆ ಹಾಕಿಕೆ ಅಪ್ಪ ಈ ಲಂಗ ತಂದದ್ದ್‌ಂತ ಹೇಳಿಕನ ಅಲ್ಲಿದ್ದ ದೊಡ್ಡವು "ಓದುದು ಬರಿಯೊದ್‌ಂತ ಹೇಳ್ವಂತದ್ದ್ ಬೆಳ್ಜಾತಿಯವರ್ದ್. ನಾವ್ ಮೀನ್ ಮಾಸ ಎಲ್ಲಾ ತಿಂಬೊವ್ಕೆ ವಿದ್ಯೆ ಬಾರದ್. ನಾವ್ ದುಡ್ದ್ ತಿಂಬಕೆ ಅಲ್ಲದೆ, ಓದ್ ಬರ ಕಲ್ಯಕೆ ಇರ್ವವು ಅಲ್ಲ"ಂತ ಮಾತಾಡಿಕಂಡೊ. ಅದರ ಕೇಳಿ ಮಿಣ್ಕಿ ಮನ್ಸ್‌ಲೇ "ನಾ ವಿದ್ಯೆ ಕಲ್ತ್ ಅದರ್ಲೇ ಬೊದ್ಕುದರ ತೋರ್ಸಿಕೊಟ್ಟನೆ"ಂತ ಹೇಳಿಕಂಡತ್. ❐

ಹಾಳೆ ಎಂಟ್
ಮಿಣ್ಕಿ ಸಾಲೆಗೆ ಹೋತ್.

ಮಿಣ್ಕಿ ಸಾಲೆಗೆ ಹೋವ ದಿನ ಬಾತ್. ಹುಗ್ಗವ್ವಂದ ಹಿಡ್ದ್ ಮಿಣ್ಕಿ ಮುಟ್ಟ ಎಲ್ಲೊವ್ರ್‌ಕೂ ಎದೆ ಒಳಗೇ ಹೇಳಿಕಾಗದ ಒಂದ್ ತರದ ಪುಕು ಪುಕು. ಅದ್ರೊಟ್ಟಿಗೆ ಒಂದ್ ಕುಸಿ. ಈಳ್ಯಡ್ಕದ ಅವರ ಕೂಟಲಿ ಇಲ್ಲಿ ಮುಟ್ಟ ಸಾಲೆಗೆ ಹೋದೊವು ಯಾರೂ ಇಲ್ಲೆ. ಇದೇ ಸುರೂಗೆ ಸಾಲೆನ ಮೆಟ್ಲ್ ಹತ್ತುದು. ಸಾಲೆಗೆ ಹೋವ ಹಿಂದನ ದಿನ ಹುಗ್ಗವ್ವ ಹೇಳಿತ್ತ್ "ನಾಳೆಂದ ಬೇಗ ಎದ್ದ್ ಸಾಲೆಗೆ ಹೋಕು. ಅಲ್ಲಿ ಹೇಳಿ ಕೊಟ್ಟದರ ಎಲ್ಲಾ ಪೊರ್ಲ್ ಕಲ್ಯೊಕು"ಂತ. ಯಾಗೋಳು ತಡ ಮಾಡಿ ಎದ್ರುವ ಮಿಣ್ಕಿ, ಮೊರ್ದ್ದಿನ ಅದರಷ್ಟಕ್ಕೇ ಬೇಗ ಎದ್ದ್ ಉಪ್ಪು ಬೆರ್ಸಿದ ಉಮಿಕರಿಲಿ ಸುಮಾರ್ ಹೊತ್ತ್ ಹಲ್ಲ್ ತಿಕ್ಕಿತ್. ಬಾಯಿ ತೊಳ್ದ್ ಮತ್ತೆ ಬರೀ ನೀರ್ಲಿ ಹಲ್ಲ್ ತಿಕ್ಕಿಕಾಕನ ಹಲ್ಲ್‌ಂದ ಪಿಳಿ ಪಿಳಿಂತ ಸದ್ದ್ ಬಾತ್. ಹಲ್ಲ್ ತಿಕ್ಕಿದ್ದ್ ಸರಿ ಆತ್‌ಂತ ಅದಕ್ಕೆ ಸಮದಾನ ಆತ್.

ಮೀನ್ ತಿಂದರೆ ಬಾಯಿ ನಾತ ಬಾದೂಂತ ಅದ್ ಒಂದ್ ವಾರಂದ ಮೀನೇ ತೀಂತ್ಲೆ. ಮಿಣ್ಕಿ ಹಲ್ಲುಜ್ಜಿದ ಮೇಲೆ, ಮಾಚು ಹಸಿ ನೀರ್‌ಲೇ ಮಿಣ್ಕಿನ ಪೊರ್ಲ್ ಮೀಸಿತ್. ಕೂದೊಲ್ ಒಣ್‌ಂಗಿದ ಮೇಲೆ ಕಾಯೆಣ್ಣೆ ಹಾಕಿ, ಪೊರ್ಲ್ ತಲೆ ಬಾಚಿ, ಒಂದ್ ಜೆಡೆ ಮಾಡಿ, ಬಾಳೆ ನಾರ್‌ಂದ ಕೊಡಿ ಕಟ್ಟಿತ್. ಮಿಣ್ಕಿನ ಉರುಂಟ್ ಮೋರೆಗೆ ಮುಂದಲೆ ಮೇಲೆ ಉಂಗುರುಂಗುರಾಗಿ ನಿಂತ ಗುಂಗುರು ಕೂದಲ್ ಕಿರೀಟ ಕಟ್ಟಿದ್ದಂಗೆ ಕಂಡತ್.

ಬೊಳ್ಪುನ ಚಾ ಕುಡ್ದ್, ಕಳಲ ಮತ್ತೆ ಮಿಣ್ಕಿ ಸಾಲೆಗೆ ಹೊರ್‍ಟೊ, ಮಿಣ್ಕಿ ಹೊಸ ಅಂಗಿ ಹಾಕಿ, ಎಡಕೈ ಮೊಡ್ಚಿ ಚೀಲನ ಸಿಕ್ಕಿಸಿಕೊಂಡತ್. ಮಾಯ್ಲು ಗೋಡೆನ ಗೂಡ್‌ಲಿ ಇದ್ದ ಮಣ್ಣ್‌ನ ಚಿಬಿಲೆಗೆ ಎಣ್ಣೆ ಹುಯ್ದ್, ಬತ್ತಿ ಇಸಿ, ಕಿಚ್ಚ್‌ನ ಕಡ್ಡಿಂದ ಬತ್ತಿ ಹೊತ್ತಿಸಿತ್. ಮಿಣ್ಕಿನ ಅಲ್ಲಿಗೆ ಕರ್ದ್ ಬೊಳ್ಪಿನೆದ್ರ್ ನಿಲ್ಸಿ, ಅದರ ಮುಂದಲೆಗೆ ಬೊಟ್ಟಿಸಿ, "ದೇವರೇ, ನಂಗೆ ಒಳ್ಳೆದ್ ಮಾಡ್, ಒಳ್ಳ ಬುದ್ದಿ ಕೊಡು, ಸಾಲೆಲಿ ಕಲ್ಸಿದರ ಕಲಿವ ಹಾಂಗೆ ಮಾಡ್"ಂತ ಕೇಳಿಕಾಂತ ಹೇಳ್ತ್. ನಿಜಾಗಿ ದೇವ್ರ್ ನನ್ನ ಎದ್ರೇ ಒಳೊ್‌ಂತನೇ ನಂಬಿಕಂಡ್, ಅವ್ವ ಹೇಳಿ ಕೊಟ್ಟದರ ಒಂದೇ ಮನ್ಸ್‌ಂದ ಬೇಡಿಕಂಡಿತ್.

ಕಳಲ ಮೊಳ್ಕಾಲ್ ಮುಟ್ಟದ ಬಿಳಿದ್ದೇ ಆಗಿದ್ದರೂ ಈಗ ಬಣ್ಣ ಮಾಸಿ ಮಣ್ಣ್ ಬಣ್ಣ ಆದ ತೋರ್ತ್‌ನ ಸೊಂಟಕ್ಕೆ ಸುತ್ತಿಕಂಡಿತ್ತ್. ಮೇಲೆ ಹೆಗ್ಲ್‌ಂದ ಒಂಚೂರ್ ಹೊರಗೆ ಕಾಂಬ ಕೈಯಿದ್ದ ಬೋಳು ಅಂಗಿನ ಹಾಕಿ, ಅವನ ಹಕ್ಕಲೆ ಇದ್ದದರ್ಲಿ ಮಡಿ ಇದ್ದ ಒಂದ್ ಬೈರಾಸ್‌ನ ಹೆಗ್ಲ್ ಮೇಲೆ ಮೊಡ್ಚಿ ಹಾಕ್ಕಂಡತ್. ಕಾಲಿ ಚೀಲಲಿ ಮಿಣ್ಕಿನ ಕಳ್ಸುದು ಹೇಂಗೆಂತ ಮಾಚು, ತಾನ್ ಹೆರ್ಕಿ ತಂದ ಕಡ್ಡಿ ತುಂಡು ಮತ್ತೆ ಸ್ಲೇಟ್ ತುಂಡುಗಳ ಅವರ ಚೀಲಕ್ಕೆ ಹಾಕಿತ್. ಸಾಲೆಗೆ ಹೊರ್ಟ್ ನಿಂತ ಮಿಣ್ಕಿನ ಎಲ್ಲೋ ಕಣ್ಣ್ ಕಾಣದ ಊರುಗೆ ಕಳ್ಸುವೆನೋಂತ ಹೇಳುವ ಹಾಂಗೆ. ಒಬ್ಬೊಬ್ಬ ಒಂದೊಂದು ಬುದ್ಧಿ ಮಾತು ಹೇಳಿಕೆ ಸುರು ಮಾಡ್ದೊ. ಅದರ ಕೇಳಿ ಹಂಞ ಹೊತ್ತು ಸುಮ್ಮನಿದ್ದ ಕಳಲ ಮತ್ತೆ ಜೋರುಲಿ "ಮಿಣ್ಕಿ ಊರು ಬುಟ್ಟು ಏನ್ ಹೋದ್ಲೆ. ಏನೆಲ್ಲ ಹೇಳಿ ಅದರ ಪೆರ್ಚಿಕಟ್ಟಿಸ್ಬೇಡಿ. ಹೇಂಗಿದ್ದರೂ ಇಂದ್ ಸಾಲೆ ಅಂದರೆ

ಏನ್, ಹೇಂಗೆಂತ ಗೊತ್ತಾದಲೇ. ಬೇಕಾರೆ ಕಳ್ಸುದು, ಬೇಡಂತೇಳ್ರೆ ಬುಡ್ಸುದು"ಂತ ಹೇಳ್ತ್. ಅಷ್ಟ್ ಹೇಳಿ ಅಂವ ಮಗಳ ಕೈ ಹಿಡ್ಕಂತ್. ನಿಜ ಅಂದರೆ ಅಂವನ ಮನ್ಸ್‌ಲೂ ಒಂದ್ ತರದ ಹೆದ್ರಿಕೆನೋ, ತಳಮಳನೋ ಆಗ್ತಾ ಇತ್ತ್. ಮಗಳ ಕೈ ಹಿಡ್ಕಂಡ ಮೇಲೆ ಅದ್ ಕಡಮೆ ಆತ್. ಅಪ್ಪ ಮಗ ಹೊರ್ಟ್ರೊ. ದಟಿಗೆಲಿ ಇದ್ದೋವೆಲ್ಲಾ ಬಾಗ್‌ಲ್ ಹಕ್ಕಲೆ ಬಂದ್ ನಿತ್ತೊ. ತಡಮೆ ದಾಟಿ ಅವರ ತಲೆ ಕಾಂಬಕನ ಮುಟ್ಟ ಅಲ್ಲೇ ಇದ್ದೊ. ಮಿಣ್ಕಿ ಮಾತ್ರ ತಡಮೆ ದಾಟಿಕನ ಹಿಂದೆ ತಿರ್ಗಿ ನೋಡ್ತ್. ಮಾಚು "ಆತ್, ಹೋಗಿ ಬಾ"ಂತ ಹೇಳ್ವ ಹಾಂಗೆ ಕೈನೊಟ್ಟಿಗೆ ತಲೆನ ಆಡ್ಸಿತ್. ಹುಗ್ಗವ್ವ ದೊಡ್ಡದೊಂದ್ ಉಸ್ರ್ ಎಳ್ದ್, ದೇವ್ರ ಎದ್ರ್ ಹೊತ್ತ್‌ಸಿ ಇಸಿದ ಬೊಳ್ಪಿನೆದ್ರ್ ನಿತ್ತ್, "ದೇವರೇ, ನನ್ನ ಕೂಸಿಗೆ ಇದ್ಯೆ ಬರ್ವ ಹಾಂಗೆ ಮಾಡಿ ಕಾಪಾಡ್"ಂತ ಕೇಳಿಕಂಡತ್. ಸೊಂತ ಪುಳ್ಳಿಗೇಂತ ಹೇಳ್ರೂ ಅದರ ಮನ್ಸ್‌ಲಿ ಅದರ ಕೂಡುಕಟ್ಟಿನ ಜನಗ ಪೂರಾ ವಿದ್ಯೆ ಕಲ್ತ್ ಮುಂದೆ ಬರಲಿಂತ ಹೇಳ್ವ ಆಸೆ ಎದೆ ಒಳಗೆ ಸಾವ್ರ ಸಾವ್ರ ಸೊರಲಿ ಮಾರ್ದನಿಸಿತ್ತ್. ಕೆಳ ಜಾತಿಲಿ ಹುಟ್ಟಿದ ಪಾಪಕ್ಕೆ ಅದ್ ಎಂತೆಂತ ನರಕನ ಅನ್ಬವಿಸಿತ್ತೋ ಏನೋ? ಪಾಪ!

ಹಿಂದೆ ಕಳಲ ಸಾಲೆನ ದೂರಂದ ನೋಡಿ ಅದೊಂದ್ ದೇಸ್ತಾನ. ನಮ್ಮಂತೋವು ಅಲ್ಲಿಗೆ ಹೋಕಾಗದ್‌ಂತ ತಿಳ್ಕಂಡಿತ್ತ್. ಅಲ್ಲಿ ಮುಟ್ಟ ಹೋದು ಇಂದೇ ಸುರು. ದಾರಿಲಿ ಹೋಕನ ಅಂವ ಮನ್ಸ್‌ಲೇ "ಇಡ್ಡೆ ಮಾಸ್ಟ್ರ ಅಲ್ಲರೆ ದನಿ ಮಾಸ್ಟ್ರ ಇರುವ್ರೋನಾ? ಇಲ್ಲಂದರೆ ಬೇರೆವು ಸೇರ್ಸಿಕೊಂಬ್ರೋನಾ? ಬೇರೆವು ಯಾರೋ? ನಂಗೆ ಬೇರೆ ಯಾರ ಗುರ್ತನೂ ಇಲ್ಲೆ. ಎಂತಾದೆನೋ ಏನೋ"ಂತ ಹೆದ್ರಿಕಂಡೇ ಹೋಕನ, ಹಿಂದೆಂದ "ಕೈಮುಡ, ಕೈಮುಡ"ಂತ ಕರ್‍ಯೊದು ಕೇಳಿ ಹಿಂದೆ ತಿರ್ಗಿ ನೋಡ್ತ್. ನೋಡ್ರೆ ಅದ್ ಮನ್ಸರ ಐತ. ಅಂವ ಸಾ ಅಂವನ ಮಂಜನ ಕೈ ಹಿಡ್ಕಂಡಿತ್ತ್. ಸದ್ಯ ನನ್ನ ಹಾಂಗೆ ಇರಾಂವ ಒಬ್ಬ ಸಿಕ್ಕಿತಲೇಂತ ಕಳಲಂಗೆ ಸಮದಾನ ಆತ್.

ಐತ ಹಕ್ಕಲೆ ಬಾಕನ "ನೀ ಸಿಕ್ಕಿದ್ದ್ ಒಳ್ಳೆದಾತ್ ಮಾರಾಯ, ಇಡ್ಡೆ ಮಾಸ್ಟ್ರ ಮತ್ತೆ ದನಿ ಮಾಸ್ಟ್ರ ಮಕ್ಕಳ ಸಾಲೆಗೆ ಸೇರ್ಸ್‌ಂತ ಸುಮಾರ್ ಸರ್ತಿ ಹೇಳಿದ್ದೊ. ಮೊನ್ನೆ ಅವರಲ್ಲಿ ಹೋಕನ ಸರಿ ಜೋರ್ ಸಾ ಮಾಡ್ದೊ. ಹಾಂಗೆ ಇದರ ಕರ್ಕಂಡ್ ನಾ ಬಂದದ್ದ್.
ಆದರೆ ಅವು ಇಂದ್ ಒಳೋನಾ ಇಲ್ಲೆನಾಂತ ಗೊತ್ತಿಲ್ಲೆ"ಂತ ಹೇಳ್ತ್.

ಅಂವನ ಮಾತ್ ಮುಗಿಯಕೆ ಮುಂದೆನೇ ಐತ "ನಾನ್ ಸಾ ಅವು ಹೇಳಿಯೇ ಬಂದದ್ದ್. ನಮ್ಮಂತೋವು ಕಲ್ಯೊಕುಂತ ಅವು ಹೇಳ್ವೆ ಅಲ್ಲಾ, ನಮ್ಮಂತೋವ್ಕೆ ಇದ್ಯೆ ಬಾದಾ? ನಮ್ಮಂತ ಕೆಳ ಜಾತಿ ಜನಗ ಸಾಲೆಗೆ ಹೋಕಾ? ನಮ್ಮವು ಕಲ್ಯೊದು ಅಂದರೆ, ಅದ್ ಆಕೆ ಹೋಕೆ ಇರ್ವ ಸಂಗತಿನಾ? ಏನೋ ಅವು ಹೇಳ್ದೊಂತ ಕರ್ಕಂಡ್ ಬಂದೋಳೆ. ಅಲ್ಲಿ ಕಲಿವ ಮೇಲ್ಜಾತಿ ಮಕ್ಕ ಇವರ ಸುಮ್ಮನೆ ಬುಡ್ವೋನಾ? ನಂಗೆ ನೆನ್ಸಿರೆ ಹೆದ್ರಿಕೆ ಆದೆ"ಂತ ಅವನ ಆತಂಕನ ಒಂದೇ ಉಸ್ರ್‌ಗೆ ಹೇಳ್ತ್.

ಕಳಲ "ಹೆದ್ರುದು ಯಾಕೆ? ನಮ್ಮ ಮಕ್ಕಳಿಗೆ ಅಲ್ಲಿ ಉಳಿಗಾಲ ಇಲ್ಲಂದರೆ ಸಾಲೆ ಬುಡ್ಸುದು. ನೀ ಏನ್ ಹೇಳ್ಯ?"ಂತ ಹೇಳ್ತ್.

"ಹ್ಞಾಂ, ಹ್ಞಾಂ, ನಾನ್ಸಾನ್ ಹಾಂಗೇ ಗೇನ ಮಾಡಿದ್ದೆ." ಮತ್ತೆ ಹಂಞ ಹೊತ್ತು ಬುಟ್ಟ್ ಹೇಳ್ತ್ "ನೋಡೊಮೊ ಏನೆಲ್ಲ ಆದೆಂತ"

ಹೀಂಗೆಲ್ಲಾ ಮಾತಾಡಿಕಂಡ್ ಬಾಕನ ಸಾಲೆ ಕಂಡತ್.

"ಮಾಸ್ಟ್ರಗ ಯಾರಾದರ್ ಒಳೋನಾಂತ ನೋಡಿಕೆ, ಹಂಞ ಹೊತ್ತು ಇಲ್ಲೇ

ಮರದಡಿಲೇ ನಿಲ್ಲೋಮೊ. ಯಾರಾದರ್ ಹೊರಗೆ ಬಾವೊ"ಂತ ಹೇಳ್ತ್ ಕಳಲ. "ಅದ್ಯೇ ಸೆರಿಂತ ಕಂಡದೆ"ಂತ ಐತ ಹೇಳ್ತ್.

ಇಬ್ಬರು ಮಕ್ಕಳೊಂದಿಗೆ ಈ ಇಬ್ಬರ್ ಅಪ್ಪಂದರ್ ಮರದಡಿಲಿ ನಿತ್ತ್ ಕಂಡ್ ಸುತ್ತ ನೋಡ್ದೊ. ಸುಮಾರ್ ಹೊತ್ತಾತ್. ನಿತ್ತವು ನಿತ್ತಲ್ಲೇ ಬಾಕಿ! ಬಾವ ಹೋವ ಜೆನಗಳ ನೋಡಿ, ಈ ನಾಲ್ವರ ತಲೆಲಿ ಏನೇನೋ ಯೋಚನೆಗ ಬಂದ್ ಹೋಗ್ತಾ ಇದ್ದೊ. ಬಾವ ಹೋವ ಜೆನಗ ಇವರ ನೋಡ್ರೂ ನೋಡದವರ ಹಾಂಗೆ, ಗುರ್ತ್ ಇದ್ದರೂ ಗುರ್ತ್ ಇಲ್ಲದವರ ಹಾಂಗೆ ಮಾಡಿಕಂಡ್ ಸೀದಾ ಹೋತಿದ್ದೊ. ಎಷ್ಟಾರ್ ಇವು ಕೆಳ ಜಾತಿಯವು, ಕೆಲ್ಸದವು, ಇಂತವರ ಹಕ್ಕಲೆ ಮಾತಾಡುದು ನಮ್ಮ ದೊಡ್ಡಸ್ತಿಕೆಗೆ ಕಮ್ಮಿಂತ ಅವರ ತಲೆಲಿ ಇದ್ದಿರ್ದು.

ನಿತ್ತ್ ನಿತ್ತ್ ಅವ್ಕೆ ಬೊಚ್ಚಿ ಹೋತ್. ಯಾರ ಹಕ್ಕಲಾದರ್ ಏನಾದರ್ ಮಾತಾಡೊಮೊ ಅಂದರೆ ಒಬ್ಬನೂ ತಿರ್‍ಗಿ ನೋಡುದಿಲ್ಲೆ. ಕಳಲಂಗೆ ಬೇಜಾರಾತ್. "ನಾವು ಸಾ ಒಳ್ಳವರ ಹಾಂಗೆ ಸಾಲೆ ಜಗ್ಲಿಲೇ ನಿಲ್ಲಕಾಗಿತ್ತೋ ಏನೋ"ಂತ ಕಳಲ ಹೇಳಿ ಮುಗ್ತಿಲ್ಲೆ, ಅಸ್ಪೊತ್ತಿಗೆ ಕೊಂಕಣಿ ಇಡ್ಡೆ ಮಾಸ್ಟ್ರು ಬಾಗ್ಲ್ ಹಕ್ಕಲೆ ಬಂದ್, ಹೊರಗೆ ಇಣ್ಕಿ ನೋಡ್ದೊ. ಇವ್ಕೆ "ಅಬ್ಬ, ಬಚಾವಾದೊ"ಂತ ಆತ್. ಅವು ಹೊರಗೆ ಯಾರ್ ಎಷ್ಟ್ ಜೆನ ಒಳೊಂತ ನೋಡಿಕೆ ಬಂದೊವೋ ಏನೋ? "ನೀವ್ಯಾಕೆ ಅಲ್ಲಿ ನಿತ್ತದ್ದ್? ಇಲ್ಲಿಗೆ ಬನ್ನಿ"ಂತ ಕರ್‍ದೊ.

ಸಾಲೆ ಜಗಲಿ ಹತ್ತಿಕೆ ಇವ್ಕೆ ಹೆದ್ರಿಕೆ.ಯಾರಾರ್ ಏನಾರ್ ಹೇಳ್ರೆಂತ. ಕಳಲ ಹೇಳ್ತ್ ಅವೇ ಕರ್‍ದದಲ್ಲನಾ ?ಪೋಯಿ." ಅಂತೂ, ಮಕ್ಕಳ ಕೈ ಹಿಡ್ಕಂಡ್ ಸಾಲೆ ಜಗಲಿ ಹತ್ತಿದೊ. ಆ ನಾಕ್ ಜೆನಕೆ ಸಾ ಒಳಗೆ ಪುಕು ಪುಕುಂತ ಆತಿತ್ತ್. ಮಾಸ್ಟ್ರಿಗೆ ಇವು ಹೆದ್ರ್ಯೊಳೊಂತ ಗೊತ್ತಾಗಿ ಹಕ್ಕಲೆ ಬಾಕನ ಹೇಳ್ದೊ "ಇಂದನಿ, ಶಾಲೆಂತ ಹೇಳ್ವ ಈ ಕಟ್ಟಡನ ಸರ್ಕಾರ ಕಟ್ಟಿಸಿದ್. ಇದ್ರೊಳಗೆ ಯಾರ್ ಬೇಕಾರ್ ಬರಕ್ಕ್. ಹೆದ್ರುವ ಅಗತ್ಯ ಇಲ್ಲೆ. ಒಳಗೆ ಬನ್ನಿ."

ಕಳಲ ಕೈ ಮುಗ್ದ್ ಹೇಳ್ತ್ " ಬೇಡ ಇಡ್ಡೆ, ನೀವು ಬರಕ್ಕ್ಂತ ಹೇಳ್ರೂ ನಾವು ಒಳಗೆ ಬಾದ್‌ಲ್ಲೆ. ಇಸ್ಟರ ವರೆಗೆ ಮಾಡದ್ದರ ಈಗ್ಯಾಕೆ ಮಾಡೊಕು? ಮಕ್ಕ ಸಾಲೆಗೆಂತಳೇ ಬಂದವು. ಅವು ಒಳಗೆ ಹೋಗಲಿ. ನಾವುಗೆ ಈಗ ನೀವು ಅರ್ಜಿ ತನ್ನಿ. ಎಬ್ಬೆಟ್ಟ್ ಒತ್ತುವೆ"ಂತ ಹೇಳ್ದಕ್ಕೆ "ಸರಿಯಪ್ಪ, ಅರ್ಜಿ ತನ್ನೆ"ಂತ ಹೇಳಿ ಒಳಗೆ ಹೋಗಿ ಎರ್ಡ್ ಕಾಗದ ತಂದೊ. ಅಲ್ಲೇ ಬಂದೊವ್ಕೆಂತ ಇಸಿದ್ದ ಒಂದ್ ಬೆಂಚಿಲಿ ಕುದ್ದು, ಇವರ ಹೆಸ್ರ್, ಇವರ ದಟಿಗೆ ಇರ್ವ ಜಾಗೆ ಹೆಸ್ರ್ ಎಲ್ಲಾ ಬರೆಯೋಕಾದದರ ಅವೇ ಬರ್‍ದ್, ಮಿಣ್ಕಿ ಹಕ್ಕಲೆ "ನಿನ್ನ ಹೆಸ್ರ್ ಹೇಂಗೆ ಕೂಸು?"ಂತ ಕೇಳ್ದೊ. ಅವು ಕೂಸುಂತ ಕರ್‍ದದರ ಕೇಳಿ ಮಿಣ್ಕಿಗೆ ಬಾರಿ ಕುಸಿ ಆತ್. ಇಲ್ಲಿ ಮುಟ್ಟ ಮೇಲ್ಜಾತಿಯ ಯಾರೂ ಅದರ ಕೂಸುಂತ ಕರ್‍ದದ್ದೇ ಇಲ್ಲೆ. "ಇವು ತುಂಬ ಒಳ್ಳವು ಇರೋಕು"ಂತ ಅದ್ ಮನ್ಸ್‌ಲೇ ನೆನ್ಸಿ, ಹಂಞ ನಾಚಿಕೆ ಮತ್ತೆ ಸೇಲೆಲಿ "ಮಿಣ್ಕಿ"ಂತ ಹೇಳ್ತ್. ಮಿಣ್ಕಿನ ಲಕ್ಷಣದ ಮೋರೆಲಿ ಕಣ್ಣ್ ನಕ್ಷತ್ರದ ಹಾಂಗೆ ಹೊಳ್ಯತಿತ್ತ್. ಅದರ ನೋಡಿ ಮಾಸ್ತ್ರ ಮನ್ಸ್‌ಲಿ ಈ ಗೂಡೆ ಮುಂದೆ ಹುಶಾರಾವುದುಂತಾಗಿ, ಪ್ರೀತಿಂದ ಅದರ ತಲೆ ಪೂಜಿ "ನಿಂಗೆ ಒಂದ್ ಒಳ್ಳ ಹೆಸ್ರ್ ಇಸೊಮೊನಾ? ಇನ್ನ್ ನೀ ಶಾಲೆಲಿ "ಮೇನಕಾ". ಈ ಹೆಸ್ರ್ ನಿಂಗೆ ಖುಷಿ ಆತಾ"ಂತ ಕೇಳ್ದಕ್ಕೆ "ಆದು"ಂತ ಹೇಳ್ವ ಹಾಂಗೆ ನೆಗಾಡಿಕಂಡ್ ತಲೆ ಆಡ್ಸಿತ್.

"ಯಾರಾದರ್ ನಿನ್ನ ಹೆಸ್ರ್ ಎಂತಂತ ಕೇಳ್ರೆ ನೀ ಎಂತ ಹೇಳಿಯಾ?"

ನಂಬಿಕೆ ಆಗದಂತದ್ದ್ ಏನೋ ಒಂದ್ ಆಗ್ತಾ ಉಟ್ಟುಂತ ಹೇಳ್ವ ಅನ್ಬವದ ಕುಸಿಲಿ, ಏನಾಗ್ತಾ ಉಟ್ಟುಂತ ಗೊತ್ತಿಲ್ಲದ ಹಾಂಗೆ ಹಂಞ ಗಟ್ಟಿ ಸೊರಲೇ "ಮೇನಕಾ"ಂತ ಹೇಳ್ತ್. ಅದ್ ಹಾಂಗೆ ಹೇಳಿದರ ಕೇಳಿ ಮಾಸ್ಟ್ರಗೆ ನೆಗೆ ಬಾತ್. ಅದರ ಬೆನ್ನ್ ತಟ್ಟಿದೊ.

ಕಳಲ ಮತ್ತೆ ಐತ ಕಣ್ಣ್ ಬಾಯಿ ಬುಟ್ಟ್‌ಕಂಡ್ ನೋಡುದರ್ಲೇ ಬಾಕಿ! ಸಾಲೆ ಅಂದರೆ ಏನೋಂತ ತಿಳ್ಕಂಡಿದ್ದ ಅವ್ಕೆ, ಸಾಲೆಲಿ ಇಸ್ಟ್ ಪ್ರೀತಿ ಉಟ್ಟಾಂತ ನೆನ್ದ್ ಅವರ ಮನ್ಸೊಳಗೆ ಇದ್ದ ಹೆದ್ರಿಕೆ ಹಾಂಗೆ ಕರ್ಗಿ ಹೋತ್. ಮಾಸ್ಟ್ರ ಮತ್ತೆ ಐತನ ಮಂಜನ ಹೆಸ್ರ ಕೇಳ್ದೊ. ಅಂವ ಬೆಪ್ಪರ ಹಾಂಗೆ ನಿತ್ತತಲ್ಲದೆ ಮಾತಾಡ್‌ತ್ಲೆ. ಐತನೇ ಬಾಬುಂತ ಹೇಳ್ತ್. ಮಾಸ್ಟ್ರ ಬಾಬುನ ಹಕ್ಕಲೆ ನಿನ್ನ ಹೆಸ್ರ ಪೊರ್ಲು ಉಟ್ಟುಂತ ಹೇಳ್ದೊ. ಅವನ ಮೋರೆಲಿ ಕಂಡೂ ಕಾಣದ ಹಾಂಗಿನ ಸಣ್ಣ ನೆಗೆ ಬಂದ್ ಮಾಸಿತ್. ಮಾಸ್ಟ್ರ ಬರಿಯೊದರ ಎಲ್ಲ ಬರ್ಕಂಡ್ ಕಳಲ ಮತ್ತೆ ಐತನ ಹೆಬ್ಬೆಟ್ಟ್ ಒತ್ತಿಸ್ಕಂಡ್, "ನೀವಿನ್ನ್ ಹೋಕ್"ಂತ ಹೇಳ್ದೊ. ಕಳಲ "ಮಕ್ಕಳ ಹಂಞ ನೋಡಿಕಣಿ ಇಡ್ಡೆ"ಂತ ಸಣ್ಣ ಸೊರಲಿ ಹೇಳ್ತ್. "ನೀವೇನ್ ಯೋಚನೆ ಮಾಡ್ಬೇಡಿ. ನಾವು ನೋಡಿಕಂಡವೆ"ಂತ ಹೇಳ್ದವು, ಆ ಎರ್ಡ್ ಮಕ್ಕಳ ಎರ್ಡ್ ಕೈಲಿ ಹಿಡ್ಕಂಡ್ ಒಳಗೆ ಹೋದೊ. ಈ ಅಪ್ಪಂದರ್ ಅವು ಕರ್ಕಂಡ್ ಹೋದರ ನೋಡಿಕಂಡ್ ಹಂಞ ಹೊತ್ತು ನಿತ್ತ್ ಮತ್ತೆ "ಪೋಯಲ್ಲಾ"ಂತ ಹೊರ್ಟ್ರೊ, ಅವ್ರ ಮನ್ಸೊಳಗೆ ನಮ್ಮ ಮುಂದೆ ತಾಕೆ ಪ್ರೇತ್ನ ಮಾಡ್ವವು ಒಳೊ. ನಾವೇ ಹೆದ್ರಿ ಹಿಂದೆ ನಿಲ್ತಾ ಒಳೋನಾಂತ ಆತ್. ಸಮಾಜಲಿ ನಾವುಗೆ ಸಾ ಎಡೆ ಉಟ್ಟುಂತ ಹೇಳ್ವ ಹೊಸ ಬೊಳ್ಪು ಅವರ ಎದೆ ತುಂಬಿತ್. ಒಮ್ಮೆಗೇ ನಿಧಿ ಸಿಕ್ಕಿದವರ್ಥಂಗೆ ಕುಸಿಲಿ ಸಾಲೆನ ಒಂದೊಂದೇ ಮೆಟ್ಲ್ ಇಳ್ದೊ.

ಮಕ್ಕಳ ಒಳಗೆ ಕರ್ಕಂಡ್ ಹೋದ ಮಾಸ್ಟ್ರ, ಆಗಳೇ ಬಂದ್ ಕುದ್ದಿದ್ದ ಬೇರೆ ಮಕ್ಕ ಇದ್ದ ಕೋಣೆಗೆ ಹೋದೊ. ಆ ಮಕ್ಕಳಿಂದ ಒಂದ್ ಮಾರಷ್ಟ್ ದೂರಲಿ ಇವರ ಕುದ್ರಿಸಿ, ಅಲ್ಲಿದ್ದ ಮಕ್ಕಳಲ್ಲಿ "ಇವಿಬ್ಬರ್ ಇಂದ್ ಬಂದ್ ಸೇರ್ದವು. ಇದರ ಹೆಸರ್ ಮೇನಕಾ. ಇವನ ಹೆಸರ್ ಬಾಬು. ನೀವೆಲ್ಲಾ ಒಟ್ಟಿಗೆ ಇವರ ಸಾ ಸೇರ್ಸಿಕಂಡ್ ಬರ್ಕಂಡ್, ಆಡಿಕಂಡ್ ಲಾಯ್ಕಲಿ ಇರೋಕು. ಯಾರ್ ಸಾ ಹಾಳ್ ಬುದ್ಧಿ ಮಾಡಿಕಾಗದ್, ಗೊತ್ತಾತಾ?"ಂತ ಹೇಳಿ ಹೋದೊ. ಆ ಕೋಣೆಲಿ ದೊಡ್ಡ್‌ವು ಸಣ್ಣವುಂತ ಸುಮಾರ್ ಹತ್ತಿಪ್ಪತ್ತ್ ಮಕ್ಕ ಇದ್ದಿರ್ದೊ, ಈ ಎರ್ಡ್ ಮಕ್ಕ ಅವರ ಚೀಲಗಳ ಗಟ್ಟಿ ಹಿಡ್ಕಂಡ್ ಗಲಿಬಿಲಿಲಿ ಅಲ್ಲಿದ್ದ ಮಕ್ಕಳ ನೋಡಿಕೊಂಡ್ ಕುದ್ದೊ. ಬಾಬು, ಮಿಣ್ಕೆ ಇಲ್ಲದೇ ಹೋಗಿದ್ದರೆ ಮೊರ್ಡ್‌ವಂವನೇ. ಮಿಣ್ಕೆಗೂ ಬಾಬು ಇದ್ದದ್ರಂದ ಒಂದ್ ದೈರ್ಯ. ಅಲ್ಲಿದ್ದ ಮಕ್ಕ ಸ್ಲೇಟ್‌ಲಿ ಬರ್ಕಂಡೋ, ಅವರಷ್ಟಕೆ ಆಡಿಕಂಡೋ, ಅತ್ತ ಇತ್ತ ನೋಡಿಕೊಂಡೋ, ಗಲಾಟೆ ಮಾಡಿಕೊಂಡೋ ಇದ್ದೊ. ಆ ಕೋಣೆನ ಗೋಡೆಲಿ ಎಂತೆಂತವೋ ಚಿತ್ರಗಳ, ಏನೇನೋ ಬರ್ದ ಕಾಗದಗಳ ಅಂಟಿಸಿದ್ದೊ. ಎರ್ಡ್ ಗೋಡೆನ ನೊಡುಲಿ ದೊಡ್ಡ ಚೌಕಕ್ಕೆ ಕಪ್ಪು ಬಣ್ಣ ಮೆತ್ತಿದ್ದೊ. ಅದರ್ಲೂ ಏನೋ ಬರ್ಕಂಡ್ ಇತ್ತ್. ಬಾಬು ಕುದ್ದಲ್ಲಿಂದ ನಿಗರಿಕಂಡ್ ಮಿಣ್ಕೆ ಹಕ್ಕಲೆ ಬಂದ್, ಅದರ ಕೆಬಿಲಿ ಹೇಳ್ವ ಹಾಂಗೆ ಅಲ್ಲಿದ್ದ ಬಿಳಿ ಹೈದನ ನೋಡಿ "ಇಂದ, ಆ ಬಿಳೀ ಹೈದ ಉಟ್ಟಲ್ಲಾ, ಅಂವ ನಮ್ಮ ಕಡೆನ ಬಟ್ರ ಮಂಜ"ಂತ ಹೇಳ್ತ್. ಮಿಣ್ಕೆ ಆ ಹೈದನ ಕಾಲಿಂದ ತಲೆಮುಟ್ಟ ನೋಡಿ ಬಾಬುನ ಹಕ್ಕಲೆ ಪಿಸುಗುಟ್ಟಿತ್ "ಬಿಳಿಬಿಳಿ ಆಗಿ ಎಷ್ಟ್ ಪೊರ್ಲುಟ್ ಉಟ್ಟಲ್ಲಾ ಅಂವ!" ಬಾಬು ಅವನ ಮೈ ನೋಡಿಕಂಡತ್. ಅಂವ ಕರಿಕುಂಟೆನ ಹಾಂಗಿತ್ತ್.

ಅಷ್ಟೊತ್ತಿಗೆ ಅವರ ದನಿ ಮಾಸ್ಟ್ರ ಬಂದೊ. ಮಕ್ಕ ಪೂರ ಮಾತಾಡುದರ ನಿಲ್ಸಿ ಎದ್ದ್ ನಿತ್ತೊ. ಬೇರೆವರ ನೋಡಿ ಇವಿಬ್ಬರೂ ಎದ್ದ್ ನಿತ್ತೊ, ಯಾಕೆಂತ ಗೊತ್ತಿಲ್ಲರೂ. ಅದೇ ಹೊತ್ತಿಗೆ ಒಂದ್ ಗೂಡೆ ಮೋರ್ಟ್‌ಕಂಡಿದ್ದ ಮೂರ್ನಾಲ್ಕ್ ವರ್ಷದ ಒಂದ್ ಕೂಸುನ ತೆತ್ತಿಕಂಡ್ ಬಾತ್. ಮೋರ್ರುವ ಆ ಕೂಸಿಗೆ ಮಾಸ್ಟ್ರ ಬಯ್ಯೊವೊಂತ ಇವು ನೆನ್ಸಿದೊ. ಆದರೆ ಅವು ಮಾತಾಡದೆ ಅಲ್ಲೇ ಇದ್ದ ಒಂದ್ ಪೆಟಗೆಂದ ಎರ್ಡ್ ಮೂರ್ ಬೊಗ್ರಿ ತೆಗ್ದ್ ಆ ಕೂಸುನ ಎದ್ರ್ ತಿರ್ಗಿಸಿದೊ. ಅದರ ನೋಡಿ ಕೂಸು ಮೋರ್ರುದರ ನಿಲ್ಸಿ, ತಿರ್ಗುವ ಬೊಗ್ರಿ ನೋಡಿ ನೆಗಾಡಿ ಅದರ ಹಿಡ್ಕಂಬಕೆ ಇಳ್ತ್. ಬೇರೆ ಮಕ್ಕ ಸಾ ಬೊಗ್ರಿ ತಿರ್ಗಿಸಿ ತೋರ್ಸಿದೊ. ಆ ಕೂಸು ಮತ್ತೆ ಅದರ್ಲಿ ಆಡಿಕಂಡ್ ಇತ್ತ್. ಮಿಣ್ಕಿಗೆ ಚೋದ್ಯ ಆತ್. "ಸಾಲೆಂದರೆ ನಾ ಎಷ್ಟ್ ಹೆದ್ರಿಕಂಡಿದ್ದೆ. ಈಗ ನೋಡ್ರೆ ಸಾಲೆ ಒಳ್ಳ ಜಾಗನೇ. ಮಾಸ್ಟ್ರ ಸಾ ಒಳ್ಳವೇ"ಂತ ಹೇಳಿಕಂಡತ್.

ಮಾಸ್ಟ್ರ ಕುದ್ದ್‌ಕಂಡ್, ಮಕ್ಕಳ ನಿಲ್ಸಿದೊ. ಮತ್ತೆ ಕುದ್ರಿಕೆ ಹೇಳ್ದೊ. ಅದೆಂತದ್ದೊ "ಸ್ಟೇಂಡ್ ಸಿಟ್ಟ್"ಂತ ಹೇಳಿಕನ ಮಕ್ಕ ನಿತ್ತ್‌ಕಣ್ತಿದ್ದೊ ಕುದ್ರುತಿದ್ದೊ. ಬೇರೆ ಮಕ್ಕ ಹೇಂಗೆ ಮಾಡ್ವೆನೋ ಇವು ಸಾ ಹಾಂಗೇ ಮಾಡ್ತಿದ್ದೊ. ಮತ್ತೆ "ನಾ ಈಗ ಹಾಜರಿ ಕರ್ದನೆ"ಂತ ಹೇಳಿ ಮಾಸ್ಟ್ರ ಒಬ್ಬೊಬ್ಬರ್ದೇ ಹೆಸರ್ ಕರ್ಯಕೆ ಸುರು ಮಾಡ್ದೊ. ಈ ಮಕ್ಕಳಿಗೆ ಹಾಜರಿಂತೇಳ್ರೆ ಎಂತಂತ ಅದರ ತಲೆ ಬುಡನೇ ಗೊತ್ತಾತ್ಲೆ. ಹೆಸ್ರ್ ಕರ್ದ ಆಕನ, ಆ ಹೆಸ್ರ್‌ನವು ಎದ್ದ್ "ಹಾಜರಿ ಸರ್"ಂತನೋ "ಇದ್ದೇನೆ ಸರ್"ಂತನೋ ಹೇಳ್ತಿದ್ದೊ. ಬಾಬು ಮಿಣ್ಕಿನ ಕೆಬಿಲಿ "ನಾವೂ ಹಾಂಗೇ ಹೇಳೋಕಲ್ಲಾ"ಂತ ಹೇಳ್ತ್. ಮಿಣ್ಕಿಗೆ ಅವನ ಮಾತಿಗಿಂತ ನನ್ನ ಕರ್ದವೇನೋಂತಾಗಿ ಅತ್ತ ಕೆಬಿ ಕೊಟ್ಟದ್ದ್ "ಹೌದ್"ಂತ ತಲೆ ಆಡಿಸ್ತ್. ಅದ್ ಮನ್ಸ್‌ಲೇ ಎರ್ಡ್ ಮೂರ್ ಸಲ "ಹಾಜಿರ್ ಸರ್, ಹಾಜಿರ್ ಸರ್"ಂತ ಅಭ್ಯಾಸ ಮಾಡಿಕಂಡತ್.

ಅಷ್ಟಾಕನ ಅದರ ಹೆಸ್ರ್‌ನೇ ಕರ್ದೊ. ಅದ್ ಕುಸಿಲಿ ಬೇರೆ ಮಕ್ಕ ಹೇಳ್ದ ಹಾಂಗೆ ರಾಗ ಎಳ್ದ್ "ಹಾಜಿರ್ ಸರ್"ಂತ ಹೇಳಿ, ಏನೋ ಸಾಹಸ ಮಾಡ್ದ ಹಾಂಗೆ ಅತ್ತಿತ್ತ ನೋಡಿ ಕುದ್ದತ್.

ಈ ಹೊಸ ಸಂಗತಿ ಈ ಎರ್ಡ್ ಮಕ್ಕಳಿಗೆ ಬಾರಿ ಕುಸಿ ಕೊಟ್ಟತ್. ಈಗ ಅವರ ಮೋರೆ ಅರ್ಳಿತ್. ಹೇಂಗೋ ಏನೋಂತ ಹೆದ್ರಿಕಂಡಿದ್ದವ್ಕೆ ಹನೀಸ್ ದೈರ್ಯ ಬಾತ್.

ಮತ್ತೆ ಮಾಸ್ಟ್ರ ಅಲ್ಲಿದ್ದ ಮಕ್ಕಳಲ್ಲಿ ದೊಡ್ಡ ಮಕ್ಕಳ ಬೇರೆ ಕುದ್ರಿಸಿದೊ. ಅವ್ಕೆ ಬೆಳಿ ಗೋಡೆನ ನೊಡುಲಿ ದೊಡ್ಡ ಸ್ಲೇಟ್‌ನ ಹಾಂಗೆ ಇದ್ದ ಕೊಪ್ಪುನ ಒಂದ್ ಬಟ್ಟೆಲಿ ಒರ್ಸಿ, ಅದರ್ಲಿ ಬಿಳಿ ಕಡ್ಡಿ ಹಾಂಗೆ ಇದ್ದದರ್ಲಿ ಏನೋ ಬರ್ದ್ "ನೀವಿದರ ಮಾಡಿಕಂಡಿರಿ"ಂತ ಹೇಳಿ, ಸಣ್ಣ ಮಕ್ಕಳ, ಇನ್ನೊಂದ್ ಮಡೆಲಿದ್ದ ಕೊಪ್ಪು ಗೋಡೆ ಹಕ್ಕಲೆ ಕುದ್ರಿಸಿ. ದೊಡ್ಡದಾಗಿ ಉರುಂಟು ತರ ಏನೋ ಬರ್ದ್ "ಅ"ಂತೇಳಿ, ಅದರ ಹೇಂಗೆ ಬರ್ಯೊಕುತ ಎರ್ಡ್ ಮೂರ್ ಸಲ ಬರ್ದ್ ತೋರ್ಸಿದೊ. ಎಂತಂತ ಗೊತ್ತಾಗದವು ಕಣ್ಣ್ ಬಾಯಿ ಬುಟ್ಟ್‌ಕಂಡ್ ಕುದ್ದ್‌ಕಂಡ್ ನೋಡ್ದೊ. ಏನ್ ಮಾಡೋಕುಂತ ಗೊತ್ತಾಗದೆ ಕುದ್ದ ಈ ಎರ್ಡ್ ಮಕ್ಕಳ ನೋಡಿ "ನಿಮ್ಮ ಹಕ್ಕಲೆ ಸ್ಲೇಟ್ ಉಟ್ಟಾ"ಂತ ಕೇಳ್ದೊ. ಇವು ಮಾತಾಡ್ತ್‌ಲೆ. ಮಾಸ್ಟ್ರ ಅಲ್ಲೇ ಇದ್ದ ಮರದ ಪೆಟಗೆಂದ ಮರದ ಪಟ್ಟಿ ಇದ್ದ ಎರ್ಡ್ ಹಳೆ ಸ್ಲೇಟ್, ಎರ್ಡ್ ಕಡ್ಡಿ ತುಂಡು ತೆಗ್ದ್ ಅವಿಬ್ಬರಿಗೆ ಕೊಟ್ಟು "ಇದರ ಜಾಗ್ರತೆಲಿ ಇಸಿಕಣಿ. ಒಡ್ಯಬೇಡಿ"ಂತ ಹೇಳಿ ಅವರ ಕೈ ಹಿಡ್ದ್, ಬಾಯಿಲಿ "ಅ"ಂತ ಹೇಳಿಸಿ, ಒಂದರೆಡ್ ಸಲ ಬರ್ದ್ ತೋರ್ಸಿದೊ.

ಅವು ಬರ್ಸಿಕೆಂತ ಬಾಬುನ ಕೈ ಹಿಡ್ಯಕನ ಬಾಬುನ ಕೈ ಸಣ್ಣಕೆ ನೊ್ಡ್ಗ್ತಿತ್. ಎರ್ಡ್ ಮೂರ್ ಸಲ ಬರ್ಸಿ, ಬರ್ದ್ ತೋರ್ಸಿ, "ಇನ್ನ್ ನೀವೇ ನಾ ಹೇಳಿ ಕೊಟ್ಟ ಹಾಂಗೆ ಬರ್ಯೆನಿ"ಂತ ಹೇಳಿ ಬೇರೆಯವ್ಕೆ ಬರ್ದ್ ಕೊಡಿಕೆ ಹೋದೊ. ಮಿಣ್ಕೆನ ಕುಸಿನ ಏನ್ಂತ ಹೇಳುದು? ದಟಿಗೆಲಿ ಹಿರ್ಯವು ಸಣ್ಣದ್ರಂದಳೇ ಹೇಳಿಕೊಡ್ತಿದ್ದ ಮಾತ್‌ಗ ಅದಿಕ್ಕೆ ನೆಂಪಾತ್. "ಮೇಲ್ಜಾತಿಯವು ಎಲ್ಲಾದ್ರ್ ಎದ್ರ್ ಸಿಕ್ಕಿರೆ ಅವರ ಕಣ್ಣಿಗೆ ಬೀಳದಷ್ಟು ದೂರ ಹೋಕು. ಅವರ ಅಲ್ಲರೆ ಅವರ ಸೊತ್ತುಗಳ ತೊ್ಪ್ಪಿ ಸಾ ಮುಟ್ಟಿಕಾಗದ್. ನಮ್ಮ ಅಲ್ಲರೆ ನಮ್ಮ ಸೊ್ತ್ತುಗಳ ಅವು ಮುಟ್ಟಿರೆ ಅವ್ಕೆ ಮೈಲಿಗೆ ಆದೆ. ಅವರ ಮಾತ್ರ ಅಲ್ಲ ಅವರ ಹಾಲುಂಬ ಕೂಸುನ ಸಾ ನಾವು ಮರ್ಯಾದೆ ಕೊಟ್ಟು ಮಾತಾಡ್ಲೋಕು. ಹೋದಲ್ಲಿ ಬಂದಲ್ಲಿ ಇದರ ನೆಂಪುಲಿ ಇಸಿಕಣಿ"ಂತ. ಆದರೆ ಇಲ್ಲಿ ಮಾಸ್ಟ್ರು ಜಾತಿನ ನೆಂಪೇ ಇಲ್ಲದ ಹಾಂಗೆ ನಮ್ಮ ಕೈ ಹಿಡ್ದ್ ಬರ್ಸ್ತಾ ಒಳೊ. ಇದ್ ಜಾತಿಂತ ಇಲ್ಲದ ಯಾವ್ದೋ ಬೇರೆ ಲೋಕ ಇರೋಕುಂತ ನೆನ್ಸಿಕಂಡ್ ಆ ಕುಸಿಲಿ ಅವು ಹೇಳಿ ಕೊಟ್ಟದರ ಹಾಂಗೇ ಬರ್ದ್ ಬರ್ದ್ ಬೇಗ ಕಲ್ತ್ ಎಲ್ಲೊ್ಲ್ವುಕ್ಕಿಂತ ಮುಂಚೆ ನಾ ತೋರ್ಸ್ಲೋಕುಂತ ಉಮೇದ್‌ಲಿ ಬರ್ತ್...ಬರ್ತ್.. ಬರ್ತ್. ಅತ್ತ ಇತ್ತ ನೋಡಿ ಎಲ್ಲೊ್ಲ್ವಿಂತ ಮುಂದೆನೇ ಬರ್ದ್ ತೋರ್ಸಿತ್ ಸಾ. ಮಾಸ್ಟ್ರ್‌ಗೆ ನಿಜಕ್ಕೆ ಸಾ ಮಿಣ್ಕೆ ಇಷ್ಟ್ ಬೇಗ ಬರ್ಯಕೆ ಕಲ್ತದರ ನೋಡಿ, ಕುಸಿ ಆತ್. ಅದರ ಬೆನ್ನ್ ತಟ್ಟಿ "ಮೇನಕಾ, ನೀ ಇಷ್ಟ್ ಬೇಗ ಬರ್ಯಕೆ ಕಲ್ತದರ ನೋಡಿ ನಂಗೆ ನಿಜಕ್ಕೆ ಸಾ ಸಂತೋಸು ಆತ್. ನೀ ಹುಶಾರ್ ಗೂಡೆ. ಬೇಗ ಕಲ್ತಿಯಾ. ಮುಂದೆಸಾ ಹೀಂಗೆ ಹುಶಾರಾಗಿ ಕಲ್ಯೊಕು ಆತಾ"ಂತ ಹೇಳಿ "ಅ"ದ ಆಕಾರ ಹೇಂಗೆ ಬರೋಕುಂತ ತಿದ್ದಿ ತೋರ್ಸಿದೊ.

ಅದಿಕ್ಕೆ ಅದ್ ಬರ್ಯಕೆ ಕಲ್ತತ್‌ಂತ ಹೇಳ್ವ ಕುಸಿಗಿಂತ ನಾ ಮಾಸ್ಟ್ರ ಮೆಚ್ಚಿಸಿದೆಂತ ಹೇಳ್ವ ಕುಸಿಲಿ ಮಾಸ್ಟ್ರ್ ಹೊಗಳಿಕನ ಇದ್ದ ಹಲ್ಲೆಲ್ಲಾ ತೋರ್ಸಿ ನೆಗಾಡ್ತ್.

ಆ ಮೇಲೆ ಮಾಸ್ಟ್ರ್ ಒಂದನೇವ್ಕೆ "ಇನ್ನ್ ನೀವು ನೀವುಗೆ ಗೊತ್ತಿದ್ದದರ ಬರ್ಯೆನಿ. ಇಲ್ಲರೆ ಚಿತ್ರ ಮಾಡಿ. ಗಲಾಟೆ ಮಾತ್ರ ಮಾಡ್ಬೇಡಿ. ದೊಡ್ಡ ಮಕ್ಕಳಿಗೆ ತೊಂದರೆ ಆದೆ"ಂತ ಹೇಳಿ ಅತ್ತ ಇದ್ದ ಮಕ್ಕಳ ಹಕ್ಕಲೆ ಹೋದೊ. ಚಿತ್ರ ಮಾಡುದು ಹೇಂಗೆಂತ ಈ ಮಕ್ಕಳಿಗೆ ಗೊತ್ತು ಬೇಕೇ? ಸ್ಲೇಟ್‌ಲಿ ಪೂರಾ ಅಡ್ಡಾದಿಡ್ಡಿ ಗೀಚಿ, ಅದರ ಹಿಡ್ಕಂಡ್ ಹೋಗಿ ಮಾಸ್ಟ್ರ್‌ಗೆ ತೋರ್ಸಿದೊ. ಅವು ಸುಣ್ಣದ ಕಡ್ಡಿಲಿ ಉದ್ದೋಕೆ ಗೆರೆ ಎಳ್ದ್ "ಇನ್ನ್ ನೀವಿತ್ತ ಬರ್ಬೇಡಿ. ನಾನೇ ಬಂದ್ ರೈಟ್ ಹಾಕಿನೆಂತ ಹೇಳಿ ಆ ಮಕ್ಕಳಿಗೆ ಪಾಟ ಮುಂದುವರ್ಸಿದೊ. ಮಿಣ್ಕೆಗೆ ಬೆರಿ ಗೆರೆ ಗೀಚಿರೆ ಚಿತ್ರ ಆದೆನೊ್‌ಂತ ಸಂಸಯ. ಹಾಂಗೆ ಬೆರಿ ಗೆರೆ ಎಳ್ದದಕ್ಕೆ ಮಾಸ್ಟ್ರ ಬೊ್ಯ್ಯಿತ್ತಿಲ್ಲೇ. ಅವು ಹೇಳ್ದ ಹಾಂಗೆ ಸರಿಂತ ಗೆರೆ ಎಳ್ದೊ ಅಲ್ಲಾ? ಪಾಪ! ಅದಿಕ್ಕೇನ್ ಗೊತ್ತು ಹೀಂಗೆ ಗೀಚಿ ಗೀಚಿಯೇ ಕೈ ತಿದ್ದುದುಂತ?

ಒಂದ್ ಗಂಟೆ ಹೊಡ್ತ್. ಮಾಸ್ಟ್ರ ಬಂದ್ ಒಂದನೆಯವ್ಕೆ ಒಂದು ಎರಡ್ ಬರ್ಯಕೆ ಕಲ್ಸಿದೊ. ಕೊ್ಪ್ಪು ಗೋಡೆಲಿ "ಒಂದ್, ಎರಡು, ಮೂರು, ನಾಲ್ಕು, ಐದ್"ಂತ ಹೇಳಿಕಂಡ್, ಮಕ್ಕಳ ಹಕ್ಕಲೆ ಸಾ ಹೇಳ್ಸಿ ಬರ್ದೊ. ಮತ್ತೆ, ಕೋಲು ತುದಿಲಿ ಆ ಒಂದೆರಡರ ತೋರ್ಸಿ ನಾಲ್ಕ್ ಸಲ ಹೇಳ್ಸಿ ನಂತರ ಮರದ ಪೆಟಗೆಂದ ಪೊಂಗಾರೆ ಬಿತ್ತ್ ತೆಗ್ದ್ ಒಂದರಿಂದ ಐದರ ಮುಟ್ಟ

ಬೇರೆ ಬೇರೆ ಇಸಿದ್, ಮಕ್ಕಳ ಕೈಯಿಂದ ಮುಟ್ಸಿಸಿ, ತಲೆಗೆ ಹುಕ್ಕುವ ಹಾಂಗೆ ಮಾಡಿ ಮತ್ತೆ ಗೋಡೆಲಿ ಬರ್ದದರ ಓದಿಸಿ, ಈ ಬಿತ್ತ್‌ಗಳ ತೋರ್ಸಿ ಮಂದಟ್ಟ್ ಮಾಡ್ಸಿದೊ. ಮಿಣ್ಕೆಗಂತೂ ಸೆರಿ ತಲೆಗೆ ಹೋತ್. ನಂತರ ಅವು ಕೊಪ್ಪು ಗೋಡೆಲಿ ಬರ್ದದರ ಬರ್ಯಕೆ ಹೇಳ್ದೊ. ಮಿಣ್ಕೆ ಅದರ ಸಾ ಬೇಗ ಕಲ್ತತ್. ಹಂಞ ಹೊತ್ತಿಗೆ ಮುಂದೆ ಅದರ ಹೊಗ್ಳಿದ್ದೊ ಅಲ್ಲಾ? ಆ ಕುಸಿ ಅದರ ತಲೆಂದ ಇಳ್ತ್‌ಲಾಗಿತ್ತ್. ಅದಿಕ್ಕೆ ಒಳ್ಳ ಮಕ್ಕ ಬರ್ದ್ ತೋರ್ಸಿಕೆ ಮುಂದೆ ನಾ ಬರ್ದ್ ತೋರ್ರ್ಲೊಸುಕುಂತ, ಎಲ್ಲೋವುಕ್ಕಿಂತ ಮುಂದೆ ಹೋಗಿ ಮಾಸ್ಟ್ರಗೆ ತೋರ್ಸಿತ್. "ಹೀಂಗೆ ಕಲ್ಯೊಕು"ಂತ ಹೇಳಿ, ಬೆನ್ನ್ ತಟ್ಟಿ, ಸುಣ್ಣದ ಕಡ್ಡಿಂದ ಉದ್ದೊಕೆ ಗೆರೆ ಎಳ್ದೊ. "ಇದರ ಹೀಂಗೇ ಇಟ್ಕಂಡ್ ರೈಟ್ ಹಾಕಿದರ ಮನೆವ್ಕೆ ತೋರ್ರ್ಲೊಸುಕುಂತ, ಜಾಗರ್ತೆಂದ ಸ್ಲೇಟ್‌ನ ಚೀಲಕೆ ತುಂಬ್ಸಿತ್. ಬಾಬು ಏನ್ನಾ ಬರಿಯದೆ ಸ್ಲೇಟ್, ಕಡ್ಡಿ ಹಿಡ್ಕಂಡ್ ಕುದ್ದಿತ್ತ್. "ನೀ ಬರಿಯೊದ್ಲೆನಾ?"ಂತ ಮಿಣ್ಕೆ ಕೇಳ್ದಕ್ಕೆ ಅಂವ ಇಲ್ಲೆಂತ ತಲೆ ಆಡ್ಸಿತ್. "ನಾ ಬೇಕಾರೆ ಹೇಳಿ ಕೊಟ್ಟನೆ"ಂತ ಹೇಳ್ತ್. ಅಂವ ಬೇಡಾಂತ ಹೇಳ್ತ್.

ಇಸ್ಪಾಗಿ ಹಂಞ ಹೊತ್ತ್‌ಲಿ ಎರ್ಡ್ ಗಂಟೆ ಹೊಡ್ದೊ. ಮಾಸ್ಟ್ರ "ಮೈ ನೀರಿಗೆ ಹೊರಗೆ ಹೋವು ಹೋಗಿ ಬನ್ನಿ"ಂತ ಹೇಳ್ದೊ. ಎಲ್ಲಾ ಮಕ್ಕ ಹೋಕನ ಇವು ಸಾ ಹೋದೊ. ಇವು ಬೇರೆವರ ಒಟ್ಟಿಗೆ ಹೋಗದೆ ಬೇರೆನೇ ಹೋದೊ. ಅಷ್ಟ್ ದೂರಲಿದ್ದರೂ ಒಂದ್ ದೊಡ್ಡ ಗೂಡೆ ಮಿಣ್ಕೆನ ನೋಡಿ ಗಟ್ಟಿ ಸೊರಲಿ "ಏಯ್, ನೀ ನಮ್ಮಲ್ಲಿಗೆ ಕೆಲ್ಸಕ್ಕೆ ಬಾವ ಕಳಲನ ಮಗಳ್ ಅಲ್ಲನಾ? ಇಂದ, ಇದ್ ಶಾಲೆಂತೇಳಿ ನೀ ಎಲ್ಲಾರ್ ನಮ್ಮ ಮುಟ್ಟಿ ಬುಡ್ಬೇಡಾ ಆತಾ?"ಂತ ಎಲ್ಲರ ಎದ್ರೇ ಹೇಳ್ತ್. ಆಗ ಅದರ ಜಾತಿನ ಮತ್ತೊಂದು ಗೂಡೆ "ನೀವೆಲ್ಲ ಎಂತಕೆ ಶಾಲೆಗೆ ಬಾದು? ಮೈಲಿಗೆ ಮಾಡಿಕೆ"ಂತ ಸೇರ್ಸಿತ್. ಆ ಮಾತಿಗೆ ಉಮೇದ್ ಕೊಡ್ವ ಹಾಂಗೆ ಒಳ್ಳ ಗೂಡೆಗ ನೆಗಾಡ್ದೊ.

ಮಿಣ್ಕೆನ ಸಂತೋಸು, ಉಮೇದ್ ಎಲ್ಲಾ ಒಮ್ಮೆಗೇ ಜರ್ರ್ಂತ ಇಳ್ತ್. ರಪ್ಪಂತ ಒಮ್ಮೆಗೇ ಕಣ್ಣೀರ್ ಉಕ್ಕಿ ಬಾತ್. "ಮಾಸ್ಟ್ರಗೆ ಇಲ್ಲದ ಜಾತಿ ಇದಿಕ್ಕೆ ಎಲ್ಲಿಂದ?"ಂತ ಮನ್ಸ್‌ಲಿ ಹೇಳಿಕಂಡ್ ದೂರ ಹೋತ್. ಆ ದಿನಂದ ಮೇಲ್ಜಾತಿ ಗೂಡೆಗಳ ಸಾವಾಸನೇ ಬೇಡಾಂತ ಎಷ್ಟ್ ದೂರ ಇರಿಕೆ ಸಾದ್ಯನೋ ಅಷ್ಟ್ ದೂರನೇ ಇರ್ತಿತ್ತ್. ಇವರ ಎದ್ರ್ ನಾ ಓದಿ, ಕಲ್ತ್ ಉಸಾರಾಗಿ ನನ್ನ ತಾಕತ್ತ್ ಇವ್ಕೆ ತೋರ್ಸಿನೆ"ಂತ ನಿಶ್ಚಯ ಮಾಡಿಕಂಡತ್.

ಮದ್ಯಾನಕ್ಕೆ ಉದ್ದೋಕೆ ಗಂಟೆ ಹೊಡ್ದೊ. ಮಾಸ್ಟರ್ ಎಲ್ಲೋವ್ಕೆ "ಇಂದ್ ಮಧ್ಯಾಹ್ನದ ಮೇಲೆ ನೀವುಗೆ ರಜೆ. ಯಾರೂ ಶಾಲೆಗೆ ಬರ್ಬೇಡಿ. ನಾಳೆ ಮಾತ್ರ ಎಲ್ಲೋವು ಶಾಲೆಗೆ ಬಂದೇ ಬರೋಕು. ಯಾರೂ ತಪ್ಪಿಸಿಕೆ ಬೊತ್ತ್."ಂತ ಹೇಳ್ದೊ. ಮಕ್ಕ ರಜೆಂತ ಕೇಳಿಯೋ ಏನೋ "ಹೋ.."ಂತ ಬೊಬ್ಬೆ ಹಾಕ್ಕಂಡ್ ಹೋದೊ. ಮಿಣ್ಕೆ ದಟಿಗೆಗೆ ನಡ್ಕಂಡ್ ಅಲ್ಲ; ಹಾರಿಕಂಡ್ ಹೋದ್ಹಂಗೆ ಹೋತ್. ಮಾಸ್ಟ್ರ ಕೈ ಹಿಡ್ದ್ ಬರ್ಸಿದ್ದ್, ಎಲ್ಲೋವ್ಕಿಂತ ಮುಂಚೆ ನಾನೇ ಬರ್ದದರ ತೋರ್ಸಿದ್ದು, ಮಾಸ್ಟ್ರ ಹೊಗ್ಳಿದ್ದ್, ಹೊರಗೆ ಹೋಕನ ಆ ಎರ್ಡ್ ಗೂಡೆಗ ಹಂಗಿಸಿ ಮಾತಾಡ್ದ್–ಇದರೆಲ್ಲಾ ಯಾಗ ಹೇಳ್ನೆನೋಂತೇಳ್ವ ಆತುರಲಿ, ಅಂಬೆರ್ಪುಲಿ ಓಡಿಕಂಡೇ ಹೋತ್.

ದಟಿಗೆಲಿ ಇದ್ದೋವು ಸಾ ಏನಾದೆನೋ ಎಂತಾದೆನೋಂತ ಕೆಂಡದ ಮೇಲೆ ಎಂತ ಹಾಂಗೆ, ನೆಮ್ಮದಿ ಇಲ್ಲಾದೆ, ಇದರ ದಾರಿನೇ ನೋಡಿಕಂಡಿದ್ದೊ. ಅಳ್ಳಿದ ಮೋರೆ, ಮಿಣ್ಣುವ ಕಣ್ಣ್ ನೋಡಿ ಹುಗ್ಗವ್ವ ಕುಸಿಲೇ "ಏನ್ನೇ, ಇಷ್ಟ್ ಬೇಗ ಬಂದದ್ದ್?"ಂತ ಕೇಳ್ದರ, ಕೇಳದ್ದಂಗೆ ಚೀಲನ ತೆಗ್ದ್ ಅತ್ತ ಮೂಲೆಗೆ ಹಾಕಿ, ಸೀದಾ ಉಂಬೊಳೆಗೆ ನುಗ್ಗಿ, ಒಲೆಂದ ಒಂದ್ ಮೋಸಿ ತುಂಡ್ ತೆಕಂಡ್, ಕಾವಿ ಹಾಕಿದ ಮೋಣ್ಣ್ ಗೋಡೆಲಿ "ಅ" ಮತ್ತೆ "1,2,3,4,5" ಬರ್ದ್, ಹುಗ್ಗವ್ವಂತ ಕರ್ದ್, ಓದಿ ಹೇಳಿತ್. ಹುಗ್ಗವ್ವಂಗಾದ ಸಂತೋಸು ಅಷ್ಟಿಷ್ಟಲ್ಲ. ಪಿಳ್ಳಿನ ತೋಬ್ಬಿ, ಮುಂದಲೆಗೆ ಮುತ್ತ ಕೊಟ್ಟು", ಹೀಂಗೆ ಕಲ್ಯೊಕು ಮಗ"ಂತ ಹೇಳ್ತ್. ಒಂದ್ ಗಳಿಗೆಲಿ ದಟಿಗೆ ತುಂಬ ಜಂಬರದ ಗೌಜಿ ತುಂಬಿಕಂಡತ್. ಮಿಣ್ಕಿ ಮತ್ತೆ ಅಲ್ಲೇ ಅಟ್ಟಬಾಯಿ ಹಾಕಿ ಗೋಡೆಗೆ ಒರಗಿ ಕುದ್ದ್‌ಕಂಡ್, ಎಡ ಕಾಲ್‌ನ ಹೆಬ್ಬೆರ್ಳ್‌ನ ಬಲಕೈಲಿ ಹಿಂಚಿಕಂಡ್ ಸಾಲೆಲಿ ನಡ್ದ ಅ ದಿನದ ಕತೆನ ಹೇಳಿಕೆ ಸುರು ಮಾಡ್ತ್. ಒಳ್ದವು ಅದರ ಸುತ್ತ ಕುದ್ದ್‌ಕಂಡ್ ಒಂದೇ ಮನ್ಸಿಂದ ಅದ್ ಹೇಳುದರ ಕೇಳ್ದೊ.

ಎಲ್ಲ ಕೇಳಿ ಆದ ಮೇಲೆ ಹುಗ್ಗವ್ವ "ಅದಿಕ್ಕೇ ಹೇಳ್ದು, ಸಾಲೆಂದರೆ ದೇಸ್ತಾನ, ಮಾಸ್ಟ್ರಗ ದೇವರುಗ"ಂತ. ಆಗ ಮಾಚು ಹೇಳ್ತ್ "ಅದ್ ಸತ್ಯನೇ. ಊರ್‍ಲಿ ಯಾರಾರ್ ಮೇಲ್ಜಾತಿಯೋವು ನಮ್ಮ ಮುಟ್ಟಲಿ ನೋಡೊಮೋ, ಹೋ.. ಅವರ ಜಾತಿನೇ ಹೋದು. ನಾಯಿನಾರ್ ಮುಟ್ಟುವೊ, ನಮ್ಮಲ್ಲ. ಸಾಲೆಲಿ ಮಾಸ್ಟ್ರ ನಮ್ಮ ಕೈ ಹಿಡ್ದ್ ಬರ್‍ಸಿದೊಂತೇಳ್ರೆ ಅವು ಕಂಡಿತ ದೇವ್ರೇ'

ಮಿಣ್ಕಿನ ಹೆಸರ್‌ನ ಮೇನಕಾಂತ ಮಾಡಿದರ ಕೇಳಿ ಎಲ್ಲೋವ್ಕೆ ನೆಗೆ ಬಾತ್. ಮಾಯ್ಲು "ಎಷ್ಟ್ ಪೊರ್ಲ್‌ನ ಹೆಸ್ರ್, ನಮ್ಮ ಜಾತಿಯೋವ್ಕೆ ಇಂಥ ಹೆಸ್ರ್‌ಂತ ಕೇಳ್ರೆ, ಮೇಲ್ಜಾತಿನ ದೆತ್ತಿಗ ಬೋಯ್ಯಕಿರ್ದು."ಂತ ಹೇಳಿಕನ, ಮಿಣ್ಕಿ ಆ ಎರ್ಡ್ ಗೂಡೆಗ ಹೇಳ್ದರ ಹೇಳ್ತ್. ಅದಿಕೆ ಹುಗ್ಗವ್ವ "ಅವು ಹೇಳ್ರೆ ಹೇಳಲಿ ಬುಡು, ಮಾಸ್ಟ್ರಗ ಎಲ್ಲ ಲಾಯ್ಕ್ ನೋಡಿಕೊಂಡವೆ ಅಲ್ಲಾ? ಅಷ್ಟ್ ಸಾಕ್. ನಿಂಗೆ ಕಲ್ಯಕೆ ತೊಂದರೆ ಇಲ್ಲಲೇ"ಂತ ಸಮ್ದಾನ ಮಾಡ್ತ್.

ನಮ್ಮಂತ ಕೆಳಜಾತಿಯವೂ ಕಲ್ಯಕಲೇಂತ ಹೇಳ್ವ ಸಂಗತಿ ಹುಗ್ಗವ್ವಂಗೆ ಬಾರಿ ಕುಸಿ ಕೊಟ್ಟತ್. ಇದ್ಯೆ ಇಲ್ಲದೆ ಯಾರೋ ಹೇಳ್ದೊಂತ ಅವು ಹೇಳ್ದಲ್ಲಿ ಹೆಬ್ಬೆಟ್ಟ್ ಒತ್ತುದು ಹೋಕು, ಹಾಂಗೆ ಬೋದ್ಕಲಿ ಈಜಿಕಾಗದೆ, ದಗಲ್ಬಾಜಿಗಳ ಎಡೆ ಪುಡೆಲಿ ಸೋತ್ ಸುಣ್ಣ ಆದ ಪಾಪದವರ ಕಷ್ಟ ಕಾರ್ಪಣ್ಯ ನೋಡ್ದ ಅದಿಕೆ, ಇದ್ಯೆ ಮಾತ್ರ ನಮ್ಮ ಮೇಲಕ್ಕೆ ಎತ್ತುದು, ಅದಿಕೆ ನಮ್ಮವು ಕಲಿಯೊಕುಂತ ಹೇಳ್ವಂತದ್ದ್ ಅದರ ಒತ್ತಾಸೆ ಆಗಿತ್ತ್. ಅದರ ಬಾಯ್ಬುಟ್ಟು ಹೇಳ್ತ್. ಅದಕ್ಕೆ ಸೆರ್‍ಯಾಗಿ ಆ ಎರ್ಡ್ ಗೂಡೆಗ ಮಿಣ್ಕಿನ ಮನ್ಸ್‌ನ ಹಿಂಡಿ ಬುಟ್ಟಿದ್ದೊ. ಆ ಸೇಡಿಗೆ ನಮ್ಮ ಜಾತಿ ಮಕ್ಕಳಿಗೆ ನಾ ಕಲ್ತದರ ಹೇಳಿ ಎಲ್ಲೋವು ಸಾಲೆಗೆ ಹೋವ ಹಾಂಗೆ ಮಾಡೊಕುಂತೇಳ್ವ ಹಟ ಬಂದಿತ್ತ್ ಮಿಣ್ಕಿಗೆ. ಅದಿಕ್ಕೆ ಅದ್ "ನಮ್ಮ ಈ ನೆರೆಕರೆಲಿ ಮಕ್ಕ ಆಗಲಿ ದೊಡ್ಡೋವಾಗಲಿ, ಯಾರಿಗೆ ಕಲ್ಯಕೆ ಮನ್ಸ್ ಉಟ್ಟೋ ಅವ್ಕೆ ನಾ ಅಂದಂದ್ ಕಲ್ತದರ ಕಲ್ಸಿನೆ"ಂತ ಹೇಳ್ತ್. ಮಿಣ್ಕಿನ ಉಮೇದ್‌ಲಿ ಆರ್ ತಿಂಗಲಿ ಅಜ್ಜ ಅಜ್ಜಿಗ ಬುಟ್ಟು ಬಾಕಿ ಒಳ್ದವು ಅವರವರ ಹೆಸ್ರ್ ಬರ್‍ಯಕೆ ಕಲ್ತೊ. ಮುಂದಣ ಕಾರ್ತಿಂಗ ನಮ್ಮ ಮಕ್ಕಳ ಸಾಲೆಗೆ ಸೇರ್‍ಸಿರೆ ಆದುಂತ ಹಿರ್‍ಯರ್ ಮಾತಾಡಿಕಂಡೊ. ಅವರ ದಟಿಗೆಂದ ಹಿಂಬೊತು "ಸೌದೆ ತಾರೋ ಮಲ್ಲ" "ದೊಡ್ಡ ಟೊಪ್ಪಿ ದೊರೆ" "ಸ್ವಾಮಿ

ದೇವನೆ ಲೋಕ ಪಾಲನೆ" "ವಂದೇ ಮಾತರಂ" "ಜನಗಣಮನ" ಇಂಥ ಹಾಡ್‌ಗ ಕೇಳಿಕೆ ಸುರು ಆತ್.

ಮಿಣ್ಕಿನ ಉಸಾರ್ತನ ನೋಡ್ದ ಅದರ ಜಾತಿಯೊಕ್‌ವು "ಕೆಲ್ಸ ಮಾಡಿ ಬೋದ್ಸುವ ನಾವುಗೆ ಇದ್ಯೆ ಎಂತಕ್ಕೆ?"ಂತ ಹೇಳ್ತಿದ್ದವು "ನಮ್ಮ ಮಕ್ಕಳಿಗೆ ಇದ್ಯೆ ಬೇಕ್"ಂತ ಹೇಳ್ವಷ್ಟ್ ಬದಲಾದೊ.

ಒಂದಿನ ದನಿ ಮಾಸ್ತ್ರ ಕಳಲಂಗೆ ಸಿಕ್ಕಿದವು "ಮೇನಕೆ ಕಲ್ಯಕೆ ಹುಶಾರುಟ್ಟು, ಶಾಲೆಗೆ ಕಳ್ಸ್. ಮುಂದೆಗೆ ಅದಿಕ್ಕೆ ಸರ್ಕಾರದ ಕೆಲ್ಸ ಏನಾರ್ ಸಿಕ್ಕುದು"ಂತ ಹೇಳ್ದೊ. ಅಷ್ಟ್ ಕೇಳ್ದ ಕಳಲಂಗೆ ಸೊರ್ಗ ದಿಡಕ್ಕಂತ ಇಜ್ಜಲಿಗೆ ಬಿದ್ದ ಹಾಂಗಾಗಿತ್ತ್. ಮಾಸ್ತ್ರ ಹೇಳ್ದರ ದಟಿಗೆಲಿ ಹೇಳಿ, ಮಗಳ ಬೆನ್ನ್ ಪೂಜಿ "ನೀ ಪೊರ್ಲ್ರ್ ಕಲಿ ಮಗಳೇ, ನಿಂಗೆ ಕಲಿಯಕೆ ಬೇಕಾದರ ನಾ ಬೇಡಿಯಾದರೂ ಮಾಡಿ ಕೊಡುವೆ"ಂತ ಹೇಳ್ತ್.

ಅಂದ್‌ನ ಇರ್ಳ್ ಮಿಣ್ಕಿಗೆ ದೊಡ್ಡ ದೊಡ್ಡ ಸಾಲೆಗೆ ಹೋಗಿ ಕಲ್ತ ಹಾಂಗೆ, ಕಲ್ತ್ ದೊಡ್ಡ ಉದ್ಯೋಗಕ್ಕೆ ಸೇರಿದ್ದಂಗೆ, ಪೊರ್ಲ್ರ್ ಪೊರ್ಲ್ರ್‌ನ ಸೀರೆ ಉಟ್ಟ್‌ಕಂಡ್ ಕೆಲ್ಸಕ್ಕೆ ಹೋದ ಹಾಂಗೆ ಕನ್ಸ್! ❐

ಹಾಳೆ ಒಂಬತ್ತ್ ವ್ಹಾವ್ ಅಳುಂಬು!

ಆ ವೊರ್ಸ ಹೋತ್. ಬೇಸ ತಿಂಗ ಬಾತ್. ಈಳ್ಯಡ್ಕದವರ ಕುಮೇರಿ ಬೆಳೆನ ಕೆಲ್ಸ ಸುರು ಆತ್. ಎರಡ್ ಮೂರು ಮಳೆನೂ ಬಾತ್. ಬಂದ ಹಾಂಗೆ ಹೋತ್ ಸಾ! ಕಾರ್ತಿಂಗ ಹಿಡ್ತ್. ಕಾರ್ತಿಂಗದ ಮಳೆ ಒಟ್ಟಿಗೆ ಗಾಳಿ, ಸಿಡ್ಲ್, ಮಿಂಚ್! ನೆಲ ಅದ್ರಿತ್. ಒಮ್ಮೊಮ್ಮೆ ಜೋರು ಮಳೆ. ಒಮ್ಮೊಮ್ಮೆ ಹನಿ ಕಡಿಯದೆ ಬಾವ ಜಿರಿಕೂಟು ಮಳೆ. ಅಲ್ಲಿ ಇಲ್ಲಿ ಕಮ್ಮು, ಚಾಳೆ, ಗುಡ್ಡೆ, ಗುಡ್ಸಲ್ ಬೀತ್‌ಂತ ಸುದ್ದಿ! ಮಾಚುಗೆ ಯಾವ್ದು ಬಿದ್ದರೂ ಯಾವ್ದು ಎದ್ದರೂ ಬೆಚ್ಚ ಇಲ್ಲೆ. ಇಂತದೇ ಕಾಲಲಿ ಮೀನ್ ಹಿಡಿಯೊದು, ಅಳುಂಬು ಮೂಡುದುಂತ ಹೇಳ್ವ ಲೆಕ್ಕಾಚಾರಲಿ ಅದ್ ಇತ್ತ್. ಮೀನ್ ಹಿಡ್ಯಕೆ ಅಪ್ಪ ಕಳಲ ಉಟ್ಟು. ಆದರೆ ಅಳುಂಬು ಹುಡ್ಕಿಕೆ ಮಾತ್ರ ನಾನೇ ಆಕುಂತ, ಒಂಚೂರು ಬೊಳ್ಕಿರಿ ಬಂದರೂ ಓಡಿ ಹೋಗಿ, ಆ ಗುಡ್ಡೆ ಈ ಗುಡ್ಡೆಂತ ಕಣ್ಣ್ ದೊಡ್ಡ್ ಮಾಡಿ, ದೂರದ ವರೆಗೂ ನೋಡಿಕೆ ಉಟ್ಟು. ಕಡೆಗೆ ಹರ್ಳ್ ಅಳುಂಬು ಆದರೂ ಸಿಕ್ಕೋಕೆ? ಉಹುಂ, ಅದ್ ಸಾ ಇಲ್ಲೆ!

ಮೊರ್ದಿನ ಮಿಣ್ಕಿನ ಸಾಲೆಗೆ ರಜೆ. ಮಲ್ಗಿಕನ ತಂಗೆನ ಹಕ್ಕಲೆ ಹೇಳ್ತ್ "ನಾಳೆ ನಾವು ಅಳುಂಬು ಹುಡ್ಕಿಕೆ ಪೋಯಿ. ಈಸೊತ್ತಿಗೆ ಎಷ್ಟ್ ಮೂಡಿ ಹಾಳಾತೋ ಏನೋ"ಂತ ಬೇಜಾರ ಮಾಡಿಕಂಡತ್. ಮೊರ್ದಿನ ಚಾ ಕುಡ್ದ್ ಹೊರ್ಡಿಕಾಕನ ನಾರು "ನಾನ್ ಸಾ ಬನ್ನೆ"ಂತ ಹೇಳ್ತ್. "ಬಾ, ಬಾ"ಂತ ಹೇಳ್ತ್ ಮಾಚು. ಕಿಡಂಜೊಳು ಕತ್ತಿ, ಮೊಡ್ಪಾಳೆ, ಮೊಡ್ಜೀಲ ಹಿಡ್ಕಂಡ್ ಹೊರ್ಟೊ, ಕಾಡ್‌ಲಿ ಸುತ್ತಿಕಾಕನ ಜೆನಂಗ ಇದ್ದಷ್ಟ್ ಕುಸಿ. ಸಾದಾರ್ಣ ಆಗಿ ವೊರ್ಸ ವೊರ್ಸ

ಒಂದೇ ಕಡೆಲಿ ಅಳ್ಂಬ್ ಮೂಡುದು. ಎಲ್ಲಿ ಸಾ ಅಳ್ಂಬ್ ಕಾಂಬದಿರ್ಕನ "ಈ ವೊರ್ಸ ಅದಿಕೆ ಮೂಡಿಕೆ ಮರ್ತ್ ಹೋಗುಟೋ ಏನೋ"ಂತ ತಮಾಸೆ ಮಾಡ್ದೊ. ಒಮ್ಮೊಮ್ಮೆ ಹೆಡೆಗೆ ಹೆಡೆಗೆ ಅಳುಂಬ್ ಸಿಕ್ಕಿದ್ದ್ ಸಾ ಇತ್ತ್. ಅದ್ ಬುಟ್ಟ್ ಇಂದ್ ಯಾಗೋಳು ಮೂಡುವಲ್ಲಿ ಒಂದೇ ಒಂದೇ ಅಳಂಬು ಇಲ್ಲೆ. ಎಂಥ ಕತೆಂತ ಹೇಳಿಕಂಡೊ. ಅಲ್ಲದೆ ಮೂಡಿ ಹಾಳಾದ್ದ್ ಸಾ ಕಾಂಬೊದ್ಲೆಂತ. ಮಾಚು "ಥೆಕ್"ಂತ ಹೇಳಿ ಅದರ ಬೇಜಾರನ ಹೊರಗೆ ಹಾಕಿತ್. "ನಾವು ಹೋದ ಮೇಲೆನೋ, ಅಲ್ಲಾ ನಾಳೆ ನಾಳ್ದೊ ಮೂಡುವೆನೋ ಏನೋ?"ಂತ ಗೊಣ್ಗಿತ್. ಇಡೀ ಕಾಡ್ ಸುತ್ತಿ ಬರಿಗೈಲಿ ಹೋಕೆ ಮಾಚುಗೆ ಮನ್ಸಿಲ್ಲೆ. "ಎಲ್ಲಾರ್ ಇರ್ದು. ನಾವುಗೆ ಕಾಂಬೊದಿಲ್ಲೆ"ಂತ ಸಮದಾನ ಮಾಡಿಕಂಡತ್. ಹೌದು ಗಡ! ಅಳ್ಂಬು ಎಲ್ಲರ ಕಣ್ಣಿಗೆ ಕಾಂಬೊದಿಲ್ಲೆಂತ ಹೇಳ್ವೆ. ಮಿಣ್ಕೆ "ನಂಗೆ ಕಾಲ್ ಬೊಚ್ಚಿದೆ. ನಾ ಇಲ್ಲೇ ಕುದ್ದ್‌ಕಣೆ. ನೀವು ಹೋಗಿ ಹುಡ್ಕಿನಿ"ಂತ ಹೇಳಿ ಅಲ್ಲೇ ಕುದ್ದತ್.

ಮಾಚು ನಾರು ಹಕ್ಕಲೆ "ಂದ, ನಾರು ನೀನ್ ಇಲ್ಲೇ ಸುತ್ತುಲಿ ಎಲ್ಲಾರ್ ಹುಡ್ಕ್. ನಾ ಒಮ್ಮೆ ಬಟ್ರ ಗುಡ್ಡೆಗೆ ಹೋಗಿ ಬನ್ನೆ"ಂತ ಹೇಳಿ ಅತ್ತ ಹೋತ್. ಗೊತ್ತಿದ್ದವ್ಕೆ ಅಳುಂಬು ಇದ್ದರೆ ಅದರ ವಾಸನೆ ಗೊತ್ತಾದೆ. ಹಾಂಗೆ ಮಾಚು ಮೂಂಗ್‌ನ ಹೊಳ್ಳೆನ ಅರ್ಳಿಸಿಕಂಡ್ ಎಲ್ಲಿಂದಾರ್ ಅಳುಂಬುನ ಪೊರ್ಮಳ ಬಂದದೆನಾಂತ ಬಲ್ಲೆ ಬಲ್ಲೆಗಳ ಬೊಗ್ಗಿಸಿ ಹುಡ್ಕಿದ್ದೇ ಹುಡ್ಕಿದ್ದ್! ಎಲ್ಲೂ ಇಲ್ಲೆ. ನಿರಾಸೆಲಿ ಬೇಜಾರ್ಲಿ, ಹಾಂಗೆ ಕೋಪಂದ "ಮಣ್ಣಾಂಗಟ್ಟಿ, ಸುಮ್ಮನೆ ಬಂದದ್ದ್ ನಾ" ಹೇಳಿಕಂಡೇ, "ಹೇಂಗೂ ಈಸ್ ದೂರ ಬಂದೊಳೆ, ಆ ಜಾರೇಲ್ ಗುಡ್ಡೆಗೆ ಒಮ್ಮೆ ಹೋಗಿ ಬನ್ನೆ"ಂತ ಕಿಡಂಜೋಳು {ಗೊರಬೆ} ಹಿಡ್ಕಂಡ್ ಹೋತ್. ಅದ್ ಬಾರಿ ಜಾರುವ ಜಾಗೆ. ಕುತ್ತ ಗುಡ್ಡೆ. ಸಾದರ್ಣದವು ಅಲ್ಲಿಗೆ ಹೋಕೆ ಹೆದ್ರುವೆ. ಎದೆಗಟ್ಟಿ ಮಾಡಿಕಂಡ್ ಹೋವು ಮಾತ್ರ ಹೋದವೆ. ಎಲ್ಲಾರ್ರ್ ಜಾರ್ರೆ ಕೆಳಗೆ ಗುಂಡಿಗೆ! ಮೇಯಕೆ ಬಂದ ಹಸ್ ಕರ್‌ಗ, ಎತ್ತ್, ಎಮ್ಮೆಗ ಬಿದ್ದ್ ಕೈಕಾಲ್ ಮುರ್ಕಂಡದ್ದ್ ಇರ್ದು, ಕುತ್ತಿಗೆನೋ ಮುಚ್ಚಂಡೆನೋ ಮುರ್ದ್ ಸತ್ತದ್ದೂ ಇರ್ದು. ಆದಿಕೆ ಹುಗ್ಗವ್ವ ಹೊರ್ದಿಕಾಕನನೇ "ಆ ಬಟ್ರ ಗುಂಡಿ ಗುಡ್ಡೆ ಹಕ್ಕಲೆ ಹೋಗ್ಬೇಡಿ"ಂತ ಹೇಳಿತ್ತ್. ನಾ ಇಲ್ಲಿ ಬಂದದರ ಹುಗ್ಗವ್ವಂಗೆ ಹೇಳದಿದ್ದರೆ ಆತ್ಂತ ಮನ್ಸ್‌ಲಿ ಹೇಳಿ ಕಂಡತ್. ಹೀಂಗೆ ಆಲಚನೆ ಮಾಡಿಕಂಡ್ ಬಲ್ಲೆಗಳ ಗಟ್ಟಿ ಹಿಡ್ಕಂಡ್, ಅತ್ತ ಇತ್ತ ನೋಡಿಕೊಂಡ್ ಮೆಲ್ಲಾನೆ ಹೋತಿತ್ತ್. ಕಾಲಡಿ ಎಲ್ಲಾರ್ ಜಾರ್ದನೋಂತ ಹೆದ್ರಿಕೆ. ಮೈಯೆಲ್ಲಾ ತರ್ಚಿಸಿಕಂಡ್, ಬಾರೀ ಸೂಕ್ಷ್ಮಲಿ ಅತ್ತಿತ್ತ ನೋಡಿಕಂಡ್ ಹೋಕನ, ಕೆಳಾಗೆ ಹಂಞ ದೂರಲಿ ಮಣ್ಣಾದ ಬೆಳ್ಳಂಗೆ ಬಟ್ಟೆ ಹಾಸಿದ್ದಂಗೆ ಒಂದಷ್ಟ್ ಅಗಲಕೆ ಒಂಥರಾ ಬಿಳಿ ಬಿಳಿ ಕಂಡತ್. ಅದ್ ಅಳುಂಬೇ ಅಲ್ಲನಾ?ಂತ ದೈರ್ಯ ಮಾಡಿಕಂಡ್ ಒಂದೊಂದೇ ಬಲ್ಲೆನ ಹಿಡ್ಕಂಡ್, ತರ್ಚುವ ಬಲ್ಲೆನ ಬುಡ್ಸಿಕಂಡ್ ಹಕ್ಕಲೆ ಹೋತ್. ಒಂದ್ ಸಣ್ಣ ಗದ್ದೆನಷ್ಟ್ ಅಗಲಕ್ಕೆ ಮುಗುರಳುಂಬು! ಎಷ್ಟ್ ಗೋಣಿಲಿ ತುಂಬುದೋ ಏನೋ! ವ್ಹಾವ್!ಂತ ಕುಸಿಲಿ ಬಾಯಿಗೆ ಕೈ ಹಿಡ್ತ್. "ಇಷ್ಟ್ ಅಳುಂಬು ಸಿಕ್ಕಿದೆಂತ ಗೊತ್ತಿದ್ದರೆ ಗೋಣಿ ತರಕಾಗಿತ್ತ್"ಂತ ಹೇಳಿಕಂಡತ್. ಮತ್ತೆ ಹೋಗಿ ತರೊಕಂದರೆ ಸುಮಾರ್ ದೂರ ಉಟ್ಟು, "ಹುಂ, ಸಾಯಲಿ ನಾ ಕಿಡಂಜೋಳ್‌ಲಿ ತುಂಬಿಸಿನೆ"ಂತ,

ಮಳೆ ಹನ್ಕಂಡ್ ಇದ್ದರೂ ಎರ್ಡ್ ಮಾದೆರಿ ಬೊಳ್ಳಿನ ತುಂಡು ಮಾಡಿ ಕಿಡಂಜೋಳು ಅಡಿಲಿ, ಆ ಮೇಲೆ ಕಟ್ಟಿಕೆ ಅನ್ಕೂಲ ಆಗ್ವ ಹಾಂಗೆ ಇಸಿ, ಬಾರಿ ಕುಸಿಲಿ ಅಳುಂಬು ತೆಗ್ದ್ ತೆಗ್ದ್ ಹಾಕಿತ್. ಇನ್ನ್ ಹಾಕಿಕೆ ಆಕಿಲ್ಲೆಂತ ಆಕನ ತುಂಬ್ಸುದ ಅಳುಂಬು ಬೀಳದ ಹಾಂಗೆ ಮಾದೆರಿ ಬೊಳ್ಳಿನ ಅದಿಕೆ ಸುತ್ತಿ ಕಟ್ಟಿತ್. ಮತ್ತೆ, ಮೆಲ್ಲ ತಲೆ ಮೇಲೆ ಇಸಿಕಂಡ್, ಒಂದೊಂದೇ ಬಲ್ಲೆನ ಹಿಡ್ಕಂಡ್ ಎಚ್ಚರಲಿ ಮೆಲ್ಲ ಮೆಲ್ಲ ಹೆಜ್ಜೆ ಹಾಕಿತ್.

ಅತ್ತ ನಾರು ಮತ್ತೆ ಮಿಣ್ಕಿ ಇವಳ ಕಾದೊ. ಎಷ್ಟ್ ಹೊತ್ತಾದ್ರ್ ಬಾರದೇ ಇರಿಕನ ಹೆದ್ರಿ "ಕೂ..." ಹಾಕಿದೊ. ಅದ್ ಮರ್ದನಿ ಆಗಿ ಬಾತಲ್ಲದೆ ಅಕ್ಕನ ಸುದ್ದಿ ಇಲ್ಲೆ. ಮಾಚುಗೆ ಆ ಸೊರ ಕೇಳಿದ್ದರೂ ಕೇಳಿರ್ದು. ಆದರೆ ಅದರ ತಲೆಲಿ ಅಳುಂಬಲ್ಲದೆ ಬೇರೇನೂ ಇತ್ತಿಲ್ಲಲೇ. ಹಾಂಗೆ ಹೆದ್ರಿ ನಾರು, ಮಿಣ್ಕಿ ಹಕ್ಕಲೆ "ಅಕ್ಕ ಅಲ್ಲಿ ಜಾರೇಲ್ ಗುಂಡಿಗೆ ಬಿದ್ದ್ ಬುಟ್ಟತೋ ಏನೋ? ಅಲ್ಲರೆ, ಅದಿಕೆ ಅಳುಂಬು ಸಿಕ್ಕಿರೂ ಸಿಕ್ಕಿರ್ದು. ಎಂತಕ್ಕೂ ನಾ ಅದರ ಹುಡ್ಕಿಕಂಡ್ ಹೋನೆ"ಂತ ಮೊಡ್ಜೀಲ ಹಿಡ್ಕಂಡ್ ಹೊರ್ಟತ್. ಮಿಣ್ಕಿಗೆ ಅಕ್ಕ ಬಿದ್ದರೆಂತ ಹೆದ್ರಿಕೆ ಆತ್. "ನಾನೂ ಬನ್ನೆ"ಂತ ಅದ್ ಸಾ ಅವನ ಹಿಂದೆ ನಡ್ತ್. ಬಟ್ರ ಗುಡ್ಡೆ ಹಕ್ಕಲೆ ಬಾಕನ ಮಾಚು ತಲೆ ಮೇಲೆ ಕಿಡಂಜೋಳ್ ಇಸಿಕಂಡ್ ಬಾದು ಕಂಡತ್. ಹಾಂಗರೆ ಅಳುಂಬು ಸಿಕ್ಕಿರೋಕುಂತ ಹೇಳಿಕಂಡೊ. ಮಾಚು ಇವರ ನೋಡಿ ಕೈ ಬಾಸೆ ಮಾಡಿ ಕರ್ತ್. ಹತ್ತಿರ ಬಾಕನ "ನನ್ನ ಹಕ್ಕಲೆ ಮಡ್ಜೀಲ ಇಲ್ಲದೆ ಕಷ್ಟ ಆತ್. ಅದ್ ಕೊಡು. ಇನ್ನೂ ಉಟ್ಟು"ಂತ ಚೀಲ ತೆಕಂಡತ್. ನಾರು "ನಾನ್ಸಾ ಬನ್ನೆ"ಂತ ಹೇಳಿಕನ ಮಾಚು ಜೋರ್ಮಾಡಿ "ನೀನ್ ಬಾದ್‌ಗಡ. ನಾನೇ ಜುವ್ವ ಕೈಲಿ ಹಿಡ್ಕಂಡ್ ಹೋದ್ದಂಗೆ ಹೋದು. ನೀನ್ ಬಂದರೆ ಒಬ್ಬ ಗುಂಡಿಗೇ"ಂತ ಹೇಳಿಕನ ಅಂವ ಸುಮ್ಮನಾತ್. ಮತ್ತೆ ಆಗಿನ್ನಂಗೆ ಜಾಗರ್ತೆಲಿ ಹೋಗಿ ಮೊಡ್ಸೀಲಲಿ ಹಿಡ್ಸುವಷ್ಟ್ ತುಂಬ್ಸಿ ತೆಕಂಡ್ ಬಾತ್. ಮತ್ತೆ ಸಾ ಒಸಿ ಅಳುಂಬು ಇತ್ತ್. ತೆಕಂಡ್ ಹೋಕೆ ಚೀಲ ಇಲ್ಲಾಗಿತ್ತ್. ಮಾಚುಗೆ ಬುಡಿಕೆ ಮನ್ಸಿಲ್ಲೆ. ತೆಕಂಡ್ ಹೋಕೆ ಗೊತ್ತಿಲ್ಲೆ. ಬೇರೆ ಉಪಾಯ ಇಲ್ಲದಕ್ಕೆ "ಮಣ್ಣ್ ಹಾಕಿತ್ ಅದಿಕೆ'ಂತ ಹೇಳಿಕಂಡ್ ಒಂದೊಂದೇ ಬಲ್ಲೆನ ಹಿಡ್ಕಂಡ್ ಮೆಲ್ಲಾನೆ ಬಾತ್. ಬಂದ ಮೇಲೆ ಮಿಣ್ಕಿ ಹೇಳ್ತ್ "ನಾ ಮತ್ತೆ ನಾರು ಅಳುಂಬು ಹಿಡ್ಕಂಡವೆ. ನೀ ಕತ್ತಿ ಹಿಡ್ಕ"ಂತ. ದಾರಿಲಿ ಹೋಕನ ನಾರು ಹೇಳ್ತ್ "ಬರಾಬರಿ ಸಿಕ್ಯುಟಲ್ಲಾ? ನಮ್ಮ ಪುಣ್ಯ"

"ಹೌದು, ಹಂಞ ಅಕ್ಕಿ ಬತ್ತ, ನಾಕ್ ಕಾಸ್ ಸಾ ಸಿಕ್ಕುದು"ಂತ ಮಾಚು ಹೇಳ್ತ್. ದಾರಿಲಿ ನಡ್ಕಂಡ್ ಹೋಕನ ಯಾವ್ಯಾವ ಮನೆಗೆಲ್ಲ ಕೊಡೊಕುಂತ ಲೆಕ್ಕ ಹಾಕಿದೊ.

ಅಂತ್ ಇಂತ್ ದಟಿಗೆ ಮುಟ್ಟಿಕನ ಗಂಟೆ ಮೂರು ಕಳ್ದುಟು. ಹುಗ್ಗವ್ವ ಕೇಳ್ತ್ "ಎಸ್ ಹೊತ್ತಾತ್? ಬಟ್ರ ಗುಡ್ಡೆಗೆ ಮನಿ ಹೋಗಿದ್ದರಿಯಾ ಹೇಂಗೆ?'

"ಅಷ್ಟ್ ದೂರ ಮನಿ ಹೋತ್ಲೆ. ಅಳುಂಬು ಹುಡ್ಕಿಕೇ ಇಷ್ಟ್ ಹೊತ್ತಾತ್." ದಾರಿಲೇ ಮಾಚು ತಮ್ಮ ತಂಗೆಗೆ ಹೀಂಗೆ ಹೇಳೋಕುಂತ ಸೂಚನೆ ಕೊಟ್ಟಿತ್ತ್.

ಮಿಣ್ಕಿ ಕೇಳ್ತ್ "ಹಾಂಗಾರೆ ಇಂದ್ ಗಂಜಿ ತಂದದ್ದ್ ಯಾರ್?"

"ಬೇರೆ ಯಾರ್? ನಾನೇ. ನೀವುಗೆ ಹೊಟ್ಟೆ ಹಸಿದಿರ್ದು. ಉಣಿ, ಇಕ್ಕಿನೆ"ಂತ ಹುಗ್ಗವ್ವ

ಹೇಳ್ದನ ನಾರು ಕೇಳ್ತ್ "ಒಲೆಲಿ ಕೆಂಡ ಉಟ್ಟಾ? ಅಲುಂಬು ಸುಟ್ಟು ಉಪ್ಪುಮೆಣ್ಸ್ ಮಾಡಕಾಗಿತ್."

"ಬೊಳ್ಪಿಗಿಲ್ಲನಾ ಕಿಚ್ಚ್ ಮಾಡ್ದ್? ಈಗ ಕೆಂಡ ಇರ್ಕಿಲ್ಲೆ. ಇರ್ಲ್‌ಗೆ ಬೇಕಾದರ ಮಾಡೊಮೊ"

ಗಂಜಿ ಊಟ ಮಾಡಿಕನ ಮಾಚು ಹೇಳ್ತ್ "ಹುಗ್ಗವ್ವ ಹದ್ನೈದ್ ಪಾಲ್ ಕಟ್ಟ್, ನಾ ಮತ್ತೆ ಹಾಳೆಲಿ ಕಟ್ಟಿನೆ"

ಹುಗ್ಗವ್ವ ಪಾಲ್ ಕಟ್ಟಿದರ ಮಾಯ್ಲುನೇ ಹಾಳೆಲಿ ಕಟ್ಟಿತ್. ನೆರೆಕರೆಯೊಯ್ಷ್ಕೆ ಮತ್ತೆ ಸೊಂತದೊಯ್ಷ್ಕೆ ಮತ್ತೆ ಹೀಂಗೆ ಕೊಡಿಕೆಂತ ಹಂಞಿ ಬೇರೆ ಇಸಿದೊ. ಅಕ್ಕಿಬತ್ತ ಸಿಕ್ವಲ್ಲಿಗೆ ಕೊಡಿಕೆ ಮಾಯ್ಲು ಹೊರ್ಪತ್.

ಮಾಯ್ಲು ಹೊರ್ಡಿಕನ ಮಾಚು ಹೇಳ್ತ್ "ದುಡ್ಡು ಸಿಕ್ಕಿರೆ ನಂಗೇ ಕೊಡೊಕು. ನನ್ನ ಬಟ್ಟೆ ಪೂರ ಹರ್ಕಟೆ ಆಗಿ ಹೋಗುಟು. ಜಾತ್ರೆಗೆ ಹಾಕಿಕೆ ನಂಗೆ ಹೊಸ ಅರ್ವೆ ಬೇಕು'

ಮಾಯ್ಲು ಮೆಟ್ಲ್ ಇಳ್ಕಂಡ್ ಹೇಳ್ತ್ "ಬಂಜ ಬಂದೀಯಲ್ಲಾ? ಸಿಕ್ಕಿದ ದುಡ್ಡುನ ನಿಂಗೇ ಕೊಟ್ಟನೇ"

ನಾರು ನೆಗಾಡಿಕಂಡ್ "ನಾನೂ ಬಂಜ ಬಂದೊಳೆ. ಅಲ್ಲಿಂದ ಇಲ್ಲಿವರೆಗೆ ಹೊತ್ತ್‌ಕಂಡ್ ಬಂದದ್ದ್?

ಮಾಚು ನೆಗಾಡಿಕಂಡೇ ಹೇಳ್ತ್ "ಹೌದಪ್ಪಾ, ನೀನ್ ಬಂಜ ಬಂದೊಳ. ನಿಂಗೆ ಮತ್ತೆ ಮಿಣ್ಕೆಗೆ ನಾನೇ ಕೊಟ್ಟನೆ ಆತಾ?"

"ಹಾಂಗಾರೆ ಅದ್ ಸೆರಿ"ಂತ ನಾರು ಹೇಳ್ತ್. ❐

ಹಾಳೆ 10
ಅರ್ದಾಣೆ ಜಾತ್ರೆ

ಜಾತ್ರೆ ಲೆಕ್ಕಲಿ ಕೆಲ್ಸದವ್ಕೆ ಒಂದೆರಡ್ ದಿನ ರಜೆ. ಕೊಡಿ ಏರ್ದ ಮೇಲೆ ಕೆಲವು ಕೆಲ್ಸಗಳ ಮಾಡುದ್ಲೆ. ಅದರ್ಲೂ ಮರ ಹತ್ತ್‌ದ್ದಂತೂ ಇಲ್ಲೇ ಇಲ್ಲೆ.

ಹೌದ್, ದುಡ್ಡು ಇದ್ದ್‌ವು ಎಲ್ಲಿಗಾರೂ ಹೋವೊ, ಬೇಕಾದ್ದರ ಎಲ್ಲಿಂದಾರ್ ತೆಕೊಣ್ಂಬೊ. ಪಾಪದವ್ಕೆ ಹಾಂಗೆ ಅಲ್ಲಲೇ? ಎಂತಾರ್ ಬೇಕಂದರೆ ಜಾತ್ರೆನ ಸಂತೆನೇ ಆಕು. ದೇವರ ಹೆಸರ್ಲಿ ಗಣ್ಮಕ್ಕ, ಹೆಣ್ಮಕ್ಕ, ಮಕ್ಕ ಅಲ್ಲದೆ ಎಲ್ಲಾ ಜಾತಿಯವು ಸೇರ್ವ ಕಾರ್ಣಿಕದ ಜಾಗೆ ಜಾತ್ರೆ, ಅಪ್ರೂಪದ ನೆಂಟರ್‌ಗ, ಕೆಲ್ಸಕ್ಕೆಂತ ದೂರ ದೂರ ಹೋದವು, ಒಟ್ಟಿಗೆ ಸಾಲೆಗೆ ಹೋಕ್ಕಂಡ್ ಬಂದ್‌ಕಂಡ್ ಇದ್ದವು, ಅದ್ ಅಲ್ಲದೆ ನೆರೆಕರೆಯ ಬೇಕಾದವರ ನೋಡಿ ಸುದ್ದಿ ಸೋಗಲೆ ಮಾತಾಡಿ, ಅವರವರ ಕುಟುಂಬಲಿ ಅಲ್ಲರೆ ಬೇಕಾದವ್ಕೆ ಮದ್ವೆ ಸಮ್ಮಂದ ಮಾತಾಡಿಕೆ, ಬೇಸಾಯಕ್ಕೆ ಬೇಕಾದ ಎತ್ತ್, ಎಮ್ಮೆ, ಕೋಣ, ಹಸ್‌ಗಳ ವಿಚಾರ್ಸಿಕೆ, ಮತ್ತೆ ಅಕ್ಕಿ ಬತ್ತ, ತೆಂಗ್ ಅಡಿಕೆ, ಇಂತ ಸಾಮಾನ್ ಅಲ್ಲದೆ ಮಡಿಕೆ, ಕುಡಿಕೆ, ಕತ್ತಿ, ಕೊಟ್ಟು, ಪಿಕ್ಕಾಸ್‌ನಂತ ದಿನ ಬಳಕೆ ಹತ್ಯಾರ್‌ಗಳ ಕೊಡಿಕೆ ತೆಕಂಬಕೆ– ಹೀಂಗೆ ಕಣ್ಣ್ ಕಟ್ಟಿಸ್ವಂತ ಒಂದ್ ಮಾಯಾ ಲೋಕನೇ

ಜಾತ್ರೆನ ಸಂತೆಲಿ ಇರ್ದು. ಗಂಡ್‌ಗ ಒಂದ್ ಆಟ ನೋಡ್ವೆಂತೇಳಿ ಆದರೆ ಅದ್-ಧರ್ಮಸ್ಥಳದ ಆಟ-ಜಾತ್ರೆ ದಿನ. ಅದ್ ಆಟದ ಮೇಲೆನ ಪ್ರೀತಿಂದ ಅಲ್ಲ, ತೇರ್ ಎಳ್ದ ಮೇಲೆ ಕತ್ತಲೆ ಕಳ್ಯಕೆ! ನೆಲನೋ, ಬೆಂಚೊ, ಈಚಾರೋ-ಕುದ್ರಿಕೆ ಜಾಗೆ ಸಿಕ್ಕುದು ಅಲ್ಲಿ ಮಾತ್ರ, ಹಾಂಗೆಂತ ಆಟದ ಹುಚ್ಚರ್ ಗಣಪತಿನ ಪೂಜೆ ನಡ್ಯಕೆ ಮುಂದೆ ಅಲ್ಲಿ ಹೋಗಿ ಎದ್ರ್ ಸಾಲ್‌ಲಿ ಕುದ್ದು ಬುಟ್ಟವೆ. ಹೀಂಗೆ ಜನ ಸೇರ್ವ ಗೌಜಿ ಮಾತ್ರ ಅಲ್ಲದೆ ಬೊದ್ಕಿನ ಅಗತ್ಯಕ್ಕೆ, ಕಷ್ಟ ಸುಖ ಮಾತಾಡಿಕೆ, ಸಾಮಾನ್‌ಗಳ ಪಗರ್ಸಿಕೆ, ನಾಕ್ ದಿಕ್ಕಿಂದ ಜನ ಬಂದ್ ಕೂಡುವ ಒಂದ್ ದೊಡ್ಡ ಶಕ್ತಿನ ನಡುಬೊಟ್ಟಾಗಿ ನಡಿಯತಿತ್ತ್ ಆ ಕಾಲದ ಜಾತ್ರೆ.

ಕುಡಿಯಕೆ ಬೇಕಾರೆ ದೊಡ್ಡೇರಿ ನಾಯ್ಕರ ಗಾಣದ ಕಬ್ಬುನ ಹಾಲ್, ಲೂಯಿಸ ಪುರ್ಬುಗಳ ಬಣ್ಣ ಬಣ್ಣದ ತರಾವರಿಯ ಸೀ, ಚಪ್ಪೆ, ಖಾರದ ಸೋಡಗ, ಸೋಮಯಾಜಿಗಳ ಸೋಜಿ, ಹೋದಲ್ಲಿ ಪೂರ ಎಣ್ಣೆಲಿ ಕಾಸಿದ ಸಿಹಿ, ಕಾರ ತಿಂಡಿಗಳ ಅಂಗಡಿಗ, ಬಳೆಯಂಗಡಿಗ, ಮಕ್ಕಳ ಆಟದ ಸಾಮಾನ್‌ಗಳ ಅಂಗಡಿ, ತೊಟ್ಟಿಲ್, ಗರಗರ ಮಂಡಲ, ಚುರುಮುರಿ ಅಂಗಡಿ, ಚಾದ ಅಂಗಡಿ, ಐಸ್ ಕೇಂಡಿ, ಬಣ್ಣ ಬಣ್ಣದ ಬುಗ್ಗೆಗ-ಇನ್ನೂ ಎಂತೆಂತದ್ದೋ! ಜಾತ್ರೆಂತ ಹೇಳ್ರೆ ಮಕ್ಕ ಮಾತ್ರ ಅಲ್ಲ, ದೊಡ್ಡೋವೂ ವೊರ್ಸ ಇಡೀ ಕಾದ್‌ಕಂಡಿರ್ವ ಒಂದ್ ಪೊರ್ಲುನ ಕನ್ಸ್!

ಹಾಂಗಿದ್ದ ಒಂದ್ ವೊರ್ಸದ ಸುಳ್ಯದ ಜಾತ್ರೆ, ಕಳಲ ಅಂವನ ಮಕ್ಕಳಿಗೆ ಜಾತ್ರೆ ಕರ್ಚಿಗೆಂತ ಅರ್ದ ಅರ್ದ ಆಣೆ ಕೊಟ್ಟತ್. ಇಂದ್‌ನ ಲೆಕ್ಕಲಿ ಆ ಅರ್ದಾಣೆ ಬೆಲೆ ಮೂರ್ನಾಲ್ಕ್ ಪೈಸೆ! ಆದರೆ ಅಂದ್ ಅದಿಕ್ಕೆ ಒಂದ್ ದೋಸೆ, ಒಂದ್ ದೊಡ್ಡ ಲೋಟ ತುಂಬ ಚಾ ಸಿಕ್ತಿತ್. ಆಚೀಚಿನ ದಟಿಗೆನ ಮಕ್ಕ ಎಲ್ಲಾ ಒಟ್ಟ್ ಸೇರಿಕಂಡ್, ಪಟ್ಟಾಂ ಕಟ್ಟಿಕಂಡ್ ಜಾತ್ರೆಗೆ ಹೊರ್ಟೊ. ಮಾಚು ಅಪ್ಪ ಕೊಟ್ಟ ಅರ್ದಾಣೆನ ಅರ್ದ ಪವನ್ ಚಿನ್ನದ ಹಾಂಗೆ ಮುಷ್ಟಿಲಿ ಗಟ್ಟಿ ಹಿಡ್ಕಂಡಿತ್ತ್. ಸಂತೆಲಿ ಎಂತದ್ದೋ ತೆಕಣೆಂತ ಮುಷ್ಟಿ ಬುಡ್ಸಿ ನೋಡ್ದೆ, ನೋಡ್ದು ಎಂತರ? ಕೈ ಕಾಲಿ! ಅದರ ಒಟ್ಟಿಗೆ ಇದ್ದೋವು ಹೇಳ್ದೊ ದಾರಿಲಿ ಎಲ್ಲಾರ್ ಬಿದ್ದಿರ್ದುಂತ. ಹಾಂಗೆ ಅದ್ ತಿರ್ಗಿ ಮೊರ್ಟ್‌ಕಂಡೇ ಹೋದ ದಾರಿಲೇ ಹುಡ್ಕಿಕಂಡ್ ಬಾತ್. ಡಾಮರ್ ಮಾರ್ಗಲಿ ಬಿದ್ದಿದ್ದರೆ ಸಿಕ್ಕಿರ್ದು. ಅಲ್ಲಾ, ಬೇರೆ ಯಾರಿಗಾರ್ ಸಿಕ್ಕಿತೋ? ದಟಿಗೆಂದ ದೊಡ್ಡ ಮಾರ್ಗ ಸೇರ್‌ವಲ್ಲಿ ಮುಟ್ಟ ಬೆರೀ ದರ್ಗ್. ಅಲ್ಲಿ ಬಿದ್ದಿದ್ದರೆ ಎಲ್ಲಿಂತ ಹುಡ್ಕುದು? ದಟಿಗೆಗೆ ಎತ್ತಿತ್. ಹುಗ್ಗವ್ವ ಎದ್‌ರ್ಲಿ ಇದ್ದದ್, ದುಕ್‌ಡ್ಸಿ ದುಕ್‌ಡ್ಸಿ ಅತ್ತ್‌ಕೊಂಡ್ ಬಾವ ಪಿಳ್ಳೆನ ನೋಡಿ "ಎಂತ ಆತ್ ಮಗಾ?"ಂತ ಕೇಳಿ ಹಕ್ಕಲೆ ಹೋಗಿ ಅಪ್ಪಿಕಂಡತ್. ದುಕ್ಡಿಸಿಕಂಡೇ ಅರ್ದಾಣೆ ಬಿಸಾಡಿ ಹೋದದರ ಹೇಳ್ತ್. ಹುಗ್ಗವ್ವ "ನೀ ಮೊರ್ಡ್‌ಬೇಡ.ನನ್ನ ಹಕ್ಕಲೆ ಅರ್ದಾಣೆ ಇರ್ದು. ಹುಡ್ಕಿ ಕೊಟ್ಟನೆ"ಂತ ಅದರ ಸಂಚಿ ಹುಡ್ಕಿ, ಅದರ್ಲಿ ಕಾಸ್ ಏನಾರ್ ಉಟ್ಟಾಂತ ಬಳ್‌ಜಿತ್. ಪುಣ್ಯಕ್ಕೆ ಒಂದಾಣೆ ಇತ್ತ್. ಮಾಚು ಕುಸಿಲಿ ಹುಗ್ಗವ್ವನ ತಬ್ಬಿಕಂಡತ್. ಮಾಚುನ ನೆಗೆ ಮೋರೆನ ನೋಡಿ ಕಣ್ಣೀರ್ ಒರ್ಸಿ, ಒಂದ್ ಹಳೆ ಸೀರೆ ತುಂಡುಲಿ ಆ ದುಡ್ಡುನ ಕಟ್ಟಿಕೊಟ್ಟ್ "ಜಾಗರ್ತೆ ಬಲಾ"ಂತ ಹೇಳಿ ಕಳ್ಸಿತ್.

ಸಂತೆಗೆ ಎತ್ತಿದ ಮಾಚು, ಒಂದಾಣೆ ಕೊಟ್ಟ ಹುಗ್ಗವ್ವಂಗೆ ಏನಾರ್ ತೆಕಂಡ್ ಹೋಕಲೇಂತ ಹುಡ್ಕಿ ಹುಡ್ಕಿ ಒಂದೊಂದ್ ಪೈ ಕೊಟ್ಟ್ ಎರ್ಡ್ ಸಂಚಿ ತೆಕಂತ್. ಒಂದ್ ದುಡ್ಡು ಹಾಕಿಕೆ

ಮತ್ತೊಂದು ಎಲೆ ಅಡಿಕೆ ಹಾಕಿಕೆ. ಮನೆಯೊಪ್ವೆಂತ ಒಸಿ ಮಿಟಾಯಿ, ಬಾಳೆ ನಾರ್ಲಿ ಜೆಡೆ ಕಟ್ಟುವ ಮಿಣ್ಕೆಗೊಂದು ರಿಬ್ಬನ್, ಅದಕ್ಕೊಂದು ಐಸ್ಕೇಂಡಿ-ಇಷ್ಟಾಕನ ಒಂದಾಣೆ ಕಾಲಿ! ಮತ್ತೆ ಅಂಗಡಿ, ಅಂಗಡಿ, ಉಯ್ಯಾಲೆ, ಬೇರೆ ಬೇರೆ ಆಟದ ಸಾಮಾನ್‌ಗಳ ನೋಡಿಕಂಡ್, ಕಾಲ್ ಬೊಚ್ಚುವಷ್ಟು ಅತ್ತಿತ್ತ ತಿರ್ಗಾಡಿ "ಎಲ್ಲಾರ್ ಕುದ್ದ್‌ಕಣೆಂತ ಜಾಗೆ ಹುಡ್ಕಿಕಾಕನ, ಸಂತೆ ಜಾಗೆಂದ ಆಸ್ ದೂರಲಿ ಅದರ ಜಾತಿಯ ಏಳೆಂಟ್ ಹೆಳ್ಮಕ್ಕ, ಮಕ್ಕಳೊಟ್ಟಿಗೆ ಒಂದ್ ಕಡೆ ಕುದ್ದದರ ನೋಡಿ ಅಲ್ಲೇ ಹಂಞ ದೂರಲಿ ಕುದ್ದತ್. ಒಂದ್ ಅಜ್ಜಿ ಅಲ್ಲೇ ಮೂರ್ ಕಲ್ಲ್ ಹಾಕಿ, ಕಿಚ್ಚ್ ಮಾಡಿ, ಮಡ್ಕೆಲಿ ಗಂಜಿ ಇಸಿತ್ತ್. ಒಂದ್ ಹೆಂಗ್ಸ್ "ಮಕ್ಕಳಿಗೆ ಹಸಿವಾದರೆ ಕೊಡಿಕೆಂತ ಅವ್ಲಕ್ಕಿ ಕಲ್ಸಿ ತಂದೊಳೆ. ಬೇಕಾ?"ಂತ ಕೇಳಿ, ಕೈಯೊಡ್ಡಿದೊಪ್ವೆ ಒಂದೊಂದು ಮುಂಡಿ ಕೊಡ್ತಿತ್ತ್. "ಈ ಗೂಡೆ ನಮ್ಮವ್ಳೆಂತ ಕಂಡದೆ"ಂತ ಹೇಳಿ, "ನೀ ಎಲ್ಲಿಯವ್ಳು?"ಂತ ಕೇಳಿಕನ, ಇವ್ಳು ಈಳ್ಯಡ್ಕದ ಕಳಲನ ಮಗ್ಳೆಂತ ಕೇಳಿ "ಓ, ಕಳಲಣ್ಣನ ಕುಂಞಿಯಾ?"ಂತ ಹೇಳಿ "ಇಂದ, ಹಂಞ ಅವ್ಲಕ್ಕಿ ತೆಕ"ಂತ ಒಂದ್ ಮುಂಡಿ ಅವ್ಲಕ್ಕಿ ಕೊಟ್ಟತ್. ಮತ್ತೆ ಮನೆವು ಯಾರ್ ಬಾತ್ಲೆನಾ? ಎಲ್ಲ ಹೇಂಗೊಳೊ"ಂತೆಲ್ಲ ಇಚಾರ್ಸಿತ್. ಮಾಚುನ ಹೊಟ್ಟೆ ಗಟ್ಟಿ ಆತ್. ಅವರ ಹಕ್ಕಲೆನೇ ನೀರ್‌ನ ಸಾ ಕೇಳಿ ಒಂದ್ ಮುಕ್ಕಿ ಕುಡ್ದ್ "ಬನ್ನೆ"ಂತ ಹೇಳಿ ಹೊರ್ಡಿಕಾಕನ ಗಂಜಿ ಮಾಡ್ತಿದ್ದ ಅಜ್ಜಿ "ಹಸ್ದರೆ ಬಾ, ತೆಳಿ ಗಂಜಿ ಕುಡ್ದ್ ಹೋಕ್"ಂತ ಸಾ ಹೇಳ್ತ್. "ಇಲ್ಲೆ, ಬಾದ್ಲೆ, ನನ್ನ ಹೊಟ್ಟೆ ತುಂಬಿತ್"ಂತ ಹೇಳಿ ಮತ್ತೆ ತಿರ್ಗಿಕೆ ಹೋತ್.

ಅಲ್ಲೇ ಒಂದ್ ಅಂಗಡಿ ಹಕ್ಕಲೆ ನಾರು ಸಿಕ್ಕಿತ್. ಅವನ ಕೈಲಿದ್ದ ಚೀಲಲಿ ಸುಮಾರ್ ಸಾಮಾನ್‌ಗ ಇದ್ದೊ. ಮಾಚು ಕೇಳ್ತ್ "ಎಂತ ಮಾರಾಯ, ಇಷ್ಟ್ ಸಾಮಾನ್‌ಗೆ ನಿಂಗೆ ದುಡ್ಡು ಎಲ್ಲಿಂದ?"

"ಬೀಜ ಮಾರ್ದ ದುಡ್ಡು ಹಾಂಗೆ ಇಸಿಕಂಡಿದ್ದೆ."ಂತ ಹೇಳಿ, ಅವನ ಬುದ್ಧಿವಂತಿಕೆಗೆ ಅವನೇ ನೆಗಾಡ್ತ್.

ಮಾಚು ಮನ್ಸ್‌ಲೇ "ಛೇ, ನಾ ಎಂತ ಹೆಡ್ಡ್ ಮಾಡಿಕಂಡೆ. ಒಂದ್ ಮೋಣಿ ಸರ ತೆಗ್ಯವಷ್ಟು ಸಾ ದುಡ್ಡು ಇಸಿ ಕಂಡತ್ಲಲೇ. ಬರ್ವ ವೊರ್ಸ ಹಂಞ ಕಾಸ್ ಮಾಡಿಕಂಡೇ ಬನ್ನೆ"ಂತ ನೆನ್ಸಿತ್. ಆ ಮೇಲೆ "ಹೌದ್ಯಾ, ನೀ ಇಲ್ಲಿ ತಿರ್ಗಿಕಂಡ್ ಇರಂವನಾ? ಅಲ್ಲಾ, ದಟಿಗೆಗೆ ಬಾವವನಾ?"ಂತ ಕೇಳ್ತ್.

"ಈಗ ಹೋಗಿ ಹಿಂಬೊತು ಬನ್ನೆ"

"ಹಾಂಗಾರೆ ಬಾ, ಒಟ್ಟಿಗೆ ಪೋಯಿ"

ಅದರ ಹಕ್ಕಲೆ ಹಣ ಇದ್ದಿದ್ದರೆ ಅದೂ ಹಿಂಬೊತ್ ಬಾತಿತ್ತ್. ಇನ್ನ್ ಒಂದ್ ನಾಲ್ಕ್ ದಿನ ಕಳ್ದ್, ಅವ್ವ ಮೋಣ್ಣ್‌ನ ಮಡಿಕೆ,ಕುಡಿಕೆ, ಅಳಗೆ ಎಲ್ಲ ತೆಕೊಂಡ್ ಹೋಕೆ ಬಂದದೆಲ್ಲಾ. ಆಗ ಅದರೊಟ್ಟಿಗೆ ಬಂದರೆ ಆತ್‌ಂತ ನೆನ್ಸಿತ್.

ಅಂದ್ ಹಿಂಬೊತ್ ಜಾತ್ರೆಗೆ ಹೋದ ನಾರು, ಮೊರ್ದಿನ ಬೊಳ್ಪಿಗೆ ಬಾತ್. "ತೇರ್ ಮುಗಿಯಕನ ಹೊತ್ತಾತಾ?"ಂತ ಕೇಳ್ದಕ್ಕೆ "ತೇರ್ ಎಳಿಯಕನ ಮುಟ್ಟ ಅಲ್ಲಿ ಇದ್ದೆ. ಮತ್ತೆ ಮೆಲ್ಲ ಟೆಂಟ್ ಒಳಗೆ ಹುಕ್ಕು ಆಟನೋಡಿ ಬಂದೆ"ಂತ ಹೇಳಿ ತನ್ನ ಮಿಸ್ಮತಿಕೆಗೆ ತಾನೇ ನೆಗಾಡ್ತ್. ❐

ಹಾಳೆ 11
ಗಾಂಧಿ ಬಂದೊ

ದೇಶಕ್ಕೆ ಸೊತಂತ್ರ ಬಾಕೆ ಹಿಂದೆನ ಸಂಗತಿ. ಮಾಚುಗೆ ಸುಮಾರ್ ಹನ್ನೆರ್ಡ್ ಹದಿಮೂರು ವೊರ್ಸ ಪ್ರಾಯ ಆಗಿರ್ದು. ಹುಗ್ಗವ್ವ ಎಲ್ಲೋ ಯಾರೋ ಹೇಳ್‌ದರ ಕೇಳಿ ಹೇಳ್ತಿತ್ತ್. "ಗಾಂಧಿಂತ ಹೇಳ್ವವು ಒಳೊಗಡ. ಅವು ಹೇಳ್ತಾ ಒಳೊಗಡ– ಏನ್‌ಂತೇಳ್ರೆ "ನಾವು ಕೆಳ ಜಾತಿಯವರ ಮೇಲೆ ತಾಕೆ ನೋಡೋಕು. ಅವರ, ಮೇಲ್ಜಾತಿಯವರ ಸಮಸಮಕ್ಕೆ ತರೋಕು. ಇಂದ್ ಮುಟ್ಟ ನಾವು ಅವರ ಪ್ರಾಣಿಗಳಿಗಿಂತ ಕೀಳಾಗಿ ನೋಡ್ದೊ. ಅದ್ ನಮ್ಮ ದೇಸಕ್ಕೆ ಮೆತ್ತಿದ ಮೊ್ಸಿ. ಆ ಮೊ್ಸಿನ ತೆಗಿಯದೆ ನಮ್ಮ ದೇಸ ಉದ್ಧಾರ ಆದ್ಲೆ. ನಾವೂ ಅವು ಒಂದೇ ದೇವ್ರ ಮಕ್ಕ. ಇಂದ್ ಮುಟ್ಟ ನಮ್ಮಂದ ಅವ್ಕಾದ ಅನ್ಯಾಯಕ್ಕೆ ನಾವು ಪಚ್ಚಾತ್ತಾಪ ಪಟ್ಟ್, ಇನ್ನ್ ಮುಂದೆಗೆ ಅವರ ಸಾ ದೇಸ್ತಾನ, ಸಾಲೆಗೆ, ಎಲ್ಲಾ ಜನ ಸೇರ್ವಲ್ಲಿಗೆ ಬರ್ವ ಹಾಂಗೆ ಮಾಡಿ, ನಮ್ಮೊಟ್ಟಿಗೆ ಅವರ ಸೇರ್ಸಿಕಣೊಕು"ಂತ ಹೇಳ್ವೆಗಡ. ಅದರ ಕೇಳಿ ಮಾಚು "ಓ ದೇವರೇ, ಅಂತ ದಿನ ಬೇಗ ಬರ್‌ವ ಹಾಂಗೆ ಮಾಡಪ್ಪ"ಂತ ಹೇಳ್ತ್.

ದಲಿತರ ಉದ್ಧಾರದ ಉದ್ದೇಶ ಇಸಿಕಂಡ ಗಾಂಧಿ, ಸುಳ್ಯಕ್ಕೂ ಬಂದವೆಂತ ಸುದ್ದಿ ಹಬ್ಬಿತ್. ಆ ಸುದ್ದಿನ ದಟಿಗೆಗಳಿಗೆ ತಲ್ಪಿಸಿದ್ದ್ ಸಾಲೆಗೆ ಹೋವ ಮಿಣ್ಕಿನೇ. ಊರುನ ದೊಡ್ಡ ದೊಡ್ಡ ಜೆನಂಗ ಸಾಲೆಗೆ ಬಂದ್, ಗಾಂಧಿ ಸುಳ್ಯಕ್ಕೆ ಬಾವ ಸಂಗತಿನ ಮಾತಾಡಿಕಂಡ್ ಇದ್ದೊಂತ ಅದ್ ಹೇಳ್ತ್. ಇನ್ನೊಂದ್ ದಿನ ಮಾಸ್ಟ್ರ ಸಾಲೆ ಮಕ್ಕಳಿಗೆ ಗಾಂಧಿ ಸುಳ್ಯಕ್ಕೆ ಬಾವ ಸಂಗತಿನ ಹೇಳ್ದೊ. ಇನ್ನೂ ನಾಕ್ ದಿನ ಕಳ್ದ್, ಕೊಂಕಣಿ ಮಾಸ್ಟ್ರ ಸಾಲೆ ಮಕ್ಕಳ ಎಲ್ಲರ ಇಜ್ಜೇಲ್‌ಲಿ ನಿಲ್ಸಿ "ನೀವೀಗ ಮಕ್ಕ. ನಮ್ಮ ದೇಶಲಿ ಎಂತೆಲ್ಲ ಆದೆಂತ ತಿಳ್ಕೊಂಬ ಪ್ರಾಯ ನಿಮ್ಮದಲ್ಲ. ಆದರೂ ಕಲೆವ ಮಕ್ಕಳಾದ ನೀವು ಅದರ ತಿಳ್ದಿರೊಕು. ಈಗ ನಮ್ಮ, ಇಂಗ್ಲಿಷರ್ ಆಳ್ತಾ ಒಳೊ. ನಮ್ಮ ದೇಶದ ಎಲ್ಲಾ ಸಂಪತ್ತ್‌ಗಳ ಅವರ ದೇಶಕ್ಕೆ ತೆಕಂಡ್ ಹೋಗ್ತಾ ಒಳೊ. ನಮ್ಮ ಜೆನಗಳಿಗೆ ಏನ್ ಮಾಡೋಕೋ ಅದರ ಮಾಡದೆ ಅವರ ಅನುಕೂಲಕ್ಕೆ ಏನ್ ಮಾಡೋಕೋ ಅದರ ಮಾಡ್ವೆ. ನಮ್ಮ ದೇಶಲಿ ಜಾತಿಂತ ಹೇಳ್ವಂತದ್ದ್ ಇದ್ದದ್ರಿಂದಾಗಿ ಕೆಲವು ಜನ ದುಡ್ಡಿಕೆ, ಮತ್ತೆ ತುಂಬ ಜನ ದುಡ್ಯಕೆ ಇದ್ದವುಂತ ಆಗಿ ಬುಟ್ಟುಟು. ಇದ್ ಜನಗಳ ನೊ್ಡುಲಿ ದೊಡ್ಡ ಒಂದ್ ಕಂದಕನ ಹಾಂಗೆ ಆಗಿ ಅತ್ತನವು ಅತ್ತ, ಇತ್ತನವು ಇತ್ತಂತ ಹೇಳ್ವ ಹಾಂಗೆ ಆಗಿ ಹೋಗುಟು. ನಾವು ಆ ಕಂದಕನ ಮುಚ್ಚಿ ಎಲ್ಲೊ್ವೂ ಒಟ್ಟಿಗೆ ಒಂದೇ ರೀತಿಲಿ ಬೊ್ದ್ಕೊಕುಂತ ಹೇಳ್ವಂತದ್ ನಮ್ಮ ಮುಂದಾಳು ಸ್ವಾತಂತ್ರ್ಯ ಹೋರಾಟಗಾರ ಮಹಾತ್ಮಾ ಗಾಂಧಿ ಅವರ ಆಸೆ. ಅವು ಬರ್ವ ವಾರ ನಮ್ಮ ಊರಿಗೆ ಬಂದವೆ. ಅವು ಬಾಕನ ಜಾತಿಭೇದ ಇಲ್ಲದೆ ಎಲ್ಲವೂ ಬರೋಕು. ಸಾರ್ವಜನಿಕ ಸಭೆ ಉಟ್ಟು, ಸಾಮೂಹಿಕ ಊಟ ಸಾ ಉಟ್ಟು, ಎಲ್ಲೊ್ವೂ ಒಟ್ಟಿಗೇ ಉಂಬೊ್ದು. ನಾ ಈಗ ಹೇಳ್ದರ ನೀವೆಲ್ಲಾ ನಿಮ್ಮ ನಿಮ್ಮ ಮನೆಲಿ ಹೇಳಿ, ನಾಳ್ದ್ ಗಾಂಧಿ ಬಾಕನ ಮನೆವರ ಕರ್ಕಂಡ್ ಬರೋಕು"ಂತ ಹೇಳ್ದೊ.

ಮಿಣ್ಕೆ ಸಾಲೆಂದ ಬಂದ್, ಎಲ್ಲರ ದಟಿಗೆಗೆ ಹೋಗಿ ಇದರ ಎಲ್ಲ ಹೇಳ್ತ್. ಇದರ ಕೇಳಿ ಕೆಲೊ್ವು "ನೀ ಎಂತ ಹೇಳ್ದು? ಇದೆಲ್ಲ ಆವ ಹೋವ ಕತೆನಾ? ಎಲ್ಲಾ ಜಾತಿಯೊ್ವು ಒಟ್ಟಿಗೆ ಉಂಬೊ್ದು ಉಟ್ಟಾ?"ಂತ ಹೇಳ್ದೊ. ಹುಗ್ಗವ್ವ ಮಾತ್ರ "ಹೌದ ಕುಂಞಿ, ಎಲ್ಲಾ ಜಾತ್ಯವು ಅಲ್ಲಿ ಸೇರ್ವೆನಾ? ಹಾಂಗಾರೆ ನಾವುಗೆ ಇನ್ನ್ ಮುಂದೆಗೆ ಒಳ್ಳೆ ದಿನಗ ಬಂದೊಂತ ಅರ್ತ". ಹೀಂಗೆ ಹೇಳಿ ದೊಡ್ಡ ಒಂದ್ ಉಸ್ರ್ ಎಳ್ದ್, ಅದರ ಹಿಂದೆನ ದಿನಗಳ ಕಷ್ಟನ ನೆನ್ದ್ "ಅಬ್ಬಾ, ಆ ಮೇಲ್ಜಾತಿಯೊ್ವು ನಮ್ಮ ಬೊಡಿ ತೆಗ್ದದಲ್ಲ, ಜೂವನೇ ತೆಗ್ದಿದ್ದೊ. ಅವರ ಇಜ್ಜೆಲ್‌ಲಿ ನಿತ್ತರೆ ಮೆನಿ ಅಲ್ಲಿಗೆ ಸೆಗ್ಣಿ ನೀರ್ ಹಾಕಕಾಗಿತ್ತ್. ತಿಂಬಕೆ ಕೊಡುದಾದರೆ ಒಂದ್ ಮಾರ್ ಎತ್ತರಂದ ಹಾಕುದು. ಅಲ್ಲರೆ ದೂರಲಿ ಎಲ್ಲೋ ಇಸಿ "ತೆಕ"ಂತ ಹೇಳ್ತಿದ್ದೊ. ಅವು ಅಲ್ಲಿಂದ ಹೋದ ಮೇಲೆ ತೆಕಣೊಕು. ಯಾಕೆಂತೇಳ್ರೆ ನಮ್ಮ ಗಾಳಿ ಅವ್ಕೆ ಬೀಸಿರೆ ಅಸುದ್ದ ಆದೆಂತ. ಇಂತದರೆಲ್ಲಾ ಹೇಳಿಕೆ ಹೋದರೆ ಏನೇನೋ ಉಟ್ಟು. ಅವು ಅಂದ್ ನಾವುಗೆ ಕೊಟ್ಟ ಬಂಜನ ನೆನ್ಸಿರೆ ನೆತ್ತರ್ ಕೊದ್ದದೆ. ಯಾರೇ ಆಗಲಿ, ನಮ್ಮ ಗೆತಿ ಇಲ್ಲದ ಬೊ್ದ್ಕನ ಉದ್ದಾರ ಮಾಡಲಿ. ನಮ್ಮ ಕಾಲ ಹೇಂಗಾರ್ ಕಳ್ತೆ. ನೀವಾದರೂ ಪೊರ್ಲುಲಿ ಬೊದ್ಕಿ." ಹೀಂಗೆ ಹೇಳಿಕನ ಅದರ ಸೊರ ಗರಗರ ಆತ್. ಕಣ್ಣೀರ್ ಬಾತ್. ಅದರ ಮನ್ಸ್, ಬೊ್ದ್ಕ ಹೆಂಗೆ ಹಿಂಡಿ ಹೋಗಿರ್ದುಂತ ಒಳ್ದವ್ಕೆ ಬೇಜಾರ್ ಆತ್.

ಅಂದಿಂದ ಮಿಣ್ಕೆ ಗಾಂಧಿದ್ದ್ ಒಂದೊಂದೇ ಸುದ್ದಿ ಹೇಳ್ತಿತ್ತ್.

"ಇಂಗ್ಲಿಸರ ಸೋಲ್ಸಿಕೆ ಗಾಂಧಿ ಸುಮಾರ್ ಸರ್ತಿ ಉಪಾಸ ಮಾಡ್ಯೊಳಗಡ. ಅವು ಸುಮಾರ್ ಸಲ ಸೆರೆಮನೆಗೆ ಹೋಗ್ಯೊಳೊ್ಗಡ. ಗಾಂಧಿ ಬಾಕನ ಒಳ್ಳ ರಾಗ ಇದ್ದೊವು ದೇಶ ಭಕ್ತಿ ಹಾಡ್ ಹೇಳೊ್ಕಡ. ಅವು ಬಾವ ದಿನ ಎಲ್ಲೊ್ವು ಮಡಿ ಬಟ್ಟೆ ಹಾಕ್ಕಂಡ್ ಬರೊಕಡ." ಹೀಂಗೆ.

ದೊಡ್ಡ ಮಕ್ಕಳಿಗೆ ಹೇಳಿಕೊಡ್ತಿದ್ದ ಹಾಡ್‌ಗಳ ಕೇಳಿ ಕೇಳಿ ಮಿಣ್ಕಿಗೆ ಸಾ ಆ ಹಾಡ್‌ಗ ಬಾಯಿಗೆ ಬರ್ತಿದ್ದೊ.

ಅದ್ ನೆರೆಕರೆ ಮಕ್ಕಳಿಗೆ ಆ ಹಾಡ್‌ಗಳ ಹೇಳಿ ಕೊಡ್ತಿತ್ತ್.

ಮಿಣ್ಕೆ ಹೇಳಿ ಕೊಟ್ಟ ಕೆಲೊ್ವು ಹಾಡ್‌ಗಳ ಒಂದೊಂದ್ ನುಡಿಗ ಹೀಂಗಿದ್ದೊ.

1. "ಭಾರತ್ ಮಾ ತೇರಿ ಜಯ ತೇರಿ ಜಯ ಹೋ
2. ಮಾತಾ ದೇಶ ಹಿತ ಘನ ಸೇವನವೋ
   ಸಖನೇ ಸಕಲಿಸಿರುವನೇ ಪಡೆಯೋ ಸುಖ
   ಹಾಡೀ ಹಾಡೀ ಕಿತ್ತೆಸೆವ ಪರ ಶೃಂಖಲೆಯಾ
   ಕೂಡೀ ಕೂಡೀ ಸ್ವತಂತ್ರ ಸ್ವರಾಜ್ಯವನು।
3. ಏಕೆ ಧರಿಸುವೆ ಸಾಕು ಬಿಡು ಬಿಡು
   ಪರದೇಶೀ ಜನರ ವಸ್ತ್ರವಾ
   ಹಾಕು ಬೆಂಕಿಲಿ ಉರಿಲಿ ಧಗಧಗ
   ಧರಿಸು ಖಾದಿ ಪವಿತ್ರವಾ ।

ಇದಲ್ಲದೆ ಸಂಸ್ಕೃತಂತ ಒಂದ್ ಬಾಸೆ ಉಟ್ಟುಗಡ. ಅದರ್ಲಿ "ಅಹಿಂಸಾ ಸತ್ಯ ಅಸ್ತೇಯ.."

ಹೀಂಗೆ ಪದ್ಯ ಉಟ್ಟು, ಅದ್ ನಂಗೆ ಬಾದ್‌ಲ್ಲಂತ ಹೇಳ್ತ್.

ಗಾಂಧಿ ಯಾವ ದಿನ ಬಂದವೆಂತ ಗೊತ್ತಾತ್. ಊರ್‌ನ ಮುಖ್ಯಸ್ಥರ್ ಸಭೆ ಸೇರಿ ಎಲ್ಲಿ ಏನ್, ಹೇಂಗೆಂತ ಮಾತಾಡ್ದೊ. ಮೊಗರ್ಪಣೆ ಸಂಕದ ಹಕ್ಕಲೆ, ಪಳ್ಳಿನ ಎದ್ರ್ ಗದ್ದೆಲಿ ಸಭೆ ಸೇರುದೂಂತ ಆತ್. ಮೊರ್ದಿನಂದಳೇ ನೆರೆಕರೆ ಊರ್‌ಗಳಲಿ ಡಂಗುರ ಹೊಡ್ಸಿಕೆ ಸುರು ಮಾಡ್ದೊ.

"ಕೇಳ್ರಪ್ಪೋ ಕೇಳಿ, ಇಂಥ ದಿನ ಮಹಾತ್ಮಾ ಗಾಂಧೀಜಿ ನಮ್ಮ ಊರಿಗೆ ಬಂದವೆ. ಬಂದೊರ್‌ವು ಮೊಗರ್ಪಣೆ ಸಂಕದ ಹಕ್ಕಲೆನ ಗದ್ದೆಲಿ ಭಾಷಣ ಮಾಡ್ವೆ. ಜಾತಿ ಭೇದ ಇಲ್ಲದೆ ಊರ್‌ನ ಎಲ್ಲೊರ್‌ವು ಸಭೆಗೆ ಬರೋಕು. ಎಲ್ಲೊರ್‌ವ್ಕೆ ಒಟ್ಟಿಗೆ ಊಟ. ಯಾರ್ ತೊರ್‌ಪ್ಪಿಸಿಕಾಗದ್."

ಅಂದ್‌ನ ಆ ಕಾಲ ಭಾರಿ ದರಿದ್ರದ್. ಎಲ್ಲಾರ್ ಯುದ್ದ ಮನಿ ಆತಿತ್ತೋ, ಅಲ್ಲಾ, ಮಳೆ ಇಲ್ಲದೆ ಬರನೋ, ಎಂತಾಗಿತ್ತೋ ಏನೋ –ಪಾಪದೊವ್ಕೆ ಉಂಬಕೆ ಗೆತಿ ಇಲ್ಲದ್ದಾಂಗೆ ಆಗಿತ್ತ್. ಅವು ಮುಂಡಿ ಕಟ್ಟಿ ಉಣದೆ ಯಾವ ಕಾಲ ಆಗಿತ್ತೋ? ಕಳಲನವರ ಮನೆಲಿ ಸೂರಪ್ಪ ಗೌಡ್ರ ಮನೆದ್ದ್ ಎರಡ್ ಮರ್‌ಗಿಲ್ ಗಂಜಿ ಎರ್ಡ್ ಹೊತ್ತಿಗೆ! ಅದ್ ಇಲ್ಲದ ದಿನಲಿ ಎಂಟ್ ಮುಂಡಿ{ಎರ್ಡ್ ಪಾವು} ಅಕ್ಕಿ ಹಾಕಿ ಅದರ ಒಳ್ಳ ಬೇಸಿ, ಪಾಯ್ಸದ ಹಾಂಗೆ ಮಾಡ್ರೆ ಅದ್ ಎರ್ಡ್ ಹೊತ್ತಿಗೆ! ಗಂಜಿ ಉಂಬಕೆ{ಕುಡ್ಯಕೆ} ಮುಂದೆ ಬೇಯ್ಸಿದ ನರೆ, ಈಯರ್, ಗೆಣ್ಸ್ ಇಂತದ್ದ್. ಹಲ್ಸಿನ ಹಣ್ಣಿನ ಕಾಲಲಿ ಅದ್, ಅದ್ ತಿಂದ್ ಹೊಟ್ಟೆ ಹಂಞ ತುಂಬಿದ ಮೇಲೆ ಪಾಯಸದ ಹಾಂಗಿದ್ದ ಬೇಸಿದ ಗಂಜಿ!

ಮಳ್ಗಾಲಲಿ ಕೆಲೊರ್‌ವು ಮನೆಲಿ ಸೊಪ್ಪು ಸೊಯಿದೆ ಮಾಡ್ದಕ್ಕೆ ದುಡ್ಡಿನ ಬದಲಿಗೆ ಹಲ್ಸಿನ ಹಣ್ಣ್, ಮತ್ತೆ ಹಲ್ಸಿನೆಕ್ಕಿ ಬೇಕಾದಷ್ಟ್ ಕೊಡ್ತಿದ್ದೊ. ಹುಗ್ಗವ್ವ ಹಲ್ಸ್‌ನೆಕ್ಕಿನ ಅಲ್ಲಿಂದ ಇಲ್ಲಿಂದ ಬೇಡಿಕಂಡ್ ಬಂದ್, ಅದಕ್ಕೆ ಮಣ್ಣ್ ಮೆತ್ತಿ, ಬೆಚ್ಚಂಗೆ ಇಸಿಕಂಬತಿತ್ತ್– ಏನೂ ತಿಂಬಕೆ ಇಲ್ಲದ ಕಾಲಲಿ ಬೇಸಿ ತಿಂಬಕೆ ಆದೇಂತ. ಹಾಂಗೆ ಹಲ್ಸಿನ ತೋಳೆಗೆ ಉಪ್ಪು ಹಾಕಿ ಕುಜಿಲಿಲಿ ತುಂಬಿಸಿ ಇಸ್ತಿತ್ತ್. ಒಳ್ಳ ಜಾತಿ ಮಾಯೆನ ಕಾಯಿ, ಮಾಯೆನ ಹಣ್ಣ್‌ನ ಸಾ ಉಪ್ಪು ನೀರ್ಲಿ ಹಾಕಿ ಇಸಿ, ಗೈಪಿಗೆ ಏನೂ ಇಲ್ಲದ ಕಾಲಲಿ ಉಪ್ಪು ಮೆಣ್ಸ್ ಮಾಡ್ತಿತ್ತ್. ಮಾಯೆನ ಕಾಯಿ, ಮಾಯೆನ ಹಣ್ಣ್ ಹಾಳಾಗದ್ದಂಗೆ ಕೊದ್ದ ನೀರ್‌ನ ಚಣ್ಸಿ ಹಂಞ ಹೆಚ್ಚ್ ಉಪ್ಪು ಹಾಕಿ ಇಸಿರೆ ಎರ್ಡ್ ಮೂರ್ ತಿಂಗ ಲಾಯ್ಕೇ ಇರ್ತಿತ್ತ್. ಹೊಟ್ಟೆ ಹಸ್ಯಕನ ಮಕ್ಕ ಉಪ್ಪುಲಿ ಹಾಕಿದ ಮಾಯೆನ ಕಾಯಿ ಅಲ್ಲರೆ ಹಣ್ಣ್‌ನ ತೊಳ್ಡ್ ತಿಂಬೊತಿದ್ದೊ.

ಗಾಂಧಿ ಬಾವ ದಿನ ಎಲ್ಲೊರ್‌ವ್ಕೆ ಊಟಂತ ಕೇಳಿ ಹುಗ್ಗವ್ವ "ಹಾಂಗಾರೆ ನಾವೆಲ್ಲ ಮೋಯಿ, ಊಟನೂ ಆತ್, ಗಾಂಧಿನವರ ನೋಡ್ದ ಹಾಂಗೂ ಆತ್"ಂತ ಹೇಳ್ತ್. ಒಂದ್ ಹೊತ್ತಾದರೂ ಹೊಟ್ಟೆ ತುಂಬ ಉಣಕಲೆಂತೇಳ್ವ ಕೊದಿಗೆ ಎಲ್ಲವೂ "ಹೌದ್, ಮೋಯಿ"ಂತ ಹೇಳ್ದೊ. ಎಷ್ಟೋ ಜನ ಸೇರ್‌ವೆಂತ ಹೇಳ್ಕನ ಇವು ಮನಾರ ಬೇಕೇ? ಕೊರಮರ ಹಾಂಗೆ ಇರಿಕಾಗದಲೇ? ಅದಿಕೆ ಅಂದ್‌ಂದಳೇ ಮನಾರ ಆಕೆ ಸುರು ಆತ್! ಗಾಂಧಿ ಬಾವ ಹಿಂದೆನ ದಿನ ಕಳಲನ ಕುಟುಂಬ ಮೀಯಕೆ ಮತ್ತೆ ಬಟ್ಟೆ ಒಗ್ಯಕೆಂತ ಪಯಸ್ವಿನಿ ಹಳ್ಳಕ್ಕೆ ಹೋತ್. ಮೈಗೆ ಬಟ್ಟೆಗೆಂತೇಳಿ ಒಂದಿಡೀ ಲೈಪಾಯಿ {ಲೈಫ್ ಬಾಯ್} ಸಾಬೂನ್ ಕರ್ಚಾತ್. ಒಂದ್ ಗಳಿಗೆ ಹಳ್ಳದ ನೀರಿಗೆ ಸಾ ಅದರ್ದೇ ಪೊರ್‌ಮ್ಮಳ!

ಹುಟ್ಟಿದ ಮೇಲೆ ಮೀತೇ ಇಲ್ಲೆನೋಂತ ಹೇಳ್ವ ಹಾಂಗೆ ಮೈನ ಕಾಯಿ ಚೊಪ್ಪುಲಿ ತಿಕ್ಕಿ ತೊಳ್ದ್ ಮಡಿ ಆದೊ. ಆ ಕಾಲಲಿ ಗಣ್ಮಕ್ಕ ತಲೆ ಕೂದೊಲ್ ತೆಗ್ಸುವ ಕ್ರಮ ಇತ್ತ್‌ಲೆ. ಹಾಂಗಾಗಿ ಕಳಲ ಮತ್ತೆ ನಾರುನ ತಲೆ ಕೂದೊಲ್ ಬೆನ್ನಿಗೆ ಮುಟ್ಟ್‌ತಿತ್ತ್. ಒಣ್‌ಂಗಿದ ಮೇಲೆ ಅದರ ಯಕ್ಷಗಾನ ಆಟದ ಗಣ್ಮಕ್ಕ ಕಟ್ಟುವ ಹಾಂಗೆ ಕಟ್ಟಿದೊ. ತಲೆ ಮೀದ್ ಒಣ್‌ಂಗಿಕೆಂತ ಬುಟ್ಟ ಮಾಚುನ ಮಾರುದ್ದದ ಕೂದೊಲ್ ಗಾಳಿಗೆ ಬರಬರಾಂತ ಹಾರುದರ ನೋಡುದೇ ಒಂದ್ ಪೊರ್ಲು! ಎಲ್ಲೋವು ಮೀದ್, ಕೂದೊಲ್ ಒಣ್‌ಂಗಿದ ಮೇಲೆ, ಒಣ್‌ಂಗಿದ ಬಟ್ಟೆಗಳ ಗಂಟ್ ಕಟ್ಟಿಕಂಡ್ ದಟಿಗೆಗೆ ಬಂದೊ. ಮಾಚು ಗುಬ್ಬಿ ಹೋದ ಅಂಗಿಗಳಿಗೆ, ರೌಕೆಗಳಿಗೆ ಬೇರೆ ಹರ್ದ್ ಹೋದ ಹಳೆ ಅಂಗಿ, ರೌಕೆಗಳ ಗುಬ್ಬಿ ತೆಗ್ದ್ ಹೊಲ್ತ್. ಹರ್ದ ಬಟ್ಟೆಗಳ, ದೊಗಳೆ ಅಂಗಿಗಳ ಅಳತೆಗೆ ಸರ್ಯಾಗಿ ಹೊಲ್ತ್. ಆ ಮೇಲೆ ಲಾಯ್ಕಲಿ ಮೊಡ್ಚಿ ತಲೆದಿಂಬು ಅಡಿಲಿ ಇಸಿತ್–ನೆರಿಗೆ ಹೋಗಲಿಂತ. ಮೊರ್ದಿನಕ್ಕೆ ಬೇಕಾದ ಇಷ್ಟೆಲ್ಲ ಅಟ್ಟಣೆ ಮಾಡಿ "ನಾಳೆ ಊರ್ನವು ನಮ್ಮ ಹೇಂಗೆ ನೋಡಿಕಂಡವೆನೋ ನೋಡೋಕು"ಂತ ಹೇಳಿಕಂಡ್ ನಿಲ್ಗಿದೊ.

ಮೊರ್ದಿನ ಹಗ್ಲ್ ದೇವ್ರು ಹೊಸ ಬೊಳ್ಪುಲಿ ಎದ್ದೊ. ಬಿಸ್ಲ್ ಕಾಸಿಕೆ ಹೊರಗೆ ಚಿಂಟೆಲಿ ಕುದ್ದ ಹುಗ್ಗವ್ವ ಬೊಚ್ಚು ಬಾಯಿನ್ ಅಗಲ್ಸಿಕಂಡ್, ಪುಳ್ಳಿಗಳೊಟ್ಟಿಗೆ ನೆಗಾಡಿಕಂಡ್ ಏನೋ ಹೇಳ್ತಿತ್ತ್. ಊರ ಹೊರಗೇ ಇರ್ವ ನಾವೂ ಊರವರ ಒಟ್ಟಿಗೇ ಸೇರಿಕಂಡ್ ಬೊದ್ಕ್‌ವ ಒಳ್ಳೆ ದಿನಗ ಗಾಂಧೀಜಿಂದಾಗಿ ಬಾದುಂತೇಳ್ವ ಒಂದ್ ಬೊಳ್ಪು ಅದರ ಕಣ್ಣ್‌ಲಿ ಹೊಳ್ಯತಿತ್ತ್. ಆ ದಿನ ಅದರ ಬೊದ್ಕ್‌ಲೇ ಒಂದ್ ಹೊಸ ದಿನನೋಂತೇಳ್ವ ಕುಸಿ ಅದರ ಮೋರೆಲಿ ಕಾಂಬತಿತ್ತ್.

ಮಾಯ್ಲು ಮಾಚುಗೆ ಅದರ ಮೊದ್ವೆ ಸೀರೆನ ಉಡಿಕೆ ಕೊಟ್ಟತ್. ಇಲ್ಲಿ ಮುಟ್ಟ ಮಾಚು ಸೀರೆ ಉಟ್ಟದ್ದೇ ಇಲ್ಲೆ. ಅದಕ್ಕೆ ಅವ್ವಂದೇ ದೊಗಳೆ ರೌಕೆ. "ಸೀರೆ ಹೇಂಗೆ ಉಡ್ದು"ಂತ ಅವ್ವನ ಕೇಳಿ, ಉಡಿಕೆ ನೋಡಿ ಅದ್ ಸೆರಿ ಆಗದೆ, ಮತ್ತೆ "ನೀನೇ ಬಾ ಉಡ್ಸು"ಂತ ಹೇಳ್ತ್. ಮಾಯ್ಲು ಹೇಂಗೋ ಉಡ್ಸಿತ್. ಸೀರೆ ಉಟ್ಟಾದ ಮೇಲೆ ಅದರ ನೆರಿನ, ಸೆರಂಗ್‌ನ ಅದೇ ಸರಿ ಮಾಡಿಕಂಡ್, ಸೆರಂಗ್‌ನ ಬೀಸಿಕಂಡ್ ಅತ್ತ ಇತ್ತ ಹೋತ್. ಸೀರೆ ಉಟ್ಟ್‌ಕೊಂಡ್ ನಡ್ಯೊದು ಬಾರಿ ಬಂಜಂತ ಹೇಳಿಕಂಡತ್. ಅವ್ವಂಗೆ "ನೀ ಸಾ ಒಳ್ಳ ಸೀರೆ ಸುತ್ತಿಕಾ"ಂತ ಹೇಳ್ತ್. ಹಿಂದನ ದಿನನೇ ಕಟ್ಟಿ ಇಸಿದ್ದ ಅಬ್ಬಂತಿಕೆ ಹೂನ ಮಾಲೆನ ತುಂಡು ಮಾಡಿ ಅವ್ವಂಗೂ, ಮಿಣ್ಕಿಗೂ ಕೊಟ್ಟ್, ಅದೂ ಮುಡ್ಕಂಡತ್. ಯಾಗೋಳು ಗೇಂಟಿ ಹಾಕ್ವ ಹುಗ್ಗವ್ವ ಅಂದ್, ಮೇಲ್ಜಾತಿ ಪ್ರಾಯದ ಹೆಂಗಸರ್ ಉಡ್ವ ಕ್ರಮಲಿ, ಯಾರೋ ಕೊಟ್ಟ ಹನ್ನೆರ್ಡ್ ಮೊಳದ ಸೀರೆನ ಉಟ್ಟತ್. ಸೆರಂಗ್ ಬಾಗ ಬುಟ್ಟ್, ಸರಿ ಅರ್ಧ ಮಡ್ಚೋಕು. ಸುರೂಗೆ ಸೆರಂಗ್ ಹಾಕಿ ಒಳ್ದ ಭಾಗನ ಬೇರೆ ಸೀರೆ ಉಡ್ವ ಹಾಂಗೆ ಎದ್ರ್‌ಗೆ ತರೋಕು. ಎದ್ರ್ ತಂದ ಬಾಗದ ಮೇಲಣ ಕೊಡಿನ ಸುಮಾರ್ ಒಂದ್ ಗೇಣಷ್ಟ್ ಒಳ ಬಾಗಕ್ಕೆ ಮೊಡ್ಚಿ, ಅದರ ಮೇಲ್ತುದಿನ ಸೀರೆನ ಎದ್ರ್‌ಗೆ ಹಾಕೋಕು. ಆ ಮೇಲೆ ಹಿಂದೆನ ಪುಡೆ ಹಂಞ ಸಡಿಲಾಗಿ ಇಳ್ಕಂಡ್ ಇರ್ವ ಸೀರೆನ ಮೈಗೆ ಗಟ್ಟಿಯಾಗುವ ಹಾಂಗೆ ಎದ್ರ್ ಎಳ್ಕಂಡ್ ಕಂಕ್‌ಣೆಕೆ ಅಡಿಗಾಗಿ ತಂದ್, ಅಲ್ಲೇ ಬೆನ್ನ್‌ನ ಪುಡೆಲಿ ಆ ಕೊಡಿನ ಸೆಕ್ಕಿಸೋಕು. ಎದ್ರ್ ಗೇಣಷ್ಟ್ ಬುಟ್ಟ ಸೀರೆ

ಕೊಡಿನ ಹೊಕ್ಕುಳ ಹಕ್ಕಲೆ ಸೆಕ್ಕಸಿರೆ ಅದ್ ಚೀಲದ ಹಾಂಗೆ ಆದೆ. ಎಲಡಿಕೆ, ಹಣ, ಸಣ್ಣ ಸಾಮಾನ್‌ಗಳ ಅದರ್ಲಿ ತುಂಬ್‌ಸಕ್. ಅದಕ್ಕೆ ಮೊಟ್ಟೆಂತ ಹೇಳ್ವೆ { ಗಾದೆ-ಅತ್ತೆನ ಮಾತ್ ಕೇಳ್ಕನ ಮೊಟ್ಟೆಲಿ ಸೆಕೆ ಎದ್ದದೆ} ಪ್ರಾಯದವು ಈ ತರ ಸೀರೆ ಉಡಿಕನ ಲಂಗ ಹಾಕಾಟ ಇಲ್ಲೆ.

ಹುಗ್ಗವ್ವ ಸೆರಂಗ್‌ನ ಮೇಲೆ ಒಂದ್ ಬಣ್ಣ ಮಾಸಿದ ಬಿಳಿ ಬಟ್ಟೆನ ಹೊದ್ದ್‌ಕಂಡತ್. ಕಳಲ ಮೊಡ್ವೆ ಪಂಚೆನ ಉಟ್ಟ್‌ಕಂಡ್ ಅದರ ಮೇಲೆ, ತುಂಡ್ ಕೈನ ಗಂಜಿಪ್ರಾಕ್ ಹಾಕ್ಕಂಡತ್. ತಲೆಕೂದಲ್‌ನ ಕೈಲೇ ಸರಿ ಮಾಡಿಕಂಡ್ ಹಿಂದೆ ಗಂಟ್ ಹಾಕಿತ್. ನಾರು ನಾ ಯಾರಿಗೂ ಕಮ್ಮಿ ಇಲ್ಲೆಂತ ಹೇಳ್ವ ಹಾಂಗೆ ಅವನೇ ದುಡ್ಡ್ ಕೊಟ್ಟ್ ತೆಕಂಡ ಕಳಕಳದ ಅಂಗಿ ಹಾಕ್ಕಂಡತ್.

ಇಷ್ಟ್ ಗೌಜಿಲಿ ಕಳಲನ ಕುಟುಂಬ ಇಲ್ಲಿ ಮುಟ್ಟ ಎಲ್ಲಿಗೂ ಹೊರ್ಟವೇ ಅಲ್ಲ. ಗಾಂಧಿ ಬಂದವೆಂತನೊ, ಮೇಲ್ಜಾತಿಯವು ಕೆಳ ಜಾತಿಯವರ ಹೇಂಗೆ ನೋಡಿಕಂಡವೆಂತನೊ, ಅಲ್ಲ, ಹೊಟ್ಟೆ ತುಂಬ ಉಂಬಕೆ ಸಿಕ್ಕಿದೆನೋಂತ ಹೇಳ್ವ ಕೊದಿಗೋ-ಒಟ್ಟಾರೆ ಇಂಥದ್ದೇಂತ ಹೇಳಿಕಾಗದ ಒಂದ್ ಗೊಂದಲದ ಮನ್ಸ್‌ಲಿ, ಗೌಜಿಲೇ ಅವು ಹೊರ್‍ಟೊ

ಮಡ್ಕೇರಿಂದ ಪುತ್ತೂರಿಗೆ ಹೋವ ದಾರಿ. ಸುಳ್ಯ ಪೇಟೆ ಕಳ್ದ್ ಹಂಞ ದೂರಲಿ ಮೊಗರ್ಪಣೆ ಸಂಕ ಉಟ್ಟು. ಅದ್ ಹಳೆಗೇಟಿನ ಹಕ್ಕಲೆನೇ. ಸಂಕ ಕಳ್ದ ಹಾಂಗೆ ಎಡ ಪುಡೆಗೆ ಪಳ್ಳಿ. ಬಲ ಪುಡೆಗೆ ಗದ್ದೆ ಅಡ್ಕ. ಬಾರಿ ದೊಡ್ಡ ಗದ್ದೆ ಏನಲ್ಲ. ಹೆಚ್ಚ್‌ಂತೇಳ್ರೆ ಮುನ್ನೂರು ನಾನ್ನೂರು ಜನ ನಿಲ್ಲಕ್ಕ್. ಕಳಲನವು ಬಂದ್ ನೋಡ್ವೆ ಗದ್ದೆ ತುಂಬ ಜೆನನೇ. ಸುಳ್ಯ ಜಾತ್ರೆನ ನೆಂಪಾತ್. ಹಾಂಗೆ ಇನ್ನ್ ಸಾ ಜೆನ ಬರ್‍ತಾ ಒಳೊ. ಇವ್ಕೆ ಎಲ್ಲಿ ನಿಲ್ಲೊಕು, ಎಲ್ಲಿ ಕುದ್ರೊಕುಂತ ಹೇಳಿಕಾಗದ ಕತೆ. ಆ ಜಾತಿ ಈ ಜಾತಿಂತಲ್ಲ: ಸುಳ್ಯಲಿರ್‍ವ ಎಲ್ಲಾ ಜಾತಿಯೊಕ್‌ವು ಅಲ್ಲಿ ಒಳೊ. ಲಾಗಾಯ್ತಿಂದಳೇ ಮೂಲೆಲಿ, ಹಿಂದೆ ನಿತ್ತೇ ಗೊತ್ತಿದ್ದ ಈ ಪರವರ್, ಪಂಬದರ್, ಮೇರರ್, ಮನ್ಸರ್ ಎಲ್ಲೊವು ಅವರವರ ಜಾತಿ ಜೆನಗಳೊಟ್ಟಿಗೆ ಗುಂಪು ಕಟ್ಟಿಕಂಡ್ ನಿಂತೊಳೊ. ಸಾಲೆ ಮಕ್ಕ ಮಾತ್ರ, ಗಾಂಧಿಯೊಷ್ಕೆ ಮಾತಾಡಿಕೆಂತ ಮಾಡ್ದ ಎತ್ತರದ ಕಟ್ಟೆನ ಎದ್ರ್‌ಲಿ ಕುದ್ದೊಳೊ. ಬೆಳ್ಜಾತಿಯೊಷ್ಕೆ ಸಭೆದ್ದ್ ಜವಾಬ್ದಾರಿ. "ಥೂ, ಹೋಗತ್ತ, ದಾರಿ ಬುಡು, ಕರೆಗೆ ನಿಲ್ಲ್"ಂತ ಹೇಳ್ತಿದ್ದೊವು, ಇಂದ್ "ಬನ್ನಿ, ಬನ್ನಿ, ಅಲ್ಲಿ ಜಾಗೆ ಉಟ್ಟು, ಹಿರ್‍ಯರಿಗೆ ಜಾಗೆ ಕೊಡಿ, ಇಲ್ಲಿ ಕುದ್ರಿ"ಂತ ಹೇಳುದರ ನೋಡಿ ಇವು ದಂಗ್! ಗಾಂಧಿನ ನೋಡೋಕುಂತ ಜನ ಬರ್‍ತಾನೇ ಒಳೊ. ಆದರೂ ಸುದಾರ್ಣೆಯವು ಸಮದಾನಲೇ ನಡ್ಸ್‌ಕಂತಿದ್ದೊ. ಅಲ್ಲಿ ಒಂದರಿಂದ ಒಂದ್ ಚೋದ್ಯದ ಸಂಗತಿಗಳೇ. ಅಂತೂ ಇವು ಹೆಳ್ಕಕ್ಕ, ಇವರ ಜಾತಿಯ ಗುರ್ತದವರ ಒಟ್ಟಿಗೆ ನಿತ್ತೊ. ಕಳಲ ಮತ್ತೆ ನಾರು ಎತ್ತಲೋ ಹೋದೊ. ಎಲ್ಲೊವು ಗುಜು ಗುಜುಂತ ಮಾತಾಡ್ತಿದ್ದೊ. ಅಷ್ಟೊತ್ತಿಗೆ ಗಾಂಧಿ ಬಂದವೆಂತ ಗೊತ್ತಾಗಿ ಯಾರೋ ಒಬ್ಬ ಕಟ್ಟೆ ಮೇಲೆ ಹತ್ತಿದ್, "ಮಹಾತ್ಮಾ ಗಾಂಧಿ ಬರ್‍ತಾ ಒಳೊ, ಎಲ್ಲೊವು ಮೌನವಾಗಿ, ಶಿಸ್ತ್‌ಲಿ ಇರೋಕು"ಂತ ಹೇಳಿಕಂಡ್ ಇರಿಕನನೇ ಗಾಂಧಿ ಬಂದೊ. ಎಲ್ಲೊವು ಎದ್ದ್ ನಿತ್ತೊ. ಬಾಕನನೇ ಅವರ ನೋಡೊಕುಂತ ಜನ ಅವು ಬಾವ ದಾರಿ ಹಕ್ಕಲೆನೇ ಮುಗಿ ಬಿದ್ದೊ. ಕೆಳ ಜಾತಿಯವ್ಕೆ ಹಾಂಗೆ ಮುಂದೆ ಹೋವ ಗಡ್ಸ್ ಇಲ್ಲದಕ್ಕೆ ನಿಂತಲ್ಲಿಂದಳೇ ಕುತ್ತಿಗೆ ಎಕ್ಕ್‌ಳ್ಸಿ ಎಕ್ಕ್‌ಳ್ಸಿ ನೋಡಿಕೆ ಪ್ರೇತ್ನ ಪಟ್ಟೊ. ಬೋಳು ತಲೆ, ಮೈ ಮೇಲೆ ಒಂದ್ ಬಟ್ಟೆ ಹೊದ್ದ್‌ಕಂಡ್, ಮೊಣಕಾಲ್ಮುಟ್ಟ

ಪಂಚೆ ಉಟ್ಟ್, ಒಂದ್ ದೊಣ್ಣೆ ಊರಿಕಂಡ್ ಬೀಸ ಬೀಸ ನಡ್ಕಂಡ್ ಬಾವ, ಸಣ್ಣ ಜೀವದ ಗಾಂಧಿ. ಜನಗಳ ಮದ್ಯಲಿ ಹೌದೋ ಅಲ್ಲನೋಂತ ಕಂಡೊ. ಅದಕ್ಕಿಂತ ಹೆಚ್ಚ್ ಇವ್ಕೆ ಕಾಂಬತಿತ್ಲೆ. ಹಾಂಗೆ ಹೋದವು ಕಟ್ಟೆಲಿ ಹಾಸಿದ್ದ ಹಾಸಿಗೆ ಮೇಲೆ ಕುದ್ದೊ. ಯಾರೋ ಒಬ್ಬ ಎರ್ಡ್ ಮೂರ್ ಮಾತ್‌ಲಿ ಅವರ, ಅವರ ಒಟ್ಟಿಗೆ ಬಂದವರ ಬರಮಾಡಿಕಂತ್. ಅದಾದ ಕೂಡಲೇ ಗಾಂಧಿ ಹತ್ತ್ ಹನ್ನೆರ್ಡ್ ಮಾತ್ ಮಾತಾಡಿರ್‍ವೊ ಅವು ಏನ್ ಹೇಳ್ದೊಂತ ಇವ್ಕೆ ಅರ್ಥ ಆತ್ಲೆ. ಭಾಷಣ ಆದ ಹಾಂಗೆ ಅಲ್ಲಿಗೇ, ಅವ್ಕೆ ಒಂದ್ ಬೊಂಡ ಕೆತ್ತಿ ಅದರ ನೀರ್‌ನ ಒಂದ್ ಲೋಟಲಿ ಹೊಯ್ದ್ ಕುಡ್ಯಕೆ ಕೊಟ್ಟೊ. ಅದ್ ಕುಡ್ದ್ ಅವು ಹೊರ್‍ಟೊನೇ! ಮತ್ತೆ ಗುಜು ಗುಜು! ಗಾಂಧಿಜಿನ ಕಾಲಿಗೆ ಬಿದ್ದ್ ನಮಸ್ಕಾರ ಮಾಡೋಕುಂತ ಇದ್ದವು ಅಲ್ಲೇ ಬಾಕಿ! ಎಷ್ಟೋ ಜನ ಅವರ ಹಕ್ಕಲೆಂದ ನೋಡೊಕುಂತ ಇದ್ದವು "ಇನ್ನೊಮ್ಮೆ ಬಾಕನ ನೋಡ್ರೆ ಆತ್"ಂತ ಉಂಬಕೆ ಹೊರ್‍ಟೊ, ಅಷ್ಟೊತ್ತಿಗೆ ವೇದಿಕೆಲಿ ಒಬ್ಬ ಗಟ್ಟಿ ಸೊರಲಿ "ಊಟಕ್ಕೆ ಆಗುಟು. ಎಲ್ಲೊವು ಸಾಲ್‌ಲಿ ಬನ್ನಿ. ಊಟಕ್ಕೆ ಹಾಳೆ ಉಟ್ಟು, ಉಂಡ್ ಆಗಿ ಓ ... ಅಲ್ಲಿ ಮೂಲೆಲಿ ಇರ್‍ವ ಗುಂಡಿಲಿ ಹಾಳೆನ ಹಾಕಿ. ಜಾತಿ ಭೇದ ಇಲ್ಲದೆ ಎಲ್ಲೊವು ಸಾಲ್‌ಲಿ ಬಂದ್ ಉಣೋಕು"ಂತ ಹೇಳ್ತಾ ಇತ್ತ್. ಇವ್ಕೆ ಇದ್ ಕನ್ಸೋ, ನನ್ಸೋಂತ ಆತ್. ಆಶ್ಚರ್ಯಂದ ಸುತ್ತ ನೋಡ್ತಾ ಒಳೊ. ಕೆಳ ಜಾತಿಯೊವ್ಕೆ ಸಾಲ್‌ಲಿ ನಿಲ್ಲಿಕೆ ಧೈರ್ಯನೇ ಬಾಲ್ದೆ. ಅವೆಲ್ಲಾ ಎಂತ ಮಾಡ್ದುಂತ ಅವರ ಕೂಟದ ಒಳ್ದವರ ಮಿಕಿಮಿಕಿ ನೋಡ್ತಾ ಒಳೊ. ಮೇಲ್ಜಾತಿಯೊವೇ ಹಕ್ಕಲೆ ಬಂದ್ "ಹೋಗಿ, ಹೋಗಿ, ಸಾಲ್ ನಿಲ್ಲಿ"ಂತ ಎಲ್ಲೊವ್ಕೆ ಹೇಳ್ದೊ. ಮೇಲ್ಜಾತಿಯೊವು ಹೋಕೆ ಸುರು ಮಾಡ್ದ ಮೇಲೆ ಇವು ಹಿಂದೆಂದ ಹೆದ್ರಿಕಂಡ್ ಹೆದ್ರಿಕಂಡ್ ಹೋಕೆ ಸುರು ಮಾಡ್ದೊ. ಅವರಲ್ಲಿ ಹೆಚ್ಚಿನವು ಊಟಕ್ಕೆಂತಲೇ ಬಂದವು. ಹೊಟ್ಟೆ ತುಂಬ ಉಣದೆ ಎಷ್ಟ್ ದಿನ ಆಗಿತ್ತೋ ಏನೋ? ಪಾಪ!

ಬೆಳ್ಜಾತಿಯೊವು, ಕರ್ಜಾತಿಯೊವು ಎಲ್ಲಾ ಒಂದೇ ಸಾಲ್‌ಲಿ ಒಳೊ. ಎಷ್ಟ್ ಹೇಳ್ರೂ ಕರ್ಜಾತಿಯೊವ್ಕೆ ಮುಂದೆ ಹೋಕೆ ಕಾಲೇ ಬಾಲ್ದೆ. ಇವರ ನೋಡಿ ಬೆಳ್ಜಾತಿ ಜೆನಗ ಆದಷ್ಟ್ ದೂರ ದೂರ ನಿತ್ತವೆ. ಇವು ಸಾ ಅವರಿಂದ ದೂರ ನಿಲ್ಲಿಕೆ ನೋಡ್ವೆ. ಹೇಂಗೋ ಊಟ ಇಕ್ಕುವಲ್ಲಿಗೆ ಹೋದರೆ ಇಕ್ಕುವೊವು ಎಲ್ಲಾ ಬೆಳ್ಜಾತಿಯೊವೇ. ಅವು ಇವರ ಒಂಥರಾ ನೋಡ್ವೆ, ಇವು ಪೆರ್ಚ್‌ಗಟ್ಟಿಕಂಡ್ ಇಕ್ಕುದರ ನೋಡ್ವೆ ಅಲ್ಲದೆ ಅತ್ತ ಇತ್ತ ನೋಡುದ್ಲೆ. ನಿನ್ನೆ ವರೆಗೂ ಕ್ರಮ ಹೇಂಗಿತ್ತ್‌ಂತೇಳ್ರೆ ಮೇಲ್ಜಾತಿಯೊವು ಎಲ್ಲೊವು ಉಂಡ ಮೇಲೆ, ಅವು ಉಂಡ್ ಆವ ಮುಟ್ಟ ಹೊರಗೆ ಕಾದ್, ಬಿಸಾಡ್ದ ಅವರ ಮಡೆ ಎಲೆಲಿ ಇದ್ದದರ ಹೆರ್ಕಿ, ಇವು ಮನೆಂದ ತಂದ ಹೆಡೆಗೆಲಿ ತುಂಬಿಸಿ ತೆಕಂಡ್ ಹೋದು. ಅಲ್ಲರೆ ಅವ್ಕೆ ಎಲ್ಲೊವ್ಕೆ ಊಟ ಆದ ಮೇಲೆ ಪಾತ್ರೆ ತೊಳ್ಯಕೆ ಕೊಡಿಕಾಕನ ಅದರ್ಲೆ ಉಂಡು ಒಳ್ದದರ ಹಂಞ ಹಂಞ ಹಾಕಿ ಕೊಡ್ತಿದ್ದೊ.

ಮಾಚುನ ಹುಗ್ಗವ್ವ ಬಾರಿ ಉಸಾರ್ದ್. ಅದ್ ಬಾಕನನೇ ಕಂಕ್‌ಣಿಕೆ ಅಡಿಲಿ ಒಂದ್ ಕೀಜಿದ್ದ್ ಪಾತ್ರೆನ ಅಡ್‌ಂಗಿಸಿಕಂಡ್ ಬಂದಿತ್ತ್. ಬಾಕನನೇ ಹೇಳಿತ್ತ್ "ನೀವು ತೆಕಂಡ ಊಟದ ಸುರುನ ಹುಗ್ಗೆನ ಈ ಕೀಜಿನ ಪಾತ್ರೆಗೆ ಹಾಕಿ ಮತ್ತೆ ಹೋಗಿ ಉಣೋಕು"ಂತ. ಅದ್ ಹೇಳ್ದ

ಹಾಂಗೆ ಎಲ್ಲ ಪಿಳ್ಳಿಕ ಸುರುಗೆ ಹಾಕಿದ ಹುಗ್ಗೆ ಮತ್ತೆ ಗೈಮನ ಹುಗ್ಗವ್ವನ ಪಾತ್ರೆಗೆ ಹಾಕಿ ಮತ್ತೆ ಹೋಗಿ ಉಂಡೊ. ಮಾಚು ಆ ಹುಗ್ಗವ್ವನ ಪಿಳ್ಳಿ ಅಲ್ಲನಾ? ಒಮ್ಮೆದ್ ಹುಗ್ಗೆನ ಕೀಜಿನ ಪಾತ್ರೆಗೆ ಹಾಕಿ "ಇನ್ನೊಮ್ಮೆ ತರೋಕಾ?"ಂತ ಕೇಳ್ತ್. ಹುಗ್ಗವ್ವ "ನೀ ಮುಂದೆ ಉಂಡ್ ಬಾ. ಮತ್ತೆ ಇದರ ತೆಕಂಡ್ ಹೋಗ್"ಂತ ಹೇಳ್ತ್. ಮಾಚು ಬೇಗ ಬೇಗ ಉಂಡ್‌ದ್, ಹುಗ್ಗವ್ವನ ಹಾಂಗೆ ಕಂಕ್‌ಣಿಕೆ ಅಡಿಲಿ ಪಾತ್ರೆ ಅಡ್‌ಂಗಿಸಿಕಂಡ್ ದಟಿಗೆಗೆ ಹೋತ್. ಪಾಪದೊ್ವು ಪಾಪ! ಅಂದ್ ಉಂಡದ್ ಅಂದರೆ ರಾವು ಹಿಡ್ದ ಹಾಂಗೆ ಉಂಡೊ! ಗಮ್ಮತ್ತೋ ಗಮ್ಮತ್! ಸಾರ್, ಸಾಂಬಾರ್, ಪಲ್ಯಗ, ಪಾಯಸ, ಹೋಳಿಗೆ ಇದರೆಲ್ಲ ಅವು ಕಣ್ಣ್‌ಲಿ ಕಾಂಬಕೇ ಕಷ್ಟ, ಇನ್ನ್ ತಿಂಬಕೆ ಸಿಕ್ಕಿದೆನಾ? ನಾಚಿಕೆ ಬುಟ್ಟ್ ಕೇಳಿ ಕೇಳಿ ಹಾಕಿಸ್ಕಂಡ್ ಉಂಡೊ. ಎಲ್ಲೊ್ವು ಹೀಂಗೆ ಒಟ್ಟಿಗೆ ಉಂಡದರ ನೋಡಿ ಹುಗ್ಗವ್ವಂಗೆ "ಇನ್ನ್ ನಮ್ಮಂತೊ್ವು ಸಾ ಒಳ್ದವರ ಹಾಂಗೆ ಬೊ್ದಕ್ಕ್"ಂತೇಳ್ವ ನಂಬಿಕೆನ ಹುಟ್ಟಿಸಿತ್. ಅದರ ಪಾಲಿಗೆ ಇದ್ ಅದರ ಬೊ್ದ್‌ಲಿ ಮರ್ತ್ ಹೋಗದ ಚಿನ್ನದಂತ ದಿನ ಆಗಿತ್ತ್. ಇಲ್ಲಿ ಮುಟ್ಟ ಮೇಲ್ಜಾತಿ ಜೆನಂದ ಕಡೆಗಣೆಸಿಕಂಡ್ ಇದ್ದ ಅದಿಕೆ, ಮೇಲ್ಜಾತಿಯವರ ಸಮಸಮ ಆಗಿ ಅವರ ಒಟ್ಟೊಟ್ಟಿಗೆ ನಿತ್ತ್ ಉಂಡ್‌ದಕ್ಕೆ ಆದ ನಿಜವಾದ ಸಂತೋಸನ ಅದ್ ಇಂದ್ ಅನ್ಬವಿಸಿತ್ತ್. ಕಳಲನ ಬುಟ್ಟು ಒಳ್ದವು ಯಾರೂ ದೂರಂದ ಸಾ ಗಾಂಧಿನ ನೋಡಿತ್ಲೆ. ಅವರ ನೆರಳ್ ಆಂಜಿದ್ಹಂಗೆ ಕಂಡಿತ್ತ್ ಅಷ್ಟೇ. ಹಾಂಗೆಂತ ಅವ್ಕೆ ಅದಿಕ್ಕೆ ಬೇಜಾರ್ ಏನ್ ಇಲ್ಲೆ. ಅಂದ್ ಅವೆಲ್ಲ ಎಷ್ಟೋ ಕಾಲದ ಮೇಲೆ ಹೊಟ್ಟೆ ತುಂಬ ಉಂಡೊ ಅಲ್ಲಾ? ಅನ್ನದ ಎದ್ರ್ ಯಾವ ಮನ್ಸ ಆಗಲೀ, ಯಾವ ದೇವರಾಗಲಿ ಇಲ್ಲೆ. ಹಾಂಗಿರ್ಕನ ಈ ಗಾಂಧಿನ ನೋಡದೇ ಇರ್ದು ಅದ್ಯಾವ ದೊಡ್ಡ ಸಂಗತಿ!

ಗಾಂಧಿ ಬಂದವೆಂತ ಕೆಲ್ಸದವ್ಕೆಲ್ಲಾ ರಜೆನೇ. ಕಳಲನವ್ರಲ್ಲಿ ಉಂಡ್ ಎಲ್ಲೊ್ವ್ಕೆ ಉಬ್ಬೆಸ ಬಂದ ಹಾಂಗೆ ಆಗಿತ್ತ್. ಎಲ್ಲೊ್ವು ಮಲ್ಕಂಡ್ ಆ ದಿನದ ಕತೆನೇ ಮಾತಾಡ್ತಿದ್ದೊ. ಕಳಲ "ನಾ ಮಾತ್ರ ಗಾಂಧಿನ ಹಕ್ಕಲೆಂದ ಸರಿ ನೋಡ್ದೆ"ಂತ ಅವನ ಬಿರ್ಸಾತಿಕೆನ ಹೇಳಿಕಂಡತ್. ಅದಕ್ಕೆ ನಾರು ಹೇಳ್ತ್ " ನೀ ನಾವುಗೆಲ್ಲ ಯೆಜಮಾನ. ನೀ ಒಬ್ಬ ನೋಡ್ರೆ ನಾವೆಲ್ಲ ನೋಡ್ದ ಹಾಂಗೇನೇ"ಂತ ಗಾಳಿ ಹಾಕಿತ್. ಎಲ್ಲೊ್ವು ನೆಗಾಡ್ದೊ. ಕಳಲ ಹೇಳ್ತ್ "ಹೀಂಗೆ ನಮ್ಮ ಎಲ್ಲಾ ಮೇಲ್ಜಾತಿಯೊ್ವು ಅವ್ಕೆ ಸಮ ಸಮ ಆಗಿ ನೋಡಿಕೊಂಬೊ್ದು ಇಂದ್ ಒಂದೇ ದಿನಕ್ಕೋ ಏನೋ? ನಾಳೆಂದ ನಾವು ನಾವೇ, ಅವು ಅವೇ ಏನೋ?"

ಹುಗ್ಗವ್ವ "ಒಂದೇ ದಿನಕ್ಕೇ ಆಗಲಿ, ಹೀಂಗೆ ಆದುಂತ ನಾವು ಕನ್ಸ್‌ಲಾದರೂ ನೆನ್ಸಿಯೊಳನಾ? ಹೇಳ್."ಂತ ಹೇಳ್ತ್.

ಕಳಲ ಮಾತಾಡ್ತ್‌ಲೆ.

ಮಾಚು "ಗಾಂಧಿ ತಿಂಗಳಿಗೊಮ್ಮೆ ಬಂದಿದ್ದರೆ ಒಳ್ಳದಿತ್ತಲ್ಲಾ ಹುಗ್ಗವ್ವ"ಂತ ಹೇಳಿ ನೆಗಾಡ್ತ್. ಅದರ ಆ ಮಾತಿನ ಅರ್ತ ಆಗಿ ಹುಗ್ಗವ್ವ ಗಂಭೀರಾಗಿ ಹೇಳ್ತ್ "ಇಂದ್ ಮಾತ್ರ ಅಲ್ಲ, ಇನ್ನ್ ಮುಂದೆ ಸಾ ಗಾಂಧಿಂದಾಗಿನೇ ನಮ್ಮ ಹೊಟ್ಟೆ ತುಂಬಿಕುಟ್ಟು. ಇದ್ ಸತ್ಯ. ಗೊತ್ತಾತಾ?"

ಗಾಂಧಿ ದಲಿತರ ಬೊ್ದ್ಗಿಗೆ ಬೊಳ್ಪು ತೋರ್ಸಿದೊ, ಮುಂದೆ ಸಾ ಆ ಬೊಳ್ಪು ಬೆಳ್ಗಿಕೆ ಉಟ್ಟುಂತ ಹೇಳ್ವ ಹುಗ್ಗವ್ವನ ನಂಬಿಕೆನ ಮಾತಿಗೆ ಯಾರಲ್ಲೂ ಉತ್ತರ ಇಲ್ಲಾಗಿತ್ತ್. ❐

ಹಾಳೆ 12
ಮಡ್ಕೆ ಹಿಡ್ಸುವ ಮೋ್ದ್ವೆ.

ಮಾಚು ಕಪ್ಪು ಬಣ್ಣದ ಗೂಡೆ. ಅವರ ಜಾತಿನ ಬೇರೆ ಗೂಡೆಗಳೊಟ್ಟಿಗೆ ನಿಲ್ಸಿ ನೋಡ್ರೆ ಅದ್ ಬೆಳ್ಳಂಗೆ. ಅದ್ ಅದರ ಅಪ್ಪನ ಹಾಂಗೆ ಸಪುರ, ಉದ್ದ, ಗಟ್ಟಿಮುಟ್ಟು, ಹಲ್ಲ್ ಹಂಞ ಗೊಗ್ಗರೆ. ಎಣ್ಣೆಗೆ ಗೆತಿ ಇಲ್ಲರೂ ಮಾರುದ್ದ ಕೂದೊಲ್. ಒಟ್ಟು ಹೇಳೊಕಾರೆ ಅದ್ ಲಕ್ಷಣದ ಗೂಡೆನೇ. ಯಾವ ಕೆಲ್ಸ ಹೇಳಿ– ಅದಕ್ಕೆ ನೆವನಂತ ಇಲ್ಲೆ–ಎಷ್ಟೇ ಕಷ್ಟ ಆದರೂ ಮಾಡ್ಯೇ ಮಾಡ್ದೆ ಹಾಂಗಾಗಿ ಅಪ್ಪಂಗೆ ಅದ್ರ ಹಕ್ಕಲೆ ಹಂಞ ಪ್ರೀತಿ ಹೆಚ್ಚ್. ಬಿಸ್ಲ್, ಕೋಟ, ಮಳೆಂತ ಇಲ್ಲದೆ ತಮ್ಮ ತಂಗೆಕ್ಕಳ ಒಟ್ಟಿಗೆ ಕರ್ಕಂಡ್, ಯಾವ ಗುಡ್ಡೆ ಕಾಡ್‌ಂತ ಇಲ್ಲಾದೆ ಕಾಡ್ ಗೆಣ್ಸ್, ನರೆ, ಈಯರ್, ಬೊಳ್ಗಂಡೆ ಹುಡ್ಕಿ ತಂದ್ ಮನೆವರ ಹೊಟ್ಟೆ ತುಂಬ್ಸುತಿತ್ತ್. ಮಳ್ಗಾಲಲಿ ಅಳುಂಬು ಹುಡ್ಕಿಕೊಣ್ಡ್ ಕಾಡ್ ಕಾಡ್ ಸುತ್ತುದೂಂತ ಹೇಳ್ರೆ ಅದಕ್ಕೆ ಬಾರೀ ಉಮೇದ್. ಅಪ್ಪನೊಟ್ಟಿಗೆ ಗಂಡ್ ಮಂಜನ ಹಾಂಗೆ ಜೇನ್ ತೆಗ್ಯಿದು, ಮೀನ್ ಹಿಡ್ಯಿದು, ಕಾಡ್ ಕೋಳಿ, ತೆಕ್ಕಟೆಂತ ಹಕ್ಕಿಗಳಿಗೆ ಉರ್ಲು ಇಸುದು–ಇಂತ ಕೆಲ್ಸ ಮಾಡುದುಂತೇಳ್ರೆ ಅದಿಕ್ಕೆ ಏನೋ ಒಂದ್ ಹೆಮ್ಮೆ. ಮನೆಗೆ, ನೀರೆಡಿ ಒಲೆಗೆ ಬೇಕಾದ ಸೊಯ್ದೆ ತಂದ್, ಅದರ ಒಟ್ಟಿ ಇಸುದು ಅದೇ. ಮನೆ ಮಟ್ಟಿಗೆ ಹೆಣ್ಣಾದರೂ, ಕೆಲ್ಸದ ಮಟ್ಟ್‌ಲಿ ಅದ್ ಗಂಡೇ!

ಮಾಚುಗೆ ಅಂದಾಜಿ ಹದಿಮೂರು ಹದಿನಾಲ್ಕ್ ವೊರ್ಸ ಪ್ರಾಯ ಆಗಿರ್ದು. ಒಂದಿನ ಕಾಡಿಗೆ ಸೊಯ್ದೆಗೆಂತ ಹೋಗಿ ಬಾಕನ ಹಿಂದೆ ಬಟ್ಟೆಲಿ ಕಲೆ ಆಗಿತ್ತ್. ಅದಿಕ್ಕೆ ಅದರ ಗೋಷ್ಟಿನೇ ಇಲ್ಲೆ. ಹುಗ್ಗವ್ವ ನೋಡಿ "ಓ.. ಮುಳ್ಳ್ ಮೆಟ್ಟಿದನಾ ಮಗ?"ಂತ ಕೇಳ್ತ್. ಮಾಚು ಸಣ್ಣಮಕ್ಕಳ ಹಾಂಗೆ ತಲೆ ಆಡ್ಸಿ "ಮುಳ್ಳೂ ಮೆಟ್ಟಿತ್ಲೆ, ಕಲ್ಲೂ ತಾಂಗಿತ್ಲೆ"ಂತ ಅದರ ಕೆಲ್ಸಲೇ ಇತ್ತ್. ಹುಗ್ಗವ್ವ ಅದರ ಮಾತ್ ಕೇಳಿ ಬೊಕ್ಕು ಬಾಯಿನ ಪೂರ ಬುಡ್ಸಿ ನೆಗಾಡಿ "ಂದ, ನೀ ಈಗ ಆ ಕೆಲ್ಸ ಬುಡು. ಆ ಚಾಳೆನ ಮರದಡಿಲಿ ಕುದ್ರು"ಂತ ಹೇಳಿಕನ ಅದಿಕೆ ಎಂತಾಂತ ಗೊತ್ತಾಗಿ, ಚಪ್ಪೆ ಮೋರೆ ಮಾಡಿಕಂಡ್ ಮರದಡಿಲಿ ತಲೆ ಕಂತ ಹಾಕಿ ಕುದ್ದತ್.

ಮಾಯ್ಲು ಬಾತ್. ನೆರೆಕರೆನ ಐದ್ ಬೋ್ಳಿಯ ಐದ್ ಮುತ್ತೈದೆ ಹೆಣ್ಮಕ್ಕಳ ಕರ್ಸಿತ್. ಕಾಪಾಡ್ತಿ ಸುಗ್ಗಿ ಬತ್ತದ್ {ಅತಿಕಾಯ ಬತ್ತ} ಸಣ್ಣ ಮುಡಿ ಮಾಡ್ತ್. ಮಾಚುನ ಐದ್ ತೆಂಗಿನ ಕಾಯಿ ಮೇಲೆ ಕುದ್ರಿಸಿ, ಬಲಕಾಲ್ ಸುಗ್ಗಿ ಬತ್ತದ ಮುಡಿ ಮೇಲೆ ಇಸಿಕೆ ಹೇಳ್ತ್. ಅದರ ಹಕ್ಕಲೆನೇ ಒಂದ್ ಮಿಳ್ಳಲಿ ಎಣ್ಣೆ ಇಸಿದೊ. ಈ ಐದ್ ಜನ ಮುತ್ತೈದೆಗ ನೀರ್ ತುಂಬುಸಿ, ಎಲೆಅಡಿಕೆ ಇಸಿದ್ದ ಚೆಂಬುಗಳ ಮತ್ತೆ ಅದರ್ಲಿದ್ದ ಎಲೆ ಅಡಿಕೆ ಹಿಡ್ಕಂಡೊ. ಅವು ಸುತ್ತು ಬಂದ್‌ಕಂಡ್ ಸುರು ಎಣ್ಣೆನ ಆ ಮೇಲೆ ನೀರ್‌ನ ಮಾಚುನ ತಲೆಗೆ ಹನ್ಕಿಸಿದೊ. ಆ ಮೇಲೆ ಅವಳ ತಲೆಮೈ ಮೀಸಿ ಬೇರೆ ಸೀರೆ ಉಡ್ಸಿದೊ. ದಟಿಗೆ ಹಿಂದೆನ ಜಗ್ಲಿಲಿ ಕದಿಕೆನ ದೊಡ್ಡಕೆ ಸುತ್ತಿ, ಅದರೊಳಗೆ ಅದರ ಕುದ್ರಿಸಿದೊ. ಅದ್ ಕುದ್ದ ಆ ಐದ್ ಕಾಯೆನ ಅಲ್ಲೇ ತಂದಿಸಿದೊ. ಅದರ ಅದಿಕ್ಕೇ ತಿಂಬಕೆ ಕೊಡ್ದು ಕ್ರಮ.

ಆ ಮೇಲೆ ಏಳ್ ದಿನ, ಒಂಬತ್ತ್ ದಿನ, ಹನ್ನೊಂದು ದಿನ ಹೀಂಗೆ ಅವರವರ ಅನ್ಕುಲಕ್ಕೆ ಸರ್‍ಯಾಗಿ ಎಷ್ಟ್ ದಿನ ಬೇಕೋ ಅಷ್ಟ್ ದಿನ ಕುದ್ರುಸುವೆ. ಆಗ ಬಂಧು ಬಳಗದವು.

ನೆಂಟ್ರ್, ಬೇಕಾದವು ಒಳ್ಳ ಒಳ್ಳ ತಿಂಡಿತಿನ್ಸ್, ಹಣ್ಣ್‌ಗಳ ತಿಂಬಕೆ ತಂದ್ ಕೊಡ್ತಿದ್ದೊ. ಗೂಡೆಗ ಮೈ ನೆರ್‍ಯೊದುಂತ ಹೇಳ್ರೆ ಅವ್ರ ಸಂತಾನನ ಹೆಚ್ಚಿಸ್ವ ಶಕ್ತಿಗೆ ತಯಾರ್ ಆತ್‌ಂತ ಅವರ ನಂಬಿಕೆ. ಅದಿಕ್ಕೆ ಆ ಗೂಡೆಗಳ ಶಕ್ತಿ ಇನ್ನ್ ಸಾ ಹೆಚ್ಚ್ ಆಗ್ವ್ ಹಾಂಗೆ, ಅವರ ಮೈಕೈ ಗಟ್ಟಿ ಆಗ್ವ್ ಹಾಂಗೆ ಮೆಂತೆ, ಕೊತ್ತೆಂಬ್ರಿ, ಎಳ್ಳ್, ಕೊಬ್ಬರಿ, ಓಲೆಬೆಲ್ಲ, ತುಪ್ಪ- ಇಂಥ ಆಹಾರಗಳ ಸಮಕ್ಕೆ ತಿಂಬಕೆ ಕೊಟ್ಟವೆ. ಈ ನೆವನಲಿ ಬಡವರ ಗೂಡೆಗ ಕೂಡ ಮುಂದೆ ಬೊಸ್ರಿ ಆಕನ, ಹೆರಿಗೆ ಆಕನ, ಇನ್ನೊಂದ್ ಜೂವನ ಸಾಂಕಿಕನ, ಕಷ್ಟದ ಕೆಲಸಗಳ ಮಾಡಿಕಾಕನ ಸೋಲಿಕಾಗದ್‌ಂತೇಳ್ವ ಎಚ್ಚರಲಿ ಲಾಯ್ಕ ನೋಡಿಕೊಸ್‌ಂಬೊಸ್‌ತಿದ್ದೊ.

ಏಳನೇ ದಿನ ಕಾಪಾಡ್ತಿ{ಅವರ ಬಾಸೆಲಿ "ಊರವಳು"} ಬಾತ್. ಮಾಚುನ ಹರೆವ ನೀರ್ ಹಕ್ಕಲೆ ಕರ್ಕಂಡ್ ಹೋತ್. ಅಲ್ಲಿ ಅದರ ತಲೆ ಮೈ ಮೀಸಿ, ಬೇರೆ ಬಟ್ಟೆ ಉಡ್ಸಿ ಕರ್ಕಂಡ್ ಬಾತ್.
{ಮಾಚು ಉಟ್ಟ ಸೀರೆ ದನಿಗಳ ಮನೆಂದ ಬೇಡಿ ತಂದದ್}. ಅದ್ ಬಾಕನ ವೀಳ್ಯದ ಬೊಸ್ಳಿ, ಮಲ್ಲಿಗೆ ಬೊಸ್ಳಿ, ಮಾಯನ ಮರ, ಹಲ್ಸಿನ ಮರ- ಹೀಂಗೆ ಆ ಸುತ್ತ್‌ಲಿ ಇರ್ವ ಎಲ್ಲಾ ಹೂವಿನ ಗಿಡಗಳ ಮತ್ತೆ ಫಲ ಕೊಡ್ವ್ ಮರಗಳ ಮುಟ್ಟಿಕೊಸ್‌ಂಡ್ ಬಾತ್. ಹೀಂಗೆ ಗೂಡೆನ ಫಲವಂತಿಕೆ ಹೆಚ್ಚಲಿಂತ ಹೇಳ್ವಂತದ್ ಅದರ ಅರ್ಥ.

ಅದ್ ದಟಿಗೆಗೆ ಬಾಕೆ ಮುಂದೆ ಇಡೀ ದಟಿಗೆಗೆ ಸೆಗಣಿ ಸಾರ್ಸಿ, ತೆಂಗಿನ ಕಾಯೆ ನೀರ್‌ನ ಪುಣ್ಯಾರ್ಚನೆಂತ ಹನ್ಕಿಸಿ ಶುದ್ಧ ಮಾಡಿ ತಯಾರಾಗಿದ್ದೊ. ಬಂದ ಗೂಡೆನ ಮೊಸ್‌ದೊಳಿಗೆನ ಸಿಂಗಾರ ಮಾಡ್ವ್ ಹಾಂಗೆ ಸಿಂಗಾರ ಮಾಡ್ದೊ. ಹೊರಗೆ ಒಂದ್ ಸಣ್ಣ ಮಡ್ಕೆಲಿ ನೀರ್ ತುಂಬ್‌ಸಿ, ಅದರ ಬಾಯಿಗೆ ಮಾಯೆನ ಸೊಪ್ಪು ಇಸಿ, ಅದರ ನೊಸ್‌ಡುಲಿ ಜುಟ್ಟಿದ್ದ ತೆಂಗಿನ ಕಾಯೆನ ಇಸಿದ್ದೊ. ಅದಿಕ್ಕೆ ಮಾಚು ಅಡ್ಡ ಬೀತ್. ಆ ಮೇಲೆ ಅದರ ಅವ್ವ ಮಾಚುನ ತಲೆಮೇಲೆ ಸಿಂಬೆ ಇಸಿ, ಸಿಂಬೆನ ಮೇಲೆ ಮಡಿಕೆನ ಇಸಿತ್. ಅದ್ ಅದರ ತಂದ್ ದೇವರ ಕೋಣೆಲಿ ಇಸಿತ್.

ಮತ್ತೆ ಸೋದರ ಮಾವ ಅದರ ಅಲ್ಲೇ ಒಂದ್ ಮಣೆ ಮೇಲೆ ಕುದ್ರಿಸಿತ್. ಬಂದೊಸ್‌ವು ಸೇಸೆ ಹಾಕಿ ನಾಲ್ಕಾಣೆ, ಎಂಟಾಣೆ ದುಡ್ಡು ಕಟ್ಟಿದೊ. ಎಲ್ಲವು ಸೇಸೆ ಹಾಕಿ ಆದ ಮೇಲೆ ಮಾವ ಎದ್ದ್‌ರಿಸಿತ್. ಇದ್, ಎಲ್ಲ ಹಿರ್‍ಯರ ಕಾಲ್ ಹಿಡ್ತ್. ಮತ್ತೆ ಸೀ ಖಾರದ ಊಟ ಆಗಿ, ಬಂದವು ಹೋದೊ. ಅಂದ್ ಸೋದರ ಮಾವ ಅಲ್ಲರೆ ಸೋದರತ್ತೆ, ಅವೂ ಅಲ್ಲರೆ ಯಾರಾರ್ ಹಕ್ಕಲೆನ ನೆಂಟ್ರ್, ಅವರ ಮನೆಗೆ ಕರ್‍ಕೊಂಡ್ ಹೋಕು. ಹಾಂಗೆ ಸೋದರ ಮಾವ ಕರ್ಕಂಡ್ ಹೋಗಿ ನಾಲ್ಕ್ ದಿನ ಒಳ್ಸಿಕಂಡತ್. ಮತ್ತೆ ಮಾಯ್ಲು ಹೋಗಿ ಅದರ ಕರ್ಕಂಡ್ ಬಾತ್.

ಮೈ ನೆರ್ದ ಮೇಲೆ ಮಾಚು ಒಂದರ್ನೇ ಮುಂದೆನ ಹಾಂಗೆ ಗುಡ್ಡೆಗೆ, ಕಾಡಿಗೆ ಹೋಕೆ ಹುಗ್ಗವ್ವ ಬುಡ್‌ತಿತ್ಲೆ. ಆದರೆ ಗುಡ್ಡೆಗೆ ಕಾಡಿಗೆ ಹೋಗದೆ ಇರಿಕೆ ಮಾಚುನ ಜುವ್ವ ನಿಲ್ಲೊಕಲೇ? ಹುಗ್ಗವ್ವಂಗೆ ಗೊತ್ತಾಗದ ಹಾಂಗೆ ಹೋತಿತ್ತ್. ಮಾಚು ಬಾರಿ ಮರ್‍ಯಾದೆನ ಗೂಡೆಂತ ಅಲ್ಲಿ ಎಲ್ಲೊವೊಸ್‌ಕೆ ಗೊತ್ತಿತ್ತ್ ಯಾರಾರ್ ಅದರ ಸುದ್ದಿಗೆ ಮನಿ ಹೋದರೆ ಅದ್ ಅವರ ಕಡ್ದ್ ಕೊಂದೇ ಹಾಕುದುಂತ. ಒಮ್ಮೊಮ್ಮೆ ನೆರೆಕರೆ .ಹೆಳ್ಮಕ್ಕಳೊಟ್ಟಿಗೆ ಹೋತಿತ್ತ್. ಅದ್ ಹುಗ್ಗವ್ವ ಮಾಡ್ದ ಏರ್ಪಾಡ್. ಅವ್ ಬಾರದ ದಿನ ಅದ್ ಒಂದ್ ಕಡ್ಪತ್ತಿ ಹಿಡ್ಕಂಡ್ ಹೊರ್ಪತ್‌ಂತೇಳ್ರೆ ಭದ್ರಕಾಳಿನ ಹಾಂಗೆ ಕಾಂಬತಿತ್ತ್.

ಹಾಳೆ 13
ಮೊದ್ವೆ ತೆಯಾರಿ

ಮಾಚು ಪ್ರಾಯಕ್ಕೆ ಬಂದ್ ನಾಲ್ಕೈದ್ ವೊರ್ಸ ಆಗಿರ್ದು. ಹುಗ್ಗವ್ವ ಆಗಾಗ ಹೇಳಿಕೆ ಉಟ್ಟು "ಮಾಚುಗೆ ಪ್ರಾಯ ಆತ್. ಅದಿಕ್ಕೊಂದ್ ಮೊದ್ವೆ ಆಗಿದ್ದರೆ ನಾ ನೋಡ್ತಿದ್ದೆ. ಸಮಕಟ್ಟ್ ಆವ ನೆಂಟಸ್ತಿಕೆ ಬಾದ್ಲಲೇ?"ಂತ.

ಕಳಲ ನೆಗಾಡಿಕಂಡ್ "ಂದ ಅವ್ವಾ, ನಿಂಗೆ ಇನ್ನ್ ಹತ್ತ್ ವೊರ್ಸಕ್ಕೆ ಏನ್ ಆಕಿಲ್ಲೆ. ಆ ಚಿಂತೆ ಬುಡು. ಮತ್ತೆ ಮಾಚುನ ಮೊದ್ವೆ ಸಂಗತಿ, ಹೈದ ಬರೊಕು, ಎರ್ಡ್ ಕಡೆಯೊವ್ಕೆ ಆದುಂತ ಆಕು. ಮೊದ್ವೆಂತೇಳ್ರೆ ಸುಮ್ಮಂಗೆ ಆದೆನಾ? ಕಮ್ಮಿಂತೇಳ್ರೆ ಐನೂರ್ ರುಪಾಯಿ ಆದರೂ ಬೇಕು. ಹುಂ, ಅದ್ ಬುಡ್, ಹೇಂಗಾರ್ ಆದು, ಅದರೆ ಅದಿಕ್ಕೆ ಮೊದ್ವೆ ಯೋಗ ಬರೋಕಲೇ?"ಂತ ಹೇಳ್ತ್.

ಐದಾರ್ ತಿಂಗ ಕಳ್ದಿರ್ದು. ಮಾಚುಗೆ ಮೊದ್ವೆ ಯೋಗ ಬಂದಿರೊಕು. ಒಂದಿನ ಕೊಡಿ ದಟಗೆನ ಕಳಲನ ಚನಿಯಣ್ಣ ಬಾತ್. ಹೀಂಗೆ ಮಾತಾಡಿಕಂಡ್ ಇರ್ಕನ ಮಾಚು ಕುಡ್ಯಕೆ ಚಾ ತಂದ್ ಕೊಟ್ಟತ್. ಅದ್ ಒಳಗೆ ಹೋದ ಮೇಲೆ ಚಾ ಕುಡ್ಕಂಡ್ ಅಂವ ಕೇಳ್ತ್ "ಮಾಚುಗೆ ಎಲ್ಲಿಂದಾರ್ ನೆಂಟಸ್ತಿಕೆ ಮನಿ ಬಂದುಟಾ?"ಂತ.

ಹುಗ್ಗವ್ವ "ಹಾಂ, ಗರ್ ಗುರ್ಂತ ದೂರ ದೂರಂದಳೇ ಉಟ್ಟು, ಇಲ್ಲಿ ಮುಟ್ಟ ಮಾತ್ರ ಯಾವ್ದೂ ಎತ್ತಿತ್ಲೆ"

"ಇಂದನಿ, ನನ್ನ ದಿಕ್ಕಾಳ್ತಿನ ಕಡೆಂವ ಒಬ್ಬ ಹೈದ ಉಟ್ಟು. ಅಂವನ ದಿಕ್ಕಾಳ್ತಿ ಅಂವನ ಬುಟ್ಟು ಹೋಗುಟು. ಅವನ ಅಪ್ಪ "ಎಲ್ಯಾರ್ ಕೊಡುವ ಗೂಡೆಗ ಇದ್ದರೆ ಹೇಳ್"ಂತ ಹೇಳಿದ್ದೊ"

"ನೀ ಹೈದನ ನೋಡ್ದ್ಯೊಳನಾ? ಹೇಂಗೆ ಉಟ್ಟು ಅಂವ?"

"ನೋಡದೆ ಏನ್, ಮೊನ್ನೆ ಒಂದ್ ಮೊದ್ವೆಗೆ ಬಂದವ ನಮ್ಮಲ್ಲಿಗೆ ಬಂದಿತ್ತ್. ಒಂದ್ ಮುವತ್ತ್ ಮೂವತ್ತೈದ್ ವರ್ಸ ಆಗಿರ್ದು. ಎರ್ಡ್ನೇ ಸಮ್ಮಂದ ಅಲ್ಲಾ?

"ಅವನ ಮುಂದೆನ ದಿಕ್ಕಾಳ್ತಿ ಅವನ ಬುಟ್ಟು ಹೋದ್ದ್ ಯಾಕೆಂತ ಗೊತ್ತುಟ್ಟಾ?"

"ಎಂತಕ್ಕೋ? ನಂಗೆ ಗೊತ್ತಿಲ್ಲೆ, ದೇವ್ರ್ರಿಗೇ ಗೊತ್ತು"ಂತ ಮಾತಾಡದೆ ಕುದ್ದತ್.

'ಅವಂಗೆ ಸೊಂತದ್ದ್ಂತ ಏನಾರ್ ಉಟ್ಟಾ? ಅಲ್ಲಾ, ಒಕ್ಕಲ್ನವಾಗಿ ಇರುದಾ?"

"ಜಾಗೆ ಉಟ್ಟು, ಹಳ್ಳದ ಕರೇಲೆ. ಎಷ್ಟಲ್ಲ ಉಟ್ಟುಂತ ಮಾತ್ರ ನಂಗೆ ಗೊತ್ತಿಲ್ಲೆ"ಂತ ಹೇಳ್ತ್. ಅಷ್ಟೊತ್ತಿಗೆ ಎಲ್ಲೋ ಹೋಗಿದ್ದ ಕಳಲ ಬಾತ್. ಹುಗ್ಗವ್ವನೇ ಪೂರ ಹೇಳಿ, "ಮಾಚುನ ಅವ್ವ ಏನ್ ಹೇಳ್ದೆಂತ ಕೇಳ್"ಂತ ಮಂಜನ ಹಕ್ಕಲೆ ಹೇಳ್ತ್. ಕಳಲ ಒಳಗೆ ಹೋತ್. "ಏಯ್, ಎಂತ ಮಾಡಿಕೊಂಡೊಳಾ?"ಂತ ಕರ್ತ್. ಅದ್ ದಟಗೆ ಹಿಂದೆ, ಕಾಮುಂದ ಇಳ್ಸಿದ ಸಣ್ಣ ಕೋಳಿ ಮೊರಿಗಳ ತಿಂಬಕೆ ಹೊಂಚ್ ಹಾಕಿಕೊಂಡಿದ್ದ ಕಕ್ಕೆಗಳ ಕಲ್ಲ್ ಹೊಡ್ದ್ ಓಡ್ಸಿಕೆ ನೋಡ್ತಿತ್ತ್. ಹೇಂಟೆ ದೊಡ್ಡ ಸೊರ ತೆಗ್ದ್ ಮರಿಗಳಿಗೆ ಅಡಿಂಗ್ಯಂಬಕೆ ಎಚ್ಚರ ಕೊಡ್ತಿತ್ತ್. "ಹಾಳ್ ಕಕ್ಕೆಗ ಮೊರಿಗಳ ಉಳ್ಸುದ್ಲೆ"ಂತ ಹೇಳಿಕಂಡ್ ಕಳಲನ ಹಕ್ಕಲೆ ಬಾತ್. ಏನಾರ್ ಹೇಳಿಕೆ ಇದ್ದರೆ ಮಾತ್ರ ಅಂವ ಅದರ ಹುಡ್ಕಿಕಂಡ್ ಹೀಂಗೆ ಬಾದುಂತ ಅದಿಕ್ಕೆ ಗೊತ್ತಿತ್ತ್.

ಅಂವ ಹೆಣ್ಣ್‌ನ ಹಕ್ಕಲೆ ಎಲ್ಲ ಹೇಳ್ತ್. ನೆರೆಕರೆಲಿ ಮಾಚುನ ಪ್ರಾಯದ ಗೂಡೆಗಳಿಗೆ ಮೊದ್ವೆ ಆದದ್ದರ ನೋಡಿ ಮಾಯ್ಲುಗೆ ಮಂಡೆ ಬೆಚ್ಚ ಆಗಿತ್ತ್. ಹಾಂಗಾಗಿ ಅದ್ "ಬಂದ ನೆಂಟಸ್ತಿಕೆನ ಬುಡುದು ಬೇಡ. ನೆಂಟ್ರ್ ಬರಲಿ. ಮತ್ತೆ ಸರಿಕಟ್ಟ್ ಆಗದಿದ್ದರೆ ಬೇಡಾಂತ ಹೇಳೂದು"ಂತ ಹೇಳ್ತ್.

ಹೊರಗೆ ಬಂದ ಕಳಲ "ಎಂತಕ್ಕೆಸಾ ನಾವು ಹೈದನ, ಅವನ ಮನೆವರ ಎಲ್ಲ ನೋಡೊಕಲೇ? ಮತ್ತೆ ನೋಡೊಮೊ ಹೇಂಗಾದೆಂತ"ಂತ ಹೇಳ್ತ್.

"ಅದ್ ಸಮನೇ"ಂತ ಹೇಳಿ ಚನಿಯ ಹೋತ್.

ನಾಕ್ ದಿನ ಬುಟ್ಟ್‌ದ್ ಚನಿಯ ಬಂದಂವ "ಈ ಸನ್ಯಾರನೇ ನೆಂಟ್ರ್ ನಮ್ಮಲ್ಲಿಗೆ ಬಂದವೆಗಡ"ಂತ ಸುದ್ದಿ ಮುಟ್ಟಿಸ್ತ್.

ಸನ್ಯಾರ ಚನಿಯನ ಮನೆಗೆ ಹೈದನ ಕಡೆ ನೆಂಟ್ರ್ ಬಂದೊ. ಹೈದ, ಹೈದನ ಸೋದರ ಮಾವ, ಅವರ ಕಾಪಾಡಿ, ಹಿರ್ಯರ್ ಇಬ್ಬರ್ ಹೀಂಗೆ ಒಟ್ಟ್ ಐದ್ ಜೆನ ಬಂದಿದ್ದೊ.

ಗೂಡೆ ಕಡೆಂದ ಕಳಲ, ಮಾಚುನ ಸೋದರ ಮಾವ, ಕಾಪಾಡಿ ಮತ್ತೆ ನಾಲ್ಕ್ ಐದ್ ಜೆನ ಹಿರ್ಯರ್ ಸೇರಿ ಏಳ್ ಜನ.

ಮಳೆ ಬೆಳೆ ಊರ್ ಸಂಗತಿ ಎಲ್ಲ ಮಾತಾಡಿ ಮತ್ತೆ ಹೈದನ ಕಡೆ ಕಾಪಾಡಿ "ನೀವ್ ಈ ಕಾಲ ಮೊದ್ವೆ ತೆಗಿವ ಅಂದಾಜಿ ಮನಿ ಉಟ್ಟಾ?"ಂತ ಕೇಳ್ತ್. ಅದರ ಅರ್ಥ "ನೀವುಗೆ ಹೈದ ಒಪ್ಪಿಗೆನಾ?"ಂತ.

ಗೂಡೆನ ಸೋದರ ಮಾವ "ನಾವು ಮಾತಾಡಿ ಹೇಳ್ವೆ"ಂತ ಹೇಳಿ, "ಬನ್ನಿ"ಂತ ಅವರ ಕಡೆವರ ಕರ್ತ್. ದಟಿಗೆನ ಹಿಂದೆ ಹೋಗಿ ಅಂವ ಹೇಳ್ತ್ "ಬೊಳಿ ಹೊಂದಿಕೆ ಆದೆ. ನಮ್ಮ ಮಾಚು ಅಂಥ ಪೊರ್ಲುನ ಗೂಡೆ ಏನಲ್ಲ. ನಮ್ಮಲ್ಲಿ ಇನ್ನ್ ಸಾ ಎರ್ಡ್ ಗೂಡೆಗ ಒಳೊ. ಹೈದಂಗೆ ಪ್ರಾಯ ಆದರೂ ಒಳ್ಳೆ ಗಟ್ಟಿ ಮುಟ್ಟಾಗಿ ಉಟ್ಟು. ನೋಡಿಕನನೇ ಗೊತ್ತಾದೆ ಒಳ್ಳೆ ಕೆಲ್ಸಗಾರಂತ. ಅವಂಗೆ ಸೊಂತ ಜಾಗೆ ಸಾ ಉಟ್ಟುಗಡ. ನನ್ನ ಅಂದಾಜಿಲಿ ನೆಂಟಸ್ತಿಕೆ ಆದು. ಮತ್ತೆ ನೀವುಗೆ ಬುಟ್ಟದ್"ಂತ ಹೇಳಿ ಕಳಲನ ನೋಡ್ತ್.

ಮೇರರ ಜಾತಿಲಿ ಮಾವಂಗಿರ್ವ ಹಕ್ಕ್ ಅಪ್ಪಂಗಿಲ್ಲೆ. ಸೋದರ ಮಾವ ಹೇಳ್ತ್ "ಅಂದರೆ ಅದ್ ಆತ್‌ಂತಲೇ ಲೆಕ್ಕ. ಆದರೂ ಗೂಡೆನ ಅಪ್ಪನ ಅಂದಾಜ್ ಎಂತಂತ ಗೊತ್ತಾಕಲೇ"ಂತ ಕಾಪಾಡಿ ಹೇಳ್ತ್

"ಬೇರೇನಿಲ್ಲೆ, ಹೈದಂಗೆ ಪ್ರಾಯ ಹಂಞ ಹೆಚ್ಚಾತ್‌ಂತ, ಅಷ್ಟೇ"ಂತ ಹೇಳ್ತ್ ಕಳಲ.

ಆಗ ಕಾಪಾಡಿ ಹೇಳ್ತ್ "ಅಯ್ಯೋ, ಅದ್ ಬುಡಿ, ಗೂಡೆಗ ಎರ್ಡ್ ಹೆತ್ತ್ ಆಕನ ಮೊರಿ ಹಾಕಿದ ನಾಂಯೆಗಳಂಗೆ ಬೊಚ್ಚಿ ಹೋದವೆ. ಗಣ್ಮಕ್ಕ ಜವ್ವನರೇ ಆಗಿ ಇದ್ದವೆ. ದುಡ್ಯೋದು, ಮಕ್ಕಳ ಸಾಂಕುದೂಂತ ಗೂಡೆಗ ಬೇಗ ಅಜ್ಜಿಕ ಆದವೆ."

ಚನಿಯ ಹೇಳ್ತ್ "ಬಂದ ನೆಂಟಸ್ತಿಕೆಗಳ ಸಣ್ಣ ಕಾರಣಕ್ಕೆ ಬುಟ್ಟರೆ ಮತ್ತೆ ಬೇರೆ ಸಂಮ್ಮಂದನೂ ಆಗದೆ ಗೂಡೆಗ ಅಲ್ಲೇ ಬಾಕಿ ಆದೂ ಉಟ್ಟು."

ಹಾಂಗೆ ಆದ್ದ್ ಕಳಲಂಗೆ ಗೊತ್ತಿಲ್ಲದ ಸಂಗತಿಯೇನಲ್ಲ. ಅದಿಕ್ಕೆ ಅಂವ ಹೇಳ್ತ್ "ಸರಿ, ಆದುಂತ ಒಪ್ಪಿಕೋ್ಮೊ."

ಅಲ್ಲಿಂದ ಒಳಗೆ ಬಂದ್ ಕುದ್ದೊ. ಹರಿವಾಣಲಿ ಇದ್ದ ಎಲೆ ಅಡಿಕೆ ತೆಕಂಡ್ ಕಾಪಾಡಿ ಹೇಳ್ತ್ "ನೀವು ಗೂಡೆನ ನೋಡ್ತೆಲೆಲಾ? ಈಗ ನಾವು ಒಪ್ಪಿ ನಾಳೆ ಏನಾರ್ ಹೆಚ್ಚ ಕಡಮೆ ಆದರೆ?"

ಹೈದನ ಅಪ್ಪ ಹೇಳ್ತ್ "ನಾವುಗೆ ಗೂಡೆ ಪೊರ್ಲ್ ಬೇಕ್‌ಂತ ಏನೂ ಇಲ್ಲೆ. ಒಳ್ಳೆ ಕೆಲ್ಸದ್ದ್ ಮತ್ತೆ ಏನೂ ಕಾಯ್ಲೆ ಕಸಾಲೆ ಇಲ್ಲದ್ದಾದರೆ ಸಾಕ್. ನೋಡಿಕನ ಜೊತೆ ಸಮ ಇರೋಕು. ನಿಮ್ಮ ಕುಟುಂಬದ ಸಂಗತಿ ಪೂರ ಚನಿಯಣ್ಣ ಹೇಳ್ಯುಟು. ನಾವುಗೆ ನೆಂಟ್ರ ಆದುಂತ ಆಗುಟು. ಮತ್ತೆ ದೇವ್ರು ಇಸಿದ ಹಾಂಗೆ ಆದೆ"ಂತ ಪೊರ್ಲ್ಲಲಿ ಎರ್ಡ್ ಮಾತಾಡ್ತ್. ಅದಕ್ಕೆ ಉತ್ತರ ಆಗಿ ಕಳಲ "ನಾವೂ ಹಾಂಗೆ ನೆನ್ಸಿಯೊಳೊ. ಹಾಂಗಾರೆ ನಮ್ಮ ಕಟ್ಟ್‌ಲಿ "ಲೆಕ್ಕದ ಬತ್ತ" ತಾವ ಕ್ರಮ ಉಟ್ಟಲ್ಲಾ?"ಂತ ಹೇಳಿ ಕಾಪಾಡಿನ ಮೋರೆ ನೋಡ್ತ್.

"ಹೌದೌದು, ನೀವುಗೆ ಯಾಗ ಲೆಕ್ಕದ ಬತ್ತ ತಾಕೆ ಆದು?". ಗೂಡೆನ ಮಾವ ಕೇಳ್ತ್.

ಅತ್ತ ಇತ್ತ ಕುದ್ದವರ ನೋಡಿ ನಿದಾನಲಿ "ಲೆಕ್ಕ ಪ್ರಕಾರ ಇಂದ್‌ಗೆ ಎಂಟಕ್ಕೆ, ಅಂದರೆ ಬಾವ ಸನ್ಯಾರನೇ ಅಲ್ಲಾ?"ಂತ ಹೇಳ್ತ್.

ಗೂಡೆನ ಮಾವ "ಹಾಂಗಾರೆ ಅಂದಾಜಿ ನೀವು ಎಷ್ಟ್ ಜನ ಬಾವರಿ?".

ಹೈದನ ಮಾವ ರಾಗ ಎಳ್ಕಂಡ್ "ನಾ...ವು ಎಷ್ಟ್? ಇಂದ್‌ಂದ ಒಂದ್ ನಾಕ್ ಜನ ಹೆಚ್ಚ್ ಬಾವೊ, ಅಷ್ಟೇ"ಂತ ಹೇಳ್ತ್. "ನೀವು ಎಷ್ಟ್ ಜನ ಬಂದರೂ ನಾವುಗೆ ಸಂತೋಸೇ. ಆದರೂ ಒಂದ್ ಲೆಕ್ಕಂತ ಬೇಕಲ್ಲಾಂತ ಕೇಳ್ದೆ"ಂತ ಹೇಳ್ತ್ ಕಳಲ. ಹೀಂಗೆ ಸಮ್ಮಂದ ಮಾತಾಡ್ಸಿಕೆ ಬಂದ ನೆಂಟ್ರ ಹೋದೊ.

ಸಮ್ಮಂದ ಮಾತಾಡ್ಸಿಕೆ ಬಾವ ಗಂಡಿನ ಕಡೆವು, ಹಾಂಗೆ ಹೆಣ್ಣ್‌ನ ಕಡೆವು ಹೀಂಗೆ ಎರ್ಡೂ ಕಡೆವು ಒಂದ್ ಕಡೆ ಕುದ್ದ್ ಮಾತಾಡಿ, ಗೂಡೆ, ಹೈದ ಆವುದುಂತ ಆದರೆ, ಬತ್ತ ಅಳ್ಯಕೆ ಅಂದರೆ ವೀಳ್ಯ ಶಾಸ್ತ್ರಕ್ಕೆ ಬಾವ ಕ್ರಮ. ಗಂಡ್‌ನ ಕಡೆವು ಹಾಂಗೆ ಬಾಕನ ಬತ್ತ ಆದರೆ ಐದ್ ಮುಡಿ, ಅಕ್ಕಿ ಆದರೆ ಎರ್ಡೂವರೆ ಮುಡಿ ತರೊಕು. ಅದರ್ಲಿ ಒಂದ್ ಮುಡಿ ಆದರೂ ಮೋ್ದ್ವೆ ಆವ ಹೈದನೇ ಹೊತ್ತ್‌ಕಂಡ್ ಬರೊಕು. ಮತ್ತೆ ಅಂವನೇ ಹೆಣ್ಣ್‌ನ ಮನೆಲಿ ಮೂರ್ ಸೇರ್ ಆದರೂ ಅಳ್ದ್ ಕೊಡೊಕು.

ಮಾಚುನವರ್ಲಿ ವೀಳ್ಯ ಶಾಸ್ತ್ರಕ್ಕೆ ತೆಯಾರ್ ಆಕಂಡಿತ್ತ್. ಪಾಪದ ಗೂಡೆಗೆ ಒಂದ್ ಒಳ್ಳೆ ಸೀರೆ, ರೌಕೆ ಆದರೂ ಉಟ್ಟಾ? ಅದಿಕ್ಕೆ ಮಾಚುಗೆ ವೀಳ್ಯಶಾಸ್ತ್ರಂತ ಮಾತ್‌ಕತೆ ಆದ ಹಾಂಗೇ ಮಾಯ್ಲು ದನಿಗಳ ಮನೆಗೆ ಹೋಗಿ ಗೌಡ್ತಿನ ಹಕ್ಕಲೆ ಹಳೆ ಸೀರೆ, ರೌಕೆ ಮತ್ತೆ ಲಂಗನ ಕೇಳಿತ್ತ್. ದನಿ ಮನೆವು ತಮ್ಮ ಕೆಲ್ಸದವರ ಮೋ್ದ್ವೆ ಮುಂಜಿ, ಕಾಯಿಲೆ ಕಸಾಲೆಗೆ ಸಾಯ ಮಾಡ್ತಿದ್ದೊ.

ವೀಳ್ಯ ಶಾಸ್ತ್ರದಂದ್ ಮಾಚು ದನಿ ಮನೆವು ಕೊಟ್ಟ ಸೀರೆನ ಉಟ್ಟತ್. ಉದ್ದ ಕೂದೊಲ್‌ನ ಎಣ್ಣೆ ಹಾಕಿ ಪೊರ್ಲುಬಾಚಿತ್. ಅಲ್ಲಿಂದ ಇಲ್ಲಿಂದಂತ ಹೂ ಕೇಳಿಕಂಡ್

ಬಂದ್ ಮಿಣ್ಕಿ ಪೊರ್ಲುಲಿ ಮಾಲೆ ಕಟ್ಟಿತ್. ಅದೇ ಜೆಡೆ ಬುಡಲಿ ದೊಡ್ಡ ಗುಲಾಬಿ ಹೂ ಇಸಿ ಅದಕ್ಕೆ ಮಲ್ಲಿಗೆ ಮಾಲೆ ಸುತ್ತಿತ್. ಮತ್ತೆ ಉದ್ದದ ಮಲ್ಲಿಗೆ ಮಾಲೆನ ಮಾಚುನ ಉದ್ದ ಜೆಡೆಗೆ ಜಲ್ಲಿ ಇಳ್ಸಿ, ಅತ್ತಿತ್ತ ಮಾಲೆ ಆಡದ ಹಾಂಗೆ ಜೆಡೆಗೆ ಅಲ್ಲಲ್ಲಿ ಬೊ್ಳಿ ಕಟ್ಟಿತ್. ಮಾಚುಗೆ ಕುತ್ತಿಗೆಗೆ, ಕೆಬಿಗೆ ಸಂತೆಂದ ಮಣಿಸರನ ಮತ್ತೆ ಬೆಂಡ್ ತಂದಿದ್ದೊ. ಕೈಗೆ ಆರಾರ್ ಕೆಂಪು ಮತ್ತೆ ಹಸ್ರ್ ಬಳೆ ಹಾಕ್ಕಂಡತ್.

ಇದ್ ಎರಡ್ನೇ ಸಮ್ಮಂದ, ಹೈದಂಗೆ ಪ್ರಾಯ ಆಗುಟುಂತ ಮಾಚುಗೆ ಗೊತ್ತಿತ್. ಆದರೆ ಒಬ್ಬಾದರೂ "ಹೀಂಗಿಂಗೆ, ಹೈದ ಆದಾಂತ ಕೇಳೋಕೇ? ಅಪ್ಪಂಗೆ, ಅವ್ವಂಗೆ, ಮಾವಂಗೆ ಆದುಂತ ಆತ್, ಹಾಂಗೆ ಅವೇ ಈಗ ನಿಶ್ಚಯ ಮಾಡ್ತಾ ಒಳೊ. ಹೌದು, ತಂಗೆ ಮಿಣ್ಕಿನೂ ದೊಡ್ಡಿತಾಗುಟು. ನಂಗೇ ಸಾ ಹದ್ನೇಳ್ ಹದ್ನೆಂಟ್ ವೊರ್ಸ ಆತ್. ಹೀಂಗೆಲ್ಲ ಇರಿಕನ ಈ ಸಮ್ಮಂದ ಬೇಡಾಂತ ಹೇಳುದಾದರೂ ಹೇಂಗೆ? ನನ್ನ ತಲೆಲಿ ಇಂವನೇಂತ ದೇವ್ರು ಬರ್ದಿದ್ದರೆ ಯಾದರ್ ಎಂತ ಮಾಡಿಕೆ ಆದೆ? ಹೀಂಗೆಲ್ಲಾ ಯೋಚನೆ ಮಾಡಿ ಒಳ್ಳದ್ ಕೆಟ್ಟದರ ಎಲ್ಲಾ ದೇವ್ರಿಗೆ ಬುಟ್ಟಿತ್.

ವೀಳ್ಯ ಶಾಸ್ತ್ರದಂದ್ ಕಳಲನವರ ಕಾಪಾಡಿ, ಅವನ ಹೆಣ್ಣ್, ಸೋದರ ಮಾವಂದ್ರ್, ಅತ್ತೆಕ್ಕ, ಕುಟುಂಬದ ಹಿರಿಯ, ಅವನ ಹೆಣ್ಣ್, ನೆರೆಕರೆಯವುಂತ ಒಂದ್ ಇಪ್ಪತ್ತೈದ್ ಜನ, ಮತ್ತೆ ಹೊಸ ನೆಂಟ್ರ ಕಡೆಂದ ಒಂಬತ್ತ್ ಜನ ಬಂದಿದ್ದೊ. ಅವು ಬಾಕನ ಮುತ್ತೈದೆ ಹೆಣ್ಮಕ್ಕ ಬಾಗ್ಲ್ ಹಕ್ಕಲೆ ನೀರ್‌ನ ಚೆಂಬುನ ಹಿಡ್ಕಂಡ್ "ಬಂದರಿಯಾ ನೆಂಟ್ರೇ"ಂತ ಮಾತಾಡ್ಸಿದೊ. ಮೊ್ದ್ವೆ ಹೈದ ಎಲುಂಬ ಅರ್ಧ ಮುಡಿ ಅಕ್ಕಿನ ಹೊತ್ತ್‌ಕೊಂಡ್ ಬಂದಿತ್. ಬಾಕಿ ಅಕ್ಕಿ ಒಳ್ದವು ಹೊತ್ತಿದ್ದೊ. ಮಾಚುನ ಮಾವಂದರ್ ಅವರ ಹೆಗ್ಲಿಂದ ಅಕ್ಕಿ ಚೀಲನ ಎತ್ತಿ ತೆಗ್ದ್ ಚಿಂಟೆಲಿ ಇಸಿದೊ. ಬಂದ ಹೆಣ್ಮಕ್ಕಳಿಗೆ ಮೊಂದ್ರಿ, ಗಣ್ಮಕ್ಕಳಿಗೆ ಮಣೆ ಕೊಟ್ಟು ಕುದ್ರಿಸಿದೊ. ಎಲ್ಲೊ್ವು ಕುದ್ದ್ ಆದ ಮೇಲೆ, ಕಾಪಾಡಿ ಅವನ ಹೆಣ್ಣ್‌ನ ಒಮ್ಮೆ ನೋಡಿ ಯೆಜಮಾನಿಕೆ ಸೊರಲಿ "ಗೂಡೆನ ಕೈಲಿ ಕುಡ್ಯಕೆ ಕೊಟ್ಟು ಕಳ್ಸಿ"ಂತ ಹೇಳ್ತ್. ಅಂವ ಹೇಳಿ ಮುಗಿಯಕೆ ಮುಂದೆ ಕಾಪಾಡ್ತಿ ಸೆರ್‌ಂಗ್ ಸೆರಿ ಮಾಡಿಕಂಡ್ ಒಳಗೆ ಹೋತ್.

ಮುಂದೆನೇ ಮಾಡಿ ಇಸಿದ್ದ ಬೆಲ್ಲದ ಪಾನಕನ ಮಾಚುನೊಟ್ಟಿಗೆ ಕಾಪಾಡ್ತಿನೂ ತಾತ್. ಲಕಲಕಂತ ಹೊಳವ ಕೀಜಿದ್ ಲೋಟಗಳಲಿ ಪಾನಕ ತಂದ ಮಾಚು ಹೈದನ ಅವ್ವ ಅಪ್ಪಂಗೆ ಕೊಟ್ಟತ್. ಪಾನಕ ಕುಡ್ದ್ ಆದ ಮೇಲೆ ಮೊ್ದ್‌ಮಂಜ ಎಲುಂಬನ ಅವ್ವ ಮಾಚುನ, ಹಕ್ಕಲೆ ಕರ್ದ್ ಕುದ್ರಿಸಿ, ಹೆಸ್ರ್ ಕೇಳ್ತ್. ಆ ಮೇಲೆ ಸೊಪ್ಪು, ಸೊಯ್ದೆ, ನೇಜಿ, ಕೊಯ್ಲು ಎಲ್ಲ ಗೊತ್ತುಟ್ಟಾಂತ ಕೇಳ್ತ್. ಗೊತ್ತುಟ್ಟುಂತ ಹೇಳ್ತ್. "ಚಾಪೆ ಮಿಡ್ಯಕೆ?" ಗೊತ್ತುಟ್ಟುಂತ ತಲೆ ಆಡ್ಸಿತ್. ಹೀಂಗೆ ಅದರ ಅತ್ತೆನ ತೂಕಾಟಿಕೆ ಮುಗ್ದ ಮೇಲೆ "ಆತ್ ಮಗ, ನೀ ಹೋಗು"ಂತ ಹೇಳ್ತ್.

ಬಂದ ಹೆಳ್ಮಕ್ಕ ಕುದ್ದಲ್ಲಿಂದ ಎದ್ದ್ ಒಳಗೆ ಬಂದ್, ಒಳಗೆಲ್ಲ ನೋಡ್ದೊ. ದಟಿಗೆನ ಇಷ್ಟ್ ಲಾಯ್ಕ್ ಇಸಿಕೊಂಬಕೆ ಆದೆನಾ?ಂತೇಳ್ವಂಗೆ ಮತ್ತೆ ಮತ್ತೆ ನೋಡ್ದೊ. ಅವರ ಬಟ್ಟೆ ಬರೆ ನೋಡಿಕನನೇ ಅವು ಬಾರಿ ಹಳೆ ಕಾಲಲಿ ಇದ್ದಾಂಗೆ ಕಾಂಬತಿತ್. ಹೊರಗೆ ಗಣ್ಮಕ್ಕ ಮಾತಾಡಿಕಂಡ್ ಇದ್ದೊ. ಹಂಞ ಹೊತ್ತ್‌ಲಿ ಬಂದ ಕಡೆವರ ಕಾಪಾಡಿ "ಇನ್ನ್ ನಾವು ಸಾಸ್ತ್ರ ಮಾಡೊಮೊ, ಆಗದಾ?"ಂತ ಇಲ್ಲಿನವರ ಹಕ್ಕಲೆ ಕೇಳಿ "ನಿಮ್ಮ ಕ್ರಮ ಹೇಂಗೆ? ಬತ್ತ ಅಳ್ಯೆವ ಕ್ರಮ ಉಟ್ಟಲೇ?"ಂತ ಹೇಳ್ತ್.

ಮಾಚುನ ಮಾವ "ಹೌದು, ಉಟ್ಟು"ಂತ ಹೇಳಿ, ಉಂಬೊಳಗೆನತ್ತ ಮೋರೆ ತಿರ್‍ಗಿಸಿ ಂದ ಅಕ್ಕ, ಸೇರ್ ತಂಬ"ಂತ ಹೇಳ್ದ್ ಕೇಳಿ ಮಾಚುನ ಅವ್ವ "ತಂದೆ"ತ ಹೇಳಿಕಂಡೇ ಸೇರ್ ಂದ್ ತಮ್ಮನ ಹಕ್ಕಲೆ ಕೊಟ್ಟತ್. ಅವರ ಕಾಪಾಡಿ ಎಲುಂಬನ ಹಕ್ಕಲೆ "ನೀ ಮೂರ್ ಸೇರ್ ಕ್ಕಿ ಅಳ್ದ್ ಕೊಡು"ಂತ ಹೇಳ್ತ್. ಅಂವ ಹೆಗ್ಲ್ ಮೇಲಿದ್ದ ಶಾಲ್‌ನ ಅಲ್ಲೇ ಇದ್ದವರ ಹಕ್ಕಲೆ ಉಟ್ಟು, ಮೂರ್ಸೇರ್ ಅಕ್ಕಿ ಅಳ್ತ್. ಮತ್ತೆ ಎರ್ಡ್ ಕಡೆವು ಮೊ್ದ್ವೆ ಯಾಗ, ಹೇಂಗೆಂತ ಮಾತಾಡ್ಯೊ. ಹಂಞ ಚರ್ಚೆನೂ ಆತ್. ಆಕೇರಿಗೆ ಹೈದನ ಕಡೆ ಗುರಿಕಾರ "ಇಂದ್ ಒಂದ್ ಸನ್ಯಾರ, ಬರ್ವ್ ಸನ್ಯಾರ ಬುಟ್ಟುದು ಮತ್ತೆನ ಸನ್ಯಾರ ನಾವು ದಿಬ್ಬಣ ಬಂದವೆ. ಮೊ್ರ್ದಿನ ಐತಾರ ಧಾರೆ. ಅಕ್ಕಾ? ನಿಮ್ಮ ಆಲಚನೆ ಹೇಂಗೆ?"ಂತ ಕೇಳ್ತ್. ಇಲ್ಲಿನ ಕಾಪಾಡಿ ಹೇಳ್ತ್ " ಅಕ್ಕ್, ಆದರೆ ಎರ್ಡ್ ವಾರಲಿ ಎಲ್ಲ ತೆಯಾರಿಗೆ ಬಂಜ ಉಟ್ಟು, ಹಾಂಗೆಂತ ಮತ್ತೆ ತಡ್ದರೆ ಮಳೆ ಹಿಡ್ಯೊದು. ಅದ್ ಮತ್ತೂ ಬಂಜ"ಂತ ಹೇಳಿ ಕಳಲನ ಮತ್ತೆ ಮಾಚುನ ಸೋದರ ಮಾವನ ನೋಡಿ ಹೇಂಗೆ? ಅವು ಹೇಳ್ದ ಹಾಂಗೆ ಆದೋ, ಅಲ್ಲಾ ಬೇರೆ ದಿನ ನೋಡುದೋ"ಂತ ಕೇಳ್ತ್. ಕಳಲ "ಸೋದರ ಮಾವ ಹೇಳ್ದಂಗೆ"ಂತ ಜಾರಿಕಂಡತ್. ಅಲ್ಲರೂ, ಅಳಿಯ ಕಟ್ಟ್‌ಲಿ ಅಪ್ಪಂಗೆ ಯಾವ ಜವಾಬ್ದಾರಿನೂ ಇಲ್ಲೆ. ಎಲ್ಲ ಮಾವ ಹೇಳ್ದ ಹಾಂಗೆ. ಮಾವ ಗಂಟ್ಲ್ ಸರಿ ಮಾಡಿಕಂಡ್ 'ಹೇಂಗೂ ಮೊ್ದ್ವೆ ಮಾಡಿಕೆ ಹೊರ್‍ಟ್ರೊಳೊ. ಹದ್ನೈದ್ ದಿನ ಆದರೆ ಹದ್ನೈದ್ ದಿನ. ಅವು ಹೇಳ್ದ ಹಾಂಗೇ ಆಗಲಿ"ಂತ ಹೇಳಿ "ಹಾಂಗಾರೆ ಈಗ ವೀಳ್ಯ ಶಾಸ್ತ್ರ ಮಾಡೊಮೊ್ ಅಲ್ಲಾ"ಂತ ತೆಯಾರ್ ಆದೊ.

ಚೌಕಾಗಿ ನಾಕ್ ಒಲಿ ಮೊ್ಂದ್ರಿ ಹಾಕಿದೊ. ನೊ್ಡುಲಿ ಮರದ ಮಣೆ ಮೇಲೆ ಕಂಚಿನ ಬಟ್ಳ್‌ಲಿ ಐದ್ ವೀಳ್ಯದೆಲೆ ಅದರ ಮೇಲೆ ಒಂದ್‌ಅಡಿಕೆ ಮತ್ತೆ ಹಂಞ ಅಕ್ಕಿ ಹಾಕಿ ಇಸಿದೊ. ಎರ್ಡ್ ಕಡೆವೂ ಶಾಸ್ತ್ರಕ್ಕೆ ಬೇಕಾದ ವೀಳ್ಯದೆಲೆ, ಅಡಿಕೆ, ಅಡಿಕೆ ಹೋಳು ಇಸಿಕಂಡಿದ್ದೊ. ಮತ್ತೆ ವೀಳ್ಯಡ್ಕದ ಕಾಪಾಡಿ ಸಭೆಗೆ ಕೈಮುಗ್ದ್ ಊರುನ, ತಳದ ದೈವ ದೇವರುಗಳ ನೆಂದ್ "ಈ ಹಿಂದೆ ಮಾತಾಡ್ದ ಹಾಂಗೆ ನಾವು ಇಂದ್ ಮಾಚು ಗೂಡೆ ಮತ್ತೆ ಎಲುಂಬಂತೇಳ್ವ ಹೈದನ ನಿಗಂಟ್ ವೀಳ್ಯ ಕಟ್ಟಿಕೆ ಸಭೆನ ಅಪ್ಪಣೆ ಕೇಳ್ವೆ"ಂತ ಹೇಳಿದ ಮೇಲೆ ಅವನೂ ವೀಳ್ಯ ಕಟ್ಟಿಕೆ ಇದ್ದ ಗಣ್ಮಕ್ಕ ಎಲ್ಲ ಅಲ್ಲಿ ಕುದ್ದೊ. ಸಭೆಂದ "ದೇವರಪ್ಪಣೆ"ಂತ ಗುಂಪು ಸೊರ ಕೇಳ್ತ್. ಎರ್ಡ್ ಕಡೆನ ಹಿರ್‍ಯರ್ ಮೂಡು ಪಡ್ವ ಆಗಿ ಎದ್‌ರ್ ಬದ್‌ರಾಗಿ ಕುದ್ದೊ. ಒಳ್ದವು ಅವರ ಅತ್ತ ಇತ್ತ ಕರೆಲಿ ಕುದ್ದೊ. ಹರ್‍ವಾಣಲಿ ಒಸಿ ವೀಳ್ಯದೆಲೆನ ಕೊಡಿ ಎದ್ರ್ ಬರ್ವ್ ಹಾಂಗೆ ಇಸಿ, ಅದರ ಮೇಲೊಂದ್ ಅಡಿಕೆ, ಅಡಿಕೆ ಹೋಳು ಇಸಿ, ದೇವ್ರು, ಗುರು, ಅಪ್ಪ, ಅವ್ವಂತ ಹೀಂಗೆ ಏಳ್ ವೀಳ್ಯಗಳ ಹರಿವಾಣ ಪಗರ್ಸಿಕಂಡೊ. ತೆಕಂಡವೂ ಅದ್ರಿಂದ ಹಂಞ ಎಲೆಅಡಿಕೆ ತೆಗ್ದ್, ಅವು ತಂದ ಎಲೆ ಅಡಿಕೆ ಇಸಿ ಕೊಟ್ಟೊ, ಮತ್ತೆ ಇವೂ ಹಾಂಗೇ ಮಾಡ್ದೊ.

ವೀಳ್ಯ ಶಾಸ್ತ್ರ ಆದ ಮೇಲೆ ಮಾಚುಗೆ ವೀಳ್ಯ ಸಾಸ್ತ್ರದ ಎಲೆ ಅಡಿಕೆನ {ಎರ್ಡ್ ಎಲೆ, ಎರ್ಡ್ ಅಡಿಕೆ ಹೋಳು} ಸುಣ್ಣ ಹಚ್ಚಿ ತಿಂಬಕೆ ಕೊಟ್ಟೊ.

ಮತ್ತೆ ಊಟದ ಅಟ್ಟಣೆ. ಕುಡಿವವ್ಕೆ ಶರಾಬು. ಅದ್ ಆಗದವ್ಕೆ ಕಳ್ಳ್ ಹಂಚಿಕೆ ಸುರು ಮಾಡ್ದೊ. ಕುಡ್ದ್ ಆದ ಮೇಲೆ ಊಟ ಕೊಟ್ಟೊ, ಊಟಕ್ಕೆ ಕೋಳಿ ಸುಕ್ಕ, ಸೋಂತೆ ಗೈಪು, ಪದೆಂಜಿ ಪಾಯಸ ಮಾಡಿದ್ದೊ. ಬಂದವ್ಕೆ ಹೋದಲ್ಲಿ ಹೇಂಗೆ ಉಣೋಕುಂತ ಗೊತ್ತಿಲ್ಲೆ.

ಬೇಕಾದ್ದರ ಮತ್ತೆ ಮತ್ತೆ ಕೇಳಿ ಕೇಳಿ ರಾವು ಹಿಡ್ಡವರ ಹಾಂಗೆ ಉಂಡೊ. ಕಡೆಗೆ ಮನೆಯೊಕ್ಷ ಕೋಳಿ ಸುಕ್ಕನೇ ಇಲ್ಲೆ. ಕೋಳಿ ಗೈಪು ಇಲ್ಲದಕ್ಕೆ ಇವರಲ್ಲಿ ಕೆಲೊ್ವು "ಎಂಥ ಕಾಡ ಮೊಯಿಂಸರೋ ಏನೋ. ಒಂದ್ ಉಂಬಕೆ ಸಾ ಗೊತ್ತಿಲ್ಲೆ. ಹೋದಲ್ಲಿ ಮರ್ಯಾದೆ ಇಲ್ಲದ ಕೇಳಿ ತಿಂಬಕಾಗದ್‌ಂತ ಗೊತ್ತಿಲ್ಲದ ಬಾಸೆ ಇಲ್ಲದವು"ಂತೆಲ್ಲ ಬೊ್ಯ್ದೊ. ಮುಂದೆನೇ ಮಾಚು ಸೂಕ್ಷ್ಮದ ಗೂಡೆ. ಎರ್ಡ್ನೇ ಸಮ್ಮಂದ, ಹೈದಂಗೆ ಪ್ರಾಯ ಆಗುಟುಂತ ಬೇಜಾರ್ಲಿತ್ತ್. ಈ ಅವರ ನಾಲಾಯಕ್ ಬುದ್ಧಿ ನೋಡಿ "ನಂಗೆ ಇಂಥವು ಸಿಕ್ಕಿದೊ ಅಲ್ಲಾ, ನನ್ನ ಗ್ರಚಾರನೇ. ಈ ಮೊ್ದ್ವೆನೇ ನಂಗೆ ಬೇಡಾಗಿತ್ತ್"ಂತ ಮನ್ಸ್‌ಲೇ ಕೊರ್‍ಗಿಕಂಡ್ ಮೊ್ರ್‌ಬ್ತ್.

ಮಾಚುನ ನಿಶ್ಚಯ ಆಗಿ ಹನ್ನೆರ್ಡ್ ದಿನಗ ಕಳ್ದೊ. ಹದಿಮೂರನೇ ದಿನ ಚಪ್ಪರ ಏರ್ಸುದು.

ತಂದಿಟ್ಟ ಕಂಬಗಳ ಹಾಕಿ ಆತ್. ನೊ್ಡುಲಿ ಕನ್ನೆ ಕಂಬ. ಅದರ ಹಾಕಿಕಾಕನ ಮೂರ್ ಜೆನ ಗಣ್ಮಕ್ಕ ಮೂರು ಮುದ್ದೆ ಮೊ್ಣ್ಣ್ ತಂದ್ ಇಸಿದೊ. ಸೋದರ ಮಾವ ಗಣಪತಿಗೆ ಇಸಿದ ಸಾಮಾನೊಟ್ಟಿಗೆ ಚಿನ್ನದ ಒಂದ್ ಸಣ್ಣ ಚೂರುನ ಸೇರ್ಸಿಕಂಡ್ ಬಂದ್, ಕನ್ನೆ ಕಂಬದ ಬುಡಲಿ ಇಸಿತ್.{ಕನ್ನೆ ಕಂಬ ಹಾಲ್ ಬರ್ವ ಮರದ್ದ್ ಆಗಿರೋಕು.} ಅದರ ಮೇಲೆ ಈ ಮೂರ್ ಮುದ್ದೆ ಮೊಣ್ಣ್‌ನ್ ಹಾಕಿ ಗಟ್ಟಿ ಮಾಡ್ದೊ. ಆ ಮೇಲೆ ಕನ್ನೆ ಕಂಬಕ್ಕೆ ಬಿಳಿ ಬಟ್ಟೆ ಸುತ್ತಿ, ಒಂದ್ ಕರ್ಯಮಣಿ ಸರನ ಸುತ್ತಿದೊ. {ಆ ಕರ್ಯಮಣಿ ಸರನ ತುಪ್ಪ ತಂದ ದಿನ ಮೊ್ದ್‌ಮಂಜ ಮೊ್ದೊಳಿಗೆಗೆ ಕಟ್ಟುದು ಅಂದಿನ ಕ್ರಮ}

ಇತ್ತ ಮೊ್ದ್ವೆ ಮನೆ ಇಜ್ಜೆಲ್‌ಲಿ ಚಪ್ಪರಕ್ಕೆ ಬೆದ್ರ್ ಸಿಗ್ದ್ ಅಡ್ಡ ನೀಟ ಕಟ್ಟಿಕಂಡ್, ಇರಿಕನ, ಕಾಪಾಡ್ತಿ, ಹಾಲೆಮರದ ಗೆಲ್ಲ್, ಈಂದ್‌ನ ಕೈ ಮತ್ತೆ ಸೊಪ್ಪು ಇದ್ದ ಬೆದ್ರ್ ಕಣೆನೊಟ್ಟಿಗೆ ಜೋಡ್ಸಿ, ಹಾಲ್ ಬರ್ವ್‌ಂತ ಮರದಡಿಲಿ {ಹಲ್ಸಿನ ಮರದಡಿಲಿ} ಇಸಿತ್. ಅದರ ಒಟ್ಟಿಗೆ ಬಂದ ಚೋಮು ಸೋಬಾನೆ ಹೇಳಿಕೆ ಸುರು ಮಾಡ್ತ್.

ಓ...ಪೊಲಿ ಪೊಲಿ ಪೊಲಿ ಮೊ್ದುವೆ
ಹೆಣ್ಣ್ ಮಾತಾಡ್ಸಿಕೆ, ಹೆಣ್ಣ್ ನಿಚ್ಚಯಕೆ
ಕೋಟೆ ಕೊತ್ತಳದ ದಟಿಗೆಗೆ,
ಕೋಟೆ ಕೊತ್ತಳದ ದಟಿಗೆಗೆ,
ಹೆಣ್ಣ್ ಮಾತಾಡ್ಸಿಕೆ, ಹೆಣ್ಣ್ ನಿಚ್ಚಯಕೆ
ಓ...ಪೊಲಿ ಪೊಲಿ ಪೊಲಿ ಮೊ್ದುವೇ.
ನೆಂಟ್ರ್ ಹೋದೊ, ಕುದ್ದ್‌ಕಂಡೊ
ಕೊಡ್ವಂತ ಹೆಣ್ಣುಟ್ಟಾ, ಮಾರ್ವಂತ ಎತ್ತುಟ್ಟಾ?
ಕೊಡ್ವಂತ ಹೆಣ್ಣ್‌ನ ಆಗಳೆ ಕೊಟ್ಟಾತ್
ಮಾರುವ ಎತ್ತ್‌ನ ಆಗಳೆ ಮಾರ್‍ಯಾತ್
ಈಗೊಂದು ಗೂಡೆ ಉಟ್ಟೊ
ಮೂಲೆದ್ದ್ ಕಸ ಗುಡ್ಸಿಕೆ ಗೊತ್ತಿಲ್ಲಾದ್ದ್.
ಕಸ ಗುಡ್ಸಿಕೆ ಗೊತ್ತಿಲ್ಲಾರೆ
ನಾವು ಹೇಳಿ ಕಲ್ಸೂವೊ

ಹೆಣ್ಣ್ ಆದುಂತ ನಿಚ್ಚಯ ಮಾಡ್ಕಂಡೊ
ನಿಶ್ಚಯ ಮಾಡ್ಕಂಡ್, ಹಸ್ರ್ ಗೆಲ್ಲ್ ಕಡ್ಯೋಕು
ಹಸಿ ಚಪ್ರ ಹಾಕೋಕು
ಓ.....ಪೊಲಿ ಪೊಲಿ ಪೊಲಿ ಮ್ಡುವೇ.
ಹಾಲೆ ಗೆಲ್ಲ್ ಕಡ್ಯೋಕು, ಪೊಲಿ ಕರ್ಯೋಕು
ಹಸ್ರ್ ಕಡ್ಯೋಕು ಓ ಒಡ್ಯಾ
ಹಸ್ರ್ ಚಪ್ಪರ ಹಾಕೋಕು
ನೀ ಎಲ್ಲಿ ಹೋದೀಯಾ? ಪಂಬತ್ತಾ ಓ ಮಂಜ
ಪಾಲೆ ಗಿಡ ನೆಡಿಕೆ ಸಾಲ್ ಮಾಡ್ ನೀ
ಸಾಲ್ ತೆಗ್ದದ್ ಬೀಜ ಹಾಕ್ಯಾ
ಪಂಬತ್ತಾ ಮಂಜನೇ
ಎರ್ಡ್ ಬಿಂದಿಗೆ ನೀರ್ ಹೊಯ್ತ್
ಎರ್ಡ್‌ಲೆ ಬುಟ್ಟತ್
ಎಷ್ಟ್ ಬಿಂದಿಗೆ ನೀರ್ ಹೊಯ್ದಾ
ಪಂಬತ್ತಾ ಮಂಜನೇ
ನಾಲ್ಕ್ ಬಿಂದಿಗೆ ನೀರ್ ಹೊಯ್ತ್
ಚೆನ್ನಯ್ಯ ಮಂಜನೇ
ನಾಲ್ಕೆಲೆ ಬುಟ್ಟತ್
ಒಂದ್ ಗೆಲ್ಲ್ ಹೋಗುಟು ಮೂಡಾಣ ಭಾಗಕ್ಕೆ
ಮತ್ತೊಂದ್ ಗೆಲ್ಲ್ ಪಡ್ವಣ ಭಾಗಕ್ಕೆ
ಇನ್ನೊಂದು ಗೆಲ್ಲ್ ತೆಂಕಣ ಭಾಗಕ್ಕೆ
ಮತ್ತೊಂದ್ ಗೆಲ್ಲ್ ಬಡಗಣ ಭಾಗಕ್ಕೆ
ತೆಂಕಣ ಬಡಗಣ ಭಾಗನ ಬುಟ್ಟ್ ಬುಡು
ಮೂಡಣ ಭಾಗದ ಗೆಲ್ಲ್‌ನ ಕಡ್ದ್‌ಕಾ
ಹಾಲೆ ಮರನ ಕಡ್ದೊ, ಅದರ ಸಿಂಗಾರ ಮಾಡ್ದೊ
ಎಣ್ಣೆ ನೀರ್ ಬುಟ್ಟೊ, ಹಾಲೆನ ಕಾಲ್ ಹಿಡ್ದೊ
ದಿಬ್ಬಣ ತೆಕ್ಕಂಡ್ ಹೊರ್ಟ್ ಬುಟ್ಟೊ
ಓ... ಪೊಲಿ ಪೊಲಿ ಪೊಲಿ ಮ್ಡುವೇ...

ಚೋಮುನ ಸೋಬಾನೆ ಮುಗ್ತ್. ಆ ಮೇಲೆ ಅಲ್ಲಿದ್ದವು ಎಲ್ಲಾ ಒಟ್ಟಿಗೆ ಮನೆಗೆ ಬಂದೊ. ಅವು ಬಾಕನ ಚಪ್ಪರಕ್ಕೆ ಬೆದ್ರ್ ಸೀಳ್‌ನ ಕಟ್ಟಿ ಆಗಿತ್ತ್. ಚಪ್ಪರ ಏರ್ಸಿಕೆ ಮಾತ್ರ ಬಾಕಿ ಆಗಿತ್ತ್. ಇವು ಬಂದ ಹಾಂಗೆ "ಚಪ್ಪರ ಏರ್ಸಿಕೆ ನಿಮ್ಮನೇ ಕಾದ್‌ಕಂಡ್ ಇದ್ದೊ"ಂತ ಹೇಳಿ, ನಾಕ್ ಬೊಳಿಯ ನಾಕ್ ಗಣ್ಮಕ್ಕ ನಾಕ್ ಮೂಲೆಲಿ ನಿಂತೊ. ಕಾಪಾಡಿ, ಕನ್ನೆ ಕಂಬದ ಹಕ್ಕಲೆ ನಿತ್ತತ್. ಮತ್ತೆ "ಮ್ದ್ವೆ ಚಪ್ಪರ ಏರುಸವೇ"ಂತ ಸಭೆ ಅಪ್ಪಣೆ ಕೇಳಿ, ನಾಕ್ ಮೂಲೆಲಿ ನಿಂತ ಗಣ್ಮಕ್ಕ ಈಂದ್{ಬೈನೆ}ಕೈಗಳ ಮೇಲೆ ಚಪ್ಪರಕ್ಕೆ ಹಾಕಿದೊ. ಆ ಮೇಲೆ ಬೇಕಾದ ಹಾಂಗೆ ಬೈನೆ

ಕೈ ಹಾಕಿ ಚಪ್ಪರ ಮಾಡ್ದೊ. {ಕೆಲೊ್ವು ಕಡೆಲಿ ಮಂಜ ಆದ ಮೇಲೆ ಚಪ್ಪರ ಏರ್ಸುದೂ ಉಟ್ಟು}

ಆ ಮೇಲೆ ಸೋದರ ಮಾವಂದರ್ ಜಾತಿನ ಹಿರ್‍ಯರ ಮುಂದೆ ಇಸಿಕಂಡ್ ದೇವರ ಕೋಣೆಲಿ ಗಣಪತಿಗೆ ಇಸಿದೊ. ಅಲ್ಲಿ ಒಂದ್ ಕೊಡಿ ಬಾಳ್ಲೆಲಿ ಐದ್ ಕುಡ್ತೆ ಅಕ್ಕಿ, ಐದ್ ವೀಳ್ಯದೆಲೆ, ಅದರ ಮೇಲೊಂದು ಅಡಿಕೆ, ಒಂದ್ ತೆಂಗಿನ ಕಾಯಿ, ಮುಗುಳಿ ಲೆಕ್ಕಲಿ ಬಾಳೆ ಹಣ್ಣಿದ್ದ ಪಾಡ, ಒಂದೂ ಕಾಲ್ರುಪಾಯಿ ಇಸಿ ಊರುನ, ತಳದ ದೈವ ದೇವ್ರುಗಳ ನೆನ್ಸಿಕಂಡ್ "ನಾವು ನಡ್ಸಿಕೆ ಹೊರ್ಪ ಈ ಮೊ್ದ್ವೆನ ಒಳ್ಳ ಕಾರ್ಯಕೆ ಯಾವೊಂದೂ ಅಡ್ಡಿ ಅಡಚಣೆ ಬಾರದ ಹಾಂಗೆ ಪೊರ್ಲುಲಿ ನಡ್ಸಿಕೊಟ್ಟಿಯಂತ ನಾವು ನಂಬ್ಯೊಳೊ. ನಮ್ಮ ನಂಬಿಕೆಗೆ ಇಂಬಾಗಿ ಅದರ ನಡ್ಸಿ ಕೊಡ್ವ ಭಾರ ನಿನ್ನದ್"ಂತ ಬೇಡಿಕಂಡ್, ಎಲ್ಲೊ್ವು ಬಾಳ್ಲೆಲಿದ್ದ ಅಕ್ಕಿನ ಹಂಞ ಹಂಞ ತೆಗ್ದ್ ದೀಪಕ್ಕೆ ಹಾಕಿ ಅಡ್ಡ ಬಿದ್ದೊ.

ಇದೆಲ್ಲ ಆದ ಮೇಲೆ ಕುಲ ದೇವರಿಗೆ ನಡ್ಸುವ ಒಂದ್ ಕ್ರಿಯೆ ಮಂಜ.{ಮಂಜೊ} ಅಂದ್‍ನ ಅಡ್ಗೆನ ಗಣ್ಮಕ್ಕ ಸುದ್ಧಲಿ ಮಾಡೋಕು. ಮೀದ್ ಮಡಿ ಉಟ್ಟು, ಮದುಮಾಂಸ ತೆಕಣದೆ ಮಾಡೋಕು. ಅಂದ್‍ನ ಊಟ ಅಂದರೆ ಒಣ ಮೀನ್ ಗೈಪು ಮತ್ತೆ ಹೊರ್ದ ಅಕ್ಕಿ. ಅಡ್ಗೆ ಎಲ್ಲ ಆದ ಮೇಲೆ ಮೊ್ದೊಳಿಗೆನ ಸೋದರ ಮಾವ ಕನ್ನೆ ಕಂಬದ ಎಡಕ್ಕೆ ಕುರ್ದಿ ನೀರ್ ಹಾಕಿ ಸುದ್ದ ಮಾಡ್ತ್. ಆ ಮೇಲೆ "ಮುಗೇರರ ದೈವಕ್ಕೆ ಕೊಡಿ ಎಲೆ ಹಾಕ್ವೆ"ಂತ ಹೇಳಿ ಐದ್ ಕೊಡಿ ಬಾಳೆಲೆಗಳ ಮೂಡು ಪಡ್ವಾಗಿ ಇಸಿತ್. ಒಂದೊಂದು ಎಲೆಗೆ ತಾಗ್‍ವ ಹಾಂಗೆ, ಒಣ ಬಾಳ್ಲೆಲೆಲಿ ಮಾಡ್ದ ಸಣ್ಣ ಸಣ್ಣ ಕಿಲ್ಲಿಲಿ ಕಳ್ಳ್ ಹೊಯ್ದ್ ಇಸಿತ್. ನಂತರ ತಳದ ದೈವ ದೇವರುಗಳ ನೆಂಪು ಮಾಡಿಕಂಡ್ "ನಾವು ಇಕ್ಕಿದ ಎಡೆಲಿ, ಮಾಡ್ದರ್‍ಲ್ಲಿ, ಇಕ್ಕಿದರ್‍ಲ್ಲಿ ಏನಾರ್ ಹೆಚ್ಚ್ ಕಡ್ಮೆ ಆಗಿರ್ದು. ನಮ್ಮ ತೊ್ಪ್ಪಿಗೆ ಮಾಪು ಕೊಟ್ಟು, ಇಕ್ಕಿದರ ಒಪ್ಸಿಕೊ್ಂಡ್, ನಮ್ಮ ಮನೆಲಿ ಆವ ಒಳ್ಳ ಕಾರ್ಯಕ್ಕೆ ಯಾವುದೇ ಒಂದ್ ತೊಂದರೆಗ ಬಾರದ ಹಾಂಗೆ ಕಾಪಾಡ್ವ ಪುಣ್ಯ ನೀವುಗೆ ಸೇರ್ದ್"ಂತ ಕೇಳಿಕಂಡ್, ಎಲ್ಲೊ್ವು ಬಾಳ್ಲೆಲಿದ್ದ ಅಕ್ಕಿನ ಹಂಞ ಹಂಞ ತೆಕ್ಕಂಡ್, ದೀಪಕ್ಕೆ ಹಾಕಿ ಅಡ್ಡ ಬಿದ್ದೊ. ಅಷ್ಟೊತ್ತಿಗೆ ಕೆಲೊ್ವ್ಕೆ ಮೈ ನೊಡ್ಗಿಕೆ ಸುರು ಆತ್. ಹಾಂಗೆ ದರ್ಸನ ಬಾತ್‍ಂತೇಳ್ರೆ ಅವು ನಂಬುವ ಶಕ್ತಿ ಅವನ ಅಲ್ಲರೆ ಅವಳ ಮೈಗೆ ಬಾತ್‍ಂತ ಇವು ನಂಬುವೆ. ಹಾಂಗೆ ಮೈಗೆ ಬಂದವು ಅಭಯ ಕೊಟ್ಟ್, ಒಳ್ಳ ಮಾತ್ ಏನಾರ್ ಹೇಳ್ರೆ ಮನೆವ್ೊ್ಕೆ ಒಂದ್ ಸಮ್ಮಾನ, ಧೈರ್ಯ.

ಹೀಂಗೆ ದೈವ ದೇವರ ಸೇವೆ ಆದ ಮೇಲೆ ಹೊಸ ಮೊ್ದೊಳಿಗೆನ ತಲೆಗೆ ನೀರ್ ಹೊಯ್ಯೊದು. ಕಾಪಾಡ್ತಿ ಅಷ್ಟೊತ್ತಿಗೆ ಸುಗ್ಗಿ ಬತ್ತದ್ ಕುರುಂಟು ಮಾಡಿ ಕನ್ನೆ ಕಂಬದ ಹಕ್ಕಲೆ ಇಸಿದೆ. ಮೊ್ದೊಳಿಗೆ ಗೂಡೆ ಕನ್ನೆ ಕಂಬಕ್ಕೆ ಮೂರು ಸುತ್ತು ಬಂದ್ ಆ ಕುರುಂಟಿಗೆ ಬಲ ಕಾಲ್ ಇಸಿ ಮೂಡು ದಿಕ್ಕಿಗೆ ಮೋರೆ ಮಾಡಿ ಕುದ್‍ಕಂಡದೆ. ಅಲ್ಲೇ ಹಕ್ಕಲೆ ನೀರ್ ತುಂಬಿಸಿದ ಬಿಂದಿಗೆ ಇದ್ದದೆ. ಅದರ ಒಳಗೆ ಐದ್ ವೀಳ್ಯದೆಲೆ ಒಂದ್ ಅಡಿಕೆ ಹಾಕಿ ಇಸ್‍ವೆ. ಅಲ್ಲೇ ಇನ್ನೊಂದ್ ಮಡ್ಕೆಲಿ ಮೂರ್ತದ ನೀರ್ ಇದ್ದದೆ. ಅದರ ಹಕ್ಕಲೆನೇ ಸುಂಪೆನ ಮೇಲೆ ನೀರ್ ತುಂಬಿದ ನಾಲ್ಕ್ ಚೆಂಬುಗ ಇದ್ದವೆ. ಅದಿಕ್ಕೆ ತಾಂಗಿಕಂಡೆ ಗರಿಕೆ ಹುಲ್ಲು ಹಾಕಿಸಿದ ಎಣ್ಣೆ ಮಿಳ್ಳಿ. ಮುತ್ತೈದೆ ಹೆಂಗ್ಸ್ ಒಂದ್ ಬಂದ್, ಒಂದ್ ಅಡಿಕೆ ಮತ್ತೆ ಒಂದ್ ಎಲೆನ ನಾಕ್ ನಾಕ್ ತುಂಡು ಮಾಡಿ ಆ ಚೆಂಬುಗಳಿಗೆ ಹಾಕಿ ಇಸಿದೆ. ಸುರು ಸೋದರ ಮಾವ ಬಂದ್

ಗರಿಕೆ ಹುಲ್ಲಿಂದ ನೆಲಕ್ಕೆ ಮೂರ್ ಸಲ ಎಣ್ಣೆ ಬುಟ್ಟ್, ಆ ಮೂರ್ತದ ಮಡ್ಕೆಲಿದ್ದ ನೀರ್‌ನ ಮೊ್‌ದೊಳಿಗೆನ ತಲೆಗೆ ಹೊಯ್ದುದೆ. ಆ ಮೇಲೆ ಬಿಂದಿಗೆಲಿ ಇದ್ದ ನೀರ್‌ನ ನಾಲ್ಕ್ ಚೆಂಬುಗಳಿಗೆ ಹೊಯ್ದ್ ಹೋದೆ. ಮತ್ತೆ ಹೆಳ್ಮಕ್ಕ ಸುರು ನೆಲಕ್ಕೆ ನೀರ್ ಬುಟ್ಟ್, ಮೊ್‌ದೊಳಿಗೆನ ತಲೆಗೆ ಎಣ್ಣೆ ಹಾಕ್ವೆ, ಕಡೇಗೆ ಅವ್ವ, ಅದ್ ಆದ ಮೇಲೆ ಕಾಪಾಡ್ತಿ. ಕಾಪಾಡ್ತಿ ತಲೆಗೆ ಎಣ್ಣೆ ಹಾಕಿ ಅಲ್ಲಿದ್ದ ಸಾಮಾನ್‌ಗಳ ಪೂರ ಎತ್ತಿಕಂಡ್ ಹೋದೆ.

ಎಣ್ಣೆ ಹಾಕಿ ಆದ ಮೇಲೆ ಅದರ ಅತ್ತಿಗೆ ನಾದಿನಿಗ ಮೀಸಿಕೆ ಕರ್ಕಂಡ್ ಹೋದವೆ. ಮೀಸಿ, ಹೊಸ ಸೀರೆ ಉಡ್ಸಿ, ಸೆರಗ್ ಮುಚ್ಚಿಸಿಕಂಡ್, ದೇವರ ಕೋಣೆಗೆ ಕರ್ಕಂಡ್ ಹೋದ ಮೇಲೆ, ಅಲ್ಲಿ ಅದಿಕ್ಕೆ ಕಾಪಾಡ್ತಿ ಜನ್ವಾರ ಕಟ್ಟಿಕೆ ಉಟ್ಟು, ಜನ್ವಾರ ಅಂದರೆ ಮೂರು ಅಲ್ಲರೆ ಐದ್ ಎಳೆದ್ದ್ ತಾಮ್ರದ ಸರಿಗೆ. ಅದರ ಒಟ್ಟು ಸೇರ್ಸಿ ಬೆನ್ನಿಂದಾಗಿ ಹೆಗ್ಲಿಗೆ ತಂದ್,ಕಂಕ್‌ಣಿಕೆ ಅಡಿಂದ ತೆಕಂಡ್ ಮತ್ತೆ ಬೆನ್ನ್ ಹಿಂದೆ ಕಟ್ಟಿತ್. ಅಷ್ಟೊತ್ತಿಗೆ ಹೊರಗೆ ಮಂಜದ ಕ್ರಿಯೆಗಳ ಮುಗ್ಸಿ ಪ್ರಸಾದಂತ ಹೊರ್ದ ಅಕ್ಕಿ ಮತ್ತೆ ಒಣ್ಗೇಲ್ ಮೀನ್ ಗೈಪ್‌ನ ಕೊಟ್ಟ್‌ಕಂಡ್ ಇದ್ದೊ.

ದೇವರ ಕೋಣೆಲಿ ಇದ್ದ ಮೊ್‌ದೊಳಿಗೆಗೆ ಸೋದರ ಮಾವ ಹೊಸ ಸೀರೆ ಕೊಟ್ಟಿತ್. ಸಭೆಗೆ ಹೇಳಿ ಅದಿಕ್ಕೆ ಅಂವ ಮೂರ್ತದ ಮೊ್‌ಣಿ ಕಟ್ಟಿತ್. ಮೊ್‌ದೊಳಿಗೆ ಮನೆಂದ ಕೊಟ್ಟ ಸೀರೆನ ಅತ್ತೆಗೆ, ಪಂಚೆನ ಮಾವಂಗೆ ಕೊಟ್ಟ್ ಕಾಲ್ ಹಿಡ್ತ್. ಮತ್ತೆ ಅತ್ತಿಗೆ ನಾದಿನಿ ನೊ್‌ಡುಲಿ ಕುದ್ದ್ ಉಂಡತ್. ಇನ್ನ್ ಅದಿಕ್ಕೆ ಊಟ ಮೊ್‌ರ್ದಿನ ಮಧ್ಯಾನ, ಮೊ್‌ದ್ವೆ ಮುಗ್ದ ಮೇಲೆನೇ. ಉಂಡಾದ ಮೇಲೆ ಅತ್ತಿಗೆ ನಾದಿನಿಗ ಅದರ ಕೈ ತೊಳ್ಸಿದೊ. ಮೊ್‌ದೊಳಿಗೆನ ಮತ್ತೆ ಮೊ್‌ದ್ರಂಗಿಗೆ ಕುದ್ರಿಸಿದೊ.

ದೂರಂದ ಮೊ್‌ದ್ವೆಗೆ ಬಾವು ಮೊ್‌ದ್ರಂಗಿ ದಿನನೇ ಬಂದವೆ. ಅಂದ್ ನೆನ್ಸಿದ ಹಾಂಗೆ ಎದ್ದ್ ಹೊರ್ಡಿಕೆ, ಈಗಿನ ಹಾಂಗೆ ವಾಹನ ಸೌಕರ್ಯ ಇತ್ಲೆಲೇ. ಮಕ್ಕ ಮೊ್‌ರಿಗಳ ಹೊರ್ಡಿಸಿಕಂಡ್ ಎಷ್ಟೋ ದೂರ ನಡ್ಕೊಂಡ್ ಬರೋಕಾದೆ. ಅದಿಕೆ ಮುಂದೆನ ದಿನ ಬಂದರೆ ಹಂಞ ಅನ್ನೊಲ. ಮೊ್‌ದ್ವೆ ಮನೆ ಅಂದರೆ ಎರ್ಡ್ ದಿನ ಆದರೂ ಹೊಟ್ಟೆ ತುಂಬ ಉಣಕಲೇಂತ ಹೇಳ್ವ ಆಲಚನೆನೂ ಅದರ್ಲಿದ್ದದೆ. ಹೆಳ್ಮಕ್ಕ ಸಣ್ಣ ಕೂಸುಗಳ ತೆತ್ತಿಕಂಡ್, ನಡೆವ ಮಕ್ಕಳ ನಡ್ಸಿಕೊ್‌ಂಡ್ ಬರ್ತಿದ್ದೊ. ಹಾಂಗೆ ಬಾಕನ ಅವರ ಜುವ್ವ ಅರ್ದ ಆತಿತ್ತ್. ಒಮ್ಮೊಮ್ಮೆ ಬೊಳ್ಪುಗೆ ಹೊರ್ಪರೆ ಮೊ್‌ದ್ವೆ ಮನೆಗೆ ಎತ್ತಿಕನ ಕತ್ತಲೆನೇ ಆಗಿಬುಡ್ತಿತ್ತ್. ಬೊಳ್ಪುಗೆ ದಟಿಗೆಲಿ ಇದ್ದ ತಣೆನನೋ, ಗೆಡ್ಡೆ ಗೆಣ್ಸೋ ತಿಂದ್, ಏನೂ ಇಲ್ಲರೆ ಹೊಟ್ಟೆ ತುಂಬ ನೀರ್ ಕುಡ್ಕಂಡ್ ಬಂದವ್ಕೆ, ಇಷ್ಟ್ ದೂರಕೆ ಹೊಡಿ ಮಕ್ಕಳ ಎತ್ತಿಕೊ್‌ಂಡ್, ನಡ್ದ್ ಬಾಕನ ಕೈಕಾಲ್‌ಗೆ ಬಲನೇ ಇಲ್ಲದ ಹಾಂಗೆ ಆಗಿ, ಹೊಟ್ಟೆಲಿ ಕಿಚ್ಚ್ ಎದ್ರ್‌ತಿತ್ತ್. ಮೊ್‌ದ್ವೆ ಮನೆಲಿ ಹೆಳ್ಮಕ್ಕಳಿಗೆ, ನಾವುಗೆ ಹೊಟ್ಟೆ ಹಸ್ದದೆಂತ ಹೇಳ್ಕೆ ಆದ್ಲಲೇ. ಅದಿಕ್ಕೆ ಸಣ್ಣ ಮಕ್ಕಳ ಕುಂಡೆಗೆ ಜೆಂಟಿ ಮೊ್‌ರ್ಡಿಸುದು ಮತ್ತೆ ಅಡಿಗೆ ಮಾಡ್ವಲ್ಲಿ ಹೋಗಿ "ಮಕ್ಕಳಿಗೆ ಹೊಟ್ಟೆ ಹಸ್ದದೆ. ಹಾಂಗೆ ಮೊ್‌ರ್ಪವೆ. ತೆಳಿಗಂಜಿ ಮೆನಿ ಇದ್ದರೆ ಕೊಟ್ಟರೆನಾ?"ಂತ ಕೇಳಿ ತೆಕಣ್ತಿದ್ದೊ. ಮಕ್ಕಳ ಬಾಯಿಗೆ ಕೊಡಿಕಾಕನ ಇವು ಸಾ ಒಟ್ಟಿಗೆ ಉಂಬೊ್‌ದೆ. ಇದ್ ಅಡಿಗೆಯೊ್‌ವ್ಕೆ ಗೊತ್ತಿಲ್ಲದ ಸಂಗತಿ ಏನಲ್ಲ. ಹೆಚ್ಚಿನ ಮೊ್‌ದ್ವೆ ಮನೆಗಳಲಿ ಇದ್ ಮಾಮೂಲು ಕತೆ. ಉಂಬಕೆ ಗೆತಿ ಇಲ್ಲದೊ್‌ವು, ಎರ್ಡ್ ದಿನ ಆದರೂ ಹೊಟ್ಟೆ ತುಂಬ ಉಣಕಲೇಂತ ಎಷ್ಟೋ ಕಷ್ಟಪಟ್ಟ್‌ಕಂಡ್ ಮೊ್‌ದ್ವೆಗೆ ಬರ್ತಿದ್ದೊ ಅಲ್ಲಾ? ಅದ್ ಎಂತ ದರಿದ್ರ ಕಾಲ ಆಗಿರ್‌ದು! ❒

ಹಾಳೆ 14
ಮೊದ್ವೆ ದಿನ

ಹಿಂಬೊತ್ ದಿಬ್ಬಣ ಬಾತ್. ದಿಬ್ಬಣದ ಕೊಡಿ ಆಳ್ ಕಾಪಾಡಿ, ಮೊದ್ದೊಳಿಗೆ ದಟಿಗೆಂದ ತಲೆ ಕಾಂಬದಷ್ಟ್ ದೂರಲಿ ದಿಬ್ಬಣದವರ ನಿಲ್ಸಿ, ಚಪ್ಪರದ ಹಕ್ಕಲೆ ಬಂದ್ "ನವ ಕಡೆನ ದಿಬ್ಬಣ ಬಾತ್" ಹೇಳುದೇ ತಡ, ಗೂಡೆನ ಕಡೆನ ಹಿರ್ಯ ಒಬ್ಬ, ಕಾಪಾಡಿನ ಒಟ್ಟಿ ಬೇರೆ ನಾಕೈದ್ ಗಣ್ಮಕ್ಕಳ ಕರ್ಕಂಡ್ ದಿಬ್ಬಣದವರ ಹಕ್ಕಲೆ ಹೋಗಿ, "ಹೊಸ ಮೊದ್‌ಮಂಜ ಕಡೆನ ಗುರಿಕಾರ ಯಾರ್?"ಂತ ಕೇಳ್ತ್. ಅವರ ಗುರಿಕಾರ "ನಾನ್"ಂತ ಹೇಳಿ ನಾಕೈದ ಗಣ್ಮಕ್ಕಳೊಟ್ಟಿಗೆ ಎದ್ರ್ ಬಂದ್ ನಿಂತತ್. ಹೋದ್ದೊವು "ಬನ್ನಿ ಬನ್ನಿ"ಂತ ಅವರ ಕಡೆವ ಕರ್ಕಂಡ್ ಬಾಕನ, ಒಬ್ಬ ಒಂದ್ ಚೆಂಬುಲಿ ನೀರ್ ಹಿಡ್ಕಂಡ್, ಮತ್ತಿಬ್ಬರ್ ಒಂದ್ ಒ ಮೊಂದ್ರಿನ ಹಿಡ್ಕಂಡ್, ಎದ್ರ್ ತೋರ್ಸಿ "ಹೊಸ ನೆಂಟ್ರ್‌ಗೆ ಹಸೆ ನೀರ್ ಕೊಟ್ಟವೇ"ಂತ ಮೂರ ಸಲ ಹೇಳ್ದೊ. ನೆಂಟ್ರ್‌ಗ ಚಪ್ಪರದಡಿಗೆ ಬಂದೊ. ಅವರ ಕುದ್ರ್‌ಸಿ ಕುಡ್ಯಕೆ ಪಾನಕ ಕೊಟ್ಟೊ ಪಾನಕ ಕುಡ್ದ ಮೇಲೆ ಬಂದ ಹೆಳ್ಮಕ್ಕ ನಾವು ನಮ್ಮ ಮೊದ್ದೊಳಿಗೆನ ನೋಡ್ವೆ"ಂತ ಒಳ ಬಂದೊ.

ಅವರ ಮಂಗ ಮಾಡೋಕುಂತ ಇದರ ಪ್ರಾಯದ್ದೇ ನಾಕೈದ್ ಗೂಡೆಗ ಮೊದ್ದೊಳಿಗೆನ ಹಾಂಗೆ ಸಿಂಗಾರ ಮಾಡಿಕಂಡ್, ಅದ್ರೊಟ್ಟಿಗೆ ಇದ್ದೊ. ಗೂಡೆ ಕಡೆವ ನೆಗಾಡಿಕಂಡ್ "ನಿಮ್ಮ ಗೂಡೆನ ಹುಡ್ಕಿಕಣಿ"ಂತ ಹೇಳ್ದೊ. ಬಂದವ್ರಲ್ಲಿ ಯಾರಿದರ್ ಗೂಡೆ ಗುರ್ತ ಇದ್ದೇ ಇದ್ದದೆ. ಅಂತವು ಮೊದ್ದೊಳಿಗೆನ ಕೈಲಿ ಹಿಡ್ಕಂಡ್ "ಇದೇ ನಮ್ಮ ಹೊಸ ಗೂಡೆ"ಂತ ಹೇಳ್ವೆ. ಹೀಂಗೆ ಕುಸಾಲ್‌ಲಿ ಸುರು ಆದ ಮಾತ್‌ಕತೆ ಮತ್ತೆ ಮುಂದುವರ್ ಅವರವರ ಒಳಗೇ ಕೆಲೊವು ನೆಂಟ್ರ್‌ಗಂತ ಗೊತ್ತಾಕನ ಸಂಮ್ಮಂದ ಇನ್ನೂ ಹಕ್ಕಲೆ ಆದ ಕತ್ತಲೆ ಆತ್. ದಿಬ್ಬಣದ್ದೊವ್ಕೆ ಕತ್ತಲೆನ ಊಟ ಆಗಿ ನೆಂಟ್ರ್‌ಗ ಮಲ್ಗಿದೊ. ಅಡಿಗೆ ಮಾಡ್ವಲ್ಲಿ ಮಾತ್‌ಕತೆನ ಗೌಜಿ, ಒಟ್ಟಿಗೆ ಕಾಯಿ ಹೆರೆವ, ಕಡ್ಕಲ್ಲ್‌ಲಿ ಕಡೆವ, ಹಾಂಗೆ ಮಾತಾಡ್ವ ಗಜಿಬಿಜ ಸದ್ದ್ ಬೊಳ್ಪು ಮುಟ್ಟ ಕೇಳ್ತಿತ್ತ್.

ಮೊರ್‍ದಿನ ಬೊಳ್ಪುಗೆ ಮೊದೊಳಿಗೆಗೆ ಹೂಸೀರೆ ಕೊಡ್ವ ಕ್ರಮ. ಎರ್ಡ್ ಕಡೆನ ಕಾಪಾಡಿನವು, ಗುರಿಕಾರರ್ ಒಟ್ಟ್ ಐದ್ಯೆದ್ ಜನ ಚಪ್ಪರದಡಿಲಿ, ಕಾಲ್ ದೀಪ ಇದ್ದಲ್ಲಿ ಮೂಡು ಪಡ್ವ ಆಗಿ ಕುದ್ದೊ. ಕಟ್ಟ್ ಹೇಳ್ದೊ, ಬಂಟಕಾಯಿ ಒಡ್ದೊ. ದೇವರ ಹೆಸ್ರ ಹೇಳಿ, ಪಿಂಗಾರ ಸೇರಿ ಐದ್ ಬಗೆ ಹೂ, ಧಾರೆ ಸೀರೆ, ರೌಕೆ, ಅದರ ಮೇಲೊಂದು ಕುಂಞಿಕತ್ತಿ ಇಸಿದ್, ಅರಮನೆ, ಗುರುಮನೆ, ಕುಟುಂಬ, ಬೊಳಿ ಹೆಸ್ರ್ ಇದೆಲ್ಲ ಹೇಳಿ ಇಂತವರ ಮಂಜ, ಇಂತವರ ಅಳಿಯ ಎಲುಂಬಂತೇಳ್ವ ಹೈದಂತ{ಹೈದನ ವಿವರದ ಹಾಂಗೆ ಗೂಡೆದ್ದ್ ವಿವರ ಹೇಳಿ} ಮಾಚುಂತ ಹೇಳ್ವ ಗೂಡೆಗೆ ಹೂ ಸೀರೆ ಕೊಟ್ಟವೆಂತ ಸಭೆಗೆ ಕೇಳ್ವಂಗೆ ಹೇಳ್ಕನ ಸಭೆಂದ "ಒಳ್ಳೆ ಕಾರ್ಯಂತ ಹೇಳ್ವೆ"ಂತ ಕೇಳ್ದ ಮೇಲೆ, ಮೊದ್‌ಮಂಜನ ಕಡೆನ ಹೆಳ್ಮಕ್ಕಳ ಕೈಯಿಂದ, ಗೂಡೆ ಕಡೆ ಹಿರ್ಯರ ಹಿಂದೆ ನಿಂತ ಹೆಳ್ಮಕ್ಕ ಹೂ ಸೀರೆ ಇದ್ದ ಹರ್ವಾಣಕ್ಕೆ ಮೂರ್ ಸಲ ಕೈ ಮುಗ್ದ್, ಅದರ ತೆಕಂಡೊ. ಅವು ಅದರ ದೇವರ ಕೋಣೆಲಿ

ಮಣೆ ಮೇಲೆ ಇಸಿದೊ. ಅಲ್ಲೇ ಇದ್ದ ದೇವರ ದೀಪಕ್ಕೆ ಅಕ್ಕಿ ಹಾಕಿ ತಿರ್ಗಿ ನಿಂತೊ. ಆ ಮೇಲೆ ಎರ್ಡ್ ಕಡೆವು ಸೇರಿಕಂಡ್ ಗೂಡೆನ ತಲೆ ಬಾಚಿ, ಉದ್ದ ಕೂದೊಲ್‌ನ ಪೊರ್ಲುರ್ ನೇದ್ ಜೆಡೆ ಮಾಡಿ, ಐದ್ ಬಗೆ ಹೂ ಮುಡ್ಸಿ, ಜೆಡೆ ಉದ್ದಕೆ ಜಲ್ಲಿ ಇಳ್ಸಿದೊ. ಗೂಡೆನ ಕಡೆವು ಸೀರೆ ಉಡ್ಸಿಕೆಂತ ಹರ್ವಾಣಲಿದ್ದ ಸೀರೆ ಬುಡ್ಸಿ ನೋಡ್ವೆ ಸೀರೆ ಉಡ್ಸಿಕೆ, ಕಟ್ಟ್‌ವ ಲಂಗ ಇಲ್ಲೆ! ಆ ಸೀರೆನೋ ಇತ್ತಂದ ನೋಡ್ರೆ ಅತ್ತ ಕಾಂಬೊದು! ಅಷ್ಟ್ ದಪ್ಪ! ಎಂಥ ಮಾಡ್ದು? ಮಾಚು ಮಿಣ್ಕೆನ ನೋಡ್ತ್. ಅದ್ ಬುದ್ಧಿ ಕರ್ಚ್ ಮಾಡಿ ಅದರ್ದೇ ಹೊಸ ಲಂಗ ತಂದ್ ಕೊಟ್ಟತ್. ಮಾಚು ಮಿಣ್ಕೆನ ನೋಡಿ ಒಂದ್ ನಮೂನೆಲಿ ನೆಗಾಡ್ತ್. ನೆಗೆನೇ ಆದರೂ, ಅದರ ಹಿಂದೆ ಗಂಡನ ಕಡೆವರ ಪೊಡ್‌ಂಬತನಕ್ಕೆ ತಿರಸ್ಕಾರ ಹಾಂಗೇ ಬೇನೆನೂ ಇತ್ತ್.

ಅಡಿಗೆ ಮಾಡ್ವಲ್ಲಿ ಬೊಳ್ಪುಗೆ ಅವ್ಲಕ್ಕಿ ಮತ್ತೆ ಚಾ ಆಕ್ಕಂಡ್ ಇತ್ತ್. ಗೌಜಿ ಗಮ್ಮತ್ತ್‌ಲೇ ಹಗಲ ದೇವರ್ ನೆತ್ತಿಗೆ ಬಂದೊ. ಅವ್ಕೆ ಅದೇ ಮೂರ್ತ. ಅದ್ ಅಲ್ಲರೆ ಹಿಂಬೊತು ಹಸ್‌ಗ ಹಟ್ಟಿಗೆ ಬಾವ ಹೊತ್ತು ಹೊರ್ತು, ಬೇರೆ ಮೂರ್ತ ನೋಡುವ ಕ್ರಮ ಇಲ್ಲೆ. ಸೋದರ ಮಾವ ಮಾಚುನ ಧಾರೆ ಮಾಡಿಕೆ ಮೇಲ್ಕಟ್ಟ್ ಅಡಿಗೆ ಕರ್ಕಂಡ್ ಬಾತ್. {ಮೇರರ್ ಅಳಿಯ ಕಟ್ಟಿನವು. ಮೊದ್ವೆಲಿ ಅಪ್ಪನ ಕುಟುಂಬದವು ಯಾವ್ದರ್ಲೂ ಪಾಲು ತೆಕಂಬಕೆ ಇಲ್ಲೆ} ಧಾರೆಗೆ ನಿಲ್ಸಿದೊ. ಕಾಪಾಡಿ ಕಟ್ಟ್ ಹೇಳ್ತ್. ಸುರು ಸೋದರ ಮಾವ ಧಾರೆ ಎರ್ತ್. ಧಾರೆ ಆಗಿ ಹಾಲ್ ತುಪ್ಪ ಆತ್. ಅಲ್ಲೇ ಕುದ್ದಲ್ಲಿಗೆ ಕುಡ್ಯಕೆ ಬೊಂಡದ ನೀರ್ ಕೊಟ್ಟೊ, ಅಲ್ಲಿಂದ ಪಚಾರಕ್ಕೆ ಕುದಿರ್ಸಿದೊ. ಕಾಪಾಡಿ ಕಂಚಿನ ಹರ್ವಾಣಲಿ ಅಕ್ಕಿ ಇಸಿತ್. ಸರ್ಮಾಲೆಗೆ ಎಣ್ಣೆ ಹೊಯ್ತ್.{ಆ ದೀಪ ಮೊದ್ದೊಳಿಗೆ ತುಪ್ಪ ತಾವ ವರೆಗೆ ಹೊತ್ತಿಕಂಡೇ ಇರೋಕು. ಅದಿಕ್ಕೇ ಉದ್ದದ ಬತ್ತಿ ಮಾಡಿ ಆಗಾಗ ಎಣ್ಣೆ ಹೊಯ್ಕಂಡೇ ಇದ್ದವೆ.} ಬಂದವು ಹಣ ಹಾಕುವವು ಕಂಚಿಗೆ ಹಣ ಹಾಕಿದೊ. ಉಡ್ಗೊರೆ ಕೊಡ್ವವು ಅದ್ ಕೊಟ್ಟೊ, ಸೇಸೆ ಹಾಕಿದೊ. ಮೊದ್‌ಮಕ್ಕ ಹಿರ್ಯರ ಕಾಲ್ ಹಿಡ್ಯಕನ ಅವು ಸೇಸೆ ಹಾಕಿ "ದೇವರ್ ಒಳ್ಳದ್ ಮಾಡಲಿ"ಂತ ತಲೆ ಮೇಲೆ ಕೈಯಿಸಿ ಆಶೀರ್ವಾದ ಮಾಡ್ದೊ. ಇದೆಲ್ಲ ಆಕಂಡ್ ಇರಿಕನ ಅತ್ತ ಗೂಡೆಗ, ಹೆಳ್ಮಕ್ಕ ದುಡಿ ಪೆಟ್ಟ್‌ಗೆ ಸರ್ಯಾಗಿ ಹೆಜ್ಜೆ ಹಾಕ್ಕಂಡ್ ಕೋಣ್ಯೊತಿದ್ದೊ.

ಲೇಲೇ ಲೇಲೇ ಲೇಲೇ ಲೇಲೋ
ಲೇಲೇ ಲೇಲೇಲೋ
ದಿಕ್ಕಾಳ್ತಿನ ನೋಡಿ ದಿಕ್ಕ
ದಿನ ದಿನ ಹೋಕುಟ್ಟೊ
ಕೋಳಿ ಮರಿನ ನೋಡಿ ಹದ್ದ್
ಸುತ್ತು ಹಾಕಿದೆ.
ಲಾವೊ ದುಡಿ ಲಿಂಗ ದುಡಿ
ಏನ್ ಹೇಳಿದೆ
ಲೇಲೇ ಲೇಲೇ ಲೇಲೇ ಲೇಲೇ
ಲೇಲೇ ಲೇಲೇಲೋ
ದುಡ್ಡುಂತ ಕೊಟ್ಟವೆ
ಮೀನ್‌ದ್ ಪೊಳೆಜ್ಜ್

ಸೀರೆಂತ ಕೊಟ್ಟವೆ
ಬೆದ್ರ್ ಬಾಕ್‌ನ
ಏಳ್ ದುಡಿ, ಕೇಳ್ ದುಡಿ
ಏನ್ ಹೇಳಿದೆ?
ಲೇಲೇ ಲೇಲೇ ಲೇಲೇ ಲೇಲೇ
ಲೇಲೇ ಲೇಲೇಲೋ

ಹೀಂಗೆ ಹಾಡಿಗೆ ಅವರ ಅನ್ಭವಗಳ ಪೋಣಿಸಿಕಂಡ್ ಕೊಣ್ದದ್ದೇ ಕೊಣ್ದದ್. ಅಂದ ಮೇರರ ಮೊ್ದ್ವೆ ಊಟದ ಗಮ್ಮತ್ತ್ ಅಂದರೆ ಒಡ್ಡು ಸೋಂತೆನ ಹಸಿ ಮೆಣಸ್ ಕೊಯ್ದು ಕಾಯಿ ತುಂಬ ಹಾಕಿ ಮಾಡ್ದ ಗೈಪು, ಒಣ {ಹಾಳೆ ಮೀನ್} ಬಳ್ಳಿಯಾರ್ ಹಾಕಿ ಮಾಡ್ದ ಇಡಿ ತೊಗರಿನ ಗಸಿ, ಹೆಸ್ರ್ ಬೇಳೆ ಪಾಯ್ಸ!{ಹೆಸರ್ ಬೇಳೆನ ಲಾಯ್ಕ್ ಬೇಸಿ ಅದಿಕ್ಕೆ ಬೆಲ್ಲ ಹಾಕಿ ಮಾಡ್ದು. ಕಾಯಿ ಹಾಲ್ ಅಲ್ಲರೆ ಹಸ್‌ನ ಹಾಲ್ ಹಾಕಿ ಮಾಡ್ದು ಕಮ್ಮಿ. ತುಳು ಬಾಸೆಲಿ ಇದರ ಚೀಯಾಣೋಂತ ಹೇಳ್ವೆ ಅಂದರೆ ಕನ್ನಡಲಿ ಸೀ ಅನ್ನ} ಇಕ್ಕಿಕನ ಬೇಕಾದೊ್ವ ಬೇಕಾದ್ದರ ಬೇಕಾದಷ್ಟ್ ಕೊಡ್ತಿದ್ದೊ. ಮೊ್ದ್‌ಮಂಜನ ಕಡೆಂದ ಕೊಟ್ಟ ಎರ್ಡೂವರೆ ಮುಡಿ ಅಕ್ಕಿ ಉಟ್ಟಲೇ? ಸಮಕ್ಕೆ ಇಕ್ಕದಿದ್ದರೆ ಸಲ್ಲಣೆ ಕೇಳಿಕಿರ್ದುಂತ, ಸುರು ಇಕ್ಕಿಕನನೇ ಮೂರು ಮೂರು, ನಾಕ್ ನಾಕ್ ಸೆಡೆ ಹುಗ್ಗೆ! ಅದಿಕ್ಕೆ ಬೇಕಾದಷ್ಟ್ ಗೈಪು. ಬಳ್ಳಿಯಾರ್ ಹಾಕಿದ ತೊಗರಿ ಗಸಿನ ಕೈಲೇ ಪುಂಡಿ ಪುಂಡಿ ಇಕ್ಕ್‌ತಿದ್ದೊ. ಪಾಯ್ಸನ ಕಾವಂಗ ಕಾವಂಗ ಕುಡ್ಯತಿದ್ದ ಬಿರ್ಸರೂ ಇದ್ದೊ! ಹಸಿವಿನ ರಾವು ಹಿಡ್ದವ್ಕೆ ಮೊ್ದ್ವೆ ಅಂದರೆ ಒಂದ್ ಹಬ್ಬನೇ. ಇನ್ನ್ ಒಂದ್ ವಾರ ಊಟ ಇಲ್ಲರೂ ಪರ್ವಾಗಿಲ್ಲಂತ ಹೇಳ್‌ವ ಹಾಂಗೆ ಮೊ್ರ್ಯಾದೆ ಬಿಟ್ಟ್ ಕೇಳಿ ಕೇಳಿ ಇಕ್ಕಿಸಿಕಣ್ತಿದ್ದೊ

ಎಷ್ಟೇ ದೂರ ಆದರೂ ಮೂಂಗ್ ಮುಟ್ಟ ಉಣಕಲೇಂತ ಹೇಳ್ವ ಕೊದಿಲಿ ಬಂದೊ್ವ ಮೊ್ದ್ವೆಲಿ ಉಂಬಕೆ ಕೊರ್ತೆ ಆಗದ ಹಾಂಗೆ ಮೊ್ದ್ವೆ ಮನೆವು ಎಚ್ಚರ ತೆಕಣ್ತಿದ್ದೊ. ಊಟದ ಒಟ್ಟಿಗೆ ಕಳ್ಳ್! ಕಳ್ಳ್ ಕುಡ್ದ್ ಕೊಣ್ತ! ಒಂದ್ ದಿನದ ಮಟ್ಟಿಗಾದರೂ ಹೊಟ್ಟೆ ತುಂಬ ಊಟ, ಸಂತೋಸಕ್ಕೆ ಕಳ್ಳ್! ಕುಡ್ದ್ ಕೊಣ್ತ! ಅರೆ ಹೊಟ್ಟೆನೋ, ಹಸ್ಕಂಡೊ ದಿನಾ ದುಡಿವೊ್ವ್ಕೆ ಇದ್ರಂದ ಕುಸಿ ಬೇರೆ ಉಟ್ಟಾ?

ಅತ್ತ ಊಟ ಆಗ್ತಾ ಇದ್ದ ಹಾಂಗೆ, ಇತ್ತ ಚಪ್ಪರದಡಿಲಿ ಹೆಣ್ಣ್ ಇಳ್ಸಿ ಕೊಡ್ವ ಅಟ್ಟಣೆ ನಡಿಯತಿತ್ತ್. ಮೇಲ್ಕಟ್ಟ್ ಅಡಿಲಿ ಈ ಮೊ್ದ್‌ಮಂಜ, ಮೊ್ದ್ದೊಳಿಗೆಗಳ ಒಟ್ಟಿಗೆ ಅವರವರ ಸೋದರ ಮಾವಂದಿರ್ ಮತ್ತೆ ಕಾಪಾಡಿಗ ನಿಂತೊ. ಗೂಡೆ ಕಡೆನ ಕಾಪಾಡಿ "ಇನ್ನ್ ಮುಂದೆಗೆ ನಮ್ಮ ಗೂಡೆನ ಕಷ್ಟ ಸುಖ, ಒಳ್ಳೆದ್ ಕೆಟ್ಟದ್ದಕ್ಕೆ ತಲೆ ಕೊಟ್ಟು, ಅದರ ಎಲ್ಲಾ ಜವಾಬ್ದಾರಿ ತೆಕಂಡ್ ನೋಡಿಕೊ್ಂಬವು ಯಾರ್?"ಂತ ಕೇಳ್ತ್. ಹೈದನ ಅಪ್ಪ ಮತ್ತೆ ಮಾವಂದ್ರ್ "ನಾವು"ಂತ ಹೇಳ್ದೊ. ಅಷ್ಟೊತ್ತಿಗೆ ಮೊ್ದ್ದೊಳಿಗೆನೊಟ್ಟಿಗೆ ಅವರ ಕಡೆಯ ಹೆಳ್ಮಕ್ಕ ಮೊ್ರ್ಡಿಕೆ ಸುರು ಮಾಡ್ದೊ. ಅವು ಮೊ್ರ್ಪ್‌ಕಂಡೇ ಹೆಣ್ಣ್ ಇಳ್ಸಿ ಕೊಡ್ವ ಹಾಡ್ ಹೇಳಿಕೆ ಸುರು ಮಾಡ್ದೊ.

ಸೋಬಾನೆ ಮೊ್ದ್‌ಮಂಜ ಮೊ್ದ್ದೊಳಿಗೆಗೇ
ಏರಾಜೆ ಗುಂಡಲಿ ಮೊ್ದ್ದೊಳಿಗೆ ಆಗುಟು
ಸೋಬಾನೆ ಮೊ್ದ್‌ಮಂಜ ಮೊ್ದ್ದೊಳಿಗೆಗೇ

ಒಂದ್ಮೆಟ್ಳ್ ಇಳ್ಯಕನ ಮಗಳೀಗೇ
ಅವ್ವನ ಹಾಲ್ಕುಡ್ದ ನೆಂಪಾದೆ
ಅಳ್ಬೇಡಾ ಮಗಳೇ, ಮೊರ್ಡ್ ಬೇಡಾ ಮಗಳೇ
ಅವ್ವನ ಹಾಂಗಿನ ಅತ್ತೆ ಉಟ್ಟು
ಎರ್ಡ್ ಮೆಟ್ಳ್ ಇಳ್ಯಕನ ಮಗಳೀಗೆ
ಅಪ್ಪ ಕೊಟ್ಟ ಪುಂಡಿ ಹುಗ್ಗೆ ನೆಂಪಾದೆ
ಅಳ್ಬೇಡ ಮಗಳೇ ಮೊರ್ಡ್ ಬೇಡ ಮಗಳೇ
ಅಪ್ಪನ ಹಾಂಗಿರ್ವ ಮಾಂವ ಒಳೋ
ಮೂರು ಮೆಟ್ಳ್ ಇಳ್ಯಕನ ಮಗಳೀಗೆ
ಅಕ್ಕ ತಂಗೆಕ್ಕಳ ನೆಂಪಾದೆ
ಅಳ್ಬೇಡ ಮಗಳೇ ಮೊರ್ಡ್ ಬೇಡ ಮಗಳೇ
ಅಕ್ಕ ತಂಗೆಕ್ಕಳ ಹಾಂಗಿನ
ಅತ್ತಿಗೆ ನಾದಿನಿಗ ಒಳೊ ಮಗಳೇ
ಸೋಬಾನೆ ಮೊದ್‌ಮಂಜ ಮೊದೊಳಿಗೆಗೇ
ಅತ್ತದೆ ಮಗಳ್ ಮೊರ್ವದೆ ಮಗಳ್
ಓ.. ಅವ್ವಪ್ಪನ ಹೊಟ್ಟೆ ಉರ್ಸಿದೆ
ಓ.. ಅಪ್ಪ ಅವ್ವನ ಹಕ್ಕ್ನ ಮನೆಂದ
ಗಂಡನ ಹಕ್ಕಿನ ಮನೆಗೆ ಹೊರ್ಟದೆ
ಸೋಬಾನೆ ಸೋಬಾನೆ ಮೊದೊಳಿಗೆಗೇ ❒

ಹಾಳೆ 15
ಅಪ್ಪನ ದಟಿಗೆಂದ ಗಂಡನ ಪಟ್ಟಕ್ಕೆ

ಬೊಂಗ್ರದ ಕೂಸು ಗಂಡನ ಪಟ್ಟಕ್ಕೆ ಹೋದೆಂತ ಅಪ್ಪ ಕಳಲಂಗೆ ಎಲ್ರೊಲ್ವಿಂತ ಹೆಚ್ಚೆ ಬೇಸರ. ಎಲ್ಲ ಕೆಲ್ಸಗಳಲಿ ಅದ್ ಅವಂಗೆ ಬಲಗೈ. ಅದಿಕ್ಕೆ ಸೊಂತದ ಬುದ್ಧಿವಂತಿಕೆ ಇತ್ತ್. ಎಷ್ಟೋ ಸಲ ಕೆಲೊವು ಸಂಗತಿಲಿ ಅದರ ಬುಡ್ಸಿ ಹೇಳಿ ತಿಳಿವಳ್ಕೆ ಕೊಟ್ಟದ್ದ್ ಇತ್ತ್. ಮಗ ಉಟ್ಟುಂತೇಳ್ರೆ ಅವಂಗೆ ಯಾವ ಕೆಲ್ಸನೇ ಆಗಲಿ ಮಾಡಿಕೆ ಒಂದ್ ಧೈರ್ಯ. ಸಣ್ಣ ಸಣ್ಣ ಸಾಲ ಸೋಲದ ವಿಚಾರ ಮಾತಾಡ್ರೆ "ಬುಟ್ಟ್ ಹಾಕ್ ಅದರ. ಸುಮ್ಮನೆ ಅಂತದರ ತಲೆ ಒಳಗೆ ತುಂಬಿಸ್ಕಂಡ್ ತಲೆನ ಹಾಳ್ ಮಾಡಿಕಂಡಿಯಾ. ನಿಂಗೆ ಅಂತ ತಲೆ ಹೋವ ಬಂಜ ಏನೂ ಇಲ್ಲೆ"ಂತ ಪ್ರೀತಿಲೆ ಬೊಯ್ದ್ ಮನ್ಸ್ ಗಟ್ಟಿ ಮಾಡ್ತಿತ್ತ್. ಅಂತ ಮಗ ಈಗ ಗಂಡನ ಮನೆಗೆ ಹೋದೆಲೇಂತ ಅವಂಗೆ ದುಕ್ಕ ತಡ್ಯಿಕಾಗದೆ ಕಣ್ಣೀರ್ ಬಾತ್. ಹೆಗ್ಲ್ ಮೇಲೆ ಹಾಕ್ಕಂಡ ಬೈರಾಸ್‌ಲಿ ಮೋರೆ ಮುಚ್ಚಿಕಂಡ್, ಒಂದಷ್ಟ್ ದೂರ ಹೋಗಿ ಅತ್ತ್, ದುಕ್ಕ ನಿಂತ ಮೇಲೆ ಇತ್ತ ಬಾತ್. ಮಾಚುನ ಸೋದರ ಮಾವ ಹೆಣ್ಣ್ ಇಳ್ಸಿ ಕೊಟ್ಟ ಮೇಲೆ ಅದರ ಎತ್ತಿ, ಅತ್ತ

ಗಂಡಿನ ಕಡೆಲಿ ನಿಲ್ಸಿತ್. ಅದ್ರೊಟ್ಟಿಗೆ ಅದಿಕ್ಕೆ ಕೊಡ್ವಂತ ಸಾಮಾನ್-ಪೆಟಗೆ, ಕೊಡೆ, ಚೊಂಬು, ಇದರೆಲ್ಲಾ ಅತ್ತ ಇಸಿದೊ. ಮತ್ತೆ ಮೊದ್‌ಮಕ್ಕಳ ಊಟ ಆತ್. ಉಂಡ್ ಆದ ಮೇ ಅದರ ಗಂಡನ ಮನೆಗೆ ಕಳ್ಸುವ ಅಟ್ಟಣೆ ಆತ್.

ಅಂದ್ ಅದರ ಪುಣ್ಯನೋ ಪಾಪನೋ, ಗಟ್ಟಲಿ ಎರ್‍ಡ್ ದಿನ ಬುಡಾದೆ ಮ ಬಂದದಕ್ಕೆ ಪಯಸ್ವಿನಿ ಹಳ್ಳಲಿ ನೀರ್ ಎರ್‍ಕಿತ್ತ್. ಸಾದಾರ್‍ಣ ಎತ್ತರದೊನ್ವ್ಕೆ ಹೊಕ್ಕು ಮುಟ್ಟ ನೀ ಬಾದು. ಅಷ್ಟ್ ನೀರ್! ಹೈದನ ಕಡೆವು ಹಳ್ಳ ದಾಟುದು ಹೇಂಗೆಂತ ಅತ್ತಿತ್ತ ನೋಡಿಕಂಡ ಇರಿಕನ, ಕಳಲ ಎಲ್ಲೋ ಕಟ್ಟಿ ಇಸಿದ್ದ ಅವನ ಪಿಂಡಿನ ಜಳ್ಳ ಒಚ್ಚಿಕಂಡ್ ತಾತ್. ಅದ ತಾಕನ ಅವಂಗೆ ಮಕ್ಕಳ ಅದರ್‍ಲಿ ಕುದ್ರಿಸಿಕಂಡ್ ಅತ್ತಿತ್ತ ಹೋದ್ದ್ ನೆಂಪಾಗಿ, ಮಗಳ ಮೋರೆಸ ಒಂದ್ ಗಳಿಗ್ಗೆ ನೋಡ್ತ್. ಅದ್ ಮೊರ್‍ದ್ದೇಲ್ ಮೋರೆಲಿ ಹಳ್ಳದ ಎರ್‍ಕಿದ ನೀರ್‌ನೇ ನೋಡಿಕಂಡಿತ್ತ ಇನ್ನ್ ಮುಂದಿನ ನನ್ನ ಬೊದ್ಕ್ ಈ ಎರ್‍ಕಿದ ಹಳ್ಳದ ಹಾಂಗೆನೋ ಅಲ್ಲಾ ಹಳ್ಳನ ದಾಂಟುವ ಪಿಂಡಿನ ಹಾಂಗೆನೋಂತ ಆಲಚನೆ ಮಾಡ್ತಿತ್ತೋ ಏನೋ?

ಮೊದ್ಗೊಳಿಗೆನ ಕಾಲಡಿಗೆ ಹಳ್ಳದ ನೀರ್ ಮುಟ್ಟಿಕಾಗದ್‌ಗಡ. ಅದಿಕ್ಕೆಂತ ಕಳ ಒಂದಷ್ಟ್ ಕಮ್ಮನ ಹಾಳೆ ತುಂಡುಗಳ ತಂದಿತ್ತ್. ಎಲ್ಲಿ ಕಾಲಡಿಗೆ ನೀರ್ ಮುಟ್ಟಿದೆನೋ ಅಲ್ಲಿಂದ, ಪಿಂಡಿಲಿ ಹೆಜ್ಜೆ ಇಸ್ವಲ್ಲೆಲ್ಲಾ ಉದ್ದೋಕೆ ಆ ಹಾಳೆ ತುಂಡುಗಳ ಇಸಿತ್. ಅಂ ಹಾಂಗೆ ಹಾಳೆ ಇಸಿಕನ ಮಾಚುಗೆ ಅಪ್ಪನೊಟ್ಟಿಗೆ ಮೀನ್ ಹಿಡಿಯಕೆ ಹೋದ್ದ್, ಅಂ ಈಜಿಕೆ ಕಲ್ಸಿದ್, ಆಗ ನೀರ್‍ಲಿ ಮುಳುಗಿಕನ ನೀರ್ ಮೂಂಗ್‌ಗೆ ಹೋದ್ದ್, ಅಂವ ಹೆದ್ರಿ ಕರೆ ಎಳ್ಕಂಡ್ ಬಂದ್ ತಲೆ ತಟ್ಟಿದ್ದ್, ಜೇನ್ ಒಕ್ಲ್ ಹುಡ್ಕಿದರ ಹೇಳ್ಕನ ಬೆನ್ನ್ ಪೂಜಿದ್ ಪೆರಿಯದ ಜೇನ್ ತೆಗ್ಯಕೆ ಹೋದಲ್ಲಿ ಇರ್ಲ್ ಹೆದ್ರಿದ್ದ್- ಹೀಂಗೆ ಒಂದರ ಹಿಂದೆ ಒಂದುಂ ನೆಂಪಾಗಿ ಅದರ್‍ಲೇ ಮುಳ್ಗಿರ್‍ಕನ ಯಾರೋ ಹೇಳ್ದೊ "ಹೊತ್ತಾತ್, ಪೋಯಿ. ಹೊತ್ತಾದ ಮತ್ತೆ ಇರ್ಲಾದೆ"ಂತ. ಅದ್ ಕೇಳಿ ಮಾಚುನ ಬಣ್ಣ ಬಣ್ಣದ ಕನ್ಸ್‌ಗ ಎಲ್ಲಾ ಹಳ್ಳಲಿ ನೀರ್‍ಗುಳ್ಳೆನ ಹಾಂಗೆ ತೇಲಿಕಂಡ್ ಹೋಗಿ ಒಡ್ದ್ ಹೋದೊ. ಕಳಲ ನಾಕ್ ಹಾಳೆ ತುಂಡು ಮಿಣ್ಕಿ ಕೈಗೆ ಕೊಟ್ಟ್, "ಆ ಕರೆಲಿ ಇಳ್ಯಕನ ಹೆಜ್ಜೆ ಇಸ್ವಲ್ಲಿ ಇದರ ಇಸ್"ಂತ ಹೇಳ್ತ್.

ಹಳ್ಳ ಮುಟ್ಟ ಬಂದ ಮಾಚುನ ಮಾವ ಅದರ ಕೈ ಹಿಡ್ದ್ ಪಿಂಡಿಗೆ ಹತ್ತಿಸಿತ್ ಸಣ್ಣಂದರ್‌ಂದಳೇ ಅಂವ ಅದರ ಪ್ರೀತಿಯ ಮಾವ. ಸಣ್ಣದಿರ್‍ಕನ ಅಂವ ಅವಳ ಕೊಂಡಾಟ ಮಾಡ್ತಿದ್ದದ್, ಅದ್ ಇದ್‌ಂತ ಏನಾರ್ ತಂದ್ ಕೊಡ್ತಿದ್ದದ್ ಎಲ್ಲಾ ನೆಂಪಾಗಿ ಅದಿಕ್ಕೆ ದು ತಡ್ಯಿಕೆ ಆಗದೆ ಜೋರು ಮೊರ್‍ಪ್ ಬುಟ್ಟತ್. ಅವಂಗೂ ಮೋರೆ ಸಣ್ಣ ಆತ್. ಸೊಸೆನ ತಲ ಪೂಜಿ ಪಿಂಡಿ ಮುಟ್ಟ ಅಂವನೇ ಕೈ ಹಿಡ್ಕಂಡ್ ನಡ್ಸಿ, ಪಿಂಡಿಗೆ ಹತ್ತಿಸಿತ್. ಪಿಂಡಿಗೆ ಹತ್ತಿ ಕೈ ಬುಟ್ಟ ಮೇಲೆ "ನಾಳ್ದ್ ನೀವೆಲ್ಲ ಬಂದಿಯರಲೇ ಮಾಂವ?"ಂತ ಕೇಳ್ತ್. ಅಂವ ಬನ್ನೆಂತ ತಲೆ ಆಡಿಸ್ತ್. ಎಲ್ಲೊವು ಹತ್ತಿದ ಮೇಲೆ ಕಳಲ ಜಳ್ಳ ಒಚ್ಚಿತ್. ಈಗಳೂ ಅವನ ಕಣ್ಣೆದ್ರ ಮಾಚುನೊಟ್ಟಿಗೆ ಕಳ್ದ ದಿನಗಳೇ ಬಾತಿದ್ದೊ.

ಹಳ್ಳದ ಆಚೆ ಕರೆ ಮುಟ್ಟಿದ ಮೇಲೆ ಕಳಲ ಜಳ್ಳನ ಹಾಂಗೇ ಹಿಡ್ಕಂಡ್, ಮಿಣ್ಕಿ ಇಸಿಕಂಡ್ ಹೋದ ಹಾಳೆ ತುಂಡುಗಳ ಮೇಲೆ ಹೆಜ್ಜೆ ಇಸಿಕಂಡ್ ಮಾಚು ಹೋದರ ನಿತ್ ನೋಡಿಕಂಡ್ ಇತ್ತ್. ಅದ್ ಪಿಂಡಿಂದ ಇಳ್ದ್, ಹತ್ತ್ ಹೆಜ್ಜೆ ಹಾಕಿ ಅಲ್ಲಿ ತಿರ್‍ಗಿ ನಿತ್ತತ್

ಎಲ್ಲೊರ್ಕ್ಕಿಂತ ಹೆಚ್ಚ್ ತನ್ನನ್ ಪ್ರೀತಿಲಿ ಕಾಂಬೊತಿದ್ದ ಅಪ್ಪನ ನೋಡ್ತ್. ನೋಡಿಕೆ ಆಗದ ಹಾಂಗೆ ಕಣ್ಣ್ ತುಂಬಿತ್. ಅಂವ ಸಾ ಕಣ್ಣೊರ್ಸಿಕಂಡ್ ಎಲ್ಲವೊರ್ಕೆ ಒಟ್ಟಾಗಿ "ಬನ್ನೆ, ನಾಳ್ದ್ ಬಂದವೆ"ಂತ ಹೇಳಿ, ಆಚೆ ಕರೆಗೆ ಪಿಂಡಿನ ಒಚ್ಚಿಕಂಡ್ ಹೋತ್. ಅಂವ ಅತ್ತ ಎತ್ತಿಕನ ಮುಟ್ಟ, ಅಂವನನೇ ನೋಡಿಕಂಡ್ ಇದ್ದ್, ಮತ್ತೆ ಕಾಲ್ ಮತ್ತೆ ಸೀರೆ ಚಂಡಿ ಆಗದ ಹಾಂಗೆ ಹಾಳೆ ಮೇಲೆ ನಡ್ಕಂಡ್ ಬಂದ್, ಹಳ್ಳದ ಕರೆಲಿ ನೀರ್ ತೆಕಂಡ್ ತಲೆಗೆ ಹನ್ನಿಸಿಕೊಂಡತ್, ಮತ್ತೆ ಒಂದ್ ಮುಕ್ಕೆ ನೀರ್ ಕುಡ್ತ್. ಕಣ್ಣ್ ಮುಚ್ಚಿ "ಓ ದೇವಿ, ನನ್ನ ಕಾಪಾಡ್"ಂತ ಬೇಡಿಕಂಡತ್. ಸಣ್ಣಂದರ್‌ಂದಳೇ ಅದರ ದೇವಿ ಆಗಿದ್ದ ಆ ಪಯಸ್ವಿನಿ ಹಳ್ಳಲಿ ಅಲ್ಲದೆ, ಅದ್ ಅದರ ದುಕ್ಕನ ಬೇರೆ ಯಾರಲ್ಲಿ ಹೇಳೋಕು?

ಹಳ್ಳದ ಆ ಪುಡೆಲಿ ನಿತ್ತ್ ನೋಡಿಕಂಡಿದ್ದ ಅಪ್ಪಂಗೆ ಮೆಲ್ಲ ಕೈ ಆಡ್ಸಿ, ಅಂವ ಹೋದ್‌ನೇ ನೋಡಿ, ಹಂಜ ಹೊತ್ತ್ ಅಲ್ಲೇ ನಿತ್ತ್, ಮನ್ಸ್ ಇಲ್ಲದ ಮನ್ಸ್‌ಂದ ಗಂಡನ ಮನೆವರ ಒಟ್ಟಿಗೆ ಹೋಗದೆ ಉಪಾಯ ಇಲ್ಲಲೇಂತ ಹೇಳ್ವಂಗೆ, ತಂಗೆ ಮಿಣ್ಕೆನ ಕೈ ಹಿಡ್ಕಂಡ್ ಹೆಜ್ಜೆ ಹಾಕಿತ್. ಆ ಹಳ್ಳದ ಕರೆಲೇ ದಾರಿ. ಎಡಕ್ಕೆ ಹಳ್ಳ, ಬಲಕ್ಕೆ ಕಾಡ್. ಕಾಡ್‌ಂತೇಳ್ರೆ ಅದ್ ಅಂತಿಂತ ಕಾಡಲ್ಲ. ದೊಡ್ಡ ದೊಡ್ಡ ಮರಗ. ಆ ಮರಗಳ ಸುತ್ತಿಕಂಡ ಹೆಬ್ಬಾವಿನ ಹಾಂಗಿದ್ದ ಬೊಳ್ಳಿಗ. ಸೀಗೆ ಮತ್ತೆ ಚೆಂಡೆ ಬಲ್ಲೆಗ! ಮಾಚು ಮಿಣ್ಕೆನ ಹಕ್ಕಲೆ "ಅಬ್ಬ! ಎಂಥ ಕಾಡ್ಯಾ ಇದ್? ಇಂಥ ಕಾಡ್‌ನ ನಾ ನೋಡ್ತೇ ಇಲ್ಲೆ. ಹುಲಿ, ಕಾಡ್ ಹಂದಿ, ಹೆಬ್ಬಾವು, ಆನೆ–ಇವು ಮೂರ ಈ ಕಾಡ್‌ಲಿ ಇರ್‍ವೊಂತ ಕಂಡದೆ. ಓ.. ದೇವರೇ. ಇಂಥ ಕಾಡ್‌ಲಿ ನಾ ಇರಕಲೇ?"ಂತ ಹೇಳಿಕಂಡತ್. "ಅಪ್ಪ, ಅಮ್ಮ ಮತ್ತೆ ಮಾವನವು ಬಂದ್ ನೋಡದೆ ಇವರ ಒಪ್ಪಿಕಂಡದ್ದ್ ತೊಪ್ಪಾತ್‌ಂತ ಕಂಡದೆ"ಂತ ಹೇಳ್ತ್ ಮಿಣ್ಕೆ. ಮಾಚು ಮಾತಾಡ್ತ್‌ಲೆ. ಮನ್ಸ್‌ಲೇ "ನನ್ನ ಗ್ರಚಾರ ಹೀಂಗಿರೋಕು. ಇನ್ನ್ ಯಾರನ್ನ್ ದೂರಿ ಏನ್ ಫಲ?"ಂತ ಹೇಳಿಕಂಡತ್.

ಮುಂದೆ ಹೋದ್ಹಂಗೆ ಕತ್ತಲೆ ಕತ್ತಲೆ. ಗುಹೆ ಒಳಗೆ ಹುಕ್ಕ ಹಾಂಗೆ ಆತ್. ಸುಮಾರ್ ದೂರ ಹೋದ ಮೇಲೆ ನಾಗೂರುಂತ ಹೇಳ್ವ ಜಾಗೆಗೆ ಬಂದೊ. ಅಲ್ಲೊಂದ್ ನಾಗ ಬನ. ಅದರ ಹಕ್ಕಲೆನೇ ಒಂದ್ ಬಾರೀ ದೊಡ್ಡ ಗೋಳಿ ಮರ. ಅದರ ಗೆಲ್ಲ್‌ಗ ಆ ಜಾಗೆಗೆ ಚಪ್ಪರ ಹಾಕಿದ ಹಾಂಗೆ ಅಷ್ಟ್ ಅಗಲಕ್ಕೆ ಹರ್ಡಿಕಂಡಿದ್ದೊ. ಮರಂದ ಇಳ್ದ ಬೀಳಲ್‌ಗ ಚಪ್ಪರದ ಕಂಬದ ಹಾಂಗೆ ಕಾಂಬೊತಿದ್ದೊ. ಮರದ ಒಂದ್ ದೊಡ್ಡ ಗೆಲ್ಲ್ ಹಳ್ಳದ ಕಡೆಗೆ ಬೊಗ್ಗಿತ್ತ್. ಕತ್ತಲಾಕ್ಕಂಡ್ ಬಂದದಕ್ಕೇನೋ ಆ ಗೆಲ್ಲ್‌ನ ನೆರ್‍ಳ್ ಬಿದ್ದಲ್ಲಿ ನೀರ್ ಕಪ್ಪಾಗಿ, ಕೃಷ್ಣನ ಕಾಲಲಿ ಕಾಳಿಂಗ ಸರ್ಪ ಇದ್ದ ಗುಂಡಿನ ನೆಂಪಾಗುವ್ಹಂಗೆ, ಹೆದ್ರಿಕೆ ಹುಟ್ಟಿಸ್ವ ಹಾಂಗಿತ್ತ್. ಹಿರ್‍ಯರಲ್ಲಿ ಯಾರೋ ಒಬ್ಬ "ಇಲ್ಲಿ ಒಂದ್ ಗಳಿಗೆ ಕುದ್ರೊಮೊ"ಂತ ಹೇಳ್ದೊ. ಮರದ ಅಡಿಲಿ, ಅಲ್ಲಲ್ಲಿ ಇದ್ದ ಕಲ್ಲ್‌ನ ಮೇಲೆ ಕೆಲೊರ್‌ವು, ಹಾಂಗೇ ಬಿದ್ದ ದರ್‍ಗ್ ಮೇಲೆ ನೆಲಲಿ ಇನ್ನ್ ಕೆಲೊರ್‌ವು ಕುದ್ದೊ. ಮಾಚುಗೆ ಮತ್ತೆ ಮಿಣ್ಕೆಗೆ ಬಾರೀ ಕುಸಿ ಆತ್. ಹಿಂಬೊತ್ ಆದದಕ್ಕೋ ಏನೋ ಎಂತೆಂತವೋ ಹಕ್ಕಿಗ ಕಿಲಿ, ಕಿಲಿಂತ ಹೇಳಿಕಂಡ್ ಅತ್ತ ಇತ್ತ ಹಾರಿಕಂಡ್ ಇದ್ದೊ. ಅದರ ನೋಡಿ ಅಕ್ಕ ತಂಗೆ "ಹಣ್ಣಾಗ್ವ ಕಾಲಲಿ ಇಲ್ಲಿ ಒಂದ್ ಲೋಕದ ಹಕ್ಕಿಗ ಇರ್‍ವೊ ಏನೋ"ಂತ ಹೇಳಿಕಂಡ್, ಅವು ಹಾರಾಡುದರ್ನೇ ನೋಡಿಕಂಡ್ ಮೈ ಮರ್‍ತೊ. ಮೊದ್ವೆ ಚಿಂತೆ ದೂರ ಹೋಗಿ ಬೇರೆ ಸಂಗತಿ ಮನ್ಸ್ ಒಳ್ಗೆ ಹುಕ್ಕಿದಕೆ, ಒಮ್ಮೆಗೆ ಮನ್ಸ್ ಮಡಿ ಆದ್ಹಂಗೆ ಆತ್. ಒಸಿ

ಹೊತ್ತ್ ಕುದ್ದ ಮೇಲೆ ಇಲ್ಲಿ ಕುದ್ರೊಮೊಂತ ಹೇಳಿದವೇ ಇರೋಕು ಆ ಮರಲಿ ದೇವ
ಕಂಡ್ಹಂಗೆ, ಎದ್ದ್ ಆ ಮರಕ್ಕೆ ಮೈ ಚಾಚಿ ಅಡ್ಡ ಬಿದ್ದೊ. ಅವರ ನೋಡಿ ಒಳ್ದವೂ. ಆ ಮರ
ನೋಡಿದೊವು, ಯಾರೇ ಆದರೂ ಅದರ ಎತ್ತರ, ಅದ್ ಹರ್ಡಿಕಂಡ ಅಗಲ, ಒಟ್ಟಾರೆಲಿ ಅ
ಕಾಡ್‌ನ ಯೆಜಮಾನಿಕೆ ವಹ್ಸಿಕಂಡ್ ಹಾಂಗಿದ್ದ ಅರಸು ಗತ್ತ್‌ನ ನೋಡಿ ಅಡ್ಡ ಬೀಳ್ದೊವೇ
ಅಂಥ ಒಂದ್ ಯೋಗಿತೆ ಆ ಮರಕ್ಕೆ ಉಟ್ಟುಂತ ಮಾಚು ಮನ್ಸ್‌ಲೇ ಹೇಳಿಕಂಡತ್.

ಒಂದ್ ನೂರು ಹೆಜ್ಜೆ ಹಾಕಿರ್‍ವೊ ಅಷ್ಟೇ. ಮುಂದೆ ಹೋಕಂಡ್ ಇದ್ದವು, ಇದ್ದಕ್ಕಿದ್ದ
ಹಾಂಗೆ ಅಲ್ಲೇ ಕಲ್ಲ್ ತರ ನಿತ್ತ್, ಹಿಂದೆ ತಿರ್ಗಿ ಸದ್ದ್ ಮಾಡ್ಬೇಡಿಂತ ಹೇಳ್ವ ಹಾಂಗೆ ತುಟಿ
ಮೇಲೆ ತೋರ್ ಬೆರ್‍ಳ್ ಅಡ್ಡ ಇಸಿದೊ. ಎಲ್ಲೊವು ಉಸ್ರ್ ಕಟ್ಟಿ ಒಬ್ಬ ಇನ್ನೊಬ್ಬನ ನೋಡಿಕಂಡ್
ಕಣ್ಣ್‌ಲೇ ಎಂತಂತ ಕೇಳಿ ಕಂಡ್ ನಿತ್ತೊ. ಸುಮಾರ್ ಹೊತ್ತಾದ ಮೇಲೆ ಆ ಸುರುನವು ತಲೆ
ಆಡ್ಸಿ ಕೈಲಿ "ಪೋಯಿ"ಂತ ಹೇಳ್ದ ಮೇಲೆ ಹಿಂದೆನವು ಹೊರ್‍ಟೊ, ಹೋಕನ ಅಲ್ಲಿ
ದಾರಿಲಿ, ನೀರ್ ಕುಡ್ದ್ ಹೋದ ಹುಲಿನ ಹೆಜ್ಜೆ ಮತ್ತೆ ಅದರ ಮೀಸೆಂದ ಅರ್ದ ನೀರ್
ಉದ್ರೋಕೆ ಇದ್ದದರ ನೋಡ್ದೊ. ನಡ್ಕಂಡ್ ಹೋವು ಸದ್ದ್ ಮಾಡದೆ ದೊಡ್ಡ ದೊಡ್ಡ ಹೆಜ್ಜೆ
ಹಾಕ್ಕಂಡ್, ಹೆದ್ರಿಕಂಡ್ ಅತ್ತಿತ್ತ ನೋಡಿಕಂಡ್ ಹೋದೊ. ಮಿಣ್ಕಿ ಹೆದ್ರಿ ಅಕ್ಕನ ಕೈ ಹಿಡ್ಕಂಡತ್.
ಅದರ ಕೈ ನಡ್‌ಗ್ತಿತ್ತ್.

ಮತ್ತೆ ಸಾ ಎರ್ಡ್ ಮೂರ್ ಮೈಲ್ ಇಂತದ್ದೇ ಕಾಡ್. ಮೇಯಕೆ ಹೋಗಿದ್ದ ಹಸ್
ಕರ್‌ಗ ಹಟ್ಟಿಗೆ ಬರ್‍ತಾ ಇದ್ದೊ. ಆಗ ಯಾರೋ ಒಂದ್ ಹೆಂಗ್ಸ್ ದೂರಂದ ತೋರ್‍ಸಿ ಹೇಳ್ತ್
"ಅದೇ ದಟಿಗೆ"ಂತ. ಅದೊಂದ್ ಜೋಪಡಿ. ಅದಕ್ಕೆ ತಾಂಗಿಕಂಡೇ ಇನ್ನೊಂದ್, ದಟಿಗೆನ
ಬಲಕ್ಕೆ, ಮಾಡಂಗೋಲು ತರ ಇತ್ತ್. ಮಾಚು ಅದ್ ಮೀವ ಕೊಟೆಗೆಂತ ಅಂದಾಜ್
ಮಾಡ್ತ್. ದಟಿಗೆನ ಸುತ್ತ ಒಂದ್ ಹತ್ತ್ ಗ್ಯಾರ್ದ ಮರಗ. ಎರ್ಡ್ ಮೂರ್ ಚಾಳೆಗ. ಅಷ್ಟ್
ಬುಟ್ಟರೆ ಇಡೀ ಕಾಡೇ. ಇಜ್ಜೆಲ್‌ಲಿ ನಿತ್ತ್‌ದ್, ಅದ್ ಅದರ ಮೇರನ ಮನೆನ ಪೊರ್ಲು
ನೋಡ್ತ್. ನೋಡಿಕಂಡ್ ಇದ್ದ ಹಾಂಗೆ ಒಂದ್ ದೊಡ್ಡ ಉಸ್ರ್ ಹೊರಗೆ ಬಾತ್. ಮೂರ್
ಹೆಳ್ಮಕ್ಕ ಬಂದ್ ಆರತಿ ಎತ್ತಿದ ಹಾಂಗೆ ಮಾಡಿ, ಒಳಗೆ ಕುದ್ರಿಸಿ, ಹಾಲ್ ಕುಡ್ಯಕೆ ಕೊಟ್ಟ್,
ಹಾಲ್ ತುಪ್ಪದ ಶಾಸ್ತ್ರ ಮಾಡ್ದೊ. ಎಲುಂಬ ಎದ್ದ್ ಹೋತ್. ಮಾಚು ಮಿಣ್ಕಿನ ಕಣ್ಣ್‌ಲೇ
ಕರ್‍ತ್. ಒಂದ್ ಹೆಂಗ್ಸ್ "ನೀವು ಇಲ್ಲೇ ಕುದ್ದ್‌ಕಣಿ"ಂತ ಹೇಳಿ ಹೋತ್. ಆ ಮೇಲೆ ಒಬ್ಬನೂ
ಅತ್ತ ತಲೆ ಹಾಕಿತ್ಲೆ.

ಇವು ಕುದ್ದಲ್ಲೇ ಸುತ್ತ ನೋಡ್ದೊ. ಅವು ಕುದ್ದ ಒಂದ್ ಕೋಣೆ, ಅದರ ಬಲಪುಡೆ
ಉಂಬೊಳಗೆ, ಈ ಎರ್ಡ್ ಕೋಣೆ ಸುತ್ತಕೆ ನಾಕ್ ಕಡೆಂದ ಒಂದ್ ಮೊ‌ಂದ್ರಿ ಹಾಸ್‌ವಷ್ಟ್
ಅಗಲದ ಜಗ್ಲಿ. ಅಂದ್, ಅದ್ ಒಂದ್ ಮೊದ್ವೆ ಮನೇನೇ. ಆದರೆ ಅಲ್ಲಿ ಹೆಚ್ಚ್‌ಂತೇಳ್ರೆ ಹತ್ತ್
ಜನ ಇದ್ದಿರ್‍ವೊ, ಅಷ್ಟೇ. ಹೆಳ್ಮಕ್ಕ ಒಳಗೊಳಗೇ ಹೋದವಲ್ಲದೆ ಒಂದ್ ಹೆಣ್ಣ್ ಕೂಸು ಸಾ
ಹೊರಗೆ ಬಾದ್ಲೆ. ಇವ್ಕೆ ಕುದ್ದ್ ಕುದ್ದ್ ಉದಾಸೀನ ಆತ್. ಮಿಣ್ಕಿ ಹೇಳ್ತ್ "ನಂಗೆ ಮೈ ನೀರ್
ಬಂದದೆ. ಕೇಳಿ ಬಚ್ಚಲಿಗೆ ಪೋಯಿ."ಂತ. ಹಾಂಗೆ ಎದ್ದ್ ಅಡಿಗೆ ಕೋಣೆನ ಬಾಗ್ಲ್‌ಲಿ ನಿತ್ತೊ.
ಒಂದ್ ಮಿಣಿ ಮಿಣಿಂತ ಉರಿವ ಮಿಣ್ಕ್ ದೀಪದ ಬೊಳ್ಪುಲಿ ಎರ್ಡ್ ಮೂರ್ ಹೆಳ್ಮಕ್ಕ
ಕೊಯ್ಯೊದೋ, ಕಡ್ಕಲ್ಲ್‌ಲಿ ಕಡ್ಯೊದೋ, ಒಲೆಲಿದ್ದದರ ಮೊಗ್ಚುದೋ ಮಾಡಿಕಂಡ್ ಇದ್ದೊ.

ಂದ್ ಒಲೆಲಿ ದೊಡ್ಡ ಮಡ್ಕೆಲಿ ಗಂಜಿ ಕೊತಕೊತ ಕೊದ್ಯತಿತ್ತ್. ಇನ್ನೊಂದ್ ಒಲೆಲಿ ಂತದ್ದೋ ಬೆಯ್ಯತಿತ್ತ್. ಅದಿಕ್ಕೆ ಸೆಡೆ ಹಾಕಿ ಒಂದ್ ಹೆಂಗ್ಸ್ ಮೊಗ್ಚ್ಯತಿತ್ತ್. ಅಡಿಗೆ ಕೋಣೆನ ೋಡೆ ಹಕ್ಕಲೆ ನೆಲಲಿ ಮಡ್ಕೆ, ಅಳಗೆ, ಚಟ್ಟೆ ಮರ್ಚಟ್ಟೆಗ ಕಂಕಣಿ ಹಾಕಿಕಂಡ್ ಇದ್ದೊ. ನ್ನೊಂದ್ ಪುಡೆಲಿ, ಗೋಡೆ ಹಕ್ಕಲೆ ಬೆತ್ತದ ಕುಕ್ಕೆಲಿ ಎಂತೆಂತದ್ದೋ ಸಾಮಾನ್‌ಗ. ಮಾಚುನ ಣ್ಣ್ ತಗ್ಗಾಗಿದ್ದ ಮಾಡ್ ಕಡೆ ಹೋತ್. ಮಾಡ್‌ನ ಪಕ್ಕಾಸ್ಲಿ, ಅಡ್ಡಕ್ಕೆ ಹಾಕಿದ ಸಲಿಕೆಲಿ ಎಲ್ಲಾ ಣ್ಣದ್ ದೊಡ್ಡದ್‌ಂತ ಅರ್ವೆಲಿ ಕಟ್ಟಿಟ್ಟ ಗಂಟ್‌ಗಳ ನೋಡಿ, ಮಿಣ್ಕಿ ಮಾಚುಗೆ ಕಣ್ಸನ್ನೆ ಮಾಡಿ ಗಾಡ್ತ್. ಮಾಚುಗೆ ಇವು ಇನ್ನ್ ಸಾ ಯಾವ ಕಾಲಲಿ ಒಳೊಂತ ಆತ್. ಸೂಜಿ ಕಂತಿದ ಬುಗ್ಗೆನ ಹಾಂಗೆ ಅದರ ಮನ್ಸ್ ಒಡ್ದ್ ಹೋತ್. ಇವು ಬಾಗ್ಲ್ ಹಕ್ಕಲೆನೇ ಇದ್ದರೂ ಒಬ್ಬನೂ ಮಾತಾಡುದ್ಲೆ.

ಮಾಚುನೇ ಹೇಳ್ತ್ "ತಂಗೆಗೆ ನೀರೆಡಿಗೆ ಹೋಕಡ"ಂತ. ಸೋಂತೆ ಕೊಯ್ಕಂಡ್ ಇದ್ದ ಹೆಂಗ್ಸ್ ಪಟಕ್ಕಂತ ಎದ್ದ್ "ಬನ್ನಿ"ಂತ ಹೇಳಿ ನೀರೆಡಿಗೆ ತೋರ್ಸಿಕೆಂತ ಮುಂದೆ ಹೋತ್. ಹೊರಗೆ ಒಳ್ಳ ಕತ್ತಲೆನೆ ಆಗಿತ್ತ್. ದಟಿಗೆ ಒಳಗಿನ ಕತ್ತಲೆನ ಓಡ್ಸಿಕೆ ಇದ್ದದ್ದ್, ಜಗ್ಲಿಲಿ ದೊಡ್ಡ ದೊಡ್ಡ ಸೊಯ್ದೆ ಕೊಳ್ಳಿಗಳ ಹಾಕಿ ಉರ್ಯತಿದ್ದ ಒಂದ್ ಅಗುಡೆ ಮಾತ್ರ! ಮೊದ್ವೆನ ದಟಿಗೆನೇ ಆಗಿದ್ದರೂ ಅಲ್ಲಿದ್ದದ್ದ್ ಎರ್ಡ್ ಮೂರ್ ಚಿಮ್ಣಿಗಳ ಬೊಳ್ಪು ಮಾತ್ರ!

ದಟಿಗೆಂದ ಹೊರಗೆ ಕರ್ಕಂಡ್ ಹೋದ ಮೇರ್ತಿ, ಕೊಟೆಗೆ ಹಕ್ಕಲೆ ಹೋಗಿ, "ಅಲ್ಲೇ ಆ ಕರೆಲಿ"ಂತ ಕೈ ತೋರ್ಸಿತ್. ಅಲ್ಲಿ ಎರ್ಡ್ ತಟ್ಟಿಗಳ ಅಡ್ಡ ಕಟ್ಟಿದ್ದೊ, ಅಷ್ಟೇ. ಅಲ್ಲೇ ಒಂದ್ ಪುಡೆಲಿ ಸೊಯ್ಡೆ, ಸೋಗೆ, ಮಡಲ್, ಅಡರ್ ಹೀಂಗೆ ಎಲ್ಲ ರಾಸಿ ಬಿದ್ದಿತ್ತ್. ಮಿಣ್ಕಿ ಹೇಳ್ತ್ "ನಂಗೇನ್ ಕಾಂಬೊದ್ಲೆ. ಒಂದ್ ಚಿಮ್ಣಿ ತಾವರೆಯಾ?" "ಈಗ ತನ್ನೆ"ಂತ ಹೇಳಿ ಅದ್ ಓಡ್ವ ಹಾಂಗೆ ಹೋತ್. "ಎಂತ ಗೆತಿಗೆಟ್ಟ್‌ವ್ವ್ಯಾ"ಂತ ಮಿಣ್ಕಿ ಗೊಣಗುಟ್ಟಿಕನ ಚಿಮ್ಣಿ ದೀಪ ಬಾತ್. "ನೀವ್ ಹೋಗಿ"ಂತ ಅದರ ಕಳ್ಸಿ, ಇದ್ ಚಿಮ್ಣಿ ಹಿಡ್ಕಂಡ್ ಎರ್ಡ್ ತಟ್ಟಿ ಕಟ್ಟಿದಲ್ಲಿಗೆ ಹೋತ್. ಅಲ್ಲಿ ಮೀದ ನೀರ್ ಸೆರಿ ಹರ್ದ್ ಹೋಗದೆ ನಾತ ಬರ್ತಿತ್ತ್. ಒಲೆ ಮೇಲೆ ಎರ್ಡ್ ಕಂದಲ್ ನೀರ್ ಹಿಡಿವ ಒಂದ್ ಮೊಣ್ಣ್ ಮಡ್ಕೆ. ನೀರ್ ತೆಗ್ಯಕೆ ಒಂದ್ ಒಣ್ಕ್. ಪುಣ್ಯಕ್ಕೆ ಮಡಿಕೆಲಿ ನೀರಿತ್ತ್. ಮಿಣ್ಕಿ ಕೈಕಾಲ್ ತೊಳ್ಕಂಡ್ ಬಾತ್. ಅದರ ಕೈಂದ ಚಿಮ್ಣಿ ತೆಕಂಬಕನ ಮಾಚು ಕೇಳ್ತ್ "ಹೇಂಗುಟ್ಟಿಯಾ?". "ಹೋಗ್, ನೀನೇ ನೋಡು"ಂತ ಹೇಳ್ತ್ ಮಿಣ್ಕಿ. ಮಾಚು ಹೋಗಿ ಬಾತ್. ಬಾಕನ "ಇಲ್ಲಿ ಕಾಡ್ ಮಾತ್ರ ಅಲ್ಲ, ಕಾಡ್ ಮೊಯಿಂಸರೂ ಒಳೊ"ಂತ ಹೇಳ್ತ್. ಇಬ್ಬರೂ ನೆಗಾಡ್ದೊ. ಮತ್ತೆ ಎಂತ ಮಾಡೂದುಂತ ಗೊತ್ತಾತ್ಲೆ. ಸುಮ್ಮನೆ ಬಂದ್ ಮುಂದೆ ಕುದ್ದಲ್ಲೇ ಕುದ್ದೊ. ಹಂಞ್ಞ ಹೊತ್ತಾಕನ ಮಾಚುನ ದೊಡ್ಡತ್ತೆ ಬಂದ್ ಹಕ್ಕಲೆ ಕುದ್ದ್‌ಕಂಡ್ "ನೀವುಗೆ ಪೇಟೆಲಿ ಇದ್ದೊದ್‌ವ್ಕೆ ಈ ಕಾಡ್‌ಲಿ ಬೇಜಾರ ಆದೆನೋ ಏನೋ"ಂತ ಮಾತ್ ಸುರು ಮಾಡ್ದೊ. ಮತ್ತೆ ಮಿಣ್ಕಿ ಹಕ್ಕಲೆ ಅದರ ಹೆಸರ್ ಕೇಳ್ದೊ. ಮತ್ತೆ "ನೀ ಸಾ ಅವ್ವ ಅಕ್ಕನವರ ಒಟ್ಟಿಗೆ ಕೆಲ್ಸಕ್ಕೆ ಹೋದಿಯನಾ?"ಂತ ಕೇಳ್ಕನ ಮಿಣ್ಕಿ "ಇಲ್ಲೆ, ಕೆಲ್ಸಕ್ಕೆ ಹೋದ್ಲೆ. ಸಾಲೆಗೆ ಹೋಗ್ತಾ ಒಳೆ"ಂತ ಹೇಳ್ದ್ ಕೇಳಿ "ಸಾಲೆಗೆ ಹೋದಿಯಾ?. ನಮ್ಮ ಜಾತಿಯೊವ್ವು ಸಾಲೆಗೆ ಹೋಕ್ಕಾ? ಅಲ್ಲಿ ಬೇರೆ ಜಾತಿಯೊವ್ವು ನಮ್ಮವರ ಕುದ್ರಿಕೆ ಬುಟ್ಟವೆನಾ?"ಂತೆಲ್ಲಾ ಕೇಳ್ತ್. ಮಿಣ್ಕಿ "ಸಾಲೆ ಮಾಸ್ಟ್ರೇ ನನ್ನ ಬಾಕೆ ಹೇಳ್ದ್. ಬೇರೆ ಜಾತ್ಯವರಿಂದ ಅಂಥ ದೊಡ್ಡ ತೊಂದರೆ ಏನೂ

ಇಲ್ಲೆ."ಂತ ವಿವರ್ಸಿತ್.
"ಸಾಲೆಲೆ ನೀವುಗೆ ಎಂತೆಲ್ಲ ಹೇಳಿ ಕೊಟ್ಟವೆ?"
"ಕನ್ನಡ ಓದಿಕೆ, ಬರ್ಯಕೆ, ಕತೆ ಹೇಳಿಕೆ, ಪದ್ಯ ಹೇಳಿಕೆ, ಲೆಕ್ಕ ಮಾಡಿಕೆ, ಇಷ್ಟೇ ಅಲ್ಲಾದೆ ಇನ್ ಸಾ ಬೇರೆ ಬೇರೆ ವಿಷಯಗಳ ಹೇಳಿ ಕೊಟ್ಟವೆ"
ಮಾಚುನ ಅತ್ತೆ ಕುಸಿಲಿ ಅದರ ಬೆನ್ನ್ ಪೂಜಿ "ಕಲಿ ಮಗ, ಲಾಯ್ಕ ಕಲಿ. ನಮ್ಮ ಜಾತಿ ಗೂಡೆಗ ನಿನ್ನ ನೋಡಿ ಸಾಲೆಗೆ ಹೋಗಲಿ"ಂತ ಹೇಳ್ತ್. ಅದ್ ಮತ್ತೆ ಬೇರೆವರ ಹಕ್ಕಲೆ ಸ "ಈ ಗೂಡೆ ಸಾಲೆಗೆ ಹೋದೆಗಡ"ಂತ ಅಭಿಮಾನಂದ ಹೇಳ್ತಿತ್.
ರಾತ್ರಿ ಉಂಬಕಾಕನ, ಮಾಚುನ ಸಣ್ಣತ್ತೆ ಮಂಜನ ಕರ್ದ್ "ಇಂದ ಮಗಾ, ತೋಟಕ್ಕೆ ಹೋಗಿ ಹತ್ತ್ ಕೊಡಿ ಎಲೆ ತಾ"ಂತ ಹೇಳುದರ ಕೇಳಿ, ಮಾಚು ಮಿಣ್ಕಿನ ಹಕ್ಕಲೆ "ನೋಡ್ದಾ? ಹೇಲ್ ಬಾಕನ ಹಿತ್ಲ್ ಹುಡ್ಕುವ ಜಾತ್ಯವು"ಂತ ಸಿಟ್ಟ್‌ಲೇ ಹೇಳ್ತ್. ಮಿಣ್ಕಿ "ಅದ್ದೇ"ಂತ ಅಕ್ಕನ ಸಿಟ್ಟ್‌ಲಿ ಪಾಲ್ ತೆಕಂಡತ್.

ಮಾಚುನ ಸಿಟ್ಟ್ ಇಳ್ತ್‌ಲ್ಲೆ. ಬುಸುಗುಟ್ಟಿಕಂಡ್ "ಇಂಥ ಬಾಸೆ ಇಲ್ಲದವರ ಒಟ್ಟಿಗೆ ನಾ ಬೊಸ್ದ್ಕಕಲೇ? ಒಟ್ಟಾರೆ ನನ್ನ ಬೊಸ್ದ್ಕ್ ಹಾಳಾಗಿ ಹೋತ್"ಂತ ಪಶ್ಚಾತ್ತಾಪ ಪಟ್ಟತ್. ಮಿಣ್ಕಿಗೂ "ಛೇ"ಂತ ಆತ್. ಊಟಂತ ಹೇಳ್ವಂತದ್ದ್ ಒಂದ್ ಹೇಂಗೋ ಆತ್. ಹೆಳ್ಮಕ್ಕ ಹೆಚ್ಚಿನೊಸ್ವು ಅದೇ ಕೋಣೆಲಿ ಮಲ್ಗಿದೊ. ಕೆಲೊಸ್ವು ಉಂಬೊಳಗೆ. ಗಂಡಸರ್ ಸುತ್ತಕ್ಕಿದ್ದ ಜಗ್ಲಿಲಿ. ಅಲ್ಲಿ ಮೊಸ್ಯಾರ್ದೆದ್ದ್ ಒಂದ್ ಚಾಪೆ ಆದರೂ ಉಟ್ಟಾ? ಇದ್ದದರ್ಲಿ ಒಳ್ಳೇದರ ನೋಡಿ ಇವ್ಕೆ ಹಾಸಿದೊ. ಅದ್ ಸಾ ನೊಸ್ಡುಲಿ ಹರ್ದ್ ಒಟ್ಟೆ ಆಗಿತ್ತ್. ಅದರ ಮೇಲೆ ಪರ್ಕಟ ವಲ್ಲಿನ ಹಾಕಿದೊ. ಮಾಚುಗೆ ಬಚ್ಚೇಲ್ ಇದ್ದರೂ ಒಂದೂ ಸರಿ ಇಲ್ಲದ ಈ ದಟಿಗೆನ ಮೊಯಿಂಸರ್ ಇರ್ವ ಹಾಂಗೆ, ಮೊಯಿಂಸರ್ ಒಳೊಂತ ತೋರ್ಸುವ ಹಾಂಗೆ ಮಾಡಿಕೆ ಎಷ್ಟ ಬಂಜ ಉಟ್ಟೋಂತ ನೆಂದ್ ಬೊಳ್ಪಾಕನ ಮುಟ್ಟ ನಿದ್ದೆನೇ ಬಾತ್‌ಲೆ. ಸುಮ್ಮನೆ ಅತ್ತಿತ್ತ ಹೊರ್ಳಾಡಿಕಂಡಿತ್ತ್.

ಮೊಸ್ರ್ದಿನ ಬೊಳ್ಪುನ ಚಾ ಆತ್. ಇವು ಅಕ್ಕ ತಂಗೆ ನಿನ್ನೆ ಕುದ್ದಲ್ಲೇ ಕುದ್ದ್‌ಕಂಡ್ ಇದ್ದೊ. ಇವು ಕುದ್ದದರ ನೋಡಿಯೋ ಏನೋ ಒಂದ್ ಹೆಂಗ್ಸ್ ಬಂದ್ ಕಾರ್ಬಾರ್ದ ಸೊರಲಿ "ಹೋಗ್, ಮೊಸ್ದ್‌ಮಂಜನ ಅರ್ವೆನ ತೊಳ್ಕಂಡ್ ಬಾ"ಂತ ಹೇಳ್ತ್. ಇದಿಕ್ಕೆ ಸಿಟ್ಟ್ ಬಾತ್. ನಿನ್ನೆ ಮೊಸ್ದ್ವೆ ಆಗಿ ಬಂದದಷ್ಟೇ. ತುಪ್ಪ ಆಕನ ಮುಟ್ಟ ಮೊಸ್ದೊಳಿಗೆಂತನೇ ಲೆಕ್ಕ. ಅಂತದರ್ಲಿ ಇದ್ ಅರ್ವೆ ತೊಳ್ಕಂಡ್ ಬಾಂತ ಹೇಳ್ತಾ ಉಟ್ಟಲ್ಲಾಂತ ಇದ್ ಸಾ ಹಂಙ್ಞ ಗರಂಲೇ "ನಂಗೆ ಗಂಡ್‌ಗಳ ಬಟ್ಟೆ ತೊಳ್ದ್ ಗೊತ್ತಿಲ್ಲೆ. ನಮ್ಮಲ್ಲಿ ಗಂಡ್‌ಗ ಅವರವರ ಅರ್ವೆ ಅವವೇ ತೊಳ್ಕೊಂಬೊಸ್ದು"ಂತ ಹೇಳ್ತ್. ಮಾಚುನ ಅತ್ತೆ ಆ ಹೆಂಗಸಿಗೆ "ಕೂಸಿಗೆ ಗಂಡಸರ ಅರ್ವೆ ತೊಳ್ದ್ ಗೊತ್ತಿಲ್ಲೆಗಡ"ಂತ ಹೇಳ್ತ್. ಅರ್ವೆ ತೊಳ್ಕಂಡ್ ಬಾಕೆ ಹೇಳ್ದ ಹೆಂಗ್ಸ್ ಮನ್ಸ್‌ಲೇ "ಪೇಟೆ ಗೂಡೆ ಅಲ್ಲಾ? ಉಸಾರುಟ್ಟು"ಂತ ಹೇಳಿಕಂಡತ್.

ಮಾಚು ಮನ್ಸ್‌ಲೇ ನೂರ್ ಸರ್ತಿ ಹೇಳಿಕಂಡಿರ್ದು-ಇಂತವರೊಟ್ಟಿಗೆ ನಾವುಗೆ ಸಮ್ಮಂದ ಬೇಡಾಗಿತ್ತ್ಂತ. ಅದಿಕೆ ತೌರ್ ಮನೆವರಲಿ ಮತ್ತೆ ಮಾವನವ್ರಲ್ಲಿ ಬೇಜಾರನೂ ಆತ್. ಒಂದ್ ಹಸ್‌ನ ಮಾರಿಕನ ಆದರೂ, ಕೊಟ್ಟಲ್ಲಿ ಬೇಕಾದಷ್ಟ್ ಹುಲ್ಲು ಉಟ್ಟಾಂತ ಕೇಳ್ವೆ

ಆದರೆ ಮನೆ ಮಗಳ ಕೊಡಿಕನ ಇಷ್ಟ್ ಹಗ್‌ರಾಗಿ ಕಂಡವೆಲೇ? ಮನೆಮಗಳ ಕೊಡಿಕನ, ಗಂಡಿನ ಮನೆ, ಕುಟುಂಬ, ಹೈದ, ಅಪ್ಪ, ಅವ್ವ ಇದರೆರ್ನೆಲ್ಲ ನೋಡದೆ ಕೋಳಿನ ಹಿಡ್ದ್ ಕೊಟ್ಟ ಹಾಂಗೆ ಕೊಟ್ಟೊ ಅಲ್ಲಾ? ನಂಗೇ ಬುದ್ಧಿ ಇಲ್ಲಾಗಿತ್ತ್, ಬೇರೇನೂ ಕಾರಣ ಇಲ್ಲದಿದ್ದರೂ, ಎರ್ಡನೇ ಸಮ್ಮಂದ ಬೇಡಾಂತ ಹೇಳಕಾಗಿತ್ತ್. ಇನ್ನ್ ಬೊದ್ಕ್ ಪೂರ ಇಂತವರೊಟ್ಟಿಗೆ ಕಳ್ಯಕಲೇ? ಹೀಂಗೆಲ್ಲ ಯೋಚನೆ ಮಾಡಿ ಕಡೆಗೆ, ನನ್ನ ಹಣೆಲಿ ಹೀಂಗೆ ಬರ್ದುಟೋ ಏನೋಂತ ಯಾರಿಗೂ ಕಾಣದ ಹಾಗೆ ಮೊರ್ರ್ಟ್‌ಕಂಡ್, ಸೆರಗ್‌ಲಿ ಕಣ್ಣೀರ್ ಒರ್ಸಿಕೊಂಬತಿತ್ತ್.

ಮಾಚುನವು ಅಲ್ಲಿ ಆರ್ ದಿನೊ ಇದ್ದೊ. ಮಾಚು ತಂಗೆನೊಟ್ಟಿಗೆ ಸುತ್ತ ಮುತ್ತ ತಿರ್ಗಿಕಂಡ್ ಬಾತ್. ದಟಿಗೆ ಹೇಂಗಿದ್ದರೂ ಜಾಲ್‌ಲಿ ನಿತ್ತರೆ, ಕಣ್ಣಿಗೆ ಕಾಂಬಷ್ಟ್ ಹಕ್ಕಲೆಲಿ ಇರ್ವ ಅದರ ಪಾಲಿನ ದೇವಿ ಆಗಿದ್ದ ಪಯಸ್ವಿನಿ ಹಳ್ಳ, ಬೊಳ್ಪಾದರೆ ಝೀಂಗುಟ್ಟಿಕಂಡ್ ಹಾರುವ ಜೇನ್ನೆಳಗ, ಹಂಞ್ಞ ದೂರ ಹೋದರೆ ಅಲ್ಲಲ್ಲಿ ನೆಲಲಿ ಹರ್ಕಂಡೋ, ಮರಲಿ ನೇಲಿಕಂಡೋ ಇರ್ವ ನರೆ, ಈಯರ್ ಬೊಳ್ಳಿಗ ಇದರೆಲ್ಲ ನೋಡಿ ಇಲ್ಲಿ ಹೊಟ್ಟೆ ತುಂಬಿಸಿಕೊಂಬಕೆ ದಾರಿ ಉಟ್ಟುಂತ ಒಸಿ ಸಮ್ದಾನನೂ ಆತ್.

ಅಲ್ಲಿನ ಜೆನಗ ಮಾತಾಡ್ವ ಬಾಸೆ ಮಲ್ಯಾಳದ ಹಾಂಗೆ ಇತ್ತ್, ಒಮ್ಮೊಮ್ಮೆ ಅವು ಎಂತ ಮಾತಾಡ್ವೆಂತ ಇದಿಕೆ ಅರ್ತನೇ ಆಗ್ತಿತ್ತ್ಲೆ. ಅಲ್ಲಿನ ಹೆಳ್ಮಕ್ಕ ಸೀರೆ ಉಡ್‌ತಿತ್ಲೆ. ಸೊಂಟಕ್ಕೆ ಒಂದ್ ಅಡ್ಡ ಪಂಚೆ-ಅದ್ ಮೊಣಕಾಲ್ ಮುಚ್ಚುವಷ್ಟೇ. ಅದಿಕ್ಕಿಂತ ಕೆಳಗಾದರೆ ಉಟ್ಟದ್ದ್ ಕೆಳಗಾತ್‌ಂತ ತಿಳ್ಕಣ್ತಿದ್ದೊ. ಅಡ್ಡ ಪಂಚೆನ ಮೇಲೆ ಹಳೆ ಸೀರೆನ ತುಂಡು ಮಾಡಿ ಎದೆ ಮುಚ್ಚಿ, ಎಡ ಹೆಗ್ಲ್ ಮೇಲೆ ಗಂಟ್ ಕಟ್ಟಿಕಂಡ ಗೇಂಟಿ, ಇದ್ ಅವರ ಮಾಮೂಲ್ ಬಟ್ಟೆ, ಕುತ್ತಿಗೆಲಿ ಒಂದಷ್ಟ್ ಮಣಿಸರಗ! ಕೆಲವು ಅಜ್ಜಿಕ ಕೆಬಿ ತೂತ್‌ಲಿ ಓಲೆಗರಿನ ಸುಂದಿ ಇಸಿಕಂಡಿದ್ದೊ.

ಅವರ ಬಟ್ಟೆಗಳ ಮಡಿನ ಏನೂಂತ ಹೇಳ್ದು? ಬಟ್ಟೆಗಳ ಬೆರಿ ನೀರ್‌ಲಿ ಮುಳ್‌ಗಿಸಿ ಒಣ್‌ಂಗಿಸ್ತಿದ್ದನೋ ಏನೋ? ಮೊಣ್ಣ್ ಹಿಡ್ದ್ ಕಪ್ಪಾಟೆ ಕಪ್ಪು! ಚಂಡಿತುಂಡುಂತ ಹೇಳ್ವಂತದ್ದ್ ಮುಟ್ಟರೆ ಕೈಗೆ ಅಂಟಿದೆನೋಂತ ಹೇಳ್ವ ಹಾಂಗೆ ಅಂಟ್ ಅಂಟ್! ಅವರ ಎಲ್ಲಾ ಕ್ರಮಗ ಒಂದ್ ನೂರ್ ವೊರ್ಸದ ಹಿಂದೆನವರ ಹಾಂಗಿತ್ತ್. ಅದೆಲ್ಲ ನೋಡಿ ಮಾಚುಗೆ ಬೇಜಾರನೂ ಆತಿತ್ತ್, ಅದರ ದಟಿಗೆ ಮತ್ತೆ ಈ ದಟಿಗೆನ ಹೋಲಿಕೆ ಮಾಡ್ರೆ, ನೂರ್ ವೊರ್ಸದ ಯೆತ್ಯಾಸ ಕಾಂಬತಿತ್ತ್ ಮಾಡಡಿಲಿ ಕಟ್ಟಿಟ್ಟ ಗಂಟ್‌ಗಳಂತ ಇಚಿತ್ರಗಳ ನೋಡಿ ನೆಗೆನೂ ಬಾತಿತ್ತ್. ಅದ್ ಮನ್ಸ್‌ಲೇ "ರೀತಿ ನೀತಿಂತ ಇಲ್ಲದ ಇವರೊಟ್ಟಿಗೆ ಬೊದ್ಕಿಕೆ ಕಷ್ಟ ಆಗಿ, ಎಲುಂಬನ ಸುರುನ ಹೆಣ್ಣ್ ಅವನ ಬುಟ್ಟ್ ಹೋಗಿರೋಕು. ಅಲ್ಲರೆ ಇಂವಂದ ಲಾಯ್ಕಲಿ ಇರ್ವ ಯಾರೊಟ್ಟಿಗೋ ಓಡಿ ಹೋಗಿರೋಕು"ಂತ ನೆನ್ಸಿತ್. ಅವರ ಜಾತಿಲಿ ಅದೆಲ್ಲ ದೊಡ್ಡ ಸಂಗತಿನೇ ಅಲ್ಲ. ಹಾಂಗೆ ಏನಾರ್ ಗಲಾಟೆ ಆದರೆ ಎರ್ಡ್ ಕಡೆ ಕಾಪಾಡಿಗ, ಗುರಿಕ್ಕಾರ್ರ್, ಹಿರ್ಯರ್ ಸೇರಿ ಪಂಚಾತಿಕೆ ಮಾಡಿ, ತೊಪ್ಪು ಮಾಡ್ದದವರಂದ ಅವರ ದೈವಕ್ಕೋ ದೇವರಿಗೋ ತೊಪ್ಪು ಕಾಣಿಕೆ ಹಾಕಿಸಿ ಬುಡ್ತಿದ್ದೊ. ಅಲ್ಲಿಗೆ ಸಂಗತಿ ಮುಗ್ತ್.

ಹೀಂಗೆ ಗಂಡನ ದಟಿಗೆಲಿ ಮೊದೊಳಿಗೆ ಮಾಚುನ ಆರ್ ದಿನ ಕಳ್ತ್. ತೌರ್ ಮನೆವು ಇವಳ ಕರ್ಕಂಡ್ ಹೋಕೆ ಬಂದವೆಂತ ಒಂದ್ ಕಡೆಲಿ ಸಂತೋಸು. ಇನ್ನೊಂದು ಕಡೆಲಿ ಈ ಗೆತಿಗೆಟ್ಟ ದಟಿಗೆ ನನ್ನದ್‌ಂತ ತೋರ್ಸಕಲೇಂತ ಸಂಕಟ! ಇಲ್ಲಿ ಅವ್ಕೆ ಸರ್ಯಾದ ಊಟ

ಉಪಚಾರನೂ ಆಕಿಲ್ಲೆಂತ ಬೇಜಾರ! ಹಿಂದೆ ಮುಂದೆ ನೋಡದೆ ನನ್ನ ಕೊಟ್ಟಲೇ? ಇಲ್ಲಿ ನನ್ನ ಬಾಗ್ಯ ಎಂತದ್ದ್ಂತ ನೋಡಲಿ, ನೋಡಿ ಸಂತೋಸ ಪಡಲಿಂತ ದುಕ್ಕದ ಹಠಲಿ ಮನ್ಸ್ ಗಟ್ಟಿ ಮಾಡಿಕಂಡತ್.

ಏಳನೇ ದಿನ ವೀಳ್ಯಡ್ಕಂದ ಮೊ್ರಿ ದಿಬ್ಬಣ ಬಾತ್. ಏಳ್ ಜನ, ಏಳ್ ದುಡಿ! ಆ ಏಳ್ ದುಡಿನ ಬೊಟ್ಟಿಕಂಡ್ ಬಾರಿ ಗರ್ಮ್‌ಲಿ ಬಾಕನ, ದಾರಿ ಕರೆ ಮನೆವು ಸಾಲ್ ನಿತ್ತ್, ಈ ಗಮ್ಮತ್‌ನ ನೋಡಿ ಕುಸಿಂದ ಕೆಲ್ಲೊವೊ ಹಣ ಸಾ ಕೊಟ್ಟೊಗಡ. ಮಾಚುನ ಕುಟುಂಬದ್‌ವು ನಾಗೂರಿಗೆ ಬಾದ್ ಇದೇ ಸುರು. ಕಳ್ಳ್ ಕುಡ್ದ್, ಏಳ್ ದುಡಿ ಬೊಟ್ಟಿಕಂಡ್ ಬಂದ ಅವರ ಆ ಗರ್ಮ್, ಇಲ್ಲಿನ ಗತಿಗೆಟ್ಟ ದಟಿಗೆನ, ಈ ಚೋಪಾರ್ ಜೆನಗಳ ನೋಡಿ ಬೆಚ್ಚ ಆಗಿ, ಒಮ್ಮೆಗೆ ಹಿಮಗಟ್ಟಿ ಹೋತ್. ಮಾಚು ಅವರ ನೋಡ್ದೇ ತಡ ದುಕ್ಸ್‌ಸಿ ದುಕ್ಸ್‌ಸಿ ಮೊ್ರ್ಬತ್. ಬಂದವ್ಕೆ ಸಾ ನಾವೆಲ್ಲ ಸೇರಿ ಇದರ ಗುಂಡಿಗೆ ನೂಕಿದನೋಂತ ಆಗಿ ಚಪ್ಪೆ ಆದೊ. ಬಂದ ನೆಂಟ್ರ್‌ಗೆ ಕುಡ್ಯಕೆ ಬೆಲ್ಲ ನೀರ್ ಆದರೂ ಕೊಡೋಕೇ? ಅದ್ ಸಾ ಇಲ್ಲೆ. ಕಡೆಗೆ ಮಾಚುನೇ ಇಲ್ಲಿ ಇಲ್ಲಿ ಹುಡ್ಕಿ ಚಾ ಮಾಡಿ ತಂದ್ ಕೊಟ್ಟತ್. ಅದರ ಕುಡಿಯಕೆ ಯಾರಿಗೂ ಮನ್ಸೇ ಬಾತ್‌ಲೆ.

ದಟಿಗೆನ ಮತ್ತೆ ಆ ಜೆನಗಳ ನೋಡಿ ಕಂಗಾಲಾಗಿ ಗಪ್‌ಚುಪ್ ಆಗಿ ಅವವೇ ಮೋರೆ ಮೋರೆ ನೋಡಿಕಂಡ್, ಏನ್ ಮಾತಾಡೋಕುಂತ ಗೊತ್ತಾಗದೆ ಅತ್ತ ಇತ್ತ ನೋಡಿಕಂಡ್ ಕುದ್ದೊ. ಲೆಕ್ಕಲಿ ಹೊಸ ನೆಂಟ್ರ್‌ಗಳಿಗೆ ಕೋಳಿ ಸಮ್ಮಾನ ಆಕು. ಸಮ್ಮಾನ ಬುಟ್ಟು ಕತ್ತಲೆಗೆ, ಬೊಳ್ಪಿಗೆ ಸರ್‍ಯಾಗಿ ಗಂಜಿನೇ ಇತ್ತ್‌ಲ್ಲೆ. ರಾತ್ರಿ ಮಲ್ಗಿಕೆ ಆ ಏಳ್ ಜನಕ್ಕೆ ಮೊಂದ್ರಿ ಅವರಲ್ಲಿ ಎಲ್ಲುಟ್ಟು? ಮೆಡ್ದ ತಟ್ಟಿ ತುಂಡುಲಿ, ಕೈನೇ ತಲೆದಿಂಬು ಮಾಡಿಕಂಡ್, ಅವವು ಉಟ್ಟ ಅರ್‍ವೆಗಳ ಹೊದ್ದ್‌ಕಂಡ್, ನಿದ್ರೆಯಿಲ್ಲದೆ ಇರ್‍ನ ಬೊಳ್ಪು ಮಾಡ್ದೊ. ಮಾಚುನಂತ ಗೂಡೆಗೆ ಇಂತ ದಟಿಗೆ, ಇಂತ ಜನ ಸಿಕ್ಕಿದಲೇಂತ ಅವ್ಕೆ ಎಲ್ಲೊವ್ಕು ಬಾರೀ ಪಶ್ಚಾತ್ತಾಪ ಆತ್. ಮೊ್ದ್ವೆ ಮಾಡೋಕುಂತ ಹೇಳ್ವ ಅಂಬೆರ್ಪುಲಿ ಒಂದೂ ನೋಡದೆ ಗೂಡೆನ ಕೊಟ್ಟುಬುಟ್ಟೊನೋಂತ ಅವರ ಅವೇ ಬೊಯ್ಕಂಡೊ!

ಚಪ್ಪರ ಮುರ್‍ಯಕೆಂತ{ತುಪ್ಪ ತೆಕಂಡ್ ಹೋಕೆ} ಮಾಚುನ ಮೂವರ್ ಮಾವಂದ್ರ್ ಮತ್ತೆ ಬೇರೆವು ನಾಕ್ ಜನ, ಹೀಂಗೆ ಏಳ್ ಜನ ಬಂದವ್ಕೆ ಏಳ್ ಸೇರ್ ಅಕ್ಕಿ, ಏಳ್ ಕಾಯಿ, ಒಂದ್ ಕುಡ್ತೆ ಎಣ್ಣೆ, ವೀಳ್ಯದೆಲೆ ಮತ್ತೆ ಅಡಿಕೆ ಹೋಳು ತೆಕಂಡ್ ಹೋಕೆ ಕೊಡೋಕು. ಹಾಂಗೆ ಕೊಟ್ಟದರ ತೆಕಂಡ್ ಹೊರ್‍ಟೊ. ಈಗ ಅವ್ಕೆ ಯಾರಿಗೂ ದುಡಿ ಬೊಟ್ಟುವ ಉಲ್ಲಾಸಾಗಲೀ, ಉಮೇದಾಗಲೀ ಇಲ್ಲಾಗಿತ್ತ್. ಅವು ನಡ್ಕಂಡ್ ಹೋವ ಗೊಂಬೆಗಳ ಹಾಂಗೆ ಹೊಸ ಮೊದ್‌ಮಕ್ಕಳ ಕರ್‍ಕಂಡ್ ಹೋದೊ. ಈ ಏಳ್ ದಿನಲಿ ಹಳ್ಳದ ನೀರ್ ಇಳ್ದಿತ್ತ್, ತಿಳಿಯಾಗಿತ್ತ್. ಇಂದ್ ಮಾಚು ಹಳ್ಳಕೆ ಇಳ್ದ್ ಮೋರೆ ತೊಳ್ದ್, ಎರ್‍ಡ್ ಕೈ ಜೋಡ್ಸಿ ನೀರ್ ಕುಡ್ತ್. ಒಳ್ದವು ಬೊಚ್ಚೇಲ್ ಹೋಕೆ ಒಸಿ ಹೊತ್ತ್ ಕುದ್ದು, ಹಳ್ಳದ ನೀರ್ ಕುಡ್ದ್ ಹೊರ್‍ಟೊ.

ಮೊ್ದ್ವೆ ದಿನ ಹೊತ್ತ್‌ಸಿ ಇಸಿದ ಸರ್‍ಮಾಲೆ, ಚಪ್ಪರದಡಿಲಿ ಉರ್‌ಕೊಂಡೇ ಇತ್ತ್. ಅದಿಕ್ಕೆ ಕೈ ಮುಗ್ದ್ ಸೀರೆ ಬದ್ಲಾಯ್ಸಿಕೆ ಒಳಗೆ ಹೋದ ಮಾಚು, ಹುಗ್ಗವ್ವನ ನೋಡಿ ಏನೋ ಹೇಳಿಕಂಡ್ ಮೊ್ರ್ಬತ್. ಹುಗ್ಗವ್ವ "ಅವರ ದಟಿಗೆ ನೋಡದೆ ಕೊಟ್ಟದ್ದ್ ನಮ್ಮದೇ ತೊಪ್ಪು"ಂತ

ೇಳಿ. ಒಂದ್ ಗಳಿಗೆ ಬುಟ್ಟು "ನಿಂಗೆ ಇಂಥದ್ದೇ ಸಿಕ್ಕೋಕುಂತ ನಿನ್ನ ಹಣೆಲಿ ಬರ್ದಿತ್ತೋ ನೋ? ಹಾಂಗೆಂತ ಅವನ ಬುಟ್ಟು ಬಂದ್ ಬುಡ್ಬೇಡ. ನಮ್ಮ ಮರ್ಯಾದಿ ಒಳ್ಸ್ ಮಗಾ"ಂತ ಾಚುನ ಕೈ ಹಿಡ್ಕಣ್ತ್. ಮಾಚು ಮಾತಾಡದೆ ಕಣ್ಣೀರ್ ಒರ್ಸಿಕಂಡ್ ಅಲ್ಲಿಂದ ಹೋತ್.

ಮದ್ರೆಂಗಿ ದಿನ ಹಾಕಿದ ಮೂರ್ತ ಕಂಬನ ತುಪ್ಪ ತಂದ ದಿನನೇ ತೆಗ್ಯೇದು. ಚಪ್ಪರದಡಿಗೆ ಂದ ಹಾಂಗೆ ಮೊದ್‌ಮಂಜ ಚಪ್ಪರಂದ ಒಂದ್ ಈಂದ್‌ನ ಕೈ ಎಳ್ದ್ ಕೆಳಗೆ ಹಾಕೋಕು. ಂಬ ತೆಗಿಯಕೆ ಮುಂದೆ ಇಂವ, ಕಂಬದ ಅಡಿಲಿ ನಿತ್ತ್, ಕನ್ನೆ ಕಂಬಕ್ಕೆ ಕಟ್ಟಿದ ಕರಿಮಣಿ ರನ ಅವನ ಹೆಣ್ಣಿಗೆ ಅಂವ ಕೊಡೊಕು. ಆ ಮೇಲೆ ಮೂರ್ತದ ಕಂಬ ತೆಗ್ದವೇಂತ ಹೇಳಿ ಳ್ದವು ಕಂಬ ತೆಗ್ದವೆ.

(ಇದರ ಚಪ್ಪರ ಮುರಿಯೊದುಂತ ಹೇಳ್ವ)

ಅಂದ್ ಕತ್ತಲೆಗೆ ತರ್ಕಾರಿ ಊಟ. ಮೊರ್ದಿನ ಬೊಳ್ಪುಗೆ ಸಮ್ಮಾನದ ಊಟ. ಇಡ್ಲಿ, ೋಳಿ ಗೈಪು, ಹೆಸ್ರ ಬೇಳೆ ಪಾಯ್ಸ. ಮೊದ್‌ಮಂಜನ ಕಡೆಯವ್ಕೆ ಸಭೆಲಿ ಹೇಂಗೆ ಉಣೊಕುಂತ ಾ ಗೊತ್ತಿಲ್ಲಾಗಿತ್ತ್. ಗೈಪು ಬಾಕೆ ಮುಂದೆನೇ ಕೆಲೊವ್ಕೆ ಇಡ್ಲಿ ತಿಂದ್ ಆಗಿತ್ತ್. ಇನ್ನ್ ಲೊವು ಇಡ್ಲಿನ ಕೈಲಿ ಹಿಡ್ಕಂಡ್, ಅತ್ತಿತ್ತ ನೋಡಿಕೊಂಡ್ ಕುದ್ದಿದ್ದೊ. ಇಡ್ಲಿ ತಿಂದ್ ಮುಗ್ಸಿದವ್ಕೆ ತಿರ್ಗಿ ಇಕ್ಕಿದೊ. ಪಾಯಸನ ಸಾ ಸೊರ ಸೊರಂತ ಶಬ್ದ ಬಾವ ಹಾಂಗೆ, ಕೈಗೆ ಅರ್ದದರ ನೆಕ್ಕಿ ನೆಕ್ಕಿ ತಿಂಬೊದರ ನೋಡಿ ಇಲ್ಲಿಯೊವ್ಕೆ ನೆಗೆ ಬಾತ್. ಅವರವರಷ್ಟಕ್ಕೆ ಮುಸಿ ಮುಸಿ ನೆಗಾಡ್ದೊ.

ಸಮ್ಮಾನದ ಊಟ ಆಗಿ ನೆಂಟ್ರ್‌ಗ ಹೊರ್ಟ್ರೊ, ಹೊರ್ಡಿಕೆ ಮುಂದೆ ಮೊದ್‌ಮಕ್ಕಳ ದೇವರ ಕೋಣೆಲಿ ನಿಲ್ಸಿ ಕಾಪಾಡಿ ಎರ್ಡ್ ಒಳ್ಳೆ ಮಾತ್ ಹೇಳ್ತ್. "ನಾವ್ ನಂಬಿದ ದೇವರ್‌ಗ ಹಂಗೆ ದೈವಂಗ ಮೊದ್ವೆನ ಯಾವೊಂದೂ ಅಡ್ಡಿ ಆತಂಕ ಇಲ್ಲದ ಹಾಂಗೆ ನಡ್ಸಿ ಕೊಟ್ಟೊ, ಇನ್ನ್ ಮುಂದೆಗೆ ಸಾ ನಮ್ಮ ಹಿಂದೆ ನಿತ್ತ್, ನಾವುಗೆ ಮತ್ತೆ ಈಗ ಮೊದ್ವೆ ಆದ ಮೊದ್‌ಮಕ್ಕಳಿಗೆ ಎಲ್ಲಾ ರೀತಿಲಿ ಒಳ್ಳದ್ ಮಾಡಿ ಕಾಪಾಡೋಕುಂತ ಕೇಳಿಕೊಂಬೊದು. ಹಾಂಗೆ ಹೊಸ ನೆಂಟ್ರ್, ಅತ್ತೆ ಮಾವ, ಅತ್ತಿಗೆ ನಾದಿನಿಗ, ಬಾವ ಮೈದ್‌ನಂದ್ರ ನಮ್ಮ ಗೂಡೆನ ಒಳ್ಳ ರೀತಿಲಿ ನೋಡಿಕೊಣಕ್‌ಂತ ಕೇಳಿಕೊಂಡವೆ. ಅದೆ ರೀತಿ ನಮ್ಮ ಗೂಡೆ ಸಾ ಗಂಡನ ಮನೆವರೊಟ್ಟಿಗೆ ತನ್ನ ಸೊಂತ ಮನೆವರ ಹಾಂಗೆ ಮಾತ್ ಕತೆಲಿ, ನೀತಿ ನಡತೆಲಿ ನಡ್ಕಂಡ್ ತೌರ್ ಮನೆಗೆ ಹೆಸ್ರ್ ತರೋಕು. ಈ ಗೂಡೆಂದ ನಿಮ್ಮ ಮನೆದ್ದ್ ಸುಖ, ಸಂಪತ್ತ್ ,ಸಂತಾನ ಭಾಗ್ಯ ಎಲ್ಲಾ ಹೆಚ್ಚ್‌ತ್ತಾ ಹೋಗ್‌ವ ಹಾಂಗೆ ದೇವರ್ ಅನುಗ್ರಹಿಸಲಿಂತ ಕೇಳಿಕೊಂಡವೆ"ಂತ ಹೇಳಿ ಉರ್ಕಂಡ್ ಇದ್ದ ಕಾಲ್ ದೀಪಕ್ಕೆ ಅಕ್ಕಿ ಹಾಕಿ ಕೈ ಮುಗ್ತ್. ಒಳ್ದವೂ ದೇವರಿಗೆ ಕೈ ಮುಗ್ದೊ. ಹೊಸ ಮೊದ್‌ಮಕ್ಕ ಎಲ್ಲಾ ಹಿರ್ಯರ ಕಾಲ್ ಹಿಡ್ದೊ. ಮಾಚು ಮೊರ್ಟ್‌ಕಂಡೇ ಹೋತ್. ಹಳ್ಳದ ನೀರ್ ಕನ್ನ ಹಾಂಗೆ ಇತ್ತ್. ಮಾಚು ನೀರ್‌ಲಿ ನಿತ್ತ್, ಒಂದಷ್ಟ್ ಹೊತ್ತ್ ಹರ್ಕಂಡ್ ಹೋವ ಹಳ್ಳನೇ ನೋಡಿಕಂಡ್ ನಿತ್ತತ್. ಎಲ್ಲೋ ಹುಟ್ಟಿದ ಹಳ್ಳ ಎಲ್ಲಿಗೋ ಹೋಗಿ ಸೇರ್ದಲ್ಲಾ? ಅದರ ದಾರಿ ಏನ್ ಸುಖದ್ದಲ್ಲ. ಹೊಂಡ ಗುಂಡಿ, ಏರ್ ತಗ್ಗ್, ಇಕ್ಕಟ್ಟ್, ಅಗಲ ಇದರೆಲ್ಲ ಅನ್ಬವಿಸಿಕಂಡ್ ಕಡೇಗೆ ಸಮುದ್ರ ಸೇರ್ದೆ. ಹಾಂಗೇ ನಮ್ಮ ಬೊದ್ಕ್ ಸಾ. ಹೀಂಗೆಲ್ಲ ಯೋಚನೆ ಮಾಡ್ತಾ ಅದಿಕ್ಕೆ ಏನೋ ಒಂದ್ ಸಮ್ಮಾದಾನ ಆತ್. ನೀರ್ಲಿ ಮೊರ್ಲು ಮೋರೆ ತೊಳ್ತ್. ಹೊಟ್ಟೆ ತುಂಬ ಆ ತಣ್ಣನೆ ನೀರ್ ಕುಡ್ತ್.

ಪಯಸ್ವಿನಿ ಹಳ್ಳ, ಮಾಚುಗೆ ಗಂಗಾ ನದಿನಷ್ಟೆ ಪುಣ್ಯದ ಹಳ್ಳ. ನಡ್ಯಕೆ ಕಲ್ತಲ್ಲಿಂ ಅದ್ ಹಳ್ಳದೊಟ್ಟಿಗೆ ಸಮ್ಮಂದ ಇಸಿಕೊಂಡುಟು. ಅದರ್ಲಿ ಮೀದದಕ್ಕೆ ಲೆಕ್ಕನೇ ಇಲ್ಲೆ. ಬೇ ದಟಿಗೆನ ಮಕ್ಕಳೊಟ್ಟಿಗೆ ಎಷ್ಟ್ ಆಡಿಟು? ಅದರ ಕರೆಲಿ ಸಣ್ಣ ಸಣ್ಣ ಬಾಮಿ ತೋಂಡಿ ಎಷ ಮೀನ್‌ಗಳ ಅದಿಕ್ಕೆ ಹಾಕಿದ್ದೊ. ಎಷ್ಟ್ ಸಲ ಮೋರೆಗೆ ನೀರ್ ಚೋಂಪುವ ಆಟ ಆಡಿದ್ದೊ ಪಿಂಡಿಂತ ಹೇಳ್ವ ಸೊರ್ಗಲಿ ಎಷ್ಟ್ ಸವಾರಿ ಹಾಕಿತ್. ನೀರ್ಲಿ ಮುಳ್‌ಂಗುವ ಎಷ್ಟ್ ಮಕ್ಕ ಅಪ್ಪ ಬೊದ್ಧಿಸ್ಯುಟು. ಮೀನ್ ಹಿಡಿಯಕೆ ಹೋದ ಕತೆಗ ಲೆಕ್ಕೇ ಇಲ್ಲೆ. ಅಪ್ಪಂಗೆ ಹೇಂಗೆ ಹ ದೇವ್ರೋ ಹಾಂಗೆ ಮಾಚುಗೆ ಸಾ. ಆ ಭಾವನೆಂದಳೇ ಅದ್ ಹಳ್ಳಕ್ಕೆ ಕೈ ಮುಕ್ತ್. ಹಾಂಗೇ "ಓ ದೇವೀ, ನನ್ನ ಕಷ್ಟಗಳ ದೂರ ಮಾಡ್"ಂತೇಳಿ ಒಂದೇ ಮನ್ಸ್‌ಲಿ ಬೇಡಿಕಂಡತ್. ಹಳ್ಳದ ಸ ಸಣ್ಣ ಅಲೆಗ ಅದರ ಕಾಲ್ಮುಟ್ಟಿದೊ. ಆ ಅಲೆಗ ಮುಟ್ಟಿದರ್ಲಿ "ಹಳ್ಳನೇ ಬಂದ್ ನನ್ನ ಮಾತ ಕೇಳ್ತ್. ನಾ ಹೇಳ್ದ್ ದೇವಿಗೆ ಮುಟ್ಟಿತ್"ಂತ ಹಂಞ ಹೊತ್ತ್ ಕಾಲ್ ತೆಗಿಯದೇ ಅಲ್ಲೇ ತಣ್ಣಂಗೆ ನೀರ್ಲಿ ನಿತ್ತ್‌ಕಂಡತ್. ಮತ್ತೊಮ್ಮೆ ತಲೆಗೆ ನೀರ್ ಹನ್ನಿಸಿಕಂಡ್, ಒಂದ್ ಮುಕ್ಕ ನೀರ್‌ನ ತೀರ್ಥಂತ ಕುಡ್ತ್. ಈಗ ಅದರ ಮೈ ಮನ್ಸ್ ಎರ್ಡೂ ಹಗ್‌ರ ಆದ ಹಾಂಗೆ ಆತ ಬಾವ ಕಷ್ಟಗಳ ನಾ ಎದ್ರ್‌ಸುವೆ. ನಂಗೆ ದೇವರ ದಯೆ ಉಟ್ಟುಂತ ಹೇಳ್ವ ಧೈರ್ಯಲಿ ಗಂಡ ಕಡೆವರೊಟ್ಟಿಗೆ ಹೆಜ್ಜೆ ಹಾಕಿತ್.

ಹಾಳೆ 16
ಎಲುಂಬನ ಪಟ್ಟಲಿ

ಮಾಚುನ ಇಷ್ಟಾನಿಷ್ಟಗಳ ಕೇಳದೆ ಎಲುಂಬಂಗೆ ಮದ್ವೆ ಮಾಡಿಕೊಟ್ರೊ. ಅದಿ ಅಂವನಲ್ಲಿ ಆಗಲೀ, ಅಂವನ ಅವ್ವ ಅಪ್ಪನ ಮೇಲಾಗಲೀ ಏನೂ ಗೌರವ ಇತ್ಲೆ. ಎಲುಂ ಒಂತರದ ಪಾಪದ, ಹೆಡ್ಡ ಮೊಯಿಂಸ. ಹೆಣ್ಣಿಗೆ ಹೊಡಿಯೊದು ಬೈಯ್ಯೊದು ಮಾಡ್ತಿತ್ತ ಕುಡಿಯತಿತ್. ಅದ್ರಂದ ಯಾರಿಗೂ ತೊಂದರೆ ಇತ್ಲಾಗಿತ್. ಅವನಷ್ಟಕ್ಕೆ ಕುಡ್ದು ಮಲ್ಗಿ ಬುಡ್ತಿತ್ ಮಾಚು, ನಾವ್ ನೆನ್ಸಿದ ಹಾಂಗೆ ಯಾವ್ದೂ ಆದ್ಲೆಲೇಂತ ಗಟ್ಟಿ ಮನ್ಸ್ ಮಾಡಿಕಂಡ್ ಅವಂ ಕುಟುಂಬದವ್ಕೆ ಹೊಂದಿಕಂಡ್ ಹೋತಿತ್.

ಮಾಚು ಗಂಡನ ಮನೆಲಿ ಮಾಡ್ದ ಸುರುನ ಕೆಲ್ಸ ಅಂದರೆ, ದಟಿಗೆನ ಒಳ ಹೊರಗೆ ಮನಾರ ಮಾಡಿ, ಸಾಮಾನ್‌ಗಳ ಒತ್ತರ ಆಗಿ ಇಸಿದ್ದ್. ಗಂಡಂಗೆ ಹಂಞ ಹ ಕೊಟ್ಟು, ಒಂದೊಸಿ ಡಬ್ಬಿಗಳ ತರ್ಸಿತ್. ಉಂಬೊಳಗೆಲಿ ಕಟ್ಟಿ ಇಸಿದ್ದ ನಟ್ಟಿ ಬಿತ್ತ್‌ಗಳ ಬುಟ್ ಬಾಕಿ ಎಲ್ಲನ ಡಬ್ಬಿಗೆ ತುಂಬ್ಸಿ ಇಸಿತ್. ಮಾಡಡಿಲಿ ಅರ್ವೆಲಿ ಕಟ್ಟಿ ಇಸಿದರ ಅತ್ತೆ ಹಕ್ಕಲೆ ಕೇ ಬೇರೆ ಬೇರೆ ಗಂಟ್‌ಗಳ ಹಾಂಗೇ ಒಂದೇ ಬಟ್ಟೆಲಿ ಕಟ್ಟಿ ಬೆಸೆಗೆಲಿ ಹಿಂದೆಗೆ, ಕಾಣದ ಹಾಂ ಗೋಡೆ ಕರೆಲಿ ಇಸಿತ್. ನೇತಾಡಿಕಂಡಿದ್ದ ಬಲೆ, ಮೊಸಿನೆಲ್ಲ ಪೊರ್ಲು ಗುಡ್ಸಿ ತೆಗ್ತ್. ಬೆತ್ತ ಕುಕ್ಕೆಲಿ ಇದ್ದದರ ತೆಗ್ದ್ ಬೇಕಾದರ ಇಸಿಕಂಡ್ ಬೇಡಾದರ ಬಿಸಾಕಿತ್. ಮತ್ತೆ ಇಡೀ ದಟಿಗೆ ಚೆಪ್ಪುನ ಕರಿ ಮಾಡಿ, ಅದಿಕೆ ಸೆಗ್ಣಿ ಸೇರ್ಸಿ ಹಾಳೆ ತೊಟ್ಟುಲಿ ನೆಲ ಸಾರ್ಸಿತ್. ಅಬ್ಬ! ಈಗ ದಟಿ ನೋಡ್‌ವ ಹಾಂಗೆ ಆತ್. ಆ ಮೇಲೆ ಜಾಲ್‌ನ ಲಾಯ್ಕ್ ಗುಡ್ಸಿ, ಅದಿಕ್ಕೆ ಸಾ ಸೆಗ್ಣಿ ನೀರ

ಮಾಡಿ ಗುಡ್ಸಿತ್. ನೀರೆಡಿ ನೀರ್ ಸೆರ್ರ್ಯಾಗಿ ಹೋಗ್‌ವ ಹಾಂಗೆ ಕಣಿ ಕೊಟ್ಟತ್. ಅದಿಕೆ ಎಲುಂಬ ತಂದಿಸಿದ ಸುಣ್ಣ ಹಾಕಿತ್. ಅಲ್ಲಿಗೆ ಒಂದ್ ಮಟ್ಟಿಗೆ ದಟಿಗೆ ಮತ್ತೆ ಹೊರಗೆ ಮನಾರ ಆತ್! ಮಾಚುಗೆ ಒಮ್ಮೆ ನೆಮ್ಮದಿ ಆತ್. ಅಲ್ಲಿಂದ, ಅಲ್ಲಿ ಇಲ್ಲಿ ಬಿದ್ದ್ ಕಂಡಿದ್ದ, ನರಿಕುಂಬು ಹಿಡ್ದ ಚಂಡಿ ತುಂಡುಗಳ ಹಳ್ಳಕ್ಕೆ ತೆಕಂಡ್ ಹೋಗಿ, ಗುದ್ದಿ ಇಸಿದ್ದ ನರ್ರೋಳ್ ಹೊಡಿಲಿ ಪೊರ್ಲುರ್ಜ ತೊಳ್ದ್ ಒಣ್‌ಗಿಸಿ ಮೋಡ್ಜಿ ತಂದ್ ನೇಕೆಲಿ ಹಾಕಿತ್. ಹೀಂಗೆ ಒಂದೊಂದಾಗಿ ದಟಿಗೆ, ಅಂಗಳ, ಬಟ್ಟೆ ಬರೆಂತ ಮನಾರ ಮತ್ತೆ ಒತ್ತರ ಆದೊ.

ಮಾಚುಗೆ ಎರ್ಡ್ ಅತ್ತೆಕ್ಕ. ಅತ್ತೆಕ್ಕಳ ಅಪ್ಪಂಗೆ ಎರ್ಡ್ ಹೆಣ್ಣ್ ಮಕ್ಕಳೇ. ಮಾಚುನ ಮಾಂವ, ಅಕ್ಕ ಪೊರ್ಲುರ್ಜ ಇಲ್ಲೆಂತ ತಂಗೆನ ಮೋದ್ವೆ ಆಗಿತ್ತ್. ಇವರ ಮೋದ್ವೆ ಆಗಿ ನಾಕೈದ್ ವೊರ್ಸ ಆದರೂ ಅಕ್ಕಂಗೆ ಮೋದ್ವೆ ಯೋಗ ಬಾತ್ಲೆ. ಆಗ ಅವರ ಅಪ್ಪ, ಅಳಿಯನೊಟ್ಟಿಗೆ "ತಂಗೆನ ನೀ ಮೊದ್ವೆ ಆದ. ದೊಡ್ಡದಕ್ಕೆ ಎಲ್ಲಿಂದಳೂ ನೆಂಟಸ್ತಿಕೆ ಆದ್‌ಲ್ಲೆ. ದೊಡ್ಡದರ ಸಾ ನೀನೇ ಮೋದ್ವೆ ಆಗ್. ನಿನ್ನ ಅತ್ತೆಗೂ ನಂಗೂ ಉಸಾರಿಲ್ಲೆ. ನಾವುಗೆ ಪ್ರಾಯನೂ ಆತ್. ಯಾಗ ಏನ್ ಆದುಂತ ಹೇಳಿಕೆ ಆದ್ಲೆ. ಸಣ್ಣದ್ರೊಟ್ಟಿಗೆ ಕೇಳ್ಳೋಳೆ "ನಿಂಗೆ ಒಪ್ಪಿಗೆ ಇದ್ದರೆ ಅಕ್ಕನ ಸಾ ನಿನ್ನ ಗಂಡಂಗೆ ಕೊಟ್ಟವೆ."ಂತ. "ಅಂವ ಒಪ್ಪಿರೆ ನಂದೇನ್ ತೊಂದರೆ ಇಲ್ಲೆ"ಂತ ಹೇಳ್ಯುಟು. ನಮ್ಮ ದಟಿಗೆನ ನಿಂಗೇ ಕೊಟ್ಟವೆ. ನೀ ಅಕ್ಕನ ಮೋದ್ವೆ ಆದೀಯಾ?"ಂತ ಕೇಳ್ದಕ್ಕೆ ಅಂವ ಒಪ್ಪಿ, ಅಕ್ಕನ ಸಾ ಅಂವನೇ ಕೈ ಹಿಡ್ತ್.

ಸಣ್ಣತ್ತೆಗೆ ಅಕ್ಕನ ಕಂಡರೆ ಅಷ್ಟಕ್ಕಷ್ಟೇ. ಇದಿಕ್ಕೆ ಗೆತಿ ಇಲ್ಲದೆ ನನ್ನ ಗಂಡನ ಕೈ ಹಿಡ್ತ್‌ಂತೇಳಿ ಕಡ್ಮೆಂದಳೇ ನೋಡ್ತಿತ್ತ್. ತಂಗೆನೇ ಆಗಿದ್ದರೂ ಮನೆ ಕಾರ್ಬಾರ, ಯೆಜಮಾನಿಕೆ ಪೂರ ಅದರ್ದೇ. ಹೊರಗೆನ ಸೊಪ್ಪು, ಸೊಯ್ದೆ, ಬೇರೆವರ ಮನೆ ಕೆಲ್ಸಕ್ಕೆ ಹೋಕೆ ದೊಡ್ಡದ್. ದಟಿಗೆಲಿ ಇದ್ದ್‌ಕಂಡ್ ಉಂಬಕೆ ಮಾಡ್ದು, ಇಕ್ಕುದು, ಜಂಬರಗಳಿಗೆ ಹೋಕಿದ್ದರೆ ಹೋದು ಸಣ್ಣದ್. ದೊಡ್ಡದ್ ಅದರೆಲ್ಲ ತಲೆಗೆ ಹಾಕ್ಕಂಡತ್ಲೆ. ಎಷ್ಟಾದರ್ ಅದರ ಗಂಡನ ಕೈ ಹಿಡ್ದವಳ್ ನಾನ್. ಮುಂದೆ ನಂಗೆ ಗೆತಿ ಇಲ್ಲದ ಹಾಂಗೆ ಆದು ಬೇಡಾಂತ ನನ್ನ ಅಪ್ಪ ಇದರ ಗಂಡಂಗೆ ನನ್ನ ಕೊಟ್ಟದ್ದ್. ಎರ್ಡ್ ಹೊತ್ತ್ ಉಂಬಕೆ ಕೊಟ್ಟದೆ. ಮತ್ತೆ ಇನ್ನು ನಂಗೆ ಎಂಥ ಆಕು? ಪೊರ್ಲುಲಿ ದಿನ ಹೋದರೆ ಸಾಕ್"ಂತ ಎಂತಕ್ಕೆ ಸಾ ಮಾತಾಡ್ತಿತ್ಲೆ. ಒಳ್ಳೆ ಗುಣದ ಹೆಂಗ್ಸ್ ಅದ್. ಮುಂದೆನ ಕಾಲದ ಹೆಳ್ಮಕ್ಕಳ ಹಾಂಗೆ ಗಂಡಂಗೆ ತಗ್ಗಿ ಬೊಗ್ಗಿ ನಡ್ಯತಿತ್ತ್. ಗಂಡ "ಅಂದ್ ಪೊರ್ಲುರ್ಜಗೆ ಮೋರ್ರ್ಯಾಗಿ ಸಣ್ಣದರ ಮೋದ್ವೆ ಆದೆ. ಅಂದೇ ಇದರ ಮೋದ್ವೆ ಆಗಿದ್ದರೆ ಜಗಳ ಜಟ್ಟಿ ಇಲ್ಲದೆ ಲಾಯ್ಕಲಿ ಇರಕಾಗಿತ್ತ್"ಂತ ನೆನ್ಸ್‌ತಿತ್ತ್. ಆ ಹೆಣ್ಣ್ ಹಳೆ ಕ್ರಮದವರ ಹಾಂಗೆ ಅದರ ಮೇರ ಬಾರದೆ ಉಂಬತಿತ್ಲೆ. ಅವನ ಬಟ್ಟೆ ತೊಳ್ದ್ ಇಸುದು, ಅಂವ ಎಲ್ಲಾದ್ರ್ ಹೋಕೆ ಉಟ್ಟಂತೇಳ್ರೆ ತಯಾರಿ ಮಾಡಿ ಕೊಡ್ದು, ಕೆಲ್ಸಕ್ಕೆ ಹೋಗಿ ಬಂದ ಹಾಂಗೆ ಕುಡ್ಯಕೆ ಕೊಡುದು –ಇಂತದರ ಎಲ್ಲ ಮನ್ಸಿಟ್ಟ್ ಮಾಡ್ತಿತ್ತ್. ಇದ್ರಂದಾಗಿ ಅವಂಗೆ ಈ ಹೆಣ್ಣ್‌ನ ಮೇಲೆ ಗೌರವನೂ ಪ್ರೀತಿನೂ ಇತ್ತ್. ಅದಕ್ಕೆ ಸಣ್ಣದ್ ಹಿಂದೆಂದ "ಹೊಸ ಗಂಡ ಅಲ್ಲಾ? ಅದ್ ಕೆಲ್ಸ ಮಾಡಿ ಕೊಟ್ಟದೆ. ಇಂವ ಕೊಂಡಾಟ ಮಾಡ್ದೆ. ಮಾಡಲಿ"ಂತ ಮಕ್ಕಾರ್ ಮಾಡ್ತಿತ್ತ್. ಮಾಚುನ ಹಕ್ಕಲೆನೇ ಸಣ್ಣತ್ತೆ ದೊಡ್ಡತ್ತೆನ ದೂರ್ತಿತ್ತ್. ಮಾಚು ಆ ಕೆಬಿಲಿ ಕೇಳಿ ಈ ಕೆಬಿಲಿ ಬುಡ್ತಿತ್ತ್. ದೊಡ್ಡತ್ತೆನ ದೊಡ್ಡ ಮನ್ಸ್ ಅದಕ್ಕೆ ಗೊತ್ತಿತ್ತ್. ಆ ದಟಿಗೆಲಿ ಮಾಚು ಹಂಞ ಮಾತಾಡ್ದುಂತೇಳ್ರೆ, ಆ ದೊಡ್ಡತ್ತೆನ ಹಕ್ಕಲೆ ಮಾತ್ರ.

ಮೇರರ ಜಾತಿಲಿ ದಟಿಗೆಗೆ ಬಂದ ಹೊಸ ಸೊಸೆ, ಬೇರೆ ಜಾತಿನವರ ಮನೆಲಿ ಕೆಲ್ಸ ಮಾಡಿ ಆದರೂ ಅದರ ಹೊಟ್ಟೆ ಅದೇ ತುಂಬಿಸಿಕಣೊಕು. ಎಷ್ಟಂತೇಳ್ರೆ ಹನೀಸ್ ಅಕ್ಕಿ ಇದ್ದ್ ಗಂಜಿ ಮಾಡ್ರೆ, ಒಳ್ದವು ತೆಳಿ ಗಂಜಿ ಕುಡ್ದರೂ ಸೊಸೆಗೆ ಕೊಡಿಕಿಲ್ಲೆ. ಗಂಡ ಒಳ್ಳಂವ ಆದರೆ ಯಾರಿಗೂ ಗೊತ್ತಾಗದ ಹಾಂಗೆ ಅವನ ಪಾಲ್‌ಂದ ಹೆಣ್ಣಿಗೆ ಹಂಞ ಇಸುದು. ಇಲ್ಲರೆ ಅದ್ ಆ ಹೊತ್ತು ಉಪಾಸನೇ! ಹಾಂಗಾಗಿ ಮಾಚುಗೆ ಬೇರೆ ಕಡೆ ಕೆಲ್ಸಕ್ಕೆ ಹೋಗದೆ ಉಪಾಯನೇ ಇತ್ಲೆ. ಅದಿಕೆ ಮಾಚು ದೊಡ್ಡತ್ತೆ ಹಕ್ಕಲೆ ಹೇಳಿ, ಬೇರೆ ಮನೆಗಳ ಕೆಲ್ಸ ಒಪ್ಪಿಕಂಡಿತ್ತ್. ಅದ್ ಪೇಟೆಲಿ ಇದ್ದ ಮೇರ್ತಿ ಆದರೂ ಬಾರಿ ಕಂಯ್ಯೆದ್ದ್. ಹಳ್ಳಿಲಿ ಇರ್ವ ಬೇಸಾಯದ, ತೋಟದ ಕೆಲ್ಸಗಳ ಬೇಗ ಬೇಗ ಕಲ್ತ್‌ಕಂಡತ್. ಒಳ್ಳ ಕೆಲ್ಸಗಾರ್ತಿಂತ ಹೆಸ್ರ್ ತೆಕಂಡತ್.

ಎಲುಂಬ ಮೊದ್ವೆಗೆಂತ ಅಲ್ಲೇ ಒಬ್ಬ ಬ್ಯಾರಿನ ಮನೆಂದ ಐನೂರ್ ರುಪಾಯಿ ಹಣದ ಲೆಕ್ಕಲಿ ಕಡ, ಮತ್ತೆ ಹನೀಸ್ ತೆಂಗಿನಕಾಯಿ, ಅಡಿಕೆ, ವೀಳ್ಯದೆಲೆ ಹೀಂಗೆ ನೇರ ಸಾಲಲಿ ತೆಕಂಡಿತ್ತ್. ಕಡ ತೀರ್ಸೋಕು ಅಂದರೆ ಈ ಮೇರ, ಮೇರ್ತಿ ಅವರಲ್ಲಿಗೆ ಕೆಲ್ಸಕ್ಕೆ ಹೋಗಿಯೇ ಹೋಕು. ಮೊದ್ವೆ ಸಾಲ ಕೊಟ್ಟ ಮನೆ ಇವ್ಕೆ "ಮನೆ". ಮೊದ್ವೆ ಆಗಿ ಹೊಸ ದಿಕ್ಕಾಳ್ತಿನ ಅಂವ ಅವರ ಮನೆಗೆ ಕರ್ಕಂಡ್ ಹೋಕು. ಹಾಂಗೆ ಎಲುಂಬ ಮೊದ್ವೆ ಲೆಕ್ಕದ ಕಾಣಿಕೆಂತ ಒಂದ್ ದೊಡ್ಡ ಹುಂಜನ ಹಿಡ್ಕಂಡ್ ಹೆಣ್ಣ್‌ನ ಕರ್ಕಂಡ್ ಬ್ಯಾರಿ ಮನೆಗೆ ಹೋತ್. ಇವು ಹೋಕನ ದನಿ ಬ್ಯಾರಿ, ಜೆಗ್ಲಿಲಿ ಕುರ್ಚಿಲಿ ಕುದ್ದ್‌ಕಂಡ್, ಇಜ್ಜೆಲ್‌ಲಿ ಕೆಲ್ಸ ಮಾಡಿಕಂಡ್ ಇದ್ದ ಕೆಲ್ಸದವ್ಕೆ ಏನೋ ಹೇಳ್ತಾ ಇದ್ದೊ. ಇವು ಇಜ್ಜೆಲ್ ಕರೆಲಿ ನಿತ್ತೊ. ಇವರ ನೋಡಿ ದನಿ ಬ್ಯಾರಿ "ಓ..ಎಲುಂಬ, ನಿಕಾ ಪೂರ ಮುಗ್ತಾ?"ಂತ ನೆಗಾಡ್ದೊ. ಅಂವ ಉತ್ತರ ಹೇಳಿಕೆ ಮುಂದೆ ಮಾಚು ಎರ್ಡ್ ಕೈ ಜೋಡ್ಸಿ, "ದನಿಗಳಿಗೆ ನಮಸ್ಕಾರ"ಂತ ಹೇಳ್ತ್.

ದನಿ ಬ್ಯಾರಿಗೆ ಕುಸಿ ಆಗಿ ಗಟ್ಟಿ ನೆಗಾಡಿ "ನಿನ್ನ ಮೇರ್ತಿಗೆ ಒಳ್ಳ ಕ್ರಮ ಉಟ್ಟ್‌ಯಾ"ಂತ ಹೇಳ್ದೊ. ಅವರ ಜನ್ಮಲಿ ಇಲ್ಲಿ ಮುಟ್ಟ ಯಾವ್ದೇ ಹೆಂಗ್ಸ್ ಅವ್ಕೆ ನಮಸ್ಕಾರ ಮಾಡಿದ್ದ್ ಇರಿಕಿಲ್ಲೆ. ಆ ಮೇಲೆ "ಏ ...ಪಾತು, ಎಲ್ಯೊಳಾ? ಎಲುಂಬ ಹೊಸ ಮೇರ್ತಿನ ಕರ್ಕೊಂಡ್ ಬಂದುಟು, ಬಾ"ಂತ ಕರ್ದೊ. ಅಡ್ಡ ಪಂಚೆ ಮೇಲೆ, ಉದ್ದದ, ಗುಬ್ಬಿ ಹಾಕ್ವಲ್ಲಿ ಎರ್ಡ್ ಬೆರ್ಳ್‌ನಷ್ಟ್ ಅಗಲಕ್ಕೆ ಕೆಂಪು ಹೊಲಿಗೆ ಹಾಕಿದ, ಬಿಳಿ ಜಂಪರ್ ಹಾಕ್ಕಂಡಿದ್ದ ಬ್ಯಾರ್ತಿ, ನೆಗಾಡಿಕಂಡ್ ಬಂದೊ. ನೆಗ್ದ್ ಕಾಂಬ ಅವರ ನೆಗೆ ಮೋರೆನ ಪೊರ್ಲ್ ನೋಡಿ ಮಾಚುಗೆ ಬಾರಿ ಕುಸಿ ಆತ್. ಅವರ ನೋಡಿ ಅದ್ ನೆಗಾಡ್ತ್. ಅವು "ಬನ್ನಿ ಚಿಂಟೆಲಿ ಕುದ್ರಿ"ಂತ ಕರ್ದೊ. ಇವು ಕುದ್ದ ಮೇಲೆ ಅವು ಮಾಚುನ ಹಕ್ಕಲೆ ಕುದ್ದ್ ಅದರ ಮನೆ, ಕುಟುಂಬದ ವಿಚಾರ ಎಲ್ಲಾ ಕೇಳ್ದೊ. ಮತ್ತೆ ಚಾ, ತಿಂಡಿ ಕೊಟ್ಟ್ ಹೊರ್ಡಿಕಾಕನ "ಇನ್ನ್ ಹೇಂಗಿದ್ದರೂ ಇಲ್ಲಿಗೆ ಕೆಲ್ಸಕ್ಕೆ ಬಂದೀಯಲೇ?"ಂತ ವಿಶ್ವಾಸಲಿ ಮಾತಾಡಿ ಕಳ್ಸಿದೊ. ಮಾಚುಗೆ ಸಂತೋಸ ಆತ್.

ನೂಲಡ್ಕ ಬ್ಯಾರಿಗ ಅಂದರೆ ದೊಡ್ಡ್ ಕುಳನೇ. ಕಮ್ಮಿಂತ ಹೇಳ್ರೆ ಅವ್ಕೆ ಹದ್ನೈದ್ ಮುಡಿ ಗದ್ದೆ, ಮೂವತ್ ನಲ್ವತ್ ಖಂಡಿ ಅಡಿಕೆ ಆವ ತೋಟ, ಒಂದ್ ಸಾವ್ರ ಬಾಳೆ ಮರ ಇದ್ದೊ. ಇಷ್ಟಿದ್ದರೂ ಬ್ಯಾರಿಗಾಗಲೀ ಬ್ಯಾರ್ತಿಗಾಗಲೀ ಯಾವ ದೊಡ್ಡಸ್ತಿಕೆನೂ ಇತ್ತ್‌ಲೆ. ಒಳ್ಳ ಜೆನಗ. ಪಾಪದವರ ಕಷ್ಟಕ್ಕೆ ಆಗೋವು. ಅವರ ಮನೆ, ಎಲುಂಬನ ದಟಿಗೆಂದ ಬಾರೀ ದೂರ ಏನ್ ಅಲ್ಲ. ಕಾಲ್ ಗಂಟೆ ದಾರಿ. ಬೊಳ್ಪುಗೆ ಬೇಗ, ಕೋಳಿ ಸುರು ಕೂಂಗಿಕನನೇ ಎದ್ದ್,

ಮೋರೆ ತೊಳ್ದ್, ಚಾನೀರ್ ಕುಡ್ದ್, ಒಳ್ಳೆ ಬೊಳ್ಳು ಆಕನ ಅವರ ಮನೆಗೆ ಎತ್ತೋಕು. ಏಳ್ ಗಂಟೆ ಒಳಗೆ ಒಂದ್ ಕಟ್ಟ ಸೊಪ್ಪು ತಂದ್ ಹಟ್ಟಿಗೆ ಹಾಕಿ ಆಕು. ಬೊಳ್ಳುನ ಚಾಕ್ಕೆ ಮುಂದೆ, ಎರ್ಡ್ ಕಟ್ಟ ಸೊಪ್ಪು ಹಟ್ಟಿಗೆ ಬೀಳೋಕು. ಚಾ ಕುಡ್ದ್ ಹೋದರೆ ಮದ್ಯಾನ ಊಟಕ್ಕೆ ಮುಂದೆ ಮೂರು ಕಟ್ಟ ಸೊಪ್ಪು ತರೋಕೇ. ಮದ್ಯಾನದ ಊಟ ಆಗಿ ಒಸಿ ಕುದ್ದ್‌ದ್ ಮತ್ತೆ ಬತ್ತ ಬೇಸುದು, ಬತ್ತ ಮಿದ್ದ್ಯೊದು, ಬತ್ತ ಒಣ್‌ಂಗಿಸುದು –ಇಂತದ್ದೆಲ್ಲ ಕೆಲ್ಸ ಹೆಳ್ಮಕ್ಳ್ದ್. ತೋಟದ್ದ್, ಗದ್ದೆದ್ದ್ ಪೂರ ಕೆಲ್ಸ ಬೊಳ್ಳುಂದಳೇ ಗಣ್ಮಕ್ಕಳ್ದ್. ಒಬ್ಬಂಗೆ ಹಸ್‌ಕರ್‌ಗಳದ್ದೇ ಕೆಲ್ಸ. ಕರ್ ಬುಟ್ಟು ಹಸ್‌ಗಳ ಗುಡ್ಡೆಗೆ ಬುಡ್ದು, ಹುಲ್ಲು ತಾದು, ಮೊರ್ಡ್ಡಿ ಬೇಸುದು, ಮೊರ್ಡ್ಡಿ ಕೊಡುದು, ಅವ್ಕೆ ಕುಡ್ಯಕೆ ಇಸುದು. ಹೀಂಗೆ ಅವಂಗೆ ದಿನ ಇಡೀ ಮುಗಿಯದ ಕೆಲ್ಸ!

ಅಲ್ಲಿ ಕೆಲ್ಸಕ್ಕೆ ಸುಮಾರ್ ನಲ್ವತ್ತ್ ಜನ ಇದ್ದಿರ್ಳ್ವೊ, ಅದರ್ಲಿ ಮೇರರ್, ಮನ್ಸರ್, ಬಿಲ್ಲವರ್, ನಾಯ್ಕರ್, ಬ್ಯಾರಿಗ, ಗೌಡ್ರ್ ಹೀಂಗೆ ಎಲ್ಲ ಜಾತಿಯೊವ್‌ವು ಇದ್ದೊ. ಗೌಡ್ರ್‌ಗ ಇಬ್ಬರ್ ಕೋಲ್ ಮೇಸ್ತ್ರಿಗ. ದನಿ ಹೇಳ್ದ ಕೆಲಸಗಳ ಮಾಡ್ಸುದು, ಕೆಲ್ಸಕ್ಕೆ ಯಾರ್ ಬಂದೊಳೊ ಯಾರ್ ಬಾತ್ಲೆಂತ ನೋಡಿಕೊಂಬೊದ್, ಎಲೆಅಡಿಕೆ ತಿಂದ್ಕಂಡ್, ಕೆಲಸ ಮಾಡದೆ ಸುಮ್ಮನೆ ಅತ್ತಿತ್ತ ಹೋಕ್ಕಂಡ್ ದಿನ ತೆಗೆವವರ ದೂರು ದನಿಗೆ ಹೇಳುದು ಒಬ್ಬ ಗೌಡನ ಕೆಲ್ಸ. ಇನ್ನೊಬ್ಬ ಗೌಡ ಹೈದಂಗೆ ಹೊರಗಿನ ಕೆಲ್ಸ. ಅಂವ ಶಾಲೆಗೆ ಹೋಗಿ ಹಂಞ ಕಲ್ತಂವ. ತೆಂಗ್, ಅಡಿಕೆ, ಬಾಳೆ ಕಾಯಿ ಮಾರುದು, ಪೇಟೆಂದ ಮನೆಗೆ ಬೇಕಾದ ಸಾಮಾನ್ ತಾದು, ಶ್ಯಾನ್ಭಾಗರಲ್ಲಿಗೆ, ಪಟೇಲರಲ್ಲಿಗೆ ಹೋವ ವ್ಯೆವಾರಗಳ ಮಾಡುದು, ದೇಶಲಿ, ಊರ್ಲಿ ಆವ ಸಂಗತಿಗಳ ದನಿಗೆ ಹೇಳುದು ಅವನ ಕೆಲ್ಸ. ಅವಂಗೆ ಜೀಪು ಸಾ ಬುಡಿಕೆ ಗೊತ್ತಿತ್ತ್. ಹಾಂಗಾಗಿ ಪೇಟೆಗೆ ಹೋಗಿ ಬಾವ ಕೆಲ್ಸಗಳೇ ಅವಂಗೆ ಹೆಚ್ಚ್. ಸಣ್ಣ ಪ್ರಾಯದ, ಉಮೇದ್ ಇರ್ವ ಆ ಪೊರ್ಲುನ ಹೈದಂದರೆ ದನಿಗೆ ಮತ್ತೆ ಉಮ್ಮಂಗೆ ಭಾರಿ ಪ್ರೀತಿ ಹಾಂಗೆ ನಂಬಿಕೆ. ಮನೆ ಹೆಳ್ಮಕ್ಕಳ, ಗೂಡೆಗಳ ಸಾ ಅಂವ ಮೊದ್ದಿಗೆ, ನೆಂಟ್ರ ಮನೆಗೆಲ್ಲ ಕರ್ಕಂಡ್ ಹೋತಿತ್ತ್. ಎಷ್ಟೋ ಸಲ ಉಮ್ಮ "ನೀ ನಮ್ಮ ಜಾತಿ ಗೂಡೆನ ಮೊದ್ವೆ ಆಗ್‌ಯಾ"ಂತ ಕುಸಾಲ್ ಮಾಡ್ತಿದ್ದೊ.

ನೇಜಿ, ಕ್ಯೊಲು, ಹುಲ್ಲು, ಸೊಯ್ದೆ, ತೋಟಲಿ ಕಮ್ಮುಗಳಿಗೆ ಕೋರಿಂಜೆಲಿ ನೀರ್ ಹಾರ್ಸುದು, ಅಡಿಕೆ ತೆಗ್ಯಿದು, ಅದರ ಒಣ್‌ಂಗಿಸುದು, ಅದರ ಚೊಲ್ಲುದು, ಎಣ್ಣೆಗೆ ಕೊಬ್ಬರಿ ಕಾಯಿನ ಒಣ್‌ಂಗಿಸುದು –ಹೀಂಗೆ ಹತ್ತ್ ಹನ್ನೆರ್ಡ್ ಬೇರೆ ಬೇರೆ ಕೆಲ್ಸಗ ಆ ಮನೆಲಿ. ಮಾಡಿ ಮುಗ್ತ್‌ಂತ ಇಲ್ಲೆ. ಮಾಚುಗೆ ಇಂಥ ಕೆಲ್ಸಗ ಪೂರ ಗೊತ್ತಿತ್ತ್ಲೆ. ಸೊಪ್ಪುನ ಕೆಲ್ಸ ಗೊತ್ತಿಲ್ಲೆಂತ ಹೇಳ್ದಕ್ಕೆ, ಅದರ ಒಟ್ಟಿಗೆ ಕೆಲ್ಸ ಮಾಡ್ತಿದ್ದ ಮನ್ಸೆತಿಗ ಒಂದೆರ್ಡ್ ದಿನ ನಾವು ಮಾಡಿ ಕೊಟ್ಟವೆ, ನೋಡಿ ಕಲ್ತ್‌ಕಣಿಂತ ಹೇಳ್ದೊ. ಸೊಪ್ಪು ಹೇಂಗೆ ಕಡಿಯೋಕು, ಕಡ್ದ ಸೊಪ್ಪು ಇಸಿಕನ ಅದ್ ಅರ್ಳಿ, ತುಂಬ ಕಾಂಬ ಹಾಂಗೆ, ಹೇಂಗೆ ತಿರ್ಗಿಸಿ ಅರ್ಕಿಲ್ ಇಸೊಕುಂತ ಹೇಳಿ ಕೊಟ್ಟೊ. ಎರ್ಡೇ ದಿನಲಿ ಮಾಚು ಅದರ ಕಲ್ತ್‌ಕಂಡತ್. ಕಡೆ ಕಡೆಗೆ ಅದರ ಹೊರೆ ಕಟ್ಟಿ ಹೇಳಿ ಕೊಟ್ಟವ್ಕೆ ಸೊಪ್ಪು ಮಾಡಿ ಕೊಡ್ವಷ್ಟು ಅದ್ ಉಸಾರ್ ಆತ್,

ಸೊಪ್ಪು ಸೊಯ್ದೆ ಮಾಡಿಕೆ ಹೋದಲ್ಲಿ ಮನ್ಸರ ಹೆಳ್ಮಕ್ಕಳಿಗೆ ಮಾಚುನ ಉದ್ದ ಕೂದೊಲ್ ಮೇಲೆ ಕಣ್ಣು. "ನಿಮ್ಮ ಅಂಬಟೆ ಸೂಡಿ ಒಮ್ಮೆ ಬಿಚ್ಚಿ ಕೈಪುಡಿ, ನಿಮ್ಮ ಕೂದೊಲ್ ಒಮ್ಮೆ ನೋಡ್ವೆ"{ಕೈಪುಡ, ಕೈಪುಡ್ಜಿಂತ ಮನ್ಸರ್ ಮೇರರ ಗೌರವಂದ ಕರ್ಯೆವ ಸಂಬೋಧನೆ}ಂತ ಹೇಳ್ತಿದ್ದೊ.

"ಆತ್"ಂತ ಹೇಳಿ ಅದ್ ಕೂದೊಲ್ ಬಿಚ್ಚಿರೆ, ಅದ್ ಮೊಣ್ಕಾಲ್ ಮುಟ್ಟುವಷ್ಟ್ ಉದ್ದ ಕೂದೊಲ್ ಬುಡ ಒಂದ್ ಹಿಡಿಗೆ ಸಿಕ್ಕದಷ್ಟ್ ದಪ್ಪ! ಅದರ ಪೊರ್ಲು ನೋಡಿ ಗೂಡೆಗಳಿಗ ಅದರ ಮುಟ್ಟೊಕುಂತ ಆಸೆ. ಅದಿಕ್ಕೆ ಸೆರ್ರ್ಯಾಗಿ ಮಾಚು "ತಲೆ ಬಾಚಿಕೆ ಹೊತ್ತಿಲ್ಲೆ, ಹಾಕೊಮೆನ್‌ಂತೇ ದಟಿಗೆಲಿ ಎಣ್ಣೆ ಇಲ್ಲೆ. ಹಾಂಗಾಗಿ ಕೂದೊಲ್ ಪೂರ ಪಿರಿಗಟ್ಟಿ ಹೋಗುಟು"ಂತ ಹೇಳ್ತಿತ್ ಆಗ ಇದ್ದವರಲ್ಲಿ ಸಣ್ಣ ಗೂಡೆ ಚೋಮು "ಹಾಂಗಾರೆ ನಾವು ನಿಮ್ಮ ಮುಟ್ಟಿರೆ ಆದೋ? ನಾವು ಹೇನ್ ಚೀರ್ ಎಲ್ಲ ತೆಗ್ದ್, ಚಿಕ್ಕ್ ಬುಡ್ಸಿ, ಬೆರ್ಳ್ಲೇ ಬಾಚಿ ಪೊರ್ಲು ಮಾಡಿಕೊಟ್ಟವೆ ಆದಾ?"ಂತ ಕೇಳ್ತ್. "ಆತ್"ಂತ ಮಾಚು ಒಪ್ಪಿಕಂಡತ್. ಅಲ್ಲೇ ಇದ್ದ ಒಂದ್ ಎತ್ತರದ ಕಲ್ಲ ಮೇಲೆ ಚೋಮು ಕುದ್ದ್‌ಕಂಡತ್. ಮಾಚು ಅಲ್ಲೇ ಅದಕ್ಕಿಂತ ತಗ್ಗ್‌ಲಿದ್ದ ಇನ್ನೊಂದ್ ಕಲ್ಲ ಮೇಲೆ ಕುದ್ದತ್. ಮತ್ತೆ ಏನೇನೋ ಮಾತಾಡಿಕಂಡ್ ಎಲ್ಲೊವು ಹೇನ್ ತೆಗಿಯಕೆ ಸೇರಿಕಂಡೊ ಹೇನ್ ತೆಗ್ಯಕನ ಚೋಮು "ನಾವು ಹೇನ್ ತೆಗ್ದೊಂತ ದಟಿಗೆಲಿ ಎಲ್ಲಾರ್ ಹೇಳಿ ಬುಡ್ಬೇಡಿ"ಂತ ಹೇಳ್ದಕ್ಕೆ ಮಾಚು ನೆಗಾಡಿಕಂಡ್ "ಅವರ ಹಕ್ಕಲೆ ಯಾರ್ ಹೇಳ್ವೆ? ಹೇಳ್ರೆ ನನ್ನನೇ ದಟಿಗೆಂದ ಓಡ್ಸುವೊ"ಂತ ಹೇಳ್ತ್. ಹೇನ್ ಚೀರ್ ತೆಗ್ದ್ ಚಿಕ್ಕ್ ಬುಡ್ಸಿ, ಚೋಮು ಬೆರ್ಳ್ಲಿ ಪೊರ್ಲು ಕೂದೊಲ್ ಬುಡ್ಸಿ ಬುಡ್ಸಿ ಬಾಚಿದ ಹಾಂಗೆ ಮಾಡಿ "ಇಷ್ಟ್ ಪೊರ್ಲ್ ಕೂದೊಲ್‌ನ ಸೂಡಿ ಕಟ್ಟುದಲ್ಲ. ಜೆಡೆ ಮಾಡಿ ಬುಡೋಕು. ಆಗ ಕಾಂಬೊದು ಅದರ ಪೊರ್ಲು"ಂತ ಸೂಡಿ ಹಾಕಿತ್. ಮತ್ತೆ "ಹೊತ್ತಾತ್, ಬೇಗ ಪೋಯಿ"ಂತ ಅವರವರ ಸೊಪ್ಪು ಕಟ್ಟನ ತಲೆ ಮೇಲೆ ಇಸಿಕಂಡೊ.

ಒಂದ್ ದಿನ ಚೋಮು ಕೆಲ್ಸಕ್ಕೆ ಬಾತ್ಲೆ. ಮಾಚು ಅದರ ಅವ್ವನ ಹಕ್ಕಲೆ ಯಾಕೆ ಬಾತ್ಲೆಂತ ಕೇಳ್ತ್. ಅದಕ್ಕೆ ಅದ್ "ಅದ್ ಮದಲ್ ಮೆಟ್ಟ್ಯುಟು. ಇನ್ನ್ ಒಂದ್ ಹತ್ತ್ ಹದಿನೈದ್ ದಿನ ಕೆಲ್ಸಕ್ಕೆ ಬಾದ್‌ಲೆ"ಂತ ಹೇಳ್ತ್.

"ನೆರ್ದ ಗೂಡೆಗೆ ನಮ್ಮ ಕ್ರಮದ ಹಾಂಗೆ ಮಡ್ಕೆ ಹಿಡ್ಸುವ ಮೊದ್ವೆ ಮಾಡ್ರೆನಾ?"

"ಹೌದ್, ಹಾಂಗೆನೇ"

ಅಷ್ಟೊತ್ತಿಗೆ ಇನ್ನೊಂದ್ ಹೆಂಗ್ಸ್ ಹೇಳ್ತ್ "ಹಾಂ, ಹಾಂಗಾರೆ ನಿಂಗೆ ಇನ್ನ್ ಮಜಕ್ಕೆಗೆ ಹೈದನ ಹುಡ್ಕಿಕೆ ಉಟ್ಟು"

"ಹುಡ್ಕೊಕೂಂತ ಏನಿಲ್ಲೆ. ನಮ್ಮ ಸಮ್ಮಂದದ ಒಳಗೇ ಒಬ್ಬ ಹೈದ ಉಟ್ಟು, ಅಂವನ ಅವ್ವ ಅಂದೇ ನಿಮ್ಮ ಚೋಮುನ ನಮ್ಮ ಮಂಜಂಗೆ ಕೊಡೊಕುಂತ ಹೇಳ್ಯುಟು"ಂತ ಹೇಳಿದರ ಕೇಳಿ ಮಾಚು ಮನ್ಸ್‌ಲಿ "ಛೇ, ನಂಗೆ ಸಾ ನನ್ನ ತುಳ್ಳೇಲ್ ಆವಂತ ಮಾವನ ಮಂಜನೋ ಬೇರೆ ಸಮ್ಮಂದದ ಹೈದನೋ ಇದ್ದಿದರೆ,ಈ ನರಕಕ್ಕೆ ಬಂದ್ ಬೀಳ್ತಿತ್ಲೆ"ಂತ ಹೇಳಿಕಂಡತ್.

ದೊಡ್ಡತ್ತೆ ಕೆಲ್ಸಕ್ಕೆ ಹೋತಿದ್ದ ದನಿಗಳ ಮನೆ ಕಾಡ್ ಕಳ್ದ್. ಅದ್ ಹಿಂಬೊತ್ ಕಾಡ್‌ಂದಾಗಿ ಬಾಕನ ನರೆ, ಈಯರ್, ಬೊಳ್ಗಂಡೆ, ಕಾಡ್ ಗೆಣ್ಸ್-ಇಂತದರ ಎಳ್ಳಿ ತರ್ತಿತ್. ಬೊಳ್ಪುಗೆ ಹೆಚ್ಚಾಗಿ ಚಾದೊಟ್ಟುಗೆ ತಿಂಬಕೆ ಅದೇ. ಅವು ಹಂಞ ನೆಟ್ಟಿ ಮಾಡಿದ್ದೊ. ನೆಟ್ಟಿ ಕಾಯಿ ಇದ್ದರ ಒಣ್ಗೇಲ್ ಮೀನೋ, ಎಟ್ಟಿನೋ ಹಾಕಿ ಅದರ ಗೈಪು ಮಾಡ್ತಿದ್ದೊ. ಎಂತದೂ ಇಲ್ಲೆ ಅಂದರ ಅತ್ತೆಕಳಲ್ಲಿ ಒಬ್ಬ ಕಾಡ್‌ಗೆ ಹೋಗಿ ಕಯರ್ ಬಳ್ಳಿದ್ ಕೊಡಿ ತಂದ್ ಅದಿಕ್ಕೆ ಹಸಿ ಅರ್ಶಿನ, ಸಣ್ಣ ಮೆಣ್ಸ್ ಅಲ್ಲರೆ ಜೀರಿಗೆ ಮೆಣ್ಸ್{ಹುಳಿ ಹಾಕಿಕಿಲ್ಲೆ. ಆ ಸೊಪ್ಪೇ ಹುಳಿ} ಹಾಕಿ ಮದ್ದ್ ಅರೆವಂತ ಕಲ್ಲ್‌ಲಿ ಅರ್ದ್ ತೆಗ್ದದಕ್ಕೆ, ಒಣ ಮೀನ್‌ನ ತಲೆನ ಸುಟ್ಟ್, ಹೊಡಿ ಮಾಡಿ ಸೇರ್ಸಿ ಕೊದಿಸಿ

ಉಂಡರೆ ಅದ್ ಎಷ್ಟ್ ಕೊಟೆಕ್ಕೆನಂತ ಉಂಡವ್ಕೆ ಗೊತ್ತ್! ಅದ್ ಯಾವುದೂ ಇಲ್ಲರೆ ಉಟ್ಟಲೆ ಉಪ್ಪುಮೆಣ್ಸ್!

ಮಾಚುಗೆ ಚೋದ್ಯ ಆದದ್ದ್ ಅಲ್ಲಿ ಹೆಳ್ಮಕ್ಕಳಿಗಾಗಲೀ ಗಂಡಸರಿಗಾಗಲೀ ಕೋಳಿ, ಮೀನ್‌ನ ಗೈಪು ಮಾಡಿಕೆ ಗೊತ್ತಿಲ್ಲೆಂತ ಕೇಳಿ! ಉಬರ್ ಮೀನೋ, ಗಾಳದ ಮೀನೋ ಸಿಕ್ಕಿರೆ ಕ್ರಯಕ್ಕೆ ಅಲ್ಲರೆ ಅಕ್ಕಿಗೆ ಬೇರೆಯೊಗೆಷ್ಕೆ ಕೊಡ್ತಿದ್ದೊ ಅಲ್ಲದೆ ದಟಿಗೆಗೆ ತಂದ್ ಗೈಪು ಮಾಡ್ವ ಕ್ರಮ ಇಲ್ಲಾಗಿತ್ತ್.

ಅದಿಕ್ಕೆ ಒಂದ್ ದಿನ ಅದ್ ಕೇಳ್ತ್ "ನಮ್ಮಲ್ಲಿ ಮೀನ್, ಮಾಸ ಯಾರೂ ತಿಂಬೊದ್‌ದಿಲ್ಲೆನಾ?"ಂತ. ಅತ್ತೆ ಹೇಳ್ತ್ ಎಲ್ಲೊವ್ಕ ಮೀನ್, ಮಾಸ ಇಷ್ಟನೇ. ಆದರೆ ನಮ್ಮಲ್ಲಿ ಅದರ ಸಜ್ಜ್ ಮಾಡುದು ಹೇಂಗೆಂತ ಯಾರಿಗೂ ಗೊತ್ತಿಲ್ಲೆ"ಂತ. ಆಗ ಮಾಚು ಹೇಳ್ತ್ "ಇನ್ನ್ ಮುಂದೆ ಬೇರೆವ್ಕೆ ಕೊಡ್ಬೇಡಿ. ನಾನ್ ಸಜ್ಜೂ ಮಾಡ್ನೆ, ಗೈಪೂ ಮಾಡ್ನೆ"ಂತ. ಮತ್ತೆ ಒಂದಿನ ಎಲುಂಬನ ಹಕ್ಕಲೆ ಹೇಳಿ ಮೀನ್ ತರ್ಸಿ, ಗೈಪು ಮಾಡಿಕೊಟ್ಟತ್. ಎಲ್ಲೊವು ಬಟ್ಲ್ ತೊಳ್ದ ಹಾಂಗೆ ನೆಕ್ಕಿ ನೆಕ್ಕಿ ತಿಂದೊ. ಅಂದಿಂದ ಮೀನ್ ಆಗಲೀ ಮಾಸ ಆಗಲೀ ಇಲ್ಲದೆ ಊಟ ಮೆಚ್ಚುದ್ಲೆಂತ ಹೇಳ್ವ ಹಾಂಗೆ ದಿನಾ ಅದೇ ಗೈಪು ಮಾಡಿಕೆ ಸುರು ಮಾಡ್ತ್.

ಅದಿಕ್ಕೆ ಸರ್ಯಾಗಿ ಅದ್ ದಟಿಗೆನ ಎಲ್ಲೊವ್ಕ ಮೀನ್ ಹಿಡ್ಯವ ಬೇರೆ ಬೇರೆ ಕ್ರಮಗಳ ಕಲ್ಸಿಕೊಟ್ಟತ್. ಅಪ್ಪ ಹೇಳಿ ಕೊಟ್ಟ ಸಿಡಿ, ಅಡ್‌ಚಿಲ್ ಹಾಕುದರ ಸಾ ಪಾಠ ಮಾಡ್ತ್. ಜೇನ್ ಸಂಗತಿನ ಮಾತ್ರ ಗಂಡಂಗೆ ಒಬ್ಬಂಗೆ ಹೇಳಿಕೊಟ್ಟತ್. ಅವನ ಹಕ್ಕಲೆ ಗುಡ್ಡೆಲಿ ಎಲ್ಲಾರ್ ಜೇನ್ ಒಕ್ಕಲ್ ಇದ್ದರೆ ಅದರ ಹುಡ್ಕುದ್, ಹಿಡಿಯೋದ್, ಜೇನ್ ತೆಗಿಯೋದು ಹೇಂಗೆಂತೆಲ್ಲ ಹೇಳಿ ಕೊಟ್ಟತ್. ನಿಧಾನಕ್ಕೆ ಅಂವ ಅದರೆಲ್ಲ ಕಲ್ತ್‌ಕೊಂಡತ್. ಒಮ್ಮೊಮ್ಮೆ ಅವು ಇಬ್ಬರ್ ಹೋಗಿ ಜೇನ್ ತೆಗ್ದ್, ಮನೆ ಕರ್ಚಿಗೆ ಬೇಕಾದಷ್ಟ್ ಇಸಿಕಂಡ್, ಬಾಕಿದರ ಮಾರ್ತಿದ್ದೊ.

ಮೊದ್ವೆ ಆಗಿ ವೊರ್ಸ ಅಕಂಡ್ ಬಾತ್. ಒಂದ್ ದಿನ ಅದ್ ಬೊಳ್ಳುಗೆ ಜಾಲ್ ಬದಿಲಿ ಕುದ್ದ್‌ಕಂಡ್ ಕಕ್ಕ್‌ತಿತ್ತ್. ದೊಡ್ಡತ್ತೆ "ಏನ್ ಆತಿಯಾ?"ಂತ ಕೇಳ್ತ್.

"ತಲೆ ತಿರ್ಗಿದೆ. ಕಕ್ಕಿಕೆ ಬಂದ ಹಾಂಗೆ ಆದೆ"ಂತ ಹೇಳ್ತ್.

ದೊಡ್ಡತ್ತೆ ಅಲ್ಲಿಂದಲೇ ಗೇಣ್ಸ್ ತೊಳ್ಕಂಡ್ ಇದ್ದ ತಂಗೆಗೆ "ಕುಂಞ ತಣೆನದ ತೆಳಿ ಕುಡ್ದಿರೋಕು. ಕಕ್ಕ್‌ತಾ ಉಟ್ಟು"ಂತ ಹೇಳ್ತ್.

ಆಗ ಮಾಚುಗೆ ತಲೆಗೆ ಹೋತ್. ಅದ್ ಕುದ್ದಲ್ಲೇ ಹೊರಗಾದದ್ದ್ ಯಾಗಂತ ಲೆಕ್ಕ ಹಾಕಿಕೆ ಸುರು ಮಾಡ್ತ್. ಮನೆಗೊಂದ್ ಹೊಸ ಜುವ್ವದ ಬೊಳ್ಳು ಬಂದದೆಂತೇಳ್ರೆ ಮನೆನ ಎಲ್ಲೊವ್ಕೂ ಕುಸೀನೆ. ಎಲುಂಬಂಗೆ ಅಷ್ಟೊಂದ್ ಬುದ್ಧಿ ಇಲ್ಲರೂ, ಮಾಚು ಮಾಡ್ವ ಕಷ್ಟದ ಕೆಲಸಗಳ "ನೀ ಮಾಡ್ಬೇಡ, ನಾನೇ ಮಾಡ್ನೆ"ಂತ ಅವನೇ ಮಾಡ್ತಿತ್ತ್. ಸುದ್ದಿ ಗೊತ್ತಾಗಿ ಮಾಚುನ ಅವ್ವ ಬಾತ್. ಬಾಕನ ಮನೆಲಿ ಮಾಡ್ದ ಗೆಂಡದ ಹಿಟ್ಟ್ ತಾತ್. ಕತ್ತಲಾಕೆ ಮುಂದೆ ಉಂಡ್ ಮಲ್ಗುವ ಈ ದಟಿಗೆಲಿ ಹೊತ್ತಿಕಂಡೇ ಇರ್ವ ಅಗುಡೆದ್ ಬೊಳ್ಪು ಅಲ್ಲಾದೆ, ಬೊಳ್ಪುಗೆಂತ ಬೇರೆ ಏನೂ ಇತ್ಲಾಗಿತ್ತ್. ಚಿಮ್ಣೆಣ್ಣೆನ ಸಂಗತಿನೇ ಈ ಮನೆಲಿ ಇಲ್ಲೆ. ಅದಿಕ್ಕೆಂತ ಅದ್ ಬಾಕನ ಮೂರು ಕುಪ್ಪಿ ಚಿಮ್ಣಿ ಎಣ್ಣೆ, ಎರ್ಡ್ ಸಣ್ಣ ಚಿಮ್ಣಿ ದೀಪಗಳ ತಾತ್. ಕತ್ತಲೆಗೆ ಮನಿ ಬೊಸ್ರಿಗೆ ಹೊರಗೆ ಹೋಕು ಅಂದರೆ ಒಂದ್ ಬೊಳ್ಪು ಇರ್ಲಿಂತ.

ಮಾಚುನ ತೌರು ಮನೆವು ಮಾಡ್ವ ಹಾಂಗೆ ಇಲ್ಲಿ ಸಾ ಕುಮೆರಿ ಬೆಳೆ ಮಾಡ್ತಿದು ಇಲ್ಲಿ ರಾಗಿ, ಜೋಳ, ಸಾಮೆನೊಟ್ಟುಗೆ ಮೂರ್ ನಮೂನೆನ ಬತ್ತಗಳ ಬೆಳಿಯೊತಿದು ಉಂಬಕೆ, ಅವ್ಲಕ್ಕಿಗೆ ಮತ್ತೆ ಹೊದ್‌ರಿಗೆಂತ ಬೇರೆ ಬೇರೆ ಆಗಿ ಬಿತ್ತ್‌ತಿದ್ಯೊ. ಅವ್ಲಕ್ಕಿ ಮ ಹೊದ್‌ರಿಗೆಂತ ಮಾಡ್ವ ಬತ್ತನ ಹಂಞ ಹಂಞ ಬಿತ್ತ್‌ತಿದ್ಯೊ. ಮಾಚುನ ಮಾವನವರ ಬೂತದ ಚಾಕಿರಿಗೆ ಮನೆ ಬತ್ತದ ಅವ್ಲಕ್ಕಿ ಮತ್ತೆ ಹೊದ್‌ರನೇ ಆಕಾಗಿತ್ತ್. ಬೂತಗಳ ಬಳ್ಸುವ ಹಿಂದೆನ ದಿನ ಎರ್ಡ್ ಸೇರ್ ಏಣೇಲ್ ಬತ್ತನ ಒಲೆಲಿ ಮಡ್ಗಿದ ಬೆಚ್ಚ ನೀರ್‌ಗೆ ಹಾ ಅದರ ಚೋಲಿ ಕೆಂಪಾಕನ ಮುಟ್ಟ ಅಂದರೆ ಹನ್ನೆರ್ಡ್‌ಗಂಟೆ ನೆನಿಯಕೆ ಬುಡೊಕು. ಆ ಮೇ ಅದಕ್ಕೆ ತಣ್ಣೀರ್ ಹೊಯ್ಯೊಕು. ಮೊರ್ದಿನ ಬೊಳ್ಪುಗೆ ಅದರ ನೀರ್‌ಂದ ತೆಗ್ದ್ ಮಣ್ಣ ಓಡುಲಿ ಪೊರ್ಲ್ ಹೊರ್ಯೊಕು. ಹೊರ್ಡ್ ಆಕನ ಅದ್ ಉರುಂಟಾಗಿ ಕೆಂಪು ಕೆಂಪು ಆ ಅದ್ ಬಿಸಿ ಬಿಸಿ ಇರಿಕನನೇ ಮರದ ನರ್ಳುಳ{ಉಜಿರೆ}ಲಿ ಹಾಕಿ ಇಬ್ಬರ್ ಒಣೆಕೆಲಿ ಕುಟ್ಟು ಉಜಿರೆ ಅಂದರೆ ಡಮರು ಆಕಾರದ ಎರ್ಡ್ ಗುಳಿ ಇರ್ವ ಮರದ ದೊಡ್ಡ ಬೊಡ್ಡೆ. ಸುರು ಒಂದ್ ಗುಳಿಗೆ ಹಾಕಿ ಮಿದ್ದ್, ಅದರ ಹೊಡ್ಡಿ ಉಮಿ ತೆಗ್ದ್ ಮತ್ತೆ ಇನ್ನೊಂದ್ ಗುಳಿಗೆ ಹಾ ಮಿದ್ಯೊಕು. ಸೂತಕದ ಹೆಳ್ಮಕ್ಕ ಮಿದ್ಯೊದು ಬುಡಿ, ಆ ಬತ್ತನ ಮುಟ್ಟಿಕೆ ಸಾ ಬೊತ್ತ್.

ಒಮ್ಮೆ ಹೀಂಗೆ ಕುಮೆರಿ ಬೆಳೆ ಮಾಡಿದ್ಯೊ. ಒಳ್ಳೆ ಬೆಳೆ ಸಾ ಬಂದಿತ್ತ್. ತೆನೆ ಮೊಣಕ್ಕೆಯ ಉದ್ದ! ಇವರ ದಟಿಗೆಂದ ಬಾರಿ ದೂರನೂ ಇತ್ತ್‌ಲ್ಲೆ. ನೆರೆಕರೆನ ಒಂದ್ ಎತ್ತ್ ಬಂ ಯಾಗೋಳು ಬೆಳೆ ತಿಂದ್ ಹೋತಿತ್ತ್. ಹಾಂಗೆ ಮಾಚು ಒಂದ್ ಕಣ್ಣ್ ಕುಮೆರಿ ಬೆ ಮೇಲೆನೇ ಇಸಿಕಂಡಿತ್ತ್. ಒಂದ್ ದಿನ ಆ ಕಳ್ಳ ಎತ್ತ್ ಬಂದ್ ಪೊರ್ಲ್ ಮೇದ್‌ಕಂಡಿ ಅದರ ಓಡ್ಸಿಕಂಡ್ ಹೋಗಿ ಹೊಡಿಯಕೆ ನನ್ನಿಂದ ಆಕಿಲ್ಲೆಂತ ಮಾಚು ಒಂದ್ ಹರ್ತ ಬಾಯ ಕಡ್ಪತ್ತಿನ ಸಿಟ್ಟ್‌ಲಿ ಬೀಸಿ ಇಟ್ಟತ್. ಅದರ ಗ್ರಾಚಾರ! ಕತ್ತಿ ಎತ್ತ್‌ನ ತೊಡೆನ ಕಡ್ದ್ ಹಾಕೊಕ ಎತ್ತ್ ಅಲ್ಲೇ ಬೀತ್. ಅದ್ ಬಿದ್ದಾಕನ ಹೆದ್ರಿ ಮಾಚು ಅಲ್ಲೆ ಕೆಲ್ಸ ಮಾಡಿಕಂಡಿದ್ದ ಮಾಂವ ಕರ್ತ್. ಇಬ್ಬರ್ ಹೋಗಿ ನೋಡ್ವೆ, ಎತ್ತ್ ಎದ್ರಿಕಾಗದೆ ಅಲ್ಲೇ ಅಡ್ಡ ಬಿದ್ದುಟು! ತೊಡೆ ತುಂಡ ಆಗಿ ಹೋಗುಟು. ಆಸಗಲಕ್ಕೆ ನೆತ್ತರ್ ಹರ್ದುಟು. ಮತ್ತೆ ಸಾ ಅರ್ಕಂಡ್ ಉಟ್ಟು. ದಟಿಗೆ ಬಂದ್ ಮಾಚು ಇದ್ದಬಿದ್ದ ಮದ್ದೆಲ್ಲ ಹುಡ್ಕಿ, ಹರ್ಕ್‌ಲ್ ಬಟ್ಟೆಬರೆಗಳ ಹಿಡ್ಕಂಡ್ ಹೋ ಮೊದ್ದ್ ಹಾಕಿ, ತೊಡೆ ಮುರ್ದಲ್ಲಿಗೆ ಅತ್ತ ಇತ್ತ ದಬ್ಬೆ ಇಸಿ, ಮಾಂವನ ಸಾ ಸೇರ್ಸಿಕಂಡ್ ಗ ಕಟ್ಟಿತ್. ಅಂದ್‌ಂದ ಎತ್ತ್ ಮಲ್ಗಿದಲ್ಲಿಗೇ ಹುಲ್ಲು ನೀರ್ ಕೊಡಿಕೆ ಸುರು ಮಾಡ್ಯೊ.

ಎತ್ತ್‌ಂದಾಗಿ ಮಾಚುಗೆ ಅದರ ಅತ್ತೆ ಮಾವಂದ ಬೊಯ್ಯುಗ್ಳೇ ಬೊಯ್ಗ್ಳ್. ಎತ್ತ್ ಸಾಂಕಿದಂವ "ನಂಗೆ ಇನ್ನ್ ಎತ್ತ್ ಬೇಡ. ಅದರ ಹಣ ಇನ್ನೂರ ಐವತ್ತ್ ರುಪಾಯ ಕೊಡಿ"ಂತ ಹಠ ಹಿಡ್ದ್ ಬುಟ್ಟತ್. ಆತಲೇ! ಇವರಲ್ಲಿ ಇನ್ನೂರ ಐವತ್ತ್ ರುಪಾಯಿಂ ಇನ್ನೂರ ಐವತ್ತ್ ಪೈಸೆನಾದರೂ ಇತ್ತೋ ಇಲ್ಲೆನೋ! ಎತ್ತಿಗೆ ನಿಲ್ಲಿಕೆ ಆತಿತ್ಲೆ. ಇರ್ಲ್ ಮಲ್ಗಿ ಹಗ್ಲ್ ಊಂದ್ ಕೊಟ್ಟ್ ನಿಲ್ಸ್‌ತಿದ್ಯೊ. ಹತ್ತ್ ಹದಿನೈದ್ ದಿನ ಎತ್ತ್ ಗುಡ್ಡೆಲೇ. ಅದರ ಚಾಕಿ ಮಾಚುಗೇ. ಯಾರೂ ಎತ್ತ್‌ನ ತಿರ್ಗಿ ಸಾ ನೋಡ್ತಿತ್ಲೆ. ಎಲ್ಲೊವು ಹಂಗಿಸ್‌ವವೇ. "ಕತ್ತಿ ಎಸ ಎತ್ತ್‌ನ ತೊಡೆ ಮುರ್ದ ಅಲ್ಲಾ? ನೀನೇ ಎತ್ತ್‌ನ ಹಣ ಕೊಡು"ಂತ. ಮತ್ತೊಂದ್ ಕಡೆಂ ಅದ್ ಏಳೆಂಟ್ ತಿಂಗಳ ಬೊಸ್ರಿ. ದಿನಕ್ಕೆ ನಾಕೈದ್ ಸರ್ತಿ ಎತ್ತ್‌ನ ಹಕ್ಕಲೆ. ಗುಡ್ಡೆ ಹತ್ತಿ ಹೋ ಬಾಕೆ ಅದಿಕೆ ಬಾರೀ ಬಂಜ ಆತಿತ್ತ್. ಬೊತ್ತದಕ್ಕೆ ಅದ್ ಮಾವನ ಹಕ್ಕಲೆ ಹೇಳ್ತ್ "ಹೇಂಗಾ

ಎತ್ತ್‌ನ ಇಲ್ಲಿಗೆ ತಾಮೊ. ನಂಗೆ ಅಲ್ಲಿಗೆ ಮೊಡ್ಡಿ ನೀರ್ ತೆಕ್ಕಂಡ್ ಗುಡ್ಡೆ ಹತ್ತಿಕೆ ಆದ್‌ಲ್ಲೆ"ಂತ. ಾವ ಬೊಸ್‌ಸರಿ ಸೊಸೆನ ನೋಡಿ ತಾಕೆ ಏರ್ಪಾಡ್ ಮಾಡ್ತ್. ಮಾದೆರಿ ಬೊಳ್ಳಿನ ಪಡಿ ಾಡಿ, ಬಂಜಲಿ ಇಬ್ಬರ್ ಸೇರಿ ಹೇಂಗೋ ಹಟ್ಟಿಗೆ ತಂದ್ ಹಾಕಿದೊ. ಮಾಚು ಅದಕ್ಕೆ ತ್ತಿದ್ದ, ಯಾರ್‍ಯಾರೋ ಹೇಳ್ದ ಮೊದ್ದ್‌ಗಳ ಪೂರ ಮಾಡ್ತ್. ಅಂದರೂ ಎತ್ತ್‌ನ ಕಾಲ್ ಆತೇ ಇಲ್ಲೆ. ಅತ್ತಂದ ಎತ್ತ್‌ನಂವ ಹಣ ಕೇಳೂದು, ಇತ್ತಂದ ಮನೆವು ಚುಚ್ಚುದು, ಾಚುಗೆ ಕೇಳಿ ಕೇಳಿ ಸಾಕಾಗಿ ಹೋತ್. ನಾ ಯಾವ ಗಳಿಗೆಲಿ ಅದಕ್ಕೆ ಕತ್ತಿ ಎಸ್ದೆನೋ? ಾವ ಶನಿ ನನ್ನ ಹಿಡ್ಕಂಡಿತ್ತೋ ನಾ ಈಗ ಎಂತ ಮಾಡ್ದು?ಂತ ಹೀಂಗೆಲ್ಲ ನೆನ್ಸಿ ದರಷ್ಟಕ್ಕೆ ಮೊರ್‍ದ್ತಿತ್ತ್.

ಹೀಂಗೆ ಸುಮಾರ್ ದಿನ ಕಳ್ತ್. ಒಂದಿನ ಮದ್ಯಾನ ಆಕ್ಕಂಡ್ ಬಾಕನ ಒಬ್ಬ ಬೇಡ್‌ವಂವ ತ್. ಅಂವ ಬಾಕನ ಇದ್, ಎತ್ತ್‌ನ ಊಂದ್ ಕೊಟ್ಟ್ ನಿಲ್ಸಿಕಂಡಿತ್ತ್. ಎತ್ತ್‌ನ ನೋಡಿ ಂವ ಅದಿಕೆ ಎಂತ ಆದದ್ದ್‌ಂತ ಕೇಳ್ತ್. ಇದ್ ಕತೆ ಪೂರಾ ಹೇಳಿ "ಎತ್ತ್‌ನಂವ ಬಂದ್ ಾ ಹಣ ಕೇಳ್ದೆ. ನಂಗೆ ಎಂತ ಮಾಡೋಕುಂತ ಗೊತ್ತಾದ್ಲೆ"ಂತ ಮೊರ್‍ಟ್ಕಂಡ್ ಹೇಳ್ತ್. ಗ ಅಂವ "ನೀವು ಬೇಜಾರ ಮಾಡ್ಬೇಡಿ ನಾ ಒಂದ್ ಮೊದ್ದ್ ಮಾಡ್ನೆ. ಅದರ್ಲಿ ಅದರ ಲ್ ಸೆರಿ ಆದೆ"ಂತ ಹೇಳ್ತ್. "ನೀವುಗೆ ದಮ್ಮಯ್ಯ ಹಾಕಿನೆ. ಹೇಂಗಾರ್ ಅದರ ಕಾಲ್ ಸೆರಿ ಾಡಿಕೊಡಿ. ನೀವು ಮೊದ್ದ್ ಮಾಡ್ದಕ್ಕೆ ಕೊಡಿಕೆ ನನ್ನ ಹಕ್ಕಲೆ ಏನೂ ಇಲ್ಲೆ. ಅದ್ ನಡಿವ ಾಂಗೆ ಒಮ್ಮೆ ಮಾಡಿ. ನಿಮ್ಮ ನಾ ದೇವರ್‌ಂತ ತಿಳ್ಕಣೆ"ಂತ ಮಾಚು ಅಂಗಲಾಚಿತ್.

ಅಂವ ಒಂದ್ ಕತ್ತಿ ಕೇಳ್ತ್. ತಂದ್ ಕೊಟ್ಟತ್. ಅಂವ ಸೀದ ಕಾಡಿಗೆ ಹೋತ್. ುಮಾರ್ ಒಂದ್ ಗಂಟೆ ಕಳ್ದ್ ಬಾತ್. ಅವನ ಕೈಲಿ, ಒಂದ್ ಮಾರ್ ಉದ್ದ, ಒಂದ್ ೇಣ್ ಅಗಲದ ಮರದ ಎರ್ಡ್ ತೊಪ್ಪೆಗ ಇದ್ದೊ. ಹಸಿ ಮೊದ್ದ್ ಸಾ ಇತ್ತ್. ಎತ್ತ್‌ನ ಹಕ್ಕಲೆ ಂದ್ ಕುದ್ದ್ ಅದರ ಕಾಲ್‌ನ ನೆಟಿಗೆ ತೆಗೆವ್ವಂಗೆ ಆಡ್ಸಿ ಎಳ್ತ್. ಆ ಮೇಲೆ ತಂದ ಹಸಿ ೊದ್ದ್‌ನ ಸಮಕ್ಕೆ ತೊಡೆ ಮುರ್ದಲ್ಲಿ, ಸುತ್ತಕೆ ಹಚ್ಚಿತ್. ಮತ್ತೆ ಈ ಎರ್ಡ್ ಮರದ ಕೆತ್ತೆಗಳ ುರ್ದ ಬಾಗಕ್ಕೆ ಅತ್ತಂದ ಇತ್ತಂದ ಉದ್ದೊಕೆ, ಪ್ಲಾಸ್ಟರ್ ಹಾಂಗೆ ಇಸಿ ಗಟ್ಟಿ ಕಟ್ಟಿತ್.

ಅವಂಗೆ, ಮಾಚು ಇದ್ದ ತೆಳಿಗಂಜಿ ಕೊಟ್ಟತ್. ನಿಮ್ಮ ಉಪಕಾರನ ನಾ ಈ ನ್ಮಲಿ ಮರಿಯಕಿಲ್ಲೆಂತ ಎರ್ಡ್ ಮೂರ್ ಸಲ ಹೇಳಿಕಂಡತ್. ಅಂವ ಹೋಕನ "ಎತ್ತ್ ಎರ್ಡೇ ನಲಿ ಅದರಷ್ಟಕ್ಕೆ ನಿತ್ತದೆ. ಒಂದ್ ವಾರಲಿ ನಡ್ದದೆ"ಂತ ಹೇಳ್ತ್. ಅಂವ ಯಾವ ರ್ಣಿಕದಂವನೋ ಏನೋ? ಅಂವ ಹೇಳ್ದ ಹಾಂಗೆ ಎರ್ಡೇ ದಿನಲಿ ನಿತ್ತತ್. ಒಂದ್ ವಾರಲಿ ುಲ್ಲ ಮೆಲ್ಲ ನಡಿಯಕೆ ಸುರು ಮಾಡ್ತ್. ಮಾಚು ಅದರ ಅವ್ವನ ಕುಟುಂಬದ ಕೊರಗಜ್ಜಂಗೆ ುತ್ತೆ ಗುಳಿಗಂಗೆ ಹರಕೆ ಹೇಳಿದರ ಒಂದ್ ವಾರದ ಒಳಗೆ ಒಪ್ಪಿಸಿನೆಂತ, ತಲೆ ಮೈ ಮೀದ್, ೇವರ ಕೋಣೆಲಿ ದೀಪ ಹಚ್ಚಿ ಹೇಳಿಕಂಡತ್.

ಬೇಸ ತಿಂಗ ಹಿಡ್ತ್. ಒಂದ್ ದಿನ ಒಬ್ಬ ಗಂಡಸ್ ಅವರಲ್ಲಿಗೆ ಬಾತ್. ಬಂದಂವ ಇಲ್ಲಿ ಕೊಡುವ ಒಂದ್ ಹೋರಿ ಉಟ್ಟೂಂತ ಯಾರೋ ಹೇಳ್ದೊ. ಹೌದಾ'ಂತ ಕೇಳ್ತ್. ಾಚು ಮಾತ್ರ ದಟಿಗೆಲಿ ಇದ್ದದ್ದ್. ಮನ್ಸ್‌ಲೇ "ದೇವ್ರೇ, ಇವು ಹೋರಿನ ತೆಕ್ಕಂಡ್ ಹೋಗಲಿ"ಂತ ಣ್ಸಿಕಂಡ್, "ಹೌದ್ ಸಾಮಿ, ನಮ್ಮಲ್ಲೇ ಇರ್‍ದು. ನೀವು ಎತ್ತಂದ ಬಂದದ್ದೋ?"

"ನಾ ಆಲೆಟ್ಟಿಂದ ಬಂದದ್. ನನ್ನ ಹೂಡುವ ಹೋರಿ ಒಂದ್ ಸತ್ತ್ ಹೋತ್. ಅದಿಕ್ಕೊಂದ್ ಜೋಡಿ ಬೇಕಾಗಿತ್ತ್. ಹಾಂಗೆ ಯಾರೋ ಹೇಳ್ದೊಂತ ಇಲ್ಲಿಗೆ ಬಂದೆ"ಂತ ಹೇಳ್ತ್.
"ಎಂತಕ್ಕೂ ನೀವು ಸುರು ಹೋರಿನ ನೋಡಿ. ನೀವುಗೆ ಆದುಂತ ಆದರೆ ಮಾಂವನ ಕರ್ದನೆ" ಬಂದಂವ ಹೋರಿನ ನೋಡ್ತ್. ಬಾಯಿ ಬುಡ್ಸಿ ಎಷ್ಟ್ ಹಲ್ಲ್‌ದ್‌ಂತ ನೋಡ್ತ್. ಕಾಲ್ ಬೇನೆಂತ ಕಟ್ಟಿ ಸಾಂಕಿದ್ದಕ್ಕೆ ಎತ್ತ್ ಮೈ ತುಂಬಿಕಂಡ್ ಬಾರಿ ಪೊರ್ಲುರ್ ಇತ್ತ್. ತನ್ನ ಎತ್ತ್‌ಗಾದ ಜೋಡಿಂತ ಅವಂಗೆ ಕುಸಿನೂ ಆತ್. ಅಂವ ಕೇಳ್ತ್ "ಎಷ್ಟ್ ಹೇಳ್ವೆಂತ ಗೊತ್ತುಟ್ಟಾ?"
ಮಾಚು ಮನ್ಸ್‌ಲೇ "ಎತ್ತ್‌ನ ಯೆಜಮಾನ ಇನ್ನೂರ ಐವತ್ತ್ ಹೇಳ್ದೆ. ನಾವು ಐವತ್ತ್ ರೂಪಾಯಿಗಿಂತ ಹೆಚ್ಚ್ ಚಾಕಿರಿ ಮಾಡ್ಯೊಳೊ. ಮುನ್ನೂರ ಐವತ್ತ್ ಹೇಳ್ನೆ"ಂತ "ಮುನ್ನೂರ ಐವತ್ತ್ ಸಿಕ್ಕಿರೆ ಕೊಡಕ್ಕಂತ ಮಾಂವ ಹೇಳಿಕಂಡ್ ಇದ್ದೊ"ಂತ ಹೇಳ್ತ್.
"ಮಾಂವ ಎಲ್ಲುಟ್ಟು?"
"ಇಲ್ಲೇ ಇರಿ, ಇಲ್ಲೇ ಗುಡ್ಡೆಲಿ ಕೆಲ್ಸ ಮಾಡಿಕಂಡ್ ಇರೋಕು"ಂತ ಕುಸಿಲಿ ಬೊಸ್ರಿಂತ ಹೇಳುದರ ಮರ್ತ್, ಓಡಿಕಂಡ್ ಹೋದ್ದಂಗೆ ಮಾಂವನ ಹುಡ್ಕಿಕಂಡ್ ಹೋತ್. ಮಾಂವ ಕಾಂಬದಿರ್ಕನ "ಮಾಂವಾ"ಂತ ಕರ್ತ್. ಅಂವ ಇನ್ನೊಂದ್ ಮೂಲೆಂದ "ನಾ ಇಲ್ಲಿ ಒಳೆ"ಂತ ಹೇಳಿದ್ದರ ಕೇಳಿ ಅಲ್ಲಿಗೆ ಹೋಗಿ, ಅಲ್ಲಿ ಮಾಂವನ ಹಕ್ಕಲೆ ಎಲ್ಲಾ ಹೇಳಿ "ಯಾರ್ ಅದರ ಸಾಂಕುದು? ನಾವುಗೆ ಐವತ್ತ್ ರುಪಾಯಿ ಒಳ್ದರೂ ಸಾಕ್. ಮುನ್ನೂರ ಐವತ್ತ್ ಹೇಳಿ. ಮುನ್ನೂರಕ್ಕೆ ಒಪ್ಪಿಕಣಿ"ಂತ ಹೇಳಿ ಕೊಟ್ಟತ್. ಮಾಚುನ ಮಾಂವ ಬಂದ್, ಸೊಸೆ ಹೇಳ್ದ ಹಾಂಗೆ ಮುನ್ನೂರ ಐವತ್ತ್ ಹೇಳಿ, ಹಂಞಾ ಅತ್ತಿತ್ತ ಎಳ್ದ್ ಆಕೇರಿಗೆ ಮುನ್ನೂರ್ ರುಪಾಯಿಗೆ ಒಪ್ಪಿತ್. ಮಾಚುಗೆ ಚ್ಚುಚ್ಚು ಮಾತಿಂದ ಬುಡುಗಡೆ ಆತಲ್ಲಾಂತ ನೆಮ್ಮದಿ ಆತ್. ಹೋರಿನ ಯೆಜಮಾನಂಗೆ ಇನ್ನೂರ ಐವತ್ತ್ ಕೊಟ್ಟ್, ಒಳ್ದ ಐವತ್ತ್ ರುಪಾಯಿನ ಹಿಡ್ಕಂಡ್, ಮಾಂವನೂ ಸೊಸೆನೂ ಒಂದ್ ದಿನ ಸುಳ್ಯಕ್ಕೆ ಹೋಗಿ ಆ ಐವತ್ತ್ ರುಪಾಯಿಂದ ಬೇಕಾದ ಮನೆ ಸಾಮಾನ್ ತೆಕಂಡ್ ಬಂದೊ.

ಹೀಂಗೇ ದಿನ ಹೋಗ್ತಾ ಇತ್ತ್. ಮಾಚುಗೆ ಒಂಬತ್ತ್ ತಿಂಗ ಹಿಡ್ತ್. ಎರ್ಡ್ ಕಡೆವು ಸೇರಿ ಬಯಕೆ ಮೊದ್ವೆ ಮಾಡಿಕೆ ದಿನ ನೋಡ್ದೊ. ಒಂದ್ ಒಳ್ಳೆ ದಿನ ನೋಡಿ ವೀಳ್ಯಡ್ಕಂದ ಐದ್ ಜನ ಹೆಳ್ಮಕ್ಕ ಬಂದೊ. ಮಾಚುನ ಅವ್ವ ಪಚ್ಚೆ ಬಣ್ಣದ ಸೀರೆ, ಅದಕ್ಕಾವ ರೌಕೆ ತಂದಿತ್ತ್. ಮಾಚು ಅದರ ಉಟ್ಟತ್. ಒಂಬತ್ತ್ ಬಗೆ ಹೂನ ಮುಡ್ಸಿದೊ. ಅವು ಮತ್ತೆ ಮಾಚು, ಅದರ ಮೇರ ತೊಳಸಿ ಕಟ್ಟೆಗೆ ಸುತ್ತು ಬಂದೊ. ಇಬ್ಬರ್ ಸೇರಿ ಚೆಂಬುಂದ ತೊಳಸಿಗೆ ನೀರ್ ಹೊಯ್ದೊ. ಮತ್ತೆ ಅವರಿಬ್ಬರ ದೇವರ ಕೋಣೆಲಿ ಕುದ್ರಿಸಿದೊ. ಅವರ ಅತ್ತ ಇತ್ತ ಗಂಡ್ ಕೂಸು ಮತ್ತೆ ಹೆಣ್ಣ್ ಕೂಸುನ ಕುದ್ರಿಸಿದೊ. ದೊಡ್ಡ ಕೊಡಿ ಬಾಳೆಲೆಲಿ ಐದೈದ್ ಮುತ್ತೈದೆಗ, ಐದೈದ್ ಸೆಡೆ ಹೊದ್‌ರಿ ಅವ್ಲಕ್ಕಿ ಅದರ ಮೇಲೆ ಬಾಳೆ ಹಣ್ಣ್ ಹಾಕಿದ ಕಾಯಿ ಹಾಲ್ ಇಕ್ಕಿದೊ. ಅವಿಬ್ಬರ್ ಅದರಂದ ದೊಡ್ಡ ಮುದ್ದೆ ಕಟ್ಟಿ, ಮಾಚು ಗಂಡ್ ಕೂಸಿಗೆ, ಎಲುಂಬ ಹೆಣ್ಣ್ ಕೂಸಿಗೆ ಕೊಟ್ಟೊ. ನೆಂಟ್ರ್‌ಗ ತಂದ ತಿಂಡಿಗಳ ಅವವೇ ಇಕ್ಕಿದೊ. ನೆಂಟ್ರಿಗೆ ಇವ್ವೆ ಇಕ್ಕಿದ ಹೊದ್‌ರಿ ಅವಲಕ್ಕಿ ಬಾಳೆ ಹಣ್ಣ್ ರಸಾಯನ ಅಲ್ಲದೆ, ಇಡ್ಲಿ, ಕೋಳಿ ಗೈಪು, ಪದೆಂಜಿ ಪಾಯ್ಸ ಸಾನ್ ಇತ್ತ್. ಬಂದ ಹೆಳ್ಮಕ್ಕ ಇದರ ಕರ್‍ದೊಂಡ್ ಹೋಕೆ ಮುಂದೆ, ಹಿಂಬೊತ್ ಆಕನ ಪೇಂಟೆ ಕೋಳಿಗೆ ಮಾಚುಂದ ಅಕ್ಕಿ ಹಾಕಿಸಿದೊ. ಮತ್ತೆ ಕರ್ಕಂಡ್ ಹೋಕೆ ಬಂದವರೊಟ್ಟಿಗೆ ಮಾಚುನ ಕಳ್ಸಿದೊ.

ಹೋದ ಒಂದ್ ವಾರಲೇ ಅದ್ ಗಂಡ್ ಕೂಸುನ ಹೆತ್ತ್‌ತ್. ಹನ್ನೊಂದಕ್ಕೆ ಕೂಸಿಗೆ ಹೆಸ್ರ್ ಇಸಿದೊ. ಮಾಚುಗೆ ಕೃಷ್ಣ ದೇವುಂತೇಳ್ರೆ ಹನೀಸ್ ಪ್ರೀತಿ ಹೆಚ್ಚ್. ಹಾಂಗಾಗಿ ಅದ್ ಕೃಷ್ಣಂತ ಹೇಳ್ವ ಹೆಸರೇ ಆದುಂತ ಹೇಳ್ತ್. ಆದರೆ ಕರೆವರ ಬಾಯಿಲಿ ಕೃಷ್ಣ ಹೋಗಿ ಕಿಟ್ಟ ಆತ್.

ನಲ್ವತ್ತ್ ದಿನ ಆಕೆ ಇಲ್ಲೆ, ಮಾಚುನ ಗಂಡನ ಮನೆವು ಅದರ ಕರ್ಕಂಡ್ ಹೋದೊ. ಕೂಸಿಗೆ ಒಂದ್ ವರ್ಷ ಅಕನ ಮುಟ್ಟ ಮಾಚು ನೆರೆಕರೆಲೇ ಅದ್ ಇದ್‌ಂತ ಸಣ್ಣ ಸಣ್ಣ ಕೆಲ್ಸ ಮಾಡಿಕಂಡ್ ದಿನ ದೂಡಿತ್. ಆದರೆ ಕೈಲಿ ಪೈಸೆ ಇಲ್ಲದೆ ಕೈ ಕಟ್ಟಿ ಹೋಗಿತ್ತ್. ಒಂದ್ ದಿನ ಕೂಸಿಗೆ ಚಟ್ಟೆಲಿ ಉಂಬಕೆ ಕೊಟ್ಟ್‌ಕಂಡ್ ಇರಿಕನ, ಅದ್ ಕೈಯಿಂದ ಜಾರಿ ಬಿದ್ದ್ ಎರ್ಡ್ ತುಂಡ್ ಆತ್. ಅದ್, ಅದರ ಉಂಬ ಚಟ್ಟೆ, ಬೇರೆವರ ಚಟ್ಟೆಲಿ ಉಂಬಕೆ ಅದಿಕೆ ಮನ್ಸ್ ಇಲ್ಲೆ. ಅದ್ ಆ ತುಂಡಾದ ಚಟ್ಟೆನ ದೊಡ್ಡ ತುಂಡುಲೇ ಉಂಬೊತಿತ್ತ್.

ಅದೇ ಸಮಿಯಕ್ಕೆ ಕೂಸಿಗೆ ಉರ್ಚೆಲ್ ಮತ್ತೆ ಕಾರುದು ಸುರು ಆತ್. ಮಾಚು ಅದಿಕೆ ಗೊತ್ತಿದ್ದ ಹಳ್ಳಿ ಮೋದ್ದ್ ಮಾಡ್ತ್. ಅದರ್ಲಿ ನಿತ್ತ್‌ಲ್ಲೆ. ಕೂಸು ಬಿಸ್ಲ್‌ಗೆ ಇಸಿದ ಬಸಳೆ ಹಾಂಗೆ ಬೊಚ್ಚಿ ಹೋತ್. ಮಾಚುನ ಜುವ್ವ ಹೆದ್ರಿಕೆಲಿ ನೊಡ್ಗಿತ್. ಇದ್ದ ಹೊಡಿ ಚಿಲ್ಲರೆನ ಮುಡ್ಕಿ ಸಣ್ಣ ಅರ್ವೆಲಿ ಕಟ್ಟಿಕಂಡತ್. ಕೂಸುನ ಹೆಗ್ಲ್ ಮೇಲೆ ಹಾಕ್ಕಂಡ್ ಒಂದ್ ಹಳೆ ತೋರ್ತ್‌ನ ಕೂಸಿಗೆ ಹೊದ್‌ಸಿ ಸುಳ್ಯಕೆ ಹೊರ್ಪತ್. ಎಷ್ಟೇ ಹಕ್ಕಲೆನ ದಾರಿಲಿ ಹೋದರೂ ನಾಲ್ಕ್ ಮೈಲ್! ಎಷ್ಟ್ ಜೋರ್ಲಿ ನಡ್ದರೂ ಒಂದ್ ಗಂಟೆ ಆದರೂ ಬೇಕ್. ಅದ್ ನಡ್ಕಂಡ್ ಅಲ್ಲ, ಓಡಿಕಂಡೇ ಹೋತ್. ಕೂಸುನ ಉಸ್ರ್ ಮಾತ್ರ ಆಡ್ತೆ. ಅದಿಕೆ ಲೋಕನೇ ಇಲ್ಲೆ. ಕೂಸು ಮುಚ್ಚಿದ ಕಣ್ಣ್ ತೆರೆಯೊದ್ಲೆ ಹೋತ್... ಹೋ...ತ್,,ಹೋ....ತ್.....! ಮದ್ಯನ ಆಕನ ಸುಳ್ಯಕ್ಕೆ ಎತ್ತಿತ್. ಓಡಿಕಂಡ್ ಬಂದರಿಂದ ಅದರ ಉಸ್ರೇ ಮೇಲೆ ಬಂದ ಹಾಂಗಾಗಿತ್ತ್. ಗುರ್ತದ ಡಾಕ್ಟ್ರ ಹಕ್ಕಲೆ ಹೋತ್. ಕಾದ್ಕಂಡ್ ಇದ್ದ ಜೆನ ಇದ್ದರೂ ಕಂಪೋಡ್ರ ಎದ್ರ್ ಕೂಸುನ ಹಿಡ್ದ್ ತೋರ್ಸಿ ಸೀದಾ ಒಳಗೆ ಹೋತ್. ಒಳಗೆ ಹೋಗಿ ಮೋರ್ಲ್ಪಕಂಡ್, ಅವು ಬೇರೆವರ ವಿಚಾರ್ಸ್‌ತಿದ್ದರೂ, ಅವರ ಎದ್ರ್ ಕೂಸುನ ಹಿಡ್ದ್ "ನನ್ನ ಹಕ್ಕಲೆ ಈಗ ದುಡ್ದು ಇಲ್ಲೆ ಸಾಮಿ. ಮೋದ್ದ್ ಕೊಟ್ಟ್ ಕೂಸುನ ಒಮ್ಮೆ ಬೊದ್ಕಿಸಿ. ಯಾಗಾರ್ ನಾ ಸಾಲ ತೀರ್ಸುವೆ. ಅದ್ ಆತ್ಲಾರೆ ನಿಮ್ಮ ಮನೆ ಕೆಲ್ಸ ಮಾಡಿ ಆದರೂ ಸಾಲ ಮುಗ್ಸುವೆ"ಂತ ಹೇಳ್ತ್. ಕೂಸುನ ನೋಡ್ದ ಡಾಕ್ಟ್ರ ಅವರ ಎದ್ರ್ ಇದ್ದ ಕಾಯ್ಲೆವರ ಹಕ್ಕಲೆ "ಹನೀಸ್ ಕೂಸುನೊಮ್ಮೆ ಪರೀಕ್ಷೆ ಮಾಡ್ನೆ"ಂತ ಪರೀಕ್ಷೆ ಮಾಡ್ದೊ. ಮತ್ತೆ ಮಾಚುಗೆ "ನೀ ಇಂದ್ ಹಿಂಬೊತು ಮುಟ್ಟ ಇಲ್ಲೇ ಇರ್. ಹಿಂಬೊತ್‌ಗೆ ಕೂಸು ಹುಶಾರಾದು. ಹೇಂಗೆಂತ ಗೊತ್ತಾದಲೆ"ಂತ ಹೇಳಿ ಕಂಪೋಡ್ರ ಕರ್ದ್, "ಹಿಂದೆನ ಕೋಣೆಲಿ ಈ ಕೂಸುನ ಮಲ್ಗಿಸಿ, ಮೋದ್ದ್ ಕೊಡು"ಂತ ಹೇಳಿ ಏನೇನ್ ಕೊಡೊಕುಂತನೂ ಹೇಳ್ದೊ. ಅಂವ ಒಂದ್ ಕುಡಿವ ಮೋದ್ದ್‌ನ ಒಂದ್ ಬೆಟ್ಸ್‌ನಷ್ಟ್ ಕುಡ್ಸಿತ್. ಆ ಮೇಲೆ ಕೂಸುನ ಮಂಚಲಿ ಮಲ್ಗಿಸಿ, ಒಂದ್ ಕುಪ್ಪಿಲಿದ್ದ ನೀರ್ ಮೋದ್ದ್‌ನ ಕೂಸುನ ಕೈಗೆ ಚುಚ್ಚಿತ್. ಆ ಮೋದ್ದ್ ಹೋಕಂಡ್ ಇರ್ವ ಹಾಂಗೆ ಒಂದ್ ಆದಾರಕ್ಕೆ ತೂಗು ಹಾಕಿತ್. ಹಿಂಬೊತಿಗಾಕನ ಕೂಸು ಕಣ್ಣ್ ಬುಟ್ಟ್ ಮೆಲ್ಲ "ಅವ್ವಾ"ಂತ ಕರ್ತ್. ಮಾಚುಗೆ ಜುವ್ವ ಬಾತ್. ಹೊರ್ಡಿಕಾಕನ ಕಂಪೋಡ್ರ್ ಮೂರ್ ದಿನದ ಮೋದ್ದ್ ಕೊಟ್ಟ್, ಕುಡ್ಸುವ ಕ್ರಮನ ಹೇಳ್ತ್. ತಿಂಬಕೆ ಮತ್ತೆ ಕುಡಿಯಕೆ ಎಂತ ಕೊಡಕ್ಕ್, ಎಂತ ಕೊಡಿಕಾಗದ್‌ಂತಲೂ ಜಾಗರ್ತೆ ಹೇಳ್ತ್. ಜೋರಾದರೆ ಪುನ: ಬರೋಕುಂತ ಸಾ ಹೇಳ್ತ್. ಮಾಚು ಹೊರ್ಪವು ಡಾಕ್ಟ್ರ ಕಾಲಿಗೆ ನಮಸ್ಕಾರ ಮಾಡಿ "ನಿಮ್ಮ ಉಪಕಾರನ ನಾ

ಜನ್ಮಲಿ ಮರ್ರ್ಯಕಿಲ್ಲೆ, ಹಣನ ಆದಷ್ಟ್ ಬೇಗ ತಂದ್ ಕೊಟ್ಟನೆ"ಂತ ಹೇಳಿ ನಾಗೂರಿನ ದಾರಿ ಹಿಡ್ತ್. ದುಡ್ಡಿಲ್ಲದ್ದಕ್ಕೆ ಮದ್ಯನ ಊಟನ ಸಾ ಮಾಡಿತ್ಲೆ. ಹೊಟ್ಟೆ ಕೇಳಕಲೇ? ಅದಕ್ಕೆ ಸೋಡದ ಅಂಗ್ಡಿಲಿ ಒಂದ್ ಕಾಲಿ ಸೋಡ ಕುಡ್ತ್. ನೊ್ಡು ದಾರಿಲಿ ಪಯಸ್ವಿನಿ ಹಳ್ಳ ಸಿಕ್ಕಿತ್. ಕೂಸುನ ಅಲ್ಲೇ ಒಂದ್ ಮರದ ನೆರಳ್‌ಲಿ ಮಲ್ಗಿಸಿ, ಹೊಳೆಲಿ ಕೈಕಾಲ್ ತೊಳ್ಸ್, ಮೋರೆಗೆ ಸರೀ ನೀರ್ ಚೇಂಪಿಕಂಡತ್. ಆ ಮೇಲೆ "ಓ...ದೇವೀ ನನ್ನ ಕೂಸುನ ಒಳ್ಳಿ ಕೊಡು"ಂತ ಕೈ ಮುಗ್ದ್, ನೀರ್‌ನ ತಲೆಗೆ ಹನ್ನಿಸಿಕಂಡತ್. ಮತ್ತೆ ಅಂಗೈ ಜೋಡ್ಸಿ ಹೊಟ್ಟೆ ತುಂಬ ನೀರ್ ಕುಡ್ತ್. ಅದಿಕೆ ಬೊ್ಚ್ಚಿ ಕಣ್ಣ್ ಕಾಣದ ಹಾಂಗೆ ಆಗಿತ್ತ್. ಕೂಸುನ ಮಲ್ಗಿಸಿದಲ್ಲೇ ಅದ್ ಕುದ್ದ್‌ಕಂಡ್ "ಹಣ ಇಲ್ಲದ ಗೆತಿಗೆಟ್ಟ್‌ಲಿ ನಾ ಹೇಂಗೆ ಬೊ್ದ್ಕುದು?"ಂತ ಚಿಂತೆಲೇ ಕಣ್ಣ್ ಮುಚ್ಚಿಕಂಡಿದ್ದ ಅದಿಕೆ ಹಸಿವು, ಬೊ್ಚ್ಚೆಲ್ ಸೇರಿ ಹೊಳೆಂದ ಬೀಸ್‌ವ ತೋ್ಂಪು ಗಾಳಿಗೆ ಅಲ್ಲೇ ಜೋಂಪು ಬಂದ ಹಾಂಗೆ ಆತ್. ಆ ಜೋಂಪುಲಿ ಹಳ್ಳ, ದೇವಿ ರೂಪಲಿ ಕಂಡತ್. ಇದ್ ಅಡ್ಡ ಬೀತ್. ಅಷ್ಟೊತ್ತಿಗೆ ಎಚ್ಚರ ಆತ್. ನಂಗೆ ದೇವರ ದಯೆ ಉಟ್ಟುಂತಾಗಿ, ಕುದ್ದಲಿಂದಲೇ ಕೈ ಮುಗ್ತ್. ಇನ್ನ್ ಹೋನೆಂತ ಎದ್ದ್ ನಿಂತುಟು, ಅಷ್ಟ್ ದೂರಲಿ ಎಂತದ್ದೋ ಮಿಣಿಮಿಣಿಂತ ಮಿನ್ನುಗುದು ಕಂಡತ್. ಹಕ್ಕಲೆ ಹೋಗಿ ನೋಡ್ರೆ– ಚಿನ್ನದ ಉಂಗುರ! ಒಳ್ಳೆ ಭಾರ ಸಾ ಉಟ್ಟು, ಇದಕ್ಕೇ ದೇವಿ ನಂಗೆ ಕಂಡದ್ದ್‌ಂತ ಅದರ ಎರ್ಡ್ ಕಣ್ಣ್‌ಗೆ ಒತ್ತಿಕಂಡತ್. ಮತ್ತೆ ಅದರ ಸೆರಂಗ್‌ನ ಕೊಡಿಲಿ ಕಟ್ಟಿ ಎದ್ರ್ ಸೆಕ್ಕಿಸಿಕಂಡತ್. ಮಲ್ಗಿದ ಕೂಸುನ ಮೆಲ್ಲ ಎತ್ತಿ ಮುತ್ತ ಕೊಟ್ಟ್, ಹೆಗ್ಲ ಮೇಲೆ ಹಾಕಿಕಂಡ್, ಬಾನ್‌ಲಿ ತೇಲಿಕಂಡ್ ಹೋಗ್‌ವ ಹಾಂಗೆ ಕುಸಿಲಿ ಹೋತ್.

ಮೊ್ದ್ದ್ ಕೊಟ್ಟದರ್‍ಲಿ ಕೂಸು ಎರ್ಡೇ ದಿನಲಿ ಉಸಾರ್ ಆತ್. ಉಸಾರ್ ಆದ ಮೇಲೆ ಒಮ್ಮೆ ಕೂಸುನ ದಟಿಗೆಲಿ ಬುಟ್ಟು ಮಾಚು ಸುಳ್ಯಕೆ ಹೋತ್. ಗುರ್ತದ ರಾಗು ಸೆಟ್ರಲ್ಲಿಗೆ ಹೋಗಿ "ಈ ಉಂಗುರಕ್ಕೆ ಎಷ್ಟ್ ಸಿಕ್ಕುದು"ಂತ ಕೇಳ್ತ್. ಅದರ ಒರೆಗೆ ತಿಕ್ಕಿ ನೋಡಿ "ಇದ್ ಬೆಟ್ಟೆ ಬಂಗಾರ. ಒಂದ್ ಐವತ್ತ್ ರುಪಾಯಿ ಕೊಡಕ್ಕ್"ಂತ ಹೇಳ್ದೊ. ಸೆಟ್ರ್ ಮೋಸ ಮಾಡ್ವವೇ– "ಅಕ್ಕನ ಬಂಗಾರ ಆದರೂ ಅಕ್ಕಸಾಲಿಗ ಬಿಡ"ಂತ ಹೇಳ್ವ ಗಾದೆ ಅದಿಕ್ಕೆ ನೆಂಪಾತ್. ಅದ್ ಸೆಟ್ರ್ ಹೇಳ್ದಕ್ಕೆ ಉತ್ತರ ಇಲ್ಲದೆ ನಿಂತದರ ನೋಡಿ "ಇದ್ ಇನ್ನ್ ಬೇರೆ ಕಡೆಗೆ ತೆಕಂಡ್ ಹೋದರೆ ನನ್ನ ಲಾಭ ಹೋದೆಲ್ಲಾ"ಂತ ಅಂದಾಜ್ ಮಾಡಿ "ಆತ್, ನಿಂಗೆಂತ ಐದ್ ರುಪಾಯಿ ಹೆಚ್ಚ್ ಕೊಟ್ಟನೆ"ಂತ ಹೇಳ್ದೊ.

ಮಾಚು ಮನ್ಸ್‌ಲೇ "ಸಿಕ್ಕಿದ್ದ್ ಸಾಕ್. ದರ್ಮಕ್ಕೆ ಸಿಕ್ಕಿದ್ದಲ್ಲಾ" ಹೇಳಿಕಂಡ್, "ಆತ್. ಮತ್ತೆಂತ ಮಾಡುದು? ನಾವುಗೆ ಬಂಗಾರದ ಲೆಕ್ಕ ಗೊತ್ತಿಲ್ಲೆ. ನೀವು ಎಂತ ಹೇಳ್ರೂ, ಹೇಳಿದರ ಸತ್ಯಂತ ಒಪ್ಪಿಕೊಂಬೊ್ದ್. ಸರಿ ಕೊಡಿ ದುಡ್ಡು"ಂತ ಹೇಳ್ದರ ಕೇಳಿ ಮನ್ಸ್‌ಲೇ ಸೆಟ್ರ್ "ಉಸಾರ್ ಉಟ್ಟು ಈ ಹೆಂಗ್ಸ್"ಂತ ಹೇಳಿಕಂಡ್, "ನಾ ಇಷ್ಟಾದರ್ ಕೊಟ್ಟನೆ, ಬೇರೆ ಕಡೆ ಇಷ್ಟೂ ಕೊಡಿಕಿಲ್ಲೆ"ಂತ ದುಡ್ಡು ಕೊಟ್ರೊ, ಅದಿಕ್ಕೆ ಮಾಚು ನೆಗಾಡಿಕಂಡೇ "ಅವೂ ಸಾ ನಿಮ್ಮ ಹಾಂಗೆ ಸೊನೆಗಾರನೇ ಅಲ್ಲಾ?"ಂತ ಹಣ ತೆಕಂಡತ್.

ದುಡ್ಡು ಕೈಗೆ ಸಿಕ್ಕಿದ ಹಾಂಗೆ ಡಾಕ್ಟ್ರ ಹಕ್ಕಲೆ ಹೋಗಿ "ನಿಮ್ಮ ಪುಣ್ಯಂದ ನನ್ನ ಕೂಸು ಒಳ್ತ್"ಂತ ಕೈ ಮುಗ್ದ್ ಅವರ ಹಣ ಕೊಟ್ಟತ್. ಆಗಿನ ಕಾಲಲಿ ಹೆಚ್ಚಿನ ಡಾಕ್ಟ್ರ್‌ಗ ಹಣಕ್ಕಿಂತ, ಇದೊಂದ್ ಪುಣ್ಯದ ಕೆಲಸಂತೇಳಿ ಪಾಪದವ್ಕೆ ರಿಯಾಯ್ತಿ ಮಾಡ್ತಿದ್ದೊ. ಹಾಂಗಾಗಿ ಮಾಚುಗೆ ಹೆಚ್ಚ್ ಹಣ ಕೊಡಿಕೆ ಆತ್ಲೆ

ಒಳ್ದ ಹಣಲಿ ಅಕ್ಕಿ, ಒಣ್ಗೇಲ್ ಮೀನ್, ಎರ್ಡ್ ಜೊತೆ ಚಟ್ಟೆ ಮರ್ಚಟ್ಟೆ, ಕೂಸಿಗೆ ಂಬಕೆ ತಿಂಡಿ, ಹಣ್ಣ್ ತೆಕಂಡ್ ಅದ್ ಸಾ ಕೊಂಕಣಿಗಳ ಹೋಟ್ಳ್‌ಲಿ ಚಾ ಕುಡ್ದ್, ಗೋಳಿಬಜೆ ಂದ್, ಕಷ್ಟಕ್ಕೆ ಇರಲಿಂತ ಹತ್ತ್ ರುಪಾಯಿ ಇಸಿಕಂಡ್ ದಟಿಗೆಗೆ ಬಾತ್.

ಕೂಸಿಗೆ ಒಂದ್ ವೊರ್ಸ ಆದ ಮೇಲೆ ಒಂದ್ ದಿನ ದನಿ ಬ್ಯಾರಿಗಳ ಮನೆಗೆ ಹೋತ್. ಅವು ಗಂಡ ಹೆಣ್ಣ್ ಇಬ್ಬರ್ ಇರಿಕನ "ಕೂಸು ಸಣ್ಣದ್, ಬೊಳ್ಪಿಂದ ಕತ್ತಾಲೆ ಮುಟ್ಟ ೋಡಿಕೊಂಬೊಕೆ ಜನ ಇಲ್ಲೆ. ಒಳ್ಯಕೆ ಇಲ್ಲೆ ಎಲ್ಲಾರ್ ಚೂರು ಜಾಗೆ ಕೊಟ್ಟಿದ್ದರೆ ಬಾರಿ ುಪಕಾರ ಆಗ್ತಿತ್ತ್"ಂತ ಕೇಳಿಕಂಡತ್.

ನಿ ಬ್ಯಾರಿ "ನೋಡೊಮೊ"ಂತ ಹೇಳಿಕನ, ಬ್ಯಾರ್ತಿ "ನೋಡಿಕೆ ಎಂತ ಉಟ್ಟು? ಹಟ್ಟಿ ಹಕ್ಕಲೆ ತ್ತ ಮಿದ್ಯವಲ್ಲಿ, ಕೊಟೆಗೆನ ಆ ಕೊಡೀಲಿ ಮಡಲ್ ಕಟ್ಟಿ ಅಡ್ಡಮಾಡಿಕೆ ಎಲುಂಬನ ಹಕ್ಕಲೆ ೇಳ್"ಂತ ಹೇಳ್ದೊ. ದನಿ ಬ್ಯಾರಿ ಹೆಣ್ಣ್‌ನ ಕಾರ್ಬಾರಕ್ಕೆ ಮೀಸೆ ಅಡಿಲೆ ನೆಗಾಡ್ತಿದ್ದೊ. ಾಚುಗೆ ಬ್ಯಾರ್ತಿ ಉಮ್ಮನ ಕಾಲಿಗೆ ಬೀಳೊಮೊಂತ ಹೇಳ್‌ವಷ್ಟ್ ಕುಸಿ ಆತ್. "ಬಾ..ರಿ ುಪಕಾರ ಆತ್ ಉಮ್ಮ"ಂತ ಪೂರ ಮನ್ಸಿಂದ ಹೇಳ್ತ್.

ಮೊರ್ದಿನನೇ ಬ್ಯಾರ್ತಿ ಉಮ್ಮನ ಕೇಳಿ, ಅವು ಹೇಳ್ದ ಹಾಂಗೆನೇ ಎಲುಂಬ ಸಂಪಟದ ರ ತೆಂಗಿನ ಮಡಲಿಂದ ಲಾಯ್ಕಲಿ ಅಡ್ಡ ಕಟ್ಟಿತ್. ಅಲ್ಲಿ, ಹಟ್ಟಿ ಕೊಟೆಗೆ ಪೂರ ಒಂದಕ್ಕೊಂದ್ ಾಗಿಕಂಡೇ. ಅದೇ ಕೊಟೆಗೆನ ಮೂಲೆಲಿ ಇವು ಬಿಡಾರ ಮಾಡ್ದೊ. ಅಲ್ಲೇ ಒಂದ್ ಪುಡೆಲಿ ತ್ತ ಬೇಸುದು ಮತ್ತೆ ಬತ್ತ ಕುಟ್ಟುದು. ಅದರ ಎದ್ರೇ ದೊಡ್ಡದೊಂದ್ ಇಜ್ಜೆಲ್. ಅದರ ಂದ್ ಪುಡೆಲಿ ದೊಡ್ಡ ದೊಡ್ಡ ಕೊಪ್ಪರಿಗೆಗಳಲಿ ಬತ್ತ ಬೇಸಿ ಇಜ್ಜೆಲ್‌ಲಿ ಒಣ್‌ಂಗಿಸ್ತಿದ್ದೊ. ೆಳ್ಮಕ್ಕಳಿಗೆ ಬೊಳ್ಪುಂದ ಮದ್ಯಾನ ಮುಟ್ಟ ಸೊಪ್ಪು ಸೊಯ್ದ್ ಮಾಡ್ವ ಕೆಲ್ಸ. ಮದ್ಯಾನಂದ ೇಲೆ ಬತ್ತ ಮಿದಿಯೊದು. ಕೊಟೆಗೆ ಉದ್ದಕೆ ಆರ್ ಕಡೆಲಿ ಬತ್ತಮಿದ್ದವೆ. ಅದರ ಒಟ್ಟಿಗೆ ಬತ್ತ ೇಸುದು, ಒಣ್‌ಂಗಿಸುದು ಹೆಳ್ಮಕ್ಕಳದೇ ಕೆಲ್ಸ. ಮಾಚು ಕೂಸು ದೊಡ್ಡದಾಕನ ಮುಟ್ಟ ಮನೆ ಲ್ಸನೇ ಕೊಡೊಕುಂತ ಕೇಳಿಕಂಡಿತ್ತ್. ಹಾಂಗಾಗಿ ಅದಿಕ್ಕೆ ಬೊಳ್ಪುಗೆ ಗುಡ್ಸುದು, ತೊಳ್ಯೊದು, ಟ್ಟೆ ಒಗ್ಯೊದು ಇಂತ ಕೆಲ್ಸ. ಮದ್ಯನಂದ ಮೇಲೆ ಬೇರೆ ಹೆಳ್ಮಕ್ಕಳೊಟ್ಟುಗೆ ಬತ್ತ ಮಿದಿಯೊದು. ಗ ಕಣ್ಣ್‌ಗೆ ಕಾಂಬಲ್ಲಿ ಕಂಬಕ್ಕೆ ಕೂಸುನ ಕಾಲ್ ಕಟ್ಟಿ ಕೆಲ್ಸ ಮಾಡ್ತಿತ್ತ್. ಅತ್ತ ಇತ್ತ ಹೋವು ಾವು ಅದರ ಮಾತಾಡ್ಸ್‌ತಿದ್ದೊ. ಹಾಂಗಾಗಿ ಕೂಸು ಹೆಚ್ಚ್ ರಗಳೆ ಮಾಡ್ತಿತ್ತ್ಲೆ. ಹಿಂಬೊತ್ ಾಚುನ ಕೆಲ್ಸದ ಕೂಲಿ ಮೂರ್ ಪಾವು ಅಕ್ಕಿನ ಅದರ ಮುಟ್ಟಾಳೆಗೆ ಸುರ್ಯೊತಿದ್ದೊ. ದ್ರಿಂದ ಐದ್ ಕುಡ್ತೆ ಅಕ್ಕಿ ಅಳತೆ ಮಾಡಿ ಕತ್ತಲೆಗೆ ಗಂಜಿ ಮಾಡ್ತಿತ್ತ್. ಕುಮೆರಿಲಿ ಮಾಡಿದ್ದ ಟ್ಟಿಕಾಯಿ ಇದ್ದರೆ ಗೈಪು ಇಲ್ಲರೆ ಉಪ್ಪು ಮೆಣ್ಸ್ ಹುಳಿ ಹಾಕಿ ಚುರ್‌ಂಬಿ ಅದರ ರಸಲೇ ಂಬೊತಿದ್ದೊ. ಬೊಳ್ಪುಗೆ ದನಿಗಳಲ್ಲೇ ಚಾ, ತಿಂಡಿ. ಕೂಸಿಗೆ ತಣೆನನ ಬಿಸಿ ಮಾಡಿ, ಒಂದ್ ಲ್ಲ್ ಉಪ್ಪು ಹಾಕಿ, ಚೆಪ್ಪಿಲಿ ನುರ್ದ್ ಬಾಯಿಗೆ ಕೊಡ್ತಿತ್ತ್..

ಬೊಳ್ಪುಗೆ ಎಂಟ್ ಗಂಟೆಗೆ ಕೆಲ್ಸದವ್ಕೆ ಚಾ ತಿಂಡಿ ತೆಯಾರಾದೆ. ಒಬ್ಬೊಬ್ಬಂಗೆ ಂದೊಂದ್ ಚೊಂಬು ಚಾ, ಹದ ಮಟ್ಟದ ಎಂಟ್ ಹತ್ತ್ ಪುಂಡಿ. ಗದ್ದೆ ಹೂಡೋವ್ಕೆ ಲ್ಲಿಗೇ ತೆಕೊಂಡ್ ಹೋದು. ಅಲ್ಲಿ ಐದ್ ಜೊತೆ ಮೂಗ್ ದಾರ ಹಾಕಿದ ಕೋಣಂಗ, ೂರ್ ಜೊತೆ ಎತ್ತ್‌ಗ, ಹೀಂಗೆ ಎಂಟ್ ಜನ ಹೂಡೋವು. ಅವ್ಕೆ ಒಂದ್ ಕುಕ್ಕೆಲಿ ಬೇಕಾದಷ್ಟ್ ಂಡಿ, ಚಾ, ಚಟ್ನೆ ತುಂಬ್ಸಿ, ಅದರ್ಲೇ ನಾಕ್ ಸೂಡಿ ಬಿಳ್ಗಿಲ್ ಸಾ ಹಾಕ್ಕೊಂಡ್ ಹೋತಿದ್ದೊ.

ಬಿಳ್ಗಿಲ್ ಯಾಕೇಂತೇಳ್ರೆ ಇವು, ಹೂಡೋವು ಚಾ ಕುಡಿಯಕನ ಕೋಣಗಳಿಗೆ, ಎತ್ತ್‌ಗಳಿಗೆ ಸಾ ಬಾಯಾಡಿಕೆ ಇರ್ಲಿಂತ.

ಮಾಮೂಲು ಕೆಲ್ಸಗಳಿಗೆ ಒಂದ್ ನಮುನೆ ಕೂಲಿ ಆದರೆ, ಕೊಯ್ಲಿನ ಕೂಲಿನೇ ಬೇರೆ. ಅದ್ ಹಂಞಾ ಹೆಚ್ಚೇ. ದಿನದ ಕೂಲಿ ಅಂದ್‌ದ್ ಅಂದಿಗಾದರೆ, ಕೊಯ್ಲಿನ ಕೂಲಿ ಹದಿನೈದ್ ದಿನ ಮಾಡ್ರೂ ಮತ್ತೆ ಸಾ ಒಂದೆರ್ಡ್ ತಿಂಗಳಿಗೆ ಅಕ್ಕಿ ಬತ್ತ ಒಳಿಯೊದು. ಹಾಂಗಾಗಿ ಬಂಜ ಆದರೂ ಕೊಯ್ಲಿನ ಕೆಲ್ಸ ತೊಪ್ಪಿಸಿಕಿಲ್ಲೆ. ಮಾಚೂ ಅಷ್ಟೇ. ಎಷ್ಟೇ ಬಂಜ ಆದರೂ ಕೊಯ್ಲು ಕೆಲ್ಸ ಬುಡ್ತಿತ್ಲೆ. ಆ ಕುಂಞಿ ಕೂಸುನ ಹಿಡ್ಕಂಡ್, ಗದ್ದೆ ಹಕ್ಕಲೆ ಇದ್ದ ಮೊನ್ಸ್ತಿ ಅಜ್ಜಿನ ಜಾಲ್‌ಲಿದ್ದ ಕಂಬಕ್ಕೆ ಕಾಲ್ ಕಟ್ಟಿ ಹೋತಿತ್ತ್. ಕೂಸಿಗೆ ಬೊಂಡದ ಚಿಪ್ಪಿಲಿ ಗಂಜಿ ಹಾಕಿ, ಅದಿಕ್ಕೊಂದ್ ಕೀಜಿನ ತಟ್ಟೆ ಮುಚ್ಚಿ ಅಜ್ಜಿ ಹಕ್ಕಲೆ ಕೊಡ್ತಿತ್ತ್. ಮೊನ್ಸರ್ ಮೇರರಿಗಿಂತ ಕೆಳಗಿನವುಂತ ಮೇರರ ಹೇಳಿಕೆ. ಅದ್ ಹೇಂಗೇ ಇರಲಿ, ಕೂಸು ಮೊರ್ದಿಕಾಕನ ಬೇರವ್ಕೆ ಗೊತ್ತಾಗದ ಹಾಂಗೆ ಅಜ್ಜಿ ಕೂಸಿಗೆ ಗಂಜಿ ಕೊಡ್ತಿತ್ತ್. ಕೆಲ್ಸ ಮುಗ್ಸಿ ಬಾಕನ ಮಾಚು, ಕೂಸಿನ ತಲೆಗೆ ಚೋಡಿ ನೀರ್‌ನ ಹೊಯ್ದು, ಸುದ್ದ ಮಾಡಿಕಂಡ್ ಬಾತಿತ್ತ್.

ತುಂಬ ಗದ್ದೆಗ ಇರ್ವಲ್ಲಿ ಕೊಯ್ಲು ಅಂದರೆ ಅದೊಂದ್ ಹಬ್ಬನೇ. ಊರುನ ಕತೆಗಳ ಮಾತಾಡಿಕೊಂಡ್, ನೆಗಾಡಿಕೊಂಡ್, ಪಾಡ್ದನ ಹಾಡಿಕೊಂಡ್, ಬತ್ತ ಅಳೆಯಕನ ಪೊಲಿ ಕರ್ಯೊದು-ಅದೆಲ್ಲಾ ಧಾನ್ಯ ದೇವಿನ ಪೂಜೆನೇ. ಕೆಲ್ಸನೇ ಆಗಿದ್ದರೂ ಅದರ್ಲೊಂದ್ ಗಮ್ಮತ್ತ್, ಕುಸಿ, ತೃಪ್ತಿ ಇತ್ತ್. ಬತ್ತದಪಡಿಗೆ ತೆನೆ ಹೊಡ್ದ್, ಬತ್ತ ಪಡಿಗೆ ತಾಗಿಕನ, ಪಡಿಮಂಚದ ಜಾಗೆ ಬದ್ಲಿಸಿಕನ, ಹಾಂಗೆ ಹೆಚ್ಚೆಚ್ಚ್ ಬದ್ಲಿಸಿದಷ್ಟ್ ಕೊಯ್ದವ್ಕೆ ಕುಸಿನೇ. ಅವರ ಕೂಲಿದ್ದ್ ಪಾಲ್ ಹೆಚ್ಚ್‌ತ್ತಾ ಹೋದೆ. ಬತ್ತ ರಾಸಿ ಆದ ಮೇಲೆ ಕಾಳ್, ಜಳ್ಳ್ ಬೇರೆ ಮಾಡಿ, ಒಳ್ಳ ಬತ್ತದ ರಾಸಿನ. ಅಳೆಯೊದು ಕಳಸೆಲಿ.{ಒಂದೊಂದು ಊರ್ಲಿ ಒಂದೊಂದ್ ಅಳತೆನ ಕಳಸೆ ಇರ್ದ್ದೊ ಉಟ್ಟು. ಮಾಮೂಲಾಗಿ ಇರ್ದು ಹದಿನಾಲ್ಕ್ ಸೇರ್ದ್} ಕಳಸೆಲಿ ಬತ್ತ ತುಂಬುಸಿ ಗೀಸಿ ಹಾಕಿಕನ "ಪೊಲಿ ಒಂದ್, ಪೊಲಿ ಎರ್ಡ್"ಂತ ಹೇಳ್ವ ಕ್ರಮ. ಹತ್ತ್ ಕಳಸೆ ಆದ ಮೇಲೆ ಹನ್ನೊಂದನೇ ಕಳಸೆದ್ದ್ ಬತ್ತ ಕೊಯ್ದವ್ಕೆ. ಇದರ "ಕೊಯ್ಲು ಬತ್ತ"ಂತ ಹೇಳ್ವೆ. ಅಳತೆ ಮಾಡಿ ಮಾಡಿ ಕಡೇಗೆ, ಒಂದ್ ಕಳಸೆನ ಅಳತೆಗೆ ಸಿಕ್ಕದ ಬತ್ತನ ಅಳತೆ ಮಾಡಂವ ರಾಶಿ ಮಾಡಿ, ಎರ್ಡ್ ಮೊಣಕೈಯಿಂದ ಹಿಡ್ದ್ ಬೆರ್ಳ್ ಮುಟ್ಟ ರಾಸಿ ಒಳಗೆ ಹಾಕಿ, ಎಷ್ಟ್ ತೆಗಿಯಕೆ ಆದೆನೋ ಅಷ್ಟ್ ಬತ್ತನ, ಅಲ್ಲೇ ಎದ್‌ರ್ಲಿ ಇಸಿದ ತಡ್ಪೆಗೆ ಎರ್ಡ್ ಸರ್ತಿ ಹಾರ್ಸಿದೆ. ಅಂವನ ದೊಡ್ಡ ಕೈಂದ ತುಂಬಾನೇ ಬತ್ತ ಹಾರ್ದೆ. ಹಾರ್ದ ಬತ್ತನ ಕೊಯ್ಲ್ ಕೆಲ್ಸದವ್ಕೆ ಪಾಲ್ ಕಟ್ಟುವೆ. ಈ ಕ್ರಮ ಸುಳ್ಯದ ಕಡೆ ಇಲ್ಲದ್ದರೂ, ಕೊಡ್ಗ್‌ಗೆ ಸೇರ್ದ ಪೆರ್ಜ ಊರ್ಲಿ ಮಾತ್ರ ಚಾಲ್ತಿಲಿ ಇತ್ತ್. ಇದಿಕ್ಕೆ "ಅಡಿ ಮಣೆ ಪೊಲಿ" ಅಲ್ಲರೆ "ನೆತ್ತರ್ ಕೂಲಿ"ಂತ ಹೇಳ್ತಿದ್ದೊ.

ಕೊಯ್ಲು ಕಾಲಲಿ ಒಬ್ಬೊಬ್ಬಂಗೆ ಸುಮಾರ್ ಮೂವತ್ತ್ ಮೂವತ್ತೈದ್ ಸೇರ್ ಬತ್ತ ಸಿಕ್ತಿತ್ತ್. ಬೊಳ್ಪುನ ಚಾ ಮತ್ತೆ ಮದ್ಯನದ ಊಟ ದನಿಗಳ ಮನೆಲೇ ಆತಿತ್ತ್, ಹಾಂಗಾಗಿ ಇದ್ ಒಂದ್ ಗಂಟಾಗಿ ಒಳ್ಯತಿತ್ತ್. ಇದರ ಅಕ್ಕಿ ಮಾಡಿ ಕಷ್ಟದ ದಿನಕ್ಕೆ ಇರ್ಲಿಂತ ಜಾಗ್ರತೆ ಮಾಡಿ ಇಸ್‌ತಿದ್ದೊ. ಆಂದಿನ ಪಾಪದೊವ್ ಇಂದ್‌ನ ಹಾಂಗೆ ಡಬ್ಬಿ, ಗೋಣಿ, ಮಡಿಕೆ, ಪತ್ತಾಯಲಿ ತುಂಬುಸಿ ಇಸ್ತಿದದ್ದಲ್ಲ. ಅರ್ಗಾಲಲಿ ದಪ್ಪದ ಬೆದ್ರ್‌ನ ಅಡಿ ಗಂಟಿಂದ ಒಂದ್ ಗೇಣ್ ಕೆಳಗಿಂದ ತುಂಡು ಮಾಡ್ತಿದ್ದೊ. ಆ ಗಂಟ್‌ನ ಹಾಂಗೇ ಇಸಿಕಂಡ್, ಅದರ ಮೇಗಡೆ ಐದಾರ್ ಗಂಟ್

ಬುಟ್ಟು ಕೊಡಿ ಕಡಿಯತಿದ್ರೊ. ಆ ಮೇಲೆ ಕಾಗಡೆ ಗಂಟ್ ಬುಟ್ಟು ಒಳ್ದ ಗಂಟ್‌ಗಳ ಒಳಗೆಂದ ತೂಮುಗೋಲು ಹಾಕಿ ತೆಗ್ದ್, ಅದರ ಹೊಡಿನೆಲ್ಲ ಬಿಸಾಡಿ ಲಾಯ್ಕ್ ಮಾಡಿ ಅದರ ಹಸಿ ಕೋಕನ ಮುಟ್ಟ ಒಣ್‌ಂಗಿಸಿ
ಅಕ್ಕಿ ತುಂಬುಸಿ, ಅದಕ್ಕಾವ ಬೊಂಡದ ಚಿಪ್ಪಿನ ಮುಚ್ಚಿ, ನಾರ್ ತೆಗ್ದ ಒಣ ಹಾಳೆ ಕಟ್ಟಿ ಇಸಿರೆ, ಒಂದ್ ವೊರ್ಸ ಆದರೂ ಅಕ್ಕಿ ಹಾಂಗೇ, ಅಷ್ಟ್ ಲಾಯ್ಕ್ ಇರ್ದು. ಅದಿಕ್ಕೆ ಎಲಿನೂ ಬಾಕಿಲ್ಲೆ, ಹೆಗ್ಗಣನೂ ನುಗ್ಗಿಕ್ಕಿಲ್ಲೆ. ಹಾಂಗೆ ಮಾಚುನವು ಮೂರ್ ಬೆದ್ರ್ ಅಂಡೆಗಳಲಿ ಅಕ್ಕಿ ಮಾಡಿ ತುಂಬಿಸಿದೊ– ಮುಂದೆನ ಕಷ್ಟದ ದಿನಕ್ಕೆ ಇರಲಿಂತ. ಮಾಚುಗೆ ಈಗ ಎರ್ಡ್‌ನೇ ಕೂಸು ಹೊಟ್ಟೆಲುಟ್ಟು. ಎರ್ಡ್ ಮಕ್ಕಳ ಕಟ್ಟಿಕಂಡ್ ಹೇಂಗೆ ದಿನ ತೆಗಿಯೊದೊಂತ ಒಮ್ಮೊಮ್ಮೆ ಅದಿಕ್ಕೆ ಚಿಂತೆ ಆತಿತ್ತ್.

ಅದೇ ಸಮಿಯಲಿ, ಬ್ಯಾರ್ತಿ ಉಮ್ಮ ಎದೆ ಬೇನೆಂತ ಹೇಳಿಕಂಡ್ ಅರ್ದ ಗಂಟೆಲಿ ತೀರಿಕಂಡೊ. ಅದ್ ಮಾಚುನ ಇನ್ನೂ ದುಕ್ಕಕ್ಕೆ ತಳ್ಳಿತ್. ಅವು ಬೊದ್ಕಿ ಇದ್ದಿದ್ದರೆ ಅವರ ಮನೆಲಿ ಹೇಂಗಾರ್ ದಿನ ನೂಕಗಾಗಿತ್ತ್. ಇನ್ನ್ ಈ ಮನೆಲಿ ಇರ್ದು ಕಷ್ಟನೇಂತ ಅದರ ಮನ್ಸ್ ಹೇಳ್ತ್. ದನಿ ಬ್ಯಾರಿನ ಮಕ್ಕಳಿಗೆ, ಅಪ್ಪ ಅವ್ವನ ಬುದ್ದಿ ಬಾತ್‌ಲಾಗಿತ್ತ್. ಒಬ್ಬ ಎಲ್ಲೋ ದೂರ ಇರ್ದುಗಡ. ಬಾರೀ ಸಂಬಳದಂವಗಡ. ಅಂವ ಬಾಕನ ಗಟ್ಟಿ ಗಟ್ಟಿ ಚಿನ್ನ ತಂದದೆಂತ ಮಾತಾಡುದರ ಅದ್ ಕೇಳಿತ್ತ್. ಅದ್ ಅವನ ನೋಡ್ದೇ ಕಮ್ಮಿ. ಇನ್ನೊಬ್ಬ ಉಟ್ಟು ಬೆರೀ ರಾಜಾಟಿಕೆಯಂವ. ಬಿದ್ದಲ್ಲಿಂದ "ಏಯ್, ಅದ್ ಮಾಡ್, ಇದ್ ಮಾಡ್"ಂತ ಕಾರ್ಬಾರ್ ಮಾಡುದಲ್ಲದೆ ಒಬ್ಬನ ಚಕ್ಕಲೆ ಮಾತಾಡಿದಂವ ಅಲ್ಲ.

ಉಮ್ಮ ತೀರಿ ಹೋದ ಮೇಲೆ ದನಿ ಬ್ಯಾರಿಗೆ ಇದ್ದ ಸೀಕ್ ಮತ್ತೆ ಸಾ ಹೆಚ್ಚಾತ್. ಮಲ್ಗಿದಲ್ಲಿಂದಳೇ ಮಕ್ಕಳಿಗೆ "ಕೆಲ್ಸದವರ ಮನೆವರ ಹಾಂಗೆ ನೋಡಿಕಣೊಕು ಮಗಾ. ಅವ್ ದುಡ್ದರೆ ನಾವುಗೆ ಉಟ್ಟು, ನಾ ಇಷ್ಟ್ ಮಾಡ್ದ್, ನಾವೇ ದುಡ್ದ್ ಅಲ್ಲ. ನಾವುಗೆ ಅಲ್ಲಾ ಕೊಟ್ಟುಟು. ಅದರ ಒಂದ್ ಪಾಲ್ ನಾವು ಅವ್ಕೆ ಕೊಡೊಮೊ್"ಂತ ಹೇಳ್ತಿದ್ರೊ. ಅದ್ ಮಕ್ಕಳ ಕೆಬಿಗೆ ಬೀಳೋಕೇ?

ಒಂದ್ ದಿನ ಮಾಚು ಅವರ ನೋಡಿ ಮಾತಾಡ್ಸಿನೆಂತ ಅವರ ಮನೆಗೆ ಹೋತ್. ಅವರ ಕಷ್ಟ ಸುಖ ಕೇಳ್ತ್. ಅವು "ಯಾಗ ನಿನ್ನ ಬ್ಯಾರ್ತಿ ಉಮ್ಮ ಹೋತ್ಸ್, ಅಂದೇ ಇಲ್ಲಿದೆಲ್ಲಾ ಹೋತ್. ಮಕ್ಕ ಒಳೊ ಮನ್ಸರ ಮೂರಿ{ವಾಸನೆ} ಗೊತ್ತಿಲ್ಲದವು. ಅವರ ನಾವು ಸರಿ ಬೆಳ್ಸಿತಿಲ್ಲೆನೋಂತ ನಂಗೆ ಆದೆ. ನಾ ಸತ್ತ ಮೇಲೆ ಇವು ಏನ್ ಮಾಡ್ವೆನೋ ಏನೋ"ಂತ ಬಿಟ್ಟಿಸ್ರು ಬುಟ್ಟೊ, ಮತ್ತೆ ಹೇಳ್ದೊ "ಆತ್, ನನ್ನ ಕತೆ ಮುಗ್ತ್. ಆದಷ್ಟ್ ದಿನ ಇಲ್ಲಿ ಕೆಲ್ಸ ಮಾಡಿ. ಮತ್ತೆ ಹೋಗಿ. ಹಾರುವ ಹಕ್ಕಿಗಳಿಗೆ ಒಂದ್ ಮರ ಅಲ್ಲರೆ ಇನ್ನೊಂದ್ ಮರ ಇದ್ದದೆ. ಎಲ್ಲಾರ್ ನೀವ್ ಒಳ್ಳ ರೀತಿಲಿ ಬೊದ್ಕಿ ಅಷ್ಟೆ."ಂತ ಹೇಳಿ ಕಣ್ಣೀರ್ ಸುರ್ಸಿದೊ.

ಅವು ಮೊರ್ರುದರ ನೋಡಿ ಮಾಚುಗೆ ಸಾ ದುಕ್ಕ ಬಾತ್. ಅದ್ ಸಾ ಮೊರ್ರ್ಟಕಂಡೇ ಹೇಳ್ತ್.
ನೀವಾಗಲೀ, ಉಮ್ಮ ಆಗಲೀ ನಮ್ಮ ಎಲ್ಲ, ನಿಮ್ಮ ಮಕ್ಕಳ ಹಾಂಗೆ ನೋಡಿಕಂಡರಿ. ಬೇರೆ ಧರ್ಮದವ್ ಆದರೂ ಅದರ ನೀವು ಎಲ್ಲೂ ತೋರ್ಸಿಲ್ಲೆ. ಕೊಡುದರ್ಲಿ ನೀವು ಬೇದ ಮಾಡ್ತ್‌ಲೆ. ನಾವು ಬೇರೆ ಕಡೆಗೆ ಹೋದರೂ ಇಲ್ಲಿನಷ್ಟ್ ನೆಮ್ಮದಿಲಿ ಇರ್ವೊಂತ ನಂಗೆ ಆದ್‌ಲ್ಲೆ. ನಾನ್

ಇನ್ನ್ ನಾಕ್ ದಿನಲಿ ತೌರು ಮನೆಗೆ ಹೆರಿಕೆಂತ ಹೋನೆ. ನಿಮ್ಮ ಅನ್ನದ ರ್ಣಾನ ತೀರ್ಸಿಕೆ ನಮ್ಮ ಜನ್ಮಲಿ ಸಾದ್ಯ ಇಲ್ಲೆ. ನಿಮ್ಮ ಮತ್ತೆ ಉಮ್ಮನ ಉಪಕಾರನ ಒಮ್ಮೆ ಹೇಳಿ ಅಡ್ಡಬಿದ್ದ್ ಹೋನೆಂತ ಬಂದೆ"ಂತ ಹೇಳಿ ಬೊಗ್ಗಿ ನೆಲ ಮುಟ್ಟಿ ನಮಸ್ಕಾರ ಮಾಡ್ತ್. ಮಲ್ಗಿದಲ್ಲಿಂದಳೇ "ಆಗಲಿ, ಒಳ್ಳೆದಾಗಲಿ. ಅಲ್ಲಾ ಒಳ್ಳೇದ್ ಮಾಡಲಿ"ಂತ ಹೇಳ್ದೊ. ಇದೇ ಇವರ ಕಡೇಗೆ ನೋಡ್ದುಂತಾಗಿ ಮಾಚುಗೆ ದುಕ್ಕ ಉಕ್ಕಿ ಬಾತ್. ಬಿಕ್ಕಿಕಂಡ್ ಹೋತ್. ಅದ್ ಹೋಕನ ಅವರಷ್ಟಕ್ಕೆ ಅವು ಒಮ್ಮೆ ಎರ್ಡ್ನ್ ಕೈ ಮೇಲೆತ್ತಿ, "ನಾ ನಂದ ಆದಷ್ಟ್ ಒಳ್ಳದೇ ಮಾಡ್ತ್ರೂ ಹೀಂಗ್ಯಾಕೆ ಆತ್"ಂತ ಬೊದ್ಕುವ ಆಸೆ ಕಳ್ಕಂಡ ಹಾಂಗೆ ಅವರಷ್ಟಕ್ಕೆ ಜೋರ್ ಮೊರ್ತ್ರೊ

ಮಾಚು ತೌರ್ ಮನೆಗೆ ಹೋಕೆ ಮುಂದೆನೇ ಎಲುಂಬ, ಮಾಡಿಟ್ಟ ಅಕ್ಕಿ ತುಂಬ್ಸಿದ್ದ ಬೆದ್ರ್ ಅಂಡೆನ, ಅಲ್ಲಿಗೆ ತೆಕ್ಕೊಂಡ್ ಹೋಗಿ ಇಸಿತ್ತ್. ನಾಗೂರಿಂದ ಸುಳ್ಯ ಪೇಟೆ ವರೆಗೆ ಜೀಪು ಸಿಕ್ಕಿತ್ತ್. ಮತ್ತೆನ ದಾರಿನ ಅಂವ ಹೊತ್ತ್‌ಕೊಂಡೇ ಹೋಗಿತ್ತ್. ಎಷ್ಟೇ ಕಮ್ಮಿಂತೇಳ್ರೂ ಒಂದೊಂದರ್ಲಿ ಐದ್ಯೆದ್ ಸೇರ್ ಅಕ್ಕಿ ಆದರೂ ಇದ್ದಿರ್ದು. ಒಟ್ಟಿಗೆ ಹದಿನ್ಯೆದ್ ಸೇರಿಗೆ ಕಡ್ಮೆ ಇಲ್ಲಾಗಿತ್ತ್. ಪೆದ್ದೊಳ್ತಿಗೆ, ಕೂಸುನ ನೋಡಿಕೆ ಬಾವವ್ಕೆಂತ ಅವ್ವನ ಮನೆಯೊವ್ಕೆ ದೊಡ್ಡ ಬಂಜ ಆಕೆ ಬೊತ್ತುಂತ ಇವು ಆ ಅಕ್ಕಿನ ಅಲ್ಲಿಗೆ ಕಳ್ಸಿದ್ದೊ.

ಮಾಚು ವೀಳ್ಯಡ್ಕಕ್ಕೆ ಬಂದ ಮೇಲೆ ಮಲ್ಲುಗುವ ಕೋಣೆನ ಮೂಲೆಲಿ ಇಸಿದ ಅಕ್ಕಿ ಇದ್ದ ಅಂಡೆಗಳ ನೋಡಿ ಕುಸಿಲಿ ಹಕ್ಕಲೆ ಹೋಗಿ ಒಂದರ ಮೆಲ್ಲ ಆಡ್ಸಿತ್. ಅದ್ ಹಗ್ರಾಗಿ ಕಾಲಿ ಆದ್ದಂಗೆ ಅಲ್ಲಾಡ್ತ್. ಅರೆ, ಹಾಂಗಾರೆ ಅಕ್ಕಿ ಇಲ್ಲೆನಾಂತ, ನೋಡ್ರೆ ಮುಚ್ಚಿದ ಹಾಂಗೆ ಹಾಳೆ ಉಟ್ಟು! ಚೆಪ್ಪಿ ಇಲ್ಲೆ! ಒಳಗೆ ಕೈ ಹಾಕಿ ನೋಡ್ತ್, ಎಂತ ಉಟ್ಟು ಅಲ್ಲಿ? ಪೂರ ಕಾಲಿ! ಎರ್ಡ್ನೇ ಅಂಡೆನೂ ಬಾಯಿ ಬುಟ್ಟ್‌ಕಂಡೇ ಇತ್ತ್. ಮೂರ್ನೇದರ ಮುಟ್ಟಿಕನನೇ ಅದ್ ಕಾಲಿಂತ ಗೊತ್ತಾತ್.

"ಹೀಂಗೆ ಸಾ ಮಾಡ್ವೆನಾ? ಬೇರೆ ದಿನಗ ಆದರೆ ಸಾಯಲಿ, ಪೆದ್ದೊಳ್ತಿಗೆಂತ ತಂದದರ ಹೀಂಗೆ ಮಾಡ್ದೊಲೇ"ಂತ ಅದಕ್ಕೆ ಬಾರೀ ಬೇಜಾರ್ ಆತ್. ಯಾರ ಹಕ್ಕಲೆನೂ ಕೇಳ್ತ್‌ಲೆ. ಏನ್ ಮಾಡ್ದೊಳೊಂತ ನಿಧಾನಕ್ಕಾದ್ರ್ ಗೊತ್ತಾದಲೇಂತ ಎಲ್ಲರ ಸೂಕ್ಷ್ಮಲಿ ನೋಡಿಕೊಂಡಿತ್ತ್. ಅಕೇರಿಗೆ ಇದ್ ಬೇರೆ ಯಾರೂ ಅಲ್ಲ, ಅವ್ವಂದೇ ಕೆಲ್ಸಂತ ಅದಕ್ಕೆ ಕಂಡಿತ ಆತ್.

ಒಮ್ಮೆ ಅವ್ವನ ಹಕ್ಕಲೆ ಮಾತಾಡಿಕನ "ಈ ಸಲ ಪೆದ್ದೊಳ್ತಿಲಿ ಬಂಜ ಆದು ಬೇಡಾಂತ, ಕೊಯ್ಲು ಬತ್ತನ ಅಕ್ಕಿ ಮಾಡಿ ಕಳ್ಸಿದ್ದೆ. ಎಷ್ಟಾರ್ ಬಾವು ಹೋವುಂತ...." ಮಾಚು ಹಾಂಗೆ ಹೇಳಿಕಂಡ್ ಇರಿಕನ ಅವ್ವ "ಓ... ನಿಂಗೆ ಹೇಳ್ಕೆ ಮರ್ತ್ ಬುಟ್ಟೆ, ನಿನ್ನ ಸಣ್ಣ ಮಾಂವನ ಮಗಳ ಮೊದ್ವೆ ಸಮಿಯಲಿ ಅದರ ತೆಕಂಡ್ ಹೋಗೊಳೊ. ಮಾಚುನ ಹೆರಿಗೆ ಆದ ಹಾಂಗೆ ಅಕ್ಕಿ ತಂದ್ ಕೊಟ್ಟನೆಂತ ಹೇಳ್ಯುಟು. ಬೇಕಾದೊವ್ವುಂತ ಆಕನ ಅವರ ಕಷ್ಟಕ್ಕೆ ಕೊಡುದ್ಲೆಂತ ಹೇಳಿಕೆ ಆದ್ಲೆಲ್ಲಾ?. ಅಂವ ಕೊಡದೆ ಇರಿಕಿಲ್ಲೆ"ಂತ ಹೇಳಿಕಂಡೇ ಬೇರೆ ಕೆಲಸ ಇದ್ದವರ ಹಾಂಗೆ ಬೇಗ ಜಾಗೆ ಕಾಲಿ ಮಾಡ್ತ್. ಮಾಚುಗೆ ಇದ್ ಸತ್ಯನಾ ಸುಳ್ಳೋಂತ ಗೊತ್ತಾತ್ಲೆ. ನಿಜನೇ ಆಗಿದ್ದರೂ ಆ ಮಾಂವ ಮಹಾ ಕುಡ್ಕ. ಕೊಡಿಕಿಲ್ಲೆ. ಅಲ್ಲಾ, ಕೊಡುದಾರೂ ಪೂರ ಕೊಟ್ಟದೆಂತಕ್ಕೆ? ನನ್ನಲ್ಲೊಂದ್ ಮಾತ್ ಕೇಳ್‌ಬೇಡನಾ? ಅಲ್ಲಾ, ಇಲ್ಲೇ ಅಡಿಗೆ ಮಾಡಿ ಮುಗ್ಸಿದನೋ? ಹೀಂಗೆಲ್ಲ ಆಲಚನೆ ಮಾಡಿಕಂಡ್ ಹೊಟ್ಟೆ ಉರ್ಸಿಕಂಡತ್.

ಮಾಚು ಹೆತ್ತ್ ಹತ್ತ್ ಹದಿನೈದ್ ದಿನ ಆಗಿರ್‍ದು. ಒಂದ್ ಹಿಂಬೊತ್ ಕತ್ತಲಾಕ್ಕಂಡ್ ರ್‍ತಾ ಇತ್ತ್. ಮಾಚು ಕೂಸುನ ಮೀಸಿ, ಹೊಗೆ ಹಿಡ್ಸ್, ಕೆನ್ನೆಗೆ, ಹಣೆಗೆ ಕಪ್ಪು ಬೊಟ್ಟು ಇಸಿ, ಾಲ್ ಕುಡ್ಸಿ ಮುದ್ದು ಮಾಡಿಕಂಡ್ ಇತ್ತ್. ಅಷ್ಟೊತ್ತಿಗೆ, ಮೋರೆ ಬಾಪಿಸಿಕಂಡ್, ಅಂಗಿನೆಲ್ಲ ರ್‍ಕಂಡ್, ತಲೆ ಕಂತ ಹಾಕ್ಕಂಡ್ ಎಲುಂಬ ಬಾತ್. ಅವನ ನೋಡಿ ಮಾಚುನ ಎದೆಲಿ ಸಕ್ಕಂತ ಆತ್. ಬಂದಂವ ಹಾಂಗೆ ತಲೆ ಕಂತ ಹಾಕ್ಕೊಂಡೇ ಗೋಡೆಗೆ ಒರಗಿ ಕುದ್ದ್, ಅಯ್ಯಬ್ಬಾ"ಂತ ನೊರ್‍ಕಿ ಉಸ್ರ ಬುಟ್ಟತ್. ಅಂವ ಹಂಞ ಪೆದ್ದನೇ. ಏನಾತೋಂತ ಮಾಚು ೂಸುನ ತೊಟಿಗಿಲ್‌ಗೆ ಹಾಕಿ, ಒಮ್ಮೆ ಅದರ ಮೆಲ್ಲ ಒಚ್ಚಿ ಬುಟ್ಟ್, ಎಲುಂಬನ ಹಕ್ಕಲೆ ಬಂದ್ ುದ್ದ್ ಅವನ್ನೇ ನೋಡ್ತ್. ಮತ್ತೆ ಕೇಳ್ತ್ "ನಿಂಗೆ ಇದೆಲ್ಲ ಎಂತ ಆದ್ದ್?"

"ಇದ್ ಪೂರ ಆದ್ದ್ ಅಂಗಾರಂದ"

"ಕತೆ ಎಂತಂತ ಹೇಳ್"

ಎಲುಂಬ ಹೇಳಿಕೆ ಸುರು ಮಾಡ್ತ್.

"ಇಂದ್ ನಾವು ಕೆರೆಗದ್ದೆ ಹಕ್ಕಲೆ ಅಡಿಕೆ ತೆಗಿಯಕೆ ಹೋಗಿದ್ದೊ. ನಾ ಅಡಿಕೆ ಕೊಯ್ಯಕೆ. ಅಂಗಾರನೂ ಅವನ ದಿಕ್ಕಾಳ್ತಿನೂ ಅಡಿಕೆ ಹೆರ್‍ಕಿ ಹೊತ್ತ್‌ಕೊಂಡ್ ಹೋಕೆ. ನಾ ಅಡಿಕೆ ತೆಗ್ದ್ ಾಕ್ಕಂಡ್ ಇದ್ದೆ. ಅವು ಹೆರ್‍ಕಿಕೊಂಡ್, ಹೊತ್ತ್‌ಕೊಂಡ್ ಇದ್ದೊ. ತೋಟಲಿ ಎಲ್ಲೋ ಅಡಿಕೆ ುರ ಬಿದ್ದಿತ್ತೋ ಏನೋ? ಅಂಗಾರನ ಹೆಣ್ಣ್ ಅದರ ಪಿಂಗಾರ ತೆಗ್ದ್ ಮುಡ್ದಿತ್ತ್ ಕಂಡದೆ. ಅದ್ ಅಡಿಕೆ ಹೆರ್‍ಕಿಕಂಡೇ ಇತ್ತ್. ಅಂಗಾರ ಅದ್ ತುಂಬ್ಸಿ ಕೊಟ್ಟದರ ತೆಕೊಂಡ್ ಹೋತಿತ್ತ್. ಂಬೊತ್ ಕೆಲ್ಸ ಮುಗ್ಸಿ ದುಡ್ಡು ತೆಕಣೆಂತ ಹೋಕನ, ಅಂಗಾರ ದನಿ ಹಕ್ಕಲೆ ನಾ ತೋಟಲಿ ಅವನ ಹೆಣ್ಣ್‌ನ ಒಳ್ಳೆದ್ ಮಾಡಿಕೊಂಡ್ ಇದ್ದೆಂತ ಹೇಳ್ಯುಟು.

ನಾ ಹೋದ ಕೂಡಲೇ ದನಿ "ಹೌದಯಾ ಎಲುಂಬ, ನೀ ಅಡಿಕೆ ತೆಗ್ಯಿತಿದ್ದದಾ? ಅಲ್ಲಾ, ಅಲ್ಲಿದ್ದ ಹೆಳ್ಮಕ್ಕಳೊಟ್ಟಿಗೆ ಮಜಾ ಮಾಡ್ತಿದ್ದದಾ?"ಂತ ಕೇಳ್ತ್.
ಅದ್ ಕೇಳಿ ನಂಗೆ ಬೆಚ್ಚ ಆತ್. ನಾ ಸಿಟ್ಟ್‌ಲಿ ಕೇಳ್ದೆ "ನಾ ಯಾವ ಹೆಳ್ಮಕ್ಕಳ ಒಟ್ಟಿಗೆ ಮಜಾ ಮಾಡ್ದ್ಯೊಳೆ, ಹೇಳಿ"ಂತ.

ನಾ ಹಾಂಗೆ ಕೇಳ್ದ್ ಆತ್ಲೆ.

"ಬೇಡಾದ್ದ್ ಮಾಡಿಕಂಡ್ ಈಗ ಎದ್ರ್ ಉತ್ತರ ಕೊಟ್ಟೀಯಾ?"ಂತ ಬ್ಯಾರಿ ಕೋಪಂದ ಮೂಂಗ್ ಮುಸುಡ್‌ಂತ ನೋಡದೆ ನಂಗೆ ಸರಿ ಬಾಟಿಕಂಡ್ "ನೀ ಅಂಗಾರನ ಹೆಣ್ಣಿನೊಟ್ಟಿಗೆ ತೋಟಲಿ ಚಂಜಾಯಿ ಮಾಡಿಕಂಡ್ ಇತ್ಲಾಗಿತ್ತೆನಾ?"ಂತ ಕೇಳ್ತ್.
ಅದಕ್ಕೆ ನಾ "ನಾ ಅಡಿಕೆ ಕೊಯ್ಯಕೆ ಮರ ಹತ್ತಿರೆ ತೋಟದ ಎಲ್ಲಾ ಮರದ್ದ್ ಅಡಿಕೆ ತೆಗ್ದೇ ಇಳಿಯೊದು. ಸುಮ್ಮ ಸುಮ್ಮನೆ ಬೇಡದ್ದೆಲ್ಲ ಹೇಳ್ಬೇಡಿ. ನಾ ಬೇಡದರ ಮಾಡ್ದರ್ನ ನೀವ್ ನೋಡ್ದ್ಯೊಳರಿಯಾ ಅಲ್ಲಾ ಅಂಗಾರ ನೋಡ್ದ್ಯುಟಾ?"ಂತ ಕೇಳ್ದೆ.

"ನೋಡದೆ ಸುಮ್ಮನೆ ಹೇಳ್ದೆನಾ ಅಂವ?"ಂತ ಮೆಟ್ಟ್‌ಲಿ ಹೊಡ್ಯಕೆ ಬಂದೊ. ಆಗ ಅಲ್ಲಿದ್ದ ಮುತ್ತ ಹೇಳ್ತ್ "ದನಿಗಳೇ, ಮೆಟ್ಟ್‌ಲಿ ಹೊಡೀಬೇಡಿ. ನಮ್ಮ ದರ್ಮಲಿ ಮೆಟ್ಟ್‌ಲಿ ಪೆಟ್ಟ್ ತಿಂದಂವ ಸತ್ತ ಹಾಂಗೆ"ಂತ. ಆಗ ಆ ಬ್ಯಾರಿ ನನ್ನ ಹಿಡ್ದ್ ನೂಕಿತ್.

ಅಷ್ಟ್ ಹೇಳಿ ದೊಡ್ಡ ಸೊರಲಿ ಮೊರ್‍ಪ್‌ಕಂಡ್ ಹೇಳ್ತ್ "ನನ್ನ ಮೇಲೆ ಟೇಸನ್‌ಗೆ ದೂರು ಕೊಟ್ಟವೆಗಡ"

ಮಾಚುಗೆ ಎಲ್ಲಿ ಇಲ್ಲಾದ ಕೋಪ ಬಾತ್. ಪೋಲೀಸ್ ಟೇಸನ್‌ಗೆ ದೂರು ಮೆನಿ ಕೊಟ್ಟರೆಂತ ಹೆದ್ರಿಕೆನೂ ಆತ್. ಟೇಸನ್‌ಗೆ ದೂರು ಕೊಡಿಕನ ಏನೆಲ್ಲ ಸುಳ್ಳು ಪಳ್ಳ್ ಹೇಳಿ ಇವನ ಜೈಲಿಗೆ ಹಾಕಿರೆಂತ ತಲೆ ಗಿರ್‌ರ್ಂತ ಆತ್. ಮನ್ಸ್‌ಲೇ "ಅಲ್ಲಿ ನ್ಯಾಯ ಇಲ್ಲೆ. ದುಡ್ಡಿದ್ದವರ ಮಾತ್ ಕೇಳ್ ಅಲ್ಲದೆ ನಮ್ಮಂತ ಪಾಪದ ಕೆಳಜಾತಿನ ಜೆನಗಳ ಯಾರ್ ಕೇಳ್ವೆ? ಇಲ್ಲದರ ಹೇಳಿ ಹೊಡ್ಡದ್ ಸಾಲದ್‌ಂತ ಟೇಸನ್‌ಗೆ ದೂರು ಕೊಟ್ಟವೆಗಡ. ಕೊಡಲಿ ದೂರು. ನಾವುಗೆ, ಕೆಳಜಾತಿಯೊಳ್ವ ಅನ್ಯಾಯ ಮಾಡಿಕಾಗದ್‌ಂತ ಗಾಂಧಿ ಹೇಳ್ಯೊಳೊಗಡ. ಅಂತವು ಹೇಳಿದರ ಕೇಳ್ವವೇ ಇಲ್ಲೇಂತ ಆತಲೇ? ಹೀಂಗೆಲ್ಲ ನೆನ್ಸಿಕಂಡ್, ಎಲುಂಬನಲ್ಲಿ "ಸತ್ಯ ಹೇಳ್, ನೀ ಅದರ ಹಿಡ್ಯಕೆ ಹೋಗೊಳನಾ?"ಂತ ಕೇಳ್ತ್.

"ಹಿಡ್ಯಕೆ ಹೋವುದರಿಂದ ನಾ ಆ ಹೊಯ್ಮಾಲೆನ ಹಕ್ಕಲೆ ಮಾತೇ ಆಡುದಿಲ್ಲೆ."ಂತ ಹೇಳ್ ಬೇನೆಂದ "ಅಯ್ಯೋ"ಂತ ನೊರ್ಕ್ರಿತ್.

ಮಾಚುಗೆ ಅಂಗಾರನ ದರ್ವೇಸಿ ಬುದ್ದಿ ಗೊತ್ತಾತ್. ಎರ್ಡ್ ಮೂರ್ ವೊರ್ಸಕೆ ಹಿಂದೆ ಮಾಚು ಒಬ್ಬೆಳೇ, ಕೋರಿಂಜೆಲಿ ತೋಟಕ್ಕೆ ನೀರ್ ಚೇಂಪಿಕಂಡ್ ಇತ್ತ್. ಆಗ ಮಂಜಣ್ಣ ಮಾತಾಡಿಕಂಡ್ ಬಂದ ಅಂಗಾರ ಹಕ್ಕಲೆ ಹಕ್ಕಲೆ ಬಂದ್‌ಕಂಡ್ "ಮಾಚು, ಈ ಪ್ರಾಯಲಿ ಸಾ ನೀ ಎಷ್ಟ್ ಗಟ್ಟಿ ಒಳ. ನಂಗೆ ಮೊದ್ವೆ ಮನಿ ಆಗದಿದ್ದರೆ ನಿನ್ನನೇ ಮೊದ್ವೆ ಆತಿದ್ದೆ"ಂತ ಹೇಳಿದ್ದಕ್ಕೆ ಮಾಚು "ದೂರ ನಿತ್ತ್‌ಕಂಡ್ ಮಾತಾಡಿ. ನಾ ನಿಮ್ಮ ಅಣ್ಣಂತ ಕರ್‍ಯತ ಒಳೆ ಹಾಂಗೇ ತಿಳ್ಕಂಡಳೆ. ಕೆಲೊವು ಗಂಡಸರಿಗೆ ಹಾಂಗೇ-ದಟಿಗೆಲಿ ಮೇರ್ತಿ ಇದ್ದರೂ, ಮೊದ್ವೆ ಆದ ಬೇರೆ ಹೆಳ್ಮಕ್ಕಳ ನೋಡಿಕನ ತಡಿಯೊದ್ಲೆ. ಮೊದ್ವೆ ಆದ ಹೆಣ್ಣಿಗೇ ಹೀಂಗೆ ಮೋಸ ಮಾಡ್ವ ಇಂತ ದಗಲ್ಬಾಜಿ ಬುದ್ದಿ ಒಳ್ಳೇದಲ್ಲ. ಇನ್ನ್ ಮುಂದೆ ನನ್ನ ಹಕ್ಕಲೆ ಇಂತದೆಲ್ಲ ಮಾತಾಡ್ಬೇಡಿ"ಂತ ಸೊಂಟಲಿ ಸೆಕ್ಕಿಸಿದ್ದ ಕತ್ತಿನ ತೆಗ್ತ್. ಅಷ್ಟೇ.

ಅಂವ "ಹೋ..ಇದ್ ದೊಡ್ಡ ಪತಿವ್ರತೆ, ಸೀತೆ"ಂತ ಹೇಳಿಕಂಡ್, ಹೆಡೆ ತೆಗ್ದ ಹಾವು ಬುಸ್ಸ್‌ಂತ ಹೇಳ್ವ ಹಾಂಗೆ ಅಲ್ಲಿಂದ ಸರಸರ ಹೋತ್. ಅಂದ್ ದೊಡ್ಡ ದನಿಗ ಇದ್ದೊ. ಅವರ ಹಕ್ಕಲೆ ಇವನ ಬೇಳೆ ಬೇಯತಿತ್ಲೆ. ಈಗಣ ದನಿ ಅಂತವನೇ. ಅಂಗಾರನ ಹೆಣ್ಣ್ ಒಂದ್ ನಮುನೆದ್ದ್ ಗಂಡಸರೊಟ್ಟಿಗೆ ಕೆಲ್ಸ ಮಾಡುದೆಂದರೆ, ಮಾತಾಡುದೆಂದರೆ ಅದಕ್ಕೆ ಭಾರಿ ಕುಸಿ. ಎಲುಂಬಂಗೆ ಹೊಡ್ಡೆ ಬ್ಯಾರಿನ ಒಟ್ಟಿಗೆ ಅದ್ ಚಂಜಯಿ ಮಾತಾಡಿಕಂಡ್ ಇರುದರ ಮಾಚು ಎಷ್ಟೋ ಸಲ ನೋಡಿತ್ತ್. ಅದ್ ಅವರವರ ಸೊಂತ ಸಂಗತಿ. ಅಂತದರ ನಾವ್ಯಾಕೆ ಮಾತಾಡೋಕುಂತ ಮಾಚು ಸುಮ್ಮನಿತ್ತ್. ಅದ್ ಬುಟ್ಟು ಅಂಗಾರ ಅದರ ಹಕ್ಕಲೆ ಮಾತಾಡ್ದರ ಸಾ ಅದ್ ಯಾರ ಒಟ್ಟಿಗೆ ಹೇಳ್ತ್‌ಲಾಗಿತ್ತ್. ಅಂಗಾರ ಇಂದ್ ನನ್ನ ಮೇಲ್‌ನ ಹಗೆ ತೀರ್ಸಿಕೆ ಮಾತ್ರ ಎಲುಂಬಂಗೆ ಹೊಡ್ಸಿದ್ದ್‌ಂತ ನೆನ್ದ್ ಅದರ ಹೊಟ್ಟೆ ಉರ್ತ್. ನನ್ನ ಮೇರ ಪೆಟ್ಟ್ ತಿಂದ್‌ಕಂಡ್ ಬಾತ್‌ಂತ ಯಾರ ಹಕ್ಕಲಾದರೂ ಹೇಳ್ವ ಹಾಂಗೆ ಉಟ್ಟಾ? ಅದಕ್ಕೆ ತೋಟಲಿ ಎಲ್ಲೋ ಬಿದ್ದ್ ಬೇನೆ ಆಗುಟುಂತ ಹೇಳಿ ನೋವಿನೆಣ್ಣೆ ಕೇಳಿ ತಂದ್ ಅವನ ಬೇನೆಗಳಿಗೆ ಹಚ್ಚಿ ಬಿಸಿನೀರ್ ಹೊಯ್ತ್.

ನಲ್ವತ್ತ್ ದಿನ ಆಕೆ ಕಾದ್‌ಕಂಡಿದ್ದ ಮಾಚು, ಪೆದ್ದೋಳ್ತಿ ಅಮೆ ಕಳ್ದ ಲೆಕ್ಕಲಿ, ನಲ್ವತ್ತ್ ಮೀದ್, ಕೂಸುನ ಸಾ ಮೀಸಿ, ದೇವ್ರಿಗೆ ಹೂ ಹಣ್ಣ್ ಇಸಿ, ನನ್ನ ಕಷ್ಟಗಳ ನಿವಾರ್‍ಣೆ ಮಾಡ್‌ಂತ ಕೇಳಿಕಂಡ್ ಅಡ್ಡ ಬೀತ್. ಮೊರ್ದಿನಂದ ಅದ್ ಬೇರೆ ಕಡೆ ಕೆಲ್ಸ ಮಾಡಿಕೆ ಒಂದ್ ಮನೆಲಿ ಒಪ್ಪಿಕಂಡಿತ್ತ್. ಅದ್ಕಿಂತ ಮುಂದೆ ಅದಿಕೆ ಬೇರೆನೇ ಒಂದ್ ಕೆಲ್ಸ ಮಾಡಿಕೆ ಇತ್ತ್.

ನಲ್ವತೊಂದ್ನೇ ದಿನ ಮಾಚು, ಕೂಸುನ ಬೇಗ ಮೀಸಿ, ಅದ್ ಸೀದಾ ನೂಲಡ್ಕದ ಬ್ಯಾರಿ ಮನೆಗೆ ಹೋತ್. ಕೈಲಿ ಒಂದ್ ಕತ್ತಿ ಸಾ ಇತ್ತ್. ಎಲುಂಬಂಗೆ ಹೊಡ್ದಂವ ಅಲ್ಲೇ ಹೊಗೆ ಬುಟ್ಟ್‌ಕೊಂಡ್ ನಿತ್ತ್‌ತ್ತ್. ನಾಕೈದ್ ಹೆಳ್ಮಕ್ಕ ಅಡಿಕೆ ಚೊಲ್ಲಿಕೊಂಡ್ ಇದ್ದೊ. ಅಂಗಾರನ ಮೇರ್ತಿ ಸಾ ಇತ್ತ್. ಒಳ್ಳದೇ ಆತ್‌ಂತ ಸೀದ ಹೋಗಿ ಬ್ಯಾರಿನ ಎದ್ರ್ ನಿಂತತ್. ಅದ್ ಸಿಟ್ಟ್‌ಂದ ಹಾಂಗೇ ಹೆದ್ರಿಕೆಂದ ನೋಡ್ಡ್‌ಗ್ತಿತ್ತ್. ಸರಿ ಎದ್ರ್ ನಿತ್ತ ಮಾಚುನ ಮಾಂಕಾಳಿ ರೂಪನ ನೋಡಿ ದನಿ ಒಮ್ಮೆಗೆ ಬೆಚ್ಚಿ.. ಹಂಞ ಬೊಗ್ಗಿಕಂಡ್ ಇದ್ದಂವ ಸರ್ತ ನಿಂತತ್. ಆಗ ಮಾಚುಗೆ ದೈರ್ಯ ಬಾತ್. ಅಲ್ಲಿದ್ದವ್ಕೆ ಕೇಳ್‌ವಷ್ಟ್ ಗಟ್ಟಿ ಸೊರಲಿ "ಅಂದ್ ನನ್ನ ಮೇರಂಗೆ ಮೂಂಗ್ ಮುಸುಂಡ್ ನೋಡದೇ ಹೊಡ್ದರಿ ಅಲ್ಲಾ? ಅಂಗಾರನ ಮೇರ್ತಿ ನನ್ನ ಗಂಡನೊಟ್ಟಿಗೆ ಒಳ್ಳದ್ ಮಾಡೋಕಂದರೆ ಅಂವ ಗಂಡಸ್ ಅಲ್ಲನಾ? ಇಲ್ಲಿ ನಾಕೈದ್ ಹೆಳ್ಮಕ್ಕ ಒಳೊ. ಅವರ್ಲಿ ಕೇಳಿ ನನ್ನ ಮೇರ ಎಂತಂವಂತ. ಮೈ ಮುಟ್ಟುದು ಬುಡಿ, ಬೇಡಾದ ಮಾತ್ ಮಾತಾಡಿದ್ದ್ ಉಟ್ಟಾಂತ? ಹೋಗಿ, ಪೋಲಿಸ್ ಟೇಸನ್ಗೆ ದೂರು ಕೊಟ್ಟರೆನಾ? ಪೋಯಿ, ನಾನೂ ಬನ್ನೆ. ಗಾಂದೀಜಿ ಎಂತ ಹೇಳ್ತ್ಯೊಳೊ ಗೊತ್ತುಟ್ಟಾ? ಕೆಳ ಜಾತ್ಯವರ ನಾವು ಕೀಳಾಗಿ ಕಂಡೊ. ಇನ್ನ್ ಮುಂದೆ ಅವ್ಕೆ ತೊಂದರೆ ಕೊಟ್ಟವರ ಜೈಲಿಗೆ ಹಾಕೋಕುಂತ. ತೀರಿ ಹೋದ ದನಿ ಹೇಳಿದ್ದೊ "ನಾ ಹೋದ ಮೇಲೆ ನೀವ್ ಇಲ್ಲಿ ಇರ್ಬೇಡಿ"ಂತ. ಅವು ತೀರಿ ಹೋಕನನೇ ನಾವು ಇಲ್ಲಿಂದ ಹೋಕಾಗಿತ್ತ್. ನಾಕ್ ವರ್ಸಂದ ನಾವು ಇಲ್ಲಿ ದುಡೀತಾ ಒಳೊ. ನಮ್ಮ ಕಡ ತೀರಿರ್ದು. ಇನ್ನ್ ಮೆರ್ಯದೆ ಇಲ್ಲದೆ ನಾವಿಲ್ಲಿ ಇರ್ದುಲ್ಲೆ"

ಅಷ್ಟೊತ್ತಿಗೆ ಅಂವ "ಅದ್ಹೆಂಗೆ ಹೋದರೆ? ನಿಮ್ಮ ಕಡ ಇನ್ನೂ ತೀರಿತ್ಲೆ. ಅದ್ ಸಂದಾಯ ಆದ ಮೇಲೆ ಮಾತ್ರ ಹೋಕ್ಕಷ್ಟೆ"

"ಹೋ, ಹಾಂಗೆನಾ? ಸಾಲ ಸಂದಾಯ ಮಾಡಿಂತ ಹೇಳಿಕೆ ಸಾಲ ನೀವಲ್ಲ ಕೊಟ್ಟದ್ದ್. ಸಾಲ ಕೊಟ್ಟೊವ್ ತೀರಿ ಹೊಗ್ಯೊಳೊ"ಂತ ಹೇಳಿ,

ಸೀದ ಅಂಗಾರನ ಮೇರ್ತಿ ಹಕ್ಕಲೆ ಬೀಸ ಬೀಸ ಹೋಗಿ ಅದೇ ಜರ್ಬ್‌ಲಿ "ಹೌದಕ್ಕಾ, ಅಂದ್ ನನ್ನ ಜವ್ವನ ನಿನ್ನ ಹಿಡ್ಯಕೆ ಬಂದುಟುಂತ ಈ ಬ್ಯಾರಿ ಅವಂಗೆ ಹೊಡ್ದೊ ಅಲ್ಲಾ? ಧರ್ಮಸ್ಥಳದ ಆಣೆ ಹಾಕಿ ಹೇಳ್- ಅದ್ ಸತ್ಯನಾಂತ"

ಅಂಗಾರನ ಹೆಣ್ಣ್ ಎದ್ದ್ ನಿತ್ತ್ "ಬಿದ್ದ ಕಮ್ಮುನ ಪಿಂಗಾರನ ನಾ ಮುಡ್ದಿದ್ದೆ. ಅದ್ ಎಲುಂಬಣ್ಣ ತೆಗ್ದ್ ಕೊಟ್ಟದ್ದ್‌ಂತ ಸಂಸಯಲಿ ಅಂವ ಹೇಳ್ದ್. ಸುಮ್ಮನೆ ಅಪವಾದ ಹೇಳಿಕಾಗದ್. ಧರ್ಮಸ್ಥಳದ ಆಣೆ ಹಾಕಿ ಹೇಳ್ನೆ ಎಲುಂಬಣ್ಣ ನನ್ನ ಮುಟ್ಟಿತ್ಲೆ".

ಮಾಚು ದನಿ ಕಡೆಗೆ ತಿರ್ಗಿ "ಕೇಳ್ದರಿ ಅಲ್ಲಾ? ಅಂದ್ ನನ್ನ ಜವ್ವನನ ಕೊಂದೇ ಹಾಕ್‌ತಿದ್ದರಿ ಅಲ್ಲಾ?"ಂತ ಹೇಳಿ ಅವನ ಮೋರೆಗೆ ಉಗಿವ ಹಾಂಗೆ "ಥೂ"ಂತ ಹೇಳಿ ಹೊಟ್ಟೆಲಿದ್ದ ವಿಷನ ಹೊರಗೆ ಹಾಕಿ ಬಿರಬಿರಂತ ಹೋತ್. ಅಡಿಕೆ ಚೊಲ್ಲೋವು ಕೆಲ್ಸ ನಿಲ್ಸಿ, ಇದರ ನೋಡುದರ್ಲೇ ಬಾಕಿ! ದನಿ ಅವನ ಕೈಲಿದ್ದ ತುಂಡು ಬೀಡಿನ ಬಿಸಾಡಿ ತಲೆ ಬೊಗ್ಗಿಸಿಕಂಡ್ ಒಳಗೆ ಹೋತ್.

ಮಾಚುಗೆ ಒಂದ್ ಕಡೆಂದ ತಲೆ ಹಗ್ರ ಆಕನ ಇನ್ನೊಂದ್ ಕಡೆಂದ ತಲೆ ಬಾರ ಆಕೆ ಸುರು ಆತ್. ಇಲ್ಲಿ ಮುಟ್ಟ ದುಡಿಯಕೆ ಒಂದ್ ಮನೆಂತ ಇತ್ತ್. ಹೆಚ್ಚೋ ಕಮ್ಮಿನೋ ಕತ್ತಲೆ ಆಕನ ತೆಳಿ ಗಂಜಿಗೆ ಗೆತಿ ಇತ್ತ್. ಇನ್ನೆಂತ ಮಾಡ್ದು? ನಮ್ಮ ಅಕ್ಕಿನ ಇವು ಮುಗ್ಸ್‌ಯೊಳೊ. ಎಲುಂಬ ಒಬ್ಬ ಪೆಟ್ಟ್ ತಿಂದ್ ಎದ್ರಿಕೆ ಆಗದೆ ಮಲ್ಕಂಡ್ ಉಟ್ಟು, ನಂಗೆ ಒಂದ್ ಎರ್ಡ್ ವರ್ಷದ ಕೂಸು, ಇನ್ನೊಂದ್ ನಲ್ವತ್ತ್ ದಿನದ ಕೂಸು. ಇವರೆ

ಲ್ಲ ಕಟ್ಟಿಕಂಡ್ ನಾ ಎಷ್ಟ್

ದಿನಂತ ಈ ತೌರ್ ಮನೆಲಿ ಇರ್ದು? ಇನ್ನ್ ಎಂತ ಮಾಡ್ದು? ಎಲ್ಲಿಗೆ ಹೋದು?ಂತೆಲ್ಲ ಯೋಚನೆ ಮಾಡಿಕಂಡ್ ದಟಿಗೆಗೆ ಬಾಕನ ಕೂಸು ಮೊರ್ಲ್ಟ್‌ಕಂಡ್ ಇತ್ತ್. ಎಲುಂಬ ಕೂಸು ಮಲ್ಗಿದ್ದ ಚಕ್ಕಣನ ಅತ್ತಿತ್ತ ಆಡ್ಸಿಕಂಡ್, "ಜೋ"ಂತ ಹೇಳಿಕಂಡ್ ಉಟ್ಟು, ಅವಂಗೆ ಅವಂದೇ ಬೇನೆ, ಕೂಸುನ ಮೊರ್ಲ್ಡಾಟ ಎರ್ಡ್ ಸೇರಿ ಸಿಟ್ಟ್ ನೆತ್ತಿಗೆ ಏರಿತ್ತ್. ಇದರ ನೋಡ್ದ ಕೂಡ್ಲೇ "ಎಷ್ಟ್ ಹೊತ್ತ್? ಹೋದಲ್ಲಿ ದಟಿಗೆದ್ ಗೇನ ಬೇಡ? ನಾ ಹೇಂಗೆ ಒಳೆಂತ ಗೊತ್ತಿಲ್ಲೆನಾ?, ಇಷ್ಟ್ ಸಣ್ಣ ಕೂಸುನ ಬುಟ್ಟ್, ಒಂದ್ ಬೊಳ್ಪುಗೆ ಹೋದವ್ವು ಹಿಂಬೊತ್ ಆಕನ ಬಾದಾ? ನಂಗೆ ಮತ್ತೆ ಕೂಸಿಗೆ ಹೊಟ್ಟೆಗಾರೂ ಏನಾರ್ ಉಟ್ಟಾ?"ಂತೆಲ್ಲ ಸಿಟ್ಟ್ ಇಳಿವ ಮುಟ್ಟ ಬೊಯ್ತ್. ಬೇರೆ ದಿನ ಆಗಿದ್ದರೆ ಮಾಚು ಅಂವಂಗಿಂತ ಗಟ್ಟಿ ಸೊರಲಿ ಬೊಯ್ದ್, ಅವನ ಬಾಯಿ ಮುಚ್ಚಿಸ್ತಿತ್ತ್. ಇಂದ್ ಅವನ ಸೇಡ್‌ನ ತೀರ್ಸಿದ ಸಮ್ಮಾದ ಇದ್ದರಿಂದ ಎಲುಂಬನ ಮಾತ್ ಕೇಳ್ತೇ ಇಲ್ಲೆಂತ ಹೇಳ್ವ ಹಾಂಗೆ ಕೂಸುನ ತೆಕಂಡ್ ಗೋಡೆಗೆ ಒರ್‌ಗಿ ಕಣ್ಣ್ ಮುಚ್ಚಿಕೊಂಡ್ ಕುದ್ದ್, ಕೂಸುಗೆ ಹಾಲ್ ಕುಡ್ಸಿತ್. ಮುಚ್ಚಿದ ಅದರ ಕಣ್ಣೆದ್ರ್ ಬೊಳ್ಪುಗೆ ವೀಳ್ಯಡ್ಕಲಿ ನಡ್ದ ಕತೆ ಕಾಂಬೊತಿತ್ತೋ ಏನೋ.

ಮೊರ್ಲ್ದಿನಂದ ಕೆಲ್ಸಕ್ಕೆ ಹೋತಿದ್ದ ಎರ್ಡ್ ಮನೆಲಿ ಪಾತ್ರೆ, ಬಟ್ಟೆ ತೊಳ್ದ್, ಜಾಲ್ ಗುಡ್ಸಿ, ಇದ್ದ ನಾಲ್ಕ್ ನೆಟ್ಟಿಗಿಡಕ್ಕೆ, ಹೂವಿನ ಗಿಡಕ್ಕೆ ನೀರ್ ಹಾಕ್ವ ಕೆಲ್ಸಕ್ಕೆ ಹೋಕೆ ಸುರು ಮಾಡ್ತ್. ಅವರ ಹಕ್ಕಲೆ "ನಾವಿಬ್ಬರ್ ಗಂಡ ಹೆಣ್ಣ್ ದುಡಿವಂತ ಮನೆಗ ಯಾದಾದರ್ ಇದ್ದರೆ ಇಚಾರ್ಸಿ ಹೇಳ್ವರೆಯಾ"ಂತನೂ ಕೇಳಿಕಂಡತ್.

ಮೂರ್ನಾಲ್ಕ್ ದಿನ ಕಳ್ದಾಕನ ಒಂದ್ ಮನೆ ಹೆಂಗ್ಸ್ ಹೇಳ್ತ್ "ಂದಾ, ಮಾಚು, ನಿಂಗೆ ಕೆಲ್ಸಕ್ಕೆ ಒಂದ್ ಕಡೆ ಮಾತಾಡ್ಯೊಳೆ. ಕಲ್ಮಕಾರ್ ಕಡೆ. ಗೌಡ್ರುಗ. ಒಂದೇ ಮನೆಲಿ ಎರ್ಡ್ ಗೂಡೆಗ ಹೆರಿಕೆ ಒಳೊಗಡ. ಹಾಂಗೆ ಪೆದ್ದೋಳ್ತಿ ನೋಡಿಕೊಂಬಕೆ. ಯಾವ ಜಾತ್ಯವು ಆದರೂ ಆದ್‌ಗಡ. ಮನಾರದವು ಆಗಿರೋಕು. ಅದರ ಒಟ್ಟಿಗೆ ಹಸ್‌ಕರ್‌ಗಳ ಕೆಲ್ಸ ಸಾ ಉಟ್ಟು. ತೋಟಕ್ಕೆ ನೀರ್ ಬುಡುದು, ಅಡಿಕೆ ಹೆರ್ಕುದು, ಹಾಳೆ ಎಳಿಯೊದು-ಇಂತದೆಲ್ಲ ಉಟ್ಟು. ಅವ್ಕೆ ಆದಾಂತ ಕೇಳಿ ಹೇಳ್ಂತ ಹೇಳ್ಯೊಳೊಂತ ಹೇಳಿ, ಅವರ ಮಾತ್ ಮುಗಿಯಕೆ ಮುಂದೆನೇ ಮಾಚು "ಹಾಂಗಾರೆ ಯಾಗ ಹೋಕು"ಂತ ಕೇಳ್ತ್. "ಅದ್ ನಾ ಕೇಳಿ ಹೇಳ್ನೆ."

ಮಾಚುನ ಮನ್ಸ್ ಹೇಂಗಾಗಿತೇಳ್ರೆ "ನರಕಲಿ ಕೆಲ್ಸ ಮಾಡೊಕು"ಂತೇಳ್ರೂ ಅದಿಕ್ಕೂ ಅದ್ ತೆಯಾರೇ. ಹೇಂಗಾರ್ ಅದರ ಎರ್ಡ್ ಸಣ್ಣ ಕೂಸುಗಳ ಸಾಕೊಕಲೇ?

ಆಗ ಕಡಪಳದವರ್ದ್ ಸುಬ್ರಮಣ್ಯ ಮುಟ್ಟ ಹೋವ ಒಂದ್ ಬಸ್ ಇತ್ತ್. ಅದರ್ಲಿ ಇವರ ಕಳ್ಸೋಕುಂತ ಮತ್ತೆ ಅವು ಸುಬ್ರಮಣ್ಯಕ್ಕೆ ಎತ್ತಿದ ಮೇಲೆ ಎಲ್ಲಿ ಇರೋಕು? ಅವರ ಕರ್ಕಂಡ್ ಹೋಕೆ ಎಷ್ಟ್ ಹೊತ್ತಿಗೆ ಬಂದವೆಂತೆಲ್ಲ ಕಲ್ಮಕಾರಿನೊವು ಕೆಲ್ಸಕ್ಕೆ ಹೇಳ್ದ ಮನೆವ್ಕೆ ತಿಳ್ಸಿದೊ. ಮಾಚುಗೆ ಇದ್ ಸುಬ್ಬಪ್ಪನ ದಯೆಂತ ಆತ್. ಅಲ್ಲಿಂದಲೇ ದೇವ್ರಿಗೆ ಕೈ ಮುಗ್ದ್ "ನಮ್ಮ ಕಷ್ಟ ನಿವಾರ್ಣೆ ಮಾಡಿ ಒಳ್ಳೆದ್ ಮಾಡ್ ಸುಬ್ಬಪ್ಪಾ"ಂತ ಹೇಳಿಕಂಡತ್. ಅಂದಂದ ಇದ್ದ ಬದ್ದ ಬಟ್ಟೆ ಬರೆಗಳ ತೊಳ್ದ್ ಒಣ್‌ಗಿಸಿ, ಬೇರೆ ಅಗತ್ಯದ ಸಾಮಾನುಗಳ ಕಟ್ಟಿಕೆ ಸುರು ಮಾಡ್ತ್. ಹೋಕೆ ಎರ್ಡ್ ದಿನ ಮುಂಚೆ ಅವ್ವಂಗೆ ಹೇಳ್ತ್. ಅವ್ವಂಗೆ ಕುಸಿ ಆತ್ ಎರ್ಡ್ ಜನ ಉಂಬ ಅಕ್ಕಿ ಒಳ್ತಲೇಂತ!

ಹಾಳೆ 17
ಕಲ್ಮಕಾರ್‌ಲಿ

ಬಿಸುಗೆ ಒಂದ್ ಹತ್ತ್ ದಿನ ಇರಿಕನ ಕಲ್ಮಕಾರ್‌ನೊವು ಇಂತ ದಿನ ಬರೋಕುಂತ ?ಿ ಕಳ್ಸಿದೊ. ಒಂಬತ್ ಗಂಟೆಗೆ ಬಸ್ ಬಾದಾದರೆ ಇವು ಎಂಟ್ ಗಂಟೆಗೇ ಬಸ್ ್ವಲ್ಲಿಗೆ ಹೋಗಿ ಒಂದ್ ಕರೆಲಿ ಕುದ್ದೊ. ಬಸ್ ಬಾತ್. ಇವು ಹತ್ತಿದೊ. ಮಾಚುನ ಮಕ್ಕ ್ಲಿ ಕುದ್ರುದು ಇದೇ ಸುರು. ಬಸ್‌ಲಿ ಕುದ್ರುದ್‌ಂತೇಳ್ರೆ ಅವ್ಕೆ ಏನೋ ಗಮ್ಮತ್ತ್, ಕುಸಿ!. ರೂ ಇಲ್ಲದ ಹಿಂದೆನ ಸೀಟ್‌ಲಿ ಇವು ಕುದ್ದೊ. ಎದ್ರ್ ಬೇಕಾದಷ್ಟ್ ಜಾಗೆ ಕಾಲಿ ಇತ್ತ್. ಡ್ಡಂವ ಎದ್ರ್ ಕುದ್ದನೆಂತ ಮುಂದೆ ಓಡ್ತ್. ಮಾಚು ಮುಂದೆ ಹೋಗ್ಬೇಡಂತ ಹೇಳ್ರೂ ಮುಂದೆನೇ ಕುದ್ರುದುಂತ ಹಟ ಮಾಡ್ತ್. ಆಗ ಅದ್ ನಿಂಗೆ ಮಿಟಾಯಿ ತೆಗ್ಸಿ ಕೊಟ್ಟನೆಂತ ಳಿ, ಗಂಡನ ಹಕ್ಕಲೆ ಮಿಠಾಯಿ ತಾಕೆ ಹೇಳ್ತ್. ಮಿಟಾಯಿ ಕೊಟ್ಟ್, ಆ ಮೇಲೆ ಅವನ ಕಿ ಹಕ್ಕಲೆ ಕುದ್ರಿಸಿ, "ಬಸ್ ಹೋಕನ ಇಲ್ಲಿಂದ ಹೊರಗೆ ನೋಡು, ಎಷ್ಟ್ ಪೊರ್ಲು ಡದೆಂತ ಗೊತ್ತಾದ್"ಂತ ಅವನ ಎದ್ರ್ ಹೋಗದ ಹಾಂಗೆ ಮಾಡ್ತ್. ಮತ್ತೆ ಹೇಳ್ತ್ "ನಾವು ದೊವು. ಕೆಲ್ಸದೊವು ದೊಡ್ಡ ಜನಗಳೊಟ್ಟಿಗೆ ಕುದ್ರಿಕಾಗದ್. ಕುದ್ದರೆ ಸಾ ಅವು ನಮ್ಮ ್ಸುವೆ"ಂತ ಸಮ್ಧಾನ ಮಾಡ್ತ್. ಅವಂಗೆ ಅದ್ ಹೇಳ್ದ್ ಎಷ್ಟ್ ಅರ್ತ ಆತೋ? ಮಿಠಾಯಿ ಂಪುದರ್ಲೇ ಇದ್ದಂವ ಅವ್ವನ ಮಾತ್‌ನ ಲೆಕ್ಕಕ್ಕೆ ತೆಕಂತಿಲ್ಲೆ.

ಸುಬ್ರಹ್ಮಣ್ಯಕ್ಕೆ ಎತ್ತಿದ ಮೇಲೆ ಕಲ್ಮಕಾರ್‌ನವು ಕರ್ಕಂಡ್ ಹೋಕೆ ಹಂಞ ಹೊತ್ತು ಟ್ಟುಂತ ಇವು ಬೇಗ ದೇಸ್ತಾನಕ್ಕೆ ಸುತ್ತು ಹಾಕಿ ಬಾಮೊಂತ ಹೋಗಿ, ಸುತ್ತು ಬಂದ್, ರಾಂಗಣಲಿ ದೇವ್ರ ಎದ್ರ್ ಅಡ್ಡ ಬಿದ್ದ್ "ದೇವರೇ, ಹೋದಲ್ಲಿ ಒಳ್ಳೇದ್ ಮಾಡ್"ಂತ ಳ್ಕಂಡೊ. ಮತ್ತೆ ಮಾಚು ಎಲ್ಲರ ತಲೆಗೆ ಮೂರ್ ಮೂರ್ ಸಲ ಸುತ್ತಿ ತೆಗ್ದ್, ಅವರ ಬಕ್ತಿನ ಲ್ಕಾಣೆನ ಕಾಣಿಕೆ ಡಬ್ಬಿಗೆ ಹಾಕಿತ್. ಅಲ್ಲಿಂದ ನೆಟ್ಟಂಗೆ ಬಂದ್, ದೇಸ್ತಾನದ ಎದ್ರ್ ಪುತ್ತೂರ್‌ಗೆ ಗ್ಗುವ ರಾಜ ಮಾರ್ಗದ ಒಂದ್ ಪುಡೆಲಿದ್ದ ಅಂಗಡಿನ ಚಿಂಟೆನ ಕೊಡಿಲಿ, ಕಲ್ಮಕಾರ್ನವು ಳ್ದಲ್ಲಿ ಕುದ್ದ್‌ಕೊಂಡೊ. ಎಲುಂಬ ಮಾತ್ರ ನೆಲಲಿ, ಕೊಕ್ಕಪ ಕುದ್ದಂವ, ಎಡ ಕೈನ ಕೆನ್ನೆಗೆ ಟ್ಟ್, ಬಲಗೈನ ಬಲಮೊಣ್ಕಾಲ್ ಮೇಲೆ ಉದ್ದೊಕೆ ನೀಂಡಿ ಇಸಿ, ಗೂಟಕ್ಕೆ ಹೊಡ್ದ ಚಿತ್ರದ ಂಗೆ, ಅಲ್ಲಾಡ್ದೆ ಜೆನಗಳ ನೋಡಿಕಂಡಿತ್ತ್. ದೊಡ್ಡ ಕೂಸು ಸುತ್ತ ಇದ್ದ ಅಂಗಡಿಗಳ ೋಡ್ತಿತ್ತ್.

ಹೆಚ್ಚ್ ಹೊತ್ತಾತ್ಲೆ. ಡಗ್ ಡಗ್‌ಂತ ಸದ್ದ್ ಮಾಡಿಕಂಡ್, ಒಂದ್ ಜೀಪು ಬಂದ್ ಸರಿ ವರ ಎದ್ರ್‌ಲೇ ದಡ್ಕ ಬಡ್ಕಂತ ನಿಂತತ್. ಜೀಪುನವು ಸರಿ ಅಂದಾಜಿ ಮಾಡಿಕಂಡೇ ಜೀಪು ್ಸಿದ್ದೊ. ಒಬ್ಬ ಜವ್ವನ ಜೀಪುಂದಳೇ ನಿಲ್ಕಿ ನೋಡಿ "ನೀವು ಸುಳ್ಯಂದ ಬಂದವೊ?"ಂತ ಳ್ದೊ. ಎಲುಂಬ ಪಟ್ಟಂತ ನಿತ್ತ್ ಕೈ ಮುಜ್ಕಿಕಂಡ್ "ಹೌದ್"ಂತ ಹೇಳ್ತ್.

ೀವಿಲ್ಲಿ ಐದ್ ನಿಮ್ಷ ನಿಲ್ಲಿ. ನಾ ಈಗ ಬಂದೆ"ಂತ ಡಗ್ ಡಗ್ ಸದ್ದ್ ಮಾಡಿಕಂಡ್ ಮತ್ತೆ ೀಪುಲಿ ಹೋದೊ. ಕಿಟ್ಟು ಕಣ್ಣ್ ಬಾಯಿ ಬುಟ್ಟ್‌ಕೊಂಡ್ ಜೀಪುನ ನೋಡ್ತ್. ಅದ್ ಣದಷ್ಟ್ ದೂರ ಹೋದ ಮೇಲೆ, ಅವ್ವನ ಹಕ್ಕಲೆ ಕೇಳ್ತ್ "ಮತ್ತೆ ನಾವು ಈ ಜೀಪುಲಿ ೋದಾ?"ಂತ. ಮಾಚು "ಹೌದ್"ಂತ ಹೇಳ್ತ್. ಅವಂಗೆ ಏನೋ ಕುಸಿ ಆತ್. ಅಂವ ಜೀಪು ೋಡ್ದೇ ಕಮ್ಮಿ. ಈಗ ಅದರ್ಲೇ ಕುದ್ದ್‌ಕಂಡ್ ಹೋದುಂತೇಳ್ರೆ!

ಹೇಳ್ದ ಹಾಂಗೆನೇ ಐದ್ ನಿಮ್ಷಲಿ ಅವು ಬಂದೊ. ಇವರ ಎದ್ರೇ ಜೀಪು ನಿಲ್ಲಿ ಇಳ್ಧೊ. ಇವರ ಎಲ್ಲರ ಒಮ್ಮೆ ನೋಡಿ ಜೀಪುನ ಹಿಂದೆ ಬಾಗ್ಲ್ ತೆಗ್ಧೊ. ಸೀಟ್‌ನ ಅಡೀ ಇದ್ದ ಒಂದ್ ದಪ್ಪದ ಮೋಡ್ಚಿ ಇಸಿದ್ದ ಗೋಣಿನ್ ಎಳ್ದ್ ಹೊರಗೆ ಕೊಡ್ಕಿ, ಒಳಗೆ ಹಾಸಿ "ಹತ್ತಿ"ಂತ ಹೇಳ್ಧೊ. ಎಲುಂಬ ಸುರು ಕಿಟ್ಟನ ಹತ್ತಿಸಿ ಕುದ್ರಿಸಿತ್. ಆ ಮೇಲೆ ಮಾಚು ಕೂಸು ಹಿಡ್ಕಂಡ್ ಹತ್ತಿತ್. ಅಕೇರಿಗೆ ಎಲುಂಬ ಗಂಟ್ ಮೂಟೆಗಳ ಇಸಿ ಕಿಟ್ಟನ ಹಕ್ಕಲೆ ಕುದ್ದತ್. ಗಾಡಿ ಗಡಗಡಂತ ಆಕನ ಕಿಟ್ಟಂಗೆ ಹೆದ್ರಿಕೆ ಆತೋ ಏನೋ, ಅಪ್ಪನ ತೊಡೆ ಮೇಲೆ ಕುದ್ದತ್. ಹೊರಗೆ ನೋಡಿಕೊಂಡ್ ಕುದ್ದಂವ, ಅಲ್ಲೇ ಎಲುಂಬನ ತೊಡೆಲಿ ಮಲ್ಗಿತ್. ಅವಂ ವಿಮಾನಲಿ ಹೋದೋಂತೇಳ್ವ ತರದ ಕುಸಿ! ಅಲ್ಲೇ ಒಳ್ಳ ನಿದ್ದೆ!

ಸುಬ್ರಹ್ಮಣ್ಯಂದ ಎಂಟ್ ಹತ್ತ್ ಮೈಲಷ್ಟ್ ದೂರಕೆ ಡಾಮರ್ ಮಾರ್ಗ. ಮ ಮೊಣ್ಣ್ ದಾರಿ. ಜೀಪು ಹೋಕನ ಬುಸ್‌ಂತ ದೂಳು ಎದ್ದ್‌ರ್‌ತಿತ್ತ್. ಜೀಪುನ ಮೇಲ್ ಇವರ ಮೇಲೆಲ್ಲ ದೂಳು. ಅಲ್ಲಲ್ಲಿ ಹೊಂಡ ಗುಂಡಿ. ಬ್ರೇಕ್ ಹಾಕಿಕನ ಇವರ ನೂಕಿದ ಹಾಂಗೆ ಆತಿತ್ತ್. ಜೀಪು ಹೋದ್ಧಂಗೆ ಹೋದ್ಧಂಗೆ ಕಾಡ್‌ಂತೇಳ್ರೆ ಕಾಡ್. ಬಾನ ಮೂಸ್ವಂಗಿದ್ದ ಮರಗ! ದಾರಿ ನೊಡುಲಿ ಹರಿವ ಸಣ್ಣ ಸಣ್ಣ ಚೋಡಿಗ! ಮರಂದ ಮರ ಲಾಗ ಹಾಕ್ವ ಮಂಗಗ! ಅಲ್ಲಿ ಇಲ್ಲಿ ಕೇಳ್ವ ಹಕ್ಕಿಗಳ ಚಿಲಿಪಿಲಿ! ಮಾಚುಗೆ ಇಂತದೆಲ್ಲ ಕುಸಿನೇ ಹಾಂಗೆ ಹಿಂದಿಂದಳೇ ಜೀಪು ಬುಡ್‌ವವರ ನೋಡ್ತ್. ಸುಮಾರ್ ಮೂವತ್ತ್ ಮೂವತ್ತೆರಡ ವೊರ್ಸದ ಜವ್ವನ. ನೆಗೆ ಮೋರೆ. ಅವನಷ್ಟಕ್ಕೆ ಸಣ್ಣ ಸೊರಲಿ ಏನೋ ಹಾಡ್ತಿತ್ತ್. ಎಡೆ ಎಡೆಲಿ ಮಾತಾಡ್ತಿದ್ದೊ. "ಸುಳ್ಯಲಿ ಎಲ್ಲಿ?", "ಸುಬ್ರಮಣ್ಯಕ್ಕೆ ಇದೇ ಸುರು ಬಂದದ್ದಾ?" "ತೋಟದ ಕೆಲ್ಸ ಗೊತ್ತುಟ್ಟಾ?" "ಅಡಿಕೆ ಕೊಯ್ಯಕೆ ಆದೆನಾ?" ಹೀಂಗೆ. ಮತ್ತೊಮ್ಮೆ ಹೇಳ್ತ್ "ನಮ ಕಲ್ಮಕಾರ್ ದಾರಿ ಅರ್ಗಾಲಿಲಿ ದೂಳು. ಮಳ್ಗಾಲಲಿ ಒಂದ್ ಅಂಡಮಾನ್. ಅತ್ತನವು ಅತ್ತ ಇತ್ತನವು ಇತ್ತ. ಹಾಂಗಾಗಿ ಕಲ್ಮಕಾರ್ ಹೈದಂಗಳ ಯಾವ ಗೂಡೆನೂ ಒಪ್ಪುದಿಲ್ಲೆ"{ನೆಗೆ} ಜನ ಹಂಞ ಕುಸಾಲಿನವೇಂತ ಮಾಚುಗೆ ಇವರ ಹಕ್ಕಲೆ ಮಾತಾಡಕ್ಕಂತ ಆತ್. ಅದಿಕ್ಕೆ ಸಲಿಗೆಂದಳೆ ಕೇಳ್ತ್ "ನೀವುಗೋ?" ಅವು ಮತ್ತೆ ಗಟ್ಟಿ ನೆಗಾಡಿ "ಹೇಳ್ದೆ ಅಲ್ಲಾ? ಇಲ್ಲಿಗೆ ಯಾರ್ ಗೂಡೆಗ ಕೊಡುದಿಲ್ಲೆ. ಮನೆವು ಒಪ್ಪಿರೂ ಗೂಡೆಗ ಒಪ್ಪುದಿಲ್ಲೆಂತ". ಮಾಚು ಹಂಞ್ಞ ಮಾತಾಡ್ವವಳೇ "ಹಾಂಗಾರೆ ಮನೆ ಕೆಲ್ಸ ಎಲ್ಲಾ ಅವ್ವ ಒಬ್ಬೆನೇ ಮಾಡುದಾ?"

"ಹುಗ್ಗವ್ವ ಒಳೊ. ಅವು ಪ್ರಾಯದವು. ಹೊರಗಿನ ಕೆಲ್ಸಕ್ಕೆಂತ ಇಬ್ಬರ್ ಹೆಳ್ಮಕ್ಕ ಒಳೊ. ಅವ್ಕೆ ಸ ಸೊಂತದ್ದ್ ಜಾಗೆ, ತೋಟ ಎಲ್ಲಾ ಉಟ್ಟು. ಕೆಲ್ಸಕ್ಕೆ ಬಂದೇ ಆಕುಂತೇನ್ ಇಲ್ಲೆ. ಮತ್ತೆ ಅವ ನಂಬಿಕಂಡ್ ಇರಿಕೆ ಸಾ ಆದ್‌ಲ್ಲೆ. ಅದಕ್ಕೆ ನಿಮ್ಮ ಬಾಕೆ ಹೇಳ್ದ್."ಂತ ಹೇಳ್ಧೊ.

"ಹೆರಿಕೆ ಇರುದು ನಿಮ್ಮ ತಂಗೆಕ್ಕಳಾ?"

"ಅಲ್ಲ, ಒಂದ್ ತಂಗೆ, ಒಂದ್ ಅಕ್ಕ".

ದಾರಿಲಿ ಇಕ್ಕ್, ಇಕ್ಕ್ ಆಗಿ ಮುರ್ದ್ ಹೋದ ಬೈನೆ ಮರದ ತುಂಡುಗ ಹರಾಂ ಆಗಿ ಬಿದ್ದ್‌ಕಂಡ್ ಇದ್ದೊ. ಅವು ಹೇಳ್ಧೊ "ನಾವುಗೆ ಈ ಆನೆಗಳ ಕಾಟಂದಾಗಿ ಬಾರಿ ಹೆದ್ರಿಕೆ. ನಮ್ಮ ನೆರೆಕರೆಲೇ ಮೊನ್ನೆ ತೋಟಕ್ಕೆ ಹೋಗಿದ್ದ ಒಬ್ಬನ ಕೊಂದೇ ಹಾಕಿ ಬುಟ್ಟುಟು ಒಮ್ಮೆ ಬಾಕನ ಎಂಟ್, ಹತ್ತ್ ಆನೆಗ! ಅವು ಬಂದ್ ನುಗ್ಗಿದೊಂತೇಳ್ರೆ ತೋಟ ಮೂರಾ ಹೊಡಿಹೊಡಿ! ಯಾರ ಹಕ್ಕಲೆ ಹೇಳ್ದು? ಆನೆ, ಮಂಗ, ಕಾಡ್ ಹಂದಿಂತ ನಮ್ಮ ಬೊಡ್ಧಿಕ

ಬುಡುದ್ಲೆ. ಕೂಲಿ ಮಾಡ್ರೊ ತೊಂದರೆ ಇಲ್ಲೆ, ಪೇಟೆವ್ಕೆ ಈ ತೊಂದರೆಗ ಇಲ್ಲಲೇ? ನೆಮ್ಮದಿಲಿ ಇರಕ್ಕ್. ನಮ್ಮ ಹಾಂಗೆ ಅಲ್ಲಪ್ಪಾ. ಯಾರಿಗೂ ಬೇಡ ಈ ಹಳ್ಳಿ ಬೋದ್ಕ್!"

ಮಾಚು ಅವರ ಇಂಥ ಬಂಜನ, ಇವರ ಬೋದ್ಕ್ ಒಟ್ಟಿಗೆ ಹೋಲಿಕೆ ಮಾಡ್ತ್. ಹೊಟ್ಟೆಗೆ ಇಲ್ಲದೆ ಇರ್ದು. ಯಾಗ ಏನ್ ಆದೆನೋಂತ ಹೇಳ್ವ ಚಿಂತೆ ನಾವುಗೆ ಪೇಟೆಯವ್ಕೆ ಇಲ್ಲೆಂತ ನೆನ್ಸಿಕಂಡ್, ಕಟ್ಟಿಕಂಡ್ ಬಂದ ಎಲಡಿಕೆ ಸಂಚಿನ ಬಿಚ್ಚಿ, ಎಲಡಿಕೆನ ಬಾಯಿಗೆ ಹಾಕ್ಕಂಡ್, ಮಾತಾಡದೆ ಕುದ್ದ ಎಲುಂಬಂಗೆ ಕೊಟ್ಟತ್. ಜೀಪು ಬಡ್ಕ ಬಡ್ಕಂತ ಹೋಕ್ಕಂಡ್ ಇತ್ತ್. ಕಾಡ್ ಕಾಡ್! ದೂರ ದೂರಲಿ ಒಂದೊಂದ್ ಮನೆಗ. "ಹೇಂಗಿದ್ದವಪ್ಪಾ ಈ ಊರ್‍ಲಿ"ಂತ ಮನ್ಸ್‌ಲಿ ಹೇಳಿಕಂಡತ್. ಹೋಗ್ತಾ ಇದ್ದ ಜೀಪು ಒಮ್ಮೆಗೆ ಧಢಕ್ಕಂತ ನಿತ್ತತ್. ಇವು ಕುದ್ದಲ್ಲಿಂದ ಅಡ್ಡ ಬೀಳ್ವ ಹಾಂಗೆ ಆಡ್ತ್. ಮುಗ್ಗ್‌ರ್‍ಸಿದಲ್ಲಿಂದ ಕುದ್ದ್ ಎದ್ರ್ ನೋಡ್ವೆ ಕಾಳಿಂಗ ಸರ್ಪ ಒಂದ್ ಜೆಡೆ ಬುಡ್ಸಿ ಜೀಪಿಗೆ ಅಡ್ಡ ನಿತ್ತ್‌ಟು. ಇಷ್ಟ್ ದೊಡ್ಡ ಹಾವ್ ಜೆಡೆ ಬುಡ್ಸಿ ನಿಂತದರ ಇವು ನೋಡ್ದ್ ಇದೇ ಸುರು! ಅಬ್ಬ! ಆ ಜೆಡೆನೋ! ಸಣ್ಣ ಕೊಡೆನ ಬುಡ್ಸಿ ಇಸಿದ ಹಾಂಗೆ ಕಾಂಬತಿತ್ತ್. ಮಾಚು ಅಲ್ಲಿಂದಳೇ ಕೈ ಮುಗ್ದ್ "ನಾವುಗೆ ಏನೂ ತೊಂದರೆ ಕೊಡ್ಬೇಡ. ಸುಬ್ರಮಣ್ಯಕ್ಕೆ ಹೋಕನ ನಿಂಗೆ ಹರ್ಕೆ ಹಾಕ್ವೆ"ಂತ ಮನ್ಸೊಳಗೇ ಹೇಳಿಕಂಡತ್. ಒಸಿ ಹೊತ್ತ್ ಹಾಂಗೆ ತಲೆ ತೂಗಿಕಂಡಿದ್ದ್, ಮತ್ತೆ ಅದರಷ್ಟಕ್ಕೆ ಹೋತ್, ಹೋಕನ ಕೇಳ್ದ ರೊಂಯ್‌ಂ ಸದ್ದ್, ವಿಮಾನ ಹೋದ ಸೊರದ ಹಾಂಗೆ ಕೇಳ್ತ್. ಹಂಞ ಹೊತ್ತ್ ಎಲ್ಲೋವೂ ಬಾಯ್ಮುಚ್ಚಿಕೊಂಡೊ. ಅವರ ಕಣ್ಣೆದ್ರ್ ಅದೇ ಕಾಂಬತಿತ್ತ್. ಅಷ್ಟ್ ಹೊತ್ತ್ ಸ್ಟೇರಿಂಗ್ ಮೇಲೆ ಕೈಯಿಸಿ ಕುದ್ದ ಆ ಜವ್ವನ, ಅತ್ತಿತ್ತ ಎಲ್ಲ ನೋಡಿ ಜೀಪು ಬುಡಕ್ಕಂತ ಆದ ಮೇಲೆ ನಿದಾನಕ್ಕೆ ಬುಟ್ರೊ. ಮಾಚು "ಇದ್ ಒಳ್ಳ ಸಕುನನೋ, ಹಾಳ್ ಸಕುನನೋಂತ ಆಲಚನೆಲಿ ಬಿತ್ತ್. ಅದರ ತಲೆಗೆ ಒಂದೂ ಹೋತ್ಲೆ. ಅಷ್ಟೊತ್ತಿಗೆ ಜೀಪು, ದೊಡ್ಡ ದಾರಿಂದ ಅಡ್ಡ ದಾರಿಗೆ ತಿರ್‍ಗಿತ್. ಬಲಕ್ಕೆ ನೋಡ್ರೆ ಒಂದ್ ಮನೆ. "ಅದೇ ನಮ್ಮ ಮನೆ"ಂತ ಹೇಳ್ದೊ. ಸುಮಾರ್ ಅರ್‍ವತ್ತ್ ಅರ್‍ವತ್ತೈದ್ ವರ್ಸದ ಗಂಡ್‌ಸ್ ಅಲ್ಲಿ ಮುಕಸಾಲೆಲಿ ಕುರ್ಚಿಲಿ ಕುದ್ದ್‌ಕಂಡ್ ಓದಿಕಂಡ್ ಇದ್ದೊ. ಜೀಪು ಬಂದದ್ದ್ ನೋಡಿ ಒಮ್ಮೆ ತಲೆ ಎತ್ತಿ ನೋಡಿ ಮತ್ತೆ ಓದಿಕೆ ಸುರುಮಾಡ್ದೊ.

"ಅವು ನನ್ನ ಅಪ್ಪ"ಂತ ಹೇಳಿ "ಅವು ಗಾಂಧಿ ಬಕ್ತ. ಹಾಂಗಾಗಿ ನಮ್ಮಲ್ಲಿ ಜಾತಿ ಗೀತಿಂತೇಳ್ವಂತದ್ದ್ ಕಮ್ಮಿನೇ"ಂತ ಹೇಳ್ದೊ. ಮೊಯಿಂಸರೇ ಕಾಣದ ಈ ಹಳ್ಳಿಲಿ ಜಾತಿ ಇಲ್ಲೆಂತ ಕೇಳ್ದ ಮಾಚುಗೆ ಚೋದ್ಯ ಆತ್. ಹಾಂಗಾರೆ ನಾವಿಲ್ಲಿ ನೆಮ್ಮದಿಲಿ ಇರಕ್ಕಂತ ನೆನ್ಸಿತ್. ಮಾಚು ಕೇಳ್ತ್ "ನೀವು ಅವರ ದೊಡ್ಡ ಮಂಜನಾ?"ಂತ. "ನಾ ಒಬ್ಬನೇ ಮಂಜ"ಂತ ಹೇಳಿ ಜೀಪು ನಿಲ್ಸಿ, ಇಳ್ದ್. ಹಿಂದೆದ್ ಬಾಗ್ಲ್ ತೆಗ್ದ್, "ಬನ್ನಿ"ಂತ ಹೇಳಿ, ಮನೆಗೆ ಹೋದೊ. ಎಲ್ಲೋವು ಇಳ್ದ ಮೇಲೆ ಎಲುಂಬ ಮನೆನ ಯೆಜಮಾನಂಗೆ "ನಾವು ಬಂದೊ ಎಟ್ಯಾಳೇ"ಂತ ಹೇಳಿಕನ ಮಾಚು "ನಮಸ್ಕಾರ ಎಟ್ಯಾಳೇ"ಂತ ಸೊರ ಸೇರ್‍ಸಿತ್. ಅವು ಓದ್‌ತಿದ್ದರ ಅಲ್ಲೇ ಮೊಡ್ಚಿ ಇಸಿ ಎದ್ದ್ ಬಂದೊ. "ಒಳ್ಳದಾತ್, ಒಳ್ಳದಾತ್, ಬನ್ನಿ"ಂತ ಯೆಜಮಾನ ಆದರೂ ಬಾಳ ಸಮ್ಮಾನಂದ, ಪ್ರೀತಿಂದ, ವಿಶ್ವಾಸಂದ ಬರಮಾಡಿಕೊಂಡೊ. ಮಾಚುಗೆ ತುಂಬ ಸಂತೋಸ ಆತ್. ಮತ್ತೆ ಅವೇ ಎಲುಂಬನ ನೋಡಿ "ನಿನ್ನ ಹೆಸ್ರ್?" "ನಾ ಎಲುಂಬ. ಇದ್ ಮಾಚು"ಂತ ಹೆಣ್ಣ್‌ನ ಹೆಸ್ರ್ ಸಾ ಹೇಳ್ತ್. ಅವರ ಮಂಜ, ಅಮ್ಮನ ಕರ್‍ದೊ. ಗಟ್ಟಿ ಜುವ್ವದ ಹೆಂಗ್ಸ್ ಹೊರಗೆ ಬಂದೊ. ಇವರ ಹಕ್ಕಲೆ ನೆಗಾಡಿ "ಕುಡ್ಯಕೆ ಏನಾರ್ ತರೊಕೋ"ಂತ ಹೇಳಿ

ಅವೇ "ಏನ್ ಉರಿ ಬಿಸ್ಲ್! ಮೊ್‌ಜ್ಜಿಗೆ ನೀರ್ ಆದಾ?"ಂತ ಇವರ ಉತ್ತರಕ್ಕೆ ಕಾಯದೆ ಒಳಗೆ ಹೋದೊ. ಅವರ ತಡಿನ ಹಾಂಗೆ ಸೊರಸಾ ಗಟ್ಟನೇ. ಮಾಚು ಹಕ್ಕಲೆ ಯಾರಾರ್ ಏನಾರ್ ಬೇಕಾಂತ ಕೇಳ್ರೆ "ಹ್ಞಾಂ, ಹಂಞ ಕೊಡಿ"ಂತ ಹೇಳ್ವ ಕ್ರಮ. ಹಾಂಗೆ ಹೇಳ್ಕೆ ಬಾಯಿ ತೆಗಿಯಕನ ಅವು ಒಳಗೆ ಹೋಗಿ ಆಗಿತ್ತ್. ಅದಿಕ್ಕೆ ನೆಗೆ ಬಾತ್. ಮನ್ಸ್‌ಲೇ "ಒಳ್ಳೆ ಚುರ್ಕು ಒಳೊ"ಂತ ಹೇಳಿಕಂಡತ್. ಅವು ಕಲಾಯಿ ಹಾಕಿದ ಹಿತ್ತಾಳೆ ಚೊಂಬುಲಿ ಮೊ್‌ಜ್ಜಿಗೆ ನೀರ್ ತಂದಿಸಿದೊ. ಒಂದ್ ಹಿತ್ತಾಳೆ ಲೋಟನ ಸಾ ಅಲ್ಲೇ ಇಸಿದೊ.
ಅವು ಸಣ್ಣ ಕೂಸುನ ನೋಡಿ, "ಕೂಸುಗೆ ಹಾಲೇನಾರ್ ಬೇಕಾ?" "ಈಗ ಬೇಡ. ಮತ್ತೆ ನಾ ಕೇಳಿಕಣೆ"ಂತ ಹೇಳ್ದ ಮಾಚು, ಮನ್ಸ್‌ಲಿ "ಕೆಲಸದವರ ಹಕ್ಕಲೆ ಇಷ್ಟ್ ಕರುಣೆ ಇದ್ದರೆ ಸಾಕ್"ಂತ ಹೇಳಿಕಂಡತ್.

ಮೊ್‌ಜ್ಜಿಗೆ ನೀರ್‌ಂತ ಅವು ಹೇಳ್ರೂ ಅದ್ ಗಟ್ಟಿ ಮೊ್‌ಜ್ಜಿಗೆನೇ. ಅದರ ಕುಡ್ದ್ ಹೊಟ್ಟೆ ತೊ್‌ಂಪಾತ್. ಆ ಪಾತ್ರೆಗಳ, ಎದ್ರ್ ಚಾಳೆ ಮರದ ಅಡಿಲಿ ಇದ್ದ ಮಂಡೆ ನೀರ್ಲಿ ಬೂದಿ ಹಾಕಿ ತೊಳ್ದ್ ತಂದಿಸಿತ್. ಮನೆನ ಬಲಕ್ಕೆ ಉದ್ದೋಕೆ ಒಂದ್ ಕೊಟೆಗೆ ಇತ್ತ್. ಅವು ಅದರ ತೋರ್ಸಿ "ಕೊಟೆಗೆನ ತಲೆ ಕೋಣೆಗೆ ಹೋಗಿ, ನಿನ್ನೆ ಕೆಲ್ಸದವರ ಹಕ್ಕಲೆ ಗುಡ್ಸಿ ಇಸಿಕೆ ಹೇಳಿದ್ದೆ. ಲಾಯ್ಕಾಗಿ ನೀವೇ ಗುಡ್ಸಿಕಣಿ"ಂತ ಹೇಳಿ, ಎಲುಂಬನಲ್ಲಿ "ಅಲ್ಲೇ ಕೊಟೆಗೆಲಿ ಕತ್ತಿ ಇರೋಕು. ತೋಟಕ್ಕೆ ಹೋಗಿ ನಾಕ್ ಬಾಳೆ ತಂಬ"ಂತ ಹೇಳ್ದೊ. ಇವು ಇವರ ಚೀಲಗಳ ಹಿಡ್ಕಂಡ್ ಅವು ಹೇಳ್ದ ಕೋಣೆಗೆ ಹೋದೊ. ಅದ್ ಸುಮಾರ್ ದೊಡ್ಡ ಕೋಣೆನೇ. ಕಾಯಿ, ಅಡಿಕೆ ಎಲ್ಲಾ ಹಾಕಿ ಇಸ್ವಂತದೋ ಏನೋ. ಮಾಚುಗೆ ಅದರ ನೋಡಿ ಒಂತರದ ಕುಸಿ ಆತ್. ಮದ್ಯನ ಉಂಡ್ ಆದ ಮೇಲೆ ಇಲ್ಲಿ ಸೆಗಣಿ ಹಾಕಿ ಗುಡ್ಸಿ ಲಾಯ್ಕ ಮಾಡೋಕು. ಸಣ್ಣ ಮಕ್ಕ ಇರಿಕನ ಮನಾರ ಬೇಕಲೇ"ಂತ ಅವಳಷ್ಟಕ್ಕೆ ಹೇಳಿಕಂಡತ್.

ಮದ್ಯನ ಉಂಬಕೆ ಗಂಜಿ, ಗೈಪು, ಮೊ್‌ಜ್ಜಿಗೆ, ಉಪ್ಪನ ಕಾಯಿ–ಇದರೆಲ್ಲ ಬೇಕಾದಷ್ಟ್ ಪಾತ್ರೆಗಳಲೇ ಹಾಕಿ ಕೊಟ್ಟು ಒಳ್ದದರ ಕತ್ತಲೆಗೆ ಇಸಿಕಣಿಂತ ಹೇಳ್ದೊ. ಕೆಲ್ಲೊ್‌ವು ಮೊ್‌ಡಿವಂತರ ಮನೆಲಿ ಇವರ ಜಾತ್ಯವು ಪಾತ್ರೆಗಳ ಮುಟ್ಟಿಕೇ ಬೊ್‌ತ್ತ್. ಒಂದ್ ವೇಳೆ ಮುಟ್ಟಿ ಬುಟ್ಟರೆ ಬೊೊಯ್‌ಗಳ್. ಮತ್ತೆ ಅದರ ಹುಳಿ ಬೂದಿ ಹಾಕಿ ತೊಳ್ದ್ ಅಲ್ಲೇ ಇಸೊಕು. ಅವು ಮತ್ತೆ ಹುಳಿ ನೀರ್ ಹಾಕಿ ನೀರ್ ಹೊಯ್ದ್ ತೆಕಂಬೊ್‌ದ್. ಇಕ್ಕಿಕನ ಇವ್ಕೆ ಒಂದಷ್ಟ್ ಎತ್ತರಂದ ನಾಯಿಗಳಿಗೆ ಹಾಕಿದ ಹಾಂಗೆ ಹಾಕುದು. ಅದರ ತೆಕಂಡ್ ದೂರ ಎಲ್ಲಾರ್ ಉಣೋಕು. ಅಲ್ಲೇ ಉಂಡರೆ ಮೈಲಿಗೆ ಆದೆ. ಇಕ್ಕಿದರ ತೆಕಂಡ್ ಹೋಕನ ಮೆನಿ ಚೆಲ್ಲಿರೆ ಅದರ ಸೆಗ್ಣಿ ಹಾಕಿ ತೆಗ್ದ್ ಸುದ್ದ ಮಾಡೋಕು. ಪೇಟೆಲಿ ಇಂತದೆಲ್ಲ ಕಡಿಮೆ ಆಗುಟು. ಹಳ್ಳಿಲಿ ಇನ್ನ್ ಸಾ ಅಂತದರ ಬುಟ್ಟತ್ಲೆ. ಅಂತದರ್ಲಿ ಇವು ಜಾತ್ಯವ್ಕೆ ಕೊಟ್ಟ ಹಾಂಗೆ ಕೊಟ್ಟೊಳಲೇಂತ ಮಾಚು ಕುಸಿ ಪಟ್ಟತ್.

ಉಂಡಾಗಿ ಕೂಸುಗೆ ಹಾಲ್ ಕೊಟ್ಟ್, ಮಲ್ಗಿಸಿ ಬಂದ್, ಯೆಜಮಾಂತಿನ ಹಕ್ಕಲೆ ಕೇಳ್ತ್. "ನಾವು ಇರ್ವ ಕೋಣೆಗೆ ಸೆಗಣಿ ಸಾರ್ಸಿನೆ. ಮಕ್ಕಮರಿ ಇರಿಕನ ಮನೆ ಮನಾರ ಇರೋಕು. ಹಟ್ಟಿ ಎಲ್ಲಿ?"

ಯೆಜಮಾಂತಿಗೆ ಬಾರಿ ಕುಸಿ ಆತ್. "ಹ್ಞಾಂ,ಹ್ಞಾಂ, ಅದ್ ಬೇಕ್. ನಾವು ಮನಾರ ಇರೋಕುಂತ ಇರೋಕು. ನಿನ್ನಂತವು ಮನೆ ಒಳಗೆ ಬಾದಾದರೆ ಸಾ ನಂಗೆ ಬೇಜಾರ ಇಲ್ಲೆ. ನೀ ಪೇಟೆಲಿ ಇದ್ದವಳಲ್ಲಾ? ಅದಿಕೆ ನೀ ಮಕ್ಕ ಇರಿಕನ ಸೊಚ್ಚ ಬೇಕುಂತ ಹೇಳ್ದು. ಎಲ್ಲದರ್ಲು ಹಾಂಗೇ

ಇರೋಕು ಆತಾ? ಬಟ್ಟೆಬರೆ, ಪಾತ್ರೆ ಎಲ್ಲ ಸೊಚ್ಚ ಇರೋಕು. ಪಾತ್ರೆ ತೊಳ್ದ್ ಚಿಂಟೆಲಿ ಕಂಕಣಿ ಹಾಕಿ ಇಸಿರೆ ಅದರ ನೆರಳ್ ಅಲ್ಲಿ ಕಾಣೋಕು. ಅಂದರೆ ನೆಲನೂ ಕನ್ನಡಿ ಹಾಂಗೆ ಇರೋಕು"ಂತ ಹೇಳ್ಕಂಡೇ ಹಟ್ಟಿಕಡೆ ಕರ್ಕಂಡ್ ಹೋದೊ. ದೊಡ್ಡ ಹಟ್ಟಿ, ಹತ್ತ್ ಹದಿನೈದ್ ನಡೆಗ ಇದ್ದಿರ್‍ವೊ, ಕಂಚಿಲ್‌ಲಿ ಮೂರ್ ನಾಕ್ ಕರ್‌ಗ ಅಂಬಾ ಅಂಬಾಂತ ಕರ್‍ಯತಿದ್ವೊ. ಅದೆಲ್ಲ ನೋಡಿ ಆಕನ ಮಾಚುಗೆ "ಇಲ್ಲಿ ಹಾಲ್ ಮೊಜ್ಜಿಗೆಗೆ ಕೊರತೆ ಇಲ್ಲೆ"ಂತ ಆತ್. ಅದ್ ಹಸ್‌ಗಳಿಗೆ ಕುಡ್ಯಕೆ ಇಸ್ವ ಒಂದ್ ಹಾಳ್ ಪಾತ್ರೆಲಿ ಸೆಗಣಿ ತೆಕಂಡ್ ಬಾತ್. ಅದಕ್ಕೆ ಚಿಮ್ಣಿ ಕರಿ ಕೇಳಿ ಬೆರ್ಸಿತ್. ಮತ್ತೆ ತೋಟಕ್ಕೆ ಹೋಗಿ ಬಿದ್ದ ಹಾಳೆಂದ ಎರ್ಡ್ ಮೂರ್ ಹಾಳೆ ತೊಟ್ಟು ಮಾಡಿಕಂಡ್ ಬಾತ್. ಈ ಕರಿ ಬೆರ್ಸಿದ ಸೆಗ್ಣಿಗೆ ಹನೀಸ್ ನೀರ್ ಹಾಕಿ ಕಲ್ಸಿ, ನೆಲ ಸಾರ್ಸಿಕೆ ಹೊರ್‍ಟತ್. ಎಲುಂಬನಲ್ಲಿ ನಿಲ್ಗಿದ ಕೂಸುನ ಹಿಡ್ಕಂಡ್ ಹೊರಗೆ ಕುದ್ರಿಕೆ ಹೇಳ್ತ್. ಕಿಟ್ಟನ ಸಾ ಅಪ್ಪನ ಒಟ್ಟಿಗೆ ಇರಿಕೆ ಹೇಳಿ, ಪಾತ್ರೆಲಿ ಕಲ್ಸಿ ಇಸಿದ ಸೆಗ್ಣಿನ ಹಂಞ ಹಂಞನೇ ನೆಲಕ್ಕೆ ಹಾಕ್ಕಂಡ್ ಪೋರ್ಲುಜ ಚೀಂಟಿದ ಹಾಂಗೆ ಸಾರ್ಸಿತ್. ನೆಲಲಿದ್ದ ದೂಳೆಲ್ಲ ಹೋಗಿ, ಬಣ್ಣನೇ ಬೇರೆ ಆಗಿ ಪೊರ್ಲಾತ್. ಅರ್ದ ಗಂಟೆಲಿ ನೆಲ ಒಣ್‌ಂಗಿದ ಮೇಲೆ, ಮ್ಯಾಪುಲಿ ಗುಡ್ಸಿ, ಸೆಗಣಿ ಹೊಡಿ ಎತ್ತಿ ಬಿಸಾಕಿ, ಅವು ಕೊಟ್ಟ ಮೊಂದ್ರಿನ ಹಾಕಿ, ಕೂಸುನ ಎತ್ತಿಕಂಡ್ ಬಂದ್ ಮಲ್ಗಿಸಿತ್. ಯೆಜಮಾಂತಿ ಬಂದ್ ನೋಡಿ "ಹೇಂಗಿತ್ತ್? ಈಗ ಹೇಂಗಾತ್"ಂತ ಹೊಗ್ಳಿ ಹೋದೊ. ಮಾಚುಗೆ "ಇದೀಗ ನನ್ನ ಮನೆ"ಂತ ಆತ್. ಹಾಂಗೆ ಕೂಸುನ ಹಕ್ಕಲೆ ಒಂದ್ ಗಳಿಗೆ ನೆಮ್ಮದಿಂದ ಅಡ್ಡ ಆತ್. ಅಲ್ಲೇ ಒಂದ್ ಸಣ್ಣ ನಿದ್ದೆನೂ ಬಾತ್. ಎದ್ದ್ ನಾಳೆನ ಕೆಲ್ಸಗಳ ಕೇಳ್ನೆಂತ ಹೋಕನ ಯೆಜಮಾಂತಿ ಪಾತ್ರೆಗಳ ತೊಳ್ಯಕೆ ರಾಸಿ ಹಾಕಿ ಇಸಿದ್ದೊ. ಇದರ ನೋಡಿ "ನಿನ್ನ ಕರ್‍ಯೊಕುಂತ ಇದ್ದೆ. ನೀನೇ ಬಂದ. ಒಳ್ಳದಾತ್. ಪಾತ್ರಗಳ ಈ ಕುಕ್ಕೆಲಿ ಹಾಕ್. ಓ ಅಲ್ಲಿ ಚೋಡಿ ಉಟ್ಟು, ತೊಳ್ಕಂಡ್ ಬಾ"ಂತ ಹೇಳ್ದೊ. ಚೋಡಿ ಉಟ್ಟುಂತ ಕೇಳಿ ಮಾಚುಗೆ ಕುಸಿ ಆತ್–ಮೀನ್ ಹಿಡ್ಯಕಲೇಂತ. ಚೋಡಿ ಹಕ್ಕಲೆ ಹೋತ್. ಚೋಡಿ ನೋಡಿಕನ ವೀಳ್ಯಡ್ಕದ ನೆಂಪಾತ್. ಒಂದ್ ಗಳಿಗೆ, ಆ ನೆಂಪುಲಿ ಸೊಂಟಲಿ ಕುಕ್ಕೆ ಇಸಿಕಂಡೇ ಚೋಡಿನ ನೋಡ್ತ್. ಇದ್ ಅದರಷ್ಟ್ ಅಗಲ ಇಲ್ಲೆ. ಚೆರ್ಗ ಮೀನ್‌ಗ ಅತ್ತಿತ್ತ ಓಡಾಡ್ತಿದ್ವೊ. ಮೀನ್ ಹಿಡ್ದರೆ ಹೇಂಗೆಂತ ಹೇಳ್ವ ಆಲಚನೆ ಥಕ್ಕಂತ ಬಂದದ್ದೇ ತಡ, ಕುಕ್ಕೆನ ಕರೆಲಿ ಇಸಿತ್. ಸಣ್ಣ ಬಾಯೆನ ಪಾತ್ರೆ ಹುಡ್ಕಿ ತೆಗ್ದ್, ಅನ್ನದ ಮಡಿಕೆಲಿ ಅಡಿಲಿದ್ದ ಹುಗ್ಗೆ ಅಗ್ಳ್‌ಗಳ ಅದ್ಕೆ ಹಾಕಿ, ಆ ಪಾತ್ರೆನ ನೀರ್‍ಲಿ ಮುಳ್‌ಗಿಸಿ ಇಸಿತ್. ಹುಗ್ಗೆ ತಿಂಬಕೆ ಬಂದ ಮೀನ್‌ಗ ಅದ್ರೊಳಗೆ ತುಂಬಿಕನ ಆ ಪಾತ್ರೆನ ಎತ್ತಿ, ಅದರ ಬಾಯಿಗೆ ಅನ್ನ ಬಾಗುವ ಚಿಬ್ಬುಲ್‌ನ ಮುಚ್ಚಿ ಬೊಗ್ಗಿಸಿತ್. ನೀರ್ ಸೂಸಿತ್. ಮೀನ್‌ಗ ಅದ್ರೊಳಗೇ! ಬೇಗ ಬೇಗ ಪಾತ್ರೆ ತೊಳ್ದ್ ಕುಕ್ಕೆಲಿಸಿಕಂಡ್ ಹೋಗಿ ಚಿಂಟೆಲಿಸಿ, ಯೆಜಮಾಂತಿನ ಹಕ್ಕಲೆ "ಒಂದ್ ಕತ್ತಿ ಕೊಟ್ಟರೆನಾ? ನಾ ಹಂಞ ಮೀನ್ ಹಿಡ್ದೊಳೆ"ಂತ ಹೇಳ್ತ್. ಅವು ಆಶ್ಚರ್ಯಂದ "ಮೀನ್?"ಂತ ಕೇಳಿಕನ ಇದ್ ಇದರ ಪೌರುಷನ ಹೇಳಿ ನೆಗಾಡ್ತ್. ಅವು "ನೀ ಆವ ಮಾರಾಯ್ತಿ"ಂತ ನೆಗಾಡಿಕಂಡೇ ಕತ್ತಿ ಕೊಟ್ವೊ, ಇದ್ ಮೀನ್ ಸಜ್ಜ್ ಮಾಡಿಕಂಡ್ ಬಾತ್. ಅಂದ್‌ಂದ ಮಾಚು ಕಲ್ತ ಮೀನ್ ವಿದ್ಯೆನ ಪ್ರಯೋಗ ಇವ್ರಲ್ಲಿ ಸುರು ಮಾಡ್ತ್. ಅದ್ರಂದಾಗಿ ಊಟ ಹುಳ್ಳಂಗೆ ಆಕೆ ಸುರು ಆತ್!

ಮೊರ್ದಿನ ಬೊಳ್ಪುಗೆ "ನಾ ಏನ್ ಮಾಡೋಕು"ಂತ ಕೇಳ್ದಕ್ಕೆ "ಮಾಮೂಲು ಕೆಲ್ಸಗ ಹೇಂಗಾರ್ ಆದೆ. ಸಣ್ಣ ಮಗ ಇಂದ್ ನಾಳೆಂತ ಹೆರಿಕೆ ಆಗುಟು. ದೊಡ್ಡದಕ್ಕೆ ಸಾ ಇದೇ ತಿಂಗ. ಅದಿಕ್ಕೆ ಎರ್ಡ್ ಮಕ್ಕ ಸಾ ಒಳೊ. ಆ ಎರ್ಡ್ ಮಕ್ಕಳ ನೋಡಿಕಂಡ್ ಇಬ್ಬರ್ ಪೆದ್ಮೊಳ್ತಿಗಳ

ನೋಡಿಕೊಂಬಕೆ ನಂಗೆ ಆಕಿಲ್ಲೆಂತ ನಿಮ್ಮ ಬಾಕೆ ಹೇಳ್ದ್. ನಮ್ಮಲ್ಲಿ ಮುಟ್ಟಿಕಾಗದ್ ಹಿಡ್ಯಕಾಗದ್‌ಂತ ಶಾಸ್ತ್ರ ಏನಿಲ್ಲೆ. ದೇವರ ಕೋಣೆ, ಅಡಿಗೆ ಕೋಣೆಗೆ ಮಾತ್ರ ಬಾದು ಬೇಡ. ಅದ್ ನಾವುಗಾಗಿ ಅಲ್ಲ. ಬಂದ್ ಹೋವವ್ವಾಗಿ. ಮಕ್ಕ ಹೆರಿಕೆ ಮುಟ್ಟ ನೀ ಬೇರೆ ಕೆಲ್ಸಗಳ ಮಾಡ್"ಂತ ಹೇಳ್ದೊ.

ಇವು ಬಂದ ಎರ್ಡ್ನೇ ದಿನನೇ ಬಿಸು ಹಬ್ಬ. ಅದರ ಒಟ್ಟಿಗೆ ಗೇಣಿ ಒಕ್ಕಲ್ನವ್ಕೆ ಗೇಣಿ ಚೀಟ್ ಕೊಡುದ್, ಬುಡುದ್ ಸಾ ಅಂದೇ. ಒಕ್ಕಲ್ನವು ಬಿಸು ಕಾಣಿಕೆ ತರೋಕು. ಮದ್ಯಂದ ಊಟ ದನಿ ಮನೆಲೇ. ಬೀಜದ ಬೊಂಡ್ ಹಾಕಿ ಮಾಡ್ದ ಒಂದ್ ಗೈಪು, ಒಕ್ಕಲ್ನವು ತಂದ ಎಲ್ಲಾ ನೆಟ್ಟಿಕಾಯಿ ಹಾಕಿ ಮಾಡ್ದ ಒಂದ್ ಕೂಟು, ಹಲ್ಸಿನ ಗುಜ್ಜೆದ್ದ್ ಗಸಿ ಅಲ್ಲರೆ ಪಲ್ಯ, ಬೆಲ್ಲ ಹಾಕಿ ಮಾಡ್ದ ಒಂದ್ ಪಾಯಸ ಇವಿಷ್ಟ್ ಹೆಚ್ಚಾಗಿ ಮಾಡ್ವ ಕ್ರಮ. ಮಾಡಿಕೆ ಸಾದ್ಯ ಇದ್ದೋವು ಇನ್ನೂ ಏನೇನೋ ಮಾಡ್ದೊ.

ಅಂದ್ ಕಲ್ಮಕಾರಿನ ದನಿಗ ಬೊಳ್ಪುಗೆ ಬೇಗ ಎದ್ದ್, ಎಣ್ಣೆ ಹಾಕಿ ಮೀದ್, ಅರ್ದ ಇಸಿದ ಗಂಧ ಪ್ರಸಾದ ಹಾಕಿ, ನೆನೆ ದೀಪ ಹೊತ್ತ್‌ಸಿ, ತಂದಿದ್ದ ಎಲ್ಲಾ ಫಲ ವಸ್ತುಗಳ ದೇವರ ಬೊಳ್ಪುನಡಿಲಿ ಪೊರ್ಲು ಜೋಡ್ಸಿ, ಆರತಿ ಎತ್ತಿ, ಅಡ್ಡ ಬಿದ್ದೊ. ಮನೆವು ಸಾ ಮೀದ್ ಬಂದ್ ದೇವ್ರಿಗೆ ಅಡ್ಡಬಿದ್ದೊ. ಮದ್ಯನ ಉಂಬಕೆ ಮುಂದೆ ಪಾಯಸನ ದೇವ್ರಿಗೆ ಇಸಿ ಕೈ ಮುಗ್ದೊ. ಮಂಜ ಸುಬ್ರಹ್ಮಣ್ಯ, ದೇಸ್ತಾನಕ್ಕೆ ಹೋಗಿ ಹೂ,ಹಣ್ಣ್ ಕಾಯಿ ಒಪ್ಪಿಸಿ ಬಂದೊ. ಗೇಣಿ ಒಕ್ಕಲ್ನವು ಬೊಳ್ಪಿಂದಳೇ ಇದ್ದರೆ, ಕೆಲ್ಸದವು ಮದ್ಯನ ಊಟಕ್ಕಾಕನ ಬಂದೊ. ಕರ್ವತಿಗ ಪೂರ ಒಟ್ಟಿಗೆ ಬಂದೊ. ಜಾತಿ ಭೇದ ಇಲ್ಲದೆ ಎಲ್ಲೋರ್ವ್ಕೆ ಕುದ್ದ್‌ದೇ ಊಟ. ಅಂಬೆರ್ಪು ಇದ್ದೋವು ಮಾತ್ರ ಉಂಡ ಹಾಂಗೆ ಹೋದವೆ. ಬಾಕ್ಯೋವು ಕತ್ತಾಲೆ ಮುಟ್ಟ ಇದ್ದವೆ. ಹಿಂಬೊತ್ ಆಕನ ಕರ್ವತಿಗಳ ದುಡಿ ಬೊಟ್ಟಾಟ ಮತ್ತೆ ಕೊಣ್ತ ಸುರು ಆತ್. ಅದ್ ಮುಗ್ಯಕನ ಎಲ್ಲೋರ್ವ್ಕೆ ಬಟ್ಟೆ, ಇಡ್ಲಿ ಅಲ್ಲರೆ ಬಟ್ಲ್ ಹಿಟ್ಟ್, ಕಾಯಿ, ಬೆಲ್ಲ, ಬತ್ತ, ತಲೆಗೆ ಎಣ್ಣೆ ಅದ್ರೊಟ್ಟಿಗೆ ಗಂಡಾಳ್‌ಗಳಿಗೆ ಪಂಚೆ, ಹೆಣ್ಣಾಳ್‌ಗಳಿಗೆ ಸೀರೆ ಕೊಟ್ಟೊ. ಮಾಚುಗೆ ಎಲುಂಬಂಗೆ ಸಾ ಸೀರೆ ಮತ್ತೆ ಪಂಚೆ ಕೊಟ್ಟೊ, ಅವ್ಕೆ ಬಾರಿ ಸಂತೋಸ. ನಾವು ಇಲ್ಲಿಗೆ ಒಳ್ಳೆ ಸಮಿಯಲಿ ಬಂದೊಳೊಂತ ಹೇಳಿಕಂಡೊ.

ಬಿಸುನ ರಾತ್ರೆನೇ ಸಣ್ಣ ಮಗಳಿಗೆ ಹೆರಿಗೆ ಬೇನೆ ಸುರು ಆತ್. ಆ ಹಳ್ಳಿಲಿ ಹೆರ್ಸುವವು ಅಂದರೆ ಹಳ್ಳಿಲೇ ಇದ್ದ ತಿಳ್ದ ಹೆಂಗ್ಸ್ರ್. ಹಾಂಗೆ ಮಂಜ ಸುಬ್ರಹ್ಮಣ್ಯಕ್ಕೆ ಹೋಗಿ ಹೆರಿಗೆ ಮಾಡ್ಸುವ ಹೆಂಗ್ಸ್‌ನ ಜೀಪುಲಿ ಕರ್ಕಂಡ್ ಬಂದೊ. ಬೊಳ್ಪು ಆಕನ ಹೆರಿಗೆ ಆತ್. ಗಂಡ್ ಕೂಸು.. ಮೊರ್ದ್ದಿನಂದ ಮಾಚುನ ಕೆಲ್ಸ ಸುರು ಆತ್. ಯೆಜಮಾಂತಿ ಮುಂದೆನೇ ಹೇಳಿದ್ದೊ "ನೀ ಬಾಣಂತಿನ ಹಳೆ ಕ್ರಮಲಿ, ಹಳ್ಳಿ ಮೊದ್ದ್ ಮಾಡಿ ಪೊರ್ಲು ನೋಡಿಕಣೊಕು"ಂತ.

ಅಲ್ಲಿ ನೀರಿಗೆ ಬಂಜ ಇಲ್ಲೆ. ಅಬ್ಬಿ ನೀರ್ ಬಂದ್ ಬರೋಣಿಗೆ ಬಿದ್ದದೆ. ಅಲ್ಲಿಂದ ಮಂಡೆಗೆ ನೀರ್ ಬೀಳ್ವ ವ್ಯೆವಸ್ತೆ ಮಾಡಿದ್ದೊ. ಸೊಯ್ದೆಗೆ ಬರ ಇಲ್ಲೆ. ಇಂದ್ ಬೊಳ್ಪುಗೆ ಕಿಚ್ಚಿ ಹಾಕಿರೆ ನಾಳೆ ಬೊಳ್ಪು ಮುಟ್ಟ ಕಿಚ್ಚಿ ಇರ್ದು. ಇಪ್ಪತ್ತ ನಾಲ್ಕ್ ಗಂಟೆನೂ ನೀರ್ ಬೆಚ್ಚಂಗಿದ್ದದೆ. ಬಿಸ್ನೀರ್ಲೇ ಪೆದ್ದೋಳ್ತಿ ಮತ್ತೆ ಕೂಸುನ ಬಟ್ಟೆ ತೊಳ್ಯಕೆ ಅಲ್ಲೇ ಕಲ್ಲ್ ಹಾಕಿದ್ದೊ.

ಮಾಚು ಪೆದ್ದೊಳ್ತಿ ಆರೈಕೆ ಗೊತ್ತಿದ್ದವ್ಳೇ. ಅದಿಕೆ ಅದರ ಅವ್ವ ಕೊಟ್ಟದ್ದ್ ಹಳ್ಳಿ ಮೊದ್ದೇ. ಸುರುನ ಮೂರ್ ದಿನ ಬಾಣಂತಿಗೆ ಕಾಲಿ ಹೊಟ್ಟೆಗೆ ಕಾಳ ಜೀರಿಗೆ ಕಷಾಯ ಕುಡಿಯಕೆ ಕೆಹಿ ಆದೆಂತೇಳ್ರೆ ಒಟ್ಟಿಗೆ ತಿಂಬಕೆ ಓಲೆ ಬೆಲ್ಲ. ಆ ಮೇಲೆ ಮೂರ್ ದಿನ. ದಿನಕ್ಕೆ ಒಂದೊಂದ್ ತರದ ಸೊಪ್ಪು ಮೊದ್ದ್. ಸುರುನ ದಿನ ಗಜ್ಜುಗ ಸೊಪ್ಪು, ಎರ್ಡ್ನೇ ದಿನ ನೆಲಪಾರೆ ಸೊಪ್ಪು, ಮೂರ್ನೇ ದಿನ ಪಲ್ಲಿ ಸೊಪ್ಪು. ಮೊದ್ದ್ ಕೊಡ್ವ ದಿನ ಬೊಳ್ಪುಗೆ ಎರ್

ಂಪು ಮೆಣ್ಸ್, ನಾಲ್ಕ್ ಕಾಳ್ ಮೆಣ್ಸ್, ಸಣ್ಣ ತುಂಡು ಹಸಿ ಅರ್ಸಿನ, ಎರ್ಡ್ ಎಸಳ್ ಬೆಳ್ಳುಳ್ಳಿ ಸೇರ್ಸಿ ಆ ದಿನದ ಸೊಪ್ಪು ಮೊದ್ದಿನೊಟ್ಟಿಗೆ ಹಾಕಿ, ಗುದ್ದಿ ಆ ಮೇಲೆ ಮೊದ್ದ್‌ನ ಕಲ್ಲ್‌ಲಿ ಅರ್ದ್, ಅದರ ಒಂದ್ ಚಿಪ್ಪಿನಷ್ಟ್ ಪೆದ್ದೊಳ್ಳಿಗೆ ಕುಡಿಯಕೆ ಕೊಡ್ತಿತ್ತ್. ತಿಂಬಕೆ ಬೇಕಾರೆ ಓಲೆ ಬೆಲ್ಲ. ಆರ್ದಿನಂದ ಹದ್ನಾರ್ ದಿನದ ವರೆಗೆ ಓಮದ ಕಷಾಯ. ಹದ್ನಾರ್ ದಿನಂದ ನಲ್ವತ್ತ್ ದಿನ ಮುಟ್ಟ ಓಮ ಮದ್ದ್. ಎಲ್ಲಾ ಮೊದ್ದ್‌ಗ ಬೊಳ್ಳುಗೆ ಮತ್ತೆ ಹಿಂಬೊತ್ ಉಂಬಕೆ ಮುಂದೆ.

ಕೂಸಿಗೆ ಹದಿನಾರ್ ದಿನ ಆದ ಮೇಲೆ ಐತೋಳ್ ಬೇರ್‌ನ ಎಣ್ಣೆ ಕಾಯ್ಸಿ, ಮಕ್ಕಳಿಗೆ ಎಣ್ಣೆ ಪೂಜುವ ಕ್ರಮಲೇ ಎಣ್ಣೆ ತಿಕ್ಕಿ ಒಂದ್ ಗಂಟೆ ಬುಟ್ಟ್ ಮೀಸ್ತಿತ್ತ್. ಹದ ಬೆಚ್ಚ ನೀರ್‌ನ ಒಟ್ಟೆ ಚಿಪ್ಪಿಲಿ ಸಂದ್ ಸಂದ್‌ಗೆ ನಿದಾನಕ್ಕೆ ಹೊಯ್ಯತಿತ್ತ್. ತಲೆನ ನೀರ್ಲಿ ತೊಳ್ದ್ ಮತ್ತೆ ಕಂಕಣಿ ಮಲ್ಗಿಸಿ ತಲೆನ ಎಡಕ್ಕೈಲಿ ಒತ್ತಿ ಹಿಡ್ದ್, ಐದಾರ್ ಚಿಪ್ಪಿ ಹೊಯ್ಯಕುಟ್ಟು, ತಲೆ ಮೈ ಮೀಸಿ ಆದ ಮೇಲೆ ತೆಳು ಬಟ್ಟೆಲಿ ಚಂಡಿ ತೆಗ್ದ್, ಅದೇ ಬಟ್ಟೆಲಿ ಕೂಸುನ ಸುತ್ತಿಕಂಡ್, ಉಪ್ಪು, ಮೆಣ್ಸ್, ಸಾಸಿವೆನ ಕೂಸುನ ತಲೆಗೆ ಮೂರು ಸುತ್ತು ತಂದ್, ಅದರ ಒಲೆನ ಕೆಂಡಕ್ಕೆ ಹಾಕಿ, ಒಲೆ ಬೂದಿನ ಕೂಸಿನ ಮುಂಡಕ್ಕೆ ಹಚ್ಚ್‌ತಿತ್ತ್. ಮತ್ತೆ ಬೇರೆ ಬಟ್ಟೆಲಿ ತಲೆ ಮೈ ಒರ್ಸಿ, ತಂದಿಸಿದ ದೂಪ ಹಾಕಿದ ಕೆಂಡಲಿ ಬರಿಮೈನ ಬಿಸಿ ಮಾಡಿ, ಮೈಗೆ, ಕೂಸು ಅಲ್ಲಾಡದ ಹಾಂಗೆ ಬಿಗಿಲಿ ಬಟ್ಟೆ ಸುಂದಿ, ತಲೆ ಉರುಟು ಬರ್ವ ಹಾಂಗೆ ಗಟ್ಟಿಲಿ ಮುಂಡಾಸ್ ಕಟ್ಟಿ, ಅದರ ಅಯ್ಯೆಗೆ ಹಾಲ್ ಕುಡ್ಸಿಕೆ ಕೊಟ್ಟರೆ ಕೂಸುನ ಕೆಲ್ಸ ಒಮ್ಮೆಗೆ ಮುಗ್ತ್. ಅಯ್ಯೆ ಹಾಲ್ ಕುಡ್ಸಿ ಮಲ್ಗಿಸಿರೆ ಮತ್ತೆ ಕೂಸು ಎದ್ರುದು ಮದ್ಯನ ಹನ್ನೆರ್ಡ್ ಗಂಟೆ ನಂತ್ರನೇ. ಕೂಸು ಎದ್ರಿಕೆ ಮುಂದೆ ಪೆದ್ದೊಳ್ತಿನ ಮೀಸಿ ಆಕು. ಕೂಸುನ ಕೆಲ್ಸ ಮಾಡಿಕನ ಪೆದ್ದೊಳ್ತಿ ಎರ್ಡ್ ನೀರ್ ದೋಸೆ, ಓಲೆ ಬೆಲ್ಲದ ಕಾಪಿ ಕುಡ್ದ್ ಆಗಿದ್ದದೆ. ಮಾಚು ಅದರ ನೀರೆಡಿ ಕೊಟೆಗೆಗೆ ಕರ್ಕಂಡ್ ಹೋಗಿ, ಅಲ್ಲಿ ಕುದ್ರಿಸಿ ಇಡೀ ಮೈಗೆ ಹೊನ್ನೆಣ್ಣೆ ಪೂಜಿದೆ. ಅದ್ ಮೈಗೆ ಎಳ್ಯವಷ್ಟ್ ಹೊತ್ತು ಅಂದರೆ ಸುಮಾರ್ ಒಂದ್ ಗಂಟೆ ಅದ್ ಹಾಂಗೇ ಕುದ್ರೊಕಾದೆ. ಆ ಹೊತ್ತ್‌ಲಿ ಮೀಯಕನ ಬಾಣಂತಿನ ತಲೆಗೆ ಹಾಕಿ ತಿಕ್ಕಿಕೆ ಗೊಂಪು ಮಾಡಿಕೆ ಸೊಪ್ಪು ಹುಡ್ಕಿಕಂಡ್ ಬಂದದೆ. ಒಂದೊಂದ್ ದಿನ ಒಂದೊಂದ್ ತರದ ಸೊಪ್ಪುನ ಗೊಂಪು. ಮತ್ತೆ ಬಿಸಿ ಬಿಸಿ ನೀರ್‌ಲಿ ಮೀಸಿದೆ. ಹಬೆ ಎದ್ರುವ ನೀರ್‌ನ ಇಡೀ ಮೈಗೆ ಸಂದ್ ಸಂದಿಗೆ ದೂರಂದ ಚೇಂಪಿದೆ. ಕಡೆಗೆ ತಲೆ ಮೈ ಮೀಸುದು. ಅಷ್ಟೊತ್ತಿಗೆ ಹತ್ತ್ ಹನ್ನೆರ್ಡ್ ಕಂದಲ್ ನೀರ್ ಹಿಡ್ಯವ ಮಂಡೆ ಕಾಲಿ! ಚಂಡಿತುಂಡುಲಿ ತಲೆ ಮೈ ಒರ್ಸಿ ಬಂದ್, ಒಂದ್ ಮಿಳ್ಳಿಲಿ ಹಾಕಿ ಇಸಿದ ಓಮ ಮೊದ್ದ್ ತಿಂದ್, ಕಂಬೊಳಿ ಹೊದ್ದ್ ಮಲ್ಗಿರೆ ಈ ಲೋಕಲೇ ಇಲ್ಲಾದ ನಿದ್ರೆ! ಎದ್ರಿಕನ ಮೈ ಪೂರಾ ಚಂಡಿಮುಂಡಿ! ಹೊಟ್ಟೆಲಿ ಕಿಚ್ಚಿ ಹಾಕಿದ ಹಾಂಗೆ ಹಸಿವು! ಹದ್ನಾರ್ ದಿನ ಮುಟ್ಟ ಮದ್ಯನ ಮತ್ತೆ ಕತ್ತಲೆಗೆ ಲೆಕ್ಕ ಮಾಡಿ ಒಂದ್ ಸೆಡೆ ಬಿಸಿ ಅನ್ನ. ಪಲ್ಲೊಡಿ ಹೊಡಿ. ಅದಿಲ್ಲಂತೇಳ್ರೆ ಉಪ್ಪಿನ ಕಾಯಿ ರಸ. ಅರ್ದ ಲೋಟ ನೀರ್! ಓಮದ ಮೊದ್ದ್‌ಗೆ ಹೆಚ್ಚಿ ನೀರ್ ಕುಡ್ಯಕೆ ಬೊತ್ತ್‌ಗಡ. ಕುಡ್ದ್ ಹೆಚ್ಚ್ ಕಮ್ಮಿ ಆಗಿ ಉರ್ಚೆಲ್ ಸುರು ಆದರೆ ಪಕ್ಕ ನಿಲ್ಲೂದಿಲ್ಲಂತ ಹೇಳ್ವೆ

ನಲ್ವತ್ತ್ ದಿನಕ್ಕೆ ಒಂದ್ ಮಟ್ಟಿಗೆ ಪೆದ್ದೊಳ್ತಿ ಆರೈಕೆ ಆತ್‌ಂತ ಲೆಕ್ಕ. ಮತ್ತೆ ಬಾಣಂತಿಗೆ ಮೈ ತುಂಬಿಕೆ ಹಾಂಗೆ ಶಕ್ತಿ ತುಂಬಿಕೆ ಬೇಕಾದ ಆಹಾರಗಳ ತಿಂಬಕೆ ಕೊಟ್ಟವೆ. ಸುರುನ ಮೂರ್ ದಿನ ಸಾಸುವೆ ಗಂಜಿ, ಆ ಮೇಲೆ ಮೆಂತೆ ಗಂಜಿ, ಆ ಮೇಲೆ ಸಾತಪ್ಪೆ ಗಂಜಿ.

ಇದರೆಲ್ಲ ಬೆಳಿ ಅಕ್ಕಿಲೇ ಮಾಡ್ದು. ಒಂಬತ್ತ್ ದಿನದ ಈ ಗಂಜಿಗಳ ಕೊಟ್ಟಾದ ಮೇಲೆ ಆಕೇರಿಗೆ ಕೊಡ್ದು ಬೆಳ್ಳುಳ್ಳಿ ಪಾಕ. ಈ ಎಲ್ಲ ಮೊಶ್ದ್‌ಗಳ ಬೊಳ್ಪುಗೆ ಹಸಿ ಹೊಟ್ಟೆಗೇ ಕೊಡ್ತಿತ್. ಓಮ ಮೊಶ್ದ್‌ಂದ ಮೈ ಒಣ್‌ಂಗಿ ಚಿರ್‌ಂಟಿದೆ.

ಆ ಮೇಲೆ ಕೊಡ್ವ ಮದ್ದ್‌ಂದ ಮೈ ತುಂಬಿದೆ. ಬೆಳ್ಳುಳ್ಳಿ ಪಾಕದ ನಂತರ ತುಪ್ಪ ಹಾಕಿ ಮಾಡ್ವ ಕೊತ್ತಂಬರಿ ಅಡಿಗೆ, ಮೆಂತೆ ಅಡಿಗೆ, ಎಳ್ಳಡಿಗೆ ಇಂಥದ್ದ್. ಇದರೆಲ್ಲ ತಿಂದ್ ಆಕನ ಬಾಣಂತಿ ಗಟ್ಟಿ ಹಾಂಗೆ ಪೊರ್ಲು ಆದೆ. ಕೂಸಿಗೆ ಮೂರ್ ವೊರ್ಸ ಹಾಲ್ ಕುಡ್ಸುವಷ್ಟ್ ಹಾಲಾದೆ. ಇಂತ ಕಟ್ಟ್‌ನಿಟ್ಟಿನ ಸಾಂಕಾಣಿಕೆಂದ ಹೆಳ್ಮಕ್ಕಳಿಗೆ ಯಾವ ಕಾಯ್ಲೆ ಕಸಾಲೆ ಬಾದ್‌ಲ್ಲೆ. ಎಂತ ಕಷ್ಟದ ಕೆಲ್ಸ ಆದರೂ ಮಾಡುವಷ್ಟ್ ಶಕ್ತಿ ಇದ್ದದೆ.

ಮಕ್ಕಳಿಗೆ ಸಾ ಯಾವ ತಿಂಗಲಿ ಯಾವ ಕನೀರ್ ಮೊಶ್ದ್, ಯಾವ ಮರದ ಕೆತ್ತೆನ ರಸ, ಯಾವ ದೈದ್ ಕೊಡಿ ಮೊಶ್ದ್ ಇಂತದರೆಲ್ಲ ಕ್ರಮಲಿ ಕೊಟ್ಟ್‌ಕೊಶ್‌ಂಡ್ ಇದ್ದರೆ ಸಾದಾರ್ಣಕ್ಕೆ ಯಾವ ಕಾಯ್ಲೆನೂ ಬಾದ್ಲೆ. ಮೀಯಕನ ಸಾ ಮೊಶ್ದ್ದಿನ ಸೊಪ್ಪುಗಳ ರಸ ಪೂಜಿ ಮೀಸಿರೆ ಚರ್ಮ ರೋಗಗ ಸಾ ಹಕ್ಕಲೆ ಬಾದ್ಲೆ. ಇದರೆಲ್ಲ ಮಾಚು ಯೆಜಮಾಂತಿನ ಹಕ್ಕಲೆ ಹೇಳ್ತ್. ನಲ್ವತ್ತ್ ಮೀವ ಮುಟ್ಟ ಬಾಣಂತಿನ ಕೂಸುನ ಅಷ್ಟ್ ಪೊರ್ಲುಶ ನೋಡಿಕಂತ್ ಮಾಚು.

ಈ ಬಾಣಂತಿ ಎದ್ರಿಕನ ಅದರಕ್ಕ ಹೆತ್ತತ್. ಇದೇ ಸಮಿಯಲಿ ಎಲುಂಬನ ಮೈಮೇಲೆ ನೇಲುವಂತ ಕಜ್ಜಿನ ಒಂದ್ ವಿಚಿತ್ರ ಸೀಕ್ ಸುರು ಆತ್. ಮಾಚು ಅದಿಕ್ಕೆ ಗೊತ್ತಿದ್ದ ಹಳ್ಳಿ ಮೊಶ್ದ್ ಮಾಡ್ತ್. ಅದ್ ಏನ್ ಪ್ರೆಯಜನಕ್ಕೆ ಬಾತ್ಲೆ. ಕಾಯ್ಲೆ ದಿನಂದ ದಿನಕ್ಕೆ ಹೆಚ್ಚಾದರ ನೋಡಿ, ಬೇರೆ ಉಪಾಯ ಇಲ್ಲದೆ, ನಮ್ಮ ಕಳ್ಸಿನಿಂತ ಯೆಜಮಾಂತಿನ ಹಕ್ಕಲೆ ಹೇಳ್ತ್. ಅವರ ಕಣ್ಣ್‌ಗೆ ಸಾ ಕಾಯ್ಲೆ ಕಾಂಬತಿತ್ತಲೇ? ಅದಲ್ಲದೆ ಮನೆಲಿ ಸಣ್ಣ್ ಸಣ್ಣ ಮಕ್ಕ ಒಳೊ. ಅವ್ಕೆ ಏನಾರ್ ಆ ಕಾಯ್ಲೆ ಹಿಡ್ದರೆಂತ ಹೆದ್ರಿಕೆನೂ ಆತ್. ಹಾಂಗಾಗಿ ಅವರ ಕಳ್ಸಿಕೆ ಬೇಗ ಒಪ್ಪಿಕೊಶ್‌ಂಡೊ. "ನೀ ಇನ್ನೂ ಇಪ್ಪತ್ತ್ ದಿನ ಆದರೂ ಇದ್ದಿದ್ದರೆ ಒಳ್ಳದಿತ್ತ್. ಏನ್ಮಾಡುದು? ಎಲುಂಬಂಗೆ ಉಸಾರ್ ಇಲ್ಲಲೇ? ಅಂತ ಕಾಯ್ಲೆಗೆ ಬೇಗ ಮೊಶ್ದ್ ಮಾಡೊಕೇ. ನಾಳೆನೇ ಹೋಗಿ, ಮಂಜನ ಹಕ್ಕಲೆ ಹೇಳ್ನೆ"ಂತ ಹೇಳ್ದೊ. ಮಾಚು ಈಗನ ಬಾಣಂತಿಗೆ ಯಾಗ, ಎಂತ ಮೊಶ್ದ್‌ಗಳ ಕೊಡೊಕುಂತ ವಿವರ ಹೇಳಿ, ಹೊರ್ಡುವ ತೆಯಾರಿ ಮಾಡ್ತ್.

ಮೊಶ್ರ್ದಿನ ಯಾಗೋಳಿಗಿಂತ ಹಂಞ ಬೇಗ ಎದ್ದ್ ನೀರೆಡಿ ಒಲೆಗೆ ಕಿಚ್ಚಿ ಹಾಕಿತ್. ಪೆದ್ದೊಳ್ತಿನ, ಕೂಸುನ ಮೀಸಿತ್. ಮತ್ತೆ ತಿಂಡಿ ತಿಂದ್ ಹೊರ್ಟೊ. ಯೆಜಮಾಂತಿ ಮಾಚುಗೆ ಪೆದ್ದೊಳ್ತಿ ನೋಡ್ದ ಲೆಕ್ಕಲಿ ಹಣದ ಒಟ್ಟಿಗೆ ಒಂದ್ ಸೀರೆನೂ ಕೊಟ್ಟೊ. "ಬಿಸುಗೆ ಸಾ ಕೊಟ್ಟೊಳೊರಿ"ಂತ ಹೇಳಿ ಅಡ್ಡ ಬೀತ್. ಬಸ್ಸಿಗೆಂತ ಹಣ ಕೊಟ್ಟು, ಇಬ್ಬರ ಕೂಲಿ ಲೆಕ್ಕಕಿಂತ ಹೆಚ್ಚೇ ಹಣ ಕೊಟ್ಟೊ, ಎಲುಂಬಂಗೆ ಮೊಶ್ದ್ದಿಗೆಂತ ಬೇರೇ ನೂರು ರುಪಾಯಿ ಕೊಟ್ಟು ಉಸಾರಾದ ಮೇಲೆ ಬನ್ನಿಂತ ಹೇಳ್ದೊ. ಮಾಚು ನಿಜವಾಗಿ ಉಪಕಾರನ ಹೇಳ್ತ್. "ನಾವುಗೆ ಹೋಕೆ ಮನ್ಸಿಲ್ಲೆ. ಮನೆವರ ಹಾಂಗೆ ನೋಡಿಕೊಶ್‌ಂಡರಿ. ಇಷ್ಟ್ ಹಾಲ್ ಮೊಶ್ಜ್ಜಿಗೆ ನಮ್ಮ ಜನ್ಮಲೇ ಕಂಡತ್ಲೆ. ಎಂತದರ್‍ಲೂ ಕಮ್ಮಿ ಮಾಡ್ತ್‌ಲೆ. ಹಣನ ಸಾ ಲೆಕ್ಕಕ್ಕಿಂತ ಹೆಚ್ಚ್ ಕೊಟ್ಟರಿ. ಮೊಶ್ದ್ದಿಗೂ ಕೊಟ್ಟರಿ. ನಂಗೆ ಸೀರೆ ಸಾ ಕೊಟ್ಟರಿ. ನಿಮ್ಮ ಪುಣ್ಯ ನೀವ್ಗೆ ದೇವರು ಎಲ್ಲಾ ಒಳ್ಳದ್ ಮಾಡಲಿ"ಂತ ಹಾರೈಸಿತ್. ಆ ಮೇಲೆ ಎಲುಂಬನ ನೋಡಿ "ಇಂವ ಉಸಾರಾದ ಮೇಲೆ ನಾವು ಬಂದವೆ"ಂತ ಹೇಳಿ ಇಬ್ಬರೂ ಅಡ್ಡ ಬಿದ್ದೊ.

ಮಂಜ ಜೀಪುಲಿ ಕುದ್ದಿದ್ದೊ. ಜೀಪುನ ಹಿಂದೆನ ಬಾಗ್‌ಲ್ ತೆಗ್ದ್ ಇಸಿತ್ತ್. ಇಂದ್, ಮಾಚುನವು ಹತ್ತಿ ಕುದ್ದ್ ಅವೇ ಬಾಗ್ಲ್ ಹಾಕ್ಕಂಡೊ. ಅವರ ಮಂಜಂಗೆ ಸಾ ಬೇಜಾರಾಗಿತ್ತ್. ಮಾಚು ಆ ಅಣ್ಣಂಗೆ, ಅದಿಕೆ ಗೊತ್ತಿದ್ದ ಎಲ್ಲಾ ವಿದ್ಯೆನ ಹೇಳಿ ಕೊಟ್ಟಿತ್ತ್. ಗೌರವಂದ ದನಿ ಏನಿಂತ ಹೇಳದೆ ಪ್ರೀತಿಂದ ಅಣ್ಣಂತಳೇ ಕರ್ಯತಿತ್ತ್. ಆಗಾಗ ಅವು "ನೀ ಇದೆಲ್ಲ ಎಲ್ಲಿಂದ ಕಲ್ತ? ಬಾರಿ ಹುಶಾರ್ ಒಳ"ಂತ ಹೊಗ್ಳುದೂ ಇತ್ತ್. ಅಡ್‌ಚಿಲ್ ಹಾಕುದು, ಉರ್ಲ್ ಇಸುದು, ಜೇನ್ ತೆಗಿಯೊದು, ಜೇನ್ ಪೆಟ್ಟಿಗೆಗೆ ಒಕ್ಲ್ ತುಂಬಿಸೂದು-ಹೀಂಗೆ ಕೆಲೊವು ಸಂಗತಿಗಳ ಹೇಳಿ ಕೊಟ್ಟಿತ್ತ್. ಉರ್ಲ್‌ಲಿ ಕಾಡ್ ಹಂದಿ ಹಿಡಿಯಕನ, ಪೆರಿಯದ ಜೇನ್ ತೆಗ್ದ್ ಅವ್ವಂಗೆ ಕೊಡಿಕನ, ಅದರ ಎದ್ರೇ "ಅಮ್ಮಾ, ಮಾಚು ಎಷ್ಟ್ ಹುಶಾರ್ನ ಹೆಂಗ್ಸ್ ಗೊತ್ತುಟ್ಟಾ? ಅದ್ ಕಲ್ಸಿ ಕೊಟ್ಟದ್ರಿಂದಾನೇ ನಾ ಇದೆಲ್ಲ ತಂದದ್ದ್"ಂತ ಹೇಳ್ತಿದ್ದೊ.

ಜೀಪುಲಿ ಕುದ್ದಲ್ಲಿ ಮಾಚುಗೆ ಅವರೆಲ್ಲರ ವಂಚನೆ ಇಲ್ಲದ ಮನ್ಸ್ ನೆನ್ದ್ ಕಣ್ಣೀರ್ ಬಾತ್. ಮನೆವು ಚಪ್ಪೆ ಮೋರೆ ಮಾಡಿಕಂಡ್ ನಿತ್ತಿದ್ದೊ. ಜೀಪು ಹೊರ್ಡಿಕಾಕನ ಮನೆವು ಕೈ ಆಡ್ಸಿದೊ. ಅಣ್ಣ ಅಂದ್ ಬಾಕನ ಮಾತಾಡ್ದ್ ಮಾಚುಗೆ ನೆಂಪಾತ್, ಅವು ಏನೂ ಮಾತಾಡದೆ ಇದ್ದರ ನೋಡಿ ಮಾಚು ಕೇಳ್ತ್ "ಅಣ್ಣಾ, ನೀವೇನು ಮಾತಾಡುದೇ ಇಲ್ಲೆ?" "ಅಲ್ಲಾ, ಎಲುಂಬಂಗೆ ಈ ಕಾಯ್ಲೆ ಬಂದದ್ದ್ ಹೇಂಗೆಂತ, ನಾ ಯೋಚನೆ ಮಾಡ್ದು. ನಾ ಇಲ್ಲಿ ಮುಟ್ಟ ಇಂತ ಕಾಯ್ಲೆ ನೋಡ್ತೇ ಇಲ್ಲೆ. ಸುಳ್ಯಲಿ ಆಗದಿದ್ದರೆ ಮಂಗ್ಳೂರಿಗೆ ಹೋಗಿ. ಅದಿಕ್ಕೆ ನಾ ಹೇಳಿಯೇ ಹಣ ಹೆಚ್ಚ್ ಕೊಟ್ಟದ್ದ್"ಂತ ಹೇಳ್ದೊ. "ಉಪಕಾರ ಆತಣ್ಣ, ಉಸಾರಾದರೆ ನಾವು ನಿಮ್ಮಲ್ಲಿಗೆ ಬಂದವೆ"ಂತ ಹೇಳ್ತ್ ಮಾಚು. ಮತ್ತೆ ಯಾರೂ ಮಾತಾಡ್ತ್‌ಲೆ. ಕಿಟ್ಟ ಮಾತ್ರ ಇಂದ್ ಎಚ್ಚರ ಇದ್ದ್ ಕಣ್ಣ್ ಬಾಯಿ ಬುಟ್ಟ್‌ಕಂಡ್ ಹೊರಗೆ ನೋಡ್ತಿತ್ತ್.

ಸುಬ್ರಹ್ಮಣ್ಯಲಿ ಇವು ಇಳಿಯಕನ ಅವು, ಒಂದ್ ಕುಪ್ಪಿ ಜೇನ್, ಮತ್ತೆ ಒಂದ್ ಕುಪ್ಪಿ ಗ್ಯಾರ್ದ ಹಣ್ಣ್‌ನ ಸರಾಯಿ ತುಂಬ್ಸುದ ಚೀಲ ಕೊಟ್ಟು "ಒಂದ್ ನಿಂಗೆ, ಒಂದ್ ಎಲುಂಬಂಗೆ"ಂತ ನೆಗಾಡ್ದೊ. ನೆಗಾಡ್ರೂ ಕಣ್ಣ್‌ಲಿ ನೀರ್ ಇತ್ತ್, "ಇಂದ ಬಸ್‌ಗೆ"ಂತ ಇಪ್ಪತ್ತ್ ರುಪಾಯಿ ಕೊಟ್ಟು, "ಬನ್ನಿ"ಂತ ಸೀದ ಹೋಗಿ ಜೀಪು ಬುಟ್ಟೊ, ಇವು ಉಕ್ಕಿ ಬಂದ ಕಣ್ಣೀರ್ನ, ಉಟ್ಟ ಬಟ್ಟೆಲಿ ಒರ್ಸಿಕಂಡೊ.

ಸುಳ್ಯ ತಲ್ಪಿದೊ. ಮಾಚುನ ತೌರು ಮನೆಗೆ ಹೋದೊ. ಮಗ ಬಾತ್‌ಂತ ಅದರ ಅವ್ವಂಗೇನ್ ಅಂತ ಕುಸಿ ಆತ್‌ಲ್ಲೆ. ಮಾಚು ಹೇಳ್ತ್ "ನಮ್ಮ ಕರ್ಚ್‌ನ ನಾವೇ ನೋಡಿಕಂಡವೆ. ಅಕ್ಕಿ,ನೆಟ್ಟಿಕಾಯಿ, ಕಾಯಿ ಎಲ್ಲಾ ನಾವೇ ತಂದ್ ಕೊಟ್ಟವೆ"ಂತ. ದುಡ್ದ್ ತಿಂಬವ್ಕೆ ನೆಂಟ್ರ್ ಬಂದರೂ ಬೆಚ್ಚನೇ.

ಮಾಚುಗೆ ಅದರ ಗಂಡಂಗೆ ಮೊದ್ದ್ ಮಾಡುದೇ ಸುರೂನ ಕೆಲ್ಸ. ಮೊರ್ದಿನ ಬೊಳ್ಪುಗೆ ಅವನ ಕರ್ಕಂಡ್ ಧರ್ಮಾಸ್ಪತ್ರೆಗೆ ಹೋತ್. ಡಾಕ್ಟ್ರ ಪೂರಾ ಮೈನ ಪರೀಕ್ಷೆ ಮಾಡಿ ಹೇಳ್ದೊ "ಇದ್ ಒಂದ್ ತರದ ಪರಂಗಿ ಕಾಯ್ಲೆ. ಇದಿಕ್ಕೆ ಐವತ್ತ್ ಅರ್ವತ್ತ್ ಸೂಜಿ ಮೊದ್ದ್ ಕೊಡಕಾದೆ. ಈಗ ಆಸ್ಪತ್ರೆಲಿ ಎಷ್ಟ್ ಉಟ್ಟೋ ಅಷ್ಟ್ ನಾ ಕೊಟ್ಟನೆ. ಅದ್ ಮುಗ್ದ ಮೇಲೆ ನೀವು ಕ್ರಯಕ್ಕೆ ತೆಕಂಡ್ ತಂದ್ ಕೊಡೊಕು."ಂತ.

ಮಾಚು "ಆತ್"ಂತ ಒಪ್ಪಿಕಂಡತ್. ಅದರ ಕೈಲಿ ದುಡ್ಡು ಇದ್ದದರಂದ ದೊಡ್ಡ ಚಿಂತೆ ಆತ್ಲೆ. ಇದ್ದ ದುಡ್ಡು ಮುಗ್ದರೆ ಮತ್ತೆಂತ ಗೆತಿಂತ ಆಲಚನೆ ಬಾಕನ ಮಾತ್ರ ಹೆದ್ರಿಕೆ ಆತಿತ್ತ್. ಅದರೂ ಇವಂಗೆ ಗುಣ ಆದರೆ ಮತ್ತೆ ಇಬ್ಬರೂ ದುಡಿಯಕಲೇಂತ ಸಮ್ಮಾದನ ತೆಕಣ್ತಿತ್ತ್.

ಎಲುಂಬ ಯಾಗೋಳು ಹೋಗಿ ಸೂಜಿ ಮದ್ದ್ ತೆಕಂಡ್ ಮಾತ್ರೆ ತಿಂದ್ ಬರ್ತಿತ್ತ್. ಒಮ್ಮೊಮ್ಮೆ ಮಾಚು ಸಾ ಹೋಗ್ತಿತ್ತ್. ಇದ್ದ ಹಣ ಕರ್ಗಿಕಂಡ್ ಬಾತಿತ್ತ್. ಅದಿಕೆ, ಅದ್ ಒಂದ್ ಹೊತ್ತ್‌ನ ಕೆಲ್ಸಕ್ಕೆ ಬೇರೆ ಮನೆಗಳಿಗೆ ಹೋಗಿ ಬಾತಿತ್ತ್. ಇವಂಗೊಬ್ಬಂಗೆ ಉಸಾರ್ ಆಗದೆ ಎಲ್ಲಿಗೂ ಹೋಕೆ ಗೊತ್ತಿಲ್ಲಲೇ. ತೌರ್ ಮನೆಲಿ ಹಂಗಿಲ್ಲದೆ ಒಳೊಂತ ಮಾತ್ರ ಅದಿಕೆ ಇದ್ದ ಒಂದ್ ಸಮ್ಮಾದನ.

ಹಿಂಗೆ ಎರ್ಡ್ ತಿಂಗ ಆಕಂಡ್ ಬಾತ್. ಒಂದ್ ದಿನ ಮಾಚು ಸಾ ಗಂಡನೊಟ್ಟಿಗೆ ಹೋಗಿತ್ತ್. ಇನ್ನೆಷ್ಟ್ ದಿನ ಅವಂಗೆ ಮೊದ್ದ್ ಬೇಕ್‌ಂತ ಡಾಕ್ಟ್ರ ಹಕ್ಕಲೆ ಕೇಳಿಕೆ. ಡಾಕ್ಟ್ರ ಸೂಜಿ ಮದ್ದ್ ಸಾಕ್. ಆದರೆ ಮಾತ್ರೆ ಮಾತ್ರ ಇನ್ನೂ ಒಂದೆರ್ಡ್ ತಿಂಗ ತೆಕಂಡರೆ ಒಳ್ಳದ್"ಂತ ಹೇಳ್ದೊ. ಈಗ ಮಾಚು ಕೈಲಿ ಇದ್ದದ್ದ್ ಬರೀ ಚಿಲ್ಲರೆ ಮಾತ್ರ!

ಬೇರೆಲ್ಲಿಗಾರ್ ಕೆಲ್ಸಕ್ಕೆ ಹೋಗದೆ ಉಪಾಯನೇ ಇಲ್ಲೆಂತ ಹೇಳ್ವ ಸ್ತಿತಿಲಿ ಅವು ಇದ್ದೊ. ಆಸ್ಪತ್ರೆಂದ ಬಾಕನ ಮಾಚು ನಾವು ಕಲ್ಮಕಾರ್‌ಗೇ ಹೋದರೆ ಆದೋ ಏನೋಂತ ಹೇಳಿಕನ ಅಂವ "ಅಲ್ಲಿನ ಕಾಡ್‌ಂದಲೇ ನಂಗೆ ಸೀಕ್ ಹಿಡ್ಡದ್ದ್. ನಾ ಹೋದ್‌ಲೆ. ನೀ ಮತ್ತೆ ಮಕ್ಕ ಬೇಕಾರೆ ಹೋಗಿ"ಂತ ಹೇಳ್ತ್. ಸೀಕ್ ಅಲ್ಲಿನ ಕಾಡ್‌ಂದ ಏನಾರ್ ಬಾತೋಂತ ಗ್ರೈಸಿ ಮಾಚು ಸುಮ್ಮನಾತ್. ಅಂವ ಬಾರದೆ ನಾ ಹೋದು ಸರಿ ಅಲ್ಲಂತ ಅದ್ ಉತ್ತರ ಕೊಟ್ಟತ್ಲೆ. ಹಾಂಗಾರೆ ಮುಂದಿನ ಗೆತಿ?

ಹೀಂಗೆ ಮಾತಾಡಿಕಂಡ್ ಬಾಕನ ಆಸ್ಪತ್ರೆನ ಎದ್ರ್ ದೊಡ್ಡ ಮಾರ್ಗಕೆ ಸೇರುವಲ್ಲಿ ಮೋರಿ ಮೇಲೆ ಕುದ್ದಿದ್ದ ಹೆಂಗ್ಸ್ ಎಲುಂಬನ ಮತ್ತೆ ಮತ್ತೆ ನೋಡಿ, ಇವು ಅದರ ಎದ್ರಂದ ದಾಟಿಕಾಕನ ಎದ್ದ್ ನಿತ್ತ್ "ನೀ ನಾಗೂರಿನ ಎಲುಂಬ ಅಲ್ಲನಾ?"ಂತ ಕೇಳ್ತ್.

ಇಂವ ಮೂಳೆ ಗೂಡುನ ಹಾಂಗೆ ಇರ್ವ ಅದರ ನೋಡಿ "ಹೌದ್, ನೀ ಯಾರ್? ಯಾರ್‌ಂತ ಗೊತ್ತ್ ಆತ್‌ಲೆಲೇ"ಂತ ಹೇಳ್ತ್.

ಅದ್ ಮಾಚುನ ನೋಡಿ ಹಂಞ ಹೊತ್ತ್ ಮಾತಾಡದೆ "ಇದ್ ನಿನ್ನ ದಿಕ್ಕಾಳ್ತಿನಾ?" ಮತ್ತೆ ಕೇಳ್ತ್.

ಆಗ ಎಲುಂಬಂಗೆ ಇದ್ ನನ್ನ ಮೊದಲ ಹೆಣ್ಣ್‌ಂತ ಗೊತ್ತಾತ್. ಅದರ ಒಟ್ಟಿಗೆ ಇದ್ದ ಏಳೆಂಟ್ ವೊರ್ಸ ಪ್ರಾಯದ ಗೂಡೆ ಇವನ ಮೋರೆನೇ ನೋಡ್ತಿತ್ತ್. ಎಲುಂಬ "ನೀ ಪಾತೆ ಅಲ್ಲಾ? ನೀ ಏನ್ ಇಲ್ಲಿ?"

ಮಾಚು ಎಲುಂಬನ ಕೇಳ್ತ್ "ನಂಗೆ ಗೊತ್ತಾತ್ಲೆ. ಯಾರಿವು?"

ಎಲುಂಬ ಉತ್ತರ ಕೊಟ್ಟತ್ಲೆ. ಆ ಹೆಂಗ್ಸ್ "ನಾ ಅವನ ಸುರುನ ಹೆಣ್ಣ್. ನೀ ಎರ್ಡ್‌ನೇವ್ಳಾ?"ಂತ ಕೇಳ್ತ್.

ಮಾಚು ಗಟ್ಟಿಗೆತ್ತಿ. ಆ ಸಂದರ್ಬನ ತಿಳಿ ಮಾಡಿಕೆ ಹೊರ್ಟತ್. "ಹೌದ್, ನಾ ಇವನ ಎರ್ಡ್‌ನೇ ಹೆಣ್ಣ್. ಈ ಗೂಡೆ ನಿನ್ನ ಕೂಸಾ?"

ಎಲುಂಬನ ಹುಬ್ಬು ಗಂಟಾತ್. ಹೌದ್, ಇದ್ ನನ್ನ ಬುಟ್ಟು ಹೋಗಿ ಎಂಟ್ ವರ್ಸ ಆತ್, ಇದ್ ನನ್ನ ಕೂಸಾ?" ಅದರ ಮೋರೆನೇ ನೋಡ್ತ್. ಇಂವ ಅದರ ನೋಡಿಕನ ಅದ್ ತಲೆ ಕಂತ ಹಾಕಿತ್.

ಪಾತೆ "ಕತೆ ಹಂಞ ದೊಡ್ಡದೇ. ನೀವಿಲ್ಲಿ ಕುದ್ದ್ ಕಣಿ"ಂತ ಎದ್ರಿದ್ದ ಇನ್ನೊಂದ್ ಮೋರಿನ ತೋರ್ಸಿತ್.

ವು ಇಬ್ಬರೂ ಕುದ್ಕೊ.
ಾತೆ ಕತೆ ಸುರು ಮಾಡ್ತ್.
ಾ ಇವನ ಬುಟ್ಟು ಹೋದದಕ್ಕೆ ಜನ ಎಂತ ಹೇಳ್ದನೋ ಗೊತ್ತಿಲ್ಲೆ. ಮಾಚುನ ಕಡೆಗೆ ತಿರ್ಗಿ ಂಗೆ ಯಾರಾರ್ ಏನಾರ್ ಹೇಳ್ಯೊಳನಾ?"

"ನಾ ಒಮ್ಮೆ ದೊಡ್ಡತ್ತೆನ ಹಕ್ಕಲೆ ಕೇಳಿದ್ದೆ "ನಿಮ್ಮ ಮಂಜನ ಸುರುನ ಹೆಣ್ಣ್ ಂವನ ಯಾಕೆ ಬುಟ್ಟು ಹೋದ್ದ್?ಂತ. ಅತ್ತೆ ಹೇಳ್ದೊ "ಯಾಕೆಂತ ಸರಿ ಗೊತ್ತಿಲ್ಲೆ. ನಮ್ಮ ಲ್ಲಿನ ಕ್ರಮಗ ಅದಿಕೆ ಇಷ್ಟ ಆತ್ಲೆನೋ ಏನೋ? ಅದರ ಅಪ್ಪ ಕುಡ್ದ್ ಮನೆಲಿ ಗಲಾಟೆ ಾಡ್ತಿದ್ದೊಗಡ. ಮತ್ತೆ ಕುಡ್ಯಕೆ ಒಂದ್ ಕುಪ್ಪಿ ಸರಾಯಿ ಕೊಟ್ಟ್, ಸಂದಾನದವು ಅದರ ಪ್ಪನ ಈ ಮೊದ್ವೆಗೆ ಒಪ್ಪುಸಿ, ನನ್ನನ್ನ್ ಇಲ್ಲಿಗೆ ಕೊಟ್ಟೊ, ನಂಗೆ ಈ ಮೊದ್ವೆ ಇಷ್ಟ ಇಲ್ಲಾಗಿತ್ತ್"ಂತ ನೀವು ಅತ್ತೆ ಹಕ್ಕಲೆ ಹೇಳಿದರ ಅವು ನಂಗೆ ಹೇಳ್ದೊ"ಂತ ಹೇಳ್ತ್ ಮಾಚು.

ಆ ಮಾತ್‌ಂದ ಅದಿಕೆ ನೆಮ್ಮದಿ ಆತ್. ಒಂದ್ ದೊಡ್ಡ ಉಸ್ರ್ ಎಳ್ಕಂಡ್ ಎದೆ ಮೇಲೆ ೈ ಇಸಿ, ಅದ್ ಹೇಳ್ತ್ "ಅಬ್ಬ! ನಾ ಬಚಾವಾದೆ! ನನ್ನ ಬಗ್ಗೆ ಯಾರಾರ್ ಬೇಡಾದ್ದ್ ೇಳಿರ್‍ವೊಂತ ನೆನ್ಸಿದ್ದೆ. ಜವ್ವಂತಿ ಗೂಡೆ. ಮುಂದೆನೇ ಯಾರೊಟ್ಟಿಗಾರ್ ಚಂಜಾಯಿ ಇದ್ದಿರ್ದು. ಾಂಗೆ ಗಂಡನ ಬುಟ್ಟ್ ಓಡಿ ಹೋತ್‌ಂತ ಸುದ್ದಿ ಹಬ್ಬಿರ್ದುಂತ ಹೆದ್ರಿದ್ದೆ. ನಿಜಾಗಿ ನಂಗೆ ಆ ೊದ್ವೆ ಇಷ್ಟನೇ ಇಲ್ಲಾಗಿತ್ತ್. ಅದಕ್ಕೆ ಸರ್‍ಯಾಗಿ ಅವ್ವಂಗೆ ಎಂತದೋ ರೋಗ ಇತ್ತ್. ಅಪ್ಪ ುಡ್ಕ. ಮತ್ತೆ ದಟಿಗೆಲಿ ಇದ್ದ್ವುಂತೇಳ್ರೆ ತಮ್ಮ ತಂಗೆ. ಅವು ದುಡ್ದ್ ತಾವಷ್ಟ್ ದೊಡ್ಡೊವೊಲ್ಲ. ದ್ರೆಲ್ಲ ಯೋಚನೆ ಮಾಡಿ ಅವ್ವನ ಉಳ್ಸಿಕಂಕ್‌ಂತ ಆಸೆಲಿ ಇವನ ಬುಟ್ಟೆ, ಆದರೆ ಇಂವ ನನ್ನ ುಟ್ಟತ್ಲೆ. ನಂಗೆ ಇಷ್ಟ ಇಲ್ಲದ್ದರೂ ಇಂವ ನನ್ನ ಉಪ್ಯೋಗಿಸಿಕೊಂಡತ್.
ನ್ನ ಹೊಟ್ಟೆಲಿ ಇವನ ಕೂಸು ಉಟ್ಟೊಂತ ಗೊತ್ತಾದ್ದ್ ಅಲ್ಲಿಗೆ ಹೋದ ಮೇಲೆ. ಹೇಂಗೂ ುಟ್ಟೊಳೆ. ಇನ್ನೆಂತ ಹಂಗ್‌ಂತ ನಾ ಅಲ್ಲೇ ದುಡ್ಕಂಡ್ ಅವ್ವಂಗೆ ಮೊದ್ದ್ ಮಾಡಿಕೊಂಡ್ ಇದ್ದೆ. ಅದೇ ಸಮಿಯಲಿ ಅಪ್ಪ ಮರಂದ ಬಿದ್ದ್ ಸತ್ತತ್. ಒಂದ್ ಲೆಕ್ಕಲಿ ಅಂವ ಸತ್ತ್ ನೆಮ್ಮದಿ ಆತ್. ಅಪ್ಪ ದುಡ್ಡದ್ದ್ ಒಂದ್ ಪೈಸೆ ದಟಿಗೆಗೆ ಬರ್ತಿತ್ಲೆ. ನನ್ನಂದಳೇ ದುಡ್ಡು ಎಳ್ಕಂಡ್ ಹೋತಿತ್ತ್. ಮತ್ತೆ ಅವ್ವ ಹಂಞ ಉಸಾರಾತ್. ನಂಗೆ ಈ ಕೂಸು ಹುಟ್ಟಿತ್." ಮತ್ತೊಮ್ಮೆ ಟ್ಟೆಸ್ರು ಬುಟ್ಟತ್

ಅದ್ ಎಲುಂಬನ ನೋಡಿ ಹೇಳ್ತ್ "ನೀ ನಂಬು, ಇದ್ ನಿನ್ನ ಕೂಸು"
ಎಲುಂಬನ ಚೆಹರೆನೇ ಅದಿಕ್ಕೆ ಇತ್ತ್. ಮಾಚು ಹೇಳ್ತ್ "ಹೌದ್, ಇವನ ಹಾಂಗೇ ಉಟ್ಟು." ಾತೆ ಮುಂದ್‌ವರ್ಸಿತ್. "ಬೇರೆವು ಕೂಡಿಕೆ ಮಾಡಿಕೊಂಬಕೆ ಬಂದೊ. ನಾ ಒಪ್ಪಿತ್ಲೆ. ತಮ್ಮ ದುಡ್ಯಕೆ ಆಗುಟು. ತಂಗೆ ಯಾರ ಒಟ್ಟಿಗೋ ಓಡಿ ಹೋತ್. ನಾ ಅವ್ವನ ಮನೆ ಹಕ್ಕಲೆ ನಂದೇ ಒಂದ್ ಜೋಪಡಿ ಕಟ್ಟಿಕಂಡ್ ಬೇರೆ ಒಳೆ. ನನ್ನ ಕೂಸಿಗೆ ಅದರ ಅಪ್ಪನ ತೋರ್‍ಸೊಕುಂತ ಇತ್ತ್. ದೇವ್ರು ಇಂದ್ ಅದರ ನಡ್ಸಿ ಕೊಟ್ಟೊ. ಎಲುಂಬ, ನೀ ಕಟ್ಟಿದ ಕರ್‍ಯಣಿ ಇಂದ, ಇಂದಿಗೂ ನನ್ನ ಕುತ್ತಿಗೆಲಿ ಉಟ್ಟು" ಇಷ್ಟ್ ಹೇಳಿ ಮಾತ್ ನಿಲ್ಸಿತ್. ಕತೆ ಹೇಳ್ವ ಉಮೇದ್ ಕಮ್ಮಿ ಆತ್. ತಗ್ಗಿದ ಸೊರಲಿ
'ನಾ ಇಲ್ಲಿಗೆ ಬಂದದ್ದ್ ಯಾಕೆಂತೇಳ್ರೆ ನಂಗೆ ಉಸಾರಿಲ್ಲೆ. ಅದೇನೋ ಬಿಪಿಂತ ಹೇಳ್ವೆ ಅಲ್ಲಾ, ಅದ್ ಹಂಞ ಹೆಚ್ಚೇ ಉಟ್ಟು, ಎಂತ ಕೆಲ್ಸ ಮಾಡಿಕೆ ಸಾ ಆದ್ಲೆ. ಬೊಚ್ಚೆಲ್ ಅಂದರೆ ಬೊಚ್ಚೆಲ್. ಹಾಂಗೆ ಅದರ ಪರೀಕ್ಷೆ ಮಾಡ್ಸಿಕಂಡ್ ಹೋನೆಂತ ಬಂದದ್ದ್"ಂತ ಹೇಳಿ ಮುಗಿಸ್ತ್.

ಮಾತ್ ಬದ್ಲಾಯಿಸ್ಕೆ "ನೀ ಸಾಲೆಗೆ ಹೋದಿಯನಾ? ನಿನ್ನಹೆಸ್ರ್ ಎಂತ"ಂತ ಮಾಚು ಗೂಡೆನ ಕೇಳ್ತ್.
"ನನ್ನ ಹೆಸ್ರ್ ನಾಗವೇಣಿಂತ. ನಾ ಈಗ ಮೂರ್ನೇ" ಮಾಚು ಅದರ ಹಕ್ಕಲೆ ಕರ್ದ್ ಪ್ರೀತಿಂದ ಅದರ ತಲೆ ಪೂಜಿತ್. ಪಾತೆ ಇವರಿಬ್ಬರ ಕಾಲ್ ಹಿಡ್ಯಕೆ ಹೇಳ್ತ್. ಅಪ್ಪ ಇದ್ದೂ ಇಲ್ಲದ ಹಾಂಗೆ ಇದ್ದ ಆ ಕೂಸುನ ನೋಡಿ ಮಾಚುಗೆ ಕನಿಕರ ಆತ್. ಅದರ ಕೈಲಿದ್ದ ದುಡ್ಡುನ ಪೂರ ಅದಿಕ್ಕೆ ಕೊಟ್ಟು "ಒಳ್ಳೆ ಕಲಿ ಮಗಾ. ಕಲ್ತ್ ಉಸಾರ್ ಆಗ್"ಂತ ಹೇಳ್ತ್.
ಅವ್ವನ ದಟಿಗೆಲಿ ಇರ್ವ ಮಾಚುಗೆ ಅವರ ದಟಿಗೆಗೆ ಕರ್ಯಕೆ ಮನ್ಸ್ ಒಪ್ಪಿತ್ಲೆ.
ಎಲುಂಬ ಮಗಳ ನೋಡಿ ಅದರ ತಲೆ ಮೇಲೆ ಕೈಯಿಟ್ಟ್ ಮೆಲ್ಲ ಪೂಜಿ ಏನೂ ಹೇಳದೆ ಎದ್ದ್ ಹೋತ್. ಅವನ ಕಣ್ಣ್‌ಲಿ ನೀರ್ ಇತ್ತೋ ಏನೋ? ಮಾಚು ಎದ್ದ್ "ನಾ ಅವ್ವನ ದಟಿಗೆಲಿ ಇರ್ದು. ಅದಕ್ಕೆ ನಿಮ್ಮ ಕರಿಯೊದ್ಲೆ. ನಿಮ್ಮ ನೋಡಿ ಕುಸಿ ಆತ್, ಬಂದವೆ ಆತಾ"ಂತ ಕೂಸುನ ಬೆನ್ನ್ ಪೂಜಿ ಎಲುಂಬನ ಹಿಂದೆ ಹೋತ್, ಮಾಚುನ ತಲೆ ಒಳಗೆ ಎಂತೆಂತದ್ದೋ ಕುಣ್ಯೊತಿದ್ದೊ.

ದಟಿಗೆಗೆ ಬಂದ ಎಲುಂಬ ಮಲ್ಗಿತ್. ಮದ್ಯನ ಉಂಡು ಮಲ್ಗಿದೆ ಅಲ್ಲದೆ ಹೀಂಗೆ ಹೊತ್ತಲ್ಲದ ಹೊತ್ತ್‌ಲಿ ಮಲ್ಗಂವ ಅಂವ ಅಲ್ಲ. ಅಂವ ಮಲ್ಗಿದಲ್ಲೇ ಚೇಳ್ ಕಚ್ಚಿದವನ ಹಾಂಗೆ ಮಿಸ್ಕಿಕಂಡಿತ್ತ್.
ಮಾಚು ಮಾತಾಡ್ತ್‌ಲೆ. ಅವಳ ಒಳ್ಗೆ ಸಾ ಏನೋ ಆಗಿತ್ತ್. ಅತ್ತಿತ್ತ ಹೊಣ್ಕೆ, ಅರ್ದ ಗಂಟೆ ಕಳ್ದ್ ಅಂವ ಹೇಳ್ತ್ "ನೀ ಆದರೂ ಆ ಕೂಸಿಗೆ ಹಣ ಕೊಟ್ಟ, ನಾ ಏನೂ ಕೊಟ್ಟತ್ಲೆ." ಅಷ್ಟ್ ಹೇಳಿ ಮಲ್ಗಿದಲ್ಲಿಂದ ಎದ್ದ್ ನಿತ್ತತ್. ಅಂವ ಹಣ ಇಸುವ ಕಂಡಿಗೆ ಕೈ ಹಾಕಿತ್. ನಾಕಾಣೆನೋ, ಎಂಟಾಣೆನೋ ಸಿಕ್ಕಿರೋಕು. "ನಾ ಒಮ್ಮೆ ಹೋಗಿ ಆ ಕೂಸುಗೆ ಕೊಟ್ಟ್ ಬನ್ನೆ"ಂತ ಹೇಳ್ತ್. ಮಾಚುಗೆ ಅವನ ಒಳಗೆ ಆತಿದ್ದ ತಳಮಳ ಅರ್ತಆತ್. "ಪೋಯಿ ನಾನೂ ಬನ್ನೆ"ಂತ ಅದ್ ಸಾ ಹಾಲ್ ಕುಡ್ದಾದ ಸಣ್ಣ ಕೂಸುನ ಎತ್ತಿಕಂಡತ್. ಎಲುಂಬ ಜೋರ್ ಜೋರ್ಲಿ ಹೆಜ್ಜೆ ಹಾಕ್ತಿತ್ತ್. ಮಾಚು ನಿದಾನಲೇ ಹೋಗ್ತಿತ್ತ್. ಕಾಲ್ ಗಂಟೆಲಿ ಅವು ಆಸ್ಪತ್ರೆ ತಲ್ಪಿದೊ. ಪಾತೆ ಮತ್ತೆ ಅದರ ಮಗ– ಅವಿಬ್ಬರೂ ಆಗ ಕುದ್ದಲ್ಲಿ ಇಲ್ಲಾಗಿತ್ತ್. ಅವು ಇಲ್ಲದರ ನೋಡಿ ಎಲುಂಬ ಬೊಚ್ಚಿದ್ದಂಗೆ ಅದೇ ಮೋರಿ ಮೇಲೆ ಕುದ್ದತ್. ಮಾಚು "ಅವು ಒಳಗೆ ಹೋಗಿರ್‍ವೊ, ಡಾಕ್ತ್ರ ನೋಡಿಕೆ"ಂತ ಹೇಳಿ ಒಳಗೆ ಹೋದು, ಪಾತೆನ ಸ್ಟ್ರೆಚರ್ಲಿ ತೆಕಂಡ್ ಹೋದು ಸರಿ ಆತ್. ಗೂಡೆ ಮೊರ್ರ್ಟ್‌ಕಂಡ್ ಅದರ ಹಿಂದೆನೇ ಹೋತಿತ್ತ್. ಮಾಚು ಎಂತಾತೋಂತ ಹೆದ್ರಿ, ಓಡಿಕಂಡ್ ಹೋಗಿ ಆ ನಾಗವೇಣಿನ ಹಿಡ್ಕಂತ್. ಅದ್ ಜೋರ್ ಮೊರ್ರ್ಟ್‌ಕಂಡ್ ಮಾಚುನ ಅಪ್ಪಿಕಂಡತ್. ಮತ್ತೆ ಬಿಕ್ಕಿಕಂಡ್ ಹೇಳ್ತ್ "ನೀವು ಹೋದ ಕೂಡಲೇ ಅವ್ವ"ಅಯ್ಯೋ, ತಲೆ ಬೇನೆ ತಡಿಯಕೇ ಆದ್ಲೆ"ಂತ ಅಲ್ಲೇ ಮಲ್ಗಿ ಹೊಣ್ಕೆಕೆ ಸುರು ಮಾಡ್ತ್. ನೀವು ಹೋಗಿ ಬುಟ್ಟಿದ್ದರಿ. ನಂಗೆ ಏನ್ ಮಾಡುದೂಂತ ಗೊತ್ತಾತ್ಲೆ. ಅಲ್ಲೇ ಹೋತಿದ್ದವರ ಹಕ್ಕಲೆ "ನನ್ನ ಅವ್ವಂಗೆ ತಲೆ ಬೇನೆ ತಡಿಯಕೆ ಆದ್‌ಲೆ. ಹೊಣ್ಕ್‌ತಾ ಎಂತಾರ್ ಮಾಡಿ"ಂತ ಮೊರ್ರ್ಟೆ. ಅವು ಆಸ್ಪತ್ರೆಗೆ ಬಂದ್ ಅಲ್ಲಿನವರ ಕರ್ಕಂಡ್ ಬಂದೊ. ಅವು ಅವ್ವನ ಇಲ್ಲಿಗೆ ತಂದೊ. ಅವ್ವಂಗೆ ಎಂತಾಗುಟೋಂತ ಗೊತ್ತಿಲ್ಲೆ"ಂತ ಮತ್ತೆ ಸಾ ದುಕ್ಕಿಸಿತ್. ಮಾಚುಗೆ ಸಾ ದಿಕ್ಕ್ ಕಾಣದ ಹಾಂಗೆ ಆಗಿತ್.

ಅದ್ ಗೂಡೆನ ಕೈಯಿಂದ ಬುಡ್ಸಿಕಂಡ್ ಪಾತೆನ ಗಾಡಿಲಿ ನೂಕಿಕಂಡ್ ಹೋವವರ ಹಕ್ಕಲೆ ಓಡಿ "ಇದಿಕ್ಕೆ ಏನಾಗುಟು? ಜುವ್ವಕ್ಕೆ ಏನೂ ತೊಂದರೆ ಇಲ್ಲಲೇ?"ಂತ ಕೇಳ್ತ್. ಅವು

ಾವುಗೆ ಸರಿ ಗೊತ್ತಿಲ್ಲೆ. ಆದರೂ ಸೀರಿಯಸ್‌ಂತೆಲ್ಲ ಮಾತಾಡ್ತಿದ್ದೊ. ಅಂದರೆ ಬೋಡ್ದುದು
ಂಜಂತ. ಈಗ ಉಸ್ರ್ ಮಾತ್ರ ಆಡ್ತಾ ಉಟ್ಟು. ನೀವು ಡಾಕ್ಟ್ರಲ್ಲಿ ಕೇಳಿ"ಂತ ಕೋಣೆ ಒಳಗೆ
ಗ್ಗಿದೊ. ಅರ್ದ ಗಂಟೆ ಮುಂಚೆ ಮಾತಾಡ್ದ ಇದ್ ಈಗ ಸಾವ ಸ್ತಿತಿಲಿ ಉಟ್ಟಾ? ಎಂತದಿದ್?
ನ್ಸಾ? ನಿಜನಾ?ಂತ ಹಿಂದಕೆ ಬಂದ್ ಮೊರ್‌ವ್ಕೊಂಡಿದ್ದ ನಾಗವೇಣಿನ ಕೈ ಹಿಡ್ದ್ "ನಿಮ್ಮ
ಡೆವುಂತ ಯಾರಾರ್ ಇಲ್ಲಿ ಒಳನಾ?"ಂತ ಕೇಳ್ತ್. ಅದ್ "ನಂಗೆ ಗೊತ್ತಿಲ್ಲೆ"ಂತ ಹೇಳ್ತ್.
ಾಚು ಅವಳ ಕರ್ಕಂಡ್ ಎಲುಂಬನ ಹಕ್ಕಲೆ ಹೋತ್. ಇದ್ ಕೇಳಿ ಅಂವ ಮೊರ್ವೆ
ಟ್ಟತ್. ಮಾಚು ಹೇಳ್ತ್ "ದೈರ ತೆಕಾ, ಈಗ ಇಲ್ಲಿ ಇವರ ಕಡೆವು ಯಾರಾರ್ ಗೊತ್ತಿದ್ದರೆ
ೇಳ್. ಅವರ ಮನೆಗೆ ಸುದ್ದಿ ಮುಟ್ಟಿಸೋಕು." ಎಲುಂಬ ತಲೆ ಮೇಲೆ ಕೈ ಆಡ್ಸಿ ನೆಂಪು
ಾಡ್ತ್. ಇವರ ಮೊದ್ವೆಗೆ ಸಂದಾನ ಮಾಡ್ದವನ ನೆಂಟ, ಕೆಲ್ಸಿಕಟ್ಟೆಲಿ ಒಂದ್ ಅಂಗಡಿಲಿ ಕೆಲ್ಸ
ಾಡಿಕಂಡ್ ಇದ್ದದ್ದ್ ನೆಂಪಾಗಿ ಮಾಚುನ ಹಕ್ಕಲೆ ಹೇಳ್ತ್. ಮಾಚು "ಹೋಗಿ ಒಮ್ಮೆ ಅವನ
ಾತಾಡ್ಸಿ ಇವರ ಮನೆಯೊವ್ಕೆ ಹೇಳಿ ಬರಲಿ. ನಿಂಗೆ ಇಲ್ಲಿ ಬಾಕೆ ದೇವರೇ ಬುದ್ದಿ ಕೊಟ್ಟದ್.
ಲ್ಲರೆ ಈ ಕೂಸು ಎಂತ ಮಾಡ್ತಿತ್ತ್? ನಿನ್ನ ಹಕ್ಕಲೆ ಇದ್ದ ಆ ದುಡ್ಡುನ ಅವಂಗೆ ಕೊಡು"ಂತ
ೇಳ್ತ್. ಬೇರೆ ಸಂದರ್ಬಲಿ ಆಗಿದ್ದರೆ ಅಂವ ಕಂಡಿತ ಹೊರ್ಡ್ತಿತ್ತ್‌ಲೆ. ಈಗ ಕೂಡಲೇ
ೊರ್ಟತ್. ಎಂತ ಮಾಡುದುಂತ ಗೊತ್ತಾಗದೆ ಮಾಚು ಅದರ ಕೂಸುನೊಟ್ಟಿಗೆ, ಆ ಗೂಡೆನ
ಡ್ಕಂಡ್ ಕುದ್ದತ್. "ಇಂದೇ ಇದ್ ನಾವುಗೆ ಸಿಕ್ಕಗಾಗಿತ್ತಾ?" ಮನ್ಸ್‌ಲೇ ಹೇಳಿಕಂಡತ್. ಮತ್ತೆ
ದರ ಹಕ್ಕಲೆ "ಚಾಯ ಏನಾರ್ ಕುಡ್ದಿಯಾ ಮಗಾ?"ಂತ ಕೇಳ್ತ್. ಅದ್ ಮೊರ್‌ವ್ಕಂಡೇ
ೇಡ"ಂತ ಹೇಳ್ತ್. ಮಾಚು ಸಮ್ದಾನ ಮಾಡ್ತ್. "ನಿನ್ನ ಪುಣ್ಯಕ್ಕೆ ಇಂದ್ ನಿಂಗೆ ನಿನ್ನ ಅಪ್ಪ
ಕ್ಕೊಲೊ. ನೀ ನಮ್ಮ ಮಗಳೇ. ಏನಾದರ್ ನಿಂಗೆ ನಾವು ಒಳೊ. ದೈರ ತೆಕಾ"ಂತ ಹೇಳ್ತ್.
ಅದ್ ಅದರಷ್ಟಕ್ಕೆ ದುಕ್ಡ್‌ಸಿಕಂಡೇ ಇತ್ತ್. ಮಾಚು ಮನ್ಸ್‌ಲೇ "ಪಾಪ, ಎಂತಾದೆನೋ
ನೋ"ಂತ ಹೇಳಿಕಂಡತ್.

ಎಲುಂಬ ಕೆಲ್ಸಿಕಟ್ಟೆಗೆ ಹೋಕನ ಅಂವ ಸಿಕ್ಕಿತ್ಲೆ. "ಅಯ್ಯನ ಬಂಡೆ"ಂತ ಇನ್ನ್ ನಾನೇ
ೋದಾ ಹೇಂಗೆಂತ ಯೋಚನೆ ಮಾಡಿಕಂಡ್ ನಡ್ಕಂಡ್ ಬಾಕನ ಪಾತೆವರ ಒಟ್ಟುಗೆ
ಂದಂವ ಇಂವನ ಗುರ್ತ ಹಿಡ್ದ್ ಮಾತಾಡ್ತ್. ಅಂವನ ಹಕ್ಕಲೆ ಸಂಗತಿ ಹಿಂಗಿಂಗೆ. ಒಮ್ಮೆ
ದರ ಮನೆಗೆ ಸುದ್ದಿ ತಿಳ್ಸೊಕುಂತ ಎಲುಂಬ ಕೇಳಿಕೊಂಡತ್. ಅಂವ ಸಾ ಹೇಳ್ತ್ ಅದಕ್ಕೆ
ರ್ಡ್ ಮೂರ್ ದಿನಂದಳೇ ತಲೆ ಬೇನೆ. ಹಾಂಗೆ ಆಸ್ಪತ್ರೆಲಿ ಒಮ್ಮೆ ತೋರ್ಸಿನೆಂತ ಬಂದದ್ದ್‌ಂತ
ೇಳ್ತಿತ್ತ್. ಅಂವ ಇವರ ಮನೆಂದ ಎರ್ಡ್ ಮೈಲ್ ಇತ್ತಣಂವ. ಆದರೂ ಅವರ ಮನೆಗೆ
ೋಗಿ ತಿಳ್ಸಿ ಉಪಕಾರ ಮಾಡ್ತ್. ಪಾತೆನ ಅವ್ವ ಉಟ್ಟ ಸೀರೆಲೇ ಹೊರ್ಟ್ ಬಾತ್. ನಾಕ್
ಂಟೆ ಬಾಂಗ್ ಆವ ಹೊತ್ತಿಗೆ ಬಂದ್ ತಲ್ಪಿತ್. ಅದರ ನೊಡುಲಿ, ಮಾಚು ನಾಗವೇಣಿನ
ಟಿಗೆಗೆ ಕರ್ಕಂಡ್ ಹೋಗಿ ಗಂಜಿ ಕೊಟ್ಟ್ ಮತ್ತೆ ಕರ್ಕಂಡ್ ಬಾತ್. ಪಾತೆ ಕಣ್ಣ್ ಮುಚ್ಚಿಕಂಡ್,
ಸ್ರ್ ಎಳ್ಕಂಡ್ ಸತ್ತ ಹಾಂಗೆ ಮಲ್ಗಿತ್ತ್. ನರ್ಸ್‌ಗ ಮಗಳಿಗೆ ಒಮ್ಮೆ ತೋರ್ಸಿ ಮತ್ತೆ ಹೊರಗೆ
ಳ್ಸಿದೊ. ಮಾಚುನ ಪ್ರೀತಿಲಿ ಅದ್ ಹಂಞ ಸಮ್ದಾನಲಿ ಇತ್ತ್. . ಅವ್ವ ಬಂದ ಮೇಲೆ ಅದರ
ಡ್ಕಂಡ್ ಮತ್ತೊಮ್ಮೆ ಮೊರ್ಪತ್. ಮಾಚು ಅವ್ವನ ಹಕ್ಕಲೆ ಎಲ್ಲಾ ಹೇಳಿ "ನೋಡಿ, ಇದೆಂತ
ಣ ಹೇಳಿ"ಂತ ದಟಿಗೆಗೆ ಹೋಕೆ ಮುಂದೆ "ಕತ್ತಲೆಗೆ ನಾ ಗಂಜಿ ತಂದ್ ಕೊಡ್ವೆ, ಕೂಸು
ೇಕಾರೆ ನಮ್ಮಲ್ಲಿ ಮಲ್ಗಲಿ"ಂತ ಹೇಳಿ ಹೊರ್ಪತ್.

ಇರ್ಲ್ ಎಂಟ್ ಗಂಟೆಗೆ ಅವ್ವಂಗೆ ಮತ್ತೆ ಪುಳ್ಳಿಗೆ ಗಂಜಿ ತಂದ್ ಕೊಟ್ಟ್, ಪಾತೆ ಏನೆಲ್ಲ ಹೇಳ್ತ್‌ಂತ ಅದರ ಒಳ್ಳತನನ ಹೊಗ್ಳಿ ಹೋತ್. ಮೊರ್ದ್ದಿನ ಬೆಳ್ಗರಿಗೆ ಎಲುಂಬನೊಟ್ಟಿಗೆ ಚಾಯ ಮಾಡಿ ಕಳ್ಸಿತ್. ಇರ್ಳೇ ಪಾತೆನ ದಿನ ಮುಗ್ದ್ ಹೋಗಿತ್ತ್. ಇರ್ಲ್ ಬಂದ ಅದರ ತಮ್ಮ ಹೆಣ ತೆಕಂಡ್ ಹೋವ ತೆಯಾರಿ ಮಾಡಿಕಂಡಿತ್ತ್. ಎಲುಂಬ ಬಂದ್ ಮಾಚುಗೆ ಹೇಳ್ತ್. ಮಾಚು ಬಾತ್. ಕೂಸುನ ತೊಬ್ಬಿಕಂಡ್ ಅದರ ಅವ್ವನ ಹಕ್ಕಲೆ "ಇದ್ ನನ್ನಲ್ಲಿ ಇರಲಿ. ನನ್ನ ಎರ್ಡ್ ಮಕ್ಕಳೊಟ್ಟಿಗೆ ಇದ್ ಮೂರ್ನೇ ಕೂಸಾಗಿ ಇದ್ದದೆ"ಂತ ಹೇಳ್ತ್. ಅವ್ವ "ನಾ ಸತ್ತೇ ಹೋವಂತವಳ ಪಾತೆ ಬೊದ್ಕಿಸಿತ್. ಆ ಒಂದ್ ರ್ಣ ತೀರ್ಸಿಕಾದರ್ ನಾ ಇರಿಕನ ಮುಟ್ಟ ನಾನೇ ಇದರ ಸಾಂಕಿನೆ"ಂತ ಹೇಳ್ತ್.

ಪಾತೆನ ಬೊಜ್ಜಕ್ಕೆ ಹೇಳಿದ್ದೊ. ಎಲುಂಬ ಹೋತ್ಲೆ. ಮಾಚು ಹೋಗಿ ಬಾತ್.

ಇಷ್ಟಾಕನ ಅವರ ಹಕ್ಕಲೆ ಇದ್ದ ದುಡ್ಡು ಪೂರ ಮುಗ್ಯಕಾಗಿತ್ತ್. ಕೆಲ್ಸಕ್ಕೆ ಹೋಗದೆ ಉಪಾಯನೇ ಇಲ್ಲೆಂತ ಹೇಳ್ವಲ್ಲಿಗೆ ಬಂದಿದ್ದೊ. ಮಾಚುಗೆ ಕಲ್ಮಕಾರ್ದ್ ಎಳೆತ! ಎಲುಂಬಂಗೆ ಇಷ್ಟ ಇಲ್ಲೆ. ಕಡೆಗೆ ಕೊಡ್ಗಿಗೆ ಹೋದುಂತ ಆಲಚನೆ ಮಾಡ್ಡೊ. ಮಾಚುನ ಅವ್ವನ ಕಡೆವು ಕೊಡ್ಗ್‌ಲಿ ಇದ್ದೊ. ಅವು ಬಾಕನ ಬಾಕನ ಕಾಫಿ ಕೊಯ್ಯಕೆ ಜೆನ ಇದ್ದರೆ ಕರ್ಕಂಡ್ ಬನ್ನಿಂತ ನಮ್ಮ ದನಿಗ ಹೇಳ್ವೆ, ನೀವು ಬಾದಾದರೆ ಬನ್ನಿ"ಂತ ಹೇಳ್ತಿದ್ದೊ. ಅದಿಕ್ಕೆ ಮಾಚು ಎಲುಂಬನ ಹಕ್ಕಲೆ "ನೀ ಕಲ್ಮಕಾರ್‌ಗೆ ಹೋದಿಲ್ಲೆಂತ ಹೇಳಿಯಾ. ಕೊಡ್ಗಿಗೆ ಆದರೆ ಬಂದೀಯಾ?"ಂತ ಕೇಳ್ತ್. "ನೀ ಪೋಯಿಂತ ಹೇಳ್ರೆ ಬನ್ನೆ"ಂತ ಹೇಳ್ತ್. ಇತ್ತನೊವು ಕೊಡ್ಗಿನ ಚಳಿಗೆ ಹೆದ್ರುವೆ. ಅದ್ರ ಮೇಲೆ ಇದೊಂದ್ ಸಣ್ಣ ಕೂಸು ಬೇರೆ. ಅಲ್ಲಿನ ಚಳಿಗೆ ಕಾಯ್ಲೆ ಏನಾರ್ ಹಿಡ್ದರೆ ಏನ್ ಮಾಡೂದು?ಂತ ಮಾಚುಗೆ ಚಿಂತೆ ಆತ್. ಅದಿಕೆ ಬಂದವರೊಟ್ಟಿಗೆ "ಈಗಳೇ ನಾವು ಬಂದವೆಂತ ಹೇಳಿಕೆ ಆದ್ಲೆ. ಬಾದಾದರೆ ನಾವು ಕಾಗದ ಬರ್ದ್ ಹಾಕುವೆ. ಹೇಂಗೂ ಅವ್ವಂಗೆ ದಾರಿ ಗೊತ್ತುಟ್ಟಲೇ"ಂತ ಹೇಳ್ತ್. "ಆತ್"ಂತ ಅವು ಹೋದೊ. ಈಗ ದುಡ್ಡಿಲ್ಲದೆ ಚೋಪಾರ್ ಆಗಿ ಬುಟ್ಟೊಳೊ. ಇದ್ದ ದುಡ್ಡು ಮುಗ್ಯಕೆ ಮುಂದೆ ಕೊಡ್ಗಿಗೆ ಪೋಯಿಂತ ಗಂಡನ ಹಕ್ಕಲೆ ಹೇಳ್ತ್. ಹಾಂಗಾರೆ "ನಾವು ಬಂದವೆಂತ ಕಾಗದ ಬರ್ದ್ ಹಾಕ್"ಂತ ಅಂವ ಹೇಳ್ತ್. ಮುಂದೆನ ಐತಾರ ಬಂದವೆಂತ ಕಾಗದ ಬರ್ಸಿ ಹಾಕಿತ್. ನೊಡುಲಿ ನಾಲ್ಕೈದ್ ದಿನ. ಚಳಿ ತಡ್ಯವಂತ ಗಟ್ಟಿ ಬಟ್ಟೆ, ಹೋದ್ದಂಗೆ ನಾಕ್ ದಿನ ಉಂಬಕೆ ಬೇಕಾದ ಅಕ್ಕಿ, ಉಪ್ಪು, ಹುಳಿ ಮೆಣ್ಸ್, ಮಕ್ಕಳಿಗೆ ಮಣ್ಣಿ ಮಾಡಿಕೆ ರಾಗಿ ಹೊಡಿ, ಬಿಸ್ಕೇಟ್, ಚಕ್ಕುಲಿ, ಮೊದ್ದ್, ಗ್ಯೆಪುಗೆ ತೊಳ್ದ್ ಒಣ್‌ಗಿಸಿದ ನಾಲ್ಕೈದ್ ತರದ ಒಣ್ಗೆಲ್ ಮೀನ್=ಹೀಂಗೆ ಸಾಮಾನ್ ಒಟ್ಟ್ ಮಾಡಿಕೆ, ಅದ್ರೊಟ್ಟಿಗೆ ಗಂಟ್ ಕಟ್ಟಿಕೆ ಸುರು ಮಾಡ್ತ್. ಸನ್ಯಾರಕ್ಕೆ ಸುಮಾರಾಗಿ ಎಲ್ಲ ಕಟ್ಟಿ ಆತ್.

ಗೊತ್ತಿಲ್ಲದ ಊರಿಗೆ ಹೋಕನ ಹಂಞ ಆದರೂ ದುಡ್ಡಿಲ್ಲದೆ ಏನ್ ಮಾಡುದಂತ ಮಾಚು ಅದರ ಹಕ್ಕಲೆ ಇದ್ದ ಒಂದೇ ಒಂದ್ ಚಿನ್ನದ ನಗ ಮೂಂಗ್ ಬೊಟ್ಟ್‌ನ ಮಾರಿ ಬೆಳ್ಳಿದರ ತೆಕಂಡ್ ಮೂಂಗ್‌ಗೆ ಹಾಕ್ಕಂಡತ್. ಒಳ್ದ ಹಣ ಎಂಟ್ ರುಪಾಯ್ನ ದಾರಿ ಕರ್ಚಿಗೆ ಕಟ್ಟಿಕಂಡತ್. □

ಹಾಳೆ 18
ಗಟ್ಟ ಹತ್ತಿದೊ.

ಐತಾರ ಬಾತ್. ಮಾಚುನ ಅವ್ವ ಹಿಂದೆ ಸುಮಾರ್ ಸರ್ತಿ ಕೊಡ್ಗಿಗೆ ಹೋಗಿ ಬಂದಿತ್ತ್. ಅದ್ ಮಾಚುಗೆ "ಮೊಡಿಕೇರಿಂದ ಹಿಂಬೊತು ಐದ್ ಗಂಟೆಗೆ ಬಸ್ಸು ಉಟ್ಟು, ಅದ್ ಮೂರ್ನಾಡಿಗೆ ಹೋದೆ. ಅಲ್ಲಿಂದ ವಿರಾಜ್ ಪೇಟೆಗೆ ಹೋವ ಬಸ್ ಸಿಕ್ಕಿದೆ. ಬಸ್ ಸಿಕ್ಕದ್ದರೂ ಅಲ್ಲಿಂದ ಮಾಟಂಡಕ್ಕೆ ಎರ್ಡ್ ಮೈಲ್. ನಡ್ಕಂಡೇ ಹೋಕ್. ಇಲ್ಲಿಂದ ಮದ್ಯನ ಉಂಡ್‌ದ್ ಪೋಯಿ. ಕತ್ತಲೆ ಉಂಬಕೆ ಹಂಞ ಹುಗ್ಗೆ ಕಟ್ಟಿಕಾ. ಮಕ್ಕಳಿಗೆ ಕೊಡಿಕೆ ಬೇಕಲೇ."ಂತ ಹೇಳ್ತ್. ಮಾಚು ಹಾಂಗೆ ತೆಕಂಡ್ ಹೋಕೆಂತ ಆರ್ ಪುಂಡಿ ಅಕ್ಕಿ ಹಾಕಿ, ಹುಗ್ಗೆ ಮಾಡ್ತ್. ಬಿಸಿ ನೀರ್ ಹಾಕಿ ಗಟ್ಟಿ ಕುಡು ಪೊಜ್ಜಿ ಕಡ್ತ್. ಬಾಳೆಲೆ ಬಾಡ್ಸಿ ಹುಗ್ಗೆ ಮತ್ತೆ ಪೊಜ್ಜಿನ ಬೇರೆ ಬೇರೆ ಕಟ್ಟಿಕಂಡತ್. ಅವ್ವ ಹೇಳ್ದ ಹಾಂಗೆ ಮದ್ಯನ ಉಂಡ್‌ದೇ ಹೊರ್ಟ್ರೊ, ಗಂಟೆಗೆ ಸರ್ಯಾಗಿ ಹೊರ್ಡಿಕೆ ಅವರಲ್ಲಿ ವಾಚ್ ಉಟ್ಟಾ? ಸಾಲೆ ಇದ್ದ ದಿನ ಆದರೆ ಸಾಲೆ ಮಕ್ಕ ಬಾಕನ ಮದ್ಯನ ಒಂದ್ ಗಂಟೆ, ಪಳ್ಳಿ ಬಾಂಗ್ ಆಕನ ಹನ್ನೆರ್ಡ್ ಮುಕ್ಕಾಲ್‌ಂತ ಲೆಕ್ಕ ಹಾಕ್ತಿದ್ದೊ. ಅದರ ಬುಟ್ಟರೆ ಮಾಡ್‌ನ ನೆರಳೇ ಅವ್ಕೆ ಗಂಟೆ. ಇಂದ್ ಅವ್ ಹೊರ್ಪದ್ದ್ ಆ ನೆರಳ್ ಗಂಟೆ ನೋಡಿಯೇ. ಒಟ್ಟಾರೆ ಅವು ಊಟ ಮಾಡಿ ಹೊರ್ಡಿಕಾಕನ ಹನೀಸ್ ಹೊತ್ತೇ ಆಗಿತ್ತ್. ಬಸ್ ಸ್ಟೇಂಡ್‌ಗೆ ಈ ಮಕ್ಕಳ, ಗಂಟ್ ಮೂಟೆ ಹಿಡ್ಕಂಡ್ ಎತ್ತಿಕನ ಮೊಡಿಕೇರಿಗೆ ಹೋವ ಒಂದ್ ಬಸ್ ಹೋತ್‌ಂತ ಆತ್. ಮಾಚು ಗೊಣ್ಗಿತ್ "ಇನ್ನ್ ಮೊಡಿಕೇರಿ ಮುಟ್ಟಿಕಾಕನ ಅಲ್ಲಿನ ಬಸ್ ತೊಪ್ಪಿ ಹೋದೆನೋ ಏನೋ"ಂತ. ಮತ್ತೆ ಅವ್ವನಲ್ಲಿ ಕೇಳ್ತ್ "ಇಂದ್ ಈ ಕಟ್ಟ್‌ಗಳ ಪುರ್ಬುನ ಅಂಗಡಿಲಿ ಇಸಿ. ನಾಳೆ ಬೊಳ್ಪಿಗೆ ಬೇಗ ಹೋದರೆ ಆಗದಾ?"ಂತ.

ಆಗ ಅದರ ಅವ್ವ "ನಾಳೆ ಆದರೆ ನಾ ಬಾದೇ ಇಲ್ಲೆ. ಇಂದ್ ನಾ ನಿಮ್ಮೊಟ್ಟಿಗೆ ಬಂದರೂ ನಾಳೆ ನಂಗೆ ವಾಪಾಸ್ ಬಂದೇ ಬರೋಕು"ಂತ ಹೇಳ್ತ್. ಇದಿಕ್ಕೆ ನಾಳೆ ಅದೆಂತ ರಾಜ ಕಾರ್ಯ ಉಟ್ಟೋಂತ ಮನ್ಸ್‌ಲಿ ಹೇಳಿಕಂಡತ್ ಮಾಚು.

"ಹಾಂಗಾರೆ ಮತ್ತೆ ಇನ್ನ್ ಏನ್ಮಾಡುದು? ಇಂದೇ ಪೋಯಿ"ಂತ ಹೇಳ್ತ್ ಬೇಜಾರಿಂದಳೇ. ಎಲುಂಬ ಒಬ್ಬ, ನಂಗೆ ಮತ್ತೆ ಇದಿಕೆ ಏನೂ ಸಮ್ಮಂದನೇ ಇಲ್ಲೆಂತ ಹೇಳ್ವ ಹಾಂಗೆ ಒಂದ್ ಮೂಲೆಲಿ ಕೊಕ್ಕಪ ಕುದ್ದ್, ಎಲೆ ಅಡಿಕೆ ತಿಂದ್‌ಕಂಡ್ ಇತ್ತ್.

ಅರ್ದ ಮುಕ್ಕಾಲ್ ಗಂಟೆ ಕಳ್ದ್ ಮೊಡಿಕೇರಿ ಬಸ್ ಬಾತ್. ಇವು ಮಕ್ಕಳ ಮತ್ತೆ ಗಂಟ್ ಮೂಟೆ ಹಿಡ್ಕಂಡ್ ಹಿಂದೆ ಸೀಟ್‌ಲೇ ಕುದ್ದೊ. ಎದ್ರ್ ಸುಮಾರ್ ಸೀಟ್ ಕಾಲಿನೇ ಇತ್ತ್. ಮೇಲ್ಜಾತಿಯೊವುಂತ ಹೇಳ್ವವು ಅಲ್ಲಿ ಇದ್ದರೆ, "ಹೋಗ್, ಹಿಂದೆ ಕುದ್ರು"ಂತನೋ "ಇಲ್ಲಿಂದ ಎದ್ರ್, ಬೇರೆ ಕಡೆ ಹೋಗು"ಂತನೋ ಹೇಳ್ವೆ, ಸುಮ್ಮನೆ ಯಾಕೆ ಅವರ ಬಾಯಿಂದ ಅಂತ ಮಾತ್ ಕೇಳೋಕು? ಅದಿಕೆ ಅವರಂದ ಹೇಳ್ಸಿಕಂಡ್, ಇಲ್ಲಿ ಕುದ್ರುದಕ್ಕಿಂತ ನಾವೇ ಇಲ್ಲಿ ಕುದ್ದರೆ ರಗಳೆ ಇಲ್ಲಲೇ? ಎಷ್ಟ್ ಗಾಂಧಿಗ ಬಂದರೂ ಹಿಂದೆಂದಳೇ ಬಂದ ಜಾತಿಂತ ಹೇಳ್ವ ಭೂತನ ಬುಡಿಕೆ ಯಾರಿಗೂ ಮನ್ಸ್ ಇಲ್ಲೆ. ಅವರಿಂದ "ಛೀ, ಥೂ" ಹೇಳ್ಸಿಕೊಂಬೊ್‌ದಕ್ಕಿಂತ

ನಮ್ಮ ಮರ್ಯಾದೆನ ನಾವೇ ಉಳ್ಸಿಕೊಂಬೋದ್ ಒಳ್ಳೇದಲ್ಲಾ?ಂತ ಮಾಚುನ ಕೂಟದವು ಹಿಂದೆನೇ ಕುದ್ದೊ. ಬಸ್ ಹೋಗ್ತಾ ಇತ್ತ್. ಪೆರ್ಜ, ಅರಂತೋಡು, ಕಲ್ಲ್ ಗುಂಡಿ ಕಳ್ತ್ ಸಂಪಾಜೆ ಬಾತ್. ಸಂಪಾಜೆ ಮುಟ್ಟ ಜೋರ್ಲೇ ಹೋತಿದ್ದ ಬಸ್, ಕ್ಯೊನಾಡ್ ಕಳ್ದ ಹಾಂಗೆ ತಿರ್ಗಾಸ್ ಮತ್ತೆ ಘಾಟಿಲಿ ಮೆಲ್ಲಾನೆ ಹೋತಿತ್ತ್. ಏರ್ ದಾರಿಲಿ "ಗೊಯೋಂ, ಗೊಯೋಂ"ಂತ ತಿಂಗ ತುಂಬಿದ ಬೊಸ್ರಿ ಹೆಂಗ್ಸರ ಹಾಂಗೆ ನಿದಾನಕ್ಕೆ ಹೋತಿತ್ತ್. ಅಂಬೆರ್ಪುಲಿ ಇದ್ದ ಮಾಚುಗೆ ನಾವು ನಡ್‌ಕೊಂಡ್ ಹೋದರೂ ಬಸ್ ಎತ್ತಿಕೆ ಮುಂದೆ ನಾವು ಎತ್ತುವನೋಂತ ಆತ್. ದಾರಿನ ಅತ್ತ ಇತ್ತ ಎಲ್ಲಾ ದೊಡ್ಡ ಗುಡ್ಡೆ, ಕಾಡ್. ಎಡ ಪುಡೆಲಿ ಉದ್ದೋಕೆ ಇದ್ದ ಗುಡ್ಡೆ, ನಿದ್ದೆ ಮಾಡ್ದ ಕುಂಭಕರ್ಣನ ನೆಂಪು ಮಾಡಿಸ್ತಿತ್ತ್. ನೋಡೋ ಮನ್ಸ್ ಇದ್ದವಂಗೆ ಅಲ್ಲೊಂದ್ ಸಣ್ಣ ಸೊರ್ಗನೇ ಇತ್ತ್. ಆದರೆ ಮಾಚುಗೆ ಅದರ ಚಿಂತೆನೇ ಹೆಚ್ಚಾಗಿರ್ಕನ ಅದ್ಯಾವುದರ ಗೋಚರನೇ ಇತ್ತ್‌ಲ್ಲೆ. ನಾವು ಹೊರ್ಟದ್ದ್ ತಡ ಆಗಿ ಮೂರ್ನಾಡಿನ ಬಸ್ ತಪ್ಪಿ ಮೆನಿ ಹೋದರೆಂತ ಒಂದೇ ಚಿಂತೆಲಿತ್ತ್. ಅಂತೂ ಜೋಡುಪಾಲ, ಮದೆನಾಡ್, ಕಾಟ್‌ಕೇರಿಂತ ಮಡಿಕೇರಿ ಹಕ್ಕಲೆ ಬಾತ್. ಮಾಯ್ಚು, ಟೋಲ್ ಗೇಟ್ ಹಕ್ಕಲೆ ಹಕ್ಕಲೆ ಬಾಕನ "ನಾವು ಇಲ್ಲೇ ಇಳಿಯೊಮ. ಬಸ್ ಸ್ಟೇಂಡ್‌ಗೆ ಹೋದರೆ, ನಾವು ಅಲ್ಲಿಗೆ ಎತ್ತಿಕೆ ಮುಂದೆ ಬಸ್ ಹೊರ್ಟರೆ –ಕಷ್ಟ ಆದೆ"ಂತ ಹೇಳ್ತ್. ಎರ್ಡ್ ಮಕ್ಕಳ, ಎರ್ಡ್ ಚೀಲಗಳ ಹಿಡ್ಕಂಡ್ ಇಳ್ದೊ. ಅಲ್ಲೇ ನಿತ್ತ್ ಅತ್ತಿತ್ತ ನೋಡ್ದೊ. ನಾಕೈದ್ ಜೆನಗ ಇದ್ದೊ. ಮಾಚು ಅವಳ ಹಕ್ಕಲೆ ನಿತ್ತಂವನ ಹಕ್ಕಲೆ "ಮೂರ್ನಾಡ್‌ಗೆ ಈಗ ಬಸ್ ಉಟ್ಟಾ?"ಂತ ಕೇಳ್ತ್. ಅಂವ ಇವರ ಮಕ್ಕ, ಗಂಟ್ ಮೂಟೆ ಎಲ್ಲ ನೋಡಿ, ಪಾಪಂತ ಆಗಿ " ಅಯ್ಯೋ, ಈಗಂದರೆ, ಈಗ, ನೀವು ಇಳಿಯಕಾಕನ ಬಸ್ ದಾಟಿತಷ್ಟೇ"ಂತ ಹೇಳಿದ್ದ್ ಕೇಳಿ ಮಾಚುಗೆ ತಲೆ ಮೇಲೆ ಕಲ್ಲ್ ಬಿದ್ದ ಹಾಂಗೆ ಆತ್. ಮೊರ್ಡ್ಕೇ ಬಾತ್. "ಅಯ್ಯನ ಬಂಡೆ, ಹೀಂಗಾತಲೆ, ಇನ್ನೆಂತ ಮಾಡುದು"ಂತ ಕೈ ಪುಜ್ಕಿಕಂಡ್ ಅವ್ವನ ಕೇಳ್ತ್. "ಮಾಡುದೆಂತ? ನಡ್ಕಿದು. ಇಲ್ಲಿಂದ ಮೂರ್ನಾಡಿಗೆ ಹನ್ನೆರಡ್, ಅಲ್ಲಿಂದ ಮಾಟಂಡಕ್ಕೆ ಎರ್ಡ್–ಒಟ್ಟು ಹದಿನಾಲ್ಕ್ ಹದಿನೈದ್ ಮೈಲ್" ಆದುಂತ "ಮೂರ್ನಾಡ್ ಓ ಇಲ್ಲೇ ಹಕ್ಕಲೆನೇ"ಂತ ಹೇಳ್ವ ದಾಟಿಲಿ ಸಸಾರಲಿ ಹೇಳ್ತ್. ಅದ್ ಹೇಳ್ವ ರೀತಿ ಹೇಂಗಿತ್ತ್‌ಂತೇಳ್ರೆ, ಅಷ್ಟ್ ದೂರ ಅದೊಂದ್ ದೊಡ್ಡ ಸಂಗತಿನೇ ಅಲ್ಲಂತ ಹೇಳ್ವ ಹಾಂಗಿತ್ತ್. "ನಾವು ನಾಳೆ, ಅಲ್ಲಂದರೆ ಎರ್ಡ್ ದಿನ ಬುಟ್ಟು ಬಂದಿದ್ದರೂ ಆತಿತ್ತ್. ಇಷ್ಟ್ ಸಣ್ಣ ಮಕ್ಕಳ ಕಟ್ಟಿಕಂಡ್ ಈ ಕತ್ತಲೆಲಿ ಹೋದಾರ್ ಹೇಂಗೆ?"ಂತ ಅರ್ದ ಸಿಟ್ಟ್, ಅರ್ದ ಬೇಜಾರ್ಲಿ ಹೇಳ್ತ್ ಮಾಚು. ಸಿಟ್ಟ್ ಅವ್ವನ ಮೇಲೆನೇ. ಆದರೆ ಹಾಂಗೆಂತ ಹೇಳಿಕೆ ಆದ್‌ಲ್ಲೆಲೇ? ಈ ಮಕ್ಕ ಇಲ್ಲದಿದ್ದರೆ ನಡ್ಯೆದ್ ಒಂದ್ ದೊಡ್ಡ ಸಂಗತಿನೇ ಅಲ್ಲ. ಇವರ ಎತ್ತಿಕಂಡೇ ಹೋಕಲೇ. ಅದೂ ಹದ್ನಾಲ್ಕ್ ಹದ್ನೈದ್ ಮೈಲ್! ಮಾಚು ತಲೆ ಮೇಲೆ ಕೈ ಇಸಿಕಂಡತ್. ಅದರ ಅರ್ಥ ಮಾಡಿಕೊಂಡವನ ಹಾಂಗೆ ಎಲುಂಬನ ಬಾಯಿಂದ ಮುತ್ತು ಉದ್ರಿತ್. ಅತ್ತೆನಲ್ಲಿ "ಅದಿಕೆ ಸಣ್ಣ ಕೂಸು ಉಟ್ಟಲೇ. ನೀವ್ ಈ ಎರ್ಡ್ ಚೀಲ ಹಿಡ್ಕಣಿ. ನಾ ದೊಡ್ಡವನ ಎತ್ತಕಣೆ"ಂತ ಹೇಳಿ, "ಇಲ್ಲಿ ಎಲ್ಲಾರ್ ಹೋಟ್ಲ್ ಮೆನಿ ಉಟ್ಟಾ? ಚಾ ಕುಡಿಯಕಾಗಿತ್ತ್"ಂತ ಹೇಳ್ತ್. ಮಾಯ್ಚು ಅತ್ತ ಇತ್ತ ನೋಡಿ ಅಲ್ಲೇ ಹಂಞ ದೂರಕ್ಕೆ ಕೈ ತೋರ್ಸಿ,"ಓ.. ಅಲ್ಲಿ ಉಟ್ಟು"ಂತ ಹೇಳ್ತ್.

ಅಂವ ಹೇಳ್ದ ಹಾಂಗೆ ಮಾಯ್ಯು ಎರ್ಡ್ ಚೀಲ ಹಿಡ್ಕಂತ್. ಅವು ಒಳ್ಳ ಭಾರನೇ ಇದ್ದೊ. ಅದರ ನೇಚಿ ಹಿಡ್ಕಂಬಕೆ ಅದಿಕ್ಕೆ ಕಷ್ಟ ಆತ್. ಅದ್ "ಇದರ್ಲಿ ಎಂತ? ಕಲ್ಲ್ ತುಂಬ್ಸೊಳನಾ ಹೇಂಗೆ?"ಂತ ಕೇಳ್ತ್. ಸಾಮಾನ್ ಹಂಞ ಹೆಚ್ಚಿ ತುಂಬ್ಸಿದ್ದ್ ಹೌದು. ಮಾಚುಗೇನ್ ಗೊತ್ತು ಹೀಂಗೆ ಹೊತ್ತ್‌ಕಂಡ್ ಹೋವ ಕತೆ ಆದೆಂತ. ಆ ಬಂಜಲಿ ಸಾ ಅದಕ್ಕೆ ಅವ್ವನ ಮಾತ್ ಕೇಳಿ ನಗೆ ಬಾತ್. "ಆತ್ ಹೀಂಗೆ ಕೇಳ್ವ ನೀ ಈ ಎರ್ಡ್ ಚೀಲ ಹಿಡ್ಕಂಡ್ ನಿನ್ನ ಮಾಟಂಡಕ್ಕೆ ಹೋದ ಹಾಂಗೇ"ಂತ ಹೇಳಿ, "ಚೀಲಗಳ ನಂಗೆ ಕೊಡು, ನೀ ಕೂಸುನ ಹಿಡ್ಕ"ಂತ ಹೇಳ್ತ್. "ಈಗ ಬೇಡ, ಮತ್ತೆ ನೋಡೊಮ"ಂತ ಹೇಳಿ, ಮಾರ್ಗ ದಾಟಿ ಅತ್ತ ಚಾ ಕುಡ್ಯಕೆ ಎಲುಂಬನ ಹಿಂದೆ ಹೋದೊ. ಮಾಚು ಅವ್ವನ ಹಿಂದೆ. ಹೌದೋ ಅಲ್ಲನೋಂತ ಕುಸಿ ಕೊಡ್‌ವ ಹಿತಾದ ಚಳಿ. ಚಾ ಕುಡ್ದ್ ಒಮ್ಮೆ ಚುರ್ಕ್ ಆದೊ. ಎರ್ಡ್‌ವರೆ ವರ್ಸದ ಮಂಜನ ಎತ್ತಿಕಂಡ್, ಎಲುಂಬ "ನಂಗೆ ಬೊಚ್ಚಿಕನ ನೀ ನಡಿಯೊಕು ಮಂಜಾ"ಂತ ಹೇಳಿಕನ ಕಿಟ್ಟ "ನಾ ಈಗಳೇ ನಡ್ದನೆ"ಂತ ಕೊಂಞಲಿ ಹೇಳ್ತ್. "ಈಗ ಬೇಡ, ಮತ್ತೆ"ಂತ ಎಲುಂಬ ಮೂರ್ನಾಡ್ ಮಾರ್ಗದ ಕಡೆ ಬಾತ್. ಅದ್ ಸುಳ್ಯ ಮತ್ತೆ ಮೈಸೂರ್ ಮಾರ್ಗದ ನೊಡುಲಿ ಹೋದೆ. ಹೋಕನ ನಾಕೈದ್ ಮೈಲ್, ಇಳ್ಜಾರ್ ದಾರಿ. ಅಲ್ಲಿ ಮುಟ್ಟ ಹತಲಿ ನಡ್ದ ಹಾಂಗೆ ನಡ್ದೊ. ಅಷ್ಟೊತ್ತಿಗೆ ಗಂಟೆ ಆರ್ ಕಳ್ದಿತ್ತ್. ಕತ್ತಲೆ ಒಂದೊಂದೇ ಹೆಜ್ಜೆ ಇಸಿಕಂಡ್ ಬಾತಿತ್ತ್. ಮಾಚು "ಕತ್ತಲೆ ಆತ್"ಂತ ಚೋಪಾರ್‌ಲಿ ಸೊರ ತೆಗ್ತ್. "ಇನ್ನ್ ಹೇಂಗೆ ನಡಿಯೋದು"ಂತೇಳ್ವ ಅರ್ಥಲಿ.

ಕೊಡ್‌ಗ್ ಪೊರ್ಲುಲಿ ಒಂದ್ ಸೊರ್ಗನೇ. ಎಂತ ಸೊರ್ಗ ಆದರೂ ಮಾಚುನ ಕೂಟದವ್ಕೆ ನಡೆವ ನರಕಂದಾಗಿ ಯಾವ ಸೊರ್ಗನೂ ಕಾಂಬತಿತ್ಲೆ. ಗಳಿಗೆಂದ ಗಳಿಗೆಗೆ ಕಾಲ್ ಭಾರ ಆಕಂಡ್ ಬಂದದೆ. ಯಾರೋ ಮಾಡ್ದ ಪಾಪನ ನಾವು ಅನ್‌ಬವಿಸ್ವೆಂತ ಆತಿತ್ತ್ ಮಾಚುಗೆ. ತೆತ್ತಿಕಂಡ ಮಕ್ಕ ಭಾರ ಭಾರ ಆಗ್ತಾ ಒಳೊ. ನಾವು ಯಾಗ ಮಾಟಂಡಕೆ ಎತ್ತುವನೋಂತ ಒಂದೇ ಚಿಂತೆಲಿ ಉಸ್ರು ಎಳ್ಕಂಡ್ ನಡಿಯತಿತ್ತ್. ಒಮ್ಮೆ ಕೂಸುನ ಅವ್ವಂಗೆ ಕೊಡುದು, ಅದರ ಕೈಯಿಂದ ಚೀಲಗಳ ಇದ್ ತೆಕಂಬೊದು. ಒಂದಷ್ಟ್ ದೂರ ಹೋದ ಮೇಲೆ ಕೂಸುನ ಇದ್ ತೆಕಂಬೊದು, ಚೀಲನ ಅದಿಕೆ ಕೊಡುದು. ಅದಿಕೆ ಸರ್ರ್ಯಾಗಿ, ಕೂಸು ಒಂಬಿಕಂಡ್ ಮಲ್ಗಿಕಾಗದೆ ಮೊರ್‌ಚ್ಕಂಡ್ ಇತ್ತ್. ಆಗ ಕೂಸುಗೆ ಹಾಲ್ ಕುಡ್ಸುವ ನೆವನಲಿ ಇದ್ ಕುದ್ದ್, ಕಾಲ್ ಬೊಚ್ಚೆಲ್‌ನ ಕಡಿಮೆ ಮಾಡಿಕಣ್ತಿತ್ತ್. ಕೂಸು ಸಾ ಹಾಲ್ ಕುಡ್ದ ಒಂದ್ ಗಳಿಗೆ ಸುಮ್ಮನಿದ್ದರೆ ಹೆಗ್ಲ್ ಮೇಲೆ ಹಾಕಿಕಂಡ್ ನಡಿಯಕೆ ಸುರು ಮಾಡಿಕನ ಮತ್ತೆ ಅಳಿಕೆ ಸುರು ಮಾಡ್ತಿತ್ತ್. ಥೋ...ಅವರ ಬಂಜ ಹೇಳಿ ಸುಕ ಇಲ್ಲೆ. ಈ ಬಂಜಂದಲೋ ಏನೋ, ಮಾಚುಗೆ ವೀಳ್ಯಡ್ಕಲಿ ಅವರ ನೆರೆಕರೆವು ಆಗಿದ್ದ' ಲೋಬೋರ ಮಗಳ ಕೊಟ್ಟದ್ದ್ ಇಲ್ಲಿಗೇಂತ ಹೇಳಿ ನೆಂಪಾತ್. ಮೂರ್ನಾಡ್ ದಾರಿಲೇ ನಾಕೈದ್ ಮೈಲ್ ದೂರಲಿ ಮೇಕೇರಿ ಹಕ್ಕಲೆ, ಮಾರ್ಗದ ಕರೆಲೇ ಮನೆಂತ ಹೇಳಿಕಂಡಿತ್ತ್. ಅದರ ಅವ್ವಂಗೆ ಹೇಳ್ತ್. ಯಾರಲ್ಲಾರ್ ಕೇಳೊಮ ಅಂದರೆ ಒಬ್ಬ ಮೊಯಿಂಸ ಕಾಂಬೊದ್ಲೆ. ಮನೆಗಾರ್ ಕಂಡವೆನಾ? ಉಹುಂ, ಒಂದೇ ಒಂದ್ ಮನೆ ಸಾ ಕಾಂಬೊದ್ಲೆ. ಎಂತ ಸಾವುನ ಊರುಂತ ಬೊಯ್ಕಂಡೊ. ಹತ್ತ್ ಹೆಜ್ಜೆ ಮುಂದೆ ಹೋಕನ ದೂರಂದ ನೆಟ್ಟಂಗೆ ಬಾವ, ಉದ್ದದ ಒಬ್ಬ ಮೊಯಿಂಸನ ತಲೆ ಕಂಡತ್. ಮಾಲಿಕಂಡೇನ್ ಬಾತ್‌ತ್ಲೆ, ಆದರೂ ಅಂವ ಕುಡ್ಡುಟುಂತ ಗೊತ್ತಾಗ್ತಿತ್ತ್. ಅಂವ ಹಕ್ಕಲೆ

ಬರಲಿಂತ ಹಾಂಗೆ ಕಾದ್ ನಿತ್ತೊ. ಹಕ್ಕಲೆಂದ ನೋಡ್ವೊ. ಇಡೀ ಮೈನ ಎಲ್ಲಿಗೋ ಕಳ್ಸಿಕೆ ಕಟ್ಟಿದ ಸಾಮಾನ್ ತರ ಪೂರ ಮುಚ್ಚಿಕಂಡಿತ್ತ್. ಮಾಯ್ಲು ಅವನ ಹಕ್ಕಲೆ ಹೋಗಿ "ಇಲ್ಲೊಂದ್ ಕ್ರಿಶ್ಚನ್‌ನವರ ಮನೆ ಉಟ್ಟು, ಎಲ್ಲಿಂತ ನೀವುಗೆ ಗೊತ್ತುಟ್ಟಾ"ಂತ ಕೇಳ್ತ್.

ಅಂವ ಹೆದ್ರ್‌ಸುವ ಹಾಂಗೆ ಕಣ್ಣ್ ದೊಡ್ಡದ್ ಮಾಡಿ ನೋಡಿ "ಹ್ಞಂ, ಏನ್"ಂತ ಕೇಳ್ತ್. ಅದ್ ಮತ್ತೊಮ್ಮೆ ಹೇಳ್ತ್. ಪುಣ್ಯಕ್ಕೆ ಅವಂಗೆ ಗೊತ್ತಾತ್. "ಫೆರ್ನಾಂಡೀಸರ ಮನೆನಾ? ಅದ್ ಕಳ್ತಲ್ಲಾ? ಈ ತಿರ್ಗಾಸ್ ಉಟ್ಟಲ್ಲಾ, ಅದ್ ಸುರು ಆವಲ್ಲಿ ಒಂದ್ ದೊಡ್ಡ ಮನೆ ಕಂಡದೆ, ಅದೇ"ಂತ ಹೇಳಿ ಅಂವ ಹೋತ್. ಅಷ್ಟೊತ್ತಿಗೆ ಕತ್ತಲೆ ಕವ್ದ್‌ಕಂಡ್ ಬಾತ್. ಮಾಯ್ಲು ಹೇಳ್ತ್ "ನಾ ಒಮ್ಮೆ ಹೋಗಿ ನೋಡಿ ನೀರ್ ಕುಡ್ದ್ ಬನ್ನೆ. ನೀವಿಲ್ಲಿ ಕುದ್ದ್‌ಕಣಿ"ಂತ.

ಇಲ್ಲಿ ಮಾಚು ಕುದ್ದ್‌ಕಂಡ್ ಕುಪ್ಪಿ ತೆಗ್ದ್ ತಂದ ಚಣ್ಣ ಬಿಸ್ಲೇರ್ ಕುಡ್ತ್. "ಲೋಬರ ಮಗ್ಳ್ ನಮ್ಮ ಇಂದ್ ಇಲ್ಲಿ ನಿಲ್ಲಿಂತ ಹೇಳಿದ್ದರೆ, ಅವ್ವ ಅದಿಕ್ಕೆ ಒಪ್ಪಿದ್ದರೆ"ಂತ ಮನ್ಸ್‌ಲಿದ್ದದರ ಗಂಡಂಗೆ ಹೇಳ್ತ್. ಅಂವ ಹೇಳ್ತ್ "ಕತ್ತಲಾಕನ ಗುರ್ತ ಅರ್ತ ಇಲ್ಲದವರ ನಿಲ್ಲಿಕೆ ಹೇಳಿಕೆ ಅವ್ಕೇನ್ ಮೊರ್ಲಾ?"ಂತ. ಅದೂ ಹೌದ್‌ಂತಾಗಿ ಮಾಚು ಮನ್ಸ್‌ಲೇ "ಓ..ದೇವ್ರೇ..ನಮ್ಮ ಲಾಯ್‌ಕ್‌ಲಿ ಮಾಟಂಡ ತಲ್ಪುವ ಹಾಂಗೆ ಮಾಡ್"ಂತ ದೇವರ ಬೇಡಿಕೊಂಡತ್. ಅಷ್ಟೊತ್ತಿಗೆ ಮಾಯ್ಲು ಸೇಂಕಿಕಂಡ್ ಬಾತ್. "ಉಸ್ಸಪ್ಪಾ"ಂತ ಅಲ್ಲೇ ಕುದ್ದು ಲೋಬರ ಮಗ್ಳ್ ಬೆಂಗ್ಳೂರಿಗೆ ಹೋಗುಟ್ಟುಂತ ಅಲ್ಲಿದ್ದ ಬಾಯಮ್ಮ ಹೇಳ್ತ್‌ಂತ ಹೇಳ್ತ್. ಈಗ ಎರ್ಡೂ ಮಕ್ಕ ನಿಲ್ಗಿದೊ. ನಿದ್ರೆಲಿ ಮತ್ತೆ ಸಾ ದಿನ್ನ! ಮೇಕೇರಿ ಕಳ್ತ್. ಸೇಂಕಿಕಂಡ್, ಕಾಲ್‌ನ ಎತ್ತಿ ಎತ್ತಿ ಇಸಿಕಂಡ್ ಹಾಕತ್ತೂರ್‌ಗೆ ತಲ್ಪಿದೊ. ಪುಣ್ಯಕ್ಕೆ ತಿಂಗಳ ಬೊಳ್ಪು ಇತ್ತ್. ಕತ್ತಲೆಲಿ ನಡ್‌ಕೊಂಡ್   ಹೋಕನ ಮಾಚುನ ಒಳಗೆ ದೆವ್ವಂಗ, ಪ್ರೇತ, ಪಿಶಾಚಿಗ ಬಾಕೆ ಸುರು ಆದೊ. ಬಾಯಿಲಿ ಹೇಳಿಕೆ ಹೆದ್ರಿಕೆ. ದೇವರ ನೆನ್ದ್‌ಕೊಂಡರೂ,   ಏನಾರ್ ಕಂಡದೆನಾಂತ ಅತ್ತ ಇತ್ತ ನೋಡಿಕೊಂಡ್ ಹೋತ್. ದೂರದ ಕೆಲೊವು ಗುಡ್ಡೆಗ ವಿಕಾರಾಗಿ ಕಾಂಬಕನ ಕೂಸುನ ಎದೆಗೊತ್ತಿಕಂಡ್ ಅವ್ವ ಮತ್ತೆ ಗಂಡನೊಟ್ಟಿಗೆ ಹೆಜ್ಜೆ ಹಾಕ್ತಿತ್ತ್. ಮಾಟಂಡಕ್ಕೆ ಹೋದ ಮೇಲೆ ಯಾರಾರ್ ಮಂತ್ರಿಸೋವು ಇದ್ದರೆ ಎರ್ಡೂ ಮಕ್ಕಳಿಗೆ ನೂಲು ಮಂತ್ರಿಸಿ ಕಟ್ಟಿಸೊಕುಂತ ನೆನ್ಸಿತ್. ಈಗ ಅವು ಮುತ್ತಾರ್ಮುಡಿಗೆ ಎತ್ತಿದೊ. ಅರ್ದಕ್ಕಿಂತ ಹೆಚ್ಚ್ ದಾರಿ ಕಳ್ತ್. ಈಗ ನಡಿಯಕೆ ಆಗದಷ್ಟ್ ಕಾಲ್ ಬೇನೆ! ಹೊಟ್ಟೆಲಿ ಹಸಿವು! ಹಸಿವಾಕನ ಮಾಚು ಮಾತ್ರ ಕುಪ್ಪಿ ನೀರ್ ಕುಡಿಯತಿತ್ತ್. ಅವಿಬ್ಬರ್ ಹರಿವ ನೀರ್‌ನೇ ಕುಡ್ವೊ. ಚಳಿ ಇದ್ದರೂ ಮೈ ಬೆವರ್ತಿತ್ತ್. ಏಮೆ ಹೋಗ್‌ವ ಹಾಂಗೆ ನಡ್ವೊ. ಬೊಚ್ಚೆಲ್‌ಗೆ ಒಬ್ಬ ಕುದ್ದರೆ ಮೂವರೂ ಕುದ್ರುದೇ. ಮಾತ್‌ಂತ ಹೇಳ್ವಂತದ್ ಸತ್ತೇ ಹೋತ್. ಮಕ್ಕಳ, ಚೀಲನ ಒಬ್ಬಂದೊಬ್ಬ ಪಗರ್ಸಿಕಂಕೆ ಹಕ್ಕಲೆ ಹೋಗಿ ನಿಲ್ಲುದು, ಅಷ್ಟ್ ಸುಸ್ತಾಗಿ ಬುಟ್ಟಿತ್ತ್. ಮೂವರಿಗೂ ನಾವ್ ಯಾಕೆ ಮದ್ಯನದ ಮೇಲೆ ಹೊರ್ಟೊಂತ, ಒಮ್ಮೆ ಎತ್ತಿರೆ ಸಾಕ್‌ಂತ ಆಗಿತ್ತ್. ಇರ್ಲ್ ಅಂದರೆ. ಸುಮಾರ್ ಹನ್ನೊಂದ್ ಗಂಟೆಗಾಕನ ಅವು ಮೂರ್ನಾಡ್ ತಲ್ಪಿದೊ. ಆ ಸಣ್ಣ ಪೇಟೆ ಮಲ್ಗಿತ್ತ್, ದೂರಂದ ನಾಯಿಗ ಬೇರೆ ಬೇರೆ ಸೊರಲಿ ಬೊಗ್ಳ್‌ತಿದ್ದೊ. ಬಾನ್‌ಲಿ ಎಲ್ಲೋ ಒಂದ್ ಕಡೆ ಇರ್ಲ್ ದೇವರ್, ವಜ್ರದ ತುಣ್ಕುಗಳ ಹರ್‌ಂಡಿದ ಹಾಂಗೆ ಇದ್ದ ತಾರೀಖ್‌ಗ ಇವರ ನೋಡಿ ಕಣ್ಣ್ ಮಿಟಿಕ್ಸ್‌ತಿದ್ದೊ.

ಮೂರ್ನಾಡಿಂದ ದಾರಿ ಕವಲಾದೆ. ಎಡಕ್ಕೆ ತಿರ್‍ಗಿರೆ ವಿರಾಜ್ ಪೇಟೆಗೆ, ಬಲಕ್ಕೆ ಹೋದರೆ ನಾಪೋಕ್ಲ್‌ಗೆ. ಇವು ವಿರಾಜ್‌ಪೇಟೆ ದಾರಿಲಿ ಅಂದಾಜ್ ಎರ್‍ಡ್ ಮೈಲ್ ನಡ್ದರೆ ಮಾಟಂಡ ಸಿಕ್ಕಿದೆ. ಹಕ್ಕಲೆ ಬಾತಲಂತ ಹೇಳ್ವ ಸಮ್ಮಾನಲಿ ಎತ್ತಿಕೆ ಆಗದ ಕಾಲ್‌ನ ಎತ್ತಿಎತ್ತಿ ಇಸಿಕಂಡ್ ಹೋದೊ. ಅಬ್ಬಾ! ಹೇಂಗಾರ್ ಎತ್ತಿದೊ. ಮೂವರ ಕಾಲ್, ಬೇನೆಂದ ನೊ್‌ಡ್ಗಿಗದೆ. ಮಾಚುಗೆ ಮತ್ತೆ ಎಲುಂಬಂಗೆ ಮಕ್ಕ ಇಷ್ಟ್ ದಿನ್ನ ಆದದ್ದ್ ಯಾಗಂತ ಆತಿತ್ತ್. ತೋಟದ ಒಳಗೆ ಹೋಗಿ ಎತ್ತಿಕನ ಗಂಟೆ ಹನ್ನೆರ್‍ಡ್ ಕಳ್ದುಟು. ಅಂತೂ ಮಾಟಂಡದ ಮನೆಗೆ ಮುಟ್ಟಿಬುಟ್ಟೊ.

ಇರ್‍ಲ್ ಮಾತ್ರ ಬುಡ್ವ ದೊಡ್ಡ ಜಾತಿ ನಾಯಿಗ, ರಕ್ಕಸರ ಹಾಂಗೆ ಬೊಗ್ಗಿಕಂಡ್, ಇವರ ಮೇಲೆ ಹಾರಿ ಬಿದ್ದವೆನೋಂತ ಹೇಳ್ವ ಹಾಂಗೆ ಬಂದೊ. ಇವು ಹೆದ್ರಿ ಅಷ್ಟ್ ದೂರ ನಿತ್ತೊ. ನಾಯಿಗಳ ಬೊಗ್ಗಾಟಕ್ಕೆ ಮಕ್ಕ ಎಚ್ಚರಾಗಿ ಮೊ್‌ರ್‍ಡಿಕೆ ಸುರು ಮಾಡ್ದೊ. ಈ ಎಲ್ಲ ಬೊಬ್ಬೆಗೆ ಸಾವ್ಕಾರ್‍ತಿ ಎದ್ದ್, ಬಾಡೆನ ಕಿಟ್ಕಂದ ಲೈಟ್ ಹಾಕಿ ನೋಡ್ದೊ. ಮಾಯ್ಲು "ನಮಸ್ಕಾರ ಅವ್ವಾ, ನಾವು ಈಳ್ಯಡ್ಕಂದ ಬಂದೋರು"ಂತ ಹೇಳಿಕನ ಮಾಚು ಸಾ "ನಮಸ್ಕಾರ ಅವ್ವಾ"ಂತ ಸೊರ ಸೇರ್‍ಸಿತ್. ಸಾವ್ಕಾರ್‍ತಿ ಬಾಗ್ಲ್ ತೆಗ್ದ್ ಇವರ ನೋಡಿ "ಈ ನಡು ರಾತ್ರಿ! ಇಷ್ಟ್ ಚಿಕ್ಕ ಮಕ್ಳನ್ನು ಕಟ್ಟಿಕೊಂಡ್! ಎಂಥ ಕತೆ ನಿಮ್ಮದ್!"ಂತ ಹೇಳಿ, ಮತ್ತೆ "ಗುಡ್ಡದಲ್ಲಿ{ನೀರೆಡಿಲಿ} ಬಿಸ್ನೀರ್ ಉಂಟು. ಕೈಕಾಲ್ ತೊಳ್ಕೊಳ್ಳಿ, ಸ್ವಲ್ಪ ಅನ್ನ ಉಂಟು. ಇದ್ದದನ್ನು ಊಟಮಾಡಿ"ಂತ ಹೇಳಿಕನ ಮಾಚುಗೆ ಕೈಕಾಲ್ ತೊಳಿಯೊದು ಬೇಡ, ಉಂಬೊ್‌ದು ಬೇಡ, ಒಮ್ಮೆ ಮಲ್ಗಿಕೆ ಜಾಗೆ ತೋರ್‍ಸಿರೆ ಸಾಕ್‌ಂತ ಆಗಿತ್ತ್. ಹೇಂಗೋ ಕೈಕಾಲ್ ತೊಳ್ದ್ ಅವು ಕೊಟ್ಟದರ ಉಂಡೊ. "ಇಂದ್ ರಾಟೆ ಮನೆಲಿ ಮಲ್ಗಿ. ನಾಳೆ ಲೈನ್‌ಗೆ ಹೋಕ್ಕ್. ಅಲ್ಲಿ ಕ್ಲೀನ್ ಆಕಲೇ"ಂತ ಎರ್‍ಡ್ ಮೂರ್ ಗೋಣಿ ಚೀಲ ಕೊಟ್ಟೊ, ಆ ಗೋಣಿ ಚೀಲಗಳ ಹಾಸಿ, ಅದರ ಮೇಲೆ ದಟಿಗೆಂದ ತಂದ ಬಟ್ಟೆಗಳ ಹಾಸಿ ಮಲ್ಗಿದೊ. ಕಾಲ್ ಬೇನೆಗೆ ನಿದ್ದೆ ಬಾಕೆ ತಡ ಆದರೂ ಮತ್ತೆ ಗಟ್ಟಿ ನಿದ್ದೆ ಬಾತ್. ಮೊ್‌ರ್‍ದಿನ ಎದ್ರಿಕನ ಎಂಟ್ ಗಂಟೆ ಕಳ್ದಿತ್ತ್.

ಎಲುಂಬನ ಕಾಲ್ ಮಾತ್ರ ನಡಿಯಕಾಗದಷ್ಟ್ ದಪ್ಪ ಆಗಿತ್ತ್. ಹಿಂದನ ದಿನ ನಡ್ದದ್ದ್ ಆತ್ಲೆನೋ ಏನೋಂತ ಗ್ರೈಸಿ, ಮಾಚು ಗುಡ್ಡಲಿದ್ದ ಬಿಸಿಬಿಸಿ ನೀರ್‌ನ ಅವನ ಕಾಲಿಗೆ ಹೊಯ್ತ್. ಬೊಳ್ಪುನ ಕಾಪಿ ತಿಂಡಿ ಸಾವ್ಕಾರ್‍ತಿನ ಮನೆಲೇ ಆತ್. ಮತ್ತೆ ಕೆಲ್ಸದ ಗೂಡೆನ ಹಕ್ಕಲೆ ಬೀಗದ ಕೈ ಕೊಟ್ಟ್, ಲೈನ್ ತೋರ್‍ಸುಂತ ಕಳ್ಸಿದೊ. ಇವು ಚೀಲಗಳ ಮತ್ತೆ ಮಕ್ಳ ಹಿಡ್ಕಂಡ್ ಹೋದೊ. ಎಲುಂಬ ಕಷ್ಟಂದ ಕಾಲ್ ಎಳ್ಕಂಡ್ ಎಳ್ಕಂಡ್ ಹೋತ್. ಸಾವ್ಕಾರ್‍ತಿ ಮನೆಂದ ಕರ್‍ದರೆ ಕೇಳುದು– ಅಷ್ಟೇ ದೂರ ಲೈನ್‌ಗೆ.

ಲೈನ್‌ಂತ ಹೇಳ್ರೆ, ಎರ್‍ಡ್ ಮಾಡ್‌ನ ಉದ್ದದ ಕೊಟೆಗೆ ಹಾಂಗಿರ್‍ವ ಕಟ್ಟಡ. ಅದರ್‍ಲಿ ಕೆಲ್ಸಕ್ಕೆ ಬಂದವರ ಸಣ್ಣ ಸಣ್ಣ ಬಿಡಾರಗ. ಈ ಲೈನ್‌ಲಿ ನಾಕ್ ಬಿಡಾರಗ ಇದ್ದೊ. ಲೈನ್‌ನ ಒಂದ್ ಬಿಡಾರಲಿ, ಎದ್‌ರ್ ಐದಾರ್ ಜೆನ ಮಲ್ಗ್‌ವಷ್ಟ್ ಉದ್ದ ಅಗಲದ ಒಂದ್ ಜಗ್ಲಿ. ಅದರ ಹಿಂದೆ ಅದೇ ಅಳತೆನ ಉಂಬೊಳಗೆ. ಅದರ ಹಿಂದೆ, ಒಂದ್ ಒಂದ್ವರೆ ಕೋಲು ಅಗಲದ ಸಪುರದ ಜಗಲಿ. ಅದರ ಒಂದ್ ಕೊಡಿಲಿ ಕಕ್ಕಸ್ ಇನ್ನೊಂದ್ ಕೊಡಿಲಿ ಎರ್‍ಡ್ ಸಣ್ಣ ಸಣ್ಣ ಕಲ್ಲ್ ಹಾಕಿ ಮಾಡ್ದ ಬಚ್ಚಲ್. ಆ ಲೈನ್‌ಲಿ ಕಾಲಿ ಇದ್ದದ್ದ್ ಇದೊಂದೇ ಬಿಡಾರ. ಕೆಲ್ಸದ ಗೂಡೆ ಬೀಗ ತೆಗ್ದ್ ಬೀಗ, ಬೀಗದ ಕೈ ಎರ್‍ಡ್ ಇವ್ಕೇ ಕೊಟ್ಟ್ ಹೋತ್. ಮಾಚು ಒಳಗೆ

ಒಂದ್ ಕರೆಲಿ ತಂದ ಸಾಮಾನ್‌ಗಳ ಇಸಿ, ಮತ್ತೊಂದ್ ಕರೆನ ಒಂದ್ ಮಾಯ್ಪುಲಿ ಗುಡ್ಸಿ, ತಂದ ಹಳೆ ಬಟ್ಟೆಲಿ ನೆಲ ಪೂಜಿ, ಅಲ್ಲಿ ಮೊಂದ್ರಿ ಹಾಕಿ, ಅದರ ಮೇಲೆ ಗೋಣಿ ಹಾಸಿ, ಅದರ ಮೇಲೊಂದ್ ಹಳೆ ವಲ್ಲಿನ ಬುಡ್ಸಿ, ಎಲುಂಬನ ಅಲ್ಲಿ ಮಲ್ಗಿಕೆ ಹೇಳ್ತ್. ಅಂವ ನರ್ಕಿಕಂಡ್ ಹೋಗಿ ಅಲ್ಲಿ ಮಲ್ಗಿತ್. ತಟಪಟಂತ ಕೈಕಾಲ್ ಆಡ್ಸಿಕಂಡಿದ್ದ ಸಣ್ಣ ಕೂಸುನ ಮಾಚು ಅವನ ಹಕ್ಕಲೆ ಮಲ್ಗಿಸಿತ್. ದೊಡ್ಡಂವ ಹೊರಗೆ ಹೋಗಿ ಮೆಟ್ಟ್ ಕಲ್ಲ್‌ಲಿ ನಿತ್ತ್ ಹೊಸ ಜಾಗೆನ ನೋಡಿಕಂಡ್ ಇತ್ತ್. ಮಾಚು ತಂದ ಚೀಲಗಳ ನೆಲ ಪೂಜಿದಲ್ಲಿ ಇಸಿ, ಆ ಪಡೆನ ಗುಡ್ಸಿ, ಒರ್ಸಿ ಹೊರಗೆ ಹೋತ್.

ಉಂಬೊಳಗೆಲಿ ಅದರ್ಲಿ ಮೊದ್ಲಿದ್ದವು ಬುಟ್ಟ್ ಹೋದ ಸೊಯ್ದೆ ಇತ್ತ್, ಇತ್ತ್‌ಲ್ಲರೆಂತ ಅದ ಮನೆಂದ ಒಂದೆರ್ಡ್ ದಿನದ ಅಡಿಗೆಗೆಂತ ಸೊಲ್ಪ ಚೆರ್‍ಗ್ನ ಸಾ ತಂದಿತ್ತ್. ಒಲೆ ಹಕ್ಕಲೆ ಗುಡ್ಸಿ ಒರ್ಸಿ, ಅಲ್ಲೇ ಇದ್ದ ಮಡಿಕೆ ಕುಡಿಕೆ, ಸೆಡೆ ಸೌಟ್‌ಗಳ ತೊಳ್ದ್ ಬಿಸ್ಲಿಗಿಸಿತ್. ಅವ್ವನ ಹಕ್ಕಲೆ ಒಲೆ ಹೊತ್ತ್‌ಸಿ, ನಿನ್ನೆನ ಹುಗ್ಗೆ, ಪೊಜ್ಜಿ ಹೇಂಗುಟ್ಟ್‌ಂತ ನೋಡಿ, ಬಿಸಿ ಮಾಡಿ ಇಸಿಕೆ ಹೇಳ್ತ್. "ಕಿಚ್ಚ್ ಹೊತ್ತಿತ್ಲೆ ಅಂದರೆ ಒಂದ್ ಸಣ್ಣ ಕುಪ್ಪಿಲಿ ಚಿಮ್ಣೆಣ್ಣೆ ಉಟ್ಟ್, ಕಿಚ್ಚ್ ಹೊತ್ತಿದ ಮೇಲೆ ಹುಗ್ಗೆಗೆ ನೀರ್ ಹೊಯ್ದ್ ಕೊದಿಯಕೆ ಇಸ್. ಗಂಜಿ ಕೊದ್ದ ಮೇಲೆ ಮಕ್ಕಳಿಗೆ ಮತ್ತೆ ಎಲುಂಬಂಗೆ ಕೊಡು"ಂತ ಹೇಳಿ, ಹೊರಗೆ ಮನಾರ ಮಾಡಿಕೆ ಹೋತ್. ಮಾಯ್ಲು, ಗಂಜಿ ಕೊದ್ಸಿ, ಮೀಯಕೆ ನೀರ್ ಇಸಿ, ಮಕ್ಕಳ ಮೀಸಿ, ಅದ್ ಸಾ ಮೀದ್ ನಿನ್ನೆ ಹಾಕಂಡ್ ಬಂದ ಬಟ್ಟೆಗಳ ತೊಳ್ದ್ ಹಾಕಿತ್.

ಇಷ್ಟೆಲ್ಲ ಆಕನ ದೂರಂದ ಬಾಂಗ್‌ದ್ ಸೊರ ಕೇಳ್ತ್. ಮಾಯ್ಲು "ಹಾಂ, ಗಂಟೆ ಒಂದ್ ಆಕೆ ಆತ್. ನಾ ಇನ್ನ್ ಹೊರ್‍ಪನೆ"ಂತ ಮಾಚುನಲ್ಲಿ ಹೇಳ್ತ್. "ಆತ್,ಹೋಗ್, ಈಗ ಎರ್ಡ್ ಉಂಡ್‌ಕಾ"ಂತ ಹೇಳ್ತ್ ಮಾಚು. ಮಾಚುಗೆ ಅದರ ಒಮ್ಮೆದ್ ಕೆಲ್ಸ ಮುಗ್ದಿತ್ತ್. ಎಲುಂಬನ ಕಾಲ್ ಬೇನೆ ಏನೂ ಕಡ್ಮೆ ಆತ್‌ಲಾಗಿತ್ತ್. ಅಂವ ಮೀಯಕೆ ಮುಂದೆ ಅದ್ ಅವನ ಕಾಲಿಗೆ ಬಿಸಿ ಬಿಸಿ ನೀರ್ ಹೊಯ್ತ್. ಮೀದ್, ಬಟ್ಟೆ ಬದ್ಲಿಸಿ, ಉಂಡ್ "ಅಯ್ಯಪ್ಪಾ, ಉಳ್ಳಪ್ಪಾ"ಂತ ನರ್ಕಿಕಂಡ್ ಅಂವ ಮಲ್ಗಿತ್. ಮಾಚು ಸಾ ಬೇಗ ಮೀದ್, ಬೇರೆ ಬಟ್ಟೆ ಉಟ್ಟ್, ತೊಳ್ಯಕೆ ಇದ್ದ ಬಟ್ಟೆಗಳ ತೊಳ್ದ್ ಒಣ್‌ಂಗಿಕೆ ಹಾಕಿ, ಒಳ್ದ ಗಂಜಿನ ಉಂಡ್, ಅವ್ವನ ಕಳ್ಸಿಕೆ ತೆಯಾರಾತ್. ಮಾಯ್ಲು ಸಾವ್ಕಾರ್ತಿನ ಹಕ್ಕಲೆ ಹೇಳಿ ಬಾಕನ, ಇದ್ ಅವ್ವನ ಚೀಲಲಿ ತುಂಬ್ಸುವಂತದರ ತುಂಬ್ಸಿ, ಹಿಡ್ಕಂಡ್ ನಿತ್ತತ್. ಅವ್ವ ಬಂದ ಹಾಂಗೆ ಹೊರ್‍ಪ್, ಮಾರ್ಗ ಮುಟ್ಟ ಹೋಗಿ ಬಸ್ ಹತ್ತಿಸಿ ಬೇಗ ಬಾತ್. ಬಾಕನ ಸಣ್ಣ ಕೂಸು ನಿಲ್ಗಿತ್ತ್. ದೊಡ್ಡವನ, ಹಕ್ಕಲೆ ಮಲ್ಗಿಸಿಕಂಡ್ ಮಾಚು ಸಾ ಮಲ್ಗಿತ್.

ಅದ್ ಎದ್ರಿಕನ ನಾಲ್ಕ್ ಗಂಟೆ. ಚಾಯಂತ ಹೇಳ್ವ ಬಿಸ್ನೀರ್ನ ಎಲುಂಬಂಗೂ ಮಕ್ಕಳಿಗೂ ಕೊಟ್ಟು ಅದ್ ಸಾ ಕುಡ್ದ್, ದೊಡ್ಡವನ ಕೈ ಹಿಡ್ಕಂಡ್ ಸಾವ್ಕಾರ್ತಿನ ಮನೆಗೆ ಹೋತ್. ಕಾಫಿ ತೋಟದ ಯೆಜಮಾಂತಿನ ಅಲ್ಲಿ ಅವ್ವಂತ ಕರಿಯೊದು.

ಮಾಚು ಅವ್ವನ ಹಕ್ಕಲೆ "ಅವಂಗೆ ಕಾಲ್ ಬೇನೆ ಕಮ್ಮಿ ಆತ್‌ಲ್ಲೆ. ಏನಾರ್ ಬೇನೆಗೆ ಆವ ಎಣ್ಣೆ ಇದ್ದರೆ ಕೊಟ್ಟರೆನಾ?"ಂತ ಕೇಳ್ತ್. ಅವು "ಇಂದಾ, ಇದರ ಹಾಕಿ ನೋಡು"ಂತ ಒಂದ್ ಸಣ್ಣ ಕುಪ್ಪಿನ್ ಕೊಟ್ಟೊ,

ಮಾಚು ಹೇಳ್ತ್ "ನಂಗೆ ಕಾಫಿ ತೋಟದ ಕೆಲ್ಸ ಅಷ್ಟ್ ಗೊತ್ತಿಲ್ಲೆ. ಆದರೆ ಕಲ್ತ್‌ಕಣೆ"
ತೋಟಲಿ ಬೇರೆವು ಕೆಲ್ಸ ಮಾಡಿಕನ ನೋಡಿ, ಅವರ ಹಕ್ಕಲೆ ಕೇಳಿ ಕಲ್ತ್‌ಕ"ಂತ ಹೇಳ್ದೊ.

ಅಲ್ಲಿಂದ ಬಂದ್ ಎಲುಂಬನ ಕಾಲ್‌ಗೆ ಎಣ್ಣೆ ಪೂಜಿತ್. ಆಗ ಎಲುಂಬ ಹೇಳ್ತ್ ಇಲ್ಲಿಗೆ ನಾವು ಕೆಲ್ಸಕ್ಕೆಂತ ಬಂದೊ. ಇನ್ನ್ ನೀ ಒಬ್ಬಳೇ ಕೆಲ್ಸ ಮಾಡಿ ನಾವಿಷ್ಟ್ ಜನಗಳ ಹೊಟ್ಟೆ ತುಂಬಿಸಕಾದೆ"

"ಈಗ ಕೂಸು ಸಣ್ಣದ್ ಅಲ್ಲನಾ? ನೀ ಅಂವನ ನೋಡಿಕ. ಅಂವ ದೊಡ್ಡಿತಾಕನ ನೀ ಉಸಾರ್ ಆವ"

ಅಂವ ಹೇಳ್ದ ಹಾಂಗೆ ಅವನ ಕಾಲ್ ಬೇನೆ ಕಮ್ಮಿ ಆವ ಲಕ್ಷಣ ಕಾಂಬತಿತ್ತ್‌ಲೆ. ಒಂಟ್ಹತ್ತ್ ದಿನ ಆತ್.

ಒಂದ್ ದಿನ ಬೊಳ್ಪುಗೆ, ಸಾವ್ಕಾರ್ತಿ ಮಾಚುನ ಕರ್ದ್ "ನಾವಿಂದ್ ಮೊ‌ಡಿಕೇರಿ ಕಡೆಗೆ ಹೋಕೆ ಉಟ್ಟು, ಎಲುಂಬನ ಸಾ ಕರ್ಕಂಡ್ ಹೋದವೆ. ಆಸ್ಪತ್ರೆಲಿ ನಿಲ್ಲೊಕುಂತ ಹೇಳ್ರೆ, ಅಡ್ಮಿಟ್ ಮಾಡಿ ಬಂದವೆ. ಆಗದಾ?"ಂತ ಹೇಳ್ದೊ.

"ನಿಮ್ಮ ಪುಣ್ಯ. ಅಂವ ಒಮ್ಮೆ ಉಸಾರ್ ಆದರೆ ಸಾಕ್‌ಂತ ಆಗುಟು. ಅಲ್ಲಿ ಸೇರ್ರ್ಸೊಕುಂತ ಆದರೆ ಸೇರ್ಸಿ. ಒಟ್ಟಾರೆ ಅಂವ ಉಸಾರ್ ಆದರೆ ಸಾಕ್"

ಹಾಂಗೆ ಎಲುಂಬನ ಸಾ ಜೀಪುಲಿ ಕುದ್ರಿಸಿಕಂಡ್ ಕರ್ಕಂಡ್ ಹೋದೊ. ಅಲ್ಲಿ ಡಾಕ್ಟ್ರು ಒಂದ್ ವಾರ ಇರ್ಲಿಂತ ಹೇಳ್ದಕ್ಕೆ ಅವನ ಆಸ್ಪತ್ರೆಲಿ ಸೇರ್ಸಿ ಬಂದೊ.

ಮಾಚುನವು ಬೇಸ ತಿಂಗ ಮುಗಿಯಕಾಕನ ಮಾಟಂಡಕ್ಕೆ ಬಂದದ್. ಅಷ್ಟೊತ್ತಿಗೆ ಸುಮಾರಾಗಿ ಕಾಫಿ ಕೊಯ್ಲು ಮುಗ್ದಿದ್ದದೆ. ಒಳ್ಳ ಮೆಣ್ಸ್ ಸಾ ಕೊಯ್ದ್ ಆಗಿತ್ತ್. ಈಗ ತೋಟದ್‌ಂತ ದೊಡ್ಡ ಕೆಲ್ಸ ಇಲ್ಲಾಗಿತ್ತ್. ಚಿಗ್ರ್ ತೆಗ್ಯೊದು, ಮತ್ತೆ ಗೊಬ್ಬರ ಹಾಕುದು, ಇನ್ನ್ ಸಂಞ ದಿನ ಕಳ್ದ್.

ಕಾಫಿ ಮತ್ತೆ ಒಳ್ಳ ಮೆಣ್ಸ್ ಕೊಯ್ಯುವ ಸಮಿಯಲಿ ಮಳೆ ಬಾತ್‌ಂತ ಒಣ್‌ಗಿಸಿದರೆಲ್ಲ ಹಾಂಗೆ ಕಟ್ಟಿ ಇಸಿದ್ದೊ.

ಇವರಲ್ಲಿ ಕಾಫಿ ಬೇಳೆ ಮಾಡ್ವ ಪಲ್ಪಿಂಗ್ ಯಂತ್ರ ಇಲ್ಲದಕ್ಕೆ, ಉಂಡೆ ಕಾಫಿನ ಗಾಳಿಗೆ ತೂರಿ ಕಳ್ಳ್ ಬೇರೆ ಮಾಡ್ತಿದ್ದೊ. ಅಲ್ಲಿನ ಕೆಲ್ಸಕ್ಕೆ ಸಾಯ ಮಾಡಿಕೆ ಇದರ ಹಾಕಿದೊ. ಕೂಸುನ ದೊಡ್ಡವನ ಹಕ್ಕಲೆ ಆಡ್ಸಿಕೊಂಬಕೆ ಹೇಳಿ ಇದ್ ಅಲ್ಲೇ ಕೆಲ್ಸ್ ಮಾಡ್ತಿತ್ತ್. ಕಾಫಿ ತುಂಬ್ಸಿಕೊಟ್ಟ ಗೋಣಿ ಬಾಯಿನ ಗಣ್ಮಕ್ಕ ಬಿಗ್ದ್ ಕಟ್ಟಿ ಜೋಕೆಲಿ ಇಸ್ತಿದ್ದೊ. ಆ ಕೆಲ್ಸ ಆದ ಮೇಲೆ ಒಳ್ಳೆ ಮೆಣ್ಸ್ ಹೊಡ್ಕಿ ಗೋಣಿಗೆ ತುಂಬ್ಸಿ ಇಸ್ವ ಕೆಲ್ಸ. ಅದರ ಬಾಯಿ ಕಟ್ಟಿ ಒಳಗೆ ಇಸ್‌ವ ಕೆಲ್ಸ ಗಣ್ಮಕ್ಕಳ್ದೇ. ಅದರ ಒಳ್ಳೆ ಕ್ರಯ ಬಾಕನ ಮಾರುದು. ಅದರ ಗಾಳಿ ಆಡದ ಕೋಣೆಲಿ ಇಸ್‌ತಿದ್ದೊ. ಹಿಂದನ ವೊರ್ಸದ ಮೆಣ್ಸೇ ಹಾಂಗೇ ಇತ್ತ್. ಮಾಚು ಒಬ್ಬಳೇಂತ, ಸಾವ್ಕಾರ್ತಿ ಅವ್ವ, ಅದಿಕೆ ಕೈನ್ ಹಕ್ಕಲೆನೇ ಅದೂ ಇದೂಂತ ಏನಾರ್ ಕೆಲ್ಸ ಕೊಡ್ತಿದ್ದೊ.

ಒಂದ್ ವಾರಲಿ ಎಲುಂಬ ಬಾತ್. ಅತ್ತಿತ್ತ ಹೋವಷ್ಟ್ ಉಸಾರ್ ಆಗಿತ್ತ್. ಇನ್ನ್ ಲೊ‌ವು ದಿನ ಮೊ‌ದ್ದ್ ತಕಂಕ್‌ಂತ ಮೊ‌ದ್ದ್ ಕೊಟ್ಟಿದ್ದೊ. ಮಾಚುಗೆ ಅಂವ ಓಡಾಡ್‌ವಷ್ಟ್ ಆದದ್ದರ ನೋಡಿ ಸಮ್ಮಾದನ ಆತ್. ಅಂವ ಎಲ್ಯಾರ್ ಮಲ್ಗಿದಲ್ಲೇ ಆದರೆ ನಾ ಇಲ್ಲಿ ಏನ್

ಮಾಡ್ದುಂತ ಹೆದ್ರಿಕೆ ಆಗಿತ್ತ್. ದೇವರ ದಯೆಂದ ಇಷ್ಟ್ ಆತಲೇಂತ ಹರ್ಕೆ ಹೇಳಿಕಂಡತ್. ಹಿಂಬೊತ್ ಕೆಲ್ಸ ಬುಟ್ಟು ಹೋಕನ ಸಾವ್ಕಾರ್ತಿನಲ್ಲಿ "ಎಲುಂಬನ ಆಸ್ಪತ್ರೆಗೆ ಕರ್ಕಂಡ್ ಹೋಗಿ ದೊಡ್ಡ ಉಪಕಾರ ಮಾಡ್ದರಿ"ಂತ ಹೇಳಿ ಬಾತ್.

ಸಾವ್ಕಾರ್ತಿಗೆ ಮೂರ್ ಜನ ಮಕ್ಕ. ಗೂಡೆನ ಮ್ವೊದ್ವೆ ಮಾಡಿ ಕೊಟ್ಟಾಗಿತ್ತ್. ಇಬ್ಬರ್ ಹೈದಂಗ ಮ್ವೊದ್ವೆಗೆ ತೆಯಾರ್ ಆದವೇ. ದೊಡ್ಡಂವ ಅಂವ ಆತ್, ಅವನ ಕೆಲ್ಸ ಆತ್‌ಂತ ತೋಟಲಿ ಕೆಲ್ಸ ಮಾಡ್ಸುದು, ಬೊಳ್ಪುಗೆ ಚೆಕ್‌ರೋಲ್ ತೆಗಿಯೊದು, ಕೆಲ್ಸದ ಲೆಕ್ಕ, ಸಂಬಳ ಕೊಡುದು ಇಂತದ್ರೆಲ್ಲಾ ಮಾಡ್‌ತಿತ್ತ್. ಎರ್ಡನೇ ಹೈದಂಗೆ ಬೆಂಗ್ಳೂರ್ಲಿ ಏನೋ ಕೆಲ್ಸ ಇತ್ತ್‌ಗಡ. ಮಜಾ ಮಾಡಿಕೆ ಹೋಗಿ ಕೆಲ್ಸನ ಕಳ್ಕಂತ್. ಅವಂಗೆ ಎಲ್ಲಾ ಅಭ್ಯಾಸ ಇತ್ತ್. ಗಮ್ಮತ್ ಮಾಡಂವ. ಅಂವ ಕೇಳ್ದ ಹಾಂಗೆ ದುಡ್ಡು ಕೊಡೊಕು. ಕೊಡದ್ದರೆ ಅವ್ವನ ಹಕ್ಕಲೆ ಲಡಾಯಿ ಮಾಡ್ತಿತ್ತ್. ಯಾಗ ನೋಡ್ರೂ ಆ ಅವ್ವನ ಮಂಜನ ಜಗಳ ತ್ವೊಪ್ಪುತಿತ್ತ್‌ಲೆ. ಅವಂಗೆ ಇಲ್ಲಾದ ಹಾಳ್ ಅಬ್ಯಾಸಗ ಒಂದೂ ಇಲ್ಲೆ, ಲೈನ್‌ಲಿದ್ದ ಒಂದ್ ಗೂಡೆನ ಸಾ ಬುಡ್ತಿತ್ಲೆಂತ ಹೇಳ್ತಿದ್ದೊ.

ಇವು ಇದ್ದ ಲೈನ್‌ಲಿ ನಾಕ್ ಬಿಡಾರಗ. ಒಂದ್ ಕೊಡಿಲಿ ಇವು. ಎರ್ಡ್ನೇದ್ರಲಿ ತಮಿಳ್ನವು. ಮೂರ್ನೇದರ್ಲಿ ಮಾಚುನ ದೂರದ ನೆಂಟ್ರ್. ಆಚೆ ಕೊಡಿದರ್ಲಿ ಮಡಿವಾಳ್ರ್- ಅವ್ವ, ಮಗ್ಳ್, ಇಬ್ಬರ ಗಂಡದ್ರ್ ತೀರಿ ಹೋಗಿದ್ದೊ. ಅವ್ವ ಯೌವನಲಿ ಗಂಡನೊಟ್ಟಿಗೆ ಇಲ್ಲೇ ಕೆಲ್ಸ ಮಾಡಿಕಂಡ್ ಲೈನ್‌ಲಿ ಇತ್ತ್. ಅದರ ಗಂಡನ ಇಲ್ಲೇ ಲೈನ್‌ಲಿ ಇದ್ದಂವ ಒಬ್ಬ ಕೊಲೆ ಮಾಡ್ತ್. ಆಗ ಮಗ್ಳ್ ಐದಾರ್ ವ್ವೊರ್ಸದ ಕೂಸು. ಗಂಡ ಸತ್ತ ಮೇಲೆ ಜವ್ವಂತಿ ಹೆಣ್ಣ್ ಲೈನ್‌ಲಿ ಇರುದು ಬೇಡಂತ ಅದರ ಮನೆ ಕೆಲ್ಸಕ್ಕೆ ಮಾಡಿಕ್ವೊಂಡೊ. ಮಗ್ಳ್ ಪ್ರಾಯಕ್ಕೆ ಬಂದ ಮೇಲೆ ಮ್ವೊದ್ವೆ ಮಾಡಿ ಕೊಟ್ಟತ್. ಆ ಮೇಲೆ ಮಗ್ಳೊಟ್ಟಿಗೆ ಇತ್ತ್. ಗ್ರಾಚಾರಕ್ಕೆ ಅದರ ಗಂಡನೂ ಎರ್ಡೇ ವರ್ಷಲಿ ತೀರಿಕ್ವೊಂಡತ್. ಅಲ್ಲಿಂದ ಬಂದ್ ಇಬ್ಬರೂ ಇಲ್ಲೇ ಕೆಲ್ಸಕ್ಕೆ ಸೇರಿಕ್ವೊಂಡೊ. ಇಬ್ಬರಿಗೂ ಅಡಿಗೆ, ಮನೆ ಗುಡ್ಸ್, ಒರ್ಸ್‌ಂತ ಎಲ್ಲಾ ಕೆಲ್ಸದ ಜವಾಬ್ದಾರಿನ ಅವ್ವ ಅವ್ಕೇ ಬುಟ್ಟೊ. ಎಷ್ಟೋ ವ್ವೊರ್ಸಂದ ಇಲ್ಲೇ ಇದ್ದಂದರ್ದ, ಈ ಅವ್ವನ ಕುಟುಂಬ, ಲೈನ್ಲಿ ಇದ್ದವರ, ಹೋದವರ ಕತೆ ಪೂರ ಅವ್ಕೆ ಗೊತ್ತಿತ್ತ್. ಅದರ್ಲಿ ಸಾ ಮಗ್ಳ್ ಎಲ್ಲಾ ತಿಳ್ಕಂಬೊಕೆ ಬಾರೀ ಉಸಾರ್. ಈಗಳೂ ನಡೆವ ಸಂಗತಿಗ ಬೇರೆಯವ್ಕಿಂತ ಮುಂದೆ ಗೊತ್ತಾದ್ದು ಇದಿಕ್ಕೇ. ಅದೇ ಒಂದ್ ದಿನ ಮಾಚುನ ಹಕ್ಕಲೆ "ನೀವುಗೆ ಗೊತ್ತಿಲ್ಲನಾ, ಮೂರನೇ ಬಿಡಾರದ ನಿಮ್ಮ ನೆಂಟ್ರ್ ಒಳೊ ಅಲ್ಲಾ? ಅವರ ತಂಗೆನ ನಿಮ್ಮ ಹಕ್ಕಲೆ ಬಿಡಾರದ ತಮಿಳ್ ಹೈದ ಮ್ವೊದ್ವೆ ಆದುಗಡ"ಂತ ಹೇಳ್ದರ ಕೇಳಿ ಮಾಚುಗೆ ನಂಬಿಕೆನೇ ಬಾತ್ಲೆ. ಅದಿಕೆ, ಇದ್ ಹೊಸ ಸಂಗತಿನೇ. ಹಾಂಗಾಗಿ ಅದ್ "ಇಂದನಿ ಅಕ್ಕಾ, ನಾವು ಗೂಡೆಗಳ ಬಗ್ಗೆ ಹಾಂಗೆಲ್ಲ ಮಾತಾಡಿಕಾಗದ್ ಮ್ವೊದ್ವೆ ಆದರೆ ಒಳ್ಳೇದೇ. ಆಗದಿದ್ದರೆ ಹೀಂಗೆಲ್ಲಾ ...."ಂತ ಮಾತ್ ಮುಂದ್‌ವರ್ಸಿಕೆ ಮುಂದೆನೇ "ನೀವು ಎಲ್ಲಿ ಒಳರಿ? ಹೈದನ ಅಪ್ಪ ಅವ್ವ ಎಲ್ಲಾ ಬಂದ್ ನೋಡಿ ಗೂಡೆ ಆದುಂತ ಹೇಳಿ ಹೋಗೊಳೊ"ಂತ ಕೆಬಿಗೆ ಹುಳ ಬುಟ್ಟತ್.

ಹೌದ್, ಮಾಚು ನೋಡಿಕ್ವೊಂಡ್ ಇತ್ತ್. ಆ ಬಿಡಾರದವು ಇವರಲ್ಲಿಗೆ ಬಾದ್ ಇವು ಅವರಲ್ಲಿಗೆ ಹೋದು ಎಲ್ಲ ಜೋರ್ಲೇ ಇತ್ತ್. ಅಂತದ್ ನೆರೆಕರೆಲಿ ಇರ್ವಂತದ್ದೇ ಅಲ್ಲನಾಂತ

ಇದ್ ಗ್ರೈಸಿತ್ತ್. ನೋಡ್ರೆ ಇದರ ಕತೆನೇ ಬೇರೆಂತ ನೆನ್ಸಿಕಂಡ್ ಲೈನ್‌ಗೆ ಹೋತ್. ಅಲ್ಲಿ ಎಲುಂಬ "ನಾ ಎಷ್ಟ್ ದಿನಾಂತ ಹೀಂಗೆ ಕೆಲ್ಸ ಇಲ್ಲದೆ ಕುದ್ರುದು? ನಾಳೆಂದ ನಾನೂ ಕೆಲ್ಸಕ್ಕೆ ಬನ್ನೆ"ಂತ ಹೇಳಿಕನ ಮಾಚು ಹೇಳ್ತ್ "ನಿಂಗೆ ಇನ್ನ್ ಸಾ ಪೂರ ಗುಣ ಆತ್‌ಲ್ಲೆ. ಮತ್ತೆ ಕೂಸು ಸಾ ಸಣ್ಣದೇ. ನಿಂಗೆ ಇಲ್ಲಿ ನಿಲ್ಲಿಕೆ ಆಗದ್ದರೆ ನಾ ಕೂಸುನ ನೋಡಿಕಣೆ, ನೀ ಕೆಲ್ಸಕ್ಕೆ ಹೋಗು. ಎಂತಕ್ಕೆ ಸಾ ನೀ ಅವ್ವನ ಹಕ್ಕಲೆ ಹೇಳೋಕು. ಅವು ಹೇಳ್ದ ಹಾಂಗೆ ಮಾಡೊಮ."

ಹಾಂಗೆ, ಕೆಲ್ಸ ಬುಟ್ಟ ಮೇಲೆ ಹಿಂಬೊತ್ ಇಬ್ಬರೂ ಹೋಗಿ ಅವ್ವನ ಹಕ್ಕಲೆ ಹೇಳ್ರೊ. ಅವು ಎಲುಂಬಂಗೆ ಎರ್ಡ್ ಬೋ‌ಯ್ರೊ. "ನಿನ್ನ ಆಸ್ಪತ್ರೆಗೆ ಸೇರ್ಸಿದ್ದೇ ತೋಪ್ಪಾತ್. ಇಲ್ಲೆ ಕಾಲ್ ಬರಾದೆ ಮಲ್ಕಂಡ್ ಇದ್ದಿದ್ದರೆ ಗೊತ್ತಾಗ್ತಿತ್ತ್. ಈಗ ನಿಂಗೆ ಏನಾಗುಟು? ಮಾಚುನ ಕೂಲಿ ಹಣ ಸಾಕಾ ದ್ಲೆನಾ? ಅಲ್ಲ, ಕೂಸುನ ನೋಡಿಕೋಂಬಕೆ ಬಂಜ ಆದೆನಾ? ಡಾಕ್ಟ್ರ ನೀ ಎರ್ಡ್ ತಿಂಗ ಕೆಲ್ಸ ಮಾಡಿಕೆ ಬೊತ್ತ್‌ಂತ ಹೇಳ್ಯೊಳೊ. ಮತ್ತೆ ಸಾ ನಿಂಗೆ ಕೆಲ್ಸ ಮಾಡೋಕುಂತ ಇದ್ದರೆ ಹೋಗ್. ದುಡಿವೊಪ್ಪೆ ಇಲ್ಲಿ ಎಷ್ಟ್ ಬೇಕಾರ್ ಕೆಲ್ಸ ಉಟ್ಟು, ಮತ್ತೆ ಏನಾರ್ ಹೆಚ್ಚ್ ಕಮ್ಮಿ ಆದರೆ ನಾವು ಬಾಕಿಲ್ಲೆ"ಂತ ಹೇಳ್ದ್ ಅವನ ತಲೆಗೆ ಹೋತ್. "ಅಲ್ಲ, ನಾ ಕುದ್ದ್ ಬೇಜಾರ ಆದೆಂತ ಹೇಳ್ದ್"ಂತ ಮಾತ್ ತಿರ್ಗಿಸಿಕೊಂಡತ್. "ಆತ್, ಇನ್ನ್ ಹದಿನೈದ್ ದಿನ. ಮತ್ತೆ ಕೆಲ್ಸ ಹೇಳ್ನೆ"ಂತ ಇವರ ಕಳ್ಸಿದೊ.

ಮಾಟಂಡದವ್ವೆ, ಇಲ್ಲಿಂದ ಹಂಞ ದೂರಲಿ ಸಾ ತೋಟ, ಗದ್ದೆ ಇತ್ತ್, ಅಲ್ಲಿ ಇನ್ನೊಂದ್ ಲೈನ್ ಇತ್ತ್. ಎಲುಂಬಂಗೆ ಹಗ್ಲ್ ಬೇಜಾರ ಆಕನ ಮಕ್ಕಳ ಕರ್ರ್ಕಂಡ್ ಆ ತೋಟ ಗದ್ದೆ ಕಡೆ ಹೋತಿತ್ತ್. ಹೀಂಗೆ ಹೋಕನ ಒಮ್ಮೆ ಆ ಲೈನ್‌ಲಿ ಇರ್ವ ಒಂದ್ ಅಜ್ಜಿನ ಗುರ್ತ ಆತ್. ಏನ್ ಎಲ್ಲಿಂತ ಮಾತಾಡಿ ಆಕನ ಅವು ಸಾ ಸುಳ್ಯ ಕಡೆವೇ, ಮತ್ತೆ ದೂರಂದ ನೆಂಟ್ರೇ. ಆ ಅಜ್ಜಿ ದೊಡ್ಡ ದಗಣೆ. ಕೈ ಬಾಯಿ ತಿರ್ಗಿಸಿಕಂಡ್ ಇಲ್ಲದ ಪ್ರೀತಿನ ತೋರ್ಸಿಕಂಡ್ ಮಾತಾಡಿಕನ ಯಾರೇ ಆದರೂ ಮೋರ್ಲ್ಹಾಕು. ಹಾಂಗೆ ಎಲುಂಬನ ಹಕ್ಕಲೆ "ನಾವು ನೆಂಟ್ರೇ ಅಲ್ಲನಾ? ನಮ್ಮಲ್ಲಿಗೆ ಬಾ ಮಂಜ"ಂತ ಕರ್ರ್ಕಂಡ್ ಹೋತ್. ಕುಡ್ಯಕೆ ಕೊಟ್ಟತ್. ಮಾತಾಡಿ ಮಾತಾಡಿ ಮಗಳ ಸಾ ಪರ್ಚಯ ಮಾಡಿಕೊಟ್ಟ್, ನನ್ನ ಈ ಮಗಳಿಗೆ ಒಂದ್ ಸಂಮಂದ ಮಾಡೋಕುಂತ ಹೇಳ್ತ್. ಕುಡ್ದ ಚಾದ ರ್‌ಣನ ಸಂದಾಯ ಮಾಡ್ವ ಹಾಂಗೆ "ಆತ್, ಈಗ ನೆಂಪಾದ್‌ಲೆ. ಇದ್ದರೆ ಹೇಳ್ನೆ"ಂತ ಅಲ್ಲಿಂದ ಬಾತ್. ಆ ಮೇಲೆ ಹಗ್ಲ್ ಲೈನ್ ಮನೆಲಿ ಬೇಜಾರಂತ ದಿನಾ ಅಲ್ಲಿ ಹೋಕೆ ಸುರು ಮಾಡ್ತ್. ದಿನಾ ಅಲ್ಲಿಗೆ ಹೋದರ ನೋಡಿ ಮಾಚುಗೆ ಕೋಪ ಬಾತ್. "ಪ್ರಾಯದ ಗೂಡೆಗ ಇರ್ವ ಮನೆಗೆ ದಿನಾ ಹೋದು ಒಳ್ಳೇದಲ್ಲ"ಂತ ಹೇಳ್ತ್.

"ಹೋದರೆ ಏನಾದೆ? ನಾ ಅದರ ಹಿಡ್ಯಕೆ ಹೋನೆನಾ?"ಂತ ಪೆದ್‌ಂಬು ಮಾತಾಡ್ತ್.

"ಹಿಡ್ಯಕಿಲ್ಲೆಂತ ಹೇಂಗೆ ಹೇಳೀಯಾ? ಕಿಚ್ಚಿನ ಹಕ್ಕಲೆ ಇಸಿದ ಬೆಣ್ಣೆ ಕರ್ಗುದಿಲ್ಲೆಂತ ಏನಾರ್ ಉಟ್ಟಾ?"

ಅದಿಕೆ ಅಂವ ಮಾತಾಡ್ತ್‌ಲೆ.

ನಾಕ್ ದಿನ ಬುಟ್ಟು ಅವ್ವ ಅವನ ಕರ್ದ್ "ನಾಳೆಂದ ಗದ್ದೆ ಹೂಡಿಕೆ ಹೋಗ್"ಂತ ಹೇಳ್ರೊ.

ಸಾವ್ಕಾರ್ತಿನವರ ಹಟ್ಟಿ, ಗದ್ದೆ ಎಲ್ಲಾ ಆ ಅಜ್ಜಿನ ಲೈನ್ ಹಕ್ಕಲೆನೇ. ಹಾಂಗೆ ಅತ್ತ ಹೋಕನ ಬಾಕನ ಒಂದ್ ಸರ್ತಿ ಆದರೂ ಅವನ ಸವಾರಿ ಅವರಲ್ಲಿಗೆ ಹೋಗದೆ ಇರ್ತಿತ್ಲೆ. ಅವ್ವ ಮಗಳ ಮಾತ್ ಕತೆಲಿ ಅಂತ ಚಂಜಾಯಿ ಇತ್ತ್. ಯಾರ್ ಸಾ ಮೋ್ರ್‌ಲ್ಯಾವೊ! ಒಮ್ಮೊಮ್ಮೆ ಅಜ್ಜಿ ಇಂವ ಬಾಕನ ಏನೋ ನೆವನ ಹೇಳಿ ಅವರಿಬ್ಬರ ಬುಟ್ಟು ಎಲ್ಲಾರ್ ಹೋಗಿ ಬುಡ್ತಿತ್ತ್. ಎಲುಂಬಂಗೆ ಮಾಚು ಹೇಳ್ದ ಕಿಚ್ಚ್ ಹಕ್ಕಲೆನ ಬೆಣ್ಣೆಂತ ಮಾತ್ ಕೆಬಿಲಿ ಕೇಳ್ತಿತ್ತ್. ಏನಾರ್ ಆಗಿ ಬುಡ್ದೋಂತ ಹೆದರಿ ಅಜ್ಜಿನೊಟ್ಟಿಗೆ ಅಂವ ಸಾ ಹೊರ್ಪ್ ಬುಡ್ತಿತ್ತ್. ಮಗ್ಳ "ಹೋಗ್ಬೇಡಿ, ಹಂಙ ಹೊತ್ತ್ ಇರಿ"ಂತ ಹೇಳ್ರೂ ಕೇಳದ್ದಾಂಗೆ ಮಾಡ್ತಿತ್ತ್. ಒಂದ್ ದಿನ ಮೋ್ಡಿವಾಳ್ತಿ ಹೆಂಗ್ಸ್ ಮಾಚುಗೆ ಸಿಕ್ಕಿದ್ "ಅಲ್ಲಕ್ಕಾ, ಎಂತದ್? ಎಲುಂಬಣ್ಣ ದಿನಾ ಅಜ್ಜಿ ಮನೆಗೆ ಹೋದವೆಗಡ. ನೀವು ಹಂಙ ಜಾಗರ್ತೆಲಿ ಇರೋಕು. ಅವು ಜನ ಅಂತವೇ. ಮಗಳಿಗೆ ಬೇರೆ ಜನಗ ಸಾ ಒಳೊ. ಪ್ರಾಯ ಮೂವತ್ತೈದ್ ಆತ್. ಮೋ್ದ್ವೆ ಆಗದ್ದಕ್ಕೆ ಏನೇನೋ ನಾಟಕ ಮಾಡ್ತಾ ಒಳೊ"ಂತ ಹೇಳಿ, ಮಾಚುನ ತಲೆಗೆ ಹುಳು ಅಲ್ಲ, ಹಾವ್‌ನೇ ಬುಟ್ಟತ್.

ಮಾಚು ಗಂಡನೊಟ್ಟಿಗೆ ಜಗಳ ಮಾಡಿಕೆ ಸುರು ಮಾಡ್ತ್. "ಅಂಗಾರನ ಹೆಣ್ಣ್‌ನ ಸಂಗತಿ ನೀ ಮೋ್ರ್ತ್ ಬುಟ್ಟನಾ? ಅಂದ್ ಅಂವ ಸುಮ್ಮ ಸುಮ್ಮಂಗೆ ನಿನ್ನ ಮೇಲೆ ದೂರು ಹೇಳಿ ಹೊಡ್ಸಿತ್. ನೀ ಒಳ್ಳವನೇ ಆಗಿರ್ವ, ಆದರೆ ಅಜ್ಜಿನ ಮನೆಗೆ ಹೋಗ್ತಾ ಇರಿಕನ ಆ ಮೋ್ದ್ವೆ ಆಗದ ಹೆಂಗ್ಸಿಗೆ ಏನಾರ್ ಆದರೆ ನಿನ್ನ ಕುತ್ತಿಗೆಗೆ ಬಾಕೆ ಇರ್ದು"ಂತ ಹೇಳ್ತ್. ಈಗ ಹೇಳ್ದ್ ಅವಂಗೆ ನಾಟಿತ್. ಅಂದ್‌ಂದ ಅಜ್ಜಿ ಮನೆಗೆ ಹೋದರ ಬುಟ್ಟ್ ಬುಟ್ಟತ್.

ಅಜ್ಜಿ ಕಾದ್ ನಿತ್ತ್ ಇವನ ಕರ್ಯತಿತ್ತ್. ಇಂವ ಏನಾರ್ ನೆಂವನ ಹೇಳಿ ಜಾರ್ತಿತ್ತ್. ಅಜ್ಜಿನಲ್ಲಿಗೆ ಹೋದ್‌ಲೆಂತ ಅದಿಕೆ ಎಲುಂಬನೊಟ್ಟಿಗೆ ಸಿಟ್ಟ್ ಬಾಕೆ ಕಾರಣ ಆತ್. ಕೆಲೊನ್ವ್ ಕೆಸರ್ಲಿದ್ದ ಮುಳ್ಳ್‌ನ ಹಾಂಗೆ. ಒಳಗಿಂದ ಒಳಗೇ ಗೊತ್ತಾಗದ ಹಾಂಗೆ ಏನಾರ್ ತೊಂದರೆ ಕೊಟ್ಟವೆ.

ಮಾಚುಗೆ ಮಳ್ಗಾಲ- ಕಾರ್ತಿಂಗ, ಆಟಿಲಿ ಅಳ್ಂಬು ಹುಡ್ಕುವ ಮೋ್ರ್ಲ್ ಇತ್ತಲೇ. ಹಾಂಗೆ ಒಂದ್ ರಜೆ ದಿನ ಬೊಳ್ಪುಗೆ ಬೇಗ ಎದ್ದ್ ಅಡಿಗೆ ಎಲ್ಲ ಮಾಡಿ, ಮಕ್ಕಳಿಗೆ ಉಂಬಕೆ ಕೊಟ್ಟು, ಎಲುಂಬನ ಹಕ್ಕಲೆ "ಸಿಡ್ಲ್ ಹೊಡೀತಾ ಉಟ್ಟ್, ಎಲ್ಯಾರ್ ಅಳ್ಂಬು ಮೂಡದೆ ಇರಿಕಿಲ್ಲೆ. ಕೂಸುನ ಮಲ್ಗಿಸಿ ಹೋನೆ, ನೋಡಿಕಾ"ಂತ ಹೇಳಿ ಮೋ್ಡ್ಜೀಲ ಹಿಡ್ಕಂಡ್ ಹೊರ್ಪತ್. ಅಜ್ಜಿನ ಮನೆ ಹಕ್ಕಲೆನೇ ದಾಟುದರ ಅಜ್ಜಿ ನೋಡ್ತ್. ಹಂಙ ಹೊತ್ತ್‌ಲಿ ಚುಕ್ರ ಅತ್ತಂದ ಬಾದು ಸಾ ಕಂಡತ್. ಇಷ್ಟ್ ನೋಡ್ದೇ ತಡ, ಅಜ್ಜಿನ ತಲೆಲಿ ಮಿಂಚ್ ಮಿಂಚಿತ್. ನಮ್ಮಲ್ಲಿಗೆ ಎಲುಂಬ ಬಾರದ ಹಾಂಗೆ ಮಾಡ್ದ ಹೆಂಗ್ಸ್ ಇದೇ ಅಲ್ಲಾ? ನಿಂಗೆ ಬುದ್ದಿ ಕಲ್ಸಿನೆ ಮಗ್ಳೇಂತ ಹೇಳಿಕಂಡತ್. ಪಿಳ್ಳಿ ಮಾಂಕುಗೆ ಚಾ ಮತ್ತೆ ತಿಂಬಕೆ ಕೊಟ್ಟ್ ಕೊಂಡಾಟಂದ "ನೀ ಈಗ ಮಾಚು ಅತ್ತೆ ಅತ್ತ ಹೋದರ ನೋಡ್ದ ಅಲ್ಲಾ ಚಿನ್ನ?" "ಹೌದು"

ಅತ್ತಂದ ಚುಕ್ರ ಮಾಮ ಬಾದರ ಸಾ ನೋಡ್ದಾ ಅಲ್ಲಾ ಪುಟ್ಟಾ?" "ಹೌದು". ಇದರ ಇಲ್ಲಿಗೆ ಬಾತಿದ್ದ ಎಲುಂಬ ಮಾಮನ ಮನೆಲಿ ಅವರ ಮಕ್ಕಳೊಟ್ಟಿಗೆ ಆಟ ಆಡಿಕಂಡ್ ಇರಿಕನ ಹೀಂಗಿಂಗೆ ಹೇಳೋಕುಂತ ಪಾಟ ಮಾಡಿ, ಮುತ್ತ ಕೊಟ್ಟ್ ಕಳ್ಸಿತ್. ಪಾಪ! ಅಂವ ಏಳ್ ವರ್ಷದ ಹೈದ!

ಮಾಂಕು ಮಾಚುನವರಲ್ಲಿಗೆ ಬಾತ್. ಬಂದ್ ಆಡಿಕಂಡ್ ಇರಿಕನ ಅಜ್ಜಿ ಹೇಳ್ದರ ಹೇಳಿ ಕೊಟ್ಟ ಹಾಂಗೆ ಒಪ್ಪುಸಿ ಮತ್ತೆ ಹೋತ್. ಎಲುಂಬನ ತಲೆಗೆ ಕಿಚ್ಚ್ ಕೊಟ್ಟ ಹಾಂಗೆ ಆತ್. ಹೆಳ್ಮಕ್ಕಳಿಗೆ ಬಯ್ಯುವ ಯಾವ ಯಾವ ಬೊಯ್ಗ್ಗಳ್ ಉಟ್ಟೋ, ಅವೆಲ್ಲಾ ಅವನ ಬಾಯಿಂದ ಉದ್ರಿಕೆ ಸುರು ಆದೊ. ದೊಡ್ಡಂವ, ಅಪ್ಪಂಗೆ ಏನಾಗುಟೋಂತ ಅಪ್ಪನ್ನೇ ನೋಡಿಕೊಂಡ್ ಇತ್ತ್. ಮತ್ತೆ ಅಪ್ಪ ಹೇಳ್ದ ಹಾಂಗೆ ಅಂವ ಸಾ ಒಂದೊಂದ್ ಶಬ್ದಗಳ ಹೇಳಿಕೆ ಸುರು ಮಾಡ್ತ್.

ಬೊಳ್ಪುಗೆ ಹೋದ ಮಾಚು ಸುಮಾರ್ ಹನ್ನೊಂದ್ ಗಂಟೆಗೆ ಬಾತ್. ಅದ್ ಎಕ್ಕಿದ ಅಳಂಬುನ ಸಾವ್ಕಾರ್ತಿ ಮನೆಗೆ ಕೊಟ್ಟು, ಅವು ಕೊಟ್ಟ ಅಕ್ಕಿನ ಚೀಲಲಿ ಹಾಕ್ಕಂಡ್, ಬೊಳ್ಪುದ್ ಉದ್ಕ{ಗೈಪು} ಉಟ್ಟು ತೆಕಾ"ಂತ ಅವು ಕೊಟ್ಟ ಗೈಪುನ ಬಲದ ಕೈಲಿ ಹಿಡ್ಕಂಡ್ ಕೂಸು ಎದ್ದತಾ"ಂತ ಮೆಟ್ಲ್ ಹತ್ತಿ ಬಾಗ್‌ಲ್ ಹಕ್ಕಲೆ ಬಾತ್‌ಲ್ಲೆ, ಎಲುಂಬ "ಬೇವಾರ್ಸಿ, ಅಳಂಬುಗೆಂತ ಹೇಳಿ ಚುಕ್ರನೊಟ್ಟುಗೆ ಆಟ ಆಡಿಕೆ ಹೋಗೊಳನಾ"ಂತ ಒಂದೇ ಸಮ ಬಾಯಿಗೆ ಬಂದ ಹಲ್ಕಟ್ ಶಬ್ದಗಳ ಪೂರಾ ಹೇಳಿಕೆ ಸುರು ಮಾಡ್ತ್. ಅಲ್ಲಿಂದ ದಿಡ್ಕಂತ ಹೊಡ್ಯಕೆಂತ ಬಾತ್. ಮಾಚುಗೆ ಎಂತಂತನೇ ತಲೆ ಬಾಲ ಗೊತ್ತಾತ್ಲೆ.

ಇಲ್ಲಿ ಮುಟ್ಟ ಅದ್ ಕೇಳದಂತ ಬೇಡಾದ ಬೊಯ್ಗ್ಗಳ್ ಕೇಳಿ ಅದಿಕೆ ಎಲ್ಲಿಲ್ಲದ ಕೋಪ ಬಾತ್. ಸಾವ್ಕಾರ್ತಿ ಮನೆಂದ ತಂದ ಗೈಪುನ ಹೊಡ್ಯಕೆ ಹಕ್ಕಲೆ ಬಾವ ಅವನ ಮೊಡ್ಡಿಗೆ ಪಚಕ್ಕಂತ ಚೇಂಪಿತ್. ಅಲ್ಲಿಂದ ಸಾವ್ಕಾರ್ತಿ ಮನೆಗೆ ಓಡಿಕಂಡ್ ಹೋಗಿ "ಎಲುಂಬ ಹೀಂಗಿಂಗೆ ಹೇಳ್ದೆ. ಅದ್ ಅವನ ಸೊಂತ ಬುದ್ದಿಂದ ಹೇಳ್ದಲ್ಲ. ನಾ ತೋಟಕ್ಕೆ ಹೋಕನ ಯಾರೋ ಬೇಡಾದ್ದರ ಅವನ ತಲೆಗೆ ತುಂಬುಸಿ ಬುಟ್ಟೊಳೊ. ಒಮ್ಮೆ ಎಂತಂತ ಇಚಾರ್ಣೆ ಮಾಡಿ"ಂತ ಹೇಳ್ತ್. ಅವು ಎಲುಂಬನ ಕರ್ಸಿದೊ.

"ಇಂದ್ ಮಾಚು ತೋಟಕ್ಕೆ ಹೋಕನ ನಿನ್ನಲ್ಲಿಗೆ ಯಾರ್ ಬಂದೊಳೊ, ಹೇಳ್"ಂತ ಹೆದ್ರಿಸಿ ಕೇಳ್ದೊ. ಅಂವ "ಅಜ್ಜಿನ ಪಿಳ್ಳಿ ಮಾಂಕು ಬಂದಿತ್ತ್"ಂತ ಹೇಳ್ತ್. ಮಾಂಕು ಪಾಪ! ಎಲ್ಲೋ ಆಡಿಕಂಡಿತ್ತ್. ಸಾವ್ಕಾರ್ತಿ ಕರ್ದವೆಂತ ಹೇಳಿಕನನೇ ಹೆದ್ರಿಕಂಡೇ ಬಾತ್. ಸಾವ್ಕಾರ್ತಿ ಬೆರ್ಳಷ್ಟ್ ದಪ್ಪದ ನಾಗರ ಬೆತ್ತನ ಹಿಡ್ಕೊಂಡ್, ಅದರ ಗಾಳಿಲಿ ರೊಯ್ಯಂತ ಬೀಸಿ, "ನೀ ಸತ್ಯ ಹೇಳೋಕು. ಸುಳ್ಳು ಮನಿ ಹೇಳ್ರೆ ಏನ್ ಮಾಡ್ನೆಂತ ಮತ್ತೆ ನೋಡಿಕಾ. ನೀ ಇವರ ಮನೆಗೆ ಯಾಕೆ ಬಂದದ್ದ್? ನಿನ್ನ ಯಾರ್ ಕಳ್ಸಿದ್ದ್?"ಂತ ಕೇಳುದೇ ತಡ, ಹೆದ್ರಿ ಕಂಗಾಲಾಗಿ ಉಚ್ಚೆ ಹೊಯ್ಕೊಂಡ್,ಮೊರ್ಟ್ಕಂಡ್ "ಅವ್ವನೇ ಹೀಂಗಿಂಗೆ ಹೇಳೊಕುಂತ ಹೇಳಿ ಕಳ್ಸಿದ್"ಂತ ಸತ್ಯ ಹೇಳ್ತ್. ಸಾವ್ಕಾರ್ತಿ "ಸತ್ಯ ಗೊತ್ತಾತಾ?"ಂತ ಹೇಳಿ ಸುಟ್ಟು ಬುಡ್ವ ಹಾಂಗೆ ಎಲುಂಬನ ನೋಡ್ದೊ. ಮತ್ತೆ ಅವು ಸಮ್ಮಾನಂದ ಮಾಂಕುನ ಬೆನ್ನ್ ಪೂಜಿ "ನೀ ಸತ್ಯ ಹೇಳ್ದ. ನಿನ್ನ ಬುದ್ದಿಂದ ನೀ ಹಾಂಗೆ ಹೇಳ್ದ್ ಅಲ್ಲಲೇ? ನಿನ್ನ ಅವ್ವ ಯಾರ್ಯಾರ ಮನೆ ಹಾಳ್ ಮಾಡ್ವ ರಕ್ಕಸಿ. ನೀ ಒಳಗೆ ಹೋಗಿ ರೊಟ್ಟಿ ತಿಂದ್ ಹೋಗ್. ಇನ್ನ್ ಮುಂದೆ ಯಾರೋ ಹೇಳ್ದೊಂತ ಬೇರೆವ್ಕೆ ಎಂತಸಾ ಹೇಳಿಕೆ ಹೋಗ್ಬೇಡ. ಒಳ್ಳ ಬುದ್ದಿ ಮಾಡಿ ಜಾಣ ಆಗ್"ಂತ ತಲೆ ಪೂಜಿ ಕಳ್ಸಿದೊ. ಆಗಳೇ ಅವು ಅಜ್ಜಿನ ಮಂಜನ ಕರ್ಸಿ "ಹೀಂಗೆ ಸಂಗತಿ, ನಮ್ಮ ಲೈನ್‌ಲಿ ಇಂತ ಒಡ್ಸಿ ಹಾಕೋವು ಬೇಡ. ಎರ್ಡ್ ದಿನ ಸಮಿಯ ಕೊಟ್ಟನೆ. ನಿಮ್ಮ ಲೆಕ್ಕ ನೋಡಿ ಸೆಟ್ಲ್ ಮಾಡ್ನೆ.

ನಿಂಗೆ ಇಲ್ಲಿ ಇರೋಕುಂತ ಮನ್ಸ್ ಇದ್ದರೆ, ನಿನ್ನ ಆ ದರಿದ್ರ ಅವ್ವನ ಇಲ್ಲಿಂದ ಕಳ್ಸೋಕು"ಂತ ಖಂಡಿತ ಮಾತ್‌ಲಿ ಹೇಳ್ದೊ. ಅಜ್ಜಿನ ಗುಣ ಗೊತ್ತಿದ್ದ ಅವ್ಕೆ, ಅದರ ಓಡ್ಸಿಕೆ ಇದೊಂದ್ ಒಳ್ಳೆ ನೆಂವನ ಆತ್.

ಮಾಚುಗೆ ಎಲುಂಬನ ಮುಸುಂಡ್ ನೋಡಿಕೆ ಸಾ ಹೇಸಿಗೆ ಆತ್. "ಬನ್ನೆ ಅವ್ವ"ಂತ ಹೇಳಿ ಸೀದ ಬಾತ್. ಬಾಕನ, ಅವ್ವನವರ ಅಡಿಗೆ ಕೋಣೆನ ಹಿಂದೆ ಬಾಗ್‌ಲ್‌ಂದ ಬಂದ ಮೊ್‌ಡಿವಾಳ್ತಿ ಹೆಂಗ್ಸ್ ಮಾಚುನ ಹಕ್ಕಲೆ "ಬಾರೀ ಒಳ್ಳೇದಾತ್. ಅದ್ ಸಾದಾರ್ಣದ ತೊಂಡಿ ಅಲ್ಲ. ಮನೆ ಕೇರಿಂತ ಅಲ್ಲ, ಇಡೀ ಊರುನೇ ಹಾಳ್ ಮಾಡ್ವ ರಕ್ಕಸಿ ಅದ್. ನಿಮ್ಮಂದಾಗಿ ಅದಕ್ಕೊಂದ್ ಒಳ್ಳೆ ಪಾಟ ಆತ್"ಂತ ಹೇಳಿ, ಹಕ್ಕಲೆ ಬಂದ್, ಗುಟ್ಟುಲಿ ಹೇಳ್ವ ಹಾಂಗೆ "ನೀವುಗೆ ಗೊತ್ತುಟ್ಟಾ? ಅದರ ಮಗಳಿಗೆ ಹೊಟ್ಟೆ ಬಂದುಟುಗಡ"ಂತ ಹೇಳಿಕನ ಅದರ್ದೇ ಮಂಡೆ ಬೆಚ್ಚಲಿ ಇದ್ದ ಮಾಚು "ಹೊಟ್ಟೆ ಆದರ್ ಬರಲಿ, ಬೆನ್ನಾದರ್ ಬರಲಿ. ನಾವುಗೆ ಇನ್ನ್ ಇಲ್ಲಿ ನಿಲ್ಲಿಕೆ ಮನ್ಸ್ ಇಲ್ಲೆ"ಂತ ಹೋತ್. ಅಜ್ಜಿನ ಮಗ್ಳ್‌ಗೆ ಹೊಟ್ಟೆ ಬಂದುಟುಂತ ಕೇಳಿ, ಮಾಚುನ ಎದೆಲಿ "ಧಸಕ್ಕ್"ಂತ ಆತ್. "ನನ್ನ ಗಂಡಂತ ಹೇಳ್ವ ಸನಿ ಮೇಲೆ ಈ ಅಪವಾದ ಬಂದರೆ"ಂತ ಹೆದ್ರಿಕೆನೂ ಆತ್. ಹಂಞ ಸಮಿಯಕ್ಕಾದರೂ ಇಲ್ಲಿಂದ ಹೋದೇ ಒಳ್ಳೆದ್‌ಂತ ನೆನ್ಸಿತ್. ಮನೆಗೆ ಬಂದ್ ಮಕ್ಕಳಿಗೆ ಗಂಜಿ ಕೊಟ್ಟತ್. ಅದೇ ತಟ್ಟೆಗೆ ಒಸಿ ತೆಳಿಗಂಜಿ ಹಾಕಿಕಂಡ್, ಎರ್ಡ್ ಕಲ್ಲ್ ಉಪ್ಪು ಹಾಕಿ ಕುಡ್ದ್ ಮಕ್ಕಳೊಟ್ಟಿಗೆ ಮಲ್ಗಿತ್. ಎಲುಂಬ ಕಳ್ಳರ ಹಾಂಗೆ ಬಂದ್ ಅವನಷ್ಟಕ್ಕೇ ಉಂಡ ಹಾಂಗೆ ಮಾಡಿ ಹೊರಗೇ ಕುದ್ದತ್. ಮಾಚುಗೆ ಕಣ್ಣ್ ತೂಗಿದ ಹಾಂಗೆ ಆತಿತ್ತ್. ಅಷ್ಟೊತ್ತಿಗೆ ಬಾಗ್ಲ್ ನೂಕಿ ಬಂದ ಮೊ್‌ಡಿವಾಳ್ತಿ "ನಿಲ್ಗಿದರಿಯಾ ಹೇಂಗೆ?"ಂತ ಕೇಳಿತ್. ಮಾಚು ಮಲ್ಗಿದಲ್ಲಿಂದ ಎದ್ದ್ ಕುದ್ದತ್. ಮಾಚುಗೆ ಇದ್ ಇನ್ನ್ ಯಾವ ತೋಟೆ ಒಡ್ಸಿಕೆ ಉಟ್ಟೋಂತ ಹೆದ್ರಿಕೆನೂ ಆತ್. "ನಿದ್ರೆ ಬರೊ್‌ಕಲೇ"ಂತ ಹೇಳ್ತ್.

"ಅಲ್ಲಾ, ನಾ ಯಾಕೆ ಬಂದದ್ದ್ ಗೊತ್ತಾತಾ? ನೀವು ಆಗ ಇಲ್ಲಿಂದಳೇ ಹೋದವೆಂತ ಹೇಳ್ದರಲ್ಲಾ? ಎಲ್ಲಿಗೆಂತ ಯಾರ ಹಕ್ಕಲೆನಾರ್ ಹೇಳ್ಯೊಳರಿಯಾಂತ" ಕೇಳಿಕೆ ಬಂದದ್ದ್"ಂತ ಹೇಳ್ತ್.

ಮಾಚು ಉದಸೀನದ ಸೊರಲಿ "ಹಾಂಗೆ ಕೇಳಿಕೆ ನಾವ್ಗೆ ಇಲ್ಲಿ ಯಾರ್ ಒಳೊ? ನಾವು ಯಾರಲ್ಲೀಂತ ಕೇಳುದು?"ಂತ ಹೇಳ್ತ್.

"ಅದ, ಅದಿಕೇ ನಾ ಬಂದದ್ದ್. ವಿರಾಜ್‌ಪೇಟೆಲಿ ನಾವ್ಗೆ ಬೇಕಾದವು ಒಬ್ಬ ಒಳೊ. ಅವರ ಗುರ್ತದವ್ಕೆ ನಿಮ್ಮ ಹಾಂಗಿನ ಒಂದ್ ಕುಟುಂಬ ಕೆಲ್ಸಕ್ಕೆ ಬೇಕ್. ಯಾರಾರ್ ಇದ್ದರೆ ಹೇಳ್‌ಂತ ಹೇಳಿ ಸುಮಾರ್ ಸಮಿಯ ಆತ್. ನೀವುಗೆ ಇಲ್ಲಿ ನಿಲ್ಲಿಕೆ ಮನ್ಸ್ ಇಲ್ಲೆಂತ ಹೇಳ್ದರಿ ಅಲ್ಲಾ? ಹಾಂಗೆ ನಿಮ್ಮ ಕೇಳೊಮಂತ ಬಂದದ್ದ್"ಂತ ಹೇಳ್ತ್.

ಮಾಚು "ಅಂವ ಸಾ ಉಟ್ಟಲೆ. ಅಂವ ಏನ್ ಹೇಳ್ದೆನೋ ಯಾರಿಗೆ ಗೊತ್ತು? ಇಲ್ಲಿ ನಾವುಗೆ ಯಾವ ತೊಂದರೆನೂ ಇತ್ತ್‌ಲ್ಲೆ. ಅವ್ವನೂ ಒಳ್ಳವೇ. ಇವಂಗೆ ಉಸಾರ್ ಇಲ್ಲದಿರ್ಕನ ಆಸ್ಪತ್ರೆಗೆ ಸೇರ್ಸಿ ಮೊ್‌ದ್ದ್ ಮಾಡ್ಸಿದೊ. ಏನೋ ಒಂದ್ ಹೆಚ್ಚ್ ಕಮ್ಮಿ ಆತ್‌ಂತ ಅದರೆಲ್ಲಾ ಮರಿಯಕೆ ಆದೆನಾ?. ಈಗಳೇ ನಾ ಎಂತ ಸಾ ಹೇಳಿಕೆ ಆದ್‌ಲ್ಲೆ"ಂತ ಹೇಳಿಕಂಡ್ ಎಚ್ಚರಾದ ಕೂಸುನ ತಟ್ಟಿಕಂಡ್ ಇತ್ತ್.

"ನೀವು ಹೇಳ್ದರಿಂತ ನಾ ಕೇಳ್ದ್"ಂತ ಅದ್ ಎದ್ರಿಕನ "ಹಾಂಗೆ ಏನಾರ್ ಇದ್ದರೆ ನಾವು ...ಲ್ಲೇ ಒಳೊ ಅಲ್ಲಾ?"ಂತ ಹೇಳ್ದಕ್ಕೆ "ಅಂತ ಗಡಿಬಿಡಿ ಏನೂ ಇಲ್ಲೆ. ನಾ ಬನ್ನೆ"ಂತ ಹೋತ್. ...ದ್ ಹೋತ್‌ಂತ ಮಾಚು ನಿಟ್ಟುಸ್ರು ಎಳ್ದ್ ಮಲ್ಗಿತ್. ಮೊಡಿವಾಳ್ತಿ ಎಲುಂಬನ ಹಕ್ಕಲೆ ...ಟಲಟಂತ ಮಾತಾಡಿ, ಮತ್ತೆ ಹೋತ್. ಮಾಚುಗೆ ಏನ್ ಮಾಡುದುಂತ ಗೊತ್ತಾತ್ತ್ಲೆ. ಮಲ್ಗಿದಲ್ಲೇ ...ದ್ "ನನ್ನ ಹಾಂಗಿನ, ಬೇರೆ ಗಣ್ಮಕ್ಕಳೊಟ್ಟುಗೆ ಲೆಕ್ಕಕ್ಕಿಂತ ಹೆಚ್ಚಿ ಮಾತಾಡದವ್ಳಿಗೆ ಇಂವ ...ೂಳೆ, ಬೇವಾರ್ಸಿಂತ ಹಡಬೆ ಶಬ್ದಗಳ ಹೇಳ್‌ತಲೇ. ನಮ್ಮ ಮೊದ್ವೆ ಆಗಿ ನಾಕೈದ್ ವೊರ್ಸ ...ತ್. ಇನ್ನ್ ಸಾ, ನಾ ಎಂತವ್ಳುಂತ ಇವಂಗೆ ತಿಳ್ಕೊಂಬೊಕೆ ಆತ್‌ಲೆಲೇ. ಆ ಬಾಸೆ ಬಾರದ ...ೂಸು ಹೇಳ್ದರ ಕೇಳಿ, ಸತ್ಯಂತ ನಂಬಿಕಂಡ್ ಬೊಯ್ದದರ ಸುಮ್ಮನೆ ಕೇಳಿಕಾತಲೇ. ಕೈ ಹಿಡ್ದ ...ೆಣ್ಣ್ಂತ ಒಂದೇ ಕಾರಣಕ್ಕೆ ಗಂಡಂತ ಹೇಳಾಂವ ಹೀಂಗೆ ಹುಚ್ಚು ಹಿಡ್ದ ತರ ಮಾತಾಡಿಕೆ, ...ೊಡ್ಯಕೆ ಇದ್ದವನಾ?" ಹೀಂಗೆಲ್ಲಾ ನೆನ್ನಿ ಅದರ ತಲೆ ಸಿಡ್ಯಕೆ ಸುರು ಆತ್. ಗಂಜಿ, ಗೈಪು ...ಂತ ಮಾಡಿಕೆ ಹೋತ್‌ಲೆ. ಬೇಕಾರೆ ಮಾಡಲಿ, ಇಲ್ಲರೆ ಸಾಯಲಿಂತ ಕತ್ತಲಾದರೂ ಮಲ್ಗಿಕಂಡೇ ...ತ್. ದೊಡ್ಡ ಕೂಸು ಅವ್ವ ಎದ್ರದ್ದರ ನೋಡಿ "ಅವ್ವ ನಿಂಗೆ ಜರನಾ?"ಂತ ಹಣೆ ಮುಟ್ಟಿ ...ೋಡ್ತ್. ಸಿಡ್ತಕ್ಕೋ ಏನೋ ಮುಂದಲೆ ಹಂಞ ಬೆಚ್ಚಂಗಿತ್ತ್. ಅದ್ ಮೆಲ್ಲಾನೆ ಎದ್ದ್, ಕುದ್ದು "ಜರ ಇಲ್ಲೆ ಮಂಜ, ಅದ್ ತುಂಬ ಹೊತ್ತ್ ಮಲ್ಗಿದೆ ಅಲ್ಲಾ? ಅದಿಕ್ಕೆ ಬೆಚ್ಚ ಆದ ಹಾಂಗೆ ...ಾಂಬೊದು"ಂತ ಸಮ್ಧಾನ ಮಾಡ್ತ್. ಮತ್ತೆ ಎದ್ದ್ ಒಲೆಲಿ ಕಿಚ್ಚಿ ಮಾಡಿ ಮೀಯಕೆ ನೀರ್ ...ಇಸಿತ್. ಮೀದ್, ಇದ್ದದರ ಉಂಡು ಮಲ್ಗಿದೊ. ಮಾಚುಗೆ ಒಂದೇ ಚಿಂತೆ ಎಂತ ಮಾಡುದುಂತ? ಎಲುಂಬನೂ ನಿದ್ದೆ ಮಾಡಿತ್ಲೆ.

ನಡಿರ್ಲ್ ಮನಿ ಕಳ್ದಿರ್ದ್ರೋ ಏನೋ? ಮಾಚು ಉಸ್ರ್ ಎಳ್ಕಂಡದ್ದ್ ಕೇಳಿ ಅಂವ ಸಣ್ಣ ಸೊರಲಿ "ನಾವು ವಿರಾಜ್ ಪೇಟೆಗೆ ಪೋಯಿ"ಂತ ಹೇಳ್ತ್. ಮಾಚುಗೆ ಅವನ ಸೊರ ಕೇಳಿಕನ "ಥೂ"ಂತ ಹೇಳಿ, ಅವನ ಮೋರೆಗೆ ಉಗಿಯೊಕುಂತ ಆತ್. ಹಲ್ಲ್ ಕಚ್ಚಿಕಂಡ್ ಹೇಳ್ತ್ "ಅಲ್ಲಿ ನಾ ಯಾರೋ ಹೇಳ್ದೊಂತ ನನ್ನ ಸೂಳೆಗೆ ಸರಿಮಾಡ್"

"ನಂದ್ ತೊಪ್ಪಾತ್"

"ತೊಪ್ಪಾತ್? ಹಾಂಗೆ ಹೇಳ್ದ ಕೂಡಲೇ ನನ್ನ ಮನ್ಸಿಗಾದ ನೇನೆ, ಗಾಯ ಗುಣ ಆದೆನಾ? ನಿನ್ನ ದರ್ವೇಸಿ ನೆತ್ತರ ಬುದ್ದಿ ನೀ ಬುಟ್ಟತ್ಲೆ ಅಲ್ಲಾ? ಯಾಗ ನೀ ನನ್ನ ಸೂಳೆಂತ ಹೇಳ್ದನೋ ಆಗಂದ ನೀ ಇದ್ದರೂ ಆದು, ಇಲ್ಲರೂ ಆದುಂತ ಆಗುಟು. ನಾ ನಿಂಗೆ ಏನಾರ್ ಹೇಳ್ರೆ ನೀ "ನಾ ಸತ್ತ್ ಹೋನೆ"ಂತ ಹೇಳ್ತಿದ್ದ ಅಲ್ಲಾ? ಹೋಗ್ ಸಾಯಿ. ನೀ ಸತ್ತರೆ ಬೆಳಿ ಸೀರೆ ಉಡಿಕೆ ನಂಗೇನೂ ಬೇಜಾರ ಇಲ್ಲೆ. ನಿನ್ನಂತ ಹಲ್ಕನೊಟ್ಟಿಗೆ ನಾ ಬೊದ್ಕಿನಲ್ಲಾಂತ ನಂಗೆ ನಾಚಿಕೆ ಆದೆ"ಂತ ಒಳಗೆ ಇದ್ದದರ ಪೂರ ಕಕ್ಕಿತ್.

ಹೌದು, ಕನ್ನಡಿ ಹಾಂಗಿದ್ದ ಅದರ ಮನ್ಸ್, ಅವನ ಮಾತ್‌ಂದ "ಠಳ್"ಂತ ಎರ್ಡ್ ಹೋಳಾಗಿ ಸೀಳಿದ್ದ್ ಮಾತ್ರ ಸುಳ್ಳಲ್ಲ. ಒಳ್ಳೆ ಗುಣದ ಹೆಳ್ಮಕ್ಕಳಿಗೆ ಗಂಡ ಇಂತ ಬೇಡಾದ ಮಾತ್‌ಗಳ ಹೇಳ್ರೆ ಸಮ್ಮಂದನೇ ಹೇಂಗೆ ಮುರ್ದ್ ಹೋದೆಂತ ಅವಂಗೆ ಈಗ ಅರ್ತ ಆತ್. ಅಂವ ಉಸ್ರು ಬುಟ್ಟತ್ಲೆ.

ಮೊ್ರ್ದಿನ ಅಂವ ಗದ್ದೆ ಹೂಡಿಕೆ ಹೋಕನ ಮಾನ ಮೊ್ಯರ್ಯಾದಿ ಇಲ್ಲದ ಆ ಅಜ್ಜಿ, ಅಲ್ಲೇ ನಿತ್ತ್ ಇವನ ಕಾದ್‌ಕಂಡ್ ಇತ್ತ್. "ಒಮ್ಮೆ ಬಂದ್ ಚಾ ಕುಡ್ದ್ ಹೋಗ್ ಮಂಜಾ"ಂತ ಮಂಜಣೆ ಮಾಡಿಕಂಡ್ ಕರ್ತ್. ಹಿಂದೆನ ದಿನ ಹೆಣ್ಣ್ ಹೇಳ್ದ್ ಇನ್ಸ್ ಸಾನ್ ಅವನ ತಲೆಂದ ಇಳ್ತ್‌ಲ್ಲಾಗಿತ್ತ್' ಅಂವ ಕೋಪಂದ ಕಣ್ಣ್ ಬುಟ್ಟ್ ನೋಡಿ "ಏನ್, ನನ್ನ ಕುಟುಂಬಕ್ಕೆ ಕಿಚ್ಚಿ ಕೊಡಿಕೆ ಬಾಕಿ ಉಟ್ಟ್ ಕಂಡದೆ"ಂತ ಹೇಳ್ದ ಕೂಡಲೇ "ಏಯ್, ಸುಬಗನ ಹಾಂಗೆ ಮಾತಾಡ್ಬೇಡ. ನನ್ನ ಮಗಳ ಹಾಳ್ ಮಾಡಿದ್ದ್ ಅಲ್ಲಾದೆ ಈಗ ಹೀಂಗೆ ಮಾತಾಡ್ಯನಾ?"ಂತ ಹೇಳೋಕಾ? ಮುಂದೆನೇ ಅಂವನ ತಲೆ ಹಾಳಾಗಿತ್ತ್. ಗಟ್ಟಿ ಸೊರಲಿ ಕಿರ್ಚಿ "ಕರಿ ನಿನ್ನ ಮಗಳ"ಂತ ಕೈಲಿದ್ದ ಎತ್ತ್‌ಗಳಿಗೆ ಹೊಡೆವ ಬೆತ್ತನ ಒಮ್ಮೆ ರೊಂಯ್ಯಂತ ಬೀಸಿತ್. ಈ ಗಲಾಟೆ ಕೇಳಿ ಎಲ್ಲಾ ಬಿಡಾರ್ದವು ಹೊರಗೆ ಬಂದೊ. ಅಜ್ಜಿ ಅಲ್ಲಿಂದ ಓಟ!

ಗದ್ದೆ ಹೂಡಿಕನ ಅವಂಗೆ, ತಲೆ ಸರಿ ಇಲ್ಲದವರ ಹಾಂಗೆ ಆಗಿತ್ತ್. ಒಮ್ಮೆ ಇಲ್ಲಿಂದ ಬುಟ್ಟ್ ಹೋದರೆ ಸಾಕ್‌ಂತ ಆಗಿತ್ತ್. ಬೇಗ ಬೇಗ ಹೂಡ್ದ ಹಾಂಗೆ ಮಾಡಿ, ಎತ್ತ್‌ಗಳ ತೊಳ್ದ್ ಹಟ್ಟಿಲಿ ಕಟ್ಟಿ, ಲೈನ್‌ಗೆ ಬಂದ್, ಮಾಚುನ ಹಕ್ಕಲೆ "ನಾವು ವಿರಾಜ್‌ಪೇಟೆ ಅಲ್ಲರೆ ಕಲ್ಮಕಾರಿಗೆ ಪೋಯಿ. ನಾ ಇನ್ಸ್ ಇಲ್ಲಿ ಒಂದ್ ದಿನ ಸಾ ನಿಲ್ಲುದ್ಲೆ"ಂತ ಹೇಳ್ತ್. ಮಾಚು ಅವನ ಮೋರೆನೇ ನೋಡ್ತ್. ಅಂವ ಅಲ್ಲಿ ನಿತ್ತ್ಲೆ. ಪೋಯಿಂತ ಹೇಳ್ದೆ ಹೌದ್. ಎಲ್ಲಿಗೆಂತ ಹೋದು? ಕಾವೆಲಿಂದ ಕೆಂಡಕ್ಕೆ ಬಿದ್ದ ಹಾಂಗೆ ಆಕಾಗದಲ್ಲ? ಕಲ್ಮಕಾರ್‌ಗೆ ಇಲ್ಲಿಂದ ಹೋಕ್‌ಂತೇಳ್ರೆ ತುಂಬ ದೂರ. ವಿರಾಜ್ ಪೇಟೆ ಹಕ್ಕಲೆನೇ. ಅರ್ದ ಗಂಟೆ ದಾರಿ ಮತ್ತೆ ಒಂದೋ ಎರ್ಡೋ ಮೈಲ್ ನಡೆವ ದಾರಿಗಡ. ಹೋವುದು ಖಂಡಿತಂತಾದರೆ ಅವ್ವನ ಹಕ್ಕಲೆ ಹೇಳೊಕು. ಅವು ಏನ್ ಹೇಳ್ವೆಂತ ಗೊತ್ತಿಲ್ಲೆ. ಬೊ್ಯ್ಯಕೆ ಉಟ್ಟೋ ಏನೋ? ಆದರೂ ಹೇಳಕಲೇ. ಅಲ್ಲದೆ ಮೊ್ಡಿವಾಳ್ತಿನಲ್ಲಿ ಕೇಳೋಕು. ಅದ್ ಹೇಳ್ದ ಜೆನಗ ಎಂಥವೋ? ಎಂತವಾದರೂ ಒಂದ್ ಮೂರ್ತಿಂಗ ಇರೊಕಾದೆ. ಇಲ್ಲಿ ನಾವುಗೆ ಬೇರೆ ಏನೂ ತೊಂದರೆ ಇತ್ತ್‌ಲ್ಲಾಗಿತ್ತ್. ಹೀಂಗೆಲ್ಲ ಯೋಚನೆ ಮಾಡಿಕೊ್ಂಡ್, ಎಂತಕ್ಕೂ ಅವ್ವನ ಹಕ್ಕಲೆ ಹೇಳ್ನೆ ಮತ್ತೆ ನೋಡೊಮಂತ ಅವರ ಮನೆಗೆ ಹೋತ್.

ಇವಳ ನೋಡಿ "ಏನ್ ಬಂದ ಮಾಚು?"ಂತ ಕೇಳ್ದೊ.

"ಅದೂ್, ನಿಮ್ಮ ಗದ್ದೆನ ನಾಟಿ ಕೆಲ್ಸ ಇನ್ನೆರ್ಡ್ ದಿನಕ್ಕೆ ಮುಗ್ದದೆ ಅಲ್ಲಾ? ಮತ್ತೆ ವಾರಕ್ಕೆ ಕೊಟ್ಟ ಗದ್ದೆ ಕೆಲ್ಸ ಅವೇ ನೋಡಿಕೊ್ಂಡವೆ. ತೋಟಲಿ ಸಾ ದೊಡ್ಡ ಕೆಲ್ಸ ಇಲ್ಲೆ. ಹಾಂಗೆ ಮನೆಗೆ ಒಮ್ಮೆ ಹೋಗಿ ಬಂದರೆ ಆದೋಂತ. ನಾಕ್ ದಿನದ ರಜೆ ಕೊಡ್ವರಿಯಾಂತ ಕೇಳಿಕೆ ಬಂದದ್ದ್"ಂತ ಹೇಳ್ತ್.

ಅವು ಒಮ್ಮೆ ನಿಟ್ಟುಸ್ರು ಬುಟ್ಟ್, "ನಿಂಗೆ ಗೊತ್ತಾತ್ಲೆಂತ ಕಂಡದೆ, ನಮ್ಮ ಸಣ್ಣಂವ ಬೈಕ್‌ಂದ ಬಿದ್ದ್ ಕಾಲಿಗೆ ಪೆಟ್ಟಾಗುಟು. ಪುಣ್ಯಕ್ಕೆ ದೊಡ್ಡ ಪೆಟ್ಟಾಗಿ ಜೂವಕ್ಕೆ ಬಾವಂತದ್ದ್ ಆತ್‌ಲೆ. ಯಾರೋ ಅವನ ಮೊ್ಡಿಕೇರಿಲಿ ಆಸ್ಪತ್ರೆಗೆ ಸೇರ್ಸಿಯೊಳೊ"ಂತ ಹೇಳಿ ಒಂದ್ ಗಳಿಗೆ ಮಾತ್ ನಿಲ್ಸಿ, ಮತ್ತೆ "ಹಾಂಗಾರೆ ಒಂದ್ ಕೆಲ್ಸ ಮಾಡೊಮ. ಅವನ ಹಕ್ಕಲೆ ನಿಲ್ಲಿಕೆ ಜನ ಇಲ್ಲೆ. ಎಲುಂಬ ಒಂದ್ ನಾಲ್ಕ್ ದಿನದ ಮಟ್ಟಿಗೆ ಆಸ್ಪತ್ರೆಲಿ ಇರ್ಲಿ. ನೀ ಮಕ್ಕಳ ಕರ್ಕೊಂಡ್ ಹೋಗಿ ಬಾ. ರೈಟ್ರ ಹಕ್ಕಲೆ ಹೋಗಿ ನಾ ಹೇಳ್ಯೊಳೆಂತ ಹೇಳಿ ನಿಮ್ಮ ಲೆಕ್ಕ ನೋಡಿಕೆ ಹೇಳ್. ಅರ್ದ

ಂಟೆಲಿ ನಾವು ಹೊರ್ಪವೆ. ಎಲುಂಬಂಗೆ ಹೊರ್ಡಿಕೆ ಹೇಳ್. ನೀವು ಸಾ ಹೊರ್ಡಿ. ಮ್ಹೊಡಿಕೇರಿಗೆ ಟ್ಟಿಗೆ ಪೋಯಿ"ಂತ ಹೇಳ್ದೊ. ಮಾಚುಗೆ ಸುಲ್ಬಲಿ ರಜೆ ಸಿಕ್ಕಿತಲ್ಲಾಂತ ಕುಸಿ ಆತ್. ಅಲ್ಲದೆ ಲುಂಬಂಗೆ ಉಸಾರ್ ಇಲ್ಲದೆ ಅವನ ಮ್ಹೊದ್ದಿಗೆ ಸುಮಾರ್ ಹಣ ಕರ್ಚಾಗಿರುದು. ಎಲುಂಬ ಾರದಿದ್ದರೆ ಅವನ ಬಸ್ ಕರ್ಚ್ ಒಳ್ದದೆ. ಮ್ಹೊಡಿಕೇರಿ ಮುಟ್ಟ ಅವೇ ಕರ್ಕಂಡ್ ಹೋದವೆ. ದ್ದ ಹಣಲಿ ನಾ ಮಕ್ಕಳ ಕರ್‍ಕೊಂಡ್ ಹೋಗಿ ಬರಕ್ಕಂತ ಯೋಚನೆ ಮಾಡ್ತ್. ಬೇಗ ಂದ್ ಎಲುಂಬಂಗೆ ಹೇಳ್ತ್. ಅದ್ ಸಾಮಾನ್ ಎಲ್ಲಾ ಕಟ್ಟಿ ಹೊರ್ಡುವ ಅಟ್ಟಣೆಲಿ ಇತ್ತ್. ಲುಂಬನ ಹಕ್ಕಲೆ, ಅವ್ವ ಹೇಳ್ದರ ಹೇಳಿ, "ಈಗೊಮ್ಮೆ ನಾ ವೀಳ್ಯಡ್ಕಕ್ಕೆ ಹೋಗಿ ಬನ್ನೆ. ನೀ ೇಂಗಿದ್ದರೂ ಆಸ್ಪತ್ರೆಲಿ ಇದ್ದೀಯಲೇ. ಮಿಣ್ಕೆ ಯಾರನ್ನೋ ಮ್ಹೊದ್ವೆ ಆತ್ಂತ ಸುದ್ದಿ. ಏನ್ ಂತಂತ ತಿಳ್ಕೊಂಡ್ ಬಂದ ಹಾಂಗೂ ಆದೆ. ಮತ್ತೆ ನಾವೆಲ್ಲಿಗೆ ಹೋದುಂತ ನೋಡೊಮ. ಈಗ ಒಮ್ಮೆಗೆ ಇಲ್ಲಿಂದ ಬುಡುಗಡೆ ಆತಲ್ಲಾ"ಂತ ಮಾತಾಡಿಕಂಡ್ ಇರಿಕನ ಮ್ಹೊಡಿವಾಳ್ತಿ ಾತ್. ನೋಡಿಕನನೇ ಎಲ್ಲಿಗೋ ಹೊರ್ಪ ಹಾಂಗೆ ಕಾಂಬೊತಿತ್ತ್.

ಂದ ಹಾಂಗೇ "ನಾ ವಿರಾಜ್ ಪೇಟೆಗೆ ಹೊರ್ಪವ್ವು. ನೀವು ಏನ್ ಆಲೊಚನೆ ಮಾಡಿಯೊಳರೀ?"ಂತ ಕೇಳ್ತ್.

ಮಾಚು ಸಾವ್ಕಾರ್ತಿನ ಮಂಜನ ಸಂಗತಿ ಹೇಳಿ, ಎಲುಂಬನ ಅಲ್ಲಿ ನಿಲ್ಲಿಕೆ ಹೇಳಿಯೊಳೊ. ನಾ ಾ ಊರಿಗೆ ಹೊರ್ಪದ್ದ್"

ಹೌದಾ, ನೆನ್ನೆ ಅಣ್ಣನ ಮಂಜ, ಅಳಿಯ ಬಂದಿತ್ತ್. ಅಂವ ಸಾ ಹೇಳ್ತ್, ನೂರು ಬಟ್ಟಿ ಗದ್ದೆ. ಹೂಡಿ ಆಗುಟು, ನಾಟಿಗೆ ದೈ ಸಾ ಆಗುಟು. ನಾಟಿ ಮಾಡಿಕೆ ಮಾತ್ರ ಬಾಕಿ. ಅವು ವಾರಕ್ಕೆ ೇಡ. ದಿನ ಕೂಲಿಲಿ ಕೆಲ್ಸ ಮಾಡಲಿಂತ ಹೇಳ್ತ್"ಂತ ಹೇಳ್ತ್.

ಎಂತಕ್ಕೂ ಇಂದ್ ನಾಳೆಲಿ ನಾವ್ಗೆ ಬಾಕೆ ಆದ್‌ಲ್ಲೆ. ಹೂಡಿ ದೈ ಮಾಡ್ದೊವ್ಕೆ ನಾಟಿ ಮಾಡಿಕೆ ಏನಾತ್? ನಾವಿಬ್ಬರ್ ಬಂದ್ ಅಷ್ಟ ನಾಟಿ ಮಾಡಿಕೆ ಆದೆನಾ? ಕೆಲ್ಸದೊವು ಅರ್ದಲೇ ಬುಟ್ಟು ಹೋಕಾರೆ ಸಾವ್ಕಾರ ಸರಿ ಇಲ್ಲೆಂತ ಕಂಡದೆ"ಂತ ಮಾಚು ಹೇಳ್ತ್.

ಹಾಂಗೆ ಹೇಳಿದರ ಕೇಳಿ ಅದ್ ಒಮ್ಮೆ ಚಪ್ಪೆ ಆತ್. ಮತ್ತೆ "ಅದೆಲ್ಲ ನಂಗೆ ಗೊತ್ತಿಲ್ಲೆ. ಅಳಿಯ ಹೇಳ್ದರ ನಾ ಹೇಳ್ದೆ. ಹಾಂಗಾರೆ ಈಗ ನಾ ಹೋನೆ"ಂತ ಹೇಳಿಕನ ಮಾಚು "ನಾವು ಾ ಈಗ ಹೊರ್ಪದ್ದೆ. ಅದಿಕೆ ಇಂದನಿ ಕಟ್ಟ್ ಕಟ್ಟುದು"ಂತ ಎದ್ರುತ್ತರ ಕೊಟ್ಟತ್.

ಹೋಕೆ ಹೊರ್ಪವ್ವು, ಒಂದ್ ಗಳಿಗೆ ನಿತ್ತ್ ಆಲೊಚನೆ ಮಾಡಿ, "ಹಾಂಗಾರೆ ನೀವು ಮತ್ತೆ ಇಲ್ಲಿಗೆ ಬಾದಾ? ಅಲ್ಲಾ, ನಿಮ್ಮ ಊರ್‌ಲೇ ನಿಲ್ಲುದಾ?"

ಮಾಚುಗೆ ಎಂತ ಹೇಳುದುಂತ ಗೊತ್ತಾತ್ತೆಲ್ಲೆ. ಅದ್ ಹಂಙ ಯೋಚನೆ ಮಾಡಿ 'ನೋಡೋಕು, ಅಂತ್ ಏನಾರ್ ಹೇಳೋಕುಂತಾರೆ ಇಂವ ನಾಕ್ ದಿನ ಆಸ್ಪತ್ರೆಲೇ ಇದ್ದದೆ. ಈಗ ಹೇಳಕ್ಕ್"ಂತ ಅತ್ತನೂ ಅಲ್ಲ, ಇತ್ತನೂ ಅಲ್ಲಂತ ಅಡ್ಡ ಗೋಡೆ ಮೇಲೆ ದೀಪ ಇಸಿದ ಹಾಂಗೆ ಹೇಳ್ತ್. ಹೋವ ಹೊತ್ತಿಗೆ ಹಣ ತೆಕಂಡ್ ಹೋಕೆ ಮಾಚು ಸಾವ್ಕಾರ್ತಿ ಮನೆಗೆ ಹೋತ್. ಎಲುಂಬನ ಕಾಯ್ಲೆಗೆ ಕರ್ಚಾಗಿ ಒಳ್ದದ್ ಚಿಲ್ಲರೆ ದುಡ್ಡು. ಎಲುಂಬನೂ ಊರಿಗೆ ಹೊರ್ಪಿದ್ದರೆ ಆ ಹಣ ಸಾಕಾಗ್ತಿತ್ತೆಲ್ಲೆ. ಮಾಚುಗೆ ಒಬ್ಬಳಿಗೆ ಬಸ್ಸಿಗೆ ಹೋಗಿ ಬಾಕೆ ಸಾಕಾಗುವಷ್ಟ್ ದುಡ್ಡು ಇತ್ತ್, ಅಷ್ಟೇ.

ಮಾಚು ಮನ್ಸ್‌ಲೇ ಈ ಚಿಲ್ಲರೆ ದುಡ್ಡು ಹಿಡ್ಕೊಂಡ್ ನಾ ಮನೆಗೆ ಹೇಂಗೆ ಹೋಗಿ ಬಾದು? ಕಮ್ಮಿ ಆದರೆ ಮತ್ತೆ ನಾರುನ ಹಕ್ಕಲೆ ಕೇಳೋಕಾದೆಂತ ಹೇಳಿಕಂಡತ್. ಮಿಣ್ಕಿ ಮೊದ್ವೆ ಆತ್‌ಂತ ಕೇಳ್ದ ಮೇಲೆ ಅದಿಕ್ಕೆ ವೀಳ್ಯಡ್ಕಕೆ ಹೋಗಿ ಏನ್ ಎಂತಂತ ಕೇಳೋಕುಂತೇಳ್ವ ಕುತೂಹಲ ತಡಿಯಕಾಗದಷ್ಟ್ ಆಗಿತ್ತ್.

ಅಷ್ಟೊತ್ತಿಗೆ ಸಾವ್ಕಾರ್ತಿನವು ಹೊರ್ಲ್ಟೊ, ಇವೂ ಅವರ ಅಂಗಳಕ್ಕೆ ಹೋದೊ. ಎಲ್ಲಾ ಕುದ್ದೊ. ಜೀಪು ಹೊರ್ಟತ್. ಹಿಂದೆ ಸೀಟ್‌ಲಿ ಕುದ್ದ ಮಾಚು ಗಂಡನ ಕೆಬಿಲಿ "ಮೊಡಿವಾಳಿತ್ತಿ ಹೇಳ್ದ ಮನೆಗೆ ನಾವು ಹೋಕಾದೆ. ಈಗ ನನ್ನ ಹಕ್ಕಲೆ ಇರ್ವ ಹಣ ನಾ ಹೋಗಿ ಬಾಕನ ಮುಗ್ದದೆ. ಮತ್ತೆ ಬೊದ್ಕಕಲೆ. ಇನ್ನೊಮ್ಮೆ ಅದ್ ಬಂದ್ ಹೇಳ್ರೆ ಅದರ ಕೈಯಿಂದಳೇ ಹಣ ತೆಕಂಡ್ ವೀಳ್ಯಡ್ಕಕ್ಕೆ ಒಂದ್ ದಿನಕ್ಕಾದರ್ ಬಾ. ಮತ್ತೆ ನಾವು ಒಟ್ಟಿಗೆ ಬರಕ್ಕ್"ಂತ ಹೇಳ್ತ್.

ಮೊಡ್ಕೇರಿಲಿ ಮಾಚು ಮತ್ತೆ ಮಕ್ಕಳ ಬಸ್ ಸ್ಟೇಂಡ್‌ಲಿ ಬುಟ್ಟೊ. ಸಾವ್ಕಾರ್ತಿ ಇಳ್ಯಕನ "ನೀವು ಯಾಗ ವಾಪಾಸ್ ಬಾದ್?"ಂತ ಕೇಳ್ದಕ್ಕೆ "ಇಂವ ನಮ್ಮ ಕರ್ಕಂಡ್ ಬಾಕನ ಬಂದವೆ"ಂತ ಹೇಳ್ತ್. "ಒಳ್ಳದ್, ಹೋಗಿ ಬನ್ನಿ"ಂತ ಅವು ಹೇಳ್ದೊ. ಎಲುಂಬ ಜೀಪುಂದಳೆ, ಹೆಣ್ಣ್ ಮತ್ತೆ ಮಕ್ಕಳ ನೋಡಿಕೊಂಡ್ ಇದ್ದ ಹಾಂಗೆ ಜೀಪು ಹೊರ್ಟತ್.

ಬಸ್‌ಲಿ ಕುದ್ದ ಮಾಚುನ ತಲೆಲಿ ಈಗ ಮಿಣ್ಕಿ ಮೊದ್ವೆ ಸಂಗತಿ ಒಂದೇ ಇದ್ದದ್. ಇದರ ಎರ್ಡ್ನೇ ಹೆರಿಗೆ ಸಮಿಯಲಿ ಅದಿಕೆ ನರ್ಸ್ ಕಲ್ತ್ ಕೆಲ್ಸ ಸಿಕ್ಕಿತ್ತ್. ಕೆಲ್ಸ ಸಿಕ್ಕಿದ್ದ್ ಅತ್ತ ಚಿಕ್ಕ ಮಂಗ್ಳೂರ್ ಕಡೆ. ಇರಿಕೆ ಮನೆ ಸಿಕ್ಕ್ಯಟುಂತ ಹೇಳಿತ್ತ್. "ನಾ ಒಮ್ಮೆ ಬನ್ನೆ"ಂತ ಇದ್ ಹೇಳಿತ್ತ್. "ನಾನೇ ಕರ್ಕೊಂಡ್ ಹೋನೆ. ಅಲ್ಲಿ ನೋಡ್ವಂತದ್ದ್ ತುಂಬ ಉಟ್ಟು"ಂತ ಹೇಳಿತ್ತ್. ಅಂತದ್ದ್ ಹೋಗಿ, ಹೇಳದೇ ಮೊದ್ವೆ ಆತಲೇ. ಅದ್ ಯಾಕೆ ನಾವುಗೆ ಹೇಳ್ತ್‌ಲೆ? ಅದ್ ನನ್ನ ಕೊಂಡಾಟದ ತಂಗೆ. ಅದ್ ಹೀಂಗೆ ಮಾಡ್ದುಂತ ನಾ ನೆನ್ಸಿತೇ ಇಲ್ಲೆ. ಬೇರೆ ಜಾತಿಯಂವ ಆಗಿರ್ದು. ನಾವೇನ್ ಹಾರವರಾ? ಆ ಜಾತಿ ಈ ಜಾತಿಂತ ನೋಡಿಕೆ? ನಮ್ಮ ಜಾತಿಲಿ ಅದಿಕ್ಕೆ ಕಲ್ತ ಹೈದಂಗ ಸಿಕ್ಕುದು ಕಷ್ಟನೇ. ಯಾರ್‌ನ್ನಾರ್ ಮೊದ್ವೆ ಆಗಲಿ. ಹೇಳಿಕೆ ಅದಿಕ್ಕೆ ಏನಾಗಿತ್ತ್?ಂತ ಅದರಷ್ಟಕ್ಕೆ ಹೇಳಿಕೊಂಡತ್. ಇದೇ ಯೋಚನೆಲಿ ಸುಳ್ಯಕೆ ಬಂದ್ ಮುಟ್ಟಿತ್.

ದಟಿಗೆಗೆ ಎತ್ತಿಕನ ಮನೆವು ಎಲ್ಲಾ ಏನೋ ಕುಸಿಲಿ ಇದ್ದ ಹಾಂಗೆ ಕಂಡತ್. ಮಾಯ್ಲು ಇದರ ನೋಡಿ "ಅಯ್ಯೋ, ಅರ್ದ ಗಂಟೆ ಮುಂದೆ ಬಾಕೆ ಆತ್ಲನೇ ನಿಂಗೆ? ಅರ್ದ ಗಂಟೆಗೆ ಮುಂದೆ ಮಿಣ್ಕಿ ಹೋತ್. ಅದ್ ಇದ್ದದ್ದ್ ಅಷ್ಟೇ ಹೊತ್ತು, ಮದ್ಯಾನ ಉಂಬ ಹೊತ್ತಿಗೆ ಬಂದವ್ಳು ಹೆಚ್ಚ್‌ಂತೇಳ್ರೆ ಒಂದ್ ಗಂಟೆ ಇದ್ದಿರ್ದು. ತಡ ಆದರೆ ಬಸ್ ಸಿಕ್ಕುದ್ಲೆಂತ ಹೋತ್"ಂತ ಹೇಳಿಕನ ಮಾಚುಗೆ ಕಣ್ಣೀರೇ ಬಾತ್. ಇಂದ್ ಬಂದರೂ ಸಾ ತಂಗೆನ ನೋಡಿಕೆ ಆತ್ಲೆಲ್ಲಾ. ಇನ್ನ್ ನಾ ಅದರ ನೋಡಿಕೆ ಉಟ್ಟೋ ಇಲ್ಲೆನೋಂತ ನೆನ್ದ್ ಮೊರ್‌ಟತ್. ಅದರ ಆಳ್ಗೇಲ್ ನಿಂತ ಮೇಲೆ ಅವ್ವ ಅದಿಕೆ ಮತ್ತೆ ಮಕ್ಕಳಿಗೆ ಒಂದೇ ತಟ್ಟೆಲಿ, ಇದ್ದ ಗಂಜಿನ ಇಕ್ಕಿತ್. ಮಿಣ್ಕಿಗೆ ಮಾಡ್ದ ಸಮ್ಮಾನದ ಕೋಳಿ ಗೈಪು, ಎರ್ಡ್ ನೀರ್ ದೋಸೆನ ಸಾ ಮಾಚುಗೆ ಕೊಟ್ಟತ್.

ಉಂಡಾದ ಮೇಲೆ ಕೇಳ್ತ್ "ಮಿಣ್ಕಿ ನಂಗೆ ಯಾಕೆ ಮೊದ್ವೆಗೆ ಹೇಳ್ತ್‌ಲೆ.?"

"ನಿಂಗೆ ಮಾತ್ರ ಅಲ್ಲ ನಾವುಗೆ ಸಾ ಹೇಳ್ತ್‌ಲ್ಲೆ. ಅದ್ ಮೊದ್ವೆ ಆದ್ದ್ ತುರ್ಕನ. ಅವಂಗೆ ಹೆಣ್ಣ್, ಮಕ್ಕ ಎಲ್ಲಾ ಒಳೊ. ಅಂತಂವಂಗೆ ಮೊರ್ಲ್‌ಗಟ್ಟಿ ಅವನ ಒಟ್ಟಿಗೆ ಉಟ್ಟು, ಇವ್ಳಿಗೆ ಬೇರೆ ಮನೆ

ಾಡಿ ಕೊಟ್ಟುಟುಗಡ. ಅದರೆಲ್ಲಾ ಎಲ್ಲರ ಹಕ್ಕಲೆ ಹೇಳಿಕೆ ಆದೆನಾ? ಮೊದ್ವೆ ಆಗುಟು ಬೇರೆ ಾತಿಯಂವನಂತ ಮಾತ್ರ ಹೇಳ್ಯೊಳೊ"ಂತ ಮಾಯ್ಲು ಹೇಳ್ತ್.

ಅದರ ಸಾಲೆಗೆ ಕಳ್ಸಿದ್ದೇ ತೊಪ್ಪಾತಾಂತ ಕಂಡದೆ"

ಅದರೆಲ್ಲ ಬುಡು, ನಮ್ಮ ಜಾತಿನ ಗೂಡೆಂತ ಗೊತ್ತಿದ್ದೂ ಅಂವ ಇಟ್ಟ್‌ಕಂಡುಟಲ್ಲಾ? ಲಾಯ್ಕ್ ೋಡಿಕಂಡದೆಗಡ. ಮತ್ತೆಂತ ಆಕು?"

ಮಾಚುಗೆ ಆದ್ದ್ ಏನ್‌ಂತ ಅಂದಾಜಾತ್. ಅಂದ್ ಅದ್ ಹೇಳಿತ್ತ್ "ನನ್ನ ಹಕ್ಕಲೆ ುನೆಂವ ತುರ್ಕ. ಒಳ್ಳಂವ. ಬಾರಿ ಲಾಯ್ಕ ಹಾಡ್ದೆ. ಅವನ ಹಕ್ಕಲೆ ಹಾರ್ಮೋಣಿ ಸಾ ುಟ್ಟು"ಂತ. ಸಣ್ಣಂದರಿಂದಳೇ ಮಿಣ್ಕಿಗೆ ಹಾಡ್‌ಂತೇಳ್ರೆ ಜೂವ. ಬಜನೆ ಪದ್ಯನೋ, ಸಿನೆಮಾ ದ್ಯನೋ, ಇನ್ನಾವುದೋ ಹಾಡ್ ಅದರ ಬಾಯಿಲಿ ತೊಪ್ಪಿಕಿಲ್ಲೆ. ಇದ್ ಹಾಡುದಕ್ಕೆ ಅಂವ ಾರ್ಮೋಣಿ ಬಾರ್ಸಿರೋಕು. ಹಾಂಗೆ ಅವರ ರಾಗ ತಾಳ ಒಟ್ಟಿಗೆ ಸೇರಿರೋಕು. ಎಂತವನಾರ್ ೊದ್ವೆ ಆಗಲಿ. ಆದರೆ ಲಾಯ್ಕ್‌ಲಿ ಇರಲಿ"ತ ಮನ್ಸ್‌ಲೇ ಹೇಳಿಕಂಡತ್. ಆ ಮೇಲೆ ಸಾ ಾಚು "ನಾ ಸಾಯಕೆ ಮುಂದೆ ಮಿಣ್ಕಿನೊಮ್ಮೆ ನೋಡ್ರೆ ಸಾಕ್"ಂತ ಹೇಳ್ತಾ ಇತ್ತ್. ವೀಳ್ಯಡ್ಕದವೋ, ುಳ್ಯದವೋ ಚಿಕ್ಕ ಮಂಗ್ಳೂರ್ ಕಡೆ ಹೋವು ಇದ್ದರೆ "ನನ್ನ ತಂಗೆ ಅತ್ತನ ಒಬ್ಬ ತುರ್ಕನ ೊದ್ವೆ ಆದ್ದ್, ಅದ್ ನರ್ಸಿ. ಯಾರ ಕೈಲಾರ್ ವಿಚಾರ್ಸಿ, ಅದ್ ಸಿಕ್ಕಿರೆ ನಿನ್ನ ಅಕ್ಕ ನಿನ್ನ ೋಡೋಕುಂತ ಹೇಳ್ತಾ ಇತ್ತ್ಂತ ಹೇಳಿ ಬುಡಿ"ಂತ ಕೇಳಿಕಣ್ತಿತ್ತ್. ಒಮ್ಮೆ ಯಾರೋ ಹೇಳ್ದೊ-ತ್ಯನೋ ಅಲ್ಲಾ ಸುಳ್ಳೋ-ನಿನ್ನ ತಂಗೆ ಮಾತಾಡಿಕೆ ಸಿಕ್ತ್‌ಲೆ. ಆದರೆ ಅದ್ ಯಾರ ಮೊದ್ವೆ ದ್ದ್? ಅಲ್ಲಿ ಹೇಂಗುಟ್ಟುಂತ ತಿಳ್ಕೊಂಡಳೆ. ಅದಿಕೆ ಏನ್ ಕೊರತೆ ಇಲ್ಲೆ. ಅದರ ಮೊದ್ವೆ ಆದಂವ ಬಾರೀ ಇದ್ದಂವ"ಂತ. ಅಷ್ಟ್ ಕೇಳಿ ಮಾಚುಗೆ ಸಮದಾನ ಆತ್. ಆದರೂ ಅದ್ ಗಾಗ ಹೇಳ್ತಿತ್ತ್ "ನಾ ಸಾಯಕೆ ಮುಂದೆ ಅದರ ಒಮ್ಮೆ ನೋಡಿದ್ದರೆ ಸಾಕಿತ್ತ್" ಅಂತ.

ಮಾಚು ವೀಳ್ಯಡ್ಕಕ್ಕೆ ಬಂದ ನಾಕನೇ ದಿನ ಎಲುಂಬ ಬಾತ್. ಬಂದಂವ ನಾಳೆ ುದ್ಯನ ಒಂದ್ ಗಂಟೆ ಅಂದಾಜಿಗೆ ನಾವು ಮೊಡಿಕೇರಿಗೆ ಎತ್ತೋಕುಂತ ಮೊಡಿವಾಳ್ತಿ ಂದ್ ಹೇಳ್ಯುಟು. ಹಾಂಗೆ ಮುನ್ನೂರು ರುಪಾಯಿ ದುಡ್ಡು ಸಾ ಕೊಟ್ಟುಟುಂತ ಹಣ ಇದ್ದ ಾಗದದ ಲಕೋಟೆನ ಮಾಚುಗೆ ಕೊಟ್ಟತ್. ಮಾಚುನ ಮೋರೆ ಅರ್ಳಿತ್. ಎಂತಾರ್ ಆಗಲಿ, ಮ್ಮೆದ್ ತಾಪತ್ರೆ ಮುಗ್ತಲೇಂತ "ಹಾಂಗಾರೆ ಪೋಯಿ"ಂತ ಹೇಳ್ತ್. ಎಲುಂಬ ಹೇಳ್ತ್ ಾವ್ಕಾರ್ತಿಗೆ ಇದೆಲ್ಲ ಗೊತ್ತಾಕೆ ಬೊತ್ತ್ಂತ ಹೇಳ್ಯುಟು. "ಯಾರ್ ಹೇಳಿಕೆ ಹೋದವೆ ಈಗ?"ಂತ ೇಳಿ ಮಾಚು ಹಣದ ಬಂದವಸ್ತಿಗೆ ಒಳಗೆ ಹೋತ್.

ಮೊರ್ದಿನ ಒಂಬತ್ತ್ ಗಂಟೆಗೇ ದಟಿಗೆ ಬುಟ್ಟೊ. ಅಂದೊಮ್ಮೆ ತಡ ಆಗಿ ಹೋಗಿ, ಆದ ಬಂಜದ ನೆಂಪು ಅವರ ಜನ್ಮಕ್ಕೆ ಅವು ಮರೆವಂತದಲ್ಲ. ಹಾಂಗಾಗಿ ಈಗ ಅವು ಎಲ್ಲಿಗೆ ೋಕೆ ಇದ್ದರೂ ಬೊಳ್ಪುಗೇ ಹೊರ್ಡುದು. ಅದರ ಮಾಚು ಬಾಯಿಲಿ ಸಾ ಹೇಳ್ತ್ "ಅಲ್ಲಿ ಾದ್ ಕುದ್ದರೂ ತೊಂದರೆ ಇಲ್ಲೆ. ತಡ ಆಗಿ ಮಾತ್ರ ಹೋದು ಬೇಡಾಂತ." ಹಾಂಗೆ ಹನ್ನೆರ್ಡ್ ಂಟೆಗೇ ಮೊಡಿಕೇರಿ ತಲ್ಪಿದೊ. ಅಲ್ಲಿಗೆ ಎತ್ತಿಕನ ಮಳೆಂತೇಳ್ರೆ ಮಳೆ! ಇಲ್ಲಿಂದ ಹೊರ್ಡಿಕನೇ ುಳೆ ಇದ್ದರೂ ಇಲ್ಲಿಯೊವ್ಕೆ ಅದ್ ದೊಡ್ಡ ಸಂಗತಿನೇ ಅಲ್ಲ. ಆದರೆ ಆ ಮೊಡಿಕೇರಿನ ಮಳೆ! ಚಳಿ! ಅಬ್ಬಾ! ಅವು ನಾಕ್ ಮಂದಿ ಬಸ್ ಸ್ಟೇಂಡ್‌ಲಿ ಇದ್ದ ಹೋಟ್ಳ್‌ಲಿ ಬಿಸಿ ಬಿಸಿ

ಕಾಫಿ ಕುಡ್ದೊ. ಕಾದ ಕಾವಲಿಗೆ ನೀರ್ ಹನ್ನಿಸಿದ ಹಾಂಗೆ ಆ ಚಳಿಗೆ ಕಾಫಿನ ಬಿಸಿ ಅವ್ಕೆ ಮುಟ್ಟಿತೇ ಇಲ್ಲೆ. ಬಸ್ಟೇಂಡ್ ಜಗ್ಲಿಲಿ ಮಳೆ, ಚಳಿಗೆ ಗಡಗಡಂತ ನ್ಡುಗ್ಗಿಕಂಡ್ ಒಬ್ಬೊಬ್ಬ ಒಂದೊಂದ್ ಕೂಸ್‌ನ ಹಿಡ್ಕಂಡ್ ಒಬ್ಬಂಗೊಬ್ಬ ತಾಂಗಿಕಂಡ್ ಗೂಂತ ಕುದ್ದೊ. ಎಲುಂಬ ದೊಡ್ಡ ಕೂಸುನ ಅಪ್ಪಿ ಹಿಡ್ಕಂಡರೆ, ಮಾಚು ಸಣ್ಣದರ! ಆ ಮೈಬಿಸಿಲಿ ಹಂಞ ತಡ್ಕಂಬ ಹಾಂಗೆ ಆತಿತ್ತ್. ಮಾತಾಡಿಕೆ ಹೊರ್ಟರೆ ಹಲ್ಲ್ ಕಟಕಟಂತ ಆದಲ್ಲದೆ ಮಾತ್ ಹೊರ್ಡುದಿಲ್ಲೆ. ಚಳಿಗೇ ಬೊಯ್ಯೋಕುಂತೇಳ್ರೂ ಅದ್ ಸಾ ಆಗದ್ದಂಗೆ ಆಗಿತ್ತ್. ಅಲ್ಲಿ, ಬೇಡಂವ ಆದರೂ ಸ್ವೆಟ್ಟರ್, ಕಾಲಿಗೆ ಚಪ್ಪಲ್ ಹಾಕಿಕಂಡ್ ಇತ್ತ್. ಇವರ್ದ್ ಬರಿಕಾಲ್, ಬರಿಮೈ! ಹಣ ಇದ್ದೊವ್ವು ಮೈ ಪೂರ ಪಾರ್ಸೆಲ್ ಸಾಮಾನ್ ಹಾಂಗೆ ಮೈ ಮುಚ್ಚಿಕಂಡ್ ಇದ್ದೊ. ಅವು ಮೈ ಬೆಚ್ಚಲಿ ಇರ್ದದರ ನೋಡಿ, ಇವರ ಮಂಡೆ ಬೆಚ್ಚ ಆತಿತ್ತ್.

ಎಲುಂಬ "ಬೇಗ ಪೋಯಿಂತ ಹೊರ್ಡಿಸಿದ. ಈಗ ಇಲ್ಲಿ ಈ ಚಳಿಗೆ ಸಾಯಕಾತ್"ಂತ ಹೆಣ್ಣ್‌ನ ದೂರ್ತ್. "ನಿಂಗೆ ಅಂದ್ ನಡ್ದದ್ದ್ ಮರ್ತ್ ಹೋಗುಟುಂತ ಕಂಡದೆ"ಂತ ಹೇಳ್ತ್ ಮಾಚು.

ಸುಮಾರ್ ಮದ್ಯನ ಒಂದ್ ಗಂಟೆಗೆ ಜೀಪು ಬಾತ್. ಮೊಡಿವಾಳ್ತಿನೊಟ್ಟಿಗೆ ಒಬ್ಬ ಹೈದನೂ ಇಳ್ತ್. ಅವರ ನೋಡಿ ಎದ್ದ್ ನಿಲ್ಲೊಕೊಂತೇಳ್ರೆ ಕಾಲ್ ಮರಗಟ್ಟಿದ ಹಾಂಗೆ ಆಗಿತ್ತ್! ಅಂತೂ ಹೇಂಗೋ ಎದ್ದೊ. ಮೊಡಿವಾಳ್ತಿ "ಹಾಳಾದ ಮಳೆ, ಇಂದೇ ಬರೋಕಾ? ಮಕ್ಕಳಿಗೆ ಚಳಿ ಆದುಂತ ಹಳೆ ಸ್ವೆಟ್ಟರ್ ತಂದೊಳೆ"ಂತ ತಂದ ಹಳೆ ಸ್ವೆಟ್ಟರ್ ಕೊಟ್ಟತ್. ಮಾಚು ಎರ್ಡ್ ಕೈಒಡ್ಡಿ ತೆಕಂಡ್, ಒಂದರ ಎಲುಂಬಂಗೆ ಕೊಟ್ಟತ್. ಇನ್ನೊಂದರ ಸಣ್ಣ ಕೂಸಿಗೆ ಹಾಕಿತ್. ಮಕ್ಕಳ ಮೈ ಬೆಚ್ಚಂಗೆ ಆತ್ಂತ ಅವ್ಕೆ ಸಮ್ದಾನ ಆತ್. ಮಾಚು ಹೇಳಿಕಂಡತ್ "ನಾವುಗೆ ಸಾ ಪರ್ಕಟೆ ಸೆಟ್ಟರ್ ಇದ್ದರೆ ಒಳ್ಳೇದಿತ್ತ್"ಂತ. ಮೊಡಿವಾಳ್ತಿ "ನೋಡೊಮ, ಅಣ್ಣನ ಮನೆಲಿ ಇದ್ದರೆ ಕೊಟ್ಟನೆ"ಂತ ಹೇಳಿ, ಆ ಹೈದನ "ಇಂವ ನನ್ನ ಅಣ್ಣನ ಮಂಜ"ಂತ ಪರ್ಚಯ ಮಾಡಿ, "ಬನ್ನಿ ಬನ್ನಿ, ಜೀಪುಲಿ ಕೂರಿ"ಂತ, ಜೀಪುನ ಹಿಂದನ ಬಾಗ್ಲ್ ತೆಗ್ತ್. ಇವು ಅವರ ಸಾಮಾನ್ ಸರಂಜಾಮುಗಳ ಒಳಗೆ ಇಸಿ ಹತ್ತಿ ಕುದ್ದೊ. ಹೈದ ಅಲ್ಲಿನ ಟರ್ಪಾಲ್ ಹಾಕಿತ್. ಚಳಿಚಳಿನೇ! ಆದರೆ ಹೊರಗೆಗಿಂತ ಒಂಚೂರು ಕಮ್ಮಿ ಅಷ್ಟೇ! ಜೀಪುಲಿ ಹೋತಿದ್ದ ಹಾಂಗೆ ಮಾಚು ಅಂದ್ ನರ್ಕ ಬಂದ್‌ಕಂಡ್, ಅಲ್ಲಲ್ಲಿ ಕುದ್ದ್‌ಕಂಡ್ ನಡ್ಕಂಡ್ ಹೋದದರ ನೆಂಪು ಮಾಡಿಕೊಂಡತ್. ಮೂರ್ನಾಡ್ ಬಾತ್. ಜೀಪು ವಿರಾಜ್‌ಪೇಟೆ ದಾರಿಗೆ ತಿರ್ಗಿತ್. ಆಗ ಮಾಚುಗೆ ಮತ್ತೆ ಮೊಡಿವಾಳ್ತಿಗೆ ಯಾರಾರ್ ನೋಡಿ ಸಾವ್ಕಾರ್ತಿಗೆ ಹೇಳಿ ಬುಟ್ಟರೆಂತ ಹೆದ್ರಿಕೆ ಆತ್. ಪುಣ್ಯಕೆ ಗೊತ್ತಿದ್ದೊವ್ವು ಯಾರೂ ಕಂಡತ್ಲೆ. ಅರಮೇರಿ ಕಳ್ತ್. ಮತ್ತೆ ಹತ್ತ್ ನಿಮ್ಸಲಿ ಒಂದ್ ಮನೆ ಜಾಲ್‌ಲಿ ಜೀಪು ನಿತ್ತತ್. ಅದ್ ಮೊಡವಾಳ್ತಿನ ಅಣ್ಣನ ಮನೆ. ಆ ಹೈದ ಅವರ ಮಂಜ. ಎಲ್ಲೊವ್ವು ಇಳ್ದೊ. ಮೊಡಿವಾಳ್ತಿ ಅವರ "ನನ್ನ ದೊಡಪನ ಮಂಜ ಅಣ್ಣ"ಂತ ಹೇಳ್ತ್. ಇವು ಕೈ ಮುಗ್ದೊ. ಆ ಜನ ಸಮದಾನಿನೇ. "ನಿಮ್ಮ ಹಂಞ ಗಡಿಬಿಡಿಲಿ ಕರ್ಸಿದೆ. ನೀವುಗೆ ತೊಂದರೆ ಆತೋ ಏನೋ. ಆ ಗದ್ದೆನ ದನಿನೊಟ್ಟಿಗೆ ನಂಗೆ ಹಣದ ವ್ಯವಹಾರ ಉಟ್ಟು. ಬಿತ್ತಿ ದೈ ಆಗುಟು. ನಾಟಿ ಮಾಡಿಕೆ ಜೆನ ಇಲ್ಲೆ. ಯಾರಾರ್ ಜನಗ ಇದ್ದರೆ ಕಳ್ಸಿ ಕೊಡು"ಂತ ಹೇಳಿದ್ದೊ. ತಂಗೆನ ಹಕ್ಕಲೆ ಹೇಳಿದ್ದೆ. ಅದ್ ನಿಮ್ಮ ಹೇಳ್ತ್. ಅವರ ಮನೆ ಒಂದ್

ಡೆ. ಗದ್ದೆ ಒಂದ್ ಕಡೆ. ಈ ಒಂದ್ ಸರ್ತಿ ಬೆಳೆನ ನೋಡಿಕೊಂಬಕೆ ಜನ ಬೇಕ್. ನಾಟಿ ಮಾಡಿಕೆ ನೀವ್ಗೆ ಇಬ್ಬರಿಗೆ ಆಕಿಲ್ಲೆ. ಅದಿಕ್ಕೆ ಸಾ ನಾನೇ ಜನ ಮಾಡಿ ಕೊಟ್ಟನೆ. ನಾಟಿ ಆದ ಮೇಲೆ ಅಲ್ಲಿನ ಕೆಲ್ಸಗಳ ಜವಾಬ್ದಾರಿ ಸಾ ನೀವ್ಗೆ. ಅದಿಕ್ಕೇ ತಂಗೆ ಹಕ್ಕಲೆ ಸದ್ಯದ ಕರ್ಚಿಗೆಂತ ನೀವ್ಗೆ ಕೊಡಿಕೆಂತ ಮುನ್ನೂರು ರುಪಾಯಿ ಕೊಟ್ಟಿದ್ದೆ. ಆ ಕಾಫಿ ಪ್ಲಾಂಟರ್ ಬಾರಿ ಒಳ್ಳೇಂವಂತ ನಾ ಏನ್ ಹೇಳಿಕಿಲ್ಲೆ. ಕೋಪಿಷ್ಟನೇ. ಈ ಬೆಳೆ ಕೊಯ್ದ್ ಆವ ಮುಟ್ಟ ಅಲ್ಲಿ ಇದ್ದರೆ ಸಾಕ್"ಂತ ಹೇಳಿ ಮತ್ತೆ ನೆಂಪು ಮಾಡಿ "ಇಲ್ಲಿಂದ ಹೋಕನನೇ ಮನೆ ಸಾಮಾನ್ ತೆಕಂಡ್ ಹೋಗಿ. ಮತ್ತೆ ಏನಾರ್ ಬೇಕಾರೆ ಎರ್ಡ್ ಮೈಲ್ ನಡ್ದ್ ಬರೋಕಾದೆ"ಂತ ಪೂರ ಸಂಗತಿಗಳ ಹೇಳ್ದೊ. ಇವ್ಕೆ ಹಂಞ ಸಮ್ದಾನ ಆತ್. ಆದರೂ ಮಾಚು ಕೇಳ್ತ್ "ನಾವುಗೆ ಅಂತ ತೊಂದರೆ ಮನಿ ಬಂದರೆ ನಿಮ್ಮಲ್ಲಿ ಹೇಳಕಲೇ" "ನನ್ನಿಂದ ಆವಂತದರ ಮಾಡ್ವೆ ಆದರೆ ಅವನ ಹಗೆ ಕಟ್ಟಿಕೊಂಬಕೆ ನಾ ತೆಯಾರ್ ಇಲ್ಲೆ." "ಆತ್, ನಾವುಗೆ ದೈರ ಕೊಟ್ಟರೆ ಸಾಕ್, ಅಷ್ಟೇ." "ಅದ್ ಕೊಡಕ್ಕ್"ಂತ ಹೇಳಿ "ಇದ್ದದರ ಉಂಡು ಹೋಗಿ. ಮತ್ತೆ ಸಾಮಾನ್ ತೆಕಣಿ"ಂತ ಹೇಳ್ದೊ. ಮಂಜನ ನೋಡಿ "ನಮ್ಮ ಅಂಗಡಿಗೆ ಕರ್ಕಂಡ್ ಹೋಗ್. ದುಡ್ಡು ತೆಕಂಬೊದು ಬೇಡಂತ ನಾ ಹೇಳ್ದಂತ ಹೇಳ್"ಂತ ಹೇಳ್ದೊ., ಉಂಡ್ ಆಗಿ, ಇವೆಲ್ಲ ಅಂಗಡಿಗೆ ಹೋದೊ. ಅಡಿಗೆ ಸಾಮಾನ್‌ಗಳ ಒಟ್ಟಿಗೆ ಮಕ್ಕಳಿಗೆ ತಿಂಬಕೆ ಹೊರಿಯಕ್ಕಿ, ಅವ್ಲಕ್ಕಿ, ಚಕ್ಕುಲಿ, ಬಿಸ್ಕೇಟ್ ಇಂತರ ಸಾ ಮಾಚು ತೆಕಂಡತ್. ಸದ್ಯ ಉಂಬಕೆ ತಿಂಬಕೆ ತೊಂದರೆ ಇಲ್ಲಲೇಂತ ಅದಿಕ್ಕೆ ಸಮ್ದಾನ ಆತ್. ಎಲುಂಬ ಹತ್ತ್ ಹದಿನೈದ್ ದಿನಕ್ಕೆ ಆವಷ್ಟ್ ಎಲೆ, ಅಡಿಕೆ ಹೋಳು, ಸುಣ್ಣ ಎಲ್ಲ ವೀಳ್ಯಡ್ಕಂದಳೇ ಹಿಡ್ಕಂಡ್ ಬಂದಿತ್ತ್. ಮತ್ತೆ ಏನಾರ್ ಬೇಕಾರೆ ಯಾರ್‌ಲ್ಲಾರ್ ಹೇಳಿ ತರ್ಸುದುಂತ ಯೋಚನೆ ಮಾಡಿತ್ತ್. ಆದರೂ ಅಂಗಡಿಲಿ ಅಡಿಕೆ ಹೊಡಿ ಕಟ್ಟ್ ನೋಡಿಕನ, ಆ ಮೇಲೆ ವೀಳ್ಯದೆಲೆ ಸಿಕ್ಕದ್ದರೂ ಅಡಿಕೆ ಹೊಡಿನಾರೂ ಬಾಯಿಗೆ ಹಾಕಂಡ್ ಇರಕಲೇಂತ ಅದರ್ದ್ ಒಂದ್ ದೊಡ್ಡ ಕಟ್ಟ್ ತೆಕಂಡತ್.

ಸಾಮಾನ್ ತೆಕಂಡ್ ಜೀಪುಲಿ ಮತ್ತೆ ಮೊಡಿವಾಳ್ತಿನ ಅಣ್ಣನ ಮನೆಗೆ ಬಂದೊ. ಬಾಕನ ಅದ್ ಎರ್ಡ್ ಹಳೆ ಸ್ವೆಟ್ಟರ್‌ಗಳ ಹುಡ್ಕಿ ತೆಗ್ದ್ ಇಸಿತ್ತ್. ಹರ್ಕ್ಲೇ. ಆದರೂ ಚಳಿ ತಡಿಯಕೆ ಸಾಕಲ್ಲಾಂತ ಮಾಚುಗೆ ಕುಸಿ ಆತ್. "ಬಾರೀ ಉಪಕಾರ ಮಾಡ್ದರಿ. ಚಳಿ ತಡ್ಯಕೆ ಆದ್‌ಲ್ಲೆ."ಂತ ಹೇಳಿ ತಿರ್ಗಿಸಿ ಹಿಂದೆ ಮುಂದೆ ನೋಡಿ, ಗಂಡಸರ ಸ್ವೆಟ್ಟರ್‌ನ ಗಂಡಂಗೆ ಕೊಟ್ಟತ್. ಮೊಡಿಕೇರಿಲಿ ಎಲ್ಲೊವು ಸ್ವೆಟ್ಟರ್ ಹಾಕ್ಕಂಡ್ ಹೋದರ ನೋಡಿ ಆಸೆ ಪಟ್ಟಿದ್ದ ಮಾಚು, ಅದರ ಸ್ವೆಟ್ಟರ್‌ನ ಹಾಂಗೆ ಎದೆಗೆ ತಾಂಗಿಸಿ ಹಿಡ್ಕಂಡ್ ಬಿಸಿನ ಅನ್ಬವಿಸ್ತ್. ಮತ್ತೆ ಕೈಲಿದ್ದ ಕೂಸುನ ಎಲುಂಬಂಗೆ ಕೊಟ್ಟ್, ನೆಗೆ ಮೋರೆಲಿ ಹಾಕ್ಕಂಡತ್. ಅದರ ಬೊದ್ಕ್‌ಲಿ ಸ್ವೆಟ್ಟರ್‌ನ ಹಾಕ್ವ ಯೋಗ ಇಂದ್ ಕೂಡಿ ಬಂದಿತ್ತ್. ಅದಿಕ್ಕೆ ಸಣ್ಣ ತರದ ಮುಜುಗರನೂ ಆತಿತ್ತ್. ಸ್ವೆಟ್ಟರ್ ಹಾಕಿದ ಮೇಲೆ ಚಳಿನ ಹಿಡ್ತ ಹಂಞ ಕಮ್ಮಿ ಆತ್. ಆ ಕುಸಿಲಿ ಕೂಸುನ ಎತ್ತಿಕಂಡ್, ಗಂಡಂಗೆ "ನೀನ್ಸಾ ಹಾಕಿಕಾ"ಂತ ಹೇಳ್ತ್. ಅವಂಗೆ ಅದರ ಹಾಕುದು ಹೇಂಗೆಂತ ಅಂದಾಜ್ ಮಾಡಿಕೆ ಹನೀಸ್ ಹೊತ್ತ್ ಬೇಕಾತ್. ಹಾಂಗೆ ಹೀಂಗೆ ತಿರ್ಗಿಸಿ ಅಂವ ಅದರ ಹಾಕಿದ ಮೇಲೆ "ಹೇಂಗೆ ಕಂಡದೆ"ಂತ ಕೇಳ್ವ ಹಾಂಗೆ ಹೆಣ್ಣ್‌ನ ನೋಡ್ತ್. ಸ್ವೆಟ್ಟರ್ ಹಾಕಿದ ಮೇಲೆ ಅಂವ ಕೆಲ್ಸದವನ ಹಾಂಗೆ ಕಾಂಬದೆ ಯೆಜಮಾನನ ಹಾಂಗೆ ಕಂಡತ್. ಮಾಚು

ಯಾರೋ ಹೊಸಬನ ಇದೇ ಸುರು ನೋಡುದುಂತೇಳ್ವ ಹಾಂಗೆ ರೆಪ್ಪೆ ಹಾಕದೆ ನೋಡಿ ಕುಸಿ ಪಟ್ಟತ್. ಹರ್ಕಟೆ ಆದರೇನ್? ಅದರ ಹಾಕಿದ ಮೇಲೆ ಅಂವ ಪೋರ್ಲು ಕಂಡದ್ದ್ ಸುಳ್ಳೇನಲ್ಲ!

ಮನೆವು ಹೊರಗೆ ಬಂದ್ "ಹಾಳ್ ಮಳೆ, ಇಂತ ಮಳೆಗೆ ಆ ಮನೆ ಮುಟ್ಟ ಜೀಪು ಬೇರೆ ಹೋದ್‌ಲ್ಲೆ. ಅರ್ಧ ದಾರಿ ಮುಟ್ಟ ಜೀಪು ಹೋದೆ. ಆ ಮೇಲೆ ನಡ್ಕಂಡೇ ಹೋಕು. ಡ್ರೈವರ್ ನಿಮ್ಮ ಕರ್ಕಂಡ್ ಹೋದೆ"ಂತ ಇವರ ಕಳ್ಸಿದೊ. ಎಂಥ ಗ್ರಾಚಾರನೋ ಏನೋ. ಇವು ಜೀಪುಲಿ ಒಂದಷ್ಟ್ ದೂರ ಹೋಗಿರ್‍ವೊ, ಒಂದ್ ಗಾಳಿಮಳೆ ಸುರಾತ್! ಅಬ್ಬ! ಅದರ ಆರ್ಬಟನ ಹೇಳಿಕೇ ಸಾದ್ಯ ಇಲ್ಲೆ! ಜೀಪಿನ ಹಿಂದೆನ ಟರ್ಪಾಲ್ ನೂಂಕಿ ಅದರ ಹರ್ದೇ ಹಾಕಿದೆನೋಂತ ಹೇಳ್ವ ಹಾಂಗೆ ಚಳಿ ಗಾಳಿ, ಅದ್ರೊಟ್ಟಿಗೆ ಮಳೆ ನೀರ್! ಇದರೆಲ್ಲ ತಡಿಯಕಾಗದೆ, ಇವು ನಾಕ್ ಜೆನನೂ ಗಡಗಡಂತ ನೊ಼ಡ್ಗಿಕಂಡ್ ಒಂದಿ, ಮುದ್ದೆ ಆಗಿ ಕುದ್ದೊ. ಕೊಡಗ್‌ನ ಮಳೆ, ಗಾಳಿ, ಚಳಿ ಎಂತಂತ ಇಂದ್ ಅವ್ಕೆ ಸೆರಿ ಗೊತ್ತಾತ್!

ಜೀಪು ಎರ್ಡ್ ಮೂರ್ ಮೈಲ್ ಡಾಮರ್ ಮಾರ್ಗಲೇ ಹೋಗಿ ಮತ್ತೆ ಎಡಕ್ಕೆ ಮೊ಼ಣ್ಣ್ ದಾರಿಗೆ ತಿರ್ಗಿತ್. ತಿರ್ಗುವಲ್ಲೇ ಕಣ್ಣ್‌ಗೆ ಕಾಣುವಷ್ಟ್ ದೂರಲಿ, ಕಾಫಿ ತೋಟದ ಒಳಗೆ, ಮಳೆಂದಾಗಿ, ಮೊ಼ಸ್ಕ್ ಮೊ಼ಸ್ಕಾಗಿ ಒಂದ್ ದೊಡ್ಡ ಮಾಳಿಗೆ ಮನೆ ಕಂಡತ್. ಡ್ರೈವರ್ ಹೇಳ್ತ್ "ಅಲ್ಲಿ ಕಾಂಬೊ಼ದು, ಆ ಗದ್ದೆನ ದನಿನ ಮನೆ". ಮಾಚು ಕೇಳ್ತ್ "ಅವು ಜನ ಹೇಂಗೆ?" ಅಂವ ಉತ್ತರ ಕೊಟ್ಟತ್ಲೆ. ನೆಗಾಡ್ತ್. ಆ ಮನೆ ಸುತ್ತ ಕಾಫಿ ತೋಟನೇ. ಮೈಂದ್‌ಲಿ ಆ ತೋಟ, ಆ ಮನೆ, ಎಲ್ಲಾ ಏನೋ ಒಂದ್ ಚಿತ್ರದ ಹಾಂಗೆ ಕಾಂಬೊ಼ತಿತ್ತ್. ವಿರಾಜ್ ಪೇಟೆಲಿ ಹೇಳಿದ್ದೊ ಅಲ್ಲಾ-ಅವರ ಮನೆ ಒಂದ್ ಕಡೆ, ತೋಟ ಒಂದ್ ಕಡೆಂತ. ಮತ್ತೆ ಸಾ ಹಂಞ ದೂರ ಹೋದ ಮೇಲೆ ಡ್ರೈವರ್ ಜೀಪು ನಿಲ್ಸಿತ್. ಮಳೆ ಮೈಂದಿಗೆ ಒಂದ್ ಸಾ ಸರ್‍ಯಾಗಿ ಕಾಂಬೊ಼ತಿತ್ಲೆ. ಮನೆಗ ಏನಾರ್ ಒಳೊನಾಂತ ಮಾಚು ಕಣ್ಣ್ ಬುಟ್ಟ್ ಬುಟ್ಟ್ ನೋಡ್ತ್. ಮನೆಗ ಕಂಡತ್ಲೆ. ಕಾಡ್ ತರ ಕಂಡತ್. ಕಾಡಂದರೆ ಮರ ಕಾಡಲ್ಲ. ಬೆದ್ರ್ ಹಿಂಡ್ಲ್‌ಗಳ ಕಾಡ್. ದೂರ ದೂರಕ್ಕೆ ಒಂದೊಂದ್ ಮರಗ.

ಜೀಪುಂದ ಇಳ್ಯಕನ ಜಿರಿಕೂಟ್ ಮಳೆ! ಮೈಯಿಡೀ ಗಡಗಡ ನೊ಼ಡ್ಗಿದೆ. ಹಂಞ ಹೊತ್ತ್ ಜೀಪುಲೇ ಕುದ್ದ್ ಹೋಗಿದ್ದರೆ ಆತಿತ್ತೋ ಏನೋಂತ ಮಾಚು ಮನ್ಸ್ ಒಳಗೆ ಹೇಳಿಕಂಡತ್. ಆದರೆ ಆ ಗುರ್ತ ಇಲ್ಲದ ಡ್ರೈವರ ಹಕ್ಕಲೆ ಹೇಳುದು ಹೇಂಗೆ?ಂತ ಬಾಯ್ಮುಚ್ಚಿಕೊಂಡತ್. ಚಳಿ ಅಂದರೆ ಸ್ವೆಟ್ಟರ್ ಯಾವ ಲೆಕ್ಕಕ್ಕೂ ಇಲ್ಲದ ಹಾಂಗಾಗಿತ್ತ್. ಉಟ್ಟ ಸೀರೆ ಗಾಳಿಗೆ ಹಾರಿ, ಮಳೆಗೆ ಚಂಡಿ ಮುದ್ದೆ ಆಗುಟು. ಅವು ಗಂಡ ಹೆಣ್ಣ್ ಒಂದೊಂದ್ ಕೂಸುನ, ಹಾಂಗೆ ಅವರ ಚೀಲಗಳ ಹಿಡ್ಕಂಡೊ. ವಿರಾಜ್ ಪೇಟೆಲಿ ಕೊಟ್ಟ ಹಳೆ ಕೊಡೆನ ಎಲುಂಬ ಬುಡ್ಸಿಕಾಕನ ಅದ್ ಗಾಳಿಗೆ ಮೊಗ್ಚಿತ್. ಎಲುಂಬ ಕನ್ನಡ ಜಿಲ್ಲೆವು ಹೇಳ್ವ ಹಾಂಗೆ "ಸಾವುನ ಗಾಳಿ ಮಳೆ"ಂತ ಪರ್‌ಂಚಿಕೊ಼ಂಡ್ ಅದರ ಸರಿ ಮಾಡ್ತ್. ಅಷ್ಟ್ ಹೊತ್ತ್ ಇವೆಲ್ಲ ಚಂಡಿನೇ. ಡ್ರೈವರ್ ಮಳೆ ಅಂಗಿ ಹಾಕಿತ್ತ್. ಅಂವ ಅಂಗಡಿಂದ ತೆಕಂಡ ಸಾಮಾನ್‌ಗಳ ಗೋಣಿನ ಹೆಗ್ಲ್ ಮೇಲೆ ಹಾಕ್ಕಂಡ್ ಹೋತ್. ಈ ಹರ್ಕಟ್ ಕೊಡೆ ಆ ಮಳೆಗೆ ಯಾವ ಲೆಕ್ಕ? "ನನ್ನ ಕರ್ಮ"ಂತ ಬೊ಼ಯ್‌ಕಂಡ್ ಹೆಂಗೋ ನಾಲ್ಕ್ ತಲೆಗ ಚಂಡಿ ಆಗದ ಹಾಂಗೆ

ಲುಂಬ ಗಾಳಿಗೆ ಸರ್‍ಯಾಗಿ ಹಿಡ್ಕಂಡ್, ತಲೆಗೆ ತಾಂಗಿಸಿಕಂಡ್ ಬಂಜಲಿ ಹೋದೊ. ಮಾಚು ಣ್ಣ ಕೂಸ್‌ನ ಅದರ ಸ್ವೆಟ್ಟರ್‌ನ ಒಳಗೆ ಹುಕ್ಕಿಸಿಕಂಡತ್. ಎಲ್ಲೊಲ್‌ವೂ ಮಳೆಲಿ ಮೀದ ಹಾಂಗೆ ಚಂಡಿ ಆಗಿದ್ದೊ. ಗಾಳಿ ಮಳೆ ಹೆಚ್ಚಿಕಂಡ್ ಹೋದಲ್ಲಾದೆ ಕಡಮೆ ಆವ ಲಕ್ಷಣ ಕಾಂಬೊದ್ಲೆ. ಅಂತ್ ಇಂತ್ ನೊಡ್ಗಿಕಂಡ್ ನೊಡ್ಗಿಕಂಡ್ ಒಂದ್ ಮನೆ ಎದ್ರ್ ಬಂದೊ. ಅದಿಕ್ಕೆ ಬೀಗ ಹಾಕಿತ್ಲಾಗಿತ್ತ್. ಬರಿ ಸಂಕಲೆ ಕೋಸಿದ್ದೊ ಅಷ್ಟೇ. ಡ್ರೈವರ್ ಅದರ ತೆಗ್ತ್, ಪಡಿಗೆ ತಾಂಗಿಕನ ಕೇಳ್ದ ಅದರ ಸದ್ದ್ ಕಣಕಣಂತ ಮನೆನ ಜುವ್ವನ ಆಡ್ಸಿದಂಗೆ ಆತ್. ತೆಗ್ದ ಬಾಗ್ಲ್‌ನ ನೂಕಿ ಡ್ರೈವರ್ ಸಾಮಾನ್ ಗೋಣಿನ ಒಳಗೆ ಇಸಿ, ಮೆಟ್ಲ್‌ಲಿ ನಿತ್ತ್, ಹಾಕಿದ್ದ ಮಳೆ ಅಂಗಿನ ಕೊಡ್ಕಿ "ಬನ್ನೆ"ಂತ ಹೇಳಿ ಹೋತ್.

ಹೊರೆಗಿಂದ ನೋಡಿಕನನೇ ಒಂದ್ ಕಾಲಲಿ ಈ ಮನೆ ಜನಗಳಿಂದ ತುಂಬಿದ ಮನೆ ಆಗಿತ್ತ್‌ಂತ ಕಾಂಬೊತಿತ್. ಅತ್ತಿತ್ತ ಮನೆಗ ಒಳೊನೋಂತ ನೋಡೋಕಂದರೆ ಇಡೀ ಊರೇ ಮೈಂದ್‌ನ ಸಮುದ್ರಲಿ ಮುಳ್‌ಗಿದ ಹಾಂಗಿತ್ತ್. ಸುರುಗೆ ಬಾಗ್ಲ್ ಹಾಕ್ಕಂಡೊ. ಹೊರಗಿಂದ ಗಾಳಿಗೆ ಎಂತದೋ ಬಡಬಡಂತ ಕೇಳ್ತಿತ್ತ್. ಮನೆ ಎಷ್ಟ್ ಮನಾರ ಇತ್ತ್‌ಂತೇಳ್ರೆ ಒಂದೇ ಒಂದು ಕಸ, ದೂಳು, ಬಲೆ ಮನೆಲಿ ಇಲ್ಲಾಗಿತ್ತ್. ಇವು ಬಾಕೆ ಮುಂದೆ ಅದೇ ಬೊಳ್ಪಿಗೆ ಯಾರೋ ಮನೆ ಬುಟ್ಟು ಹೋಗ್ಯೊಳೊನೋ ಏನೋಂತ ಹೇಳ್ವ ಹಾಂಗಿತ್ತ್. ಒಳಗೆ ಹೋಗಿ ನೋಡ್ರೆ, ಒಂದ್ ಮನೆಗೆ ಏನ್ ಬೇಕೋ ಆ ಸಾಮಾನ್‌ಗ ಎಲ್ಲ ಆ ಮನೆಲಿ ಒತ್ತರಾಗಿ ಇದ್ದೊ. ಮೊಂದ್ರಿ, ಗೋಣಿ, ಮಡ್ಕೆ, ಅಳಗೆ, ಸೆಡೆಗ, ನೀರ್ ತುಂಬ್ಸುವ ಪಾತ್ರೆ, ನೀರ್ ಕಾಸುವ ಪಾತ್ರೆ, ಸೊಯ್ದೆ- ಹೀಂಗೆ ಪ್ರತಿಯೊಂದ್ ಅಲ್ಲಿತ್ತ್. ಮಾಚು ಒಳಗೆ ಹೋಗಿ, ಮಾಯ್ಪು ಹುಡ್ಕಿ. ನೊಡುಲಿದ್ದ ಕೋಣೆನ ಗುಡ್ಸಿ, ಅಲ್ಲೇ ಮೊಡ್ಚಿ ಇಸಿದ ಗೋಣಿಗಳ ಕೊಡ್ಕಿ, ಅದರ ಮೇಲೆ ಬೆಚ್ಚಂಗಿನ ಬಟ್ಟೆ ಹಾಸಿ, ಎರ್ಡ್ ಮಕ್ಕಳ ಅಲ್ಲಿ ಕುದ್ರಿಸಿ, ಅವರ ತಲೆಮ್ಮೆ ಅಲ್ಲೇ ಯಾರೋ ಒಣ್‌ಗಿಕೆ ಹಾಕಿದ ಒಣ್ಗಿದ ಅರ್ವೆಲಿ ಲಾಯ್ಕ ಒರ್ಸಿತ್. ಮಕ್ಕಳಿಗೆ ತಂದ ಬಿಸ್ಕೇಟ್ ಕಟ್ಟ್‌ಂದ ಎರ್ಡರ್ಡ್ ಬಿಸ್ಕೇಟ್ ತೆಗ್ದ್ ತಿಂಬಕೆ ಕೊಟ್ಟ್, ದೊಡ್ಡವನ ಹಕ್ಕಲೆ ಸಣ್ಣವನ ನೋಡಿಕಾಂತ ಹೇಳಿ, ಎಲ್ಲಾ ಕೋಣೆಗಳ ನೋಡಿಕೆ ಹೋತ್. ದೊಡ್ಡ ದೊಡ್ಡ ಮಲ್ಗುವ ಕೋಣೆಗಳ ನೋಡಿ ಮಾಚುಗೆ, ಹಿಂದೆನ ಜನ್ಮಲಿ ನಾ ಇಲ್ಲಿ ಇದ್ದೆನೋ ಏನೋಂತ ಹೇಳ್ವ ಸಂಸಯ ಮತ್ತೆ ಸಂತೋಷ ಒಟ್ಟಿಗೆ ಆತ್.   ಅಲ್ಲಿಂದ ಉಂಬೊಳಗೆ ಹೋಗಿ ಕಿಚ್ಚ್ ಮಾಡಿಕೆಂತ ಬೂದಿ ತೆಗ್ದ್, ಕಿಚ್ಚಿನ ಪೆಟಗೆ ಮನಿ ಉಟ್ಟಾಂತ ನೋಡಿಕನ ಅಲ್ಲೇ, ಒಂದ್ ಸಣ್ಣ ಅರ್ವೆಲಿ ಸುತ್ತಿ ಇಸಿದ್ದ್ ಕಂಡತ್. ಬಾರಿ ಕುಸಿಲಿ ಕಡ್ಡಿ ಗೀರ್ತ್. ಹೊಸ ಕಿಚ್ಚಿನ ಪೆಟಗೆ ಹಾಂಗೆ ಹೊತ್ತಿತ್. ಅಲ್ಲೇ ಇದ್ದ, ಅರ್ದ ಉರ್ದ ಸೌಯ್ದೆ ಕೊಳ್ಳಿಗಳ ಇಸಿ, ಚೇಂಕ್ರ್‌ಗಳಿಗೆ ಕಿಚ್ಚ್ ಹತ್ತಿಸಿ ಒಲೆ ಹೊತ್ತಿಸಿತ್. ನೀರ್ ಕಾಸಿಕೆ ನಾಲ್ಕೈದ್ ಸೇರ್ ಅಕ್ಕಿ ಬೇಯವ ಮಡ್ಕೆ ಒಲೆಲಿ ಇಸಿನೆಂತ, ನೀರಿಗೆ ಬಾಮಿ ಏನಾರ್ ಉಟ್ಟಾಂತ ನೋಡಿಕೆ ಅಡಿಗೆ ಕೋಣೆನ ಬಾಗ್ಲ್ ತೆಗ್‌ಯೋಕಾ ಬೇಡನಾಂತ ಒಂದ್ ಗಳಿಗೆ ತಡ್ದ್, ಮತ್ತೆ ಅಲ್ಲೇ ಇದ್ದ ಕಿಟ್ಕೆ ತೆಗ್ದ್ ನೋಡ್ತ್. ಮಳೆ ನೀರ್ ಒಂದ್ ಬರೋಣಿಗೆ ತುಂಬಿ ಉಕ್ಕಿ ಹರೀತಾ ಉಟ್ಟು, ಸಣ್ಣ ಜಲಪಾತದ ಹಾಂಗೆ ಬೀಳ್ವ ನೀರ್ ನೋಡಿ "ಓ... "ಂತ ಹೇಳ್ತ್. ಆ ಮೇಲೆ ಬಾಗ್ಲ್ ತೆಗ್ತ್. "ಗೂ...."ಂತ ಒಮ್ಮೆಗೇ ಗಾಳಿ ನುಗ್ಗಿತ್. ಮಾಚು ಬೇಗ ಕಂದಲ್ ಹುಡ್ಕಿ, ಮಳೆನೀರ್ಲಿ ಅದರ ತೊಳ್ದು. ಬರೋಣಿಗೆ ಕಂದಲ್ ಮುಳ್ಗಿಸಿ, ನೀರ್

ಕಾಸುವ ಮಡಿಕೆಗೆ ನೀರ್ ಹೊಯ್ದ್ ಒಲೆಲಿ ಇಸಿತ್. ಮತ್ತೆ ಸಾ ಎರ್ಡ್ ಕಂದಲ್ ನೀರ್ ಆ ಮಡ್ಕೆಗೆ ಹೊಯ್ದ್, ಮತ್ತೊಂದ್ ಕಂದಲ್ ನೀರ್ ತಂದ್ ಇಸಿ ಬಾಗ್ಲ್ ಹಾಕಿಕಂಡತ್

ಮಾಚುಗೆ ನಾ ಇಂತ ಮನೆಲಿ ಇರ್ದು ಎಚ್ಚರಲಾ ಅಲ್ಲ ಕನ್ಸಲಾಂತ ಆತಿತ್ತ್. ಅಷ್ಟ್ ಪೊರ್ಲುನ ಮನೆ. ಇಂತ ಮನೆಗಳಲ್ಲಿ ಅದ್ ಕೆಲ್ಸದ ಆಳಾಗಿ ದುಡ್ದಿತ್ತ್ ಅಲ್ಲದೆ ವಾಸ ಮಾಡ್ತ್‌ಲಾಗಿತ್ತ್. ಒಲೆಲಿ ಕಿಚ್ಚ್ ಹತ್ತಿದ್ ನೋಡಿ, ಎಲುಂಬನೂ ಮಕ್ಕಳ ಕರ್ಕಂಡ್ ಚಳಿ ಕಾಸಿಕೆ ಒಲೆ ಬುಡಕೆ ಬಾತ್. "ನಾವುಗೆ ಇಂತ ಮನೆಲಿ ಇರ್‌ವಂತ ಯೋಗ ಇದ್ದಿರೋಕು"ಂತ ಅದ್ ಹೇಳ್ದಕ್ಕೆ ಅಂವ "ಹೂಂ"ಂತ ಹೇಳ್ತಷ್ಟೇ. ಅದ್ ಮತ್ತೆ ಹೆಚ್ಚ್ ಮಾತಾಡದೇ ಇನ್ನೊಂದ್ ಒಲೆಗೂ ಕಿಚ್ಚಿ ಮಾಡಿ ಗಂಜಿಗೆ ಇಸಿತ್. ದೊಡ್ಡ ಮಡ್ಕೆನ ನೀರ್ ಬೆಚ್ಚ ಆಕನ ಎರ್ಡ್ ಮಕ್ಕಳ ತಲೆ ಮೈ ಮೀಸಿ, ಒಲೆಂದ ಗೆಂಡ ತೆಗ್ದ್ ಒಂದ್ ಓಡುಲಿ ಹಾಕಿ, ತೆಳು ಬಟ್ಟೆನ ಕೆಂಡಕ್ಕೆ ಹಿಡ್ದ್, ಅದರ ಮಕ್ಕಳ ತಲೆ ಮೇಲೆ ಇಸಿ ಬಿಸಿ ಮಾಡ್ತ್. ಆ ಮೇಲೆ ಇಡೀ ಮೈಗೆ ಹಾಂಗೇ ಶಾಕ ಕೊಟ್ಟತ್. ಶಾಕ ಕೊಟ್ಟ್‌ಕಂಡ್ ಇರಿಕನನೇ ಸಣ್ಣ ಕೂಸು ಎರ್ಡ್ ಮೂರ್ ಸಲ ಸೀನಿತ್. "ಮಳೆಗೆ ಚಂಡಿ ಆಗಿ ಕೂಸಿಗೆ ಜರ ಬಂದದೆನೋ ಏನೋ. ಮೊದ್ದ್ ಕೊಡೊಕು"ಂತ ಹೇಳಿಕಂಡತ್. ಗಂಡನ ಮೀಯಕೆ ಹೇಳ್ತ್. ಅಷ್ಟೊತ್ತಿಗೆ ಗಂಜಿ ಬೇತ್. ಬಿಸಿ ಗಂಜಿಗೆ ಎರ್ಡ್ ಕಲ್ಲ್ ಉಪ್ಪು ಹಾಕಿ ಊಟ ಮಾಡ್ಸಿ, ನೆಡು ಕೋಣೆ ಮೂಲೆಲಿ ಗೆಂಡ ಇದ್ದ ಓಡು ಇಸಿ, ಇನ್ನ್ ಆಡಿಕಣಿಂತ ಮಕ್ಕಳ ಅಲ್ಲಿ ಬುಟ್ಟತ್. ಎಲುಂಬ ಮೀದ್ ಬಾಕನ ಅವಂಗೆ ಗಂಜಿ ಇಕ್ಕಿ, ಮನೆಂದ ತಂದ ಒಣ್ಗೆಲ್ ಮೀನ್ ಹಾಕಿದ ಗಟ್ಟಿ ಪೊಜ್ಜಿ ಕೊಟ್ಟತ್. ಆ ಮೇಲೆ ಅದ್ ಮೀದ್ ಬಾತ್. ಬೊಳ್ಪಿಂದ ಸುರು ಆದ ಮಳೆ ನಿಲ್ಲುವ ಅಂದಾಜೇ ಇಲ್ಲೆ. ಕತ್ತಲಾಕಂಡ್ ಬಾಕನ ಇದ್ದ ಚಿಮ್ಣಿ ದೀಪಗಳ ಹುಡ್ಕಿ ಹೊತ್ತಿಸಿತ್. ಮನೆನ ಎಡಗಡೆಲಿದ್ದ ದೇವರ ಕೋಣೆಗೆ ಹೋಗಿ ಕೈ ಮುಗ್ದ್, ಹಣೆಗೆ ಪ್ರಸಾದ ಹಚ್ಚಿ, ದೀಪಲಿದ್ದ ಹಳೆ ಬತ್ತಿ ತೆಗ್ದ್, ಹೊಸ ಬತ್ತಿ ಇಸಿ, ಎಣ್ಣೆ ಹೊಯ್ದ್ ದೀಪ ಬೆಳ್ಗಿತ್. "ದೇವರೇ, ಕಣ್ಣ್ ಕಾಣದ ಊರಿಗೆ ಬಂದೊಳೊ. ನಮ್ಮ ಕಾಪಾಡುದು ನಿಂಗೆ ಬುಟ್ಟದ್ದ್"ಂತ ಹೇಳಿ ಅಡ್ಡ ಬೀತ್.

ಆ ಮೇಲೆ ಉಂಡು ಮಲ್ಗಿದೊ. ಮಲ್ಗಿದ ಮೇಲೆ ಮಾಚುಗೆ ಏನೇನೋ ಯೋಚನೆ ಬಾಕೆ ಸುರು ಆತ್.

"ಯಾವ ಬೂತ ಬಂಗ್ಲೆನೊ ಇದ್, ಈ ಮನೆಲಿ ಏನೆಲ್ಲ ಆಗುಟೋ. ನಾವುಗೆ ಇನ್ನ್ ಈ ಮನೆಲಿ ಏನೇನ್ ಬಂಜ ಬಾಕೆ ಉಟ್ಟೋ"ಂತ ನೆನ್ಸಿ, ಅದಕ್ಕೆ ಬೊಳ್ಪುನ ಕೋಳಿ ಕೂಂಗಿಕನ ಮುಟ್ಟ ನಿದ್ದೆನೇ ಬಾತ್‌ಲ್ಲೆ. ಮತ್ತೆ ದೊಡ್ಡವಂಗೆ ವಲ್ಲಿ ಹೋಸಿ, ಸಣ್ಣ ಕೂಸುನ ಹಿಡ್ಕಂಡ್ ಮಲ್ಗಿತ್. ಬೊಳ್ಪು ಆಕನ ಸಾ ಮಳೆ ಬುಟ್ಟತ್ಲಾಗಿತ್ತ್. ಆದರೆ ನಿನ್ನೆನ ಗಾಳಿ ಕಮ್ಮಿ ಆಗಿತ್ತ್.

ಬೊಳ್ಪುಗೆ ಸುಮಾರ್ ಹತ್ತ್ ಗಂಟೆಗೆ ದೂರಂದ ಬೈಕ್‌ನ ಗುಡುಗುಡುಂತ ಕೇಳ್ತಿದ್ದ ಸದ್ದ್ ನಿದಾನಕ್ಕೆ ಹಕ್ಕಲೆ ಹಕ್ಕಲೆ ಬಂದ್ ಮನೆ ಅಂಗಳಲಿ ನಿತ್ತತ್. ಇವ್ಕೆ ಬಾಗ್‌ಲ್ ತೆಗಿಯಕೆ ಸಾ ಹೆದ್ರಿಕೆ. ಮಾಚು ಮೆಲ್ಲ ಕಿಟ್ಕೆಂದ ನೋಡ್ತ್. ಬಿಳಿ ಕೆಂಪು ಬಣ್ಣ ಸಮ ಸಮಲಿ ಇದ್ದ, ಉದ್ದಕ್ಕೆ ಸರ್‍ಯಾಗಿ ದಪ್ಪ ಇದ್ದ, ದೊಡ್ಡ ಮೀಸೆನ ಬರ್ತಿ ಆಳೊಬ್ಬ ಬೈಕ್ ನಿಲ್ಸಿತ್. ಅವನ ಹಿಂದೆ ಸಣ್ಣ ಜೂವದ ಇನ್ನೊಬ್ಬ ಇಳ್ತ್. ಮಾಚುಗೆ ನಿಜ್ವಾಗಿ ಹೆದ್ರಿಕೆ ಆತ್. ಎಲುಂಬ ಒಬ್ಬ ಒಳಗಿಂದ ಹೊರಗೇ ಬಾತ್ಲೆ. ಯಾರೋ ಏನೋ, ಆದರೂ ಅಂಗಳಕ್ಕೆ ಬಂದೊಳಲ್ಲಾಂತ

ಾಚು, ಗಟ್ಟಿ ಮನ್ಸ್ ಮಾಡಿ ಬಾಗ್ಲ್ ತೆಗ್ದ್ "ನಮಸ್ಕಾರ, ನಾವು ನಿನ್ನೆ ಬಂದವು"ಂತ ಹೇಳ್ತ್. ಕ್ಕಲೆಂದ ಅಂವನ ನೋಡಿಕನ ಮಾಚುಗೆ ಹುಲಿನ ನೋಡ್ದ ಹಾಂಗೆ ಆತ್.

ಅವಿಬ್ಬರ್ ಮೆಟ್ಳ್ ಹಕ್ಕಲೆ ಇಜ್ಜೆಲ್‌ಲಿ ನಿತ್ತೊ. ಆ ದೊಡ್ಡ ಜುವ್ವದಂವ ಮಾತಾಡ್ತ್. ೂತ್ತಾತ್, ಆ ಗದ್ದೆ ನಂದೇ. ನಾಳೆ ನಾಟಿಮಾಡಿಕೆ ಐದಾರ್ ಜನ ಬಾವೊ. ಅವ್ಕೆ ಅಡಿಗೆ ಾಡಿ ಇಕ್ಕಕಾ?" ಅವನ ಸೊರ ಸೆಡ್ಲ್ ತರ ಕೇಳ್ತ್.

ಅದಕ್ಕಾವ ಸಾಮಾನ್ ಕೊಟ್ಟರೆ ಅಡಿಗೆ ಮಾಡಕ್ಕ್"

ಸಾಮಾನ್ ಪೂರ ನಾಳೆ ಕಳ್ಸಿನೆ. ಗ್ಲಾಸ್,ಬಟ್ಲ್ ಎಲ್ಲ ಅಡಿಗೆ ಕೋಣೆಲಿ ಪೆಟಗೆಲಿ ಉಟ್ಟು, ಹಾಯಕ್ಕೆ ಒಬ್ಬ ಹೈದನ ಕಳ್ಸಿನೆ. ಅಂವನೇ ಅಡಿಗೆ ಸಾಮಾನೆಲ್ಲಾ ತೆಕ್ಕಂಡ್ ಬಂದದೆ"ಂತ ೇಳಿ, ಆ ಗುಡು ಗುಡು ಹತ್ತಿ ಹೋದೊ. ಬಾಗ್ಲ್ ಹಾಕಿದ ಮಾಚು ಎಲುಂಬನ ಹಕ್ಕಲೆ "ಆ ದ್ದೆ ನಂದ್‌ಂತ ಹೇಳಿದವನ ಮೋರೆ ನೋಡಿಕನ ನಂಗೆ ಹುಲಿನ ನೋಡ್ದ ಹಾಂಗೆ ಆತ್. ಕೆಂಪು ಮೋರೆ ಇಲ್ಲಿದ್ದ ದೊರೆಗಳ ಹಾಂಗೆ ಉಟ್ಟು"ಂತ ಹೇಳ್ತ್, ಯಾಗಳೋ ಒಮ್ಮೆ ಮಾಟಂಡಲಿ ನೋಡ್ದ ನೆಂಪುಲಿ.

ಮೊರ್ದಿನ, ಆ ಹೈದ ಬಾಕನ ಕೆಲ್ಸದೊವ್ಕೆ ತಿಂಡಿ ಹಿಡ್ಕಂಡ್ ಬಂದಿತ್ತ್. ಅಡಿಗೆ ಸಾಮಾನ್ ಪೂರ ಇತ್ತ್. ಹೈದ ಒಳ್ಳೆ ಉಸಾರ್ನವ, ಮೀನ್ ತಂದಿತ್ತ್. ಇಲ್ಲಿನ ಕೆಲ್ಸದೊವ್ಕೆ ಮೀನ್, ಕೋಳಿ ಇಲ್ಲಾದೆ ಊಟ ಮೆಚ್ಚುದಿಲ್ಲೆಂತ ಹೇಳಿಕಂಡ್ ಅದರ ಸರಿಮಾಡ್ತ್. ಕಾಯಿ ಹೆರ್ದ್ ಕೊಟ್ಟತ್. ಗೈಪುಗೆ ಜೋಡ್ಸಿ ಕೊಟ್ಟದರ ಕಲ್ಲಿಗೆ ಹಾಕಿ ಕಡ್ದ್ ಕೊಟ್ಟತ್. ಪೆಟಗೆಂದ ಗ್ಲಾಸ್, ಬಟ್ಳ್ ಎಲ್ಲಾ ತೆಗ್ದ್ ತೊಳ್ದ್ ಇಸಿತ್. ಗೈಪುನ ರುಚಿ ನೋಡಿ "ನಾಟಿ ಮಾಡುವೊವ್ಕೆ ಸಾರ್ ಹಣ್ಣಾ ಕಾರ ಬೇಕ್"ಂತ ಹೇಳಿ, ಅಂವನೇ ಅಂದಾಜ್ ಮಾಡಿ ಮೆಣ್ಸ್ ಹೊಡಿ ಹಾಕಿ ಸೆಡೆಲಿ ತಿರ್ಗಿಸಿತ್. ಉಮೇದಿಂದ ಮಾತಾಡಿಕಂಡ್, ನೆಗಾಡಿಕಂಡೇ ಕೆಲ್ಸ ಮಾಡಿಕಂಡ್, ಇದ್ದ ಆ ಹೈದನ ಮಾಚುಗೆ ಬಾರಿ ಕುಸಿ ಆತ್. ಇಕ್ಕಿಕಾಕನ ಇದ್ ತೋಂಡಿ ಕೊಟ್ಟದರ ಅಂವನೇ ಎಲ್ಲೊವ್ಕೆ ಇಕ್ಕಿತ್. ನಾವು ಇಲ್ಲಿಗೆ ಒಳ್ಳೇ ದಿನನೇ ಬಂದೊಳೊಂತ ಮಾಚು ಮನ್ಸ್‌ಲಿ ನೆನ್ಸಿತ್. ನಾಟಿ ಲೆಕ್ಕಲಿ ಇವ್ಕೆ ನಾಲ್ಕ್ ದಿನ ಗಮ್ಮತ್ತ್‌ದೇ ಊಟ ಆತ್.

ನಾಟಿ ಮುಗೆವ ಮುಟ್ಟ ಮನೆ ಒಳಗೇ ಇದ್ದ ಇವು, ಅದ್ ಮುಗ್ದಂದ್ ಹಿಂಬೊತು ಹೊರಗೆ ಬಂದ್ ನೋಡ್ದೊ. ಇವರ ಮನೆಂದ ಹಂಞ ದೂರಲಿ ಗದ್ದೆಗ. ಗದ್ದೆನ ಈ ಪುಡೆಲಿ ಅಡಿಗೆಗೆ ಬಂದ ಹೈದನ ಮನೆ. ಗದ್ದೆನ ಆ ಪುಡೆಲಿ ದನಿನ ಅಣ್ಣನ ಮನೆ. ಅದಲ್ಲದೆ ಅವರ ಕುಟುಂಬದ್ದೇ ಇನ್ನೂ ನಾಕೈದ್ ಮನೆಗ ಇದ್ದೊ. ನಿದಾನಕ್ಕೆ ಇವು ಅವರೆಲ್ಲರ ಗುರ್ತ ಮಾಡಿಕೊಂಡೊ. ದನಿನ ಲೆಕ್ಕಲಿ ಇವ್ಕೆ ಆ ಮುನ್ನೂರು ರುಪಾಯಿ ಅಲ್ಲದೆ ಬೇರೆ ದುಡ್ಡು ಬಾತ್ತೆ. ಅದರ ಕರ್ಚ್ ಮಾಡಿಕಾಗದ್‌ಂತ ಇವು ಆ ನೆರೆಕರೆ ಮನೆಗಳಿಗೆ ಕೆಲ್ಸಕ್ಕೆ ಹೋತಿದ್ದೊ.

ಎಲುಂಬ ಗದ್ದೆಗೆ ಹಸ್ ಕರ್‌ಗ ನುಗ್ಗಿ ಬೆಳೆ ಹಾಳ್ ಮಾಡದ ಹಾಂಗೆ ಕಾಡ್‌ಂದ ಕಾಡ್ ಮರಗಳ ಕಡ್ದ್ ಗೂಟ ಮಾಡಿ ಗದ್ದೆಗೆ ಬೇಲಿ, ಗದ್ದೆಗೆ ಹೋವಲ್ಲಿ ಉದ್ಗಿಲ್ ಮಾಡ್ತ್. ಗದ್ದೆಲಿ ಬಾವ ಕಳೆ ತೆಗಿಯೊದು, ಅಗತ್ಯಕ್ಕೆ ಸರ್ಯಾಗಿ ನೀರ್ ಕಟ್ಟುದು, ಬುಡುದು ಮಾಡ್ಕಂಡ್ ಇತ್ತ್. ಮಾಚು ಪುರ್ಸೊತ್ ಇರ್ಕನ ಕಣಲೆ ಕಡ್ಕಂಡ್ ಬಂದ್ ಸಣ್ಣ ಕೊಯಿದ್, ಬೇಕಾದೊವ್ಕೆ ಕೊಡ್ತಿತ್ತ್. ಅವು ದುಡ್ಡೋ, ಅಕ್ಕಿನೋ ಕೊಡ್ತಿದ್ದೊ. ನೆರೆಕರೆವು ಇವರ ಕೆಲ್ಸಕ್ಕೆ ಕರಿಯತಿದ್ದೊ.

ಒಮ್ಮೊಮ್ಮೆ ಇವು ಹಾಂಗೆ ಬೇರೆ ಕಡೆ ಕೆಲ್ಸ ಮಾಡಿಕಂಡ್ ಇರ್ಕನನೇ ದನಿ ಅವನ ಗುಡುಗುಡು ಬೈಕ್‌ಲಿ ಬಾತಿತ್ತ್. ಆ ಸದ್ದ್ ಕೇಳ್ರೆ ಸಾಕ್, ಇವು ಹಿಡ್ದ ಕೆಲ್ಸಗಳ ಅಲ್ಲಲ್ಲೇ ಬುಟ್ಟು, ಓಡಿಕಂಡ್ ಮನೆಗೆ ಬಾತಿದ್ದೊ. ಇಲ್ಲಿನ ಯಾದಾರ್ ಕೆಲ್ಸ ಮಾಡ್ತಿದ್ದ ಹಾಂಗೆ ಮಾಡ್ತಿದ್ದೊ. ದಿನ ಹೋದ ಹಾಂಗೆ ಆ ದನಿನ ಒಂದೊಂದೇ ಕತೆಗ ಇವ್ಕೆ ಗೊತ್ತಾಕೆ ಸುರು ಆತ್. ಆ ಸುತ್ತುಲಿ ಬೇಕಾದಷ್ಟ್ ಬೆದ್ರ್ ಹಿಂಡ್ಲ್‌ಗ ಇದ್ದೊಲೇ. ಆದರೆ ಹೆಚ್ಚಿನ ಹಿಂಡ್ಲ್‌ಗಳ ಕಡ್ದಿದ್ದೊ. ಮಾಚು ಮತ್ತ್ ಎಲುಂಬ ಅದನ್ನೇ ಮಾತಾಡ್ತಿದ್ದೊ. ಇಷ್ಟ್ ಬೆದ್ರ್ ಹಿಂಡ್ಲ್‌ಗಳ ಯಾರ್ ಯಾಕೆ ಕಡ್ದ್ ಹಾಕಿದೊಂತ. ಒಬ್ಬೊಬ್ಬನ ಹಕ್ಕಲೆ ಮಾತಾಡಿಕನ ಗೊತ್ತಾತ್ ಇವರ ದನಿ ಭಯಂಕರ ಕೋಪಿಷ್ಠ. ಹಾಂಗೆ ಕೋಪಂದ ಅವನ ಕೆಲಸದವರ ಅಂವ ಕೊಂದ್ ಹಾಕಿ, ಬೇರೆಯೊಗ್ವ್ಕೆ ಗೊತ್ತಾಕೆ ಮುಂದೆನೇ ಬೆದ್ರ್ ಹಿಂಡ್ಲ್‌ಗೆ ಹೆಣ ಬಿಸಾಡಿ ಕಿಚ್ಚ್ ಕೊಟ್ಟ್ ಬುಡ್ತಿತ್ತ್ ಅಂತ. ಅದ್ ಗೊತ್ತಾದ ಮೇಲೆ ಇವ್ಕೆ ಬಾರೀ ಹೆದ್ರಿಕೆ. ಅಂವ ದುಡ್ಡು ಕೊಡದ್ದರೂ ಕೇಳದೆ ಬೇರೆವರ ಮನೆಲಿ ಕೆಲ್ಸ ಮಾಡಿ ದಿನ ತೆಗಿಯತಿದ್ದೊ.

ಇವು ಇದ್ದ ವೊರ್ಸ ಅಲ್ಲಿ ಬಾರೀ ಒಳ್ಳೆ ಬೆಳೆ ಬಂದಿತ್ತ್. ಮೊಣಕೈಯಷ್ಟ್ ಉದ್ದದ ತೆನೆ ನೋಡಿ ಎಲ್ಲೊವು ಕಣ್ಣ್ ಮುಟ್ಟಿಸ್ತಿದ್ದೊ. ಬತ್ತ ಕೊಯ್ಲಿಗೆ ಮುಂದೆ ಇಜ್ಜೆಲ್ ಸರಿ ಆಕಲೇಂತ ಎಲುಂಬ ಒಬ್ಬನೇ ಅದರ ಸರಿ ಮಾಡ್ತಿತ್ತ್. ಒಂದ್ ದಿನ ಮಾಚು ದನಿನ ಅಣ್ಣನ ಮನೆಗೆ ಕೊಯ್ಲಿಗೆ ಹೋಗಿತ್ತ್. ಕೊಯ್ಕಂಡ್ ಇರ್ಕನ ದನಿನ ಬೈಕ್ ಸದ್ದ್ ಕೇಳ್ಸಿ, ಮಾಚು ಓಡೋಡಿಕಂಡ್ ಮನೆಗೆ ಬಾತ್. ಅದಿಕೆ, ದನಿ ಎಲುಂಬಂಗೆ ಏನ್ ಮಾಡಿ ಬುಟ್ಟದೆನೋಂತ ಹೆದ್ರಿಕೆ! ಅದ್ ಎತ್ತಿಕಾಕನ ಅಂವ ಬಂದ್ ಎಲುಂಬನ ಅಂಗಿನ ಕೆಬಿ ಹಿಡ್ದ್ "ಕೊಯ್ಯಕೆ ಆತ್. ಜಾಲ್ ಹಾಂಗೆ ಉಟ್ಟು. ಜಾಲ್‌ನ ಯಾಗ ಸೆರಿ ಮಾಡುದು?"ಂತ ಕೇಳ್ತಿತ್ತ್. ಎಲುಂಬ ಪಾಪ! ಹೆದ್ರಿ ಒಂದೊಂದೇ ಹೆಜ್ಜೆ ಹಿಂದೆ ಹಿಂದೆ ಇಸಿ ಕಂಡ್ ಬಾತಾ ಉಟ್ಟು. ಅದರ ನೋಡಿ ಮಾಚುಗೆ ಕೋಪ ಬಂದ್ ಬೊತ್ತ್. ಕೈಲಿದ್ದ ಕೊಯ್ಲು ಕತ್ತಿನ ಎತ್ತಿ ಹಿಡ್ದ್ "ಜಾಗ್ರತೆ! ಕಾಲರಿಂದ ಕೈ ತೆಗ್ಯೆನಿ"ಂತ ದರ್ಪಲಿ ಹೇಳ್ತ್. ಅದರ ಸೊರ ಕೇಳಿ, ಮತ್ತೆ ಅದರ ಕೈಲಿದ್ದ ಕತ್ತಿ ನೋಡಿ ಅಂವ ಪಟ್ಟಂತ ಕೈ ತೆಗ್ತ್. ಮಾಚು "ಇಷ್ಟ್ ದೊಡ್ಡ ಜಾಲ್‌ನ ಒಬ್ಬನೇ ಸೆರಿ ಮಾಡಿಕೆ ಆದೆನಾ? ಜೆನ ಕಳ್ಸಿ. ಸೆರಿ ಮಾಡ್ವೆ"ಂತ ಹೇಳ್ತ್. ಅಂವ ಗೊಣಗೊಣಂತ ಗೊಣ್ಕಿಕಂಡ್ ಅಲ್ಲಿಂದ ಹೋತ್. ಇವ್ಕೆ ಆದಷ್ಟ್ ಬೇಗ ಇಲ್ಲಿಂದ ಹೋದರೆ ನಾವು ಬಚಾವ್, ಇಲ್ಲರೆ ಇಂವ ಹೊಡ್ದ್ ಕೊಂದರೆಂತ ಹೆದ್ರಿಕೆ ಹಿಡ್ತ್.

ಅದರ ಮೊರ್ದಿನ ಕೆಲ್ಸಕ್ಕೆ ಹೋದಲ್ಲಿ ಹಿಂಗಿಂಗೆ ಆತ್‌ಂತ ಹೇಳಿಕನ, ಸುರುನ ದಿನ ಅಡಿಗೆಗೆ ಸಾಯ ಮಾಡಿಕೆ ಬಂದ ಹೈದನ ಅವ್ವ "ನಂಗೆ ನನ್ನ ಮಂಜದ್ದೇ ಹೆದ್ರಿಕೆ. ಎಲ್ಲಿ ಹೊಡ್ದ್ ಮನಿ ಕೊಂದ್ ಬುಟ್ಟವೆನೋಂತ. ಅವನ ಅಪ್ಪಂಗೆ ದೊಡ್ಡ ಕಾಯ್ಲೆ ಬಾತ್‌ಂತ ಆಸ್ಪತ್ರೆಗೆ ಕೊಡಿಕೆ ಹಣ ಇಲ್ಲದ್ದಕ್ಕೆ ಇವರ ಕೈಯಿಂದ ಸಾಲ ತೆಕಂಡಿದ್ದೊ. ಅಷ್ಟ್ ಮಾಡ್ರೂ ಅವು ತೀರಿ ಹೋದೊ. ಆ ಸಾಲ ತೀರ್ಸಿಕೆ ಬೇರೆ ಉಪಾಯ ಇಲ್ಲದ್ದಕ್ಕೆ ಮಂಜನ ಸಾಲೆ ಬುಡ್ಸಿ, ಅವರಲ್ಲಿ ಕೆಲ್ಸಕ್ಕೆ ಸೇರ್ಸಿದ್ದ್. ಅದ್ ಅಲ್ಲಂದರೆ ನಮ್ಮ ಈ ಜಾಗೆನ ಅವ್ಕೆ ಮಾರಿ ಹೋಕು. ಜಾಗೆ ಮಾರಿರೆ ನಾವು ಬೊದ್ಕ್ಯದು ಹೇಂಗೆ?"ಂತ ಕಣ್ಣೀರ್ ಹಾಕಿತ್. ಮಾಚುಗೆ ಆ ಹೈದನ ಚುರ್ಕುತನ, ನೆಗೆ ಎಲ್ಲಾ ಕಣ್ಣೆದ್ರ್ ಬಂದ ಹಾಂಗೆ ಆಗಿ "ಒಳ್ಳೇ ಹೈದ, ಪಾಪ"ಂತ ಹೇಳ್ತ್.

ಅದರ ಮೊರ್ದಿನ ಬೊಳ್ಪಾಕೆ ಮುಂದೆನೇ ಯಾರೋ ಹೇಳ್ದೊ "ಆ ಹೈದ ನೇಣ್ ಹಾಕ್ಕಂಡ್ ಸತ್ತತ್‌ಗಡ"ಂತ. ಅದ್ ಕೇಳಿ ಅವನ ಅವ್ವ ಊರಿಡೀ ಕೇಳ್ವ ಹಾಂಗೆ ಮೊರ್ಲ್ಟಕಂಡ್ ದನಿ ಮನೆಕಡೆಗೆ ಓಡಿಕಂಡ್ "ನನ್ನ ಕೂಸುನ ಕೊಂದ್ ಬುಟ್ರೋ, ಜಾಗೆ ಮಾರಿ ಆದರ್ ಹೋಗಿದ್ದರೆ ನನ್ನ ಕೂಸು ಒಳ್ಳತಿತ್ತ್"ಂತ ಕೇಳಿದವರ ಕಣ್ಣ್‌ಲಿ ನೀರ್ ಬಾವ ಹಾಂಗೆ ತಲೆ ಬೊಡ್ಡಕಂಡ್ ಬೊಬ್ಬೆ ಹೊಡ್ಕಂಡ್ ಹೋತ್. ಮಾಚುಗೆ ಅದರ ಮಂಜನೇ ತೀರಿ ಹೋದಷ್ಟ್ ದುಕ್ಕ ಬಾತ್. ಅದ್, ಅದೇ ಅಡಿಗೆ ಕೋಣೆ ಮೂಲೆಲಿ ಮೊರ್ಲ್ಟಕಂಡ್ ಕುದ್ದತ್. ಅಡಿಗೆ ಮಾಡಿಕೆ ಬಂದ ಮೇಲೆ ಸಾ, ಅಂವ ಮನೆಗೆ ಹೋಕನ ಒಂದ್ ಗಳಿಗೆ ಬಂದ್ ಇವರ ಮಾತಾಡ್ಸಿ ಹೋತಿದ್ದದ್ ನೆಂಪಾಗಿ, ಮೊರ್ಲ್ಟಕಂಡೇ ಎಲುಂಬನ ಹಕ್ಕಲೆ "ನಾವೂ ಬೊದ್ಕ್‌ಕುಂತೇಳ್ರೆ ಆದಷ್ಟ್ ಬೇಗ ಗಾಡಿ ಕಟ್ರೋಕೇ"ಂತ ಹೇಳ್ತ್. "ಹಾಂಗಾರೆ ನಾಳೆನೇ ಪೋಯಾ?"ಂತ ಕೇಳ್ತ್ ಎಲುಂಬ. ಯಾಗ ಆ ದನಿ ಇವನ ಅಂಗಿಗೆ ಕೈ ಹಾಕಿತೋ ಆಗಳೇ ಅವಂಗೆ ಹೆದ್ರಿಕೆ ಕುದ್ದಿತ್ತ್. "ಆತ್, ನಾಳೆನೇ, ಅದೂ ಬೊಳ್ಪಾಕೆ ಮುಂದೆನೇ"ಂತ ಹೇಳಿ ಮಾಚು ಎದ್ದ್ ಮೋರೆ ತೊಳ್ತ್.

ನೆರೆ ಮನೆಂದ ಒಬ್ಬ ಹೈದನ ಬಾಕೆ ಹೇಳಿ, ಅವು ಬಾಕನ ಆ ಮನೆಲಿ ಯಾವ ಯಾವ ಸಾಮಾನ್‌ಗ ಇದ್ದನೋ ಅದರ್ದೊಂದ್ ಪಟ್ಟಿ ಮಾಡ್ಸಿದೊ. ಎಲುಂಬ ಹೆಬ್ಬೆಟ್ಟ್ ಒತ್ತಿತ್. ಅದರ ಮಾಚು ಆ ದನಿನ ಅಣ್ಣನ ಮನೆಲಿ ಕೊಟ್ಟ್ "ನಾವು ನಾಳೆ ನಾಲ್ದ್ ಆಗಿ ಹೋದವೆ"ಂತ ಹೇಳ್ತ್. ಅವು "ಹೋಗಿ, ಬೇಡಿ ತಿಂದಾದರ್ ಬೊದ್ಕಿಕಣಿ"ಂತ ಹೇಳ್ದೊ. ಹೋಕು ಅಂದರೆ ಎಲುಂಬಂಗೆ ಹೆದ್ರಿಕೆ. ಎಲ್ಲಿಯಾರ್ ಸಿಕ್ಕಿ ಬಿದ್ದರೆ ಅಂವ ಕೊಂದೇ ಹಾಕುದಲ್ಲಾಂತ.

ದೇವರ ಮೇಲೆ ಭಾರ ಹಾಕಿ, ಮೊರ್ದಿನ ಕೋಳಿ ಕೂಂಗಿಕೆ ಮುಂದೆ, ತಿಂಗಳ ಬೊಳ್ಪು ಕಂತಿಕೆ ಮುಂದೆ, ಮಕ್ಕಳ ಮತ್ತೆ ಗಂಟ್ ಮೂಟೆ ಹಿಡ್ಕಂಡ್ ಆ ಊರ್ ಬುಟ್ರೊ. ಒಂದ್ ಕಡೆಂದ ಸಣ್ಣಕ್ಕೆ ಸುರಿವ ಮಳೆ, ಮತ್ತೊಂದ್ ಕಡೆಂದ ಮೈ ನೊಡ್ಗಿಸುವ ಕೋಟ, ಎಲ್ಲಕ್ಕಿಂತ ನಾವು ಎಲ್ಯಾರ್ ಸಿಕ್ಕಿ ಬಿದ್ದರೆಂತ ಹೇಳ್ವ ಜುವ್ವದ ಆಸೆ. ಆ ಎರ್ಡ್ ಮಕ್ಕಳ ಹಿಡ್‌ಂಡ್, ಬಿದ್ದ್‌ಕಂಡ್, ಎದ್ದ್‌ಕಂಡ್, ಓಡಿಕಂಡ್ ಬಂದೊ. ಅದೇ ದನಿ ಮನೆ ಹಕ್ಕಲೆ ಬಾಕನ ಇಬ್ಬರ ಎದೆ ಬಡಬಡಂತ ಹೊಡ್ಯಕೆ ಸುರು ಆತ್. ಬೊದ್ಕಿ ಒಳ್ದರೆ ಬೇಡಿ ತಿಂಬೊ‌ಂತ ಹೇಳ್ವ ಗಾದೆನ ನೆಂಪು ಮಾಡಿಕಂಡ್, ಆ ಮನೆ ಎದ್ರ್ ಕಳ್ಳರ ಹಾಂಗೆ ಮೆಲ್ಲ, ಸದ್ದ್ ಆಗದ ಹಾಂಗೆ ಬೆನ್ನ್ ಬೊಗ್ಗಿಸ್ಕಂಡ್, ನಡ್ಕಂಡ್ ಹೋದೊ. ಪುಣ್ಯಕ್ಕೆ ಯಾವ ನಾಯಿಗ ಸಾ ಬೊಗಳ್ತ್‌ಲೆ. ಅವರ ಮನೆ ದಾಟಿದ ಕೂಡಲೇ "ಬೊದ್ಕಿತಾ ಬಡ ಜುವ್ವ"ಂತ ಓಡುವ ನಡಿಗೆಲಿ ನಡ್ದೊ. ಸುಮಾರ್ ದೂರ ಹೋದ ಮೇಲೆ ಬೊಚ್ಚಿಕನ ಇಬ್ಬರೂ ಉಸ್ರ್ ಎಳ್ಕಂಡ್ ಹಂಞ ಹೊತ್ತ್ ನಿತ್ತ್, ಮತ್ತೆ ಹೊರ್ಟೊ. ಹಾಂಗೆ ಬಾಕನ ಎಲುಂಬಂಗೆ ಹಿಂದೆಂದ ಆ ಜೈಕ್‌ನ ಡಗ್ಗಗ್ ಸಬ್ದ ಕೇಳ್ದಾಂಗೆ, ಮಾಚುಗೆ ಆ ತೀರಿ ಹೋದ ಹೈದ "ನಾನೂ ಬನ್ನೆ, ನಾನೂ ಬನ್ನೆ"ಂತ ಹಿಂದೆಂದ ಓಡಿಕಂಡ್ ಬಂದ ಹಾಂಗೆ ಆತಿತ್ತ್. ಮಾಚು ಅಂವನ ನೆಂದ್ ಬಂದ ಕಣ್ಣೀರ್‌ನ ಒರ್ಸಿಕಂಡ್ ನಡ್ತ್. ಹೇಂಗೆ ಬಂದನೋ? ಬಸ್ ನಿಲ್ಲುವಲ್ಲಿಗೆ ಬಾಕನ ಒಳ್ಳೆ ಬೊಳ್ಪಾಗಿತ್ತ್.

ಒಂದ್ ಬಸ್‌ನಂವ "ಮಡಿಕೇರಿ, ಸುಳ್ಯ, ಪುತ್ತೂರು"ಂತ ಕರೀತಾ ಇತ್ತ್. ಇವು ಬೇಗ ಬೇಗ ಹೋಗಿ ಬಸ್‌ಲಿ ಕುದ್ದೊ. ಬಸ್ ಹೊರ್ಡಿಕಾಕನ ಮಾಚು ಬಂದ ದಾರಿ ಕಡೆ ಒಮ್ಮೆ ನೋಡ್ತ್, ಯಾರಾರ್ ನಮ್ಮ ಹುಡ್ಕಿಕಂಡ್ ಬಂದವೆನಾ?ಂತ. ಯಾರೂ ಬಾತ್ಲೆಂತ ಗಟ್ಟಿ ಆದ ಮೇಲೆ ಎದೆ ಮೆಲೆ ಕೈಯಿಟ್ಟ್, "ದೇವರೇ, ನೀ ದೊಡ್ಡಂವ. ನಮ್ಮ ಬೊದ್ಕಿಸಿದ"ಂತ ಕಣ್ಣ್ ಮುಚ್ಚಿ ಮನ್ಸ್‌ಲೇ ಹೇಳ್ತ್.

ಬೊಳ್ಪುಂದ ಕುದ್ದ್‌ಕಂಡ್, ಕಣ್ಣ್ ಮುಚ್ಚಿಕಂಡ್ ಇದ್ದ ಮಾಚುನ ಒಳ ಕಣ್ಣ್‌ನ ಎದ್ರ್, ಕಳ್ದ್ ಹೋದ ಬೊದ್ಕಿನ ಚಿತ್ರಗ, ಸಮುದ್ರದ ತೆರೆಗಳ ಹಾಂಗೆ ಬಂದ್‌ಕಂಡ್ ಹೋಕಂಡ್ ಇದ್ದೊ. ಆ ಮೇಲಾಮೇಲೆ ಬೊದ್ಕ್ ಅಂದರೆ ಇಷ್ಟೆನಾ? ಇದಿಕೆ ನಾವಿಷ್ಟ್ ನರ್ಕ ಬರೋಕಾ?ಂತ ನೆನ್ಸ್‌ತಾ ಇದ್ದ ಹಾಂಗೆ, ಯಾಕೋ ಅದರ ಮನ್ಸ್‌ಲಿ ನಿಂಗೂ ಈ ಬೊದ್ಕಿಗೂ ಏನೂ ಸಮ್ಮಂದನೇ ಇಲ್ಲೆಂತ ಹೇಳ್ದ ಹಾಂಗೆ ಆತಿತ್ತ್. ಕಣ್ಣ್‌ಗೆ ಏನೋ ಮಯಮಯ ಆದ್ಹಂಗೆ! ಬೇರೆಲ್ಲ ಮರ್ತ್ ಹೋದ ಹಾಂಗೆ!

ಇದ್ದಕ್ಕಿದ್ದ ಹಾಂಗೆ, ಅದರ ಅಪ್ಪ ಕಳಲ ಅದರ ಎದ್ರ್! ಅಂವ ಅದೇ ಪಯಸ್ವಿನಿ ಹೊಳೆಲಿ ಮೀನ್ ಕೋರ್‌ತಾ ಉಟ್ಟು. ಅಜ್ಜ ಅಜ್ಜ ಆಗುಟು. ಇದ್ ಕೇಳ್ತ್ "ಇಷ್ಟ್ ಅಜ್ಜ ಆಗೊಳ ನೀ. ಇನ್ನ್ ಸಾ ಮೀನ್ ಹಿಡ್ಯೊದರ ಬುಟ್ಟ್ಲೆನಾ?"

ಅಂವ ಗೊಗ್ಗರೆ ಹಲ್ಲ್ ತೋರ್ಸಿ ನೆಗಾಡಿಕಂಡ್ "ಬಾ"ಂತ ಹೇಳ್ವ ಹಾಂಗೆ ಕೈ ಮುಂದೆ ಮಾಡ್ತ್. ಅಂವ ನೀಂಡಿದ ಕೈ ಹಿಡ್ಕಂಬಕೆ "ನಾನೂ ಬನ್ನೆ"ಂತ ಹೇಳಿಕಂಡ್, ಇದ್ ನೀರ್‌ಗೆ ಇಳ್ತ್. ಅಂವ ಅತ್ತ ಅತ್ತ ಹೋಗ್ತಾ ಉಟ್ಟು. ಅಂವ ಹೋದ ಹಾಂಗೆ, ಇದ್ ಸಾ ಮುಂದೆ ಮುಂದೆ ಹೋಗ್ತಾ ಉಟ್ಟು. ನೀರ್‌ನ ಆಳ ಹೆಚ್ಚಾಗ್ತಾ ಉಟ್ಟು. ಕಡೆಗೊಮ್ಮೆ ಕಾಲಿಗೆ ನೆಲ ಎಕ್ಕದ ಹಾಂಗೆ ಆತ್. ನೀರ್ಲಿ ಮುಳ್ಗಿಕಂಡ್ ಅಪ್ಪ ಎಲ್ಲುಟ್ಟುಂತ ನೋಡ್ತ್. ಇಲ್ಲೆ. ಅಂವ ಕಾಂಬೊದ್ಲೆ. ಇದ್ ಹೆದ್ರಿ "ಅಮ್ಮಾ"ಂತ ಕರ್ತ್. ಅಲ್ಲೇ ನೀರ್‌ಲಿ ಮುಳ್‌ಗಿತ್.

ಕುದ್ದ್‌ಕಂಡ್ ಇದ್ದ ಮಾಚು "ಅಮ್ಮಾ"ಂತ ಕರ್ದದರ ಕೇಳಿ ಮನೆಲಿದ್ದ ಎಲ್ಲೊವು ಓಡಿಕಂಡ್ ಬಂದೊ. ಮಾಚು ಅಲ್ಲೇ ಬಿದ್ದಿತ್! ❑

ನುಡಿ ತಿರ್ಲ್

ಾಡಿ ಗದ್ದೆ – ಅಗೆ ಮಾಡುವ ಗದ್ದೆ
ುರೆ – ಅಗ್ಗಿಷ್ಟಿಕೆ
ುಕೆ ಚೊಲ್ಲು – ಅಡಿಕೆ ಸುಲಿ
ಗ್ಗಾಲ – ಬೇಸಿಗೆ ಕಾಲ
್ಕಲ್ – ಕಟ್ಟು, ಒಂದು ಅಪ್ಪುಗೆಗೆ ಸಿಗುವಷ್ಟು
ಪುಡೆ – ಅಡಿ ಮತ್ತು ಬದಿ
ಜ್ಜಿಲ್ – ಅಂಗಳ
ಡು – ಎಸೆ, ಬಿಸಾಡು.
ಸ್ – ಇಡು
ಚ್ಚಿ – ಕ್ರಿಮಿ ಕೀಟ
ರ್ಬುಳಿ – ಬೆತ್ತಲೆ {ಮೂಲ ಒರ್ಬೆಲ್, ಬತ್ತದ ಸಿಪ್ಪೆ ತೆಗೆ}
ಮಿ ಕರಿ – ಬತ್ತದ ಸಿಪ್ಪೆ{ಉಮಿ}ಯನ್ನು ಹೊತ್ತಿಸಿ ಆದ ಕರಿ{ಹಿಂದೆ ಉಮಿಕರಿಗೆ ಉಪ್ಪು ಸೇರಿಸಿ ಹಲ್ಲುಜ್ಜುತಿದ್ದರು.}
ರ್ದ್ ಕೊ{ೇ}ಂಕುನ ಮೊಟ್ಟಾಳೆ ರುವ – ಎದುರು ಮತ್ತು ಹಿಂದೆ ಕೊಂಕು (ಪದಕ) ಮುಟ್ಟಾಳೆ
ಸ್ – ಎಪ್ಪು
ರ್ಬೆಲ್ ಗೆಯುವುದು – ಬತ್ತ ಕುಟ್ಟಿ ಅದರ ಸಿಪ್ಪೆ {ಉಮಿ}
ಕ್ಕೆ – ಒನಕೆ
ಕ್ಕ (ಒರೊಂಕೊ–ತುಳು) ುಯ್ಯುದ್ದುಕೊಳ್ಳಲು ಂಬು – ಹಿಂದೆ, ಸ್ನಾನ ಮಾಡುವಾಗ ನೀರು ಉಪಯೋಗಿಸುತ್ತಿದ್ದ ತೆಂಗಿನ ಗೆರಟೆಯ

(ಬೆಳೆದಿರದ ತೆಂಗಿನ ಕಾಯಿಯ ಕಣ್ಣಿನ ಭಾಗದಿಂದ ಸುಮಾರು ಎರಡು ಎರಡುವರೆ ಇಂಚು ವ್ಯಾಸದ ತೂತು ತೆಗೆದು ಒಳ ಭಾಗ ಖಾಲಿ ಮಾಡಿ ಬಿದಿರಿನ ಹಿಡಿಕೆ ಹಾಕಿ ಮಾಡಿದ ಚೆಂಬು)

ಂಬು – ಒಪ್ಪು, ಹಿತವಾಗು, ಅನುಕೂಲವೆನಿಸು
ಡುಕ (ತುಳು) – ಕಡೆಯ
ವ್ಹೆ ಬಿಲ್ಲ್ – ಪ್ರಾಣಿ ಪಕ್ಷಿಗಳನ್ನು ಕಲ್ಲಿನಿಂದ ಹೊಡೆಯಲು ಬಳ್ಳಿಯಿಂದ ಮಾಡಿದ ಸಾಧನ (ವಿವರಣೆ ಕೊಟ್ಟಿದೆ)
ಡಂಗ – ಅಗಲು, ಗಡಿಯ ಕಣಿ
ಟ್ಟಪುಣಿ – ಗದ್ದೆಯ ಬದಿ
ಂದಲ್ – ಬಿಂದಿಗೆ, ಕೊಡ

ಕದಿಕೆ	– ಬತ್ತವನ್ನು ತುಂಬಿಸಲು ವೃತ್ತಾಕಾರವಾಗಿ ಸುತ್ತಿ ಕಟ್ಟುವ ಸಾಧನ (ಬಿದಿರು ಅಥವಾ ಬೆತ್ತದಿಂದ ಹೆಣೆದ ಚಾಪೆ)
ಕನ್ನೆ ಕಂಬ	– ಮದುವೆ ಚಪ್ಪರದ ಮಧ್ಯದ ಕಂಬ
ಕಂಜಿ ಹಾಕು (ತುಳು)	– ಅನುತ್ತೀರ್ಣವಾಗು
ಕಂಜಿಲ್ ಮಾಡುವ	– ಹಟ್ಟಿಯಲ್ಲಿ ಕರುಗಳನ್ನು ಮಾತ್ರ ಕಟ್ಟಲು ಕೋಣೆ
ಕಾಪಾಡಿ	– ಮೇರರ ಜಾತಿಯ ಊರಿನ ಮುಖ್ಯಸ್ಥ
ಕಪ್ಪಾರ್	– ಕೊಪ್ಪರಿಗೆ ಹಾಗಿರುವ ಮಣ್ಣಿನ ಪಾತ್ರೆ
ಕಾಯ್ಸ	– ಬೇಡಿಕೆಯಿರುವ
ಕಾಯ್ಪು	– ಬಿಗಿಯಾಗಿ
ಕುರ್ತೇಲ್	– ಕೊಳಕು
ಕುಮೇರಿ	– ಗುಡ್ಡೆಯಲ್ಲಿ ಬೆಳೆವ ಧಾನ್ಯ ಬೆಳೆ
ಕುರುಂಟು	– ಬತ್ತದ ಸಣ್ಣ ಮುಡಿ
ಕೊಟೆಗೆ	– ಕೊಟ್ಟಿಗೆ
ಕೊಡ್ಪು	– ಕುಟುಕು
ಕೊದಿ	– ಆಶೆ
ಕೋಂಬ್ರೆ	– ಕೋಣೆ
ಕೋರಿಂಜೆ	– 1. ಅಡಿಕೆ ತೋಟದಲ್ಲಿ ನೀರು ಹಾರಿಸಲು ಉಪಯೋಗಿಸುವ ಬೈನೆ ಮರದ ಹಾಳೆ 2. ಮೀನು ಕೋರುವ ಕುಕ್ಕೆ
ಗೂಂತ ಕುದ್ರು	– ಗೂನಾಗಿ ಕುಳಿತುಕೊಳ್ಳು
ಗೇಂಟಿ ಮುಚ್ಚಿಕೊಳ್ಳುವಂತೆ	– ಕೆಳವರ್ಗದ ಹೆಂಗಸರು ಎದೆ ಕಟ್ಟಿಕೊಳ್ಳುತ್ತಿದ್ದ ತುಂಡು ಬಟ್ಟೆ
ಗುಡ್ಡ (ಕೊಡಗು)	– ಬಚ್ಚಲು
ಗೇನ ಮಾಡು	– ಯೋಚಿಸು
ಗೊಂಪು ನೋಳಿ	– ತಲೆ ಸ್ನಾನ ಮಾಡುವಾಗ ತಲೆಗೆ ಹಾಕುವ
ಚಟ್ಟೆ, ಮರ್ಚಟೆ	– ಮಣ್ಣಿನಿಂದ ಮಾಡಿದ ಊಟದ ತಟ್ಟೆ, ಸಾರು ಹಾಕುವ ಸಣ್ಣ ತಟ್ಟೆ.
ಚಂಡಿತುಂಡು	– ಸ್ನಾನ ಮಾಡಿ ಮೈ ಒರಸುವ ಬಟ್ಟೆ
ಚಪ್ಪರ ಏರ್ರುದು, ಚಪ್ಪರ ಮುರ್‍ಯೊದು	– ಮದುವೆಗೆ ಚಪ್ಪರ ಕಟ್ಟುದು, ಮತ್ತು ಆ ಚಪ್ಪರ ತೆಗೆಯುವುದು
ಚರಂಡಿ ಮೀನ್, ಹಾಳೆ ಮೀನ್	– ದೊಡ್ಡ ಜಾತಿಯ ಸಮುದ್ರ ಮೀನುಗಳು

ಚೆರ್‍ಗ್ – 1. ಹೊಳೆ ತೋಡುಗಳಲ್ಲಿರುವ ಸಣ್ಣ ಮೀನು, 2. ಸಣ್ಣ ಕಟ್ಟಿಗೆ ತುಂಡು

ಚಕ್ಕಣ {ಚಕ್ಕಳ} – ಚಿಕ್ಕ ಮಕ್ಕಳನ್ನು ಮಲಗಿಸುವ ಚಿಕ್ಕ ಒಲಿ ಚಾಪೆ, {ಪ್ರಾಣಿಗಳ ಚರ್ಮ}

ಚಾಳೆನ ಒಲಿ – ತೆಂಗಿನ ಮಡಲು

ಚಿಬ್ಬುಲು – ಅನ್ನ ಬಾಗಲು ಉಪಯೋಗಿಸುವ ಕುಡ್ಪು

ಚಿಬಿಲೆ {ತಿಬಿಲೆ} – ಹಣತೆ

ಚಿಪ್ಪಿ – ತೆಂಗಿನ ಗೆರಟೆ

ಚೀಂಕ್ರ್ – ಸಿಗುರು, ಕಡ್ಡಿ

ಚೀಂಟಿ ತೆಗೆ – ಕೈಯಿಂದ ಒತ್ತಿ ತೆಗೆ

ಚೆಪ್ಪು, ಚೊಪ್ಪು – ತೆಂಗಿನ ಸಿಪ್ಪೆ

ಚೋಡಿ – ತೋಡು, ಹೆಚ್ಚು ಆಳ ಅಗಲಗಳಿರದ ನೀರಿನ ಹರಿವು

ಜಳ್ಳ ಒಚ್ಚು – ಹುಟ್ಟು ಹಾಕು

ತಾರೀಖ್ – ತಾರಕೆ, ನಕ್ಷತ್ರ

ತುಳ್ಳೇಲ್ {ತುಳು} – ಮೇರರ ಮದುವೆ

ತೆಗ್ಗೈ – ಎಲ್ಲರು {ತೆಗೆದಂತೆ}

ತೋರ್ತ್ – ಬಹಿರ್ವಾಸ, ಬೈರಾಸ್

ನರಿಕುಂಬು – ಒದ್ದೆ ಬಟ್ಟೆಯನ್ನು ಸರಿ ಒಣಗಿಸದೇ ಇರುವುದರಿಂದ ಬರುವ ವಾಸನೆ, ನೀರ್ಕಲೆ

ನರೆ, ಈಯರ್, ಬೊಳ್ಗಂಡೆ – ಕಾಡುಗಳಲ್ಲಿರುವ ಬಳ್ಳಿಗಳ ಗೆಡ್ಡೆಗಳು

ನಡುಬೊಟ್ಟು – ಕೇಂದ್ರ ಸ್ಥಳ

ನೀರೆಡಿ, ಬಿಸ್ರೆಡಿ – ಬಚ್ಚಲು ಮನೆ ಗೋಡೆಯ ಬದಲಿಗೆ ಮಾಡಿದ ಅಡ್ಡ

ನೀಂಡ್ – ನೀಡಿ

ನಿಲ್ಗಿ – ಮಲಗು, ನಿದ್ದೆ ಮಾಡು

ನೆಗ್ಗು – ಜಜ್ಜಿ ಹೋಗು

ನೆರಿಕೆ – ಬಿದಿರು ಅಥವಾ ಅಡಿಕೆಮರವನ್ನು ಸಿಗಿದು ಮಾಡಿ ಬಳ್ಳಿಯಿಂದ ಒಂದಕ್ಕೊಂದು ಸೇರಿಸಿ ತಟ್ಟೆ

ಪಾಂದೋಳ್ – ಪಾಂದೋವ್, ತೆಂಗಿನ ಸೋಗೆಯ ಮೇಲಿನ ತೆಳು ತೊಗಟೆ

ಪೊಜ್ಜಿ – ಚಟ್ನಿ

ಪೊಲಿಕರ್‍ಯೊದು – ಕೊಯ್ಲು ಬತ್ತ ಅಳೆವಾಗ ಒಂದು ಎರಡು ಎಂದು ಹೇಳದೆ ಪೊಲಿ ಒಂದು ಪೊಲಿ ಎರಡು ಎಂದು ಅದೃಷ್ಟ ಸೂಚಕ ಪೊಲಿ ಶಬ್ದ ಸೇರಿಸಿ ಹೇಳುವುದು

ಪೊಲರ್ಬು – ಚಂದ

ಬರೋಣಿ	–	ಭರಣಿ, ತೊಟ್ಟಿ, ನೀರು ಸಂಗ್ರಾಹಕ
ಬಂಟಕಾಯಿ ಒಡೆಯುವುದು	–	ಮದುವೆ, ನಿಶ್ಚಯಗಳಂತಹ ಶುಭ ಕಾರ್ಯಕ್ರಮಗಳಲ್ಲಿ ಅಡಿಕೆ ಒಡೆದು ನಾಲ್ಕು
ಭಾಗ		ಮಾಡಿ ನಾಲ್ಕು ಚೆಂಬುಗಳ ನೀರಲ್ಲಿ
ಹಾಕುವುದು		
ಬಾಡೆ {ಕೊಡಗು}	–	ಚಾವಡಿ, ಜಗಲಿ
ಬುಡು	–	ಬಿಡು
ಬೆಳ್ಗರ್	–	ಬೆಳಗಾಗುವುದಕ್ಕಿಂತ ಮೊದಲಿನ ಸಮಯ
ಬಿಡ್ದ್ ಹೋಗ್	–	ಸಾಕಾಗಿ ಹೋಗು
ಬೊಳ್ಳಿ	–	ಬೆಳ್ಳಿ
ಬೊಳಿ	–	ಬೆಳಗು
ಬೊಂಗ್ರ	–	ಬಂಗುರ, ಪ್ರೀತಿಯ
ಬೊಮ್ಮಣ	–	ಸೇಲೆ
ಮಿಸ್ಮ	–	ಪರಿಣತ, ಹುಶಾರು
ಮೀಸು	–	ಈಜು
ಮುಜೆಂಟಿ ಜೇನು	–	ನುಸಿಯಷ್ಟು ಚಿಕ್ಕದಾಗಿರುವ ಜೇನ್ನೊಣಗಳು ಮಾಡುವ ಜೇನು
ಮೈ ನೀರ್	–	ಮೂತ್ರ
ಮೊಂದ್ರಿ	–	ಚಾಪೆ
ಲಾಟ್‌ಪೋಟ್	–	ಕೆಳಮಟ್ಟದ
ವಲ್ಲಿ	–	ಹೊದೆಯುವ ಬಟ್ಟೆ
ಪಗ್ರಿ ಬಿಲ್ಲ್	–	ಬಾಣ ಹೂಡುವ ಬಿಲ್ಲು
ಪಿಂಡಿ	–	ತೆಪ್ಪ
ಸಜ್ಜ್ ಮಾಡು, ಹಜರಿ ಮಾಡ್	–	ಮೀನ್ ಮಾಂಸಗಳ ಬೇಡವಾದ ಭಾಗಗಳ ತೆಗೆದು ಕೊಯ್ದು ಸ್ವಚ್ಛಗೊಳಿಸುವುದು.
ಸಲ್ಲಣೆ (ಮಲೆಯಾಳ)	–	ಬಯ್ಗಳು
ಸಂಚಿ	–	ಸಣ್ಣ ಚೀಲ
ಸಿಂಪೆ	–	ಸುಂಬೆ
ಸಿಡಿ	–	ಹಕ್ಕಿಗಳನ್ನು ಹಿಡಿಯುವ ಒಂದು ಕ್ರಮ
ಹರ್ಕತ್	–	ಅಗತ್ಯ, ಅನಿವಾರ್ಯತೆ
ಹುಗ್ಗೆ	–	ಅನ್ನ
ಹುಳ್ಳಂಗೆ	–	ಹುಳಿ,ಖಾರ, ಉಪ್ಪು ಸರಿಯಾದ ಪ್ರಮಾಣ ಸೇರಿ ರುಚಿಯೆನಿಸು
ಹೋಸು	–	ಹೊದಿಸು



ಜಯಮ್ಮ ಚೆಟ್ಟಿಮಾಡ
ಸಂಪಾದಕಿ ಮತ್ತೆ ಪ್ರಕಾಶಕಿ
"ಹಳಬರ ಜೋಳಿಗೆ"
ಸಂಜೀವಿನಿ ಪ್ರಕಾಶನ
ಸುಳ್ಯ ದ.ಕ. - 574239
ಕರ್ನಾಟಕ

ಇವರ ಪ್ರಕಟಿತ ಕೃತಿಗ

1. ಪುರುಷಾರ್ಥ ಸಾಧಕರು
2. ಕೈ ಮರ
3. ತನನ ದಿನನ (ಜಿ.ಪಿ. ರಾಜರತ್ನಂ ಮಕ್ಕಳ ಸಾಹಿತ್ಯ ಪ್ರಶಸ್ತಿ ಪಡ್ದ ಪುಸ್ತಕ)
4. ಲಹರಿ (ಕವನ ಸಂಕಲನ)
5. ಹನಿ ಹೊನಲು (ಸಂಪಾದಿತ ಹನಿಕವನ ಸಂಕಲನ)
6. ಕಾಡುಮೇಡಿನ ಜಾಡು (ಕವನ ಸಂಕಲನ)
7. ಕತ್ತಲೊಳಗಿನ ಕಿಡಿ (ದೇವಿಡ್‌ಲಿವಿಂಗ್‌ಸ್ಟನ್‌ನ ಜೀವನ ಚರಿತ್ರೆ - ಕಥನ ಕವನ)
8. ಪೂರಿಯ ಮರ ಮತ್ತು ಅಳಿಲಮ್ಮ (ಮಕ್ಕಳ ಸಾಹಿತ್ಯ)
9. ನೂರೆಂಟು ಹನಿ ಹನಿಗಳು (ಹನಿಕವನ ಸಂಕಲನ)
10. ಪರಬಾಳ್‌ತ ಪರಿಪಾಳೆಳ್ (ಪಣಿಯಾಡಿ ಕಾದಂಬರಿ ಪ್ರಶಸ್ತಿ ಮತ್ತೆ ಕರ್ನಾಟಕ ತುಳು ಅಕಾಡಮಿನ ಪುಸ್ತಕ ಪ್ರಶಸ್ತಿ ಪಡ್ದ ಕೃತಿ)
11. ಅರಿವನರುಹಿದ ಎನ್ನ ಗುರು "ಯನ್ನಾರ್" (ವ್ಯಕ್ತಿ ಪರಿಚಯ)
12. ಹಳೆ ಬಾಳ್‌ನ ಹರ್ದ ಹಾಳೆಗ (ಅನುವಾದಿತ ಅರೆಬಾಸೆ ಕಾದಂಬರಿ) ಮತ್ತೆ ಒಂದರಿಂದ ಏಳರ ಮುಟ್ಟ "ಹಳಬರ ಜೋಳಿಗೆ"ನ ಸರಣಿ ಪುಸ್ತಕ (ಇಂಗ್ಲೀಷ್ ಆವೃತ್ತಿಯ ಹಳಬರ ಜೋಳಿಗೆ ಪುಸ್ತಕ ಒಂದು)

(ಒಟ್ಟು ಪ್ರಕಟಿತ ಪುಸ್ತಕಗ ೨೦)